START

START

START

START

START

MICRO FILMED

BY

KARNATAKA STATE

ARCHIVES

1991

ARS 15 APP 90

ಪೋಲಿಸ ಶಿಕ್ಷಣ – ಕನ್ನಡ ಶಾಲೆ
ಪತ್ರಿಕೆ. ಏಪ್ರಿಲ್ 1934 ರ
ಸಂಚಿಕೆ ಮುಂದುವರಿಸಲಾಗಿದೆ.

ARS 15 APP 90

ಪೋಲಿಸ ಶಿಕ್ಷಣ – ಕನ್ನಡ ಶಾಲೆ
ಪತ್ರಿಕೆ. ಏಪ್ರಿಲ್ 1934 ರ
ಸಂಚಿಕೆ ಮುಂಡವಂಡಗಿದೆ.

Reg. No. B. 2567

ಜಾಹೀರಾತು

(೧) ಹಿಂದುಮುಸಲ್ಮಾನರ ಇತಿಹಾಸ.

(ಬಾಳಕೃಷ್ಣ ಹಳೀಪೇಟಕೃತ)

ಇದು, ಪ್ರಾಥಮಿಕ ಶಾಲೆಗಳ ೫ನೆಯ ಇಯತ್ತೆಯ ಉಪಯೋಗಕ್ಕಾಗಿ ಸುಲಭವಾದ ಲೀಂಕಾರಿಕ ಭಾಷೆಯಲ್ಲಿ ಹೊಸಪದ್ಧತಿಗನುಸಾರವಾಗಿ ಬರೆಯಲ್ಪಟ್ಟಿರುವದು. ಈ ವರೆಗೆ ಬರೆದ ಇತಿಹಾಸಗಳಲ್ಲಿ ಇದು ಒಳ್ಳೇ ಉಪಯುಕ್ತವಾಗಿರುವದು. ಮುಂಬಯಿ ಸರಕಾರದಿಂದ ಕನ್ನಡ ೫ ನೆ ಇಯತ್ತೆಗೆ ಪಠ್ಯಪುಸ್ತಕವೆಂದು ಮಂಜೂರ ಮಾಡಲ್ಪಟ್ಟಿರುವದು. ಬೆಲೆ ೮–ಆ–೦.

(೨) ಕರ್ನಾಟಕದ ವರ್ಣನೆಯೂ ಇತಿಹಾಸವೂ.

(ನಾರಾಯಣ ಶ್ರೀನಿವಾಸ ರಾಜಪುರೋಹಿತ ಕೃತ)

ಕರ್ನಾಟಕದ ಇತಿಹಾಸ ಸಂಶೋಧಕ ಮಂಡಲದ ಪ್ರಮುಖರಲ್ಲೊಬ್ಬರಾದ ಮಿ. ರಾಜಪುರೋಹಿತ ಇವರು ಕರ್ನಾಟಕದ ಎಲ್ಲ ಭಾಗಗಳಲ್ಲಿ ಸಂಚರಿಸಿ ಶಿಲಾಲೇಖ, ತಾಮ್ರಪಟ, ನಿಷಿದಿಯಕಲ್ಲು, ಮಾಸತಿಕಲ್ಲು, ವೀರಗಲ್ಲು ಮೊದಲಾದವುಗಳನ್ನು ಶೋಧಿಸಿ ಇವುಗಳ ಆಧಾರದಿಂದ ಸುಸಂಗತವಾಗಿ ಈ ಇತಿಹಾಸವನ್ನು ಬರೆದಿರುವರು. ೪ನೆಯ ಇಯತ್ತೆಯ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕವೆಂದು ಸರಕಾರದಿಂದ ಮಂಜೂರ ಆಗಿದೆ. ಬೆಲೆ ೦–೮–೦.

(೩) ದೇಶೀಯ ಜಮಾಖರ್ಚು ಪ್ರವೇಶ.

(ಹನುಮಂತ ರಾಮಚಂದ್ರ ಕುಲಕರ್ಣಿ ಕೃತ)

ಪ್ರಾಥಮಿಕ ಕನ್ನಡ ಶಾಲೆಗಳ ೬ನೆಯ ೭ನೆಯ ಇಯತ್ತೆಯ ವಿದ್ಯಾರ್ಥಿಗಳಿಗೆ ಇದ್ದ ಈ ಜಮಾಖರ್ಚಿನ ವಿಷಯವು ೪ನೆಯ ಇಯತ್ತೆಗೆ ಆರಂಭವಾಗುವದರಿಂದ ಇದನ್ನು ಸುಲಭವಾದ ರೀತಿಯಲ್ಲಿ ತಿಳಿಯುವಂತೆ ಬರೆದಿದ್ದಾರೆ. ಅಭ್ಯಾಸಕ್ಕೆ ವಿಶೇಷ ಅನುಕೂಲವಾಗಿದೆ. ಮುಂಬಯಿ ಇಲಾಖೆಯ ವಿದ್ಯಾಖಾತೆಯಿಂದ ಮಂಜೂರಾಗಿದೆ. ಬೆಲೆ ೦–೩–೬.

(೪) ವಿಜಾಪುರ ಜಿಲ್ಲೆಯ ಸಾಮಾನ್ಯ ವರ್ಣನೆಯು.

ಕನ್ನಡ ಪ್ರಾಥಮಿಕ ಶಾಲೆಗಳ ೫ನೆಯ ೬ನೆಯ ಇಯತ್ತೆಯ ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವಂತೆ ಹೊಸ ಪದ್ಧತಿಯಿಂದ ಬರೆಯಲ್ಪಟ್ಟಿದೆ. ಈ ಮೊದಲು ಇದೇ ಪದ್ಧತಿಯಿಂದ ಬರೆದ ಮಿ. ಯ. ಕೃ. ಅಣ್ಣಿಗೇರಿ ಇವರಿಂದಲೇ ಇದನ್ನು ಬರೆಯಿಸಿದೆ. ಅಭ್ಯಾಸವು ಸುಲಭವೂ ಸುಗಮವೂ ಮನೋರಂಜಕವೂ ಆಗುವಂತೆ ಈ ಪುಸ್ತಕದಲ್ಲಿ ನಕಾಶಗಳೂ ಚಿತ್ರಗಳೂ ಸೇರಿಸಲ್ಪಟ್ಟಿವೆ. ಬೆಲೆ ೪–೬–೦.

ಪುಸ್ತಕ ದೊರೆಯುವ ಸ್ಥಳ :—

ವಿ. ಆರ್. ಶಿವಸಾಗಪ್ಪ,

ವಾಗ್ವಿಲಾಸ ಬುಕ್‌ಡಿಪೋ ಪಾವರ ಪ್ರಿಂಟಿಂಗ ಪ್ರೆಸ್, ಹುಬ್ಬಳ್ಳಿ.

Reg. No. B. 2567

ಕನ್ನಡ
ಪ್ರಾಥಮಿಕ ಶಿಕ್ಷಣ

(ಇದರಲ್ಲಿ ಕನ್ನಡ ಶಾಲಾಪತ್ರಿಕೆಯೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

Kannada Prathamik Shikshana

— APRIL 1934 —

ಸಂಪಾದಕ—ವೆಂಕಟೇಶ ನರಸಿಂಗರಾವ ಮಗದಾಳ ಬಿ. ಎ.,

[ಸಂಪುಟ ೧] [ಎಪ್ರಿಲ ೧೯೩೪] [ವ. ೬ ಸಂ. ೧

ವಿಷಯಾನುಕ್ರಮಣಿಕೆ

ಅ. ನಂ.	ವಿಷಯ			ಪುಟ
೧.	ನಿಬಂಧ ಶಿಕ್ಷಣ	...	...	೧
೨.	ಶಿಕ್ಷಣ ಯೋಜನೆಗಳು	...	...	೫
೩.	ಹತ್ತಿ	...	...	೧೩
೪.	ಮಾನಸಶಾಸ್ತ್ರ	...	...	೧೭
೫	ಸಂಪ್ಯೆಗಳ ಚಮತ್ಕಾರ	...	...	೨೬
೬.	ಪತ್ರಗಳ ಸಾರಾಂಶ	...	...	೨೭
೭.	ವರ್ಷಪರ್ಯಾಯಿಜ ಪರೀಕ್ಷೆ	...	...	೨೮
೮.	ಪ್ರಕಟನೆಗಳು	...	...	೩೯
೯.	ಗಡಿಯಾರದ ಹಾಡು	...	-	೩೨

Printed by K. R. Bhise at the Karnatak Printing Works, Dharwar
& Published by V. N. Magdal, B.A.,
Head Master, Training School, Dharwar, at his Office.

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:—ವೆಂಕಟೇಶ ನರಸಿಂಗರಾವ ಮುಗದಾಳ, ಬಿ. ಎ.

ಸಂಪುಟ ೭೧ | ಏಪ್ರಿಲ ೧೯೩೪ | ವರ್ಷ ೬ ಸಂ. ೧

ನಿಬಂಧ ಶಿಕ್ಷಣ

ನಮ್ಮ ಪ್ರಾಥಮಿಕ ಶಾಲೆಗಳಲ್ಲಿ ತೀರ ಅಸಮಾಧಾನಕರವಾಗಿ ನಡೆಯುವ ವಿಷಯಗಳಲ್ಲಿ ನಿಬಂಧ ಶಿಕ್ಷಣವು ಒಂದಾಗಿದೆ ಎಂದರೆ ಶಿಕ್ಷಕರು ಒಪ್ಪಿಕೊಳ್ಳುವರೆಂದು ನಾವು ನಂಬಿದ್ದೇವೆ ಭಾಷಾಭ್ಯಾಸದಲ್ಲಿ ಓದು, ಬರೆಹ ಎಂಬ ಎರಡು ಮುಖ್ಯ ಭಾಗಗಳು. ಓದು ಕಲಿಸುವದು ಎಂದರೆ ಇನ್ನೊಬ್ಬರ ಮುಂದೆ ಅಕ್ಷರ ಸಂಗದೆ, ತಡಮಾಡದೆ, ಓದಿಬಿಡುವದೆಂದು ಅನೇಕರು ಕಲ್ಪಿಸುವರು; ಬರೆಹವೆಂದರೆ ಹೇಳಿದ್ದನ್ನು ಶುದ್ಧವಾಗಿ ಬರೆಯುವದು ಇಲ್ಲವೆ ನಾಲ್ಕು ಪಂಕ್ತಿಗಳನ್ನು ಮುಂಡಾದ ಅಕ್ಷರಗಳಲ್ಲಿ ಅಂದಕಾಣುವಂತೆ ಬರೆಯುವದು ಎಂದು ಭಾವಿಸುವರು. ಇಂಥ ಕಲ್ಪನೆಗಳಿಂದ ತೃಪ್ತರಾದ ಶಿಕ್ಷಕರ ಸಂಖ್ಯೆಯು ಇತ್ತಲಾಗಿ ಕಡಿಮೆಯಾಗಿರವದೆಂದು ಎಲ್ಲರೂ ಒಪ್ಪಿಕೊಳ್ಳುವರು.

ಇರಲಿ; ಈ ಸಂಕುಚಿತವಾದ ಕಲ್ಪನೆಗಳನ್ನು ಬಿಟ್ಟುಕೊಟ್ಟು ಓದುಕಲಿಯುವದೆಂದರೆ ಓದುವವರ ಭಾವವನ್ನು ಅರಿತು, ಅದು ಕೇಳುವವರಿಗೆ ಸ್ಪಷ್ಟವಾಗುವಂತೆ ಅಂದರೆ ಓದಿದ್ದರ ಭಾವವು ಕೇಳುವವರಿಗೆ ಬೋಧವಾಗುವಂತೆ ವಿರಾಮ, ಆಘಾತ, ಸ್ವರಭೇದಗಳಿಗೆ ಲಕ್ಷ್ಯಕೊಟ್ಟು ಓದಲು ಹುಡುಗರು ಶಕ್ತರಾಗುವರೆಂಬವನ್ನು ಶಿಕ್ಷಕರು ಬಲ್ಲರು. ಹಾಗೆಯೇ ಬರೆಹವನ್ನು ಕಲಿಯುವದೆಂದರೆ ಶಬ್ದಗಳ ನಿಜವಾದ ಅರ್ಥವನ್ನು ಅರಿತು, ತಮ್ಮ ಮನಸಿನೊಳಗಿನ ಕಲ್ಪನೆಗಳನ್ನೂ ಭಾವ

ವನ್ನೂ ಯೋಗ್ಯಶಬ್ದಗಳಿಂದ ಕೇಳುವವರಿಗೆ ಇಲ್ಲವೆ ಓದುವವರಿಗೆ ಸ್ಪಷ್ಟವಾಗಿ ತಿಳಿಯುವಂತೆ ಹೇಳಲಿಕ್ಕೆ ಹಾಗು ಬರೆಯಲಿಕ್ಕೆ ಹುಡುಗರು ಶಕ್ತರಾಗುವದೆಂಬ ದನ್ನು ಅರಿತಾಗ್ಯೂ ಈ ಬಗ್ಗೆ ಸಾಲೆಗಳಲ್ಲಿ ತಕ್ಕ ಪ್ರಯತ್ನಗಳು ತೆರಸಿಲ್ಲದೆ ನಡೆಯುವದಿಲ್ಲವೆಂಬದನ್ನು ಶಿಕ್ಷಕರು ಒಪ್ಪಿಕೊಳ್ಳಬೇಕಾಗುವದು.

ಈ ಎರಡನೆಯ ಬಗೆಯ ಶಿಕ್ಷಣವೇ ನಿಬಂಧ ಶಿಕ್ಷಣವು. ಇದನ್ನು ಹಲವರು ಹಲವು ಮಾರ್ಗಗಳಿಂದ ಕೊಡಬಹುದೆಂದು ಹೇಳುವದುಂಟು. ನಮ್ಮ ಸಾಲೆಗಳಲ್ಲಿ (ಗಂಡುಮಕ್ಕಳ ಸಾಲೆಗಳಲ್ಲಿ) ಇದು ಸಾಮಾನ್ಯವಾಗಿ ೫ನೆಯ ಇಯತ್ತಿಯವರೆಗೆ ಆರಂಭವಾಗುವದಿಲ್ಲ; ವಾಚನ ಪಾಠಗಳಲ್ಲಿ ಈ ಶಿಕ್ಷಣವು ಅಂಶತಃ ನಡೆಯುತಕ್ಕದ್ದೆಂದು ನಿರ್ಬಂಧವಿದ್ದರೂ ಅದು ಸಮಾಧಾನಕರವಾಗಿ ಸಾಗುವದಿಲ್ಲ. ನಿಬಂಧ ಬರೆಹದ ಮೊದಲನೆಯ ಮೆಟ್ಟು ಅಂದರೆ ವಾಚನಿಕ ನಿಬಂಧವು ಅಥವಾ ಬಾಯಿ ನಿಬಂಧವು. ಅಂದರೆ ಹುಡುಗನು ತನಗೆ ಗೊತ್ತಿರುವ ಮಾತುಗಳನ್ನು ಯೋಗ್ಯ ಶಬ್ದಗಳಲ್ಲಿ ತಕ್ಕ ಕ್ರಮದಲ್ಲಿ ಬಾಯಿಂದ ಹೇಳುವದು. ಈ ಬಗ್ಗೆ ಹುಡುಗರಿಗೆ ಒಳ್ಳೇ ರೂಢಿಯಿಲ್ಲದೆ ಇದು ಸಾಧ್ಯವಾಗಲಾರದು. ಇದರಲ್ಲಿ ವಿಚಾರ, ಕಲ್ಪನೆ, ನಿರ್ಣಯ ಮೊದಲಾದ ಹಲವು ಶಕ್ತಿಗಳನ್ನು ಬಾಲಕರು ಉಪಯೋಗಿಸಬೇಕಾಗುವದು. ಬಾಯಿ ನಿಬಂಧದಲ್ಲಿ ತಕ್ಕಮಟ್ಟಿಗೆ ಕೌಶಲ್ಯವು ಬಂದ ಬಳಿಕ ಬರೆಹಮೂಲಕ ನಿಬಂಧವನ್ನು ಆರಂಭಿಸಬಹುದು. ಇಲ್ಲವೆ ಕೆಲವರು ನಡೆಸುವಂತೆ ಎರಡನ್ನು ಕೂಡಿಯೇ ಸಾಗಿಸಬಹುದು. ಆದರೆ ಇವೆರಡೂ ಬಗೆಯ ನಿಬಂಧ ಶಿಕ್ಷಣಕ್ಕೆ ಬಲವಾದ ರೂಢಿಯು ಅವಶ್ಯವೆಂಬದನ್ನು ಅನುಭವಿಕರಾದ ಶಿಕ್ಷಕರು ಮನಗಂಡಿರುವರು.

ನಿಬಂಧ ವಿಷಯದ ಆರಂಭವನ್ನು ಸಂಭಾಷಣೆ, ವರ್ಣನೆ, ಕಥೆ ಮೊದಲಾದವುಗಳಿಂದ ಮಾಡಬಹುದು. ಆದರೆ ಇವುಗಳಲ್ಲಿ ಕಥೆಯು ಮೇಲಾದದ್ದೆಂದು ಕೆಲವರು ಅಭಿಪ್ರಾಯಪಡುವರು. ಒಳ್ಳೆಯ ಕಥೆಗಳಲ್ಲಿರುವ ವಿಷಯವು ಮನಸ್ಸನ್ನು ಸ್ವಾಭಾವಿಕವಾಗಿ ಎಳೆಯುವದು. ಹುಡುಗರಿಗೆ ಮಾತಾಡಬೇಕೆಂದು ಮನಸಾಗುವದು. ಆದ್ದರಿಂದ ಕಥೆಗಳಿಂದ ಆರಂಭಿಸಿದರೆ ನಿಬಂಧ ಶಿಕ್ಷಣವು ಸುಲಭವಾಗುವದು.

ಕಥೆಗಳ ಮುಖಾಂತರ ನಿಬಂಧದ ಪಾಠಗಳನ್ನು ಹ್ಯಾಗೆ ಸಾಗಿಸಬೇಕೆಂಬ ಬಗ್ಗೆ ಒಂದು ಮಾದರಿಯ ಪಾಠವನ್ನು ನಾವು ಕೊಟ್ಟಿರುವೆವು. ಅದರಲ್ಲಿ ಮಾಡಿದ ಭಾಗಗಳನ್ನೂ ಉದ್ದೇಶ ಮೊದಲಾದವುಗಳನ್ನೂ ವಿವರಿಸಿರುವೆವು. ಅವುಗಳನ್ನು

ಶಿಕ್ಷಕರು ಲಕ್ಷ್ಯಗೊಟ್ಟು ಅಭ್ಯಾಸಿಸಿ, ಇವೇ ಬಗೆಯ ಆರಿಸಿ ತೆಗೆದ ಕಥೆಗಳ ಮೂಲಕ ಕೆಳಗಿನ ಹಾಗು ಮೇಲಿನ ಇಯತ್ತೆಗಳಲ್ಲಿ ವಾಚನಿಕ ನಿಬಂಧದ ಪಾಠ ಗಳನ್ನು ನಡೆಸುವರೆಂದು ಕೋರುತ್ತೇವೆ.

ವಿಷಯ– ವಾಚನಿಕ ನಿಬಂಧ.

ಇಯತ್ತೆ– ೪

ವೇಳೆ– ೪೦ ನಿನಿಟು.

ಕಥೆ– ನರಿಯೂ ಕಾಗೆಯೂ

ಒಂದು ದಿನ, ಹಸಿವೆಯಿಂದ ಬಳಲುತ್ತಿದ್ದ ಒಂದು ನರಿಯು, ಮರದ ಟೊಂಗೆಯ ಮೇಲೆ ಕುಳಿತಿದ್ದ ಒಂದು ಕಾಗೆಯನ್ನು ಕಂಡಿತು. ಕಾಗೆಯು ಬಾಯಿ ಯಲ್ಲಿ ಒಂದು ಮಾಂಸದ ಕರಣಿಯನ್ನು ಹಿಡಿದಿತ್ತು. ಸವಿಯಾದ ಆ ತುತ್ತನ್ನು ಅಪಹರಿಸಬೇಕೆಂದು ಆ ಠಕ್ಕ ನರಿಯು ಒಂದು ಹಂಚಿಕೆಯನ್ನು ಮಾಡಿತು.

ಅದು ಕಾಗೆಯನ್ನು ನೋಡಿ— ತಂಗೀ ಕಾಗವ್ಮಾ, ನಿನ್ನ ಚಂದವನ್ನು ಎಷ್ಟೆಂದು ಬಣ್ಣಿಸಲಿ? ನಿನ್ನಷ್ಟು ಚೆಲುವೆಯಾದ ಪಕ್ಷಿಯನ್ನು ನಾನಂತೂ ನೋಡಿಲ್ಲ. ನಿನ್ನ ಪಕ್ಕಗಳಂತೆ ನಿನ್ನ ಸ್ವರವೂ ಮನೋಹರವಾಗಿರಬೇಕು. ಅಹಹ! ಈ ಲೋಕದಲ್ಲಿ ನಿನಗೆ ಯಾರೂ ಸರಿಬರಲಾರರು. ತಂಗೀ, ತುಸು ಹಾಡವ್ಮಾ ಕೇಳಿ ಸಂತೋಷಬಡುವೆ, ಎಂದಿತು.

ಆ ಮರುಳ ಕಾಗೆಯು ಈ ಬಗೆಯ ತನ್ನ ಸ್ತುತಿಯನ್ನು ಕೇಳಿ ಗರ್ವದಿಂದ ಉಬ್ಬಿತು. ಮತ್ತು ಹಾಡುವದಕ್ಕೆ ಬಾಯಿ ತೆರೆಯಿತು. ಆಗ ಮಾಂಸದ ಕರ ಣಿಯು ಅದರ ಬಾಯಿಂದ ಜಾರಿತು. ಅದು ನೆಲಕ್ಕೆ ಬೀಳುವಷ್ಟರಲ್ಲಿ ಆ ಚಪಲ ನರಿಯು ಅದನ್ನು ಕಚ್ಚಿಕೊಂಡು ಮನಸ್ಸಿನಲ್ಲಿ– ಕಾಗೆಯು ಎಂಥ ಹುಚ್ಚು ಪ್ರಾಣಿಯು! ಅದನ್ನು ನಾನು ಚೆಲುವೆಯೆಂದು ಹೊಗಳಿದೆನು, ಅಷ್ಟೇ; ಅದು ಚತುರೆಯೆಂದು ನಾನು ಹೇಳಲಾರೆನು, ಎಂದು ಅಂದುಕೊಳ್ಳುತ್ತ ಓಡಿ ಹೋಯಿತು.

ಪಾಠದ ವಿಷಯವಾಗಿ ಕೆಲಸಗಳು—

I (೧) ಕಥೆಯಲ್ಲಿ **ಮೊದಲು** ಏನು ಹೇಳಿದೆ? **ನಡುವೆ** ಏನು ಹೇಳಿದೆ? **ಕೊನೆಯಲ್ಲಿ** ಏನು ಹೇಳಿದೆ?

(೨) ನರಿಯು ಕಾಗೆಯನ್ನು ಏನೆಂದು ಹೊಗಳಿತು? ಯಾಕೆ ಹೊಗಳಿತು?

(೩) ಕಾಗೆಗೆ ಹಾಡುವದಕ್ಕೆ ಹೇಳಿದ ಕಾರಣವೇನು?

(ಳ) ಕಾಗೆ ಹಾಡುವದಕ್ಕೆ ಯಾಕೆ ಆರಂಭಿಸಿತು ?

(ಱ) ಬಾಲಕರು ಇಂಥ ಇತರ ಪ್ರಶ್ನಗಳನ್ನು ಕೇಳಲಿ; ಒಬ್ಬನು ಕೇಳಿದ್ದಕ್ಕೆ ಇನ್ನೊಬ್ಬನು ಉತ್ತರ ಹೇಳಲಿ.

II ಕೆಳಗೆ ಕೊಟ್ಟಿರುವ ಶಬ್ದಗಳನ್ನು ಕೆಳಗಿನ ವಾಕ್ಯಗಳಲ್ಲಿ ತಕ್ಕ ಸ್ಥಳಗಳಲ್ಲಿ ತಕ್ಕಂತೆ ಸೇರಿಸಿರಿ. ಚಿಲುವೆ, ಲೋಕ, ಉಬ್ಬಿತು. ಸ್ವರ, ತುತ್ತು, ಕರಣಿ, ಚದುರೆ, ಹುಚ್ಚ, ಬಾಯಿ, ಹಂಚಿಕೆ, ಸರಿಬರು, ಬಳಲುತ್ತಿದ್ದ, ತಂಗೀ, ಸ್ತುತಿ.

(೧) ಒಂದು ಕಾಗೆಯು....ಲ್ಲಿ ಒಂದು ಮಾಂಸದ....ನ್ನು ಹಿಡಿದಿತ್ತು.

(೨) ಹಸಿವೆಯಿಂದ.....ಒಂದು ನರಿಯು ಸವಿಯಾದ ಆ ...ನ್ನು ಆಪ ಹರಿಸಬೇಕೆಂದು ಒಂದು... ಮಾಡಿತು.

(೩) ಅದು ಕಾಗೆಗೆ—.....ನಿನ್ನಷ್ಟು..... ಅದ ಪಕ್ಷಿಯನ್ನು ನಾನು ನೋಡಿಲ್ಲ ನಿನ್ನ ಪಕ್ಕಗಳಂತೆ ನಿನ್ನ.....ಮನೋಹರವಾಗಿರಬೇಕು. ಈ...ದಲ್ಲಿ ನಿನಗೆ ಯಾರೂ.....ರು.

(೪) ಆ.....ಕಾಗೆಯು ಈ....ಯನ್ನು ಕೇಳಿ ಗರ್ವದಿಂದ.....

(೫) ನರಿಯು ಮನದೊಳಗೆ—ಕಾಗೆಯು ಎಂಥ.....ಪ್ರಾಣಿಯು! ನಾನು ಅದನ್ನು...ಹೊಗಳಿದೆನು, ...ಅದು..... ಎಂದು ಹೇಳಲಾರೆನು ಎಂದು ಅಂದುಕೊಳ್ಳುತ್ತ .....ತು.

III ನೀವು ಕೇಳಿದ ಕಥೆಯೊಳಗೆ ಬಂದ ತಕ್ಕ ಶಬ್ದಗಳಿಂದ ಕೆಳಗಿನ ವಾಕ್ಯಗಳನ್ನು ಪೂರ್ಣಮಾಡಿರಿ.

೧. ಯಾರೂ ನೀಡದಿದ್ದರೆ ಭಿಕ್ಷುಕರು ಹಸಿವೆಯಿಂದ.....ರುವರು.

೨. ಕೂಸಿನ ಕೈಯಲ್ಲಿ ಬೆಳ್ಳಿಯ ಸರಪಳಿ ಇತ್ತು; ಅದನ್ನು.....ಬೇಕೆಂದು ಒಬ್ಬ ಕಳ್ಳನು...ಮಾಡಿದನು ಅವನು ಆ ಕೂಸಿನ ಬಳಿಗೆ ಹೋಗಿ ಅದರ ಕೈಯಲ್ಲಿ ಸಕ್ಕರೆಯ...ನ್ನು ಕೊಟ್ಟನು.

೩. ನಮ್ಮ ಬಂಗಾರಮ್ಮ ಬಲು...; ಆಕೆಯ ಸ್ವರ ಬಲು.....ಈ ಊರಲ್ಲಿ ಆಕೆಗೆ ಯಾರೂ.....ಲಾರರು.

ಳ....ಎಂದರೆ ಚೆಂದ ಕಾಣುವವಳು; .....ಎಂದರೆ ಜಾಣಳು.

೫. ನರಿಯು...ಪ್ರಾಣಿಯು; ಕುರಿಯು....ಪ್ರಾಣಿಯು.

೬. ಮೂಢರು ತಮ್ಮ ಸ್ತುತಿಯನ್ನು ಕೇಳಿ ಗರ್ವದಿಂದ....ರು.

IV ಕೆಳಗಿನ ವಾಕ್ಯಗಳಲ್ಲಿ ಗುರ್ತಿಸಿದ ವಿಶೇಷಣಗಳು ತಕ್ಕವೋ ಎಂಬ ಬಗ್ಗೆ ಕಾರಣಸಹಿತ ಹೇಳಿರಿ.

೧. ಆ ಜಾಣ ಕಾಗೆಯು ತನ್ನ ಸ್ತುತಿಯನ್ನು ಕೇಳಿ ಉಬ್ಬಿತು

೨. ಆ ಮರುಳ ಕಾಗೆಯು ತನ್ನ ಸ್ತುತಿಯನ್ನು ಕೇಳಿ ಸಂತೋಷಪಟ್ಟಿತು

೩. ಆ ಚತುರ ಕಾಗೆಯು ತನ್ನ ಸ್ತುತಿಯನ್ನು ಕೇಳಿ ಹಾಡಹತ್ತಿತು.

೪. ಆ ತಕ್ಕ ಕಾಗೆಯು ತನ್ನ ಸ್ತುತಿಯನ್ನು ಕೇಳಿ ಉಬ್ಬಿತು.

೫. ಆ ಚಪಲ ನರಿಯು ಮಾಂಸದಕರಣಿಯನ್ನು ಅಪಹರಿಸಿತು.

ಮೇಲಿನ ಪಾಠದ ರಚನೆಯ ಬಗ್ಗೆ ವಿಚಾರಗಳು—

ಕಥೆ:— ಇದು ಬಹಳ ಉದ್ದವಿರಬಾರದು. ಕಥೆಯನ್ನು ಕಲಿಸುವದು ನಮ್ಮ ಉದ್ದೇಶವಲ್ಲ. ಅದರಲ್ಲಿ ಬಂದ ಸಂಗತಿಗಳು ಹೆಚ್ಚಾಗಿದ್ದರೆ ಹುಡುಗರ ಲಕ್ಷ್ಯವು ಕಥೆಯ ಮೆಟ್ಟುಗಳನ್ನೂ ಭಾವವನ್ನೂ ನೆನಪಿನಲ್ಲಿ ಇಡುವದರಕಡೆಗೆ ತೊಡಗ ಬಹುದು. ಕಥೆಯಲ್ಲಿ ಬಂದ ಭಾಷೆಯ ಕಡೆಗೆ ಅವರ ಲಕ್ಷ್ಯವು ಹೆಚ್ಚಾಗಿ ಹೋಗ ಬೇಕಾಗಿದೆ ಕಥಾಭಾಗಗಳ ಬಗ್ಗೆ ವಿಚಾರಮಾಡಿ ಉತ್ತರ ಕೊಡಲಿಕ್ಕೆ ಅವರು ತಕ್ಕವರಾಗಬೇಕಾಗಿದೆ. ಆದ್ದರಿಂದ ಕಥೆಯು ಬಹಳ ಉದ್ದವಾದದ್ದು ಇರ ಬಾರದು.

ಕಥೆಯಲ್ಲಿರುವ ಭಾಷೆಯು ಹುಡುಗರ ಯೋಗ್ಯತೆಗೆ ತಕ್ಕದ್ದಿರಬೇಕು; ಅದು ತೀರ ಸುಲಭವಿರಬಾರದು; ಬಹಳ ಕಠಿಣವಾದದ್ದೂ ಇರಬಾರದು ನಾವು ಕೊಟ್ಟ ಕಥೆಯಲ್ಲಿರುವ ಭಾಷೆಯು ನಿಬಂಧ ಶಿಕ್ಷಣದ ದೃಷ್ಟಿಯಿಂದ ನಾಲ್ಕನೆಯ ಇಯ ತ್ತೆಯ ವಿದ್ಯಾರ್ಥಿಗಳಿಗೆ ತಕ್ಕದ್ದಿರುವದು. ಅಂದರೆ ಅದರಿಂದ ಕೆಲವು ಹೊಸ ಶಬ್ದಗಳೂ ವಾಕ್ಯಖಂಡಗಳೂ ಅವರಿಗೆ ಚೆನ್ನಾಗಿ ತಿಳಿದು ಅವುಗಳ ಉಪಯೋಗ ವನ್ನು ಅವರು ಮಾಡಲು ಅವು ತಕ್ಕವಾಗಿರಬೇಕು. ಇದೇ ಕಥೆಯನ್ನು ಸುಲಭ ವಾಗಿ ಕೆಳಗಿನ ಬೇಕಾದ ಇಯತ್ತೆಯ ಹುಡುಗರಿಗಾಗಿ ಬರೆಯಬಹುದೆಂಬದು ಸ್ಪಷ್ಟವು.

ಪಾಠದ ವಿಷಯವಾಗಿ ಕೆಲಸಗಳು:—

I ಸಾಮಾನ್ಯವಾಗಿ ಈ ಬಗೆಯ ಕಥೆಗಳಿಂದ ನಿಬಂಧವನ್ನು ಕಲಿಸು ವಾಗ ಕಥೆಯನ್ನು ಹೇಳಿ, ಅದನ್ನು ತಿರುಗಿ ಹುಡುಗರಿಂದ ಹೇಳಿಸಿಕೊಳ್ಳುವ ದುಂಟು. ಆದರೆ ಹೀಗೆ ತಿರುಗಿ ಹೇಳುವಾಗ ಹುಡುಗರು ಬಹುತರವಾಗಿ ತಮ್ಮ ಲಕ್ಷ್ಯದಲ್ಲಿ ಉಳಿದ ಭಾಗಗಳನ್ನು ಹಾಗೂ ಹೀಗೂ ಹೇಳಿ ಕಥೆಯನ್ನು ಮುಗಿಸಿ ಬಿಡುವದುಂಟು. ಇದರಿಂದ ನಿಬಂಧ ಶಿಕ್ಷಣವು ಆಗುವದಿಲ್ಲೆಂದು ಧಾರಾಳವಾಗಿ ಹೇಳಬಹುದು.

ನಿಬಂಧ ಶಿಕ್ಷಣದಲ್ಲಿ ಶಬ್ದಗಳು ಹಾಗು ಶಬ್ದ ಸಮೂಹಗಳು ಅವುಗಳ ಸರಿಯಾದ ಅರ್ಥ, ಅವುಗಳ ಯೋಗ್ಯ ಉಪಯೋಗ, ಇವನ್ನು ಹುಡುಗರು ಕಲಿಯಬೇಕು; ವಿಚಾರಮಾಡಲಿಕ್ಕೆ ಅವರಿಗೆ ಬರಬೇಕು. ಮಾತಾಡಲಿಕ್ಕೆ ಅವರಿಗೆ ಬರಬೇಕು. ಇವು ಮುಖ್ಯ ಉದ್ದೇಶಗಳೆಂಬದನ್ನು ನೆನಪಿನಲ್ಲಿಟ್ಟರೆ, ಕಥೆ ಹೇಳಿ ಅವುಗಳನ್ನು ಹೇಳಿಸಿಕೊಂಡರೆ ನಿಬಂಧ ಶಿಕ್ಷಣದ ಉದ್ದೇಶಗಳು ನಿಜವಾಗಿ ಸಾಧ್ಯವಾಗಲಾರವೆಂಬದು ಸ್ಪಷ್ಟವು. ಮೇಲೆ ಕೊಟ್ಟ ಕಥೆಯನ್ನು ಶಿಕ್ಷಕನು ಹೇಳುವದಿಲ್ಲ; ಹುಡುಗರ ಮುಂದೆ ಸ್ಪಷ್ಟವಾಗಿ, ಸಾವಕಾಶವಾಗಿ ಒಮ್ಮೆ (ಇಲ್ಲವೆ ಅವಶ್ಯಕಂಡರೆ ಎರಡು ಸಾರಿ) ಓದುವನು. ಯಾವ ಶಿಕ್ಷಕನಿಗೂ (ಪಾಠ ಬಾರದಿದ್ದರೆ) ಬರೆದು ತಂದಂತೆ ಕಥೆಯನ್ನು ನಿಯಮಿತ ಭಾಷೆಯಲ್ಲಿ ಹೇಳಲಿಕ್ಕೆ ಬಾರದು; ಮೇಲಾಗಿ ಕಥೆಯನ್ನು ಹೇಳುವಾಗ ಭಾಷೆಯು ಬರೆಹದಷ್ಟು ನಿಶ್ಚಿತವಾದದ್ದು ಇರಲಾರದು. ಹೇಳುವದರಿಂದ ಕಥೆಯು ಉದ್ದವೂ ಆಗುವ ಸಂಭವ ಹೆಚ್ಚು. ಇವೆಲ್ಲ ದೋಷಗಳು ಬರೆದು ತಂದ ಕಥೆಯಲ್ಲಿ ಸೇರಲಾರವು. ನಮ್ಮ ಹುಡುಗರಲ್ಲಿ ಕಥೆಯು ಭಾವದಷ್ಟೇ ಕಥೆಯು ಭಾಷೆಯು ಮೂಡಬೇಕಾಗಿರುವದರಿಂದ ಅದನ್ನು ಅವಶ್ಯಕಂಡರೆ ಒಂದಕ್ಕಿಂತ ಹೆಚ್ಚು ಸಾರೆ ಓದಬಹುದೆಂದು ಹೇಳಿರುವೆವು. ಈ ಕಥೆಯನ್ನು ನಾಲ್ಕನೆಯ ಇಯತ್ತೆಯ ಹುಡುಗರಿಗೆ ಒಮ್ಮೆ ಓದಿ ತೋರಿಸಿದರೆ ಸಾಕೆಂದು ನಮ್ಮ ಅಭಿಪ್ರಾಯವು.

ಕಥೆಯ ಇಡಿ ಸಾರಾಂಶವನ್ನು ಹೇಳಿಸಿಕೊಳ್ಳುವದಕ್ಕಿಂತ, ಮೊದಲು, ನಡುವೆ, ಕೊನೆಗೆ ಕಥೆಯಲ್ಲಿ ಏನೇನು ಹೇಳಿದೆ ಎಂದು ಪ್ರಶ್ನಮಾಡಿ ಹುಡುಗರಿಂದ ಹೊರಡಿಸಿಕೊಳ್ಳುವದು ಮೇಲಾದದ್ದು. ಯಾಕೆಂದರೆ ಈ ಪ್ರಶ್ನಗಳಿಗೆ ಉತ್ತರ ಕೊಡಬೇಕಾದರೆ ಅವರು ವಿಚಾರಪೂರ್ವಕವಾಗಿ ಇವನ್ನು ಲಕ್ಷದಲ್ಲಿಡಬೇಕಾಗುವದು. ನಿಬಂಧ ಶಿಕ್ಷಣಕ್ಕಾಗಿ ಉಪಯೋಗಿಸಿದ ಪ್ರತಿಯೊಂದು ಕಥೆಯ ಬಗ್ಗೆ ಈ ಪ್ರಶ್ನಗಳನ್ನು ಕೇಳತಕ್ಕದ್ದು.

ಆ ಬಳಿಕ ಕಥೆಯಲ್ಲಿ ಬಂದ ಬೇರೆ ಬೇರೆ ಸಂಗತಿಗಳ ಬಗ್ಗೆ ಪ್ರತ್ಯೇಕವಾದ ಪ್ರಶ್ನಗಳನ್ನು ಕೇಳತಕ್ಕದ್ದು. ಇವುಗಳಿಂದ ಹುಡುಗರಿಗೆ ವಿಚಾರಮಾಡಲಿಕ್ಕೂ ತಮಗೆ ತಿಳಿದ ಸಂಗತಿಗಳನ್ನು ತಮ್ಮ ಮಾತಿನಲ್ಲಿ ಹೇಳಲಿಕ್ಕೂ ಉತ್ತೇಜನವು ದೊರೆಯುವದು. ಸಣ್ಣ ಹುಡುಗರ ಸ್ಮರಣಶಕ್ತಿಯು ಚೆನ್ನಾಗಿರುವದು. ಒಂದೆರಡು ಸಾರಿ ಕೇಳಿದ್ದನ್ನು ತತ್ಕ್ಷಣಕ್ಕೆ ಅವರು ನೆನಪಿನಿಂದ ನುಡಿದು ಬಿಡುವರು. ಆದ್ದರಿಂದ ಕಥೆಯಲ್ಲಿ ಬಂದ ಶಬ್ದಗಳಿಂದಲೇ ಉತ್ತರವನ್ನು ಹೇಳಿಸಿಕೊಂಡು ಸಮಾಧಾನ ಹೊಂದಬಾರದು. ಅವರು ವಿಚಾರಮಾಡಿ ಹೇಳುವಂಥ ಪ್ರಶ್ನಗಳ

ದ್ದರೆ ವಿಚಾರಕ್ಕೂ ಸ್ವಂತ ಮಾತುಗಳಿಗೂ ಅವಕಾಶ ಕೊಟ್ಟಂತಾಗುವದು. ಕೇಳಿದ್ದನ್ನು ವಿಚಾರಮಾಡದೆ ಶಬ್ದಶಃ ನುಡಿದು ಬಿಡಲು ಬಾರದಂಥ ಪ್ರಶ್ನಗಳನ್ನು ಶಿಕ್ಷಕರು ಮುಂದಾಗಿಯೇ ತಯಾರಿಸಿಟ್ಟುಕೊಳ್ಳುವದು ಮಹತ್ವವಾದದ್ದು.

ಈ ಪ್ರಶ್ನಗಳಾದ ಬಳಿಕ ಕೆಲವು ಹುಡುಗರಿಗೆ ಪ್ರಶ್ನಗಳನ್ನು ಕೇಳಲಿಕ್ಕೂ ಉಳಿದವರಿಗೆ ಅವುಗಳ ಉತ್ತರಗಳನ್ನು ಹೇಳಲಿಕ್ಕೂ ಉತ್ತೇಜನ ಕೊಡಬಹುದು. ಇದಕ್ಕಾಗಿ ಹುಡುಗರಲ್ಲಿ ಎರಡು ಪಂಗಡಗಳನ್ನು ಮಾಡಬಹುದು. ಇದರಿಂದ ಪ್ರಶ್ನಗಳನ್ನು ಯೋಗ್ಯಭಾಷೆಯಲ್ಲಿ ಕೇಳುವ ರೂಢಿಯು ಉಂಟಾಗುವದಲ್ಲದೆ ಹುಡುಗರನ್ನು ತಾವು ಕೇಳಿದ ಕಥೆಯ ಬಗ್ಗೆ ವಿಚಾರಮಾಡಲಿಕ್ಕೆ ಹಚ್ಚಿದಂತಾಗುವದು; ಹಾಗು ಪ್ರಶ್ನಗಳನ್ನು ಕೇಳುವಾಗ ಮಾತಾಡಲಿಕ್ಕೆ ಹಚ್ಚಿದಂತಾಗುವದು;

II ಆ ಬಳಿಕ ಕಥೆಯಲ್ಲಿ ಬಂದ ವಾಕ್ಯಗಳನ್ನು ಕೆಲವು ಶಬ್ದಗಳನ್ನು ಬಿಟ್ಟು ಬರೆದು ಆ ವಾಕ್ಯಗಳನ್ನು ಪೂರ್ಣಮಾಡಲಿಕ್ಕೆ ಹೇಳುವ ರೂಢಿ ಮಾಡಿಸ ತಕ್ಕದ್ದು. ನೀವು ಬಿಟ್ಟಿರುವ ಶಬ್ದಗಳನ್ನು ಹುಡುಗರ ಮುಂದಿಡುವದೂ ಅವಶ್ಯಕವಾದದ್ದು. ಯಾಕೆಂದರೆ, ಯೋಗ್ಯ ಶಬ್ದಗಳನ್ನು ಯೋಗ್ಯ ಸ್ಥಳಗಳಲ್ಲಿ ಉಪಯೋಗಿಸುವ ರೂಢಿಯು ಅವರಿಗೆ ಈ ಶಿಕ್ಷಣದಲ್ಲಿ ಆಗಬೇಕಾಗಿರುವದು. ಉಪಯೋಗಿಸಬೇಕಾದ ಶಬ್ದಗಳ ಅರ್ಥವು ಸರಿಯಾಗಿ ತಿಳಿಯದಿದ್ದರೆ ಅವುಗಳನ್ನು ತಿಳಿಸಲಿಕ್ಕೆ ಇಲ್ಲಿ ಅವಕಾಶ ಸಿಗುವದು. ಇತರ ಶಬ್ದಗಳನ್ನು ಹಾಕಿ ಹಾಗೂ ಹೀಗೂ ವಾಕ್ಯಗಳನ್ನು ಪೂರ್ಣಮಾಡಲು ಅವರಿಗೆ ಅವಕಾಶದೊರೆಯದು. ಯಾಕೆಂದರೆ ಮೇಲೆ ಕೊಟ್ಟ ಶಬ್ದಗಳಲ್ಲಿ ಒಂದನ್ನು ವಿಚಾರಪೂರ್ವಕವಾಗಿ ಆರಿಸಿ ಅವರು ಉಪಯೋಗಿಸಬೇಕಾಗುವದು.

III ಇಷ್ಟಾದರೆ ಅವರಿಗೆ ಕೆಲವು ಶಬ್ದಗಳ ಹಾಗು ಶಬ್ದ ಸಮೂಹಗಳ ಯೋಗ್ಯ ಅರ್ಥವು ಚೆನ್ನಾಗಿ ತಿಳಿದಂತಾಗುವದು. ಆ ಬಳಿಕ ಆ ಶಬ್ದಗಳನ್ನು ಕಥೆಯಲ್ಲಿ ಬಾರದಿದ್ದ ವಾಕ್ಯಗಳಲ್ಲಿ ಉಪಯೋಗಿಸಲಿಕ್ಕೆ ಅವರಿಗೆ ಹೇಳಬಹುದು. ಇದರಿಂದ ತಾವು ಕಲಿತ ಶಬ್ದಗಳನ್ನು ತಕ್ಕಲ್ಲಿ ಉಪಯೋಗಿಸುವ ರೂಢಿಯು ಹುಡುಗರಿಗೆ ಆಗುವದು. ಇಂಥ ಶಬ್ದಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಉಪಯೋಗಿಸಿರಿ, ಎಂದು ಹೇಳುವ ರೂಢಿಯು ಇರುವದಷ್ಟೇ. ಇದನ್ನು ವಾಚನ ಪಾಠಗಳಲ್ಲಿ ಮಾಡಿಸುವದುಂಟು. ಆದರೆ ಸ್ವಂತವಾದ ವಾಕ್ಯಗಳನ್ನು ಹುಡುಗರು ಹೇಳುವದು ಅಪರೂಪ. ಮೇಲಾಗಿ ಶಬ್ದದ ಉಪಯೋಗದ ಅಗತ್ಯವು ಅನಿಸದೆ ಅದನ್ನು ಸರಿಯಾಗಿ ಉಪಯೋಗಿಸುವ ಕೆಲಸವು ದೊಡ್ಡವರಿಗೆ ಸಹ

ಕಠಿಣವೆನಿಸುವದು. ಅದ್ದರಿಂದ ವಾಕ್ಯಗಳನ್ನು ಕೊಟ್ಟು ಅವುಗಳಲ್ಲಿ ಅರ್ಥವು ಪೂರ್ಣವಾಗುವಂಥ ಯೋಗ್ಯಶಬ್ದಗಳನ್ನು ಉಪಯೋಗಿಸುವ ಅಭ್ಯಸನಗಳು ಹೆಚ್ಚು ಪರಿಣಾಮಕರವೆಂದು ಅನುಭವಿಕ ಶಿಕ್ಷಕರು ಒಪ್ಪಿಕೊಳ್ಳುವರು.

IV ಈ ಅಭ್ಯಸನದಲ್ಲಿ ವ್ಯಾಕರಣದ ಸ್ವಲ್ಪ ಅಂಶವೂ ಇರುವದು. ವಿಶೇಷಣಕ್ಕೂ ವಿಶೇಷ್ಯಕ್ಕೂ ಅರ್ಥ ಪೂರ್ಣವಾದ ಸಂಬಂಧವೇ ಇರತಕ್ಕದ್ದೆಂಬದು ಇದರಿಂದ ವಿದ್ಯಾರ್ಥಿಗಳ ಲಕ್ಷ್ಯದಲ್ಲಿ ಬರುವದು. ಕೊಟ್ಟ ವಾಕ್ಯಗಳ ಅರ್ಥವು ಸರಿಯಾಗುವದೇ ಎಂಬ ಬಗ್ಗೆ ಅವರಿಗೆ ವಿಚಾರಮಾಡ ಹಚ್ಚಿದಂತಾಗುವದು. ಶಬ್ದಗಳ ಯೋಗ್ಯ ಅರ್ಥವು ಇಂಥದೆಂದು ಅವರ ಲಕ್ಷ್ಯದಲ್ಲಿ ಬರುವದು. ಈ ಅಭ್ಯಸನಗಳು ಕೆಳಗಿನ ಇಯತ್ತ್ತಿಗಳವರಿಗೆ ತೀರ ಸುಲಭವಾಡವಿರಬೇಕೆಂಬದನ್ನು ಹೇಳಬೇಕಾಗಿಲ್ಲ. ಇದರಲ್ಲಿ ವ್ಯಾಕರಣ ವಿಷಯವು ಬಂದಿರಬೇಕೆಂಬ ನಿರ್ಬಂಧವೂ ಇಲ್ಲ. ಶಬ್ದಗಳ ಯೋಗ್ಯ ಅರ್ಥದ ಬಗ್ಗೆ ಹುಡುಗರಿಗೆ ವಿಚಾರಮಾಡಲಿಕ್ಕೆ ಹಚ್ಚುವದೇ ಇದರ ಉದ್ದೇಶವಿರುವದು.

ಮೇಲಿನ ನಾಲ್ಕಬಗೆಯ ಅಭ್ಯಸನಗಳಲ್ಲದೆ ನಿಬಂಧ ಶಿಕ್ಷಣಕ್ಕೆ ಸಹಾಯವಾಗುವಂತೆ ಬೇರೆ ಬಗೆಯ ಅಭ್ಯಸನಗಳನ್ನು ರಚಿಸಬಹುದು

ಈ ಪಾಠವು ವಾಚನಿಕ ನಿಬಂಧವೆಂಬದನ್ನು ಲಕ್ಷ್ಯದಲ್ಲಿಡತಕ್ಕದ್ದು. ಇದಾದಬಳಿಕ ಹುಡುಗರು ಬಾಯಿಂದ ಹೇಳಿದ್ದನ್ನೇ ಬರೆದು ತೋರಿಸಲಿಕ್ಕೆ ಇವೇ ಬಗೆಯ ಬೇರೆ ಅಭ್ಯಸನಗಳನ್ನು ರಚಿಸಿಟ್ಟುಕೊಂಡಿರತಕ್ಕದ್ದು.

ಈ ಪದ್ಧತಿಯಿಂದ ನಿಬಂಧ ಶಿಕ್ಷಣವನ್ನು ಸಾಗಿಸಬೇಕಾದರೆ, ಆಯಾ ಇಯತ್ತ್ತಿಗಳ ವಿದ್ಯಾರ್ಥಿಗಳ ವಯಸ್ಸು, ಭಾಷಾಜ್ಞಾನ, ವ್ಯವಹಾರ ಇವುಗಳಿಗೆ ತಕ್ಕ ಕಥೆಗಳು ಶಿಕ್ಷಕರಿಗೆ ಗೊತ್ತಿರುವದು ಮಹತ್ವವಾದದ್ದು. ಇಂಥ ಕಥೆಗಳ ಸಂಗ್ರಹವಿದ್ದರಂತೂ ಮೇಲಾದದ್ದು. ಬಾಲಕರ ವರ್ಗಕ್ಕೂ ಮೊದಲಿನ ಒಂದೆರಡು ಇಯತ್ತ್ತಿಗಳಿಗೂ ಹೇಳಲಿಕ್ಕಾಗಿ ಶಿಕ್ಷಕರು ಹಲವು ಕಥೆಗಳನ್ನು ಸಂಗ್ರಹಿಸಿರುವರಷ್ಟೇ. ಅವುಗಳಲ್ಲಿ ಕೆಲವನ್ನು ಬೇರೆ ಬೇರೆ ಇಯತ್ತ್ತಿಗಳಿಗೆ ನಿಬಂಧ ಶಿಕ್ಷಣಕ್ಕಾಗಿ ಉಪಯೋಗಿಸಿ ನೋಡಿ, ಕಥೆ, ಇಯತ್ತ್ತೆ, ಆ ಬಗ್ಗೆ ಬಗೆಬಗೆಯ ಅಭ್ಯಸನಗಳು, ಇವುಗಳನ್ನು ರಚಿಸಿ ಅನುಭವ ಪಡೆದು ನಮ್ಮ ಕಡೆಗೆ ಕಳಿಸಿದರೆ ನಾವು ಪ್ರಾಥಮಿಕ ಶಿಕ್ಷಣದಲ್ಲಿ ಅದನ್ನು ಪ್ರಸಿದ್ಧಪಡಿಸಲು ಇಚ್ಛಿಸುತ್ತೇವೆ.

ಶಿಕ್ಷಣಯೋಜನೆಗಳು

ಕಳೆದ ಎರಡು ವರುಷಗಳಿಂದ ಉತ್ತರ ಕರ್ನಾಟಕದ ಶಿಕ್ಷಕರಿಗಾಗಿ ಧಾರವಾಡದ ಟ್ರೇನಿಂಗ ಸ್ಕೂಲದಲ್ಲಿ ಈ ಊರ ಶಿಕ್ಷಕ ಶಿಕ್ಷಣಾಲಯಗಳ ಚಾಲಕರು ಬೇಸಿಗೆಯ ಶಿಕ್ಷಣಯೋಜನೆಗಳನ್ನು ಏರ್ಪಡಿಸಿ ಕೈಲಾದಮಟ್ಟಿಗೆ ಪ್ರಾಥಮಿಕ ಶಿಕ್ಷಣದ ಸೇವೆಯನ್ನು ಮಾಡಿರುವರಷ್ಟೇ. ಇಂಥ ಶಿಕ್ಷಣಯೋಜನೆಗಳು ವರುಷಕ್ಕೊಮ್ಮೆ ಒಂದುಸಾರೆ ಐದಾರು ದಿನಗಳ ವರೆಗೆ ಒಂದೇ ಸವನೆ ನಡೆಯುವದಕ್ಕಿಂತ ನಿಯಮಿತ ಅವಧಿಯಲ್ಲಿ ಅಂದರೆ ಒಮ್ಮೊಮ್ಮೆ ಮೂರು ನಾಲ್ಕು ದಿನಗಳ ಪರೆಗೆ ವರ್ಷದಲ್ಲಿ ಒಂದಕ್ಕಿಂತ ಹೆಚ್ಚು ಸಾರೆ ನಡೆಯುವದು ಮೇಲು ಎಂದು ಕೆಲವು ಜನ ಶಿಕ್ಷಕರಿಂದ ಸೂಚನೆಗಳು ಬಂದಿರುವವು. ಕಳೆದ ಎರಡು ವರುಷಗಳ ಶಿಕ್ಷಣಯೋಜನೆಗಳಲ್ಲಿ ನಮಗೆ ಅನೇಕ ಸಂಗತಿಗಳ ಅನುಭವವು ಬಂದಿರುವದು. ಅವುಗಳಲ್ಲಿ ಕೆಲವನ್ನು ಇಲ್ಲಿ ಹೇಳುವೆವು.

ಮೇ ತಿಂಗಳ ಸೂಟಿಯ ಆರಂಭದ ಸಮಯವು ಒಂದೆರಡು ಸಂಗತಿಗಳ ದೃಷ್ಟಿಯಿಂದ ಶಿಕ್ಷಣಯೋಜನೆಗೆ ತಕ್ಕ ಕಾಲವೆನಿಸಿದರೂ ಆ ಕಾಲದಲ್ಲಿ ಇವುಗಳನ್ನು ಏರ್ಪಡಿಸುವ ಬಗ್ಗೆ ವ್ಯವಸ್ಥೆಮಾಡುವವರಿಗೆ ಅನೇಕ ಎಡರುಗಳಿವೆ. ಶಿಕ್ಷಣ ಸಂಸ್ಥೆಗಳ ಎರಡನೆಯ ಷಾಣ್ಮಾಸವು ದೊಡ್ಡದಿರುವದು. ಅನ್ವರ್ಥಕವಾಗಿ ಅದು ಆರು ತಿಂಗಳು ನಡೆಯುವದು. ಅದು ಮೊದಲನೆಯ ಷಾಣ್ಮಾಸಕ್ಕಿಂತ ಹೆಚ್ಚು ಮಹತ್ವವಾದದ್ದು. ಈ ಎರಡನೆಯ ಷಾಣ್ಮಾಸದ ಕೊನೆಯ ಭಾಗದಲ್ಲಿ ಪರೀಕ್ಷೆಗಳು ಹೆಚ್ಚಾಗಿ ನಡೆಯುವವು. ಈ ಸಂಸ್ಥೆಗಳ ಅಧ್ಯಾಪಕರೆಲ್ಲ ಆಗ ತಮ್ಮ ದಿನದ ಕಾರ್ಯಭಾರವನ್ನು ಸಾಗಿಸುವದಲ್ಲದೆ ಸಾರ್ವಜನಿಕ ಪರೀಕ್ಷೆಗಳ ಕೆಲಸವನ್ನು ನಿಯಮಿತ ಕಾಲದಲ್ಲಿ ತೀರಿಸಬೇಕಾಗುವದು. ಮಾರ್ಚ ತಿಂಗಳು ಸರಕಾರದ ವರ್ಷಾಂತವು. ಎಪ್ರಿಲದಲ್ಲಿ ಪತ್ರವ್ಯವಹಾರ ಲೆಕ್ಕ ಪತ್ರಗಳ ಸೂರೆಯಾಗುವದು. ಈ ತಿಂಗಳ ಕೊನೆಯ ದಿನಸ ಎರಡೂ ಶಿಕ್ಷಣ ಸಂಸ್ಥೆಗಳ ವರ್ಷಾಂತವು. ವಿದ್ಯಾರ್ಥಿಗಳು ಆಗ ಈ ಸಂಸ್ಥೆಗಳಿಂದ ಹೊರಬೀಳುವರು. ಮೇಲಾಗಿ, ಮೇ ತಿಂಗಳ ಆರಂಭದಿಂದ ಒಂದು ತಿಂಗಳ ವರೆಗೆ ಟ್ರೇನಿಂಗ ಸ್ಕೂಲದಲ್ಲಿ ನೀರಿನ ವ್ಯವಸ್ಥೆಯು ಇರುವದಿಲ್ಲ. ಇದಲ್ಲದೆ ಮೇ ತಿಂಗಳ ಆರಂಭದಲ್ಲಿ ಬೇಸಿಗೆಯು ಹಿಳ್ಳೇ ಭರದಲ್ಲಿರುವದು.

ಶಿಕ್ಷಣಯೋಜನೆಯಲ್ಲಿ ಭಾಗತೆಗೆದುಕೊಳ್ಳುವ ಸುಪರವಾಯಿಝರರೂ ಇವೇ ಗೆಯ ತೊಂದರೆಗಳಿಗೆ ಗುರಿಯಾಗಿರುವರು. ನಾಲ್ಕಾರು ತಿಂಗಳ ವರೆಗೆ ಸತತವಾಗಿ ರಜೆಯಿಲ್ಲದೆ ತಿರುಗಿ ತಿರುಗಿ, ಪರೀಕ್ಷೆ ತೆಗೆದುಕೊಂಡು ಅವರು ಹಣ್ಣಾಗಿಗುವರು. ದೊಡ್ಡ

ದೊಡ್ಡ ಪ್ರಾಥಮಿಕ ಶಾಲೆಗಳ ಶಿಕ್ಷಕರೂ ದುಡಿದು ದುಡಿದು ವಿಶ್ರಾಂತಿಯನ್ನಪೇಕ್ಷಿಸ
ತ್ತಿರುವರು.

ಒಟ್ಟಿನ ಮೇಲೆ ಬೇಸಿಗೆಯ ಸೂಟಿಯ ಆರಂಭದ ಕಾಲವು ಎಲ್ಲರೂ ವಿಶ್ರಾಂ
ಗಾಗಿ ಹಂಬಲಿಸುತ್ತಿರುವ ಕಾಲವು. ಆಗ ಶಿಕ್ಷಣಯೋಜನೆಯನ್ನು ಏರ್ಪಡಿಸುವದ
ಸರಿಯಲ್ಲವೆಂದು ಹಲವರು ಶಿಕ್ಷಕರು ಅಭಿಪ್ರಾಯಪಟ್ಟಿರುವರು. ಆದ್ದರಿಂದ ಈ ವರು
ನಾವು ಮೇ ತಿಂಗಳ ಆರಂಭವಲ್ಲಿ ಈ ಶಿಕ್ಷಣಯೋಜನೆಯನ್ನು ಏರ್ಪಡಿಸಿಲ್ಲ. ಇದನ
ಮೊದಲನೆಯ ಘಾಣ್ಣಾಸನ ಕೊನೆಯ ಭಾಗದಲ್ಲಿ, ಇಲ್ಲವೆ ನಡುವೆ ಕಾಲಾನುಕೂ
ವಾದಾಗ ಮಾಡಬೇಕೆಂದು ನಿಶ್ಚಯಿಸಿರುವೆವು. ತಿಂಗಳು ತಾರೀಖುಗಳನ್ನು ಮುಂದ
ಗಿಯೇ ಪ್ರಾಥಮಿಕ ಶಿಕ್ಷಣದ ಮುಖಾಂತರ ಶಿಕ್ಷಕರಿಗೆಲ್ಲ ತಿಳಿಸುವೆವು.

ಮೇಲೆ ಹೇಳಿದಂತೆ ಬಹುಮುಖವಾದ ಅನಾನುಕೂಲತೆಗಳಿದ್ದರೂ ಕಳೆದ ಎರಡ
ಶಿಕ್ಷಣಯೋಜನೆಗಳಿಗೆ ಉತ್ತರ ಕರ್ನಾಟಕದ ಪ್ರಾಥಮಿಕ ಶಿಕ್ಷಕರು ದೂರ ದೂರದ
ಊರುಗಳಿಂದ ಒಂದು ಕಷ್ಟನಷ್ಟಗಳನ್ನು ಲಕ್ಷಿಸದೆ ಸೂಟಿಯ ಎಳೆಂಟು ದಿನಗಳನ್ನು
ಇದಕ್ಕಾಗಿ ಉಪಯೋಗಿಸಿ ಯೋಜಕರಿಗೆ ಉತ್ತೇಜನವನ್ನು ಕೊಟ್ಟು ತಮಗೆ ಲಾಭ
ವನ್ನು ಮಾಡಿಕೊಂಡದ್ದು ಅವರಿಗೆ ಭೂಷಣವಾದದ್ದು. ಮೊದಲನೆಯ ವರುಷದ
ಶಿಕ್ಷಣಯೋಜನೆಗಿಂತ ಎರಡನೆಯ ವರ್ಷ ಶಿಕ್ಷಕರ ಸಂದಣಿಯು ಹೆಚ್ಚಾಗಿತ್ತು.
ಯೋಜಕರ ಉದ್ದೇಶಗಳು. ಇವರಿಗೆ ಹೆಚ್ಚು ವಿಶದವಾಗಿಯೂ ನಿರ್ದಿಷ್ಟವಾಗಿಯೂ
ಗೊತ್ತಾಗಿದ್ದವು. ಆದ್ದರಿಂದಲೇ ಇದರಿಂದ ಹೆಚ್ಚು ಪ್ರಯೋಜನವು ಆಯಿತೆಂದು
ಸುಪರವಾಯಿಝರರೂ ಅನುಭವಿಕರಾದ ಶಿಕ್ಷಕರೂ ಹೇಳುತ್ತಿರುವರು.

ಆದರೆ, ಇವುಗಳಿಂದ ಶಿಕ್ಷಕರಲ್ಲಿ ತಮ್ಮ ಕರ್ತವ್ಯದ ಬಗ್ಗೆ ಅಭಿಮಾನವೂ, ಅದರ
ನಿಶ್ಚಿತ ದಿಶೆಯ ಬಗ್ಗೆ ಯಥಾರ್ಥ ಕಲ್ಪನೆಗಳೂ ತಕ್ಕ ಮಟ್ಟಿಗೆ ಮಾತ್ರ ಉಂಟಾದವೆಂದು
ನಮ್ಮ ಅಭಿಪ್ರಾಯವು. ನಾಲ್ಕೈದು ನೂರು ಶಿಕ್ಷಕರು ಒತ್ತಟ್ಟಿಗೆ ಕಲೆತು ಶಿಕ್ಷಣದ
ನಿತ್ಯದ ವಿಷಯಗಳ ಪದ್ಧತಿಗಳನ್ನೆಲ್ಲ ವಿವರವಾಗಿ ಅಭ್ಯಾಸಿಸುವದು ಸುಸಾಧ್ಯವಲ್ಲ.
ಸಾಮಾನ್ಯವಾಗಿ ಸದ್ಯಕ್ಕೆ ಶಿಕ್ಷಣದಲ್ಲಿ ಯಾವ ಯಾವ ಸುಧಾರಣೆಗಳು ನಡೆದಿರುವ
ವೆಂಬದನ್ನು ವಿಹಂಗಮದೃಷ್ಟಿಯಿಂದ ನೋಡುವದು ಇದರಿಂದ ಸುಲಭವು; ಆದರೆ ಈ
ಬಗೆಯ ವಿಹಂಗಮಾವಲೋಕನದಿಂದ ನಮ್ಮ ಪ್ರಾಥಮಿಕ ಶಿಕ್ಷಕರಲ್ಲಿ ಬಹುಜನರಿಗೆ
ತಮ್ಮ ನಿತ್ಯದ ಕೆಲಸದಲ್ಲಿ ಹೊಸ ಪದ್ಧತಿಗಳನ್ನು ಉಪಯೋಗಿಸಲಿಕ್ಕೆ ಅವಶ್ಯವಾದ
ಜ್ಞಾನವು ದೊರೆಯುವದಿಲ್ಲೆಂದು ನಮ್ಮ ಅಭಿಪ್ರಾಯವು.

ಟ್ರೇನಿಂಗ ಸಂಸ್ಥೆಗಳಲ್ಲಿ ಶಿಕ್ಷಣ ಹೊಂದುತ್ತಿರುವ ಶಿಕ್ಷಕರು ಹಳ್ಳಿಯ ಸಾಲೆಗಳ
ನಿತ್ಯದ ಪರಿಸ್ಥಿತಿಯನ್ನು ಮರೆತುಬಿಡುವರು; ಈ ಸಂಸ್ಥೆಗಳು ದೊಡ್ಡ ಊರುಗಳಲ್ಲಿರು

ಪದರಿಂದ ಅಲ್ಲಿರುವ ಪಾ್ರ. ಶಾಲೆಗಳು ಹಳ್ಳಿಯ ಸಣ್ಣ ಸಾಲೆಗಳನ್ನು ಮರೆತು ದೊಡ್ಡ ಊರುಗಳ ಪರಿಸ್ಥಿತಿಗೆ ತಕ್ಕ ಶಿಕ್ಷಣ ಪದ್ಧತಿಗಳ ಮಾದರಿಗಳನ್ನು ಮಾತ್ರ ಭಾವೀ ಶಿಕ್ಷಕರ ಮುಂದೆ ಇರಿಸುತ್ತಿರುವವು ಎಂದು ಆಕ್ಷೇಪಗಳು ಬರುವದುಂಟು. ಶಿಕ್ಷಣ ಸಂಸ್ಥೆಗಳಿಗೆ ಎರಡು ಮಹತ್ವದ ಕಾರ್ಯಗಳನ್ನು ಮಾಡುವದಿರುತ್ತದೆ. ಅವುಗಳಲ್ಲಿ ಮೊದಲನೆಯದು ಯಾವದೆಂದರೆ ಸದ್ಯಕ್ಕೆ ಹಲವು ಪ್ರತಿಭಾಶಾಲಿಗಳಾದ ಶಿಕ್ಷಣಜ್ಞರ ಪ್ರಯತ್ನದಿಂದ ನಾವು ಕಲಿಸುವ ವಿಷಯಗಳ ಶಿಕ್ಷಣ ಪದ್ಧತಿಯಲ್ಲಿ ಆಗುತ್ತಿರುವ ಪರಿಣಾಮಕರವಾದ ಶಿಕ್ಷಣ ಪದ್ಧತಿಗಳನ್ನು ಭಾವೀ ಶಿಕ್ಷಕರಿಗೆ ಮನವರಿಕೆಯಾಗುವಂತೆ ಅವರ ಮುಂದಿಟ್ಟು ಆ ಪದ್ಧತಿಗಳನ್ನು ಉಪಯೋಗಿಸುವ ಚಾತುರ್ಯವು ಅವರಲ್ಲಿರುವ ಭರವಸೆಯನ್ನು ಉಂಟುಮಾಡುವದು. ಎರಡನೆಯದು ಯಾವದೆಂದರೆ ಈ ಶಿಕ್ಷಕರು ಮುಂದೆ ಹಳ್ಳಿಯ ಸಾಲೆಗಳಲ್ಲಿ ಕೆಲಸ ಮಾಡುತ್ತಿರುವಾಗ ತಮಗೊದಗುವ ಪರಿಸ್ಥಿತಿಯಲ್ಲಿ ಇವುಗಳನ್ನು ಶಕ್ಯವಿರುವ ಮಟ್ಟಿಗೆ ಉಪಯೋಗಿಸಿಕೊಳ್ಳುವ ಭರವಸೆಯನ್ನು ಉಂಟುಮಾಡುವದು. ಹಳ್ಳಿಯ ಪರಿಸ್ಥಿತಿಯಲ್ಲಿ ಹೊಸಪದ್ಧತಿಗಳ ಉಪಯೋಗವು ಆಗುವದಿಲ್ಲೆಂದು ಸಣ್ಣ ಮಾತಿನಿಂದ ಪದ್ಧತಿಗಳ ಅವಶ್ಯಕತೆಯನ್ನೇ ತಿರಸ್ಕರಿಸುವದು ತೀರ ಸುಲಭವಾದದ್ದು. ಆದರೆ, ಇದರಿಂದ ನಮ್ಮ ಶಿಕ್ಷಣ ಪ್ರಪಂಚದಲ್ಲಿ ಸುಧಾರಣೆಯಾಗುವ ಸಂಭವವು ಇಲ್ಲದಾಗುವದು. ಹೊಸ ಪದ್ಧತಿಗಳು ಪೂರ್ಣವಾಗಿ ಪ್ರತಿಯೊಂದು ವಿಷಯದಲ್ಲಿ ಪ್ರತ್ಯೇಕವಾಗಿ ಅನುಸರಿಸಲ್ಪಡಲು ತಕ್ಕ ಪರಿಸ್ಥಿತಿಯು ಹಳ್ಳಿಗಳಲ್ಲಿಲ್ಲವೆಂದು ಪದ್ಧತಿಗಳ ಅಭ್ಯಾಸನವನ್ನು ನಿಲ್ಲಿಸಿಬಿಡುವದು ಸರಿಯಲ್ಲವೆಂದು ಸಿದ್ಧ ಮಾಡುವ ಕಾರಣವಿಲ್ಲ. ನಾವು ಅನುಸರಿಸುತ್ತಿರುವ ಮಾರ್ಗಗಳಿಂದ ಸುಲಭವಾಗಿಯೂ ತೀವ್ರವಾಗಿಯೂ ದೃಢವಾದ ಪರಿಣಾಮವನ್ನುಂಟುಮಾಡುವ ಮಾರ್ಗಗಳು ಇರುವವೋ ಎಂಬದನ್ನು ಕುರಿತು ವಿಚಾರಿಸಿ ಕಂಡು ಹಿಡಿದು, ಇವುಗಳನ್ನು ಅನುಸರಿಸಲಿಕ್ಕೆ ಯತ್ನಿಸುವದು ಶಿಕ್ಷಣದಲ್ಲಿ ತೊಡಗಿದ ಪ್ರತಿಯೊಬ್ಬ ಶಿಕ್ಷಕನ ಕರ್ತವ್ಯವು. ಸಾಮಾನ್ಯ ಶಿಕ್ಷಕರ ಅನುಭವವೂ ಸಹಾನುಭೂತಿಯೂ ಸಹಕಾರಿತೆಯೂ ಶಿಕ್ಷಣ ಸಂಸ್ಥೆಗಳ ಚಾಲಕರಿಗೆ ಅತ್ಯವಶ್ಯವಾದವು. ಶಿಕ್ಷಣ ಪ್ರಪಂಚದಲ್ಲಿ ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ಪರಿಸ್ಥಿತಿಗಳಲ್ಲಿ ತೊಡಗಿರುವ ಶಿಕ್ಷಣಾಭಿವಾನಿಗಳು ಕಂಡು ಹಿಡಿದ ಹೊಸ ಪದ್ಧತಿಗಳನ್ನು ಪರೀಕ್ಷಿಸಿ ನೋಡಿ ಅವುಗಳನ್ನು ಶಿಕ್ಷಕರ ನಿದರ್ಶನಕ್ಕೆ ತಂದುಕೊಡುವದು ಶಿಕ್ಷಕ ಶಿಕ್ಷಣಾಲಯಗಳ ಮುಖ್ಯ ಕಾರ್ಯವು. ಆದ್ದರಿಂದ ಒನ್ಮೆ ಶಿಕ್ಷಕ ಶಿಕ್ಷಣಾಲಯಗಳನ್ನು ಬಿಟ್ಟು ಹೋದರೆ ತಿರುಗಿ ಅದರ ಕಡೆಗೆ ಹಾಯುವ ಕಾರಣವಿಲ್ಲೆಂದು ಬಗೆಯುವದು ಸರಿಯಲ್ಲ.

ಇರಲಿ, ಶಿಕ್ಷಕರೆಲ್ಲ ಒತ್ತಟ್ಟಿಗೆ ಕೂಡಿ ಹೊಸ ಪದ್ಧತಿಗಳ ಬಗ್ಗೆ ಚರ್ಚೆಮಾಡುವದು ಅತ್ಯವಶ್ಯಕವಾದದ್ದು. ಆದರೆ ಇದಕ್ಕಾಗಿ ಅನುಭವಿಕರೂ ಉತ್ಸಾಹಶೀಲರೂ

ಆದವರು ಮೇಲಿಂದ ಮೇಲೆ ಕಲೆತು ವಿಚಾರವಿನಿಮಯ ಮಾಡಬೇಕಾಗುವದು. ಇದನ್ನು ಒಂದು ಇಲ್ಲವೆ ಎರಡು ವಿಷಯಗಳ ಬಗ್ಗೆ ಪೂರ್ಣ ವಿಚಾರಮಾಡುವದರಿಂದ ಸಾಕಷ್ಟು ಚರ್ಚೆಯಾಗಿ ನಿಶ್ಚಿತವಾದ ನಿರ್ಣಯಗಳು ಹೊರಡಲು ಅವಕಾಶವಿರುವದು. ನಡೆದು ಬಂದ ಸಾಂಪ್ರದಾಯಗಳನ್ನೂ ಪದ್ಧತಿಗಳನ್ನೂ ಶಿಕ್ಷಕರು ಸುಲಭವಾಗಿ ಬಿಡುವದಿಲ್ಲ. ಆದ್ದರಿಂದ ಹೊಸದೆಂದ ಕೂಡಲೆ ಅನೇಕರು ಸಾಶಂಕವೃತ್ತಿಯುಳ್ಳವರಾಗುವರು. ಇಂಥವರ ಮನವರಿಕೆಯಾಗಲಿಕ್ಕೆ ಪ್ರತ್ಯಕ್ಷ ಪ್ರಮಾಣವು ಬೇಕಾಗುವದು. ಈ ಮೂಲಕ ಒಂದು ವಿಷಯದಲ್ಲಿ ಹಲವು ಪಾಠಗಳನ್ನು ತೆಗೆದುಕೊಳ್ಳಬೇಕಾಗುವದು; ಚರ್ಚೆಗೆ ಸಾಕಷ್ಟು ಅನುವು ಕೊಡಬೇಕಾಗುವದು. ಆದ್ದರಿಂದ ಸ್ವಲ್ಪ ಅವಧಿಯಲ್ಲಿ ಹಲವು ವಿಷಯಗಳ ಹೊಸಪದ್ಧತಿಗಳ ಚರ್ಚೆಯಾಗುವದಕ್ಕಿಂತ ಒಂದೆರಡು ವಿಷಯಗಳ ವಿವರವಾದ ಚರ್ಚೆಯಾಗುವದು ಅವಶ್ಯವಾದದ್ದು. ಅಂದರೆ ನಮ್ಮ ಶಿಕ್ಷಣಯೋಜನೆಗಳಲ್ಲಿ ಹಿಂದಿನ ಎರಡು ವರುಷ ನಡೆದಂತೆ ಪ್ರಾಥಮಿಕ ಶಾಲೆಗಳಲ್ಲಿ ಕಲಿಸುವ ಬಹುತರ ಎಲ್ಲ ವಿಷಯಗಳ ಬಗ್ಗೆ ಪಾಠಗಳಾಗುವದಕ್ಕಿಂತ ಒಂದೆರಡು ವಿಷಯಗಳ ಬಗ್ಗೆ ಪಾಠಗಳೂ ಚರ್ಚೆಯೂ ವಿಚಾರವೂ ಆಗುವದು ಮಹತ್ವವಾದದ್ದು. ಕಳೆದ ವರುಷ ಈ ತತ್ವವನ್ನು ಅಂಶತಃ ನಾವು ರೂಢಿಯಲ್ಲಿ ತರಲು ಪ್ರಯತ್ನಿಸಿ ಭಾಷಾವಿಷಯ, ಗಣಿತ ಈ ಮಹತ್ವದ ವಿಷಯಗಳಿಗೆ ಹೆಚ್ಚು ವೇಳೆಯನ್ನು ಕೊಟ್ಟೆವು. ಆದರೂ ಈ ವಿಷಯಗಳ ಚರ್ಚೆಯು ಅನೇಕ ಶಿಕ್ಷಕರ ದೃಷ್ಟಿಯಿಂದ ಪೂರ್ಣವಾಗಲಿಲ್ಲ.

ಇನ್ನು ನಾಲ್ಕೈದು ನೂರು ಶಿಕ್ಷಕರು ಒಟ್ಟುಗೂಡಿ ಒಂದು ಮಾದರಿಯ ಪಾಠದ ಬಗ್ಗೆ ಚರ್ಚಿಸುವದರಿಂದ ಮಹತ್ವದ ಸಂಗತಿಗಳ ಚರ್ಚೆಯು ಚನ್ನಾಗಿ ಆಗುವದಿಲ್ಲೆಂಬದು ಅನುಭವಕ್ಕೆ ಬಂದ ಮಾತು. ಪಾಠಗಳಲ್ಲಿ ಅಡಕವಾಗಿರುವ ಪದ್ಧತಿಗಳ ಬಗ್ಗೆ ನಿಜವಾಗಿ ವಿಚಾರಾರ್ಹವಾದ ಚರ್ಚೆ ಮಾಡಲಿಕ್ಕೆ ಆಯಾ ವಿಷಯಗಳನ್ನು ವಿಚಾರ ಪೂರ್ವಕವಾಗಿ ಕಲಿಸಿ ಅನುಭವ ತೆಗೆದುಕೊಂಡ ಶಿಕ್ಷಕರು ಬೇಕು. ಚರ್ಚೆಗೆ ಹೊರಟ ಸಂಗತಿಯ ನಿಷ್ಕರ್ಷೆಮಾಡಲು ವರ್ಗಗಳನ್ನು ಸಿದ್ದವಿಟ್ಟುಕೊಂಡು ಕಲಿಸಿ ತೋರಿಸುವ ಶಿಕ್ಷಕರು ಬೇಕು. ಹಾಗು ಇಂಥ ಚರ್ಚೆಯು ಆದ ಬಳಿಕ ಹೊರಡುವ ಸಿದ್ಧಾಂತವು ಬಹುಜನ ಶಿಕ್ಷಕರಿಗೆ ಸಮ್ಮತವಾಗಬೇಕು; ಅದನ್ನನುಸರಿಸಿ ಹೆಚ್ಚು ಅನುಭವ ತೆಗೆದುಕೊಳ್ಳಲು ಶಿಕ್ಷಕರು ಸಿದ್ಧರಾಗಬೇಕು. ಒಟ್ಟನಮೇಲೆ ಹೊಸ ಪದ್ಧತಿಗಳ ಅಭ್ಯಾಸವೂ ಚರ್ಚೆಯೂ ಕೂಡಿಯೇ ನಡೆದು ಅನುಭವಿಕ ಶಿಕ್ಷಕರೂ ಶಿಕ್ಷಣಜ್ಞರೂ ಅಧಿಕಾರಿಗಳೂ ಕೂಡಿ ನಿಷ್ಕರ್ಷಿಸಿದ ಸಂಗತಿಗಳನ್ನು ಶಾಲೆಗಳಲ್ಲಿ ಅನುಸರಿಸಲು ಎಲ್ಲರೂ ಸಿದ್ಧರಾಗಬೇಕು. ಇಂಥ ಯೋಜನೆಗಳಿಂದ ಒಳ್ಳೇ ಉಪಯೋಗವಾಗುವದೆಂದು ನಮ್ಮ ಅಭಿಪ್ರಾಯವು.

ಈ ಮೂಲಕ ಮುಂದಿನ ಶಾಲಾವರ್ಷದಲ್ಲಿ ಯಾವ ವಿಷಯದ ಇಲ್ಲವೆ ವಿಷಯಗಳ ಪದ್ಧತಿಗಳ ಅಭ್ಯಾಸವೂ ಚರ್ಚೆಯೂ ವಿಶೇಷವಾಗಿ ಅವಶ್ಯಕವಿರುವವು; ಈ ಬಗೆ

ಚರ್ಚಿಸಲು ಎಂಥಪಾಠಗಳನ್ನು ಕಲಿಸಿ ತೋರಿಸತಕ್ಕದ್ದು; ಎಷ್ಟು ದಿನಗಳವರೆಗೆ ಇದು ನಡೆಯತಕ್ಕದ್ದು; ಮೊದಲಾದವುಗಳ ಬಗ್ಗೆ ನಾವು ಅಧಿಕಾರಸ್ಥರೊಡನೆಯೂ ತಜ್ಞರೊಡನೆಯೂ ವಿಚಾರ ಮಾಡಿ ನಿಷ್ಕರ್ಷಿಸುವದಕ್ಕೆ ಮೊದಲು ಅನುಭವಿಕರೂ ಶಿಕ್ಷಣಾಭಿಮಾನಿಗಳೂ ಆದ ಶಿಕ್ಷಕರಿಂದ ಸೂಚನೆಗಳನ್ನು ಅಪೇಕ್ಷಿಸುವೆವು. ಹಾಗು ಇವುಗಳನ್ನು ನಮ್ಮ ಪ್ರಾಥಮಿಕ ಶಿಕ್ಷಕರು ಕಳಿಸುವರೆಂದು ಕೋರುವೆವು.

ಹತ್ತಿ

(ಒಂದು ಇಂಗ್ಲಿಷಲೇಖದ ಆಧಾರದಿಂದ)

ಹಿಂದುಸ್ತಾನವು ಎಂದಿನಿಂದಲೂ ಹತ್ತಿಯ ಬೆಳೆಯ ಮತ್ತು ಉದ್ಯೋಗದ ತವರುಮನೆಯು. ಈ ದೇಶದಲ್ಲಿ ಕೈರಾಟಿಯಿಂದ ತೆಗೆದ ನೂಲೂ ಆ ನೂಲಿನ ವಸ್ತ್ರಗಳೂ ಎರಡನೆಯ ದೇಶದಲ್ಲಿ ಸಹ ಪ್ರಸಿದ್ಧಿಹೊಂದಿದ್ದವು. ಡಾಕಾದ ಮಲಮಲುಗಳಂತೂ ಒಂದಾನೊಂದು ಕಾಲದಲ್ಲಿ ಜಗತ್ಪ್ರಸಿದ್ಧವಿದ್ದವು. ಈಗ ಅಷ್ಟು ಸೂಕ್ಷ್ಮತರದ ಬಟ್ಟೆಗಳನ್ನು ಯಂತ್ರಗಳಿಂದ ಹೊರಡಿಸುವದು ಸಹ ಅಸಾಧ್ಯವು. ಹಿಂದುಸ್ತಾನವು ಹಿಂದಕ್ಕೆ ಹತ್ತಿಯ ಉದ್ಯೋಗದಿಂದ ಬಹಳ ಲಾಭಹೊಂದಿದೆ. ಆದರೆ ಮುಂದೆ ಲ್ಯಾಂಕಾಶಾಯರದಲ್ಲಿಯೂ ಬೇರೆಕಡೆಯಲ್ಲಿಯೂ ಯಂತ್ರಗಳ ಸಹಾಯದಿಂದ ದೊಡ್ಡ ಪ್ರಮಾಣದಿಂದ ಚೆನ್ನಾಗಿ ನೆಯ್ಯತೊಡಗಿದಂದಿನಿಂದ ಆ ಉದ್ಯೋಗವು ಇಲ್ಲಿ ಮುಗ್ಗುತ್ತ ಬಂದಿತು. ೧೯ನೆಯ ಶತಮಾನದಲ್ಲಿಯಂತೂ ತೀರ ಮುಗ್ಗಿತ್ತು. ಆದರೆ ಈಗೀಗ ಮತ್ತೆ ತಲೆಯೆತ್ತುತ್ತ ನಡೆದದೆ.

ಹಿಂದುಸ್ತಾನದಲ್ಲಿ ಯಂತ್ರಗಳ ಸಹಾಯದಿಂದ ನೂಲುವ ಹಾಗು ನೆಯ್ಯುವ ಕೆಲಸವು ಮೊದಲಿಗೆ ಮುಂಬಯಿಯಲ್ಲಿ ಶ್ರೀ ಕಾವಸಜಿ ಪವಾರೆಂಬ ಪಾರ್ಸಿ ಗೃಹಸ್ಥರಿಂದ ೧೮೫೧ನೆಯ ಇಸವಿಯಲ್ಲಿ ಆರಂಭಿಸಲ್ಪಟ್ಟಿತು. ೧೮೫೨ರಲ್ಲಿ ಮತ್ತೊಂದು ಗಿರಣಿಯು ಸ್ಥಾಪಿತವಾಯಿತು. ೧೮೬೨ರಲ್ಲಿ ಅಮೇರಿಕೆಯಲ್ಲಿ ಯಾದವೀಯ ಯುದ್ಧವು ನಡೆಯಿತು. ಆಗ ಹಿಂದುಸ್ತಾನದಲ್ಲಿ ಗಿರಣಿಗಳು ಒಳ್ಳೆಯ ಭರದಿಂದ ಬೆಳೆದವು. ೧೮೭೫ರಲ್ಲಿ ನಮ್ಮದೇಶದ ಗಿರಣಿಗಳಲ್ಲಿ ೭೫,೦೦೦ ಕಂಡಿಕೆಗಳೂ ೮ ಸಾವಿರ ಮಗ್ಗಗಳೂ ಇದ್ದವು. ಮುಂದೆ ೧೮೯೫ರಲ್ಲಿ ಪರದೇಶದ ಕೂಡ ವ್ಯವಹಾರಮಾಡಲಿಕ್ಕೆ ಮುಖ್ಯ ಆಧಾರವಾದ ಹಣದ ಎಕ್ಶ್ಚೇಂಜ (ನಾಣ್ಯಗಳ ಅದಲು ಬದಲು) ದಲ್ಲಿ ತೊಡಕು ಬಂದದ್ದರಿಂದ ಈ ವ್ಯಾಪಾರವು ಮಂದವಾಯಿತು. ಮುಖ್ಯವಾಗಿ ಪೂರ್ವದೇಶಗಳ ಕೂಡ ಹಿಂದುಸ್ತಾನದ ವ್ಯಾಪಾರವು ಕಡಿಮೆಯಾದರಿಂದ ಬಹಳ ಹಾನಿಯೊದಗಿತು.

ಆದರೆ ಕಂಪನಿಗಳ ಮುಖ್ಯಸ್ಥರು ಮಿತಭಾವದಿಂದಲೂ ಜಿಗುಟುತನದಿಂದಲೂ ಉದ್ಯೋಗ ನಡೆಸಿದ್ದರಿಂದ ಈ ಉದ್ಯೋಗವು ತೀರ ನಾಶವಾಗಲಿಲ್ಲ. ಆ ಕಾಲದಲ್ಲಿ ವ್ಯಾಪಾರದ ಕರ ಗಳಿಂದಲೂ ಪ್ಲೇಗಿನ ಹಾವಳಿಯಿಂದಲೂ ಎರಡು ದೊಡ್ಡ ಬರಗಳಿಂದಲೂ ಈ ಉದ್ಯೋಗಕ್ಕೆ ಇನ್ನಿಷ್ಟು ಹೀನಸ್ಥಿತಿಯು ಒದಗಿತು. ೧೯೧೪ರಲ್ಲಿ ಆದ ಮಹಾಯುದ್ಧದ ಕಾಲಕ್ಕೆ ನಮ್ಮದೇಶದ ಹತ್ತಿಯ ಉದ್ಯೋಗವು ಏಳಿಗೆಯನ್ನೈದಿತು. ೧೯೧೬ರಿಂದ ೧೯೨೨ರ ವರೆಗೆ ಈ ಉದ್ಯೋಗದ ಭರದಿಂದ ಹಿಂದುಸ್ತಾನಕ್ಕೆ ಸುವರ್ಣಕಾಲವು ಪ್ರಾಪ್ತವಾಯಿತೆಂದು ಹೇಳಬಹುದು. ಒಂದೇ ವರ್ಷದಲ್ಲಿ ಎರಡಷ್ಟು ಬೆಲೆ ದೊರೆತದ್ದರಿಂದ ಆ ಉದ್ಯೋಗದವರಿಗೂ ರೈತರಿಗೂ ಊರ್ಜಿತಸ್ಥಿತಿಯು ಬಂದಿತು. ಆದರೆ ಇತ್ತಿತ್ತ ಜಪಾನದೇಶವು ಈ ಉದ್ಯೋಗದಲ್ಲಿ ಒಳ್ಳೇ ಪ್ರಗತಿ ಹೊಂದುತ್ತ ನಡೆದದ್ದರಿಂದ ಹಿಂದುಸ್ತಾನದಲ್ಲಿಯ ಹತ್ತಿಯ ಉದ್ಯೋಗವು ಕಳೆಹೀನವಾಯಿತು. ಜಪಾನದವರು ಧಾರಣೆಯನ್ನು ಬಹಳ ಇಳಿಸಿದ್ದರಿಂದ ಈ ಉದ್ಯೋಗವನ್ನು ಕಾಪಾಡಿಕೊಳ್ಳುವದಕ್ಕಾಗಿ ನಮ್ಮ ಸರಕಾರದವರು ಪ್ರಯತ್ನಪಡಬೇಕಾಯಿತು.

ಸದ್ಯಕ್ಕೆ ಹಿಂದುಸ್ತಾನವು ಹತ್ತಿಯ ಉದ್ಯೋಗದ ದೇಶಗಳಲ್ಲಿ ೫ನೆಯ ನಂಬರನ್ನು ಪಡೆದಿದೆ. ಈಗ ಜಗತ್ತಿನಲ್ಲಿರುವ ಒಟ್ಟು ೨೦ ಲಕ್ಷ ರಾಟಿಗಳಲ್ಲಿ ೧೫ ಲಕ್ಷ ರಾಟಿಗಳೂ ೧೬೦೦ ಲಕ್ಷ ಕಂಡಿಕೆಗಳಲ್ಲಿ ೯೫ ಲಕ್ಷ ಕಂಡಿಕೆಗಳೂ ನಮ್ಮ ದೇಶದಲ್ಲಿ ಇರುವವು. ೧೯೧೩ರಲ್ಲಿ ಕಂಡಿಕೆಗಳೂ ರಾಟಿಗಳೂ ಸರಿಸರಿ ಪ್ರಮಾಣದಲ್ಲಿ ಬೆಳೆದವು. ಆದರೆ ಜಪಾನದಲ್ಲಿ ಕಳೆದ ೨೦ ವರ್ಷಗಳಲ್ಲಿ ಕಂಡಿಕೆಗಳು ೨೪ ಲಕ್ಷದಿಂದ ೭೫ ಲಕ್ಷದವರೆಗೆ ಹೆಚ್ಚಾದವು. ರಾಟಿಗಳು ೨೪ ಸಾವಿರದಿಂದ ೭೭ ಸಾವಿರವಾದವು. ಹಿಂದುಸ್ತಾನವು ಈ ದೇಶದ ಎಲ್ಲ ಜನರಿಗೆ ಸ್ವಂತ ಅರಿವೆಯನ್ನು ಪೂರೈಸುವದಕ್ಕೆ ಸಮರ್ಥವಾಗುವಷ್ಟು ಹತ್ತಿಯನ್ನು ಬೆಳೆಯಿಸಬಹುದೆಂಬದರಲ್ಲಿ ಸಂದೇಹವಿಲ್ಲ.

ಹಿಂದಿನ ಕಾಲದಲ್ಲಿ ನಮ್ಮಲ್ಲಿಯ ಗಿರಣಿಗಳ ಬೆಳವಣಿಗೆಯು ಚೀನದ ವ್ಯಾಪಾರವನ್ನು ಅವಲಂಬಿಸಿತ್ತು. ೧೯೯೦ರಲ್ಲಿ ಚೀನಕ್ಕೆ ನಮ್ಮ ದೇಶವು ನೂಲನ್ನೂ ಬಟ್ಟೆಯನ್ನೂ ಪೂರೈಸುತ್ತಿತ್ತು. ಈಗ ಹಿಂದುಸ್ತಾನದ ವ್ಯಾಪಾರವು ಚೀನದ ಕೂಡ ಕಡಿಮೆಯಾದ್ದರಿಂದ ಗಿರಣಿಗಳ ಕೆಲಸವು ಕಡಿಮೆಯಾಗಿದೆ. ನಮ್ಮಲ್ಲಿ ಈ ಉದ್ಯೋಗವು ಮತ್ತೆ ತಲೆಯೆತ್ತಬೇಕಾದರೆ ಕೂಲಿಯವರ ಯೋಗ್ಯತೆಯು ಹೆಚ್ಚಬೇಕು. ಅವರು ಮಿತ ಜೀವನವನ್ನು ರೂಢಿಯಲ್ಲಿ ತರಬೇಕು. ಹಾಗೆಯೇ ಒಕ್ಕಲಿಗರು ಭೂಮಿಯನ್ನು ಸುಧಾರಿಸಿಕೊಂಡು ಒಕ್ಕಲತನದಲ್ಲಿ ಪ್ರಗತಿಹೊಂದಬೇಕು.

ಜಪಾನರೊಡನೆ ನಾವು ಸ್ಪರ್ಧೆಮಾಡಬೇಕಾಗಿದೆ. ರೈತರೂ ಕೂಲಿಕಾರರೂ ಯಂತ್ರಗಳ ಚಾಲಕರೂ ಸಂಘಗಳನ್ನು ಮಾಡಿಕೊಂಡು ತಕ್ಕ ಗುಣಗಳೊಡನೆ ಕೆಲಸ

ಮಾಡಿದರೆ ಈ ಉದ್ಯೋಗದಲ್ಲಿ ಮೇಲಾಟ ಮಾಡುವ ಯೋಗ್ಯತೆಯು ಬರುವದು. ಸುಧಾರಿಸಿದ ದೇಶಗಳಂತೆ ನಾವು ಶಾಸ್ತ್ರೀಯ ತತ್ವಗಳಿಗನುಸರಿಸಿ ಒಕ್ಕಲತನವನ್ನು ಕೈಕೊಳ್ಳಬೇಕು.

ಹತ್ತಿಯ ಬೆಳೆ ಹಾಗು ಸುಧಾರಣೆ–ಹಿಂದುಸ್ತಾನದಲ್ಲಿ ಹತ್ತಿಯು ಪುರಾತನದ ಬೆಳೆಯು. ಕ್ರಿ. ಶ. ಪೂರ್ವದ ಲಗಿನೆಯ ಇಸವಿಯಲ್ಲಿ ಹತ್ತಿಯು ಪೂರ್ಣ ಬಳಿಕೆಯಲ್ಲಿತ್ತು. ಬೆಳ್ಳಿಯ ಪಾತ್ರೆಗಳಿಗೆ ಹತ್ತಿಯನ್ನು ಸುತ್ತಿ ಇಡುತ್ತಿದ್ದರೆಂದು ಪುರಾತನದ ಸಂಸ್ಕೃತ ಶ್ಲೋಕಗಳಿಂದ ಗೊತ್ತಾಗುತ್ತದೆ. ಹತ್ತಿಯು ಬೆಳೆಯುವ ಇಲ್ಲಿಂದ ಚೀನಕ್ಕೆ ಸಾಗಿತು. ಜಗತ್ತಿನಲ್ಲಿ ಸದ್ಯಕ್ಕೆ ಬೆಳೆಯುವಾನದಿಂದ ಸಂಯುಕ್ತ ಸಂಸ್ಥಾನಗಳನ್ನು ಬಿಟ್ಟರೆ ಹಿಂದುಸ್ತಾನವೇ ಮೊದಲನೆಯದಾಗಿದೆ. ೧೯೩೨–೧೯೩೩ರಲ್ಲಿ ಜಗತ್ತಿನ ೨೫೦ ಲಕ್ಷ ಗಂಟು. ಗಳಲ್ಲಿ ಸಂಯುಕ್ತ ಸಂಸ್ಥಾನಗಳಲ್ಲಿ ೧೩೦ ಲಕ್ಷ, ಹಿಂದುಸ್ತಾನದಲ್ಲಿ ೫೦ ಲಕ್ಷ, ಇಜಿಪ್ತ ದಲ್ಲಿ ೧೦ ಲಕ್ಷ, ಮಿಕ್ಕ ೬೦ ಲಕ್ಷ ಗಂಟು ಹತ್ತಿಯು ಚೀನ ಜಪಾನ ಕೋರಿಯಾ ದಕ್ಷಿಣ ಅಮೇರಿಕಾಗಳಲ್ಲಿ ಬೆಳೆಯಾದವು.

ಸಂಯುಕ್ತ ಸಂಸ್ಥಾನಗಳಲ್ಲಿ ಹೆಚ್ಚಾದ ಹತ್ತಿಯು ಹೊರದೇಶಗಳಿಗೆ ಹೋಗುವದು. ಹಿಂದುಸ್ತಾನವಾದರೂ ೧೯೩೧ರಿಂದ ೧೯೩೩ರ ವರೆಗೆ ಉಪಯೋಗಿಸಿದ ೨೭೫ ಲಕ್ಷ ಗಂಟುಗಳಲ್ಲಿ ೨೨೫ ಲಕ್ಷ ಗಂಟುಗಳ ಹತ್ತಿಯು ಈ ದೇಶದಲ್ಲಿ ಬೆಳೆದದ್ದು. ಉಳಿದ ಸ್ವಲ್ಪ ಹತ್ತಿಯು ಅಮೇರಿಕಾ ಇಜಿಪ್ತ ದೇಶಗಳಿಂದ ಬಂದದ್ದು ಇರುತ್ತದೆ. ನಮ್ಮ ದೇಶದಿಂದ ಹತ್ತಿಯು ಪರದೇಶಗಳಿಗೂ ಹೋಗುವದು.

ಹಿಂದುಸ್ತಾನದಲ್ಲಿ ಹತ್ತಿಯು ಬೇರೆ ಬೇರೆ ಭಾಗಗಳಲ್ಲಿ ಬೆಳೆಯುವದು. ಮುಖ್ಯವಾಗಿ ಮಧ್ಯಪ್ರಾಂತ ಗುಜರಾಥ, ಸಿಂಧ, ಸಂಯುಕ್ತ ಪ್ರಾಂತಗಳಲ್ಲಿಯೂ ಮದ್ರಾಸ ಇಲಾಖೆಯ ಕೆಲವೆಡೆಯಲ್ಲಿಯೂ ಹತ್ತಿಯು ಬೆಳೆಯುವದು. ಕೆಲವೆಡೆ ಕಾಲುವೆಗಳ ನೀರಿನಿಂದಲೂ ಹತ್ತಿಯನ್ನು ಬೆಳೆಯಿಸುವರು.

ಹತ್ತಿಯ ಜಾತಿಗಳು–ನಮ್ಮಲ್ಲಿ ಜೀನಸ್‌ಗೋಸೀಪಿಯಮ್ ಎಂಬ ಜಾತಿಯ ಹತ್ತಿಯು ಬೆಳೆಯುತ್ತಿದೆ. ಏಶಿಯದ ಹತ್ತಿಯ ಕಾಯಿಯು ಸಣ್ಣದು. ಎಳೆಯು ಉದ್ದವಾದದ್ದಲ್ಲ. ಅಮೇರಿಕೆಯ ಹತ್ತಿಯು ಅಗಲವಾದ ಉದ್ದ ಎಳೆಯುಳ್ಳದ್ದು.

ಏಶಿಯದ ಹತ್ತಿಯಲ್ಲಿ ಅಬೊರೀರಿಯಮ್, ಹೆರ್ಬೇಶಿಯಮ್ ಎಂಬ ಪ್ರಕಾರಗಳಿವೆ. ಇಂಡೀಸಿಯಮ್ ಎಂಬದು ರೇಶಿಮೆಯಂತೆ ಮಿದುನಿದ್ದ ಎಳೆಗಳುಳ್ಳದ್ದು. ಇನ್ನು ಅಮೇರಿಕೆಯ ಕ್ಯಾಂಬೋಡಿ ಎಂಬ ಜಾತಿಯ ಹತ್ತಿಯನ್ನು ಮದ್ರಾಸ ಪ್ರಾಂತದಲ್ಲಿ, ಅಪಲಂಡ ಎಂಬದನ್ನು ಪೂರ್ವಭಾಗದಲ್ಲಿ, ಅಪಲಂಡ ಜಾರ್ಜಿಯನ್ ಎಂಬದನ್ನು ಪಂಜಾಬದಲ್ಲಿ ಬೆಳೆಯುವರು.

ಹತ್ತಿಯ ಬೆಳೆಯನ್ನು ಸುಧಾರಿಸಲಿಕ್ಕೆ ಇಂಡಿಯನ್ ಸೆಂಟ್ರಲ್ ಕಮಿಟಿಯವರು ಪ್ರಯತ್ನಪಟ್ಟಿರುವರು. ಈಗ ಅವರು ೩೫ ಲಕ್ಷ ಎಕರೆ ಭೂಮಿಯನ್ನು ಹತ್ತಿಯ ಬೆಳೆಗಾಗಿ ಉಪಯೋಗಿಸುತ್ತಲಿರುವರು. ಸುರತದಲ್ಲಿ ಬೆಳೆಯುವ ಹತ್ತಿಯು ಮೇಲ್ತರದ್ದು. ಸಿಂಧಪ್ರಾಂತದಲ್ಲಿ ವ್ಹೈರುಮ್ ಎಂಬ ಜಾತಿಯ ಹತ್ತಿಯನ್ನು ಬೆಳೆಯಸುತ್ತಲಿದ್ದಾರೆ.

ಮೇಲೆ ಬರೆಪ ಸೆಂಟ್ರಲ್ ಕಮೀಟಿಯವರು ಹತ್ತಿಯ ಶೋಧದ ಬಗ್ಗೆ ೧೦ ವರ್ಷಗಳಲ್ಲಿ ೬೮ ಲಕ್ಷ ರೂಪಾಯಿ ವೆಚ್ಚಮಾಡಿದ್ದಾರೆ. ಒಕ್ಕಲಿಗರಿಗೆ ಸಿದ್ಧಪಡಿಸಿ ಮೇಲಾದ ಬೀಜ, ಬೆಳೆಯುವ ಕ್ರಮದ ಜ್ಞಾನ, ಆಯುಧ ಇವುಗಳನ್ನು ಒದಗಿಸಿಕೊಡಲಾರಂಭಿಸಿದ್ದಾರೆ. ಹತ್ತಿಯ ನೂಲುವ ನೇಯುವ ಯಂತ್ರಗಳಲ್ಲಿಯೂ ಸುಧಾರಣೆ ಮಾಡತೊಡಗಿದ್ದಾರೆ.

ಹತ್ತಿಯ ಬೆಳೆ, ಉದ್ಯೋಗಗಳನ್ನು ಸುಧಾರಿಸುವ ಬಗೆ:— ಉದ್ದವಾದ ಎಳೆ ಹೊರಡುವದೊಂದೇ ಹತ್ತಿಯ ಮುಖ್ಯ ಗುಣವಲ್ಲವೆಂದು ಡಾ. ಲಾರೆನ್ಸ ಬೌಲ್ಸರು ಅಭಿಪ್ರಾಯಪಟ್ಟಿದ್ದಾರೆ. ಹಿಂದುಸ್ತಾನದ ಹಲವು ಹತ್ತಿಯ ಜಾತಿಗಳಲ್ಲಿ ಹಲಕೆಲವು ಉತ್ತಮಗುಣಗಳಿರುವವು. ಲ್ಯಾಂಕಾಶಾಯರದಲ್ಲಿ ವ್ಯಾಂಚೆಸ್ಟರದವರು ಹಿಂದುಸ್ತಾನದ ಹತ್ತಿಯ ನೂಲನ್ನು ಸೇರಿಸಿ ಬಹಳ ಉಪಯುಕ್ತವಾಗುವಂತೆ ನೆಯ್ಯಲಾರಂಭಿಸಿದ್ದಾರೆ. ಆದದರಿಂದ ಯುನಾಯಿಟೆಡ್ ಸ್ಟೇಟ್ಸದವರೂ ಹಿಂದುಸ್ತಾನದವರೂ ಸಮ್ಮತಿಯಿಂದ ಹತ್ತಿಯ ವಿನಿಮಯಮಾಡಿದರೆ ಹತ್ತಿಯ ಬೆಳೆಗೂ ಉದ್ಯೋಗಕ್ಕೂ ಉತ್ತೇಜನ ದೊರೆಯುವದು.

ಮಾನಸಶಾಸ್ತ್ರ

(ಕಳಿದ ಸಂಚಿಕೆಯಿಂದ ಮುಂದೆಸಾಗಿದ್ದು.)

(೧) ವಸ್ತು ಸಾಹಚರ್ಯ. (೨) ಸ್ಥಳ ಸಾಹಚರ್ಯ (೩) ಶಾಬ್ದಿಕ ಸಾಹಚರ್ಯ (೪) ಕಾರ್ಯಕಾರಣ ಸಾಹಚರ್ಯ. ಇಷ್ಟು ಬಗೆಯ ಸಾಹಚರ್ಯಗಳ ಸಮೂವೇಶವು ಸಾನ್ನಿಧ್ಯ ಹಾಗು ಸಾದೃಶ್ಯ ಸಾಹಚರ್ಯಗಳಲ್ಲಿ ಆಗುವದು. ಆ ಸಾನ್ನಿಧ್ಯಸಾಹಚರ್ಯವು ಸ್ಥಳಕ್ಕೆ ಸಂಬಂಧಿಸಿರಬಹುದು. ಇಲ್ಲವೆ ಕಾಲಕ್ಕೆ ಸಂಬಂಧಿಸಿರಬಹುದು.

(೧) ಸಾಹಚರ್ಯದ ನಿಯಮಗಳು

(೧) ನಮ್ಮ ಕಲ್ಪನೆಗಳು. ವಿಶ್ಲಲಿತವಾಗಿ ಬೇರೆ ಬೇರೆಯಾಗಿರದೆ ಒಂದು ಕಲ್ಪನೆಯು ಮತ್ತೊಂದು ಕಲ್ಪನೆಗೆ ಆಧಾರಭೂತವಾಗಿರುವದು. ಹೀಗಿರದಿದ್ದರೆ ವಿಶ್ಲಲಿತವಾಗಿದ್ದದ್ದು ಮರೆತು ಹೋಗುವದು.

(೨) ಕಲ್ಪನೆಗಳು ಸಾನಿಧ್ಯ ಹಾಗು ಸಾದೃಶ್ಯಗಳಿಂದ ಒಂದರಗೂಡೊಂದು ಸಂಕಲಿತವಾಗಿರುವವು. ಯಾವ ಸಂಗತಿಗಳು ಒಂದೇ ಕಾಲಕ್ಕೆ ಇಲ್ಲವೆ ಒಂದರ ಹಿಂದೆ ಒಂದು ತಪ್ಪದೆ ಇರಲು ಅವುಗಳಲ್ಲಿ ಒಂದು ಸಂಗತಿಯು ನೆನಪಾದರೆ ಅದರ ಸಂಗಡ ಮತ್ತೊಂದು ಸಂಗತಿಯು ಸಾನಿಧ್ಯ ಸಾಹಚರ್ಯದಿಂದ ಗೊತ್ತಾಗುವದು. ನಾವು ಯಾವನಾದೊಬ್ಬ ಅಪರಿಚಿತ ಮನುಷ್ಯನನ್ನು ನೋಡಿದಾಗ ಅವನಂತೆ ಇರುವ ನಾವು ಹಿಂದೆ ಎಂದೋ ನೋಡಿದ ಮನುಷ್ಯನ ಕಲ್ಪನೆಯು ಬರುವದು. ಹೀಗಾಗಲಿಕ್ಕೆ ಸಾದೃಶ್ಯ ಸಾಹಚರ್ಯವು ಕಾರಣವು. ಸಾದೃಶ್ಯ ಸಾಹಚರ್ಯವನ್ನು ಇಲ್ಲಿ ವ್ಯಾಪಕಾರ್ಥದಲ್ಲಿ ಉಪಯೋಗಿಸಿದ್ದೇವೆ. ಸಾಮ್ಯ ವೈಷಮ್ಯಗಳೆರಡೂ ಇದರಲ್ಲಿ ಸಮೂವೇಶವಾಗುವವು. ಉಷ್ಣತೆಯ ಕಲ್ಪನೆಯು ಬಂದ ಕೂಡಲೆ ಅದರ ವಿರುದ್ಧವಾದ ಥಂಡಿಯ ಸಾದೃಶ್ಯವು ನಮ್ಮ ಮನಸಿನಲ್ಲಿರುವದು. ಇದರಂತೆ ಬೆಳಕು–ಕತ್ತಲೆ, ಉಚ್ಚ–ನೀಚ, ಸ್ವಚ್ಛ–ಮಲಿನ, ಸದ್ಗುಣ–ದುರ್ಗುಣ, ರಾಮರಾವಣ ಮೊದಲಾದ ಕಲ್ಪನೆಗಳಲ್ಲಿ ಸಾದೃಶ್ಯ ಸಾಹಚರ್ಯವಿರುವದು.

ಸಾನ್ನಿಧ್ಯ ಸಾಹಚರ್ಯಕ್ಕಿಂತ ಸಾದೃಶ್ಯ ಸಾಹಚರ್ಯವು ಪ್ರಬಲವಾಗಿರುವದು. ಬಾಯಿಪಾಠ ಮಾಡುವದು ಒಂದು, ಗಿಳಿ ಪಾಠ ಮಾಡುವದು ಮತ್ತೊಂದು. ಬಾಯಿಪಾಠ ಮಾಡುವದೆಂದರೆ ನಾವು ನೆನಪಿನಲ್ಲಿಟ್ಟುಕೊಳ್ಳುವ ವಸ್ತುವಿನ ಅಥವಾ ಕಲ್ಪನೆಗೆ ಸಂಬಂಧಿಸಿದ ಶಬ್ದದ ನಿಜವಾದ ಅರ್ಥವು ನನಗೆ ಗೊತ್ತಾಗಬೇಕು. ಅರ್ಥ ಬೋಧವಾಗದೆ ಯಾವದೊಂದು ಶಬ್ದವನ್ನು ನಾವು ಸ್ಮರಣದಲ್ಲಿಟ್ಟುಕೊಳ್ಳುವದು ಗಿಳಿ ಪಾಠ ಮಾಡುವ

ದೆನ್ನಬೇಕು. ಬಾಯಿಪಾಠ ಮಾಡುವದು ಬೌದ್ಧಿಕ ವ್ಯಾಪಾರವು. ಗಿಳಿ ಪಾಠ ಮಾಡುವದು ಯಾಂತ್ರಿಕ ವ್ಯಾಪಾರವು.

ಶಿಕ್ಷಣ ದೃಷ್ಟಿಯಿಂದ ಬಾಯಿಪಾಠ ಮಾಡತಕ್ಕ ವಿಷಯಗಳು—: (೧) **ಇತಿಹಾಸ, ಭೂಗೋಲ, ವ್ಯಾಕರಣ ಮೊದಲಾದ ವಿಷಯಗಳಲ್ಲಿರತಕ್ಕ ಮುಖ್ಯ ಮುಖ್ಯ ಭಾಗಗಳು:—** ಇವುಗಳ ಭಾಗಗಳನ್ನು ನೆನಪಿನಲ್ಲಿಡುವದರಿಂದ ಆಯಾ ವಿಷಯಗಳ ಬಗ್ಗೆ ಹೆಚ್ಚಿನ ಜ್ಞಾನವನ್ನು ವಿಚಾರಪೂರ್ವಕವಾಗಿ ಕಲಿಯಲಿಕ್ಕೆ ಅನುಕೂಲವಾಗುವದು.

(೨) **ಗಣಿತ:—** ಗಣಿತಶಾಸ್ತ್ರದ ಅಧ್ಯಯನಕ್ಕೆ ಅವಶ್ಯವಾದ ಮೊಗ್ಗಿಗಳು, ಕೋಷ್ಟಕಗಳು, ಭೂಮಿತಿಯ ವ್ಯಾಖ್ಯೆಗಳು, ಬೀಜಗಣಿತದ ಸಾರಣಿಗಳು ಇವೇ ಮೊದಲಾದವುಗಳನ್ನು ಬಾಯಿಪಾಠ ಮಾಡಿ ಇಡುವದು ಅವಶ್ಯವು. ಯಾಕಂದರೆ ಇವುಗಳ ಸಹಾಯದಿಂದ ಗಣಿತ ಶಾಸ್ತ್ರದೊಳಗಿನ ಗಡಚಾದ ಭಾಗಗಳನ್ನು ಕಲಿಯಲಿಕ್ಕೆ ಸಾಧನವಾಗುವದು.

(೩) **ಭೌತಿಕ ಶಾಸ್ತ್ರದಲ್ಲಿ ಉಪಯೋಗಿಸುವ ಪಾರಿಭಾಷಿಕ ಶಬ್ದಗಳು, ನಿಯಮಗಳು ಹಾಗು ವ್ಯಾಖ್ಯೆಗಳು:—** ಇವು ಬಾಯಿಪಾಠ ಮಾಡತಕ್ಕ ವಿಷಯಗಳಾಗಿವೆ. ಯಾಕಂದರೆ ಒಂದೊಂದು ಪಾರಿಭಾಷಿಕ ಶಬ್ದವು ಅನೇಕ ಶಾಸ್ತ್ರ ಕಲ್ಪನೆಗಳನ್ನು ಒಳಗೊಂಡಿರುವದರಿಂದ ಅದು ಮುಂದೆ ನಾವು ದೊರಕಿಸಿಕೊಳ್ಳುವ ಶಾಸ್ತ್ರೀಯ ಜ್ಞಾನಕ್ಕೆ ಮಾರ್ಗದರ್ಶಿಯಾಗುವದು.

(೪) **ವಾಙ್ಮಯದೊಳಗಿನ ಆರಿಸಿದ ಭಾಗಗಳು:—** ಇವನ್ನು ಬಾಯಿಪಾಠ ಮಾಡಿ ಇಡಬೇಕು. ಒಂದೊಂದು ತರಪ ವಾಙ್ಮಯದಲ್ಲಿ ಒಂದೊಂದು ಬಗೆಯ ಸ್ವಾರಸ್ಯವಿರುವದು. ವಾಙ್ಮಯದಿಂದ ನಮ್ಮ ಶಬ್ದಕೋಶವು ಬೆಳೆಯುವದು. ಭಾಷೆಯೊಳಗಿನ ರಸವನ್ನೂ ಭಾಷಾಸೌಂದರ್ಯವನ್ನೂ ಗ್ರಹಿಸಿ ಆನಂದಪಡುವಂಥ ಉದಾತ್ತ ಭಾವನೆಗಳು ನಮ್ಮಲ್ಲಿ ಹುಟ್ಟುವವು. ಹಾಗು ನಮ್ಮ ಆಚಾರವಿಚಾರಗಳ ಮೇಲೆ ಉತ್ಕೃಷ್ಟ ವಾಙ್ಮಯದ ಅಭ್ಯಾಸದಿಂದ ನೈತಿಕ ಪರಿಣಾಮಗಳು ಆಗುವವು. ವಾಙ್ಮಯದ ಭಾಗವನ್ನು ಆರಿಸಿಕೊಳ್ಳುವದರಲ್ಲಿ ಉದಾತ್ತ ಭಾವನೆಗಳನ್ನು ಹುಟ್ಟಿಸುವಂಥ ಭಾಗಗಳನ್ನೇ ಆರಿಸಬೇಕಾಗುವದೆಂದು ಬೇರೆ ಹೇಳುವ ಕಾರಣವಿಲ್ಲ.

ಬಾಯಿಪಾಠ ಮಾಡಬಾರದ ವಿಷಯಗಳು

(೧) **ವ್ಯಾಕರಣದಲ್ಲಿ ಹೇಳಿದ ಅಪವಾದಗಳು—** ಇವುಗಳನ್ನು ವಿದ್ಯಾರ್ಥಿಗಳು ತಮ್ಮ ವಾಚನದಲ್ಲಿ ಬಂದಾಗ ಕಂಡುಹಿಡಿಯಬೇಕಲ್ಲದೆ ಅಂಥ ಅಪವಾದಗಳನ್ನು ಒಟ್ಟುಗೂಡಿಸಿ ಬರೆದಿಟ್ಟ ಗ್ರಂಥಗಳನ್ನು ಓದುವದರಿಂದ ಏನೂ ಪ್ರಯೋಜನವಾಗುವದಿಲ್ಲ.

(೨) ಇತಿಹಾಸ ಭೂಗೋಲಬೊಳಗಿನ ಭೂಶಿರ, ಉಪಸಾಗರ, ದೊಡ್ಡ ದೊಡ್ಡ ಪಟ್ಟಣಗಳ ಹೆಸರು, ಹುಟ್ಟುವಳಿ, ಪರದೇಶದಿಂದ ಆಯುತ ಹಾಗು ಪರದೇಶಕ್ಕೆ ನಿರ್ಗತ ವಾಗುವ ಸರಕುಗಳು, ಯುದ್ಧಗಳ ಹೆಸರು, ಇಸವಿ ಮುಂತಾದವುಗಳು. ಯಾವ ಸಂಗತಿಗಳನ್ನು ನೆನಪಿನಲ್ಲಿಡುವದರಿಂದ ವಿದ್ಯಾರ್ಥಿಗಳಿಗೆ ವಿಶೇಷ ಲಾಭವಾಗುವದಿಲ್ಲವೋ ಅಥವಾ ಯಾವ ಸಂಗತಿಗಳ ವಿಸ್ಮರಣವು ಆಗುವ ಸಂಭವವಪೆಯೋ ಅಂಥವುಗಳನ್ನು ಬಾಯಿಪಾಠ ಮಾಡಿಸಬಾರದು.

(೩) ಸಂಬಂಧವು ಗೊತ್ತಿಲ್ಲದ ಗಣಿತದ ನಿಯಮಗಳು, ವ್ಯವಹಾರದಲ್ಲಿ ಇಲ್ಲದ ಕೋಷ್ಟಕಗಳು ಇವೇ ಮೊದಲಾದವುಗಳನ್ನು ಬಾಯಿಪಾಠ ಮಾಡಿಸಬಾರದು. ಖಂಡಿಯಿಂದ ಗುಂಜಿಗೆ ಇರುವ ಬೆಲೆಯು ಪ್ರಮಾಣವನ್ನು ಹೇಳಿಕೊಟ್ಟದ್ದು ಕೇವಲ ಯಾಂತ್ರಿಕವಾದದ್ದರಿಂದ ಕೂಡಲೆ ಮರೆತು ಹೋಗುವದು. ಕೆಲವು ಸಾರೆ ನಿಯಮದ ಗುಟ್ಟು ಹೋದರೆ ವಿಪರೀತ ಪರಿಣಾಮ ಆಗುವ ಸಂಭವವುಂಟು.

ಸ್ಮರಣದ ಪ್ರಕಾರಗಳು:—ಸ್ಮರಣದಲ್ಲಿ ಅವಧಾನದ ಅಂಶವು ಇದ್ದೇ ಇರುವದರಿಂದ ಅವಧಾನವು ಐಚ್ಛಿಕ ಇಲ್ಲವೆ ಅನೈಚ್ಛಿಕವಿದ್ದಂತೆ ಸ್ಮರಣದಲ್ಲಿಯೂದರೂ ಅನೈಚ್ಛಿಕ ಸ್ಮರಣೆ, ಐಚ್ಛಿಕ ಸ್ಮರಣೆ, ಎಂಬ ಎರಡು ಪ್ರಕಾರಗಳಾಗುವವು. ಐಚ್ಛಿಕ ಸ್ಮರಣೆಯು ಪ್ರಯತ್ನಪೂರ್ವಕವಾಗಿ ಆಗುವದು. ನಾವು ದಾರಿಯಲ್ಲಿ ಸಂಭವಿಸಿದ ಭಯಂಕರವಾದ ಅಪಘಾತವನ್ನು ಒಮ್ಮೆ ನೋಡಿದ್ದರೆ ಸಾಕು. ಅದರ ಸ್ಮರಣೆಯು ಆಜನ್ಮ ಸಹಜವಾಗಿ ನನುಗೆ ಆಗುವದು. ನಾವು ಸಣ್ಣವರಿರುವಾಗ ಪಾಠಮಾಡಿದ ಅಂಕಿ-ವೊಗ್ಗಿಗಳು, ಹಾಡು–ಕವಿತೆಗಳು ಅನಾಯಾಸದಿಂದ ನಮ್ಮ ಸ್ಮರಣಕ್ಕೆ ಬರುವವು. ಆದರೆ ಹೆಚ್ಚು ಗಡುಚಾದ ಭೂಮಿತಿಯ ಸಿದ್ಧಾಂತಗಳು, ಶಾಸ್ತ್ರಗಳ ತತ್ವಗಳು ನಮ್ಮ ಸ್ಮರಣದಲ್ಲಿ ಬರಬೇಕಾದರೆ ಹೆಚ್ಚು ಕಡಿಮೆ ಪ್ರಮಾಣದಿಂದ ಶ್ರಮ ಮಾಡಬೇಕಾಗುವದು.

ಮೇಲೆ ಹೇಳಿದ ಐಚ್ಛಿಕ ಅನೈಚ್ಛಿಕ ಸ್ಮರಣಗಳ ಹೊರ್ತು ಸಾಮಾನ್ಯ ಸ್ಮರಣ ಹಾಗು ವಿಶೇಷ ಸ್ಮರಣ ಎಂಬ ಎರಡು ಪ್ರಕಾರಗಳು ಇರುವವು. ಕೆಲವರು ಬೇಕಾದ ಸಂಗತಿಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಅವುಗಳ ಪ್ರತ್ಯಾನಯನವನ್ನು ಬೇಕಾದ ಕಾಲದಲ್ಲಿ ಮಾಡಿಕೊಳ್ಳಬಲ್ಲರು. ಇಂಥ ಜನರು ಅಪರೂಪ. ಬೇರೆ ಕೆಲವರು ಕೆಲ ಕೆಲವು ವಿವಕ್ಷಿತ ಸಂಗತಿಗಳನ್ನಷ್ಟೇ ಆರಿಸಿ ನೆನಪಿನಲ್ಲಿಟ್ಟುಕೊಳ್ಳಲು ಸಮರ್ಥರಿರುವರು. ಕೆಲವರಿಗಂತೂ ಒಂದೊಂದು ಇಂದ್ರಿಯದ ಮುಖಾಂತರ ಆದ ಸಂಸ್ಕಾರವೇ ಮನಸ್ಸಿನಲ್ಲಿ ಗಟ್ಟಿಯಾಗಿ ಉಳಿಯುವದು. ಅಂದರೆ ಕೆಲವರಿಗೆ ನೋಡಿದ ಸಂಗತಿಗಳು, ಕೆಲವರಿಗೆ ಕೇಳಿದ ಸಂಗತಿಗಳು ಆಯಾ ಇಂದ್ರಿಯಗಳ ವಿಕಾಸದ ಮೂಲಕ ಸ್ಮರಣಶಕ್ತಿಯ ಗತಿಯು ಕೆಲವೊಂದು ವಿವಕ್ಷಿತ ದಿಕ್ಕಿನ ಕಡೆಗೆ ನಡೆದು, ನೆನಪಿನಲ್ಲಿ ಉಳಿಯುವವು. ಇವೆಲ್ಲ ಸ್ಮರಣದ ಪ್ರಕಾರಗಳು.

ಸ್ಮರಣಶಕ್ತಿಯು ಬೆಳೆವಣಿಗೆಯೂ ವಿಕಾಸವೂ.

ಮೂರು ವರ್ಷಗಳ ವರೆಗೆ ಹುಡುಗರಲ್ಲಿ ಸ್ಮರಣವು ಎಷ್ಟರ ಮಟ್ಟಿಗೆ ಇರುವ ದೆಂಬ ಬಗ್ಗೆ ಭಿನ್ನ ಅಭಿಪ್ರಾಯಗಳು ಇರುವವು. ಕೆಲವರು ಒಂದರಿಂದ ಮೂರು ವರ್ಷಗಳ ವರೆಗೆ ನಮಗುಂಟಾಗುವ ಸಂಸ್ಕಾರಗಳ ಸ್ಮರಣೆಯು ಎಂದೂ ಆಗದಿರುವದ ರಿಂದ ಆ ವಯೋಮಾನದಲ್ಲಿ ಸ್ಮರಣಶಕ್ತಿಯೇ ಇರುವದಿಲ್ಲವೆಂದು ಪ್ರತಿಪಾದಿಸುವರು. ಒಂದು ಮೇಲೆ ಇದ್ದರೂ ಅಂಕುರರೂಪದಿಂದ ಇರಬಹುದು. ಮೂರು ವರ್ಷ ಮುಗಿಯುವದರೊಳಗೆ ಬಾಲಕರಿಗೆ ಮಾತೃಭಾಷೆಯ ಪರಿಚಯವು ತಕ್ಕ ಮಟ್ಟಿಗೆ ಆಗಿರುವದರಿಂದ ವಸ್ತುಗಳಿಗೆ ಸಂಬಂಧಿಸಿದ ಶಬ್ದಗಳನ್ನು ಸ್ಮರಣವಲ್ಲಿಟ್ಟು ಕೇಳುವ ಶಕ್ತಿಯು ವಿಶೇಷವಾಗಿ ಇರುವದೆಂದೂ ನಂಬಿ "ಮೂರುವರ್ಷದ ಬುದ್ಧಿ ನೂರುವರ್ಷದ ವರೆಗೆ" ಎಂದು ಹೇಳುವದುಂಟು. ಈ ವಾದಗ್ರಸ್ತ ವಿಷಯವನ್ನು ಬಿಟ್ಟು ಹುಡುಗರಲ್ಲಿ ನಾಲ್ಕರಿಂದ ಒಂಬತ್ತು ವರ್ಷಗಳ ವರೆಗೆ ಆಗುವ ಸ್ಮರಣಶಕ್ತಿಯ ವಿಕಾಸನನ್ನು ಕುರಿತು ವಿಚಾರಿಸುವಾ.

ಈ ವಯೋಮಾನದಲ್ಲಿ ಮನಸು ಒಂದು ಚೀಲದಂತೆ ಇದ್ದು ಇಂದ್ರಿಯಗಳು ಚುರುಕಾಗಿರುವದರಿಂದ ಹುಡುಗರು ತನ್ನ ಪರಿಸ್ಥಿತಿಯಲ್ಲಿರುವ ಅನೇಕ ವಸ್ತುಗಳ ಬಗ್ಗೆ ಜ್ಞಾನಮಾಡಿಕೊಂಡು ಅವನ್ನು ಮನಸ್ಸೆಂಬ ಚೀಲದಲ್ಲಿ ತುಂಬಿಕೊಳ್ಳುತ್ತಿರುವರು. ಆಗ ಮುಖ್ಯವಾದದ್ದು ಯಾವದು, ಅಮುಖ್ಯವಾದದ್ದು ಯಾವದು, ಬೇಕಾದದ್ದು ಯಾವದು, ಬೇಡಾದದ್ದು ಯಾವದು ಇವರ ಅರಿವು ಇರಲಾರದು. ಕಂಡ ಕಂಡ ಸಂಗತಿಗಳು ಮನಸಿನ ಮೇಲೆ ಅಷ್ಟೇ ಪರಿಣಾಮವನ್ನುಂಟುಮಾಡುತ್ತಿರುವದರಿಂದ ಸ್ಮರಣವು ಅನೈಚ್ಛಿಕವಿದ್ದು ಮೇಣದಂತೆ ಮಿದುವಾದ ಪೃಷ್ಠಭಾಗದ ಮೇಲೆ ಬಂದು ಕೂತು ವಸ್ತುಗಳು ಅಲ್ಲೇ ಅಂಟಿಕೊಂಡು ಉಳಿಯುವಂತೆ ಕಲಿತ ವಿಷಯಗಳು ಸ್ಮರಣದಲ್ಲಿ ಅನಾಯಾಸವಾಗಿ ಉಳಿಯುವವು. ಸಾಮ್ಯ ವೈಷಮ್ಯ ಗುಣಗಳ ಪರಿಣಾಮವು ಹೆಚ್ಚಾಗಿ ಆಗದೆ ಸಾನ್ನಿಧ್ಯದ ಪರಿಣಾಮವು ಮಾತ್ರ ಬಹು ಮಟ್ಟಿಗೆ ಆಗುವದುಂಟು. ವಿಚಾರಶಕ್ತಿಯ ಅಭಾವದ ಮೂಲಕ ಈ ವಯೋಮಾನದಲ್ಲಿ ಮಾಡಿಕೊಂಡ ಜ್ಞಾನದ ವರ್ಗೀಕರಣವನ್ನು ಹುಡುಗರು ಮಾಡಿಕೊಳ್ಳಲಾರರು.

ಹತ್ತರಿಂದ ಹದಿನಾರರ ವರೆಗೆ— ಹುಡುಗರ ಸ್ಮರಣಶಕ್ತಿಯಲ್ಲಿ ಮಹತ್ವದ ಅಭ್ಯಂತರಗಳಾಗುವವು. ಹುಡುಗರು ಗಿಳಿಯಂತೆ ಪಾಠಮಾಡಿ ಗಿಳಿಯಂತೆ ಉಚ್ಚರಿಸುವ ಕ್ರಮವನ್ನು ಎಂದೂ ಸೇರಲಾರರು. ವಿಚಾರಶಕ್ತಿಯು ತಲೆದೋರಹತ್ತಿ ಪ್ರಬಲವಾಗುತ್ತ ನಡೆಯುವದರಿಂದ ಕಲಿಯತಕ್ಕ ವಿಷಯಗಳಲ್ಲಿ ಅಮುಖ್ಯ ಯಾವದು? ಮುಖ್ಯ ಯಾವದು? ಎಂಬದನ್ನು ವಿಚಾರಿಸಿ ಮುಖ್ಯವಾದವುಗಳನ್ನು ಅರಿಸಿ ಪ್ರಯತ್ನಪೂರ್ವಕ

ವಾಗಿ ಸ್ಮರಣದಲ್ಲಿ ಇಟ್ಟುಕೊಳ್ಳುವರು. ಆದ್ದರಿಂದ ಅನೈಚ್ಛಿಕ ಸ್ಮರಣಶಕ್ತಿಗೆ ಪ್ರಾಧಾನ್ಯ ಉಂಟಾಗದು. ವಸ್ತುಗಳಲ್ಲಿ ಕಂಡುಬರುವ ಕಾರ್ಯಕಾರಣಭಾವ, ವಸ್ತುಗಳ ಸಾದೃಶ್ಯ ಮೊದಲಾದವುಗಳನ್ನು ಶೋಧಿಸಿ ಮನಸ್ಸಿನಲ್ಲಿಟ್ಟುಕೊಳ್ಳುತ್ತಿರುವದರಿಂದ ಸಾನ್ನಿಧ್ಯ ಸಾಹಚರ್ಯದ ಉಪಯೋಗವು ಅವರಿಗೆ ಎಷ್ಟು ಮಾತ್ರವೂ ಆಗುವದಿಲ್ಲ.

ಸ್ಮರಣಶಕ್ತಿಯಿಂದ ಹುಡುಗರಲ್ಲಿ ಆಗತಕ್ಕ ಪ್ರಕಾರಗಳು—

ಸ್ಮರಣಶಕ್ತಿಯ ಪರಿಮಾಣವು ಹಾಗು ತೀವ್ರತೆಯು ವ್ಯಕ್ತಿ ವ್ಯಕ್ತಿಗಳಲ್ಲಿ ಭಿನ್ನವಾಗಿರುವದು. ಎಲ್ಲಾ ಸಂಗತಿಗಳನ್ನು ಅಷ್ಟೇ ಸಹಜವಾಗಿ ಸ್ಮರಣದಲ್ಲಿಟ್ಟುಕೊಳ್ಳುವ ವ್ಯಕ್ತಿಗಳು ಅತಿ ವಿರಳ. ಬೇರೆ ಬೇರೆ ವ್ಯಕ್ತಿಗಳಲ್ಲಿ ಕಂಡುಬರುವ ಅವಧಾನಶಕ್ತಿ ಹಾಗು ಜಿಜ್ಞಾಸೆ, ಆಸ್ಥೆ ಮೊದಲಾದವುಗಳು ಬೇರೆ ಬೇರೆ ಪ್ರಮಾಣದಿಂದ ಇರುವ ಕಾರಣ ಆ ಪ್ರಮಾಣವನ್ನು ಅನುಲಕ್ಷಿಸಿ ಸ್ಮರಣದಲ್ಲಿಯೂ ಹೆಚ್ಚುಕಡಿಮೆಯಾಗುವದುಂಟು. ಕೆಲವೊಂದು ವಸ್ತುವು ಕೆಲವರ ಮನಸಿನ ಮೇಲೆ ಬಿಂಬಿಸಿ ಪರಿಣಾಮವನ್ನುಂಟು ಮಾಡುವಂತೆ ಬೇರೆ ಕೆಲವರ ಮನಸಿನ ಮೇಲೆ ಮಾಡುವದಿಲ್ಲ. ಕೆಲವರಲ್ಲಿ ಸ್ಮರಣಶಕ್ತಿಯು ಕಡಿಮೆ ಇರುವದರಿಂದ ಕಲಿತ ವಸ್ತುಗಳ ವಿಸ್ಮರಣವು ಬಹು ಬೇಗ ಆಗುವದು. ಬೇರೆ ಕೆಲವರಿಗೆ ಸಾಕಚರ್ಯದ ನಿಯಮಗಳಿಂದ ಒಂದು ಕಲ್ಪನೆಯು ಮತ್ತೊಂದು ಕಲ್ಪನೆಗೆ ಸಂಬಂಧವನ್ನು ಮಾಡಿಕೊಳ್ಳುವ ಶಕ್ತಿಯು ಇರುವದಿಲ್ಲ. ಈ ಎಲ್ಲ ಕಾರಣಗಳ ಮೂಲಕ ಹುಡುಗರಲ್ಲಿ—

(೧) ಕುಶಾಗ್ರಬುದ್ಧಿ (೨) ಬಿಂಬೋದ್ಗ್ರಾಹಿ (೩) ಉತಾವಳಿ (೪) ಮಂದ ಹಾಗು ದಡ್ಡ ಎಂಬ ಪ್ರಕಾರಗಳಾಗುವವು.

ಕುಶಾಗ್ರಬುದ್ಧಿಯುಳ್ಳವನು ಕಲಿಸಿದ್ದನ್ನು ಬಹು ಬೇಗ ಕಲಿಯುವನು. ಕಲಿತದ್ದನ್ನು ಸ್ಮರಣದಲ್ಲಿ ಗಟ್ಟಿಯಾಗಿ ಇಟ್ಟುಕೊಳ್ಳುವನು. ಹಾಗು ಅವನ್ನು ಬೇಕಾದಾಗ ಸ್ಮರಣದಲ್ಲಿ ಇದ್ದಕ್ಕಿದ್ದ ಹಾಗೆ ತಂದುಕೊಳ್ಳುವನು. ಹೀಗೆ ಮಾಡುವಾಗ ಅವನಿಗೆ ಯಾವತರದ ಶ್ರಮವಾಗುವದಿಲ್ಲ. ಬಿಂಬೋದ್ಗ್ರಾಹಿಯು ಯಥಾರ್ಥ ಜ್ಞಾನವನ್ನು ಮಾಡಿಕೊಂಡು ಅದರ ಧಾರಣವನ್ನೂ ಪ್ರತ್ಯಾನಯನವನ್ನೂ ಯಥಾರ್ಥವಾಗಿ ಪ್ರಸಂಗಾನುಸಾರ ಮಾಡಿಕೊಳ್ಳುವನು. ಉತಾವಳಿಯ ಹುಡುಗನು ಬೇಗ ಕಲಿಯುವನು. ಆದರೆ ಅವನಲ್ಲಿ ಧಾರಣಾಶಕ್ತಿಯು ದುರ್ಬಲವಾಗಿರುವದರಿಂದ ಕಲಿತದ್ದನ್ನು ಮರೆಯುವನು. ಮಂದನಾದ ಹುಡುಗನು ಬಹು ಆಯಾಸಪಟ್ಟು ಕಲಿಯುವನು. ಕಲಿತದ್ದನ್ನು ಗಟ್ಟಿಯಾಗಿ ಮನಸ್ಸಿನಲ್ಲಿಟ್ಟುಕೊಳ್ಳುವನು. ಹಾಗು ಬಹು ಸಾವಕಾಶವಾಗಿ ಕಲಿತದ್ದನ್ನು ಸ್ಮರಣದಲ್ಲಿ ತಂದುಕೊಂಡು ಯಥಾರ್ಥವಾಗಿ ಹೇಳುವನು.

ದಡ್ಡ ಹುಡುಗನು ಕಲಿಯಬೇಕಾದರೆ ಬಹು ಶ್ರಮಬಡುವನು. ಕಲಿತದ್ದನ್ನು ಮನಸ್ಸಿನಲ್ಲಿಟ್ಟುಕೊಳ್ಳಲಾರನು, ಪ್ರತ್ಯಾನಯನದಕಾಲಕ್ಕೆ ಒಂದರ ಬದಲಾಗಿ ಮತ್ತೊಂದು ಬಗೆಯ ಜ್ಞಾನವನ್ನು ಮನಸಿನಲ್ಲಿ ತಂದುಕೊಳ್ಳುವನು.

ಶಿಕ್ಷಣ ಸಂಬಂಧದಿಂದ ಸ್ಮರಣಶಕ್ತಿಯ ವಿಚಾರಗಳು:—

ಇಂದ್ರಿಯ ಮುಖಾಂತರ ಉಂಟಾಗುವ ಸಂಸ್ಕಾರಗಳ ಪುನರಾವರ್ತಿಯು ಅನೇಕ ಸಾರೆ ಆಯಿತೆಂದರೆ ಆ ಸಂಸ್ಕಾರಗಳ ಪ್ರತಿಮೆಯು ಮನಸ್ಸೆಂಬ ಕ್ಷೇತ್ರದಮೇಲೆ ಹೆಚ್ಚು ಹೆಚ್ಚು ಸ್ಪಷ್ಟವಾಗುವಂತೆ ಮೂಡಿಕೊಳ್ಳುವದು. ಬಾಲ್ಯಾವಸ್ಥೆಯಲ್ಲಿ ಶಿಶುಗಳಿಗೆ ಶಬ್ದಗಳ ಉಚ್ಚಾರವನ್ನು ಚನ್ನಾಗಿ ಮಾಡಲಿಕ್ಕೆ ಬಾರದ್ದರಿಂದ ಅವರು ಹೊಸ ಹೊಸ ಶಬ್ದಗಳನ್ನು ಮಾಡಿಕೊಂಡು ವಸ್ತು ಹಾಗು ಅವುಗಳ ಗುಣಧರ್ಮಗಳ ಸಾಹಚರ್ಯವನ್ನು ಮನಸ್ಸಿನಲ್ಲಿಟ್ಟುಕೊಳ್ಳತೊಡಗುವರು. ಸಣ್ಣ ಹುಡುಗರು ಬೆಕ್ಕಿಗೆ 'ಮಾವು' ಆಕಳಿಗೆ 'ಅಮ್ಮಾ' ಹುಳಗಳಿಗೆ 'ಜಾ' ಎಂಬ ಹೊಸ ಹೊಸ ಶಬ್ದಗಳನ್ನು ಕಲ್ಪಿಸಿಕೊಂಡು ಅವುಗಳನ್ನು ಆಯಾ ಅರ್ಥದಲ್ಲಿ ಉಪಯೋಗಿಸತೊಡಗುವರು, ಬಾಹ್ಯ ವಸ್ತುಗಳ ಆಘಾತಗಳು ಇಂದ್ರಿಯಗಳ ದ್ವಾರದಿಂದ ಅವರ ಮನಸ್ಸಿನಮೇಲೆ ಎಡೆಬಿಡದೆ ಆಗುತ್ತಿದ್ದರೂ ಅವರಲ್ಲಿ ಧಾರಣಾಶಕ್ತಿಯು ಅರ್ಥಾತ್ ಸ್ಮರಣಶಕ್ತಿಯು ಇದ್ದದ್ದು ಮೂರು ವರ್ಷಗಳು ಆಗುವವರೆಗೆ ದೃಷ್ಟೋತ್ಪತ್ತಿಗೆ ಬರುವದಿಲ್ಲ. ಮುಂದೆ ೫ ವರ್ಷದಿಂದ ೧೪ ವರ್ಷದವರೆಗೆ ಸ್ಮರಣಶಕ್ತಿಯ ಬೆಳವಣಿಗೆಯು ಮಿತಿಮೀರಿ ಆಗುವದು; ಆದ್ದರಿಂದ ಒಮ್ಮೆ ನೋಡಿದ ವಸ್ತುಗಳು ಇಲ್ಲವೆ ಕೇಳಿದ ಸಂಗತಿಗಳು ನೆನಪಿನಲ್ಲಿ ನಿರಾಯಾಸವಾಗಿ ಉಳಿಯುತ್ತವೆ. ಅವುಗಳ ಪುನರಾವರ್ತನವಾದರಂತೂ ಎಂದೂ ಮರೆಯದಂತೆ ಮನಸ್ಸಿನಲ್ಲಿ ದೃಢವಾಗಿ ನಿಲ್ಲುವವು. ೧೪ ವರ್ಷಗಳಾದಮೇಲೆ ಸ್ಮರಣಶಕ್ತಿಯು ಗತಿಯು ಕುಂಠಿತವಾಗುವದು. ಆದ್ದರಿಂದ ವಿದ್ಯಾರ್ಥಿಗಳು ಮಹತ್ವವುಳ್ಳ ಸಂಗತಿಗಳನ್ನು ಸ್ಮರಣಾರ್ಥವಾಗಿ ಪುಸ್ತಕದಲ್ಲಿ ಬರೆದಿಡಹತ್ತುವರು. ಜ್ಞಾನದ ಸಂಚಯವು ಬೆಳೆದಂತೆ ಆಯಾ ವಿಷಯಗಳ ವಿವೇಚನವು ಯಾವ ಗ್ರಂಥಗಳಲ್ಲಿ ಇರುವದೆಂಬವನ್ನು ಮಾತ್ರ ಸ್ಮರಣದಲ್ಲಿ ಇಟ್ಟುಕೊಳ್ಳುವರು. ಸ್ಮರಣದ ಅವಯವಗಳು ಗ್ರಹಣ, ಧಾರಣ, ಪತ್ಯಾನಯನ ಎಂದು ಮೂರು ವಿಧವಾಗಿದ್ದರೂ ಧಾರಣಾಶಕ್ತಿ ಎಂಬದು ಗ್ರಹಣ ಹಾಗು ಪ್ರತ್ಯಾನಯನಗಳನ್ನು ಜೋಡಿಸುವ ಸಂದು ಮಾತ್ರ ಆಗಿರುವದು. ಶಿಕ್ಷಕನು ಕಲಿಸಿವ್ದನ್ನು ಹುಡುಗರು ಚನ್ನಾಗಿ ಗ್ರಹಿಸಿಕೊಂಡಿದ್ದರೆ ಅವರ ಪ್ರತ್ಯಾನಯನವು ನಿರಾಯಾಸವಾಗಿ ಆಗುವದು. ಆದ್ದರಿಂದ ಪರಿಗ್ರಹಣವಾಗಲಿಕ್ಕೆ ಅವಶ್ಯವಾದ ಪರಿಸ್ಥಿತಿಯನ್ನು ಶಿಕ್ಷಕರು ವಿದ್ಯಾರ್ಥಿಗಳಿಗೆ ಒದಗಿಸಿಕೊಡಬೇಕು. ಅಂದರೆ ಹುಡುಗರ ಮನಸ್ಸು ಪ್ರಫುಲ್ಲಿತವಾಗಿದ್ದಾಗ ಶಾಲೆಯ ವ್ಯವಸ್ಥೆಯು ಹುಡುಗರಿಗೆ ಶಾರೀರಿಕ ಹಾಗು ಮಾನಸಿಕ ತ್ರಾಸವಾಗದಂತೆ

ಮಾಡಿ ವಿಷಯವು ಚಿತ್ತಾಕರ್ಷಕವಾಗುವಂತೆ ಹಾಗು ಸುಲಭವಾಗಿ ಹುಡುಗರಿಗೆ ತಿಳಿಯು ವಂತೆ ಶಿಕ್ಷಕನು ಕಲಿಸಹತ್ತಿದರೆ ಹುಡುಗರು ಆಸ್ಥೆಯಿಂದ ಕಲಿತು ಕಲಿತದ್ದನ್ನು ಮನಸ್ಸಿ ನಲ್ಲಿ ಇಟ್ಟುಕೊಳ್ಳ ಹತ್ತುವರು. ಶಿಕ್ಷಕನು ತಮ್ಮಮೇಲೆ ಏನೋ ಭಾರವನ್ನು ಹೊರಿಸುತ್ತಿ ರುವನೆಂಬ ಭಾವನೆಯು ಸಹ ಬಾರಗೊಡದಂತೆ ಮಾಡಬೇಕಾದರೆ ಕಲಿಸುವ ವಿಷಯವು ಹಾಗು ಪದ್ಧತಿಯು ಹುಡುಗರ ಯೋಗ್ಯತೆಗೆ ಅನುಸರಿಸಿ ಇರತಕ್ಕದ್ದು. ಹುಡುಗರ ಒಲವು ಯಾವ ವಿಷಯದಕಡೆಗೆ ಹೆಚ್ಚಾಗಿರುವದೆಂಬದನ್ನು ಶಿಕ್ಷಕನು ಚಾಣಾಕ್ಷತನದಿಂದ ಗೊತ್ತುಮಾಡಿಕೊಂಡು ಆ ಒಲವುಗಳಿಗೆ ಉತ್ತೇಜನ ದೊರೆಯುವಂತೆ ಹಾಗು ಒಂದ ಕ್ಕಿಂತ ಹೆಚ್ಚು ಇಂದ್ರಿಯಗಳ ಉಪಯೋಗವನ್ನು ಮಾಡಿಕೊಳ್ಳುವಂತೆ ಕಲಿಸುವ ವಿಷಯದ ಪ್ರತಿಪಾದನವನ್ನು ಮಾಡಬೇಕು. ಗೊತ್ತಿದ್ದ ಸಂಗತಿಗಳಿಂದ ಗೊತ್ತಿಲ್ಲದ ಸಂಗತಿ ಗಳಿಗೆ ಕ್ರಮೇಣ ಹೋಗುವ ಪದ್ಧತಿಯನ್ನು ಅನುಸರಿಸಿದ್ದಾದರೆ ಹಾಗು ಹೊಸ ಹೊಸ ಸಂಗತಿಗಳಲ್ಲಿ ಕಂಡುಬರುವ ಸಾಮ್ಯವೈಷಮ್ಯಗಳನ್ನು ಗೊತ್ತಿದ್ದ ಸಂಗತಿಗಳಿಗೆ ಹೋಲಿ ಸುತ್ತ ಹೋದರೆ ವಿಷಯವು ಚಿತ್ತಾಕರ್ಷಕವಾಗಹತ್ತಿ ಹುಡುಗರು ಆನಂದದಿಂದ ಆ ವಿಷಯದಕಡೆಗೆ ಲಕ್ಷಗೊಡಹತ್ತುವರು. ಪ್ರತ್ಯಾನಯನಶಕ್ತಿಯು ಹುಡುಗರಲ್ಲಿ ಎಷ್ಟು ಮಟ್ಟಿಗೆ ಇರುವದೆಂಬದನ್ನು ಪರೀಕ್ಷಿಸುವದಕ್ಕಾಗಿ ಮೇಲಿಂದಮೇಲೆ ಹುಡುಗರಿಗೆ ಪ್ರಶ್ನಮಾಡಿ ಅವರ ಕಡೆಯಿಂದ ಆಯಾ ವಿಷಯಗಳ ಪುನರುಚ್ಚಾರಣೆಯನ್ನು ಮಾಡಿಸಿ ಕೊಳ್ಳಬೇಕು. ಹಾಗು ನೆನಪಿನಲ್ಲಿಟ್ಟುಕೊಂಡು ವಿಷಯಗಳ ಮಹತ್ವವು ಎಷ್ಟಿರುವ ದೆಂಬದನ್ನು ತೋರಿಸುವದಕ್ಕಾಗಿ ಇತಿಹಾಸ, ಭೂಗೋಲ, ವಾಙ್ಮಯ, ಶಾಸ್ತ್ರೀಯ ವಿಷಯ ಮೊದಲಾದವುಗಳ ಸ್ವಾರಸ್ಯವನ್ನು ವಿಸ್ತಾರವಾಗಿ ಅವರಿಗೆ ಹೇಳಿಕೊಡಬೇಕು. ಇಂದ್ರಿಯಗಳ ಮುಖಾಂತರ ಮಾಡಿಕೊಂಡ ಜ್ಞಾನವು ವಿದ್ಯಾರ್ಥಿಗಳ ಮನಸ್ಸಿನಲ್ಲಿ ಎಷ್ಟು ಮಟ್ಟಿಗೆ ನಟ್ಟಿರುವದೆಂಬದನ್ನು ಪರೀಕ್ಷಿಸುವದಕ್ಕಾಗಿ ಯೋಗ್ಯ ಪ್ರಶ್ನೆಗಳನ್ನು ಮಾಡಿ ಆಯಾ ಸಂಗತಿಗಳನ್ನು ಹುಡುಗರ ಬಾಯಿಂದಲೇ ಹೊರಡಿಸಿಕೊಳ್ಳಬೇಕು. ಜ್ಞಾನ ಸಂಚಯವು ಬೆಳೆದಂತೆ ಸಾನ್ನಿಧ್ಯ ಸಾಹಚರ್ಯದ ಮಹತ್ವವು ಕಡಿಮೆಯಾಗಿ ಸಾದೃಶ್ಯ ಸಾಹಚರ್ಯದ ಮಹತ್ವವು ಬೆಳೆಯುವದು. ಅದರಿಂದ ಮೇಲ್ತರದ ಮಾನಸಿಕ ಶಕ್ತಿ ಗಳು ಜಾಗೃತವಾಗುವವು. ಭಾಷಾವಿಷಯದಲ್ಲಿ ಸಾನ್ನಿಧ್ಯಸಾಹಚರ್ಯವು ಹೆಚ್ಚಾಗಿರು ವದು. ಆದರೆ ಶಾಸ್ತ್ರೀಯ ವಿಷಯದಲ್ಲಿ ಸಾದೃಶ್ಯ ಸಾಹಚರ್ಯದ ಉಪಯೋಗವು ಬಹುಮಟ್ಟಿಗೆ ಆಗುವದು. ಅದರಿಂದ ಮೇಲ್ತರದ ಶಿಕ್ಷಣಕ್ಕೆ ಒಂದು ಬಗೆಯ ಆಧಾರವು ದೊರೆತಂತಾಗುವದು.

ಕಲ್ಪನಾಶಕ್ತಿ

ಇಂದ್ರಿಯಗಳ ಮುಖಾಂತರ ಉಂಟಾದ ಸಂವೇದನವು ಬೋಧೆಯಾಗಿ ಪರಿಣ ಮಿಸಿ, ಆಯಾ ವಸ್ತುಗಳಿಗೆ ಸಂಬಂಧಿಸಿದ ಬಿಂಬಗಳನ್ನು ಸ್ಮರಣಶಕ್ತಿಯ ಸಹಾಯ

ದಿಂದ ಚೈತನ್ಯ ಕ್ಷೇತ್ರದಲ್ಲಿ ಗಟ್ಟಿಯಾಗಿ ಮೂಡಿಸಿದ ಮೇಲೆ ಆಯಾ ಪದಾರ್ಥಗಳು ಇಲ್ಲದಿದ್ದಾಗ ಸಹ ಅವುಗಳ ಬಿಂಬಗಳ ಪ್ರತಿಬಿಂಬಗಳನ್ನು ಮನಸ್ಸಿನಲ್ಲಿ ತಂದು ಕೊಡುವ ಮಾನಸಿಕ ಶಕ್ತಿಗೆ ಕಲ್ಪನಾಶಕ್ತಿ ಎಂಬ ಹೆಸರು. ಅಂದರೆ ಇಂದ್ರಿಯಗಳ ಸಹಾಯ ವಿಲ್ಲದೆ ನಮ್ಮ ಅನುಭವಕ್ಕೆ ಬಂದ ವಸ್ತುಗಳ, ಚಿತ್ರಗಳ ಪ್ರತಿ ಚಿತ್ರಗಳನ್ನು ಮನಸಿಗೆ ಮಾಡಿಕೊಡುವ ಶಕ್ತಿಗೆ ಕಲ್ಪನಾಶಕ್ತಿ ಎಂಬ ಹೆಸರು.

ಈ ವಿವರಣದಿಂದ ಕಲ್ಪನಾಶಕ್ತಿಯು ಹೊಸ ಜ್ಞಾನವನ್ನು ನಮಗೆ ಉಂಟು ಮಾಡಿ ಕೊಡದೆ, ಮಾಡಿಕೊಂಡ ಜ್ಞಾನಕ್ಕೆ ಬಗೆಬಗೆಯ ಹೊಸ ರೂಪವನ್ನು ಕೊಡುವ ದೆಂಬದು ವ್ಯಕ್ತವಾಗುವದು.

ನಮ್ಮ ಜ್ಞಾನೇಂದ್ರಿಯಗಳು ಅವಧಾನವೆಂಬ ಅಧಿಕಾರಿಯ ಕೈಕೆಳಗೆ ಕೆಲಸ ಮಾಡುತ್ತ ಇಂದ್ರಿಯಜನ್ಯ ಜ್ಞಾನವೆಂಬ ಕಚ್ಚಾ ಮಾಲನ್ನು ಸಂಗ್ರಹಿಸಿ ಸ್ಮರಣವೆಂಬ ಉಗ್ರಾಣದಲ್ಲಿ ತುಂಬಿ ಬಿಡುವವು. ಈ ಕಚ್ಚಾ ಮಾಲಿನ ಪ್ರಕಾರವಿದ್ದಂತೆ ಮೇಲ್ತರದ ಕಲ್ಪನಾಶಕ್ತಿಯ ವ್ಯಾಪಾರಗಳು ನಡೆದು ನಮಗೆ ಮೇಲ್ತರದ ಜ್ಞಾನವಾಗುವದುಂಟು. ಮನಸ್ಸು ಒಂದು ಕಾರಖಾನೆಯೆಂದು ಕಲ್ಪಿಸುವ,—ಅರಳಿಯಿಂದ ಮಲಮಲಿಯಂಥ ಸೂಕ್ಷ್ಮವಾದ ವಸ್ತ್ರವನ್ನು ಮಾಡುವ ಜಿನುಗಾದ ನೂಲು ಬೇಕಾಗಿದ್ದರೆ ಮೊದಲು ಉತ್ತಮವಾದ ಅರಳಿಯನ್ನು ದೊರಕಿಸಿ, ಅದನ್ನು ಯೋಗ್ಯವಾದ ಯಂತ್ರದಲ್ಲಿ ಹಾಕಿ ಬಹು ಕುಶಲತನದಿಂದ ಸೂಕ್ಷ್ಮ ತಂತುಗಳನ್ನು ಮಾಡಿಕೊಳ್ಳಬೇಕಾಗುವದು. ಹೀಗೆ ಮಾಡದೆ ಸಿಕ್ಕ ಸಿಕ್ಕ ಅರಳಿಯನ್ನು ಅದೇ ಯಂತ್ರದಲ್ಲಿ ಹಾಕಿದರೆ ಉರುಟಾದ ನೂಲು ಹೊರಟು ಅದು ಕೆಲಸಕ್ಕೆ ಬಾರದ ಉರಟ ಅರಿವೆಗೆ ಮಾತ್ರ ಉಪಯೋಗ ಬೀಳುವದು. ಆದ್ದರಿಂದ ಜ್ಞಾನೇಂದ್ರಿಯದ ಮುಖಾಂತರ ಬರುವ ಕಚ್ಚಾ ಮಾಲನ್ನು ಅವಧಾನವೆಂಬ ಅಧಿಕಾರಿಯು ಬಹು ಸೂಕ್ಷ್ಮ ರೀತಿಯಿಂದ ಪರೀಕ್ಷಿಸಿ ಅವಶ್ಯವಾದ ಹಾಗು ಬಹು ಮಹತ್ವವುಳ್ಳ ಭಾಗವನ್ನೇ ಆರಿಸಿ ಸ್ಮರಣವೆಂಬ ಉಗ್ರಾಣದಲ್ಲಿ ಇಡುವ ವ್ಯವಸ್ಥೆಮಾಡಿದರೆ ಕಲ್ಪನಾಶಕ್ತಿಯು ಮೇಲ್ತರದ ಕಚ್ಚಾ ಮಾಲನ್ನು ನಾನಾಪ್ರಕಾರವಾಗಿ ಉಪಯೋಗಿಸಿ ಕೊಂಡು ಉತ್ತಮವಾದ ಪದಾರ್ಥಗಳನ್ನು ನಿರ್ಮಿಸಲು ಸಮರ್ಥವಾಗುವದು.

ಕಲ್ಪನಾಶಕ್ತಿಯ ಕಾರ್ಯವು ಹ್ಯಾಗೆ ನಡೆಯುತ್ತದೆಂಬದನ್ನು ಒಂದೆರಡು ಉದಾಹರಣೆಗಳಿಂದ ಸ್ಪಷ್ಟೀಕರಿಸುವಾ:— ಹುಡುಗರಿಗೆ ಉನ್ನತವಾದ ಪರ್ವತಾವಳಿಯ ಕಲ್ಪನೆಯನ್ನು ಮಾಡಿಕೊಡುವಾಗ ಶಿಕ್ಷಕನು ಶಾಲೆಯಲ್ಲಿ ಮಾಡಲ್‌ವನ್ನು ತೋರಿಸಿ ಅದರ ಸಹಾಯದಿಂದ ಪರ್ವತದ ಬುಡ ಯಾವದು? ಹಾಗು ಅಡಿಯಿಂದ ಶಿಖರದ ವರೆಗೆ ಅದು ಹೇಗೆ ಏರುತ್ತ ಹೋಗುವದು? ಎಂಬದನ್ನು ತೋರಿಸಿದ ಬಳಿಕ ಅವರನ್ನು ಊರ ಸಮೀಪದಲ್ಲಿರುವ ಗುಡ್ಡ ಇಲ್ಲವೆ ಗುಂಡದ ಸವಿೂಪಕ್ಕೆ ಕರೆದೊಯ್ದು ಅದರ

ರಚನೆಯನ್ನು ಪ್ರತ್ಯಕ್ಷವಾಗಿ ತೋರಿಸಿದರೆ ಅವರ ಮನಸ್ಸಿನಲ್ಲಿ ಪರ್ವತದ ಬಗ್ಗೆ ಮಸ ಮಸಕಾದ ಚಿತ್ರವು ಮನಸ್ಸಿನಲ್ಲಿ ಮೂಡಿ ಅಸ್ಪಷ್ಟವಾದ ಒಂದು ತರದ ಕಲ್ಪನೆಯನ್ನು ಉಂಟು ಮಾಡುವದು. ಆ ಮೇಲೆ ಗುಡ್ಡಗಳು ಎತ್ತರಾಗುತ್ತ ಹೋದಂತೆ ಅದರ ಶಿಖರದ ಮೇಲೆ ಬೆಳೆಯತಕ್ಕ ವನಸ್ಪತಿಗಳ ಎತ್ತರವು ಕ್ರಮೇಣ ಕಡಿಮೆಯಾಗುತ್ತ ಹೋಗುತ್ತ ದೆಂದೂ ಹಾಗು ಶಿಖರದ ಮೇಲಿರುವ ಹವೆಯು ತಣ್ಣಗಾಗುತ್ತ ಹೋಗುತ್ತದೆಂದೂ ಅವರಿಗೆ ಹೇಳಿ ಕೊಟ್ಟರೆ ಇಲ್ಲವೆ ಅವರ ಪ್ರತ್ಯಕ್ಷ ಅನುಭವಕ್ಕೆ ಆ ಸಂಗತಿಗಳನ್ನು ತಂದು ಕೊಟ್ಟರೆ ಪರ್ವತದ ವಿಷಯಕ್ಕೆ ಆದ ಅವರ ಕಲ್ಪನೆಯು ಹೆಚ್ಚು ಹೆಚ್ಚು ಸ್ಪಷ್ಟವಾಗ ಹತ್ತಿ ಅವರು ತಮ್ಮ ಇಚ್ಛಾಶಕ್ತಿಯನ್ನು ಆ ವಿಷಯದ ಕಡೆಗೆ ಉಪಯೋಗಿಸಿ ಒಂದು ಕಲ್ಪನೆಯನ್ನು ಮತ್ತೊಂದು ಕಲ್ಪನೆಯೊಂದಿಗೆ ಸಂಯೋಗವಾಗುವಂತೆ ಮಾಡುತ್ತ ಹೊಸ ಹೊಸ ರಚನೆಗಳನ್ನು ವಿಚಾರದ ಸಹಾಯದಿಂದ ಮಾಡಿಕೊಳ್ಳಹತ್ತುವರು. ಅದರ ಸಹಾಯದಿಂದ ಅವರು ಹಿಮಾಲಯದಂಥ ಉನ್ನತವಾದ ಪರ್ವತವನ್ನು ನೋಡದಿದ್ದರೂ ಆ ಪರ್ವತದ ಶಿಖರದ ಮೇಲೆ ವನಸ್ಪತಿಗಳು ಇರಲಾರವೆಂದೂ ಆ ಶಿಖರವು ಕೆಲ ಕಾಲ ಬರ್ಫದಿಂದ ಮುಚ್ಚಿಕೊಂಡಿರುವದೆಂದೂ ಆ ಬರ್ಫವು ಬೇಸಿಗೆಯಲ್ಲಿ ಕರಗುವದರಿಂದ ಅನೇಕ ಪ್ರವಾಹಗಳು ಹೊರಟು ನದಿಗಳಿಗೆ ಬೇಸಿಗೆಯಲ್ಲಿ ಪೂರುಬರುವಂತೆ ಮಾಡುವ ದೆಂದೂ ಅನುಮಾನಗಳನ್ನು ಕಟ್ಟಿ ಆ ಅನುಮಾನಗಳು ನಿಜವೆಂದು ನಂಬುವರು.

ಇದರಂತೆ ಹುಡುಗರು ದೊಡ್ಡದೊಂದು ಕೆರೆಯನ್ನು ನೋಡಿದರೆ ಅವರು ಕಲ್ಪನಾ ಶಕ್ತಿಯಿಂದ ಸರೋವರ ಹಾಗು ಸಮುದ್ರ ವೊದಲಾದ ಜಲಾಶಯಗಳ ಚಿತ್ರವನ್ನು ಮನಸ್ಸಿನಲ್ಲಿ ಮೂಡಿಕೊಳ್ಳಹತ್ತುವರು.

ಮೇಲಿನ ವಿವರಣೆಯಿಂದ ಗೊತ್ತಾಗುವದೇನಂದರೆ:—ನಮ್ಮಲ್ಲಿ ಯಾವದೊಂದು ಕಲ್ಪನೆಯು ಬರಬೇಕಾದರೆ ನಾವು ಯಾವದೊಂದು ವಸ್ತುವನ್ನು ಪ್ರತ್ಯಕ್ಷವಾಗಿ ನೋಡಿ ಇಲ್ಲವೆ ಯಾವದೊಂದು ಸಂಗತಿಯ ಬಗ್ಗೆ ಕೇಳಿ ಅದರ ಸ್ಪಷ್ಟವಾದ ಚಿತ್ರವನ್ನು ನಮ್ಮ ಸ್ಮರಣದಲ್ಲಿ ಇಟ್ಟುಕೊಂಡಮೇಲೆ ಇಚ್ಛಾಶಕ್ತಿಯನ್ನುಉಪಯೋಗಿಸಿ ಅದರ ಚಿತ್ರವನ್ನು ಮನಸ್ಸಿನಲ್ಲಿ ಮೂಡಿಸಿಕೊಂಡು ಆ ಪ್ರತಿಮೆಯ ನಿರುಪಯುಕ್ತವಾದ ಭಾಗವನ್ನುತೆಗೆದು ಹಾಕಿ ಉಪಯುಕ್ತವಾದ ಭಾಗವನ್ನು ಅದು ಸರ್ವಾಂಗಸುಂದರವಾಗುವಂತೆ ಅದಕ್ಕೆ ಜೋಡಿಸಿ ಆ ಪ್ರತಿಮೆಯು ಸ್ಪಷ್ಟವೂ ಮನೋಹರವೂ ಆಗುವಂತೆ ಮಾಡಿಕೊಂಡು ಮನಸ್ಸಿಗೆ ಒಂದು ಬಗೆಯಆನಂದವನ್ನುಂಟುಮಾಡುವ ಕಾರ್ಯವು ಕಲ್ಪನಾಶಕ್ತಿಗೆ ಸಂಬಂಧಿಸಿರುವದೆಂಬದು ಸ್ಪಷ್ಟವಾಗುವದು.

ಸಂಖ್ಯೆಗಳ ಚಮತ್ಕಾರವು

ಲೇಖಕ:—ಡಾ. ಸದಾಶಿವ ಗಣೇಶ ಖರೆ, ಗುರ್ಲಹೊಸೂರ.

ಕೆಳಗೆ ವಿವರಿಸಿದಂತೆ ಆರು ಪಂಜ್ತಿಗಳಲ್ಲಿ ೧ರಿಂದ ೬೩ರ ವರೆಗೆ ಇರುವ ಸಂಖ್ಯೆಗಳನ್ನು ಬೇ ಬೇರೆ ಕ್ರಮದಿಂದ ಬರೆಯಲಾಗಿದೆ. ಈ ಸಂಖ್ಯೆಗಳಲ್ಲಿ ಬೇಕಾದದ್ದೊಂದು ಸಂಖ್ಯೆಯನ್ನು ಮನಸ್ಸಿನ; ಕಲ್ಪಿಸಿಕೊಂಡು, ಆ ಸಂಖ್ಯೆಯು ಯಾವ ಯಾವ ಪಂಜ್ತ್ತಿಗಳಲ್ಲಿಬಂದಿದೆ ಎಂಬದನ್ನು ನೋಡಬೇಕು ಆ ಮೇಲೆ ಆ ಪಂಜ್ತ್ತಿಗಳ ಮೊದಲಿನ ಸಂಖ್ಯೆಗಳನ್ನೆಲ್ಲ ಒಟ್ಟು ಕೂಡಿಸಿದರೆ ಕಲ್ಪಿಸಿಕೊಂಡಿದ್ದ ಸಂಖ್ಯೆಯು ಹೊರಡುವದು. ಉದಾ:—ನಾವು ‹‹೪೮›› ಈ ಸಂಖ್ಯೆಯನ್ನು ಕಲ್ಪಿಸಿದೆವೆಂದು ತಿಳಿಯುವ, ಈ ಸಂಖ್ಯೆಯು ಕೆಳಗಿನ ಆರು ಸಾಲುಗಳಲ್ಲಿ ೫ನೇ ೬ನೇ ಸಾಲುಗಳಲ್ಲಿ ಬಂದಿದೆ. ಈ ಸಾಲುಗಳ ಮೊ ಲನೇ ಸಂಖ್ಯೆಗಳು ೧೬, ೩೨ ಅವೆ. ಇವುಗಳನ್ನು ಕೂಡಿಸಿದರೆ ‹‹೪೮›› ಅಂದರೆ ಮೊದಲು ನಾವು ಕಲ್ಪಿಸಿಕೊಂಡ ಸಂಖ್ಯೆಯು ಹೊರಡುವದು.

೧	೨	೪	೮	೧	೩೨
೩	೩	೫	೯	೧೭	೩೩
೫	೬	೬	೧೦	೧೮	೩೪
೭	೭	೭	೧೧	೧೯	೩೫
೯	೧೦	೧೨	೧೨	೨೦	೩೬
೧೧	೧೧	೧೩	೧೩	೨೧	೩೭
೧೩	೧೪	೧೪	೧೪	೨೨	೩೮
೧೫	೧೫	೧೫	೧೫	೨೩	೩೯
೧೭	೧೮	೨೦	೨೪	೨೪	೪೦
೧೯	೧೯	೨೧	೨೫	೨೫	೪೧
೨೧	೨೨	೨೨	೨೬	೨೬	೪೨
೨೩	೨೩	೨೩	೨೭	೨೭	೪೩
೨೫	೨೬	೨೫	೨೮	೨೮	೪೪
೨೭	೨೭	೨೭	೨೯	೨೯	೪೫
೨೯	೩೦	೩೦	೩೦	೩೦	೪೬
೩೧	೩೧	೩೧	೩೧	೩೧	೪೭
೩೩	೩೪	೩೨	೪೦	೪೮	೪೮
೩೫	೩೫	೩೩	೪೧	೪೯	೪೯
೩೭	೩೮	೩೭	೪೨	೫೦	೫೦
೩೯	೩೯	೩೮	೪೩	೫೧	೫೧
೪೧	೪೨	೪೦	೪೪	೫೨	೫೨
೪೩	೪೩	೪೩	೪೫	೫೩	೫೩
೪೫	೪೬	೪೬	೪೬	೫೪	೫೪
೪೭	೪೭	೪೭	೪೭	೫೫	೫೫
೪೯	೫೦	೪೯	೪೮	೫೬	೫೬
೫೧	೫೧	೫೧	೪೯	೫೭	೫೭
೫೩	೫೪	೫೪	೫೦	೫೮	೫೮
೫೫	೫೫	೫೫	೫೧	೫೯	೫೯
೫೭	೫೮	೫೬	೫೨	೬೦	೬೦
೫೯	೫೯	೫೯	೫೩	೬೧	೬೧
೬೧	೬೨	೬೦	೫೪	೬೨	೬೨
೬೩	೬೩	೬೧	೫೫	೬೩	೬೩

ಪತ್ರಗಳ ಸಾರಾಂಶ

ಕ. ಮೂ. ಕನ್ನಡ ಗಂಡುಹುಡುಗರ ಸಾಲೆ ಗುರ್ಲಹೊಸೂರ (ಜಿ. ಬೆಳಗಾವ ಇವರು ಬರೆದದ್ದು:—

ಈ ಊರ ನಿವಾಸಿಗಳಾದ ಪ್ರೊ. ಎಮ್. ಎಚ್. ಖರೆ L. C. E. B. S. ಎಂಜನೀಯರಿಂಗ ಕಾಲೇಜ ಪುಣೆ ಇವರು ಇಲ್ಲಿಯ ಬಡಹುಡುಗರ ಉತ್ತೇಜನಾರ್ಥವಾಗಿ ಈ ಸಾರಿ ಕೊಟ್ಟ ಹದಿನೆಂಟು ರೂಪಾಯಿಗಳ ಶಿಕ್ಷಣೋಪಕರಣಗಳನ್ನು ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ತಾ॥ ೧೯–೩–೩೪ನೆಯ ದಿವಸ ಸಭೆಗೂಡಿಸಿ ಹಂಚಲಾಯಿತು. ಶಾರೀರಿಕಶಿಕ್ಷಣ, ನೈತಿಕಶಿಕ್ಷಣ, ಅಸ್ಪೃಶ್ಯತಾನಿವಾರಣಗಳ ಬಗ್ಗೆ ಕೆಲ ಜನರು ಮಾತಾಡಿದರು. ಬಡಹುಡುಗರ ಶಿಕ್ಷಣಕ್ಕೆ ಉತ್ತೇಜನಕೊಡುತ್ತಿರುವ ಶ್ರೀ. ಖರೆಯವರ ಔದಾರ್ಯ, ಹಾಗೂ ಪರೋಪಕಾರಬುದ್ಧಿಗಳನ್ನು ಕುರಿತು ಹೆಡ್‌ಮಾಸ್ತರರು ಎಲ್ಲರಿಗೂ ತಿಳಿಸಿದರು. ಈ ಸಮಾರಂಭಕ್ಕೆ ಶ್ರೀ. ಖರೆಯವರು ತಮ್ಮ ಚಿ. ಕು. ಪ್ರಭಾವತಿಯಿಂದ ಸಹಿತವಾಗಿ ಆಗಮಿಸಿ ಮುಂದಿನ ವರ್ಷದಿಂದ ಈ ಸಹಾಯಕ ದ್ರವ್ಯವನ್ನು ಇನ್ನೂ ತುಸು ಹೆಚ್ಚಿಸುವೆನೆಂದು ಅಭಿವಚನವನ್ನಿತ್ತಿರುವರು. ಮಹನೀಯರಾದ ಶ್ರೀ. ಖರೆಯವರ ಕೃತಿಯು ವರ್ಣನೀಯವಾದದ್ದು.

ಬುಂದಗೋಳ ಕನ್ನಡ ಸಾಲೆಯ ೧ನೆಯ ಅ. ಮೂ. ರಾದ ಜೀ. ಭೀ. ಹುದ್ದಾರ ಇವರು ಬರೆದದ್ದು:

ಇಲ್ಲಿಯ ಎಚ್. ಬಿ. ಹೈಯಸ್ಕೂಲಿನ ಹೆಡ್‌ಮಾಸ್ತರರೂ ಪ್ರಾಥಮಿಕ ಸಾಲೆಯ ಸುಪರವಾಯಿಝರರೂ ಆದ ರಾ॥ ರಾ॥ ಅನಂತ ಗೋವಿಂದ ಪರಾಂಜಪೆ ಇವರಿಗೆ ಪೇನ್ಶನ್ನ ಆದ ಮೂಲಕ ನಮ್ಮ ಸಾಲೆಯ ವತಿಯಿಂದ ತಾ॥ ೨೦–೨–೩೪ರ ದಿವಸ ಪಾನ ಸುಪಾರಿಯ ಸಮಾರಂಭವು ಮಾಡಲ್ಪಟ್ಟಿತು. ಇಲ್ಲಿಯ ಅ. ಮೂ. ರಾದ ಗು, ದ, ಕುಲಕರ್ಣಿ ಇವರು ರಾವಸಾಹೇಬರ ಸದ್ಗುಣ, ಸತ್‌ಶಿಕ್ಷಣ, ಸದ್ಧರ್ಮ ಇವುಗಳ ಬಗ್ಗೆ ನಿರೂಪಣ ಮಾಡಿದ ಬಳಿಕ ರಾ॥ ಸಾ॥ ರು ಶಿಕ್ಷಕರ ಯೋಗ್ಯತೆ, ಶಿಕ್ಷಣದ ತತ್ವಗಳ ವಿಷಯಕ್ಕೆ ನಾಲ್ಕು ಉಪದೇಶದ ಮಾತುಗಳನ್ನು ಹೇಳಿ ಆಭಾರವನ್ನಿಸಿದರು.

ಕನ್ನಡ "ವರ್ಧಪ್ರಾಯಿಜ" ಪರೀಕ್ಷೆ ೧೯೩೫

ಪರೀಕ್ಷೆಯ ತಾರೀಖು ಮತ್ತು ಸ್ಥಳ:—

೧೯೩೫ನೆಯ ಇಸವಿಯ ಜುಲಾಯಿ ತಿಂಗಳ ೧೧ನೆಯ ತಾರೀಖು (ಗುರುವಾರ) ಮತ್ತು ಮುಂದಿನ ಎರಡು ದಿವಸಗಳಲ್ಲಿ ೧೨ ಗಂಟೆಯಿಂದ ಧಾರವಾಡ ಟ್ರೇನಿಂಗ್ ಸ್ಕೂಲಿನಲ್ಲಿ ಪರೀಕ್ಷೆಯು ನಡೆಯುವದು.

ಪರೀಕ್ಷೆಯ ವಿಷಯ ಮೊದಲಾದವು:—

(ಅ) ಹಳಗನ್ನಡ ಮತ್ತು ಹೊಸಗನ್ನಡ ಗದ್ಯ ಪದ್ಯ ಭಾಗಗಳ ಅರ್ಥವಿವರಣೆ ಮಾಡಲಿಕ್ಕೂ ಅವುಗಳಿಗೆ ಟೀಕೆ ಟಿಪ್ಪಣಿಗಳನ್ನು ಬರೆಯಲಿಕ್ಕೂ ಹಳೆಯ ಅಥವಾ ಹೊಸಗನ್ನಡದಲ್ಲಿ ನಿಬಂಧ ಬರೆಯಲಿಕ್ಕೂ ಉಮೇದವಾರರು ಸಮರ್ಥರಾಗಿರಬೇಕು.

(ಬ) ವರ್ಧಸಾಹೇಬರು ರಚಿಸಿರುವ ಪ್ರಾಕ್ಟ್ಯಿವ್ಯಮಾಲೆ ಎಂಬ ಗ್ರಂಥವನ್ನು ಸಾದ್ಯಂತವಾಗಿ ಓದಿ ಸಂಪೂರ್ಣವಾಗಿ ತಿಳಿದುಕೊಂಡಿರಬೇಕು. ಪರೀಕ್ಷೆಯಲ್ಲಿ ಅರ್ಥವಿವರಣೆ, ಟೀಕೆ ಟಿಪ್ಪಣಿ, ಸ್ವತಂತ್ರ ನಿಬಂಧ, ಪದ್ಯರಚನೆ ಈ ವಿಷಯಗಳ ಸಮಾವೇಶವಾಗುವದು. ಉಮೇದವಾರರು ಪರೀಕ್ಷೆಗಿರುವ ಒಟ್ಟು ಗುಣಗಳಲ್ಲಿ ೧೦೦ಕ್ಕೆ ೭೫ಕ್ಕಿಂತ ಕಡಿಮೆಯಲ್ಲದಷ್ಟು ಗುಣಗಳನ್ನು ಪಡೆದಿರಬೇಕು; ಮತ್ತು ಯಾವದೊಂದು ವಿಷಯವನ್ನು ತೀರ ಅಸಮಾಧಾನಕರವಾಗಿ ಬರೆದು ನಾಪಾಸಾಗಿರಕೂಡದು.

ಪರೀಕ್ಷೆಯ ಇನಾಮು ಮೊದಲಾವು:—

ಮೇಲೆ ಹೇಳಿದ ವಿಷಯಗಳಲ್ಲಿ ಪರೀಕ್ಷೆ ಕೊಟ್ಟು ಆ ನಿಯಮಗಳಿಗನುಸಾರವಾಗಿ ಪಾಸಾಗಿ ಮೊದಲನೆಯ ನಂಬರು ಪಡೆದ ದಕ್ಷಿಣ ಭಾಗದೊಳಗಿನ ಉತ್ತಮ ಉಮೇದವಾರರಿಗೆ ೬೦ ರೂ. ಇನಾಮು ದೊರೆಯುವದು.

ಅರ್ಜಿ ಮಾಡತಕ್ಕ ಅವಧಿ:—

ಪರೀಕ್ಷೆಗೆ ಕೂಡಲಪೇಕ್ಷಿಸುವವರು ೧೯೩೫ನೆಯ ಇಸವಿಯ ಜೂನ ತಿಂಗಳ ಹತ್ತನೆಯ ತಾರೀಖಿನೊಳಗಾಗಿ ಮೆಃ ಎಜ್ಯುಕೇಶನಲ್ ಇನ್ಸಪೇಕ್ಟರ, ದಕ್ಷಿಣಭಾಗ ಇವರಿಗೆ ಮುಟ್ಟುವಂತೆ ಅರ್ಜಿಯನ್ನು ಮಾಡತಕ್ಕದ್ದು.

ಪ್ರಕಟನೆ

ತಾ॥ ೨೩-೩-೧೯೩೩ನೆಯ ದಿವಸ ಪುಣೆಯಲ್ಲಿಯ ಉರ್ದು ಬುಕ್ ಕಮಿಟಿಯವರು ಮುಂಬಯಿ ಇಲಾಖೆಯಲ್ಲಿಯ ಉರ್ದು ಶಾಲೆಗಳಿಗಾಗಿ ಮಂಜೂರ ಮಾಡಿದ ಟೆಕ್ಸ್ಟ್, ಲಾಯಬ್ರರಿ, ಪ್ರಾಯಿಝು ಬುಕ್ಕುಗಳ ಯಾದಿಯು ಕೆಳಗೆ ಬರೆದಂತೆ ಅದೆ.

T ಟೆಕ್ಸ್ಟ್, L ಲಾಯಬ್ರರಿ P. ಪ್ರಾಯಿಝು ಗ್ರಂ. ಕ. = ಗ್ರಂಥಕರ್ತರು ಪ್ರ = ಪ್ರಕಾಶಕರು ಮುಂ.-ಮುಂಜೂರ.

೧. ಉರ್ದುಕಾ ಕಾಯಿದಾ ನಯಾ ಹಿಸ್ಸೆ ಅವಲ್ (ಜನೆ ಆ. ೧೯೩೧) ಗ್ರಂ. ಕ. ಮೌಲ್ವಿ ಅಬ್ದುಸ್ ಸತ್ತಾರಖಾನ ಪ್ರ-ಗ್ರಂಥಕರ್ತರು ಬೆಲೆ ೦-೦-೯ T

೨. ಉರ್ದುಕಾ ಕಾಯದಾ ಹಿಸ್ಸಯೆ ದುವಮ್ (ಳನೆ ಆ. ೧೯೩೭) ಗ್ರಂ. ಕ. ಸದರ, ಪ್ರ. ಸದರ ಬೆಲೆ ೦-೧-೫ T

೩. ಜದಿದ ತರಜಕಿ ಕಾಯದಾ. ಗ್ರಂ. ಕ-ಅಬ್ದುರ್ರೌಫ 'ಆಖ್ತಾರ' ಪ್ರ-ಅಹಮ್ಮದ ಹುಶೇನ ಮತ್ತು ಕಂಪನಿ ಕಾಟ್ರಾ ಬಝಾರ ಸಾಗರ ಬೆಲೆ ೦-೨-೦ ಮುಂ- ಉರ್ದು ಪ್ರಾಯ್ಮರಿ ಶಾಲೆಗಳಿಗಾಗಿ P. L.

೪. ಜದೀದತರಜಕಿ ಪಹಿಲಿಕಿತಾಬ. ಗ್ರಂ. ಕ. ಸದರ ಪ್ರ-ಸದರ ಬೆಲೆ ೦-೨-೬ ಮುಂಜೂರ ಸದರ.

೫. ಸದರ ದುಸರಿ ಕಿತಾಬ. ಗ್ರಂ. ಕ- ಸದರ ಪ್ರ॥ ಸದರ ಬೆಲೆ ೦-೬-೬ ಮುಂಜೂರ- ಸದರ.

೬. ಸದರ ತಿಸರಿ ಕಿತಾಬ. ಗ್ರಂ. ಕ- ಸದರ ಪ್ರ॥ ಸದರ ಬೆಲೆ ೦-೯-೬ ಮುಂ- ಸದರ.

೭. ಸದರ ಚೌಥಿ ಕಿತಾಬ ಗ್ರಂ. ಕ- ಸದರ ಪ್ರ॥ ಸದರ ಬೆಲೆ ೦-೧೦-೬ ಮುಂ- ಸದರ.

೮. ಆಫ್ತಾಬ್-ಎ- ಅದಾಬ್ ಹಿಸ್ಸಯೆ ಭಾಗ I (೧ನೆ ಆ. ೧೯೩೩) ಗ್ರಂ. ಕ. ಪ್ರ- ಭಾರತ ಹೌಸ ಬುಕ್‌ಶೇಲರ ಲಾಹೋರ ಬೆಲೆ ೦-೮-೬ ಮುಂ- ಅ. ವ್ಹ. ಶಾಲೆಗಳ ಮೊದಲಿನ ೪ ಇಯತ್ತೆಗಳಿಗಾಗಿ T.

೯. ಸದರ ಭಾಗ ೨ ಗ್ರಂ. ಕ. ಪ್ರ॥ ಸದರ ಬೆಲೆ ೦-೯-೩ ಮುಂ-ಸದರ

೧೦. ಸದರ ಭಾಗ ೩ (೧ನೆ ಆ. ೧೯೩೩) ಗ್ರಂ. ಕ. ಪ್ರ॥ ಭಾರತ ಹೌಸ ಬುಕ್ ಸೇಲರ್ಸ ಪಬ್ಲಿಶರ್ಸ ಲಾಹೋರ ಬೆಲೆ ೧೦-೯ ಮುಂ ಅ. ವ್ಹ. ಶಾಲೆಗಳಿಗಾಗಿ ಮೊದಲಿನ ೪ ಇಯತ್ತೆಗಳಿಗಾಗಿ T.

೧೧. ಸದರ ಭಾಗ ೪ (೧೯೪೩) ಗ್ರಂ. ಕ. ಪ್ರ॥ ಸದರ ಬೆಲೆ ೦-೧೧-೩ ಮಂ- ಸದರ.

೧೨. ತಾರೀಖು- ಎ.-ಹಿಂದ ಜಿಲ್ದಅವ್ವಲ್ ಗ್ರಂ. ಕ- ಜೆ. ಎಚ್. ಗೇನ್ಸ್ ಎಸ್. ಜೆ. (೧೯೪೩) ಪ್ರ. ಮೆ॥ ಮ್ಯಾಕ್ಮಿಲನ್ ಆ್ಯಂಡ ಕ. ಮುಂಬೈ ಬೆಲೆ ೧-೪-೦ ಮಂ- ಉರ್ದು ಪ್ರಾ. ಶಾ. ಗಳಿಗಾಗಿ ಮತ್ತು ಸೆಕಂಡರಿ ಮತ್ತು ಟ್ರೇ. ಸಂ. ಗಳಿಗಾಗಿ P. L.

೧೩. ಸದರ ದುವಮ್ (೧೯೪೩) ಗ್ರ. ಕ- ಸದರ ಪ್ರ॥ ಸದರ ಬೆಲೆ ೧-೪-೦ ಮಂಜೂರ ಸದರ.

೧೪. ತಾಆಲೀವಮ್-ವ-ನಪಸಿಯೂತ್ ಗ್ರಂ. ಕ- ಎಮ್. ಎಮ್. ಜಹರು ದ್ದೀನ ಅಹಮ್ಮದ ಪ್ರ- ಗ್ರಂ. ಕ- ಬೆಲೆ ೦-೮-೦ ಮಂ- ಟೀಚರ್ಸ ಲಾಯಬ್ರರಿ.

೧೫. ತಾರೀಖು-ಎ-ಇಸಲಾಮ(೧೯೪೩) ಗ್ರ. ಕ.ಸೈಯ್ಯದ ಅಮೀರಸಾ ಎಮ್. ಎ. ಪ್ರ॥ ರು ಹಾಫೀಜ ಮುಝಫರುದ್ದೀನ ಲಾಹೋರ ಬೆಲೆ ೩-೦-೦ ಮಂ॥ ಉರ್ದು ಪ್ರಾ. ಶಾಲೆ ಹಾಗು ಮಾಧ್ಯಮಿಕ ಶಾಲೆ ಹಾಗು ಟ್ರೇನಿಂಗ ಸಂಸ್ಥೆಗಳಿಗಾಗಿ P. L.

೧೬. ತಾರೀಖು-ಎ- ಉಮ್ಮತ್ ವ್ಹಾಲ್ಯೂಮ್ I (೨೯೪೪) ಗ್ರಂ- ಮೌಲಾನಾ ಹಾಫೀಜ ಮಹಮ್ಮದ ಅಸ್ಲಾಮ್ಸಾಹೇಬ ಪ್ರ- ಅಬ್ದುಲ್ ಅಲಿಖಾನ ಮಾತ್ಬಾ-ಎ- ಜಾವ್ಲಿಯಾ ಅಲೀಗಡ ಬೆಲೆ ೨-೦-೦ ಮಂ- ಸದರ.

೧೭. ಸದರ ವ್ಹಾಲ್ಯೂಮ್ II (೧೯೪೪) ಗ್ರಂ. ಕ. ಸದರ ಪ್ರ॥ ಸದರ ಬೆಲೆ ೨-೦-೦ ಮಂಜೂರ ಸದರ.

೧೮. ಸದರ ವ್ಹಾಲ್ಯೂಮ್ III (೧೯೪೫) ಗ್ರಂ. ಕ. ಸದರ ಪ್ರ॥ ಸದರ ಬೆಲೆ ೧-೮-೦ ಮಂಜೂರ ಸದರ.

೧೯. ಸದರ ವ್ಹಾಲ್ಯೂಮ್ IV (೧೯೪೫) ಗ್ರಂ. ಕ. ಸದರ ಪ್ರ॥ ಸದರ ಬೆಲೆ ೨-೦-೦ ಮಂಜೂರ ಸದರ.

೨೦. ಸದರ ವ್ಹಾಲ್ಯೂಮ್ V (೧೯೪೫) ಗ್ರಂ. ಕ. ಸದರ ಪ್ರ॥ ಸದರ ಬೆಲೆ ೨-೦-೦ ಮಂಜೂರ ಸದರ.

೨೧. ತಾಸಿಲುಲ್-ಬಲಾಗತ (೧೯೪೯ ಹಿಜರಿ) ಗ್ರಂ-ಸಜ್ಜದ ಮಿರ್ಝಾ ಬೇಗ ದೆಹಲ್ವಿ ಪ್ರ॥ ಮಾತ್ಬಾ ಎ- ನಿಝಾಮ್-ಎ ಡೆಕ್ಕನ್ ಪ್ರೆಸ್ ಹೈದ್ರಾಬಾದ

ಡೆಕ್ಕನ್ ಬೆಲೆ ೩–೦–೦ ಮಂಜೂರ–– ಉರ್ದು ಪ್ರಾಯ್ಮರಿ ಸೆಂಕಡರಿ ಹಾಗು ಟ್ರೇನಿಂಗ ಸಂಸ್ಥೆಗಳಿಗೆ P. L.

೨೨. ಬೆಹತರೀನ್ ಇನ್‌ಶಾ ಪರದಾಝು ಗ್ರಂ. ಜಾಫರ–ಉಲ್–ಮುಲ್ಕ ಅಲ್ವಿ ಪ್ರ।। ಅನ್ ನಾಝಿರ ಏಜನ್ಸಿ ಲಖನೌ ಬೆಲೆ ೧–೮–೦ ಮಂಜೂರ ಸದರ.

೨೩. ಸಿಯರ–ಉಸ್– ಸಹಾಬಿಯತ್. (೧೩೪೧ ಹಿಜರಿ) ಗ್ರಂ. ಮೌಲ್ವಿ ಸೈಯ್ಯದ ಅನಸಾರಿ ಪ್ರ।। ಮಾತ್ಬಾ ಮಾರಿಫ್ ಅಜಂಗರ ಬೆಲೆ ೨–೦–೦ ಮಂ. ಸದರ

೨೪. ಖಿಯಾಲಿಸ್ತಾನ (೧೯೫ ಆ. ೧೯೦೯) ಗ್ರಂ. ಸೈಯ್ಯದ ಸಜ್ಜದ ಹೈದರ ಪ್ರ।। ಮಹಮ್ಮದ ಇಕ್ರಾಮ್ ಮಖಝುನ್ ಪ್ರೆಸ್ ದಿಲ್ಲಿ ಬೆಲೆ ೨–೦–೦ ಮಂಜೂರ ಸದರ.

೨೫. ತರಜುಮುಲ–ಉಲ್ ಕುರಆನ ವ್ಹಾಲ್ಯುಮ್ I ಗ್ರಂ. ಅಬುಲ್ ಕಲಮ್ ಆಝಾದ ಪ್ರ. ದಫ್ತಾರ–ಎ– ತರಜುಮನ್–ಎ– ಕುರಾನ ದಿಲ್ಲಿ ಬೆಲೆ ೮–೦–೦ ಮಂ. ಸದರ.

೨೬. ತಾರೀಖೆ ಅಲಮ್ ಇಬ್ನೆ–ಎ– ಖಲದೂನ್. (ವ್ಹಾಲ್ಯೂ ೧ ೧೯೧೭) ಗ್ರಂ. ಮೌಲ್ವಿ ಹಕೀಮ್ ಅಹಮ್ಮದ ಪ್ರ. ಮಾತ್ಬಾ –ಎ– ಅನ್ವಾರ –ಎ–ಅಹ್ಮದಿ ಬೆಲೆ ೧–೮–೦ ಮಂ. ಸದರ.

೨೭. ಸದರ ವ್ಹಾಲ್ಯೂ. ೨ ಗ್ರಂ. ಕ. ಸದರ ಪ್ರ।। ಸದರ ಬೆಲೆ ೧–೮–೦ ಮಂ. ಸದರ.

೨೮. ಸದರ ವ್ಹಾಲ್ಯೂ. ೩ (೧೯೧೧) ಗ್ರ. ಕ. ಸದರ ಪ್ರ।। ಸದರ ಬೆಲೆ ೧–೮–೦ ಮಂ. ಸದರ.

೨೯. ಬಯಾನ್–ಉಲ್ ಕುರಆನ್ ಭಾಗ ೧ (೧೩೪೦ ಹಿಜರಿ) ಗ್ರಂ. ಕ. ಮೌಲಾನಾ ಮೌಲ್ವಿ ಮಹಮ್ಮದಅಲಿ ಸಾ।। ಪ್ರ।। ಬೆಲೆ ೧೫–೮–೦ ಎಲ್ಲಾ ಮೂರು ಭಾಗಗಳಿಗಾಗಿ.

೩೦. ಸದರ ಭಾಗ ೨ (೧೩೪೧ ಹಿಜರಿ) ಗ್ರಂ. ಸದರ ಪ್ರ. ಮಂ. ಸದರ.

೩೧. ಸದರ ಭಾಗ ೩ (೧೩೪೨ ಹಿಜರಿ) ಗ್ರಂ. ಬೆಲೆ ಮಂ. ಸದರ.

ಸಣ್ಣ ಹುಡುಗರಿಗೆ ಕಲಿಸಬಹುದಾದ ಕವಿತೆಗಳು

ಗಡಿಯಾರದ ಹಾಡು

ಗಂಟೆಯು ನೆಂಟನೆ ಓ ಗಡಿಯಾರ ।
ಬೆಳ್ಳಿಯ ಬಣ್ಣದ ಗೋಲಾಕಾರ ।
ವೇಳೆಯ ತಿಳಿಯಲು ನೀನಾಧಾರ ।
ಟಿಕ್, ಟಿಕ್, ಗೆಳತೀ ಟಿಕ್, ಟಿಕ್, ಟಿಕ್ ॥ ೧ ।

ಹಗಲೂ ಇರುಳೂ ಒಂದೇ ಬಾಳು ।
ನೀನಾವಾಗಲು ದುಡಿಯುವ ಆಳು ।
ಕಿವಿಯನು ಹಿಂಡಲು ನಿನಗದು ಕೂಳು ।
ಟಿಕ್ ಟಿಕ್ ಗೆಳತೀ ಟಿಕ್, ಟಿಕ್, ಟಿಕ್ ॥ ೨ ॥

ಮುಖವಂದಾದರೂ ದ್ವಾದಶ ನೇತ್ರ ।
ಎರಡೇ ಕೈಗಳು ಏನು ವಿಚಿತ್ರ ।
ಯಂತ್ರಪುರಾಣದ, ಕಕ್ಕಸಪುತ್ರ ।
ಟಿಕ್, ಟಿಕ್, ಗೆಳತೀ । ಟಿಕ್, ಟಾಕ್, ಟಿಕ್ ॥ ೩ ॥

ಟಿಕ್, ಟಾಕ್, ಎನ್ನುತ ಹೇಳುವೆಯೇನು ।
ನಿನ್ನೀ ಮಾತಿನ । ಒಳಗುಟ್ಟೇನು ॥
ಕಾಲವು ನಿಲ್ಲದು । ಎನ್ನುವಿಯೇನು ॥
ಟಿಕ್, ಟಾಕ್, ಗೆಳತೀ । ಟಿಕ್, ಟಾಕ್, ಟಿಕ್ ॥ ೪ ॥

ಕರ್ನಾಟಕದ ಕಥಾಮಯ ಇತಿಹಾಸ

(ಕನ್ನಡ ಳನಿಯ ಇಯತ್ತೆಗಾಗಿ)

ಲೇಖಕ:— ಗೋ. ಆ. ಜೋಗಳೇಕರ, ಸ್ಕೂಲ್‌ಮಾಸ್ತರ ಗದಗ

ನಮ್ಮಿಂದ ರಚಿಸಲ್ಪಟ್ಟ "ಕರ್ನಾಟಕಾಚಾ ಗೋಷ್ಟೀರೂಪ ಇತಿಹಾಸ" ಎಂಬ ಮರಾಠಿ ಪುಸ್ತಕವು ಮುಂಬಯಿ ಸರಕಾರದಿಂದ ಪಠ್ಯಪುಸ್ತಕವೆಂದು ಮಂಜೂರಾಗಿದೆ. ಅದರ ಕನ್ನಡ ಭಾಷಾಂತರವು ಮೂರಾಟಕ್ಕೆ ಸಿದ್ಧವಾಗಿದೆ. ಇದರಲ್ಲಿ ಐತಿಹಾಸಿಕ ಕಾಲದಿಂದ ಈಗಿನವರೆಗಿನ ಕರ್ನಾಟಕದ ಇತಿಹಾಸವು ಚಿಕ್ಕಮಕ್ಕಳಿಗೆ ತಿಳಿಯಬಹುದಾದ ಸುಲಭ ಭಾಷೆಯಲ್ಲಿ ೩೨ ಕಥೆಗಳ ರೂಪದಿಂದ ಬರೆಯಲ್ಪಟ್ಟಿದೆ. ಬಾಲಕರಲ್ಲಿ ಸ್ಫೂರ್ತಿಯೂ, ಸ್ವಾಭಿಮಾನವೂ ಹುಟ್ಟುವಂತೆ ಇದರ ರಚನೆಯಿದೆ. ಎರಡು ನಕಾಶೆಗಳೂ, ಅಲ್ಲಲ್ಲಿ ಬೇಕಾಗುವ ಚಿತ್ರಗಳೂ ಸೇರಿಸಲ್ಪಟ್ಟಿವೆ. ಇಂಥ ಉಪಯುಕ್ತವಾದ ಪುಸ್ತಕಕ್ಕೆ ಸ್ಕೂಲ್‌ಬೋರ್ಡುಗಳೂ, ಶಿಕ್ಷಕರೂ ಉತ್ತೇಜನಕೊಟ್ಟು ಬಾಲಕರಿಗೆ ನಿಜವಾದ ಇತಿಹಾಸಜ್ಞಾನವನ್ನು ಮಾಡಿಕೊಡಬೇಕೆಂದು ಹಾರೈಸುವೆವು.

ಪುಸ್ತಕಗಳು ಎಲ್ಲ ಬುಕ್‌ಡಿಪೋಗಳಲ್ಲಿಯೂ ಗ್ರಂಥಕರ್ತರಲ್ಲಿಯೂ ದೊರೆಯುವವು. ಶಿಕ್ಷಕರಿಗೂ ಪುಸ್ತಕವ್ಯಾಪಾರಿಗಳೂ ಯೋಗ್ಯ ಕಮಿಶನು ಕೊಡಲಾಗುವದು.

ಗೋ. ಆ. ಜೋಗಳೇಕರ,

ಸ್ಕೂಲ್‌ಮಾಸ್ತರ, ಗದಗ ಮ್ಯುನಿಸಿಪಾಲಿಟಿ, ಗದಗ.

ಟೆಕ್ಸ್ಟ ಬುಕ್ ಎಂದು ಮಂಜೂರಾಗಿದೆ.

ಪ್ರದೇಶ ಪದ್ಧತಿಯಿಂದ ಬರೆಯಲ್ಪಟ್ಟ

ಳನೆಯ ಇಯತ್ತೆಯ

ಸ ಚಿ ತ್ರ—ಭೂ ವ ಣ ರ್ ನೆ

ಬೆಲೆ: ೭ ಆಣೆ] [ಬೆಲೆ: ೭ ಆಣೆ

ಳನೆಯ ಇಯತ್ತೆಯ

ಸ ಚಿ ತ್ರ—ಜ ಮಾ ಖ ರ್ಚು

* * * *

ಬೆಲೆ: ೩ ೮ಣೆ] [ಬೆಲೆ: ೩ ಆಣೆ

ಬೆಳಗಾಂವ ಜಿಲ್ಲೆಯ

ಸ ಚಿ ತ್ರ—ಭೂ ವ ಣ ರ್ ನೆ

ಬೆಲೆ: ೫ ಆಣೆ] ಬೆಲೆ: ೫ ಆಣೆ

ನಮ್ಮ ಎಲ್ಲ ಪುಸ್ತಕಗಳು ಎ. ಆರ್. ಶಿವನಾಗಪ್ಪಾ ಬುಕ್-ಡಿಪೋ ಹುಬ್ಬಳ್ಳಿ ಹಾಗು ಕರ್ನಾಟಕದ ಎಲ್ಲ ಬುಕ್-ಡಿಪೋಗಳಲ್ಲಿ ದೊರೆಯುವವು.

ವಿಳಾಸ:— **ಶ್ರೀಬಲಭೀಮ ಸ್ಟೋಅರ್ಸ, ಕಾಗವಾಡ. ಜಿ. ಬೆಳಗಾಂವ.**

Reg. No. B. 2567

ಜಾಹೀರಾತು

(೧) ಹಿಂದುಮುಸಲ್ಮಾನರ ಇತಿಹಾಸ.

(ಬಾಳಕೃಷ್ಣ ಹಳೀಪೇಟಕೃತ)

ಇದು, ಪ್ರಾಥಮಿಕ ಶಾಲೆಗಳ ೫ನೆಯ ಇಯತ್ತೆಯ ಉಪಯೋಗಕ್ಕಾಗಿ ಸುಲಭವಾದ ಅಲಂಕಾರಿಕ ಭಾಷೆಯಲ್ಲಿ ಹೊಸಪದ್ಧತಿಗನುಸಾರವಾಗಿ ಬರೆಯಲ್ಪಟ್ಟಿರುವದು. ಈ ವರೆಗೆ ಬರೆದ ಇತಿಹಾಸಗಳಲ್ಲಿ ಇದು ಒಳ್ಳೇ ಉಪಯುಕ್ತವಾಗಿರುವದು. ಮುಂಬಯಿ ಸರಕಾರದಿಂದ ಕನ್ನಡ ೫ ನೆ ಇಯತ್ತೆಗೆ ಪಠ್ಯಪುಸ್ತಕವೆಂದು ಮಂಜೂರ ಮಾಡಲ್ಪಟ್ಟಿರುವದು. ಬೆಲೆ ೦–೮–೦.

(೨) ಕರ್ನಾಟಕದ ವರ್ಣನೆಯೂ ಇತಿಹಾಸವೂ.

(ನಾರಾಯಣ ಶ್ರೀನಿವಾಸ ರಾಜಪುರೋಹಿತ ಕೃತ)

ಕರ್ನಾಟಕದ ಇತಿಹಾಸ ಸಂಶೋಧಕ ಮಂಡಲದ ಪ್ರಮುಖರಲ್ಲೊಬ್ಬರಾದ ಮಿ. ರಾಜಪುರೋಹಿತ ಇವರು ಕರ್ನಾಟಕದ ಎಲ್ಲ ಭಾಗಗಳಲ್ಲಿ ಸಂಚರಿಸಿ ಶಿಲಾಲೇಖ, ತಾಮ್ರಪಟ, ನಿಷಿದಿಯಕಲ್ಲು, ಮಾಸತಿಕಲ್ಲು, ವೀರಗಲ್ಲು ಮೊದಲಾದವುಗಳನ್ನು ಶೋಧಿಸಿ ಇವುಗಳ ಆಧಾರದಿಂದ ಸುಸಂಗತವಾಗಿ ಈ ಇತಿಹಾಸವನ್ನು ಬರೆದಿರುವರು. ೪ನೆಯ ಇಯತ್ತೆಯ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕವೆಂದು ಸರಕಾರದಿಂದ ಮಂಜೂರ ಆಗಿದೆ. ಬೆಲೆ ೦–೮–೦.

(೩) ದೇಶೀಯ ಜಮಾಖರ್ಚು ಪ್ರವೇಶ.

(ಹನುಮಂತ ರಾಮಚಂದ್ರ ಉಲಕರ್ಣಿ ಕೃತ)

ಪ್ರಾಥಮಿಕ ಕನ್ನಡ ಶಾಲೆಗಳ ೬ನೆಯ ೭ನೆಯ ಇಯತ್ತೆಯ ವಿದ್ಯಾರ್ಥಿಗಳಿಗೆ ಇದ್ದ ಈ ಜಮಾಖರ್ಚಿನ ವಿಷಯವು ೪ನೆಯ ಇಯತ್ತೆಗೆ ಆರಂಭವಾಗುವದರಿಂದ ಇದನ್ನು ಸುಲಭವಾದ ರೀತಿಯಲ್ಲಿ ತಿಳಿಯುವಂತೆ ಬರೆದಿದ್ದಾರೆ. ಅಭ್ಯಾಸಕ್ಕೆ ವಿಶೇಷ ಅನುಕೂಲವಾಗಿದೆ. ಮುಂಬಯಿ ಇಲಾಖೆಯ ವಿದ್ಯಾಖಾತೆಯಿಂದ ಮಂಜೂರಾಗಿದೆ. ಬೆಲೆ ೦–೩–೬.

(೪) ವಿಜಾಪುರ ಜಿಲ್ಲೆಯ ಸಾಮಾನ್ಯ ವರ್ಣನೆಯು.

ಕನ್ನಡ ಪ್ರಾಥಮಿಕ ಶಾಲೆಗಳ ೨ನೆಯ ೩ನೆಯ ಇಯತ್ತೆಯ ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವಂತೆ ಹೊಸ ಪದ್ಧತಿಯಿಂದ ಬರೆಯಲ್ಪಟ್ಟಿದೆ. ಈ ಮೊದಲು ಇದೇ ಪದ್ಧತಿಯಿಂದ ಬರೆದ ಮಿ. ಯ. ಕೃ. ಅಣ್ಣಿಗೇರಿ ಇವರಿಂದಲೇ ಇದನ್ನು ಬರೆಯಿಸಿದೆ. ಅಭ್ಯಾಸವು ಸುಲಭವೂ ಸುಗಮವೂ ಮನೋರಂಜಕವೂ ಆಗುವಂತೆ ಈ ಪುಸ್ತಕದಲ್ಲಿ ನಕಾಶಗಳೂ ಚಿತ್ರಗಳೂ ಸೇರಿಸಲ್ಪಟ್ಟಿವೆ. ಬೆಲೆ ೪–೬–೦.

ಪುಸ್ತಕ ದೊರೆಯುವ ಸ್ಥಳ :—

ವಿ. ಆರ್. ಶಿವನಾಗಪ್ಪ,

ವಾಗ್ವಿಲಾಸ ಬುಕ್‌ಡಿಪೋ ಪಾವರ ಪ್ರಿಂಟಿಂಗ ಪ್ರೆಸ್, ಹುಬ್ಬಳ್ಳಿ

B2576N.o.Reg.

ಕನ್ನಡ

ಪ್ರಾಥಮಿಕ ಶಿಕ್ಷಣ

(ಇದರಲ್ಲಿ ಕನ್ನಡ ಶಾಲಾಪತ್ರಿಕೆಯೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

Kannada Prathamik Shikshana

— MAY-JUNE 1934 —

ಸಂಪಾದಕ—ವೆಂಕಟೇಶ ನರಸಿಂಗರಾವ ಮಗದಾಳ ಬಿ. ಎ.,

ಸಂಪುಟ ೧] ಮೇ-ಜೂನ ೧೯೩೪ [ವ. ೬ ಸಂ. ೨-೩

ವಿಷಯಾನುಕ್ರಮಣಿಕೆ

ಅ. ನಂ.	ವಿಷಯ	ಪುಟ
೧.	ಸಾರ್ವತ್ರಿಕ ಶಿಕ್ಷಣವು	೧
೨.	ವಾಚನಿಕ ನಿಬಂಧ	೨೫
೩.	ಹಳ್ಳಿಯ ಸಾಲೆ	೨೮
೪.	ಬಿಜಾಬಾಯಿ	೩೩
೫.	ಶಾಲೆಯ ಶಿಸ್ತು ಅಥವಾ ಕೆಲಸಗಳ ಪದ್ಧತಿ	೩೭
೬.	ಮಾನಸಶಾಸ್ತ್ರ	೪೨
೭.	ಪತ್ರಗಳ ಸಾರಾಂಶ	೪೯
೮.	ಪ್ರಕಟನೆ	೫೦
೯.	ಹೆಣ್ಣುಮಕ್ಕಳ ೧೯೩೪ನೆ ಇ. ಮಾರ್ಚ ತಿಂಗಳಲ್ಲಾದ ವ್ಹ. ಫಾ. ಪರೀಕ್ಷೆಯ ಪರಿಣಾಮ	೫೩
೧೦.	ಪ್ರಕಟನೆಗಳು	೫೭

Printed by K. R. Bhise at the Karnatak Printing Works, Dharwar
& Published by V. N. Magdal, B.A.,
Head Master, Training School, Dharwar, at his Office.

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:—ವೆಂಕಟೇಶ ನರಸಿಂಗರಾವ ಮುಗದಾಳ, ಬಿ. ಎ.

ಸಂಪುಟ ೭೧ ||| ಮೇ-ಜೂನ ೧೯೩೪ ||| ವರ್ಷ ೬ ಸಂ. ೨-೩

ಸಾರ್ವತ್ರಿಕ ಶಿಕ್ಷಣವು

ನಮ್ಮ ದೇಶದ ಸದ್ಯದ ಸಾಮಾಜಿಕ ರಾಜಕೀಯ ಸ್ಥಿತಿಗಳನ್ನು ವಿಚಾರಿಸಲು ಬಹುಜನರಲ್ಲಿ ಶಿಕ್ಷಣವು ಸಾರ್ವತ್ರಿಕವಾಗಿ ಹರಡುವದು ಅತ್ಯಾವಶ್ಯಕವೆಂದು ಎಲ್ಲರೂ ಒಪ್ಪಿಕೊಳ್ಳುವರು. ಸದ್ಯದಲ್ಲಿ ನಡೆದಿರುವ ಪ್ರಾಥಮಿಕ ಶಿಕ್ಷಣದ ಯೋಜನೆಯ ಮೂಲಕ ಬಹುಜನರ ಶಿಕ್ಷಣದ ಪ್ರಗತಿಯು ಎಷ್ಟರ ಮಟ್ಟಿಗೆ ಮುಂದುವರಿಯುತ್ತಿರುವದು; ಇದೇ ನಡಿಗೆಯಿಂದ ಅದು ಸಾಗಿದರೆ ಸಾರ್ವತ್ರಿಕ ಶಿಕ್ಷಣದ ಧ್ಯೇಯವನ್ನು ನಾವು ಎಂದು ಮುಟ್ಟಬಹುದು; ಈಗಿನ ಶಿಕ್ಷಣದ ಅವಧಿಯನ್ನೂ ಇದರಲ್ಲಿ ಕಲಿಸುತ್ತಿರುವ ವಿಷಯಗಳನ್ನೂ ಕಡಿಮೆ ಮಾಡಿ ಬಹುಜನರ ಶಿಕ್ಷಣವು ತೀವ್ರವೇ ಕೈಗೂಡುವಂತೆ ಮಾಡಬಹುದೇ? ಇದಕ್ಕೆ ತಗಲಬಹುವಾದ ವೆಚ್ಚವೆಷ್ಟು? ಈ ಹಣರಾಶಿಯು ನಮ್ಮಲ್ಲಿಲ್ಲದಿದ್ದರೆ ನಾವು ಇದ್ದ ಹಣದಲ್ಲಿಯೇ ಇದನ್ನು ಹ್ಯಾಗೆ ಸಾಧಿಸಿಕೊಳ್ಳಬಹುದು; ಈಗ ಸುಧಾರಿಸಿದವೆನಿಸಿದ ದೇಶಗಳು ನಮ್ಮ ಸದ್ಯದ ಸ್ಥಿತಿಯಲ್ಲಿಯೇ ಇದ್ದಾಗ ಬಹುಜನ ಶಿಕ್ಷಣವು ಸಮಾಜದಲ್ಲಿ ಹರಡಲಿಕ್ಕೆ ಯಾವ ಉಪಾಯಗಳನ್ನು ಕೈಕೊಂಡಿರುವವು, ಇವೇ ಮೊದಲಾದ ಮಹತ್ವದ ಪ್ರಶ್ನೆಗಳ ಬಗ್ಗೆ ಸಮರ್ಪಕವಾದ ಅಂಕೆ ಕೋಷ್ಟಕಗಳನ್ನು ಕಲೆಹಾಕಿ ಮುಂಬಯಿ ಮ್ಯುನಿಸಿಪಲ್ ಕಾರಪೋರೇಶನ್‌ದ ಸ್ಕೂಲ ಕಮಿಟಿಯ ಸೆಕ್ರೆಟರಿಗಳಾದ ಶ್ರೀ. ಆರ್. ವ್ಹಿ. ಪರೂಳೇಕರ ಎಂಬ ಗೃಹಸ್ಥರು ಒಳ್ಳೇ ಮಹ

ತ್ವದ ಒಂದು ಚಿಕ್ಕ ಪೊತ್ತಿಗೆಯನ್ನು ಬರೆದಿರುವರು. ಇದನ್ನು ಮುಂಬಯಿಯ ಲೋಕಲ್ ಸೆಲ್ಫ್ ಗವ್ಹರ್ನಮೆಂಟ ಇನ್‌ಸ್ಟಿಟ್ಯೂಟ ಅಂದರೆ ಸ್ಥಾನಿಕ ಸ್ವರಾಜ್ಯ ಸಂಘದವರು ಪ್ರಸಿದ್ಧ ಪಡಿಸಿರುವರು.

ಶ್ರೀ. ಪರೂಳೇಕರ ಇವರು ವಿಶ್ವವಿದ್ಯಾಲಯದ ಉಚ್ಚವಾದ ಎಮ್. ಏ. ಎಂಬ ಪದವಿಯನ್ನು ಪಡೆದಿರುವರಲ್ಲದೆ, ಪರದೇಶಗಳಿಗೆ ಪೋಗಿ ಆಯಾ ನಾಡುಗಳ ಶಿಕ್ಷಣ ಸಂಸ್ಥೆಗಳನ್ನು ಅವಲೋಕಿಸಿರುವರು. ಶಿಕ್ಷಣಶಾಸ್ತ್ರದಲ್ಲಿ ಎಲ್ಲಕ್ಕೂ ಪೆಚ್ಚಿನದೆನಿಸಿದ ಮಾಸ್ಟರ ಆಫ ಎಜ್ಯುಕೇಶನ್ ಎಂಬ ಪದವಿಯನ್ನು ಸಂಪಾದಿಸಿರುವರು. ಮುಂಬಯಿಯಂಥ ದೊಡ್ಡ ಪಟ್ಟಣದ ಶಾಲಾಕಮೀಟಿಯ ಸೆಕ್ರೆಟರಿಗಳಾಗಿ ಕೆಲಸಮಾಡುತ್ತಿದ್ದು ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸುವ ಹಲವು ಪ್ರಶ್ನೆಗಳ ಬಗ್ಗೆ ಒಳ್ಳೇ ಅನುಭವವನ್ನು ಪಡೆದಿರುವರು. ತಮ್ಮ ಅಭಿಪ್ರಾಯಗಳನ್ನು ಕಾಗದ ಪತ್ರಗಳಲ್ಲಿ ದೊರೆಯುವ ಮಾಹಿತಿಯಿಂದಲೂ ಲೆಕ್ಕ ಕೋಷ್ಟಕಗಳಿಂದಲೂ ಚೆನ್ನಾಗಿ ಸಮರ್ಥಿಸಿರುವರು. ಇವರ ಅಭಿಪ್ರಾಯಗಳು ಮನನೀಯವಾಗಿರುವವೆಂದು ನಮ್ಮ ದೇಶದ ಹೆಸರಾದ ಇಂಗ್ಲಿಷ ಹಾಗು ದೇಶಭಾಷೆಗಳ ವರ್ತಮಾನ ಪತ್ರಕಾರರು ಅಭಿಪ್ರಾಯಪಟ್ಟಿರುವರು. ಇಂಥ ಮಹತ್ವದ ಪ್ರಚಲಿತ ವಿಷಯದ ಬಗ್ಗೆ ನಮ್ಮ ಪ್ರಾಥಮಿಕ ಶಿಕ್ಷಕರಿಗೆ ಜ್ಞಾನವಿರುವದು ಅವಶ್ಯವಾದದ್ದು.

ಶ್ರೀ. ಪರೂಳೇಕರರ ಸೂಚನೆಗಳನ್ನು ಅಮಲಿನಲ್ಲಿ ತರುವದು ಪ್ರಾಥಮಿಕ ಶಿಕ್ಷಕರ ಕೈಯಲ್ಲಿಲ್ಲ. ಅವರು ಸೂಚಿಸುವ ಯೋಜನೆಗಳ ಬಗ್ಗೆ ಶಿಕ್ಷಕರ ದೃಷ್ಟಿಯಿಂದ ವಿಚಾರಮಾಡುವದು ನಮ್ಮೆಲ್ಲರ ಕರ್ತವ್ಯವು. ಇವುಗಳಲ್ಲಿ ನಮ್ಮಿಂದ ಆಗುವ ದೋಷಗಳನ್ನು ಅವರು ತೋರಿಸಿದ್ದಾರೆ, ನಾವು ಸುಧಾರಣೆ ಮಾಡಿಕೊಳ್ಳ ತಕ್ಕದ್ದು. ಈ ಬಗ್ಗೆ ಸದ್ಯದ ಅಭ್ಯಾಸಪತ್ರಿಕೆಯನ್ನು ಅನುಸರಿಸಿಯೇ ನಾವು ಏನು ಮಾಡಲು ಶಕ್ಯನಿರುವದೆಂಬದನ್ನು ನಿಷ್ಕರ್ಷಿಸಿ ಆ ಬಗ್ಗೆ ನಾವು ಕಾರ್ಯಪ್ರವೃತ್ತರಾಗುವದರಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಲಾಭವಿರುವದೆಂದು ಹೇಳಬಹುದು. ಈ ಬಗ್ಗೆ ನನ್ನ ಸೂಚನೆಗಳನ್ನು ಕೊಡುವ ಮೊದಲು ಶ್ರೀ. ಪರೂಳೇಕರರವರ ಅಭಿಪ್ರಾಯಗಳನ್ನು ತಕ್ಕಮಟ್ಟಿಗೆ ವಿಸ್ತಾರವಾಗಿ ನಾವು ಅವರು ಬರೆದಂತೆಯೇ ಮುಂದೆ ಕೊಟ್ಟಿರುವೆವು.

೧. ಸಾರ್ವತ್ರಿಕ ಶಿಕ್ಷಣದ ಪ್ರಶ್ನೆವು.

೧೯೩೬ನೇಯ ಇಸವಿಯ ಮಾರ್ಚ ತಿಂಗಳ ಕೊನೆಗೆ ಮುಂಬಯಿ ಇಲಾಖೆಯ ಬ್ರಿಟಿಷ ಜಿಲ್ಲೆಗಳ ಪ್ರಾಥಮಿಕ ಶಾಲೆಗಳಲ್ಲಿ ೧೧ ಲಕ್ಷ ೪೦ ಸಾವಿರ ವಿದ್ಯಾರ್ಥಿಗ

ಿದ್ದರು. ೧೯೩೧ನೆಯ ಇಸವಿಯ ಜನಗಣನೆಯ ಲೆಕ್ಕದಿಂದ ಈ ಜಿಲ್ಲೆಗಳ ಜನ
ಸಂಖ್ಯೆಯು ೨ಕೋಟಿ ೧೮ ಲಕ್ಷ ವಿರುವದೆಂದು ಗೊತ್ತಾಗಿರುವದು. ಅಂದರೆ
೧೦೦ ಜನರಲ್ಲಿ ೫.೨ ಜನರು ಪ್ರಾಥಮಿಕ ಶಿಕ್ಷಣವನ್ನು ಪಡೆಯುತ್ತಿದ್ದರೆಂದು
ಸಿದ್ಧವಾಗುವದು. ಆದರೆ ೬ರಿಂದ ೧೧ ವರುಷದೊಳಗಿನ ಹುಡುಗರು ಪ್ರಾಥಮಿಕ
ಶಿಕ್ಷಣವನ್ನು ಹೊಂದುವ ಸ್ಥಿತಿಯಲ್ಲಿರುವರೆಂದು ಎಣಿಸಿದರೆ ೧೦೦ ಜನರಲ್ಲಿ
೫೪ ಜನರು ಸಾಲೆಗಳಲ್ಲಿರತಕ್ಕದ್ದು; ಆದ್ದರಿಂದ ಸದ್ಯಕ್ಕೆ ನಮ್ಮ ಇಲಾಖೆಯೊಳಗೆ
ನೂವರಲ್ಲಿ ಒಬ್ಬ ಹುಡುಗನು ಮಾತ್ರ ಸಾಲೆಯಲ್ಲಿ ಕಲಿಯುತ್ತಿರುವನೆಂಬದು
ಸ್ಪಷ್ಟವು; ಅಂದರೆ ಸಾಲೆಗಳಲ್ಲಿ ಎಷ್ಟು ಹುಡುಗರಿಗೆ ಪ್ರಾಥಮಿಕ ಶಿಕ್ಷಣವು ದೊರೆ
ಯುತ್ತಿರುವದೋ ಅವರ ಇಮ್ಮಡಿ ಹುಡುಗರು ಶಿಕ್ಷಣದ ಲಾಭವಿಲ್ಲದೆ ನಿರಕ್ಷರ
ರಾಗಿ ಉಳಿಯುತ್ತಿರುವರು.

ಇನ್ನು ಈ ಸ್ವಲ್ಪ ಸಂಖ್ಯಾಕರಾದ ಹುಡುಗರ ಶಿಕ್ಷಣದ ಬಗ್ಗೆ ವೆಚ್ಚವಾಗು
ತ್ತಿರುವ ಹಣರಾಶಿಯನ್ನು ಕುರಿತು ವಿಚಾರಮಾಡೋಣ. ಇದರಿಂದ ಸದ್ಯದ
ಪ್ರಾಥಮಿಕ ಶಿಕ್ಷಣದ ಯೋಜನೆಯು ಒಟ್ಟಿನ ಮೇಲೆ ಎಷ್ಟು ಅಸಮಾಧಾನಕರ
ವಿರುವದೆಂಬದು ಮನವರಿಕೆಯಾಗುವದು. ೧೯೩೧-೩೨ರಲ್ಲಿ ನಮ್ಮ ಇಲಾಖೆ
ಯಲ್ಲಿ ಪ್ರಾಥಮಿಕ ಶಿಕ್ಷಣಕ್ಕಾಗಿ ಒಟ್ಟು ೨ಕೋಟಿ ೫ಲಕ್ಷ ರೂಪಾಯಿ ವೆಚ್ಚ
ವಾಯಿತು. ಇದರಲ್ಲಿ ಸರಕಾರದವರು ೧೮೦ಕ್ಕೆ ೫೮; ಸ್ಥಾನಿಕ ಸಂಘಗಳವರು
ನೂರಕ್ಕೆ ೩೧ ಈ ಪ್ರಮಾಣದಲ್ಲಿ ವೆಚ್ಚಮಾಡಿದರು. ಮಿಕ್ಕ ೧೦೦ರಲ್ಲಿ ೧೧ ಭಾಗವು
ಸೀ ಮೊದಲಾದ ಬಾಬುಗಳ ಉತ್ಪನ್ನವು ಇತ್ತು. ಪ್ರಾಥಮಿಕ ಶಿಕ್ಷಣವನ್ನು
ಹೊಂದುತ್ತಿರುವ ಪ್ರತಿಯೊಬ್ಬ ಹುಡುಗನ ಬಗ್ಗೆ ಆ ವರುಷ ೧೮ ರೂಪಾಯಿ
ವೆಚ್ಚವಾದಂತಾಯಿತು. ಪ್ರತಿಯೊಬ್ಬ ಹುಡುಗನ ಬಗ್ಗೆ ಇಷ್ಟೇ ಹಣವನ್ನು
ವೆಚ್ಚಮಾಡಿ ಶಿಕ್ಷಣಪಡೆಯುವ ವಯಸ್ಸಿನಲ್ಲಿರುವ ಎಲ್ಲ ಹುಡುಗರನ್ನು ಸಾಲೆಗೆ
ಜಮಮಾಡಿಕೊಂಡಿದ್ದರೆ ೫೪ ಕೋಟಿ ರೂಪಾಯಿ ಬೇಕಾಗುತ್ತಿದ್ದವು.

ಮುಂಬಯಿ ಸರಕಾರದವರ ಸದ್ಯದ ಆರ್ಥಿಕ ಸ್ಥಿತಿಯನ್ನು ಕುರಿತು ವಿಚಾರಿ
ಸಿದರೆ, ಅದು ಸಮಾಧಾನಕರವಿಲ್ಲೆಂಬದು ಎಲ್ಲರಿಗೂ ಗೊತ್ತಿರುವ ಮಾತು.
ಸದ್ಯಕ್ಕೆ ಇಡಿ ಭೂಮಂಡಲದ ಉದ್ಯೋಗಗಳು ಕುಗ್ಗಿವೆ; ವ್ಯಾಪಾರವು ಮಂದ
ವಾಗಿದೆ; ಈ ಮೂಲಕ ಎಲ್ಲ ಸರಕಾರಗಳ ಉತ್ಪನ್ನವು ಕಡಿಮೆಯಾಗಲಾರಂಭಿಸಿದೆ.
ಇಂಥ ಕಗ್ಗಾಲದಲ್ಲಿ ವರ್ಷಾನುವರ್ಷ ಹೆಚ್ಚೆಚ್ಚು ಹಣವನ್ನು ಪ್ರಾಥಮಿಕ ಶಿಕ್ಷಣದ
ಬಗ್ಗೆ ವೆಚ್ಚಮಾಡುವದು ಸರಕಾರವವರಿಂದ ಆಗದಮಾತು. ಪ್ರಜೆಗಳ ಮಕ್ಕಳ
ಪ್ರಾಥಮಿಕ ಶಿಕ್ಷಣದ ಬಗ್ಗೆ ಸಮರ್ಪಕವಾದ ಶಿಕ್ಷಣಯೋಜನೆಗಳನ್ನು ಏರ್ಪಡಿ

ಸುವವರಿಲ್ಲರು ಒಂದು ಬಗೆಯ ಜವಾಬುದಾರಿಯನ್ನು ಹೊತ್ತಿರುವರೆಂಬದು ನಿರ್ವಿವಾದವಾದದ್ದು. ಆದ್ದರಿಂದ ಈ ಬಿಗುವಿನ ಪ್ರಶ್ನವನ್ನು ಸಮಾಧಾನಕರವಾಗಿ ಬಿಡಿಸಲಿಕ್ಕೆ ನಾವೆಲ್ಲ ದೀರ್ಘವಿಚಾರ ಮಾಡತಕ್ಕದ್ದು. ಹಾಸಿಗೆ ನೋಡಿ ಕಾಲುಚಾಚಬೇಕೆಂಬ ಒಂದು ನಾಣ್ಣುಡಿಯಿರುವದಷ್ಟೇ. ಇದನ್ನು ಅನುಸರಿಸಿ ನಮ್ಮ ಸದ್ಯದ ಹಣದಲ್ಲಿಯೇ ಈ ಕಾರ್ಯವನ್ನು ಕೈಗೂಡಿಸಿಕೊಳ್ಳುವ ಹಂಚಿಕೆಯನ್ನು ಹಾಕಬೇಕಾಗಿದೆ. ಪ್ರಾಥಮಿಕ ಶಿಕ್ಷಣವನ್ನು ಬೆಳಿಸಿ ಸದ್ಯಕ್ಕಿಂತ ಜೆಚ್ಚು ಹುಡುಗರು ಶಿಕ್ಷಣದ ಲಾಭವನ್ನು ಪಡೆಯುವಂತೆ ನಾವು ಯೋಜನೆ ಮಾಡಲಿಕ್ಕೇ ಬೇಕಾಗಿದೆ. ಸುಮ್ಮನೆ ಕುಳಿತು ದೇವರ ದಯದಿಂದ ತೀವ್ರವೇ ಅನುಕೂಲಕಾಲವು ಒದಗಿ, ಹೆಚ್ಚು ಹಣವು ನಮ್ಮ ಕೈಸೇರಬಹುದೆಂಬ ಆಶೆಯಿಂದ ಕಾಲಹರಣಮಾಡುವದು ಸರ್ವಥಾ ಸರಿಯಲ್ಲ. ಸರಕಾರದವರ ಆರ್ಥಿಕ ಸ್ಥಿತಿಯು ಕುಗ್ಗಿದಂತೆಯೇ ಸ್ಥಾನಿಕ ಸಂಘಗಳ ಆರ್ಥಿಕಸ್ಥಿತಿಯೂ ಹೀನಾವಸ್ಥೆಯಲ್ಲಿರುವದು. ಇವು ಸುಧಾರಿಸುವ ಲಕ್ಷಣಗಳು ಅಸ್ಪಷ್ಟವಾಗಿ ಸಹ ಕಾಣಲೊಲ್ಲವು. ಇತ್ತ ಜನಸಾಮಾನ್ಯರ ಶಿಕ್ಷಣವನ್ನು ಹಿಂದಕ್ಕೆ ಹಾಕುವ ದಿವಸಗಳು ಅಸ್ತವಾಗಿವೆ. ಸಾರ್ವತ್ರಿಕ ಶಿಕ್ಷಣವು ಜನಾಂಗದ ಏಳಿಗೆಗೆ ಅತ್ಯಾವಶ್ಯಕವಾದುದೆಂಬ ಮಾತು ಸರ್ವಸಮ್ಮತವಾದದ್ದಿದೆ. ಆದ್ದರಿಂದ ನಮ್ಮ ಸದ್ಯದ ಬೇಡಿಕೆಗಳು ಹಾಗು ಇವುಗಳನ್ನು ಪೂರಯಿಸಿಕೊಳ್ಳಲಿಕ್ಕೆ ನಮ್ಮಲ್ಲಿರುವ ಹಣ ಇವೆರಡನ್ನೂ ಕುರಿತು ವಿಚಾರಮಾಡಿ ಕೈಯಲ್ಲಿರುವ ಗಂಟಿನಿಂದ ಜನಸಾಮಾನ್ಯರ ಶಿಕ್ಷಣವನ್ನು ಹೆಚ್ಚಿಸಲಿಕ್ಕೆ ಯಾವ ಉಪಾಯಗಳನ್ನು ಮಾಡಬೇಕೆಂಬದನ್ನು ನಿಷ್ಕರ್ಷಿಸಬೇಕಾಗಿದೆ.

೨. ನಾವು ಮುಂದಡಿಯಿಡುತ್ತಿರುವೆವೋ ?

ನಮ್ಮ ಜನಾಂಗವು ಅಕ್ಷರಜ್ಞವಾಗಲು ಸದ್ಯದ ವೇಗದಿಂದಲೇ ನಾವು ಸಾಗಿದರೆ ಎಷ್ಟು ಕಾಲಾವಧಿಯು ಬೇಕಾಗುವದೆಂಬದನ್ನು ಕುರಿತು ವಿಚಾರ ಮಾಡೋಣ. ೧೮೩೮ರಲ್ಲಿ ಸರಕಾರದವರ ಆಜ್ಞೆಯಮೇರೆಗೆ ಮಿ. ಆಡಾಮ್ಸ್ ಎಂಬ ಗೃಹಸ್ಥರು ಬಂಗಾಲ ಪ್ರಾಂತದ ಶಿಕ್ಷಣದ ಸ್ಥಿತಿಯನ್ನು ವಿವರವಾಗಿ ಅಭ್ಯಾಸಿಸಿದರು. ಆಗ ಬಂಗಾಲದ ಒಟ್ಟು ಜನಸಂಖ್ಯೆಯಲ್ಲಿ ೧೦೦ ರಲ್ಲಿ ೫·೮ ಜನರು ಅಕ್ಷರಜ್ಞರಿದ್ದರು. ೫ ವರುಷ ಮೀರಿದವರಲ್ಲಿ ನೂರರಲ್ಲಿ ೬·೫ ಜನರು ಸಾಕ್ಷರರಿದ್ದರು. ಇದು ಸುಮಾರು ೧೦೦ ವರುಷಗಳ ಹಿಂದಿನ ಮಾತು. ೧೯೩೧ ರಲ್ಲಿ ಆದ ಜನಗಣನೆಯ ಮೇರೆಗೆ ಈ ಸಂಖ್ಯೆಗಳು ೮ ಹಾಗು ೯·೫ ಇರುತ್ತವೆ. ಆ ಕಾಲದ ಬಂಗಾಲದ ಸ್ಥಿತಿಯಂತೆಯೇ ಮುಂಬಯಿ ಇಲಾಖೆಯ ಸ್ಥಿತಿಯೂ ಇತ್ತೆಂದೆನ್ನಲು ಕೆಲವು ಆಧಾರಗಳಿರುವವು. ಸದ್ಯಕ್ಕಾದರೂ ಇಡಿ ಹಿಂದುಸ್ತಾ

ನದ ಸ್ಥಿತಿಯು ಬಂಗಾಲದ ಸ್ಥಿತಿಯಿಂದ ವಿಶೇಷ ಭಿನ್ನವಾಗಿಲ್ಲವೆಂದು ಎಣಿಸ ಬಹುದು. ಈ ಕೆಲವು ವಿಶೇಷ ಜೆಜ್ಜುಕಡಿಮೆಗಳಿಲ್ಲದ ಗ್ರಹಿಕೆಗಳನ್ನು ಒಪ್ಪಿ ಕೊಂಡರೆ, ಕಳೆದ ೧೦೦ ವರುಷಗಳಲ್ಲಿ ನಮ್ಮ ದೇಶದ ಸಾಕ್ಷರತೆಯ ಪ್ರಮಾಣವು ನೂರಕ್ಕೆ ೨ ರಂತೆ ಮಾತ್ರ ಮುಂದುವರಿದಿರುವದೆಂದು ಗೊತ್ತಾಗುವದು. ಈ ಅವಧಿಯಲ್ಲಿ ಸರಕಾರದವರು ಸಾಮಾನ್ಯ ಜನರಲ್ಲಿ ಪ್ರಾಥಮಿಕ ಶಿಕ್ಷಣದ ಪ್ರಸಾರವು ಜೆಚ್ಚಾಗಲಿಕ್ಕಾಗಿ ಅನೇಕ ಪ್ರಯತ್ನಗಳನ್ನು ಮಾಡುತ್ತಿರುವರೆಂಬದನ್ನು ನಾವು ಮರೆಯಲಾಗದು; ಹಣವನ್ನಾದರೂ ಹೆಚ್ಚಾಗಿ ವೆಚ್ಚಮಾಡುತ್ತಿರುವರೆಂಬ ದನ್ನೂ ನಾವು ಮರೆಯಲಾಗದು. ಹೀಗಿದ್ದರೂ ಸಾಕ್ಷರತೆಯು ತೀರ ಮಂದ ವಾಗಿ ಮುಂದಡಿಯಿಡುತ್ತಿರುವದೆಂಬದು ಲಕ್ಷದಲ್ಲಿಡತಕ್ಕ ಮಾತು.

ಈ ಸಂಗತಿಯು ಎಂಥ ಆಶಾವಾದಿಯನ್ನೂ ಎದೆಗುಂದಿಸುವದಷ್ಟೇ. ನಮ್ಮ ಪ್ರಾಥಮಿಕ ಶಿಕ್ಷಣದ ಯೋಜನೆಯಲ್ಲಿ ಎಲ್ಲಿಯಾದರೂ ದೊಡ್ಡ ಕೊಂಕು ಇರ ಲಿಕ್ಕೇ ಬೇಕು. ಇದು ಬಲವಾದ ಬೇನೆಯಿಂದ ಬಳಲುತ್ತಿರುವದೆಂಬದು ನಿರ್ವಿ ವಾದವು. ಇದಕ್ಕೆ ಯೋಗ್ಯ ಉಪಾಯವನ್ನು ಕಂಡುಹಿಡಿಯಲಿಕ್ಕೇ ಬೇಕು. ಇಂಗ್ಲಂಡ, ಜರ್ಮನಿ, ಜಪಾನ ಈ ಮೊದಲಾದ ರಾಷ್ಟ್ರಗಳು ಈಗಿನ ಕಾಲದಲ್ಲಿ ಸುಧಾರಿಸಿದ ಜನಾಂಗಗಳಲ್ಲಿ ಮೇಲುಪಂಕ್ತಿಯನ್ನು ಪಡೆದಿರುವವಷ್ಟೇ. ಅವರಲ್ಲಿ ಶಿಕ್ಷಣ ಪ್ರಸಾರದ ಪ್ರಮಾಣವು ೯೦ ರಿಂದ ೧೦೦ ರ ವರೆಗೆ ಇರುವದು. ಅಂದರೆ ಅವರ ನಿರಕ್ಷರತೆಯ ಪ್ರಮಾಣವೇ ನಮ್ಮ ಸಾಕ್ಷರತೆಯ ಪ್ರಮಾಣವಾಗಿದೆ. ಈ ದೇಶಗಳಲ್ಲಿ ಒಂದಾನೊಂದು ಸಮಯದಲ್ಲಿ ಪ್ರಾಥಮಿಕ ಶಿಕ್ಷಣದ ಸ್ಥಿತಿಯು ಸದ್ಯಕ್ಕೆ ನಮ್ಮ ದೇಶದಲ್ಲಿರುವಂತೆಯೇ ಇತ್ತು. ಜನಸಾಮಾನ್ಯರ ಶಿಕ್ಷಣವನ್ನು ಮುಂದುವರಿಸುವ ಬಿಗಿಯಾದ ಪ್ರಶ್ನವನ್ನು ಆ ಕಾಲದಲ್ಲಿ ಅವರು ಬಿಡಿಸಲೇ ಬೇಕಾಯಿತು. ಆಗ ಅವರು ಯಾವ ಉಪಾಯಗಳನ್ನು ಕೈಕೊಂಡರು? ಇವುಗಳ ಪರಿಣಾಮವು ಅಲ್ಲಿ ಏನಾಯಿತು ? ಇವರಿಗೆ ಬಂದ ಅನುಭವದ ಲಾಭವನ್ನು ಇಂದು ನಾವು ಮಾಡಿಕೊಳ್ಳಬಹುದಾಗಿದೆಯೋ ? ಈ ಪ್ರಶ್ನಗಳನ್ನು ಕುರಿತು ಕುಸು ವಿಚಾರಿಸೋಣ

೩. ವೆಚ್ಚವೂ ಅದರ ಪ್ರತಿಫಲವೂ.

ಸಾಯಮನ್ ಕಮಿಶನದವರು ಹಿಂದುಸ್ತಾನದ ರಾಜಕೀಯ ಸ್ಥಿತಿಯನ್ನು ಕುರಿತು ವಿಚಾರ ಮಾಡಲಿಕ್ಕೆ ಇಲ್ಲಿಗೆ ಬಂದಾಗ ಇಲ್ಲಿಯ ಶಿಕ್ಷಣ ಪ್ರಪಂಚದ ಬಹುಮುಖವಾದ ಪ್ರಶ್ನಗಳನ್ನು ಕುರಿತು ಸೂಕ್ಷ್ಮವಾಗಿ ವಿಚಾರಿಸಿ ತಮಗೆ ಒಂದು ವರದಿಯನ್ನು ಒಪ್ಪಿಸುವ ಬಗ್ಗೆ ತಜ್ಞರ ಒಂದು ಕವಿಟಿಯನ್ನು ನೇಮಿಸಿ

ದರು. ಈ ಕವಿಯೊಟಿಯು ಅದರ ಪ್ರೆಸಿಡೆಂಟರ ಹೆಸರಿನಿಂದ ಹೊರಟಾಗ ಕವಿಯೊಟಿಯೆಂದು ಪ್ರಸಿದ್ಧವಾಗಿದೆ. ಇವರು ಪ್ರಾಥಮಿಕ ಶಿಕ್ಷಣಕ್ಕಾಗಿ ಸಾಲೆಗೆ ಬಂದ ವಿದ್ಯಾರ್ಥಿಗಳಲ್ಲಿ ನಾಲ್ಕು ಇಯತ್ತ್ರೆಗಳನ್ನು ಮುಗಿಸುವದರೊಳಗಾಗಿಯೇ ಸಾಲೆ ಬಿಡುವವರ ಸಂಖ್ಯೆಯನ್ನೂ ಒಂದೇ ಇಯತ್ತ್ರೆಯಲ್ಲಿ ಒಂದಕ್ಕಿಂತ ಜೆಚ್ಚು ವರುಷ ಕಲಿಯುತ್ತ, ಕೊಳೆಯುತ್ತ, ಉಳಿಯುವವರ ಸಂಖ್ಯೆಯನ್ನೂ ಗಣನಮಾಡಿ ಈ ಎಲ್ಲ ಹುಡುಗರು ಸಾಲೆಗೆ ಬರುತ್ತಿರುವವರ ಸಂಖ್ಯೆಯು ಜೆಚ್ಚಾಗಿ ತೋರಲಿಕ್ಕೆ ಕಾರಣರಾದರೂ ನಿರಕ್ಷರಿಗಳಾಗಿಯೇ ಉಳಿದು ಸರಕಾರದವರು ಪ್ರಾಥಮಿಕ ಶಿಕ್ಷಣಕ್ಕಾಗಿ ವೆಚ್ಚಮಾಡಿದ ಹಣರಾಶಿಯ ಭಾಗವನ್ನು ನಿರರ್ಥಕಗೊಳಿಸಲಿಕ್ಕೆ ಮಾತ್ರ ಕಾರಣರಾಗುವರೆಂದು ಅಭಿಪ್ರಾಯಪಟ್ಟರು. ಹೀಗೆ ಪ್ರಚಂಡವಾದ ಹಣದ ಹೊಳೆಯು ಸಮುದ್ರಕ್ಕೆ ಹರಿದು ಹೋಗುವ ನೀರಿನಂತೆ ನಿರರ್ಥಕವಾಗುತ್ತಿರುವಾಗ ಪ್ರಾಥಮಿಕ ಶಿಕ್ಷಣಕ್ಕಾಗಿ ಜೆಚ್ಚು ಹಣವನ್ನು ವೆಚ್ಚ ಮಾಡುವ ಹಂಬಲಕ್ಕೆ ಬೀಳುವ ಮೊದಲು ಇದ್ದ ಹಣವನ್ನೇ ಹೆಚ್ಚಿಗೆ ಪರಿಣಾಮಕರವಾಗುವಂತೆ ಮಾಡುವ ತೊಡಕುಳ್ಳ ಪ್ರಶ್ನವನ್ನು ಬಿಡಿಸುವ ಯೋಜನೆಯನ್ನು ಮೊದಲು ಮಾಡುವದು ಆವಶ್ಯಕವಾದದ್ದೆಂದು ಅಭಿಪ್ರಾಯಪಟ್ಟರು. ಸ್ವಲ್ಪದರಲ್ಲಿ ಜೇಳುವ ದಾದರೆ, ಜೆಚ್ಚು ಹುಡುಗರಿಗೆ ಶಿಕ್ಷಣ ಕೊಡುವ ಹವ್ಯಾಸಕ್ಕೆ ಬೀಳುವದಕ್ಕಿಂತ ಕಡಿಪೆ ಹುಡುಗರಿಗೇ ವಿದ್ಯೆಯು ದೊರೆಯದೊಲ್ಲದೇಕೆ, ಕೊಟ್ಟ ಶಿಕ್ಷಣವು ಸದ್ಯಕ್ಕಿಂತ ಫಲಕಾರಿಯಾಗುವಂತೆ ನೋಡಿಕೊಳ್ಳುವದು ಅಗತ್ಯದ ಪ್ರಶ್ನವೆಂದು ಅವರು ಅಭಿಪ್ರಾಯಪಟ್ಟರು. ಆದರೆ ಸಾರ್ವತ್ರಿಕ ಶಿಕ್ಷಣದ ಆರಂಭದ ಸಮಯದಲ್ಲಿ ಈ ಬಗೆಯ ಅಪವ್ಯಯವು ತಕ್ಕ ಮಟ್ಟಿಗೆ ಆಗೇ ಆಗುವದು. ಇದನ್ನು ನಿಲ್ಲಿಸುವದು ಅರಿದಾದದ್ದು. ಈ ಬಗೆಯ ಅಪವ್ಯಯವು ಒತ್ತಾಯದ ಶಿಕ್ಷಣದ ಒಂದು ಭಾಗವು; ಇದಕ್ಕಾಗಿ ಒತ್ತಾಯದ ಶಿಕ್ಷಣಯೋಜನೆಯನ್ನು ಮುಂದಕ್ಕೆ ಹಾಕುವದೆಂದರೆ, ಬಹು ಜನ ಶಿಕ್ಷಣಯೋಜನೆಯ ಪ್ರಗತಿಯನ್ನು ನಿಲ್ಲಿಸಿಬಿಡುವದು. ಸಾಲೆಗೆ ಬಂದ ೧೦೦ ಹುಡುಗರಲ್ಲಿ ೨೦ ಹುಡುಗರು ಮಾತ್ರ ನಾಲ್ಕನೆಯ ಇಯತ್ತ್ರೆಗೆ ಹೋಗುವರೆಂದೂ, ಈ ಇಯತ್ತ್ರೆಯನ್ನು ಓದಿ ಮುಗಿಸಿದ ಹೊರತು ಹುಡುಗನು ಅಕ್ಷರಜ್ಞನಾಗಲಾರನೆಂದೂ, ಇದಕ್ಕೂ ಮೊದಲು ಅವನು ಸಾಲೆ ಬಿಟ್ಟರೆ ಅವನ ಬಗ್ಗೆ ವೆಚ್ಚ ಮಾಡಿದ ಹಣವು ಹೊಳೆಯಲ್ಲಿ ತೊಳೆದ ಹುಣಸೆಯಂತೆ ವ್ಯರ್ಥವಾಗುವದೆಂದೂ ಕೆಲವರ ಮತವು. ಈ ಮತವು ನಮಗೆ ಸರಿಯೆನಿಸುವದಿಲ್ಲ. ಯಾವದೊಂದು ಜನಾಂಗವು ಶಿಕ್ಷಣದಲ್ಲಿ ಪ್ರಗತಿಯನ್ನು ಪಡೆಯಬೇಕೆಂದು ಆರಂಭದ ಪ್ರಯತ್ನಗಳನ್ನು ಮಾಡುತ್ತಿರುವಾಗ, ಬಡ ಜನರ ಮಕ್ಕಳಲ್ಲಿ ಸಾಲೆಗೆ ಹೋಗುವ ರೂಢಿಯು ನಲೆಗೊಳ್ಳುವದಕ್ಕಾಗಿ ಮಾಡಿದ ಉಪಾಯಗಳು ಒಳ್ಳೇ

ಮಹತ್ವದವಾಗಿರುತ್ತವೆ. ಆವು ಪೂರ್ಣ ಯಶಸ್ವಿಯಾಗದಿದ್ದರೂ ಅವಕ್ಕೆ ಬೆಲೆ ಇರುವದು. ತಾಯ್ತಂದೆಗಳಲ್ಲಿ ತಮ್ಮ ಹುಡುಗರನ್ನು ಸಾಲೆಗೆ ಕಳಿಸಬೇಕೆಂಬ ಕಲ್ಪನೆಯನ್ನು ನಾವು ಅಂಕುರಿಸಿ ದೃಢಪಡಿಸಬೇಕಾಗಿರುತ್ತದೆ. ಮುಂದಿನ ಪೀಳಿಗೆಯಲ್ಲಿ ಆರೆಕಲಿತ ತಾಯ್ತಂದೆಗಳು ತಮ್ಮ ಮಕ್ಕಳನ್ನು ತಮಗಿಂತ ಹೆಚ್ಚು ನಿಯಮಿತವಾಗಿಯೂ ಹೆಚ್ಚು ಕಾಲದವರೆಗೂ ಸಾಲೆಗೆ ಕಳಿಸುವರು. ಇದು ಸಾಮಾನ್ಯ ಲಾಭವಲ್ಲ.

ಈ ಮಾತು ಹಾಗಿರಲಿ. ನಮ್ಮ ದೇಶದಲ್ಲಿ ಸದ್ಯಕ್ಕೆ ಸಾಕ್ಷರರ ಸಂಖ್ಯೆಯು ೧೦೦ಕ್ಕೆ ಹತ್ತು ಸಹ ಇಲ್ಲ. ಇಂಥ ಪರಿಸ್ಥಿತಿಯಲ್ಲಿ ನಾವು ನಾಲ್ಕನೆಯ ಇಯತ್ತೆಯು ಆಗುವದರೊಳಗಾಗಿಯೇ ಸಾಲೆ ಬಿಡುವ ಹುಡುಗರ ಸಂಖ್ಯೆಯನ್ನು ನೋಡಿ ಎದೆಯೊಡಕೊಳ್ಳುವದು ಸರಿಯಲ್ಲ. ಇದರಿಂದ ನಮ್ಮ ರಾಷ್ಟ್ರಕ್ಕೆ ಸರ್ವಥಾ ಹಿತವಾಗದು. ಸಾಲೆಗೆ ಬಂದು ನಾಲ್ಕು ಇಯತ್ತೆಗಳಾಗುವದರೊಳಗಾಗಿಯೇ ಸಾಲೆ ಬಿಡುವ ಹುಡುಗರ ಸಂಖ್ಯೆಯು ಇಂಗ್ಲಂಡದಲ್ಲಿ ಒಂದು ಸಮಯದಲ್ಲಿ ನಮ್ಮಲ್ಲಿಯಷ್ಟೇ ಇತ್ತು. ಈ ಕುಂದನ್ನು ಕಂಡು ಅವರು ಧೈರ್ಯ ಬಿಡಲಿಲ್ಲ. ಜನಸಾಮಾನ್ಯದ ಶಿಕ್ಷಣಯೋಜನೆಯನ್ನು ಧೈರ್ಯದಿಂದ ಮುಂದುವರಿಸಿದರು. ೧೮೭೫ರಲ್ಲಿ (೬ನೆಯ ಇಯತ್ತೆಯ ಶಿಕ್ಷಣವು ಆರಂಭವಾಗಿ ೧೦ ವರುಷಗಳಾದ ಬಳಿಕ) ಲಂಡನದ ಬೋರ್ಡ ಶಾಲೆಗಳ ಮೊದಲಿನ ನಾಲ್ಕು ಇಯತ್ತೆಗಳಲ್ಲಿ ಪ್ರತ್ಯೇಕವಾಗಿ ಒಂದೊಂದು ಇಯತ್ತೆಯಲ್ಲಿದ್ದ ಹುಡುಗರ ಸಂಖ್ಯೆಯ ನೂರರಲ್ಲಿಯ ಪ್ರಮಾಣವು ೧೯೩೨ರಲ್ಲಿ ಮುಂಬಯಿಯ ಸಾಲೆಗಳ ಬೇರೆ ಬೇರೆ ಇಯತ್ತೆಗಳಲ್ಲಿದ್ದ ಹುಡುಗರ ಸಂಖ್ಯೆಯ ಪ್ರಮಾಣವನ್ನು ತಕ್ಕಮಟ್ಟಿಗೆ ಹೋಲುತ್ತದೆಂಬದನ್ನು ನಾವು ಲಕ್ಷ್ಯದಲ್ಲಿಡಬೇಕು. ಹೀಗೆಯೇ ೧೮೭೧ರಲ್ಲಿ ಇಂಗ್ಲಂಡದ ಪ್ರಾಥಮಿಕ ಸಾಲೆಗಳ ಹುಡುಗರ ಹಾಜರಿಯು ಸರಾಸರಿಯು ೧೦೦ಕ್ಕೆ ೬೮ ಮಾತ್ರವಿತ್ತು; ೧೯೩೫ರಲ್ಲಿ ಅದು ನೂರಕ್ಕೆ ೮೨ ಆಗಿತ್ತು; ಈ ಮಾತನ್ನೂ ನಾವು ಮರೆಯಲಾಗದು.

೪. ಬಾಲಕರ ವರ್ಗವನ್ನು ತೆಗೆದು ಬಿಡಿರಿ.

೧೮೭೨ರ ವರೆಗೆ ಮುಂಬಯಿ ಇಲಾಖೆಯ ಪ್ರಾಥಮಿಕ ಸಾಲೆಗಳಲ್ಲಿ ಬಾಲಕರ ವರ್ಗವೆಂಬ ಪ್ರತ್ಯೇಕ ವರ್ಗವು ಇರಲಿಲ್ಲ. ಇದನ್ನು ಪ್ರತ್ಯೇಕವಾಗಿ ಮಾಡಿ ಆ ವರ್ಗದ ಚಿಕ್ಕ ಮಕ್ಕಳಿಗೆ ವಿಶೇಷ ಮನೋರಂಜಕವಾದ ಪದ್ಧತಿಗಳಿಂದ ಶಿಕ್ಷಣ ಕೊಡುವ ಪರಿಪಾಠವು ಆ ಬಳಿಕ ರೂಢಿಯಲ್ಲಿ ಬಂದಿರುವದು. ಆದರೆ ಹಿಂದಿನ ಪರಿಸ್ಥಿತಿಯು ಈಗ ಉಳಿದಿರುವದಿಲ್ಲ. ಈ ಇಯತ್ತೆಯು ನಮ್ಮ ಪ್ರಾಥಮಿಕ ಸಾಲೆಗಳಲ್ಲಿ ಇನ್ನು ಬೇಕಾಗಿಲ್ಲ. ನಾವು ಶಿಕ್ಷಣವನ್ನು ಸಾರ್ವತ್ರಿಕವಾಗಿ ಮಾಡಿದರೆ,

ಸಾಲೆಗೆ ಬರುವ ಪ್ರತಿಯೊಬ್ಬ ಹುಡುಗನಿಗಾಗಿ ಇರುವ ಸ್ಥಳವು ನಮಗೆ ಒಳ್ಳೇ ಮಹತ್ವದ್ದಾಗುವದು. ಮೇಲಾಗಿ, ಹಣದ ವೆಚ್ಚದ ದೃಷ್ಟಿಯಿಂದ ಆದಷ್ಟು ಕಡಿಮೆ ವರುಷಗಳಲ್ಲಿ ಪ್ರಾಥಮಿಕ ಶಿಕ್ಷಣದ ಅಭ್ಯಾಸವು ಮುಗಿಯುವದು ಮಹತ್ವದ್ದಾಗುವದು. ಹಿಂದುಸ್ತಾನದ ಕೆಲವು ಪ್ರಾಂತಗಳಲ್ಲಿ ಪ್ರಾಥಮಿಕ ಅಭ್ಯಾಸವು ನಾಲ್ಕು ವರ್ಷ ಮಾತ್ರ ನಡೆಯುತ್ತದೆ. ನಾಲ್ಕು ವರ್ಷ ಸಾಲೆಗೆ ಬರುವ ಹುಡುಗನನ್ನು ಸಾಕ್ಷರನನ್ನಾಗಿ ಮಾಡುವದು ಸಾಧ್ಯವು ಎಂದು ಹಾರಟಾಗ ಕಮೀಟಿಯವರೂ ಅಭಿಪ್ರಾಯಪಟ್ಟಿರುವರು. ಬಂಗಾಲ, ಪಂಜಾಬ, ಮಧ್ಯ ಪ್ರಾಂತ ಈ ಪ್ರದೇಶಗಳಲ್ಲಿ ಒತ್ತಾಯದ ಪ್ರಾಥಮಿಕ ಶಿಕ್ಷಣವು ಮೊದಲಿನ ನಾಲ್ಕು ವರ್ಷಗಳ ವರೆಗೆ ಮಾತ್ರ ಇರುತ್ತದೆ. ೧೯೦೭ರ ವರೆಗೆ ಜಪಾನದ ಒತ್ತಾಯದ ಪ್ರಾಥಮಿಕ ಶಿಕ್ಷಣದ ಅಭ್ಯಾಸವು ನಾಲ್ಕು ವರ್ಷಗಳಿಗೆ ಮುಗಿಯುತ್ತಿತ್ತು.

ಹೀಗೆ ಸದ್ಯದ ಐದು ವರುಷ ನಡೆಯುವ ಪ್ರಾಥಮಿಕ ಶಿಕ್ಷಣವನ್ನು ನಾಲ್ಕು ವರುಷಗಳಲ್ಲಿಯೇ ಮುಗಿಸಿದರೆ ಎಷ್ಟೋ ಹಣವು ಉಳಿಯುವದು. ಇದನ್ನು ಪ್ರಾಥಮಿಕ ಶಿಕ್ಷಣದ ಪ್ರಸಾರಕ್ಕಾಗಿ ವಿನಿಯೋಗಿಸಬಹುದು. ಈ ಯೋಜನೆಯಿಂದ ಸದ್ಯದ ವೆಚ್ಚದ ೫ನೆ ಭಾಗವು ಉಳಿಯುವಿದ್ದರೂ ಸಾಕಷ್ಟು ಹಣವು ಉಳಿಯುವದೆಂಬದರಲ್ಲಿ ಸಂದೇಹವಿಲ್ಲ. ಈ ಹಣವನ್ನು ಶಿಕ್ಷಣ ಪ್ರಸಾರವನ್ನು ಬಲವಾಗಿ ಮುಂದುವರಿಸುವದರಲ್ಲಿ ಉಪಯೋಗಿಸಬಹುದೆಂಬದರಲ್ಲಿಯೂ ಸಂದೇಹವಿಲ್ಲ. ೧೯೨೪ರಲ್ಲಿ ಮುಂಬಯಿ ಸರಕಾರದವರು ಪ್ರಾಥಮಿಕ ಹಾಗು ಮಾಧ್ಯಮಿಕ ಶಿಕ್ಷಣ ಕಮಿಟಿಯೊಂದನ್ನು ಕೂಡಿಸಿದ್ದರು. ಸದ್ಯದ ೫ ವರುಷದ ಅಭ್ಯಾಸವನ್ನು ನಾಲ್ಕು ವರ್ಷಗಳಲ್ಲಿ ಮುಗಿಸಬಹುದೆಂದು ಅವರಾದರೂ ಅಭಿಪ್ರಾಯಪಟ್ಟಿರುವರು.

೫. ಒತ್ತಾಯದ ಶಿಕ್ಷಣದ ಆರಂಭದ ವಯಸ್ಸನ್ನು ೬ ರಿಂದ ೭ ಮಾಡಬೇಕು.

೧೯೨೩ರ ಪ್ರಾಥಮಿಕ ಶಿಕ್ಷಣದ ಆಕ್ಟಿನ ಮೇರೆಗೆ ಹುಡುಗನು ೬ ವರುಷದವನಾದ ಕೂಡಲೆ ಸಾಲೆಗೆ ಹೆಸರು ಹಚ್ಚಲೇಬೇಕೆಂಬ ನಿರ್ಬಂಧವಿರುವದು. ಇದು ಇಷ್ಟವಾದದ್ದು; ಸುಧಾರಿಸಿದ ಹಲವು ರಾಷ್ಟ್ರಗಳಲ್ಲಿ ಒತ್ತಾಯದ ಶಿಕ್ಷಣವು ಆರಂಭವು ಈ ವಯಸ್ಸಿಗೇ ಆಗುವದು.

ಆದರೆ ಈ ಆರು ವರುಷದ ವಯಸ್ಸಿನ ನಿರ್ಬಂಧವು ಬಹುತರವಾಗಿ ಔದ್ಯೋಗಿಕ ವೃತ್ತಿಯಿಂದ ಜೀವಿಸುವ ರಾಷ್ಟ್ರಗಳಲ್ಲಿ ಇರುವದು. ಕೃಷಿಯಿಂದಲೇ ಮುಖ್ಯವಾಗಿ ಉಪಜೀವಿಸುವ ದೇಶಗಳಲ್ಲಿ ಈ ನಿರ್ಬಂಧವು ೭ ವರ್ಷಗಳಾದ ಬಳಿಕ ಅಮಲಿ

ನಲ್ಲಿ ಬರುವದು. ಇತ್ತೀಗ ಮುಂದುವರಿಯುತ್ತಿರುವ ದೇಶಗಳಲ್ಲಿಯೂ ನಾವು ೭ ವರ್ಷದ ವಯಸ್ಸಿನ ನಿರ್ಬಂಧವನ್ನೇ ಕಾಣುವೆವು. ಜನರು ಅಂಗಲಾಗಿ ವಾಸಿಸುವ ದೇಶಗಳಲ್ಲಿಯೂ ೭ ವರ್ಷದ ವಯಸ್ಸಿನ ನಿರ್ಬಂಧವೇ ರೂಢವಾಗಿರುವದು.

ಸಣ್ಣ ಹುಡುಗರನ್ನು ಸಾಲೆಗೆ ಕಳಿಸುವದು ಇಷ್ಟವಾದದ್ದೇ ಸರಿ. ಇಂಥ ಸಾಲೆಗಳಲ್ಲಿ ಅವರು ಸುಖದಿಂದ ಕಾಲಕಳೆಯುವಂತೆಯೂ ಸಾಲೆಯ ಸ್ಥಿತಿಯು ಮನೆಯ ಸ್ಥಿತಿಯನ್ನು ಬಹಳವಾಗಿ ಹೋಲುವಂತೆಯೂ ವ್ಯವಸ್ಥೆಯಿಡುವದು ಮಹತ್ವವಾದದ್ದು. ಆದರೆ ಹಿಂದುಸ್ತಾನದಂಥ ಬಡ ದೇಶದಲ್ಲಿ ಸಾಲೆಯಲ್ಲಿ ಈ ಪರಿಸ್ಥಿತಿಯನ್ನುಂಟುಮಾಡುವದು ಸುಲಭವಲ್ಲ. **ಕೈಲಾದಷ್ಟು ಮಿತವ್ಯಯದಿಂದ ಸಾಲೆಗಳನ್ನು ನಡಿಸುವದಿರುವದು.** ಸದ್ಯಕ್ಕೆ ನಮ್ಮ **ಉದ್ದೇಶವು ನಮ್ಮಲ್ಲಿರುವ ಹಣದಿಂದ ಆದಷ್ಟು ಹೆಚ್ಚು ಹುಡುಗರಿಗೆ ಆದಷ್ಟು ಹೆಚ್ಚು ಹಿತವಾಗುವಂತೆ ವ್ಯವಸ್ಥೆ ಮಾಡುವದಿರುತ್ತದೆ.** ತಮ್ಮ ಎಳೆ ವಯಸ್ಸಿನ ಮಕ್ಕಳಿಗಾಗಿ ವಿಶೇಷ ಹಣವನ್ನು ಖರ್ಚು ಮಾಡಿ ಮೇಲ್ತರದ ಸಾಲೆಗಳಿಗೆ ಅವರನ್ನು ಕಳಿಸುವ ವ್ಯವಸ್ಥೆಯನ್ನು ಮಾಡುವ ಶಕ್ತಿಯುಳ್ಳವರು ಹಾಗೆ ಮಾಡಬಹುದು. ನಾವು ಇಲ್ಲಿ ವಿವರಿಸುತ್ತಿರುವ ಯೋಜನೆಯು ಎಲ್ಲರಿಗಾಗಿ ಇರುವದು– ಹಣವಂತರು ಬೇಕಾದರೆ ಇದರ ಲಾಭವನ್ನು ಪಡೆದುಕೊಳ್ಳಬಹುದು; ಬಡವರು ಇಲ್ಲಿಯೇ ತಮ್ಮ ಹುಡುಗರ ಶಿಕ್ಷಣವನ್ನು ಸಾಗಿಸಲಿಕ್ಕೆ ಬೇಕು.

೬. ನಿಯಮಿತ ಕಾಲಕ್ಕೆ ಹೆಸರು ಹಚ್ಚಿಕೊಳ್ಳಿರಿ.

ಹುಡುಗನ ಆರನೆಯ ವರ್ಷವು ಮುಗಿದ ದಿನದಿಂದ ಅವನು ಸಾಲೆಯಲ್ಲಿರಲಿಕ್ಕೆಬೇಕೆಂಬ ನಿರ್ಬಂಧವನ್ನು ಮಾಡುವದು ಸರಿಯಲ್ಲ. ಸಾಲೆಯ ಷಾಣ್ಮಾಸಗಳ ಅವಧಿಯನ್ನು ನಿಷ್ಕರ್ಷೆಪಡಿಸಬೇಕು. ಈ ಷಾಣ್ಮಾಸಗಳ ಆರಂಭದಲ್ಲಿಯೇ ಹುಡುಗರ ಹೆಸರು ಹಚ್ಚಬೇಕೆಂಬ ನಿರ್ಬಂಧವಿರಬೇಕು. ಅಂದರೆ ಸಾಲೆಯ ಮೊದಲಿನ ವರ್ಗಕ್ಕೆ ಹುಡುಗರು ವರ್ಷದಲ್ಲಿ ಒಂದೆರಡು ಸಾರೆ ಮಾತ್ರ ಸೇರಬೇಕಾಗುತ್ತದೆ. ಒತ್ತಾಯದ ಶಿಕ್ಷಣದ ಯೋಜನೆಯಲ್ಲಿ ಹೀಗೆ ನಿಯಮವನ್ನು ಮಾಡುವದು ಅತ್ಯಾವಶ್ಯಕವು. ಒತ್ತಾಯದ ಶಿಕ್ಷಣವನ್ನು ಆರಂಭಿಸಿದ ಎಲ್ಲ ದೇಶಗಳ ಜನರು ಇದೇ ನಿಯಮವನ್ನು ಅನುಸರಿಸುವರು. ಈ ನಿಯಮವನ್ನು ಬಿಟ್ಟು ನಡೆದರೆ ನಿಷ್ಕಾರಣವಾಗಿ ಹಣದ ಅಪವ್ಯಯವಾಗುವದು. ಸಾಲೆಯ ವರ್ಷವು ಜೂನದಲ್ಲಿ ಆರಂಭವಾಗುತ್ತದೆ ಎಂದು ತಿಳಿಯೋಣ. ಡಿಸೆಂಬರದಲ್ಲಿ ಒಬ್ಬ ಹುಡುಗನ ಹೆಸರು ಹಚ್ಚಿದರೆ, ಆತನು ಡಿಸೆಂಬರದಿಂದ ಜೂನ ತಿಂಗಳವರೆಗೆ ವರ್ಗದಲ್ಲಿ ಹಾಗೂ ಹೀಗೂ ಕಾಲಕಳೆಯುವನು. ಯಾಕೆಂದರೆ ಆ ವರ್ಗದಲ್ಲಿ

ರುವ ಇತರ ಹುಡುಗರೆಲ್ಲ ಅಭ್ಯಾಸದಲ್ಲಿ ಮುಂದುವರೆದಿರುವರು. ಹಿಂದೆ ಬಂದ ಹುಡುಗನ ಕಡೆಗೆ ವಿಶೇಷ ಲಕ್ಷ್ಯವನ್ನು ಪೂರಯಿಸಲಿಕ್ಕೆ ಶಿಕ್ಷಕನಿಗೆ ವೇಳೆಯು ದೊರೆಯುವದಿಲ್ಲ. ಈ ಮೂಲಕ ಈ ಹುಡುಗನು ಜೂನದಿಂದ ಒಂದು ವರ್ಷದ ವರೆಗೆ ಅದೇ ವರ್ಗದಲ್ಲಿ ಇರಬೇಕಾಗುವದು. ಈತನು ಡಿಸೆಂಬರದಿಂದ ಜೂನದ ವರೆಗೆ ಸಾಲೆಗೆ ಬಂದಿದ್ದರೂ ಏನೂ ಲಾಭಪಡೆದಂತಾಗುವದಿಲ್ಲ; ಇವನ ಬಗ್ಗೆ ಆರು ತಿಂಗಳ ವೆಚ್ಚವು ಮಾತ್ರ ಸಾಲೆಯ ಮೇಲೆ ಬೀಳುತ್ತದೆ. ನಾವು ಉದಾಹರಣೆಗಾಗಿ ಒಬ್ಬ ಹುಡುಗನ ಮಾತನ್ನು ಜೇಳಿರುವೆವು. ಸಾಲೆಗೆ ಹೆಸರು ಹಚ್ಚುವ ಬಗ್ಗೆ ಷಾಣ್ಮಾಸದ ಇಲ್ಲವೆ ವರ್ಷದ ಆರಂಭದ ಅವಧಿಯ ನಿರ್ಬಂಧವಿರದಿದ್ದರೆ ಇಂಥ ಲಕ್ಷಾವಧಿ ಹುಡುಗರು ಕಂಡ ಕಂಡ ದಿವಸ ಸಾಲೆಗೆ ಸೇರುವದರಿಂದ ಸಾರ್ವಜನಿಕ ಹಣವು ನಿರರ್ಥಕವಾಗಿ ವೆಚ್ಚವಾಗುತ್ತಿರುವದೆಂಬದು ಸಿದ್ಧವಾಗುವದು. ಈ ಹಣರಾಶಿಯನ್ನು ಉಳಿಸಿಕೊಂಡು ಯೋಗ್ಯ ವ್ಯಯ ಮಾಡುವದು ವಿಹಿತವಾದದ್ದು. ಮುಂಬಯಿ ಸರಕಾರದಿಂದ ನಿಯಮಿತವಾದ ಪ್ರಾಥಮಿಕ ಹಾಗು ಮಾಧ್ಯಮಿಕ ಶಿಕ್ಷಣ ಕಮೀಟಿಯವರು ಸಹ ತಮ್ಮ ರಿಪೋರ್ಟಿನಲ್ಲಿ ಈ ಸೂಚನೆಯನ್ನು ಮಾಡಿರುವರು. ಈ ಬಗ್ಗೆ ಆದಷ್ಟು ತೀವ್ರವಾಗಿ ಕಾಯಿದೆಯಿಂದ ನಿರ್ಬಂಧವಾಗುವದು ಆವಶ್ಯಕವಿರುವದು. ಎಲ್ಲಿಯಾದರೂ ಸ್ಥಾನಿಕ ಪರಿಸ್ಥಿತಿಯ ಮೂಲಕ ತೊಂದರೆಗಳುಂಟಾಗುತ್ತಿದ್ದರೆ ಆ ಸ್ಥಳಗಳ ಬಗ್ಗೆ ಮಾತ್ರ ವಿಶೇಷ ಅನುಕೂಲ್ಯಗಳನ್ನು ಒದಗಿಸಿಕೊಡಬಹುದು.

ಒತ್ತಾಯದ ಶಿಕ್ಷಣದ ತೀರ ಕಡಿಮೆ ವಯಸ್ಸಿನ ನಿರ್ಬಂಧವನ್ನು ನಿಶ್ಚಯಿಸಿದ ಬಳಿಕ, ಆ ವಯಸ್ಸಿಗಿಂತ ಕಡಿಮೆ ವಯಸ್ಸಾದ ಹುಡುಗರನ್ನು ಯಾವ ಕಾರಣದಿಂದಲೂ ಸಾಲೆಗಳಲ್ಲಿ ಸೇರಿಸಲಾಗದೆಂದು ನಿಯಮವಿರಬೇಕು. ಜಪಾನದಲ್ಲಿ ಆರು ವರುಷದ ವಯಸ್ಸಿನೊಳಗಿನ ಹುಡುಗರನ್ನು ಪ್ರಾಥಮಿಕ ಸಾಲೆಗಳಿಗೆ ಸೇರಿಸಿಕೊಳ್ಳುವದಿಲ್ಲ. ಮಕ್ಕಳ ಶಿಕ್ಷಣವು ಇದಕ್ಕೂ ತೀವ್ರ ಆರಂಭವಾಗಬೇಕೆಂದು ಹಾತೊರೆಯುವ ತಾಯ್ತಂದೆಗಳು ಅಲ್ಲಿಯೂ ಇರುವರು. ಅವರು ನಿರುಪಾಯರಾಗಿ ಸುಮ್ಮನಿರಬೇಕಾಗುವದು. ಸ್ವಿಝರಲಂಡದಲ್ಲಿ ಆರು ವರುಷ ಮುಗಿಯದ ಹುಡುಗರನ್ನು ಸಾಲೆಯಲ್ಲಿ ಸೇರಿಸಿಕೊಳ್ಳುವದಿಲ್ಲ. ಸಾಲೆ ಕಲಿಯಲಿಕ್ಕೆಂದು ಬಾಗಿಲಿಗೆ ಬಂದ ಈ ಚಿಕ್ಕ ಹುಡುಗರನ್ನು ತಳ್ಳಿಬಿಡುವದು ಸರಿಯಲ್ಲವೆಂದು ಸಹೃದರ್ಶನಕ್ಕೆ ತಿಳಿಯಬಹುದು. ಆದರೆ ಜನಾಂಗದ ಹಿತಕ್ಕಾಗಿಯೇ ಹೀಗೆ ಮಾಡಬೇಕಾಗುವದೆಂಬದನ್ನು ಒಪ್ಪಿಕೊಂಡ ಕೂಡಲೆ ಇದನ್ನು ಅಮಲಿನಲ್ಲಿ ತರಲು ಹಿಂದುಮುಂದು ನೋಡಲಾಗದು. ಮುಂಬಯಿ ಇಲಾಖೆಯಲ್ಲಿ ಆರು ವರುಷ

ಮೀರದ ಹುಡುಗರು ಒಂದು ಲಕ್ಷ ಜನರಿರುವರು. ಪ್ರಾಥಮಿಕ ಶಿಕ್ಷಣಕ್ಕಾಗಿ ಆಗುವ ವೆಚ್ಚದ ಹತ್ತರಲ್ಲಿ ಒಂದು ಭಾಗವು ಇವರಿಗಾಗಿ ವ್ಯಯವಾಗುತ್ತದೆ. ಸಾಲೆಗೆ ಪೆಸರು ಹಚ್ಚದೆ ಇವರನ್ನು ಒಂದು ವರುಷ ಹಾಗೆಯೇ ಉಳಿಯಗೊಟ್ಟರೆ ಆರು ವರುಷ ಮೀರಿದ ೧ ಲಕ್ಷ ಹುಡುಗರನ್ನು ಸಾಲೆಗೆ ಸೇರಿಸಿಕೊಳ್ಳಬಹುದಾಗುತ್ತದೆ. ಇಂಥ ಹುಡುಗರಿಗಾಗಿ ಸಾರ್ವಜನಿಕ ಹಣವನ್ನು ವೆಚ್ಚ ಮಾಡುವದು ವಿಹಿತವು. ಈ ವೆಚ್ಚದಿಂದ ಹೆಚ್ಚಿನ ಲಾಭವಾದರೂ ಆಗುವದು.

೭. ಅಭ್ಯಾಸಪತ್ರಿಕೆಯನ್ನು ಸುಲಭ ಮಾಡಿರಿ.

ಅಭ್ಯಾಸ ಪತ್ರಿಕೆಯನ್ನು ಸುಲಭಮಾಡುವದೆಂದರೆ ಈಗ ನಾಲ್ಕು ಇಯತ್ತೆಗಳ ವರೆಗೆ ಕಲಿಸುತ್ತಿರುವ ಕೆಲವು ವಿಷಯಗಳನ್ನು ಅಭ್ಯಾಸ ಪತ್ರಿಕೆಯಿಂದ ಕಡಿಮೆ ಮಾಡುವದು. ಓದು, ಬರೆಹ, ಗಣಿತ ಇವುಗಳ ಕಡೆಗೆ ಸದ್ಯಕ್ಕಿಂತ ಹೆಚ್ಚು ಲಕ್ಷ್ಯವನ್ನು ಕೊಡುವದು; ಅಂದರೆ ವ್ಯಾಕರಣ, ಇತಿಹಾಸ, ಭೂಗೋಲ, ವಸ್ತುಪಾಠ, ಡ್ರಾಯಿಂಗ, ಸೃಷ್ಟಿ ನೀರಕ್ಷಣೆ, ಈ ವಿಷಯಗಳಿಗೆ ಸಾಲೆಯಿಂದ ಅಪ್ಪಣೆಕೊಡುವದು. ಪ್ರಾಥಮಿಕ ಶಿಕ್ಷಣದ ಅಭ್ಯಾಸಪತ್ರಿಕೆಯಲ್ಲಿ, ಇವು ಬಹು ಕಾಲದಿಂದ ಇರುತ್ತವೆ. ಆದ್ದರಿಂದ ಇವುಗಳನ್ನು ಬಿಟ್ಟು ಬಿಡುವದೆಂದರೆ ಶುದ್ಧ ಹುಚ್ಚುತನವೆಂದು ಅನೇಕರಿಗೆ ಅನಿಸಬಹುದು. ಹಾಗಾದರೆ ನಮ್ಮ ಪ್ರಾಥಮಿಕ ಸಾಲೆಗಳಲ್ಲಿ ನಾವು ಕಲಿಸುವದೇನುಳಿಯಿತು? ಎಂದು ಇವರು ಪ್ರಶ್ನೆಮಾಡಬಹುದು. ಹುಡುಗನಿಗೆ ಓದು, ಬರೆಹ, ಹಾಗು ಗಣಿತ ಇವಷ್ಟನ್ನೇ ಕಲಿಸಿದರೆ ಸಾಕೇ? ಎಂದು ಇವರು ಕೇಳಬಹುದು. ಇದಕ್ಕೆ "ನಿಶ್ಚಯವಾಗಿ ಸಾಕು" ಎಂಬದೇ ನಮ್ಮ ಉತ್ತರವು. ಸಾರಭೂತವಾದ ವಿಷಯಗಳಬಗ್ಗೆ ಮಾತ್ರ ನಾವು ನಮ್ಮ ಪ್ರಾಥಮಿಕ ಶಿಕ್ಷಣದಲ್ಲಿ ಲಕ್ಷ್ಯಕೊಡುವೆವು. ಇತರ ವಿಷಯಗಳನ್ನು ಮುಂದಿನ ಶಿಕ್ಷಣಕ್ಕಾಗಿ ಕಾದಿಡುವೆವು. ಇಲ್ಲವೆ ಇವು ಅತ್ಯವಶ್ಯಕವಾದವೆನಿಸುವವರು ಖಾಸಗಿ ಸಾಲೆಗಳಲ್ಲಿ ಇವುಗಳನ್ನು ಪಡೆಯತಕ್ಕದ್ದೆಂದು ಅಭಿಪ್ರಾಯ ಪಡುವೆವು. ಸದ್ಯದ ಕಾಲದಲ್ಲಿ ಈ ಧೋರಣವು ಅತ್ಯಾವಶ್ಯಕವಾದದ್ದಿರುವದು. ಅಭ್ಯಾಸ ಪತ್ರಿಕೆಯ ವಿಷಯಗಳಲ್ಲಿ ಕೇವಲ ಅತ್ಯವಶ್ಯವೆನಿಸುವವುಗಳು ಮಾತ್ರ ಉಳಿಯುವಂತೆ ಯೋಜನಮಾಡುವದು ವಿಹಿತವೆಂದು ನಮಗೆ ತೋರುತ್ತದೆ. ಈ ಸುಧಾರಣೆಯನ್ನು ಕೂಡಲೆ ಧೈರ್ಯದಿಂದ ಅವಲಿನಲ್ಲಿ ತರಬೇಕೆಂದು ನಾವು ಸಾರಿ ಹೇಳುತ್ತೇವೆ. ಸಾಲೆಗೆ ಹೋಗುವ ವಯಸ್ಸಿನವರುವ ಎಲ್ಲ ಹುಡುಗರಿಗೆ ಪ್ರಾಥಮಿಕ ಸಾಲೆಗಳಲ್ಲಿ ಶಿಕ್ಷಣವು ದೊರೆಯುವ ವ್ಯವಸ್ಥೆಯಾಗುವವರೆಗೆ ವಿದ್ಯಾರ್ಥಿಗಳಿಗಾಲವೂ ಶಿಕ್ಷಕರ ವೇಳೆಯೂ ಶ್ರಮವೂ ಸಾರಭೂತವಾದ ವಿಷಯಗಳನ್ನು ಕಲಿ

ಯುವದರಲ್ಲಿಯೂ ಕಲಿಸುವದರಲ್ಲಿಯೂ ಮಾತ್ರ ವೆಚ್ಚವಾಗತಕ್ಕದ್ದು. ಶ್ರೀಮಂತ ಮಕ್ಕಳು ಈ ವಿಷಯಗಳ ಹೊರತು ಇನ್ನೂ ಬೇಕಾದಷ್ಟು ವಿಷಯಗಳನ್ನು ಇವ ಗಾಗಿ ಇಟ್ಟ ಖಾಸಗಿ ಶಾಲೆಗಳಲ್ಲಿ ಕಲಿಯಬಹುದು. ಇಂಥ ಶಾಲೆಗಳು ಸಾಕಷ್ಟ ಇಲ್ಲವೆಂದು ದೂರು ಹೇಳುವ ಕಾರಣವಿಲ್ಲ; ಯಾಕೆಂದರೆ, ಅವುಗಳ ಬೇಡಿಕೆಯ ಹೆಚ್ಚಾದಂತೆ ಅವನ್ನು ಸ್ಥಾಪಿಸುವ ವ್ಯವಸ್ಥೆಯು ತಡವಿಲ್ಲದೆ ಆಗುವದು. ನಾ ಮೇಲೆ ನಿರ್ದೇಶಿಸಿದ ಸುಲಭವಾದ ಪ್ರಾಥಮಿಕ ಶಿಕ್ಷಣಾಭ್ಯಾಸಕ್ರಮವು ಸಹ ಮಾತೃಭೂಮಿಯ ಎಲ್ಲ ಮಕ್ಕಳಿಗಾಗಿ ಇರುವದು. ಶ್ರೀಮಂತರ ಮಕ್ಕಳಿಗ ಇರುವದು; ಬಡವರ ಹುಡುಗರಿಗಾಗಿಯೂ ಇರುವದು; ವಿಶೇಷವಾಗಿ ಬಡಬಗ್ಗ ಮಕ್ಕಳಿಗಾಗಿ ಇರುವದು. ಈ ವತಿಗೆ ಸ್ಟ್ಯಾಂಡರ್ಡ ಪತ್ರಿಕೆಯನ್ನು ಶ್ರೀಮಂತ ಮಕ್ಕಳ ಹಿತಕ್ಕಾಗಿ ಮಾಡಿದ್ದರು. ಇನ್ನು ಮುಂದೆ ಜನ ಸಾಮಾನ್ಯರ ಮಕ್ಕ ಗಾಗಿ ಇದನ್ನು ಸರಿಪಡಿಸಬೇಕಾಗಿರುವದು.

ಸದ್ಯದ ಅಭ್ಯಾಸ ಪತ್ರಿಕೆಯಲ್ಲಿ ಇತಿಹಾಸ, ಭೂಗೋಲ, ಡ್ರಾಯಿಂಗ ವಸ್ತುಪಾಠ, ವ್ಯಾಕರಣ, ಪ್ರಕೃತಿವಿಮರ್ಶ ಇವೇ ಮೊದಲಾದ ವಿಷಯಗ ಮಹತ್ವವನ್ನು ವಿಪರೀತವಾಗಿ ಬೆಳಿಸಿಟ್ಟಿರುವರು. ಇವುಗಳನ್ನು ಕಲಿಸುವದರ ಬಹಳ ವೇಳೆಯು ಹೋಗುವದು. ಇದೇ ವೇಳೆಯನ್ನು ಓದು, ಬರೆಹ ಇವುಗಳನ್ನ ಸದ್ಯಕ್ಕಿಂತ ಚೆನ್ನಾಗಿ ಕಲಿಸಲಿಕ್ಕೆ ಉಪಯೋಗಿಸಿದರೆ ಒಳ್ಳೇ ಲಾಭವಾಗುವದ ಓದು ಬರೆಹಗಳು ಜ್ಞಾನಾರ್ಜನೆಯ ಕೆಲಸದಲ್ಲಿ ಮೇಲಾದ ಸಾಧನಗಳಿರುವವಷ್ಟೆ ಈ ಸಾರಭೂತವಾದ ವಿಷಯಗಳಿಗೆ ನಾವು ಮೇಲೆ ಹೇಳಿದ ಚಿಲ್ಲರೆ ವಿಷಯ ಗಳು ಎಂದೂ ಸರಿಬರಲಾರವು. ಸರ್ವಸಾಮಾನ್ಯವಾದ ಒಂದು ಪ್ರಾಥಮಿ ಶಾಲೆಯಲ್ಲಿ ಓದಿ ನಾಲ್ಕು ಇಯತ್ತೆಗಳನ್ನು ಮುಗಿಸಿದ ಒಬ್ಬ ಸಾಧಾರಣ ಹುಡು ಗನ ಉದಾಹರಣವನ್ನು ನಾವು ಕ್ಷಣಜೊತ್ತು ತೆಗೆದುಕೊಳ್ಳೋಣ. ವಿದ್ಯಾಖಾ ಯವರು ಬರೆಯಿಸಿ ಪ್ರಸಿದ್ಧಪಡಿಸಿರುವ ನಾಲ್ಕು ಪುಸ್ತಕಗಳನ್ನು ಅವನು ಓ ರುವನು. ಅವನು ಒಳ್ಳೇ ಜಟುನಟಿಕೆಯುಳ್ಳ ವಿದ್ಯಾರ್ಥಿಯಾಗಿದ್ದರೆ ಇವು ಳನ್ನು ಒಮ್ಮೆಯಲ್ಲ ಎಷ್ಟೋ ಸಾರಿ ಓದಿರಬಹುದು. ಇವುಗಳೊಳಗಿನ ಕವಿತೆಂ ಪಾಠಗಳನ್ನೂ ಅವನು ಕಲಿತಿರುವನು. ಅಂದರೆ ಅವುಗಳ ಪದಚ್ಛೇದ, ಅನ್ವಯ ಅರ್ಥ ಮೊದಲಾದವುಗಳನ್ನೆಲ್ಲ ಬಾಯಿಪಾಠಮಾಡುವದರಲ್ಲಿ ಅವನ ಬಹ ವೇಳೆಯು ವೆಚ್ಚವಾಗಿರುವದು. ಒಟ್ಟಿನಮೇಲೆ ಅವನು ಓದಿದ ವಾಙ್ಮಯವು ಮಾತ್ರ ತೀರ ಸ್ವಲ್ಪವಿರುವದು. ಓದಿ ತಿಳಿದುಕೊಂಡ ಕವಿತೆಗಳಲ್ಲಿ ಇಂತಿಷ್ಟು ಪಂಕ್ತಿ ಳನ್ನು ಅವನು ಕಂಠಪಾಠಮಾಡಿರುವನು. ಇದರ ಅರ್ಥವು ಅವನಿಗೆ ತಿಳಿದಿರ ತಿಳಿಯದಿರಲಿ, ಅವನು ಇದನ್ನು ಬಾಯಿಪಾಠಮಾಡಿರುವದೇನೋ ನಿಜವು

ಇನ್ನು ವ್ಯಾಕರಣ, ಪುಸ್ತಕದಿಂದ ವ್ಯಾಕರಣಮಾಡುವದು ಈ ಬಗ್ಗೆ ಏನೂ ಹೇಳ ದಿರುವದು ಮೇಲು. ಹಿಂದಿನಕಾಲದಿಂದ ಬಂದ ವಿಷಯಗಳಲ್ಲಿ ಇದೊಂದು; ಪ್ರಾಥಮಿಕ ಅಭ್ಯಾಸಪತ್ರಿಕೆಯಿಂದ ಇದನ್ನು ಆದಷ್ಟು ಬೇಗನ ತೆಗೆದು ಬಿಡತಕ್ಕದ್ದು. ಇತಿಹಾಸ, ಭೂಗೋಲ ಈ ವಿಷಯಗಳನ್ನು ಹುಡುಗರಿಗೆ ತಿಳಿಯುವಂತೆ ಕಲಿಸಿದರೆ ಇವು ಮನೋರಂಜಕವಾದ ವಿಷಯಗಳೇ ಸರಿ. ವಿಶೇಷವಾಗಿ ಭೂಗೋಲವು ಇಂಥ ವಿಷಯವು. ಆದರೆ ಅಚ್ಚುಹಾಕಿದ ಪುಸ್ತಕಗಳ ಸಹಾಯದಿಂದ ಇವುಗಳನ್ನು ಕಲಸತಕ್ಕದ್ದಲ್ಲ; ಹುಡುಗರಿಂದ ಇವುಗಳನ್ನು ಕಂಠಪಾಠ ಮಾಡಿಸಲೇಬಾರದು. ಈ ರೀತಿಯಲ್ಲಿ ಇವುಗಳನ್ನು ಕಲಿಯುವ ಹುಡುಗನಿಗೆ ಮನೋರಂಜನೆಯೂ ಎನಿಸುವದಿಲ್ಲ; ಬುದ್ಧಿವಂತಿಕೆಯೂ ಬರುವದಿಲ್ಲ. ಇತಿಹಾಸ ಭೂಗೋಲಗಳನ್ನು ಪ್ರತ್ಯೇಕವಾದ ವಿಷಯಗಳೆಂದು ಕಲಿಸುವದರಿಂದ ಸಾಲಿಯ ಬೆಲೆಯುಳ್ಳ ವೇಳೆಯನ್ನು ಮಾತ್ರ ಹಾಳುಮಾಡಿದಂತಾಗುತ್ತದೆ. ಇವುಗಳ ಸಮಾವೇಶವು ನಿಜವಾಗಿ ಭಾಷಾ ವಿಷಯದ ಪಾಠಗಳಲ್ಲಿ ಆಗಬೇಕು. ವಸ್ತು ಪಾಠಗಳು ನಮಗೆ ಬೇಕಾಗಿಲ್ಲ. ಗಣಿತದಲ್ಲಿಯೂ ಸದ್ಯಕ್ಕೆ ಕಲಿಸುವ ಎಷ್ಟೋ ಭಾಗಗಳನ್ನು ಬಿಟ್ಟುಬಿಡಬಹುದು. ೪ ವರ್ಷಗಳ ಒತ್ತಾಯದ ಪ್ರಾಥಮಿಕ ಶಿಕ್ಷಣದ ಅಭ್ಯಾಸಪತ್ರಿಕೆಯ ಪ್ರಕಾರ ಹುಡುಗನಿಗೆ ಸುಲಭವಾದ ವಾಚನ ವಿಷಯಗಳನ್ನು ಹೆಚ್ಚಾಗಿ ಒದಗಿಸಿಕೊಡತಕ್ಕದ್ದು. ಒಂದು ಸತ್ಯ ಪುಸ್ತಕದ ಸುಮಾರು ಅರ್ಧ ಭಾಗವನ್ನು ಅವನು ಓದುವದಕ್ಕಿಂತ ಸುಲಭವಾದ ೧೦ ಪುಸ್ತಕಗಳನ್ನು ಅತನಿಗೆ ಓದಲಿಕ್ಕೆ ಹಚ್ಚಬೇಕು. ಸಾಲೆಗೆ ಹೋಗುತ್ತಿರುವ ಬೇರೆ ಬೇರೆ ವಯಸ್ಸಿನ ಹುಡುಗರಿಗೆ ತಕ್ಕವಾದ ಸುಲಭ ಕಥೆಗಳುಳ್ಳ ಪುಸ್ತಕಗಳು ಇತ್ತಲಾಗಿ ಬೇಕಾದಷ್ಟು ಪ್ರಸಿದ್ಧವಾಗುತ್ತಿರುವವು. ಡೆಕ್ಕನದ ಮಧ್ಯದಲ್ಲಿ ವಾಸಿಸುವ ಹುಡುಗನೂ ಸಮುದ್ರ ದಂಡೆಯಮೇಲೆ ಕೊಂಕಣ ಪ್ರದೇಶದಲ್ಲಿರುವ ಹುಡುಗನೂ ಒಂದೇ ಪುಸ್ತಕವನ್ನು ಅಭ್ಯಾಸಮಾಡಬೇಕಾಗುವದು ವಿಹಿತವಲ್ಲ. ಇವರೀರ್ವರ ಪರಿಸ್ಥಿತಿಗಳು ಭಿನ್ನವಾದವಿರುತ್ತವೆ. ಹೀಗೆ ವಿವಿಧ ಪರಿಸ್ಥಿತಿಯಲ್ಲಿ ಬೆಳೆಯುತ್ತಿರುವ ಹುಡುಗರ ಒಲವು ಬೇಡಿಕೆಗಳಿಗೆ ತಕ್ಕ ವಿಷಯಗಳುಳ್ಳ ಸುಲಭವೂ ಅಗ್ಗವೂ ಆದ ಪುಸ್ತಕಗಳು ಅವನಿಗೆ ಬೇಕಾದಷ್ಟು ಸಿಕ್ಕುತ್ತಿರಬೇಕು. ಸದ್ಯದ ವಾಚನ ಪುಸ್ತಕಗಳನ್ನು ಬರೆದು ಕಾಲುಶತಮಾನದ ಕಾಲವು ಸಂದು ಹೋಯಿತು. ಇವುಗಳನ್ನು ಆದಷ್ಟು ಕ್ಷಿಪ್ರದಲ್ಲಿ ತಿದ್ದಿ ಬೆಳಿಸುವದು ಆವಶ್ಯಕವು.

ಪ್ರಾಥಮಿಕ ಶಿಕ್ಷಣದ (೪ ಇಯತ್ತೆಗಳ) ಸದ್ಯದ ಅಭ್ಯಾಸಪತ್ರಿಕೆಯಲ್ಲಿ ಓದು, ಬರೆಹ, ಗಣಿತ ಹಾಗು ಇವಲ್ಲದೆ ಅರು ವಿಷಯಗಳು ಅಂದರೆ ಇತಿಹಾಸ, ಭೂಗೋಲ, ವಸ್ತುಪಾಠಗಳು, ಡ್ರಾಯಿಂಗ, ಪ್ರಕೃತಿವಿಮರ್ಶೆ ಇವೆಲ್ಲ ಇರುವವು.

ಇವನ್ನು ಬಿಟ್ಟು ಮುಖ್ಯವಾದ ಮೊದಲಿನ ಮೂರು ವಿಷಯಗಳನ್ನೇ ನಮ್ಮ ಸುಲಭಮಾಡಿದ ಪ್ರಾಥಮಿಕ ಅಭ್ಯಾಸಕ್ರಮದಲ್ಲಿ ಕಲಿಸತಕ್ಕದ್ದೆಂದು ಹೇಳಿದರೆ ಇವೆಲ್ಲ ವಿಷಯಗಳನ್ನು ಕಲಿತು ಶಿಕ್ಷಣಪಡೆದವರಿಗೆ ವಿಚಿತ್ರವೆನಿಸಬಹುದು ಅವರು ಇದಕ್ಕೆ ಸಹಸಾ ಒಪ್ಪಲಾರರು. ಈ ವಿಷಯಗಳನ್ನು ಕಲಿಯುವದರಿಂದ ಏನೂ ಲಾಭವಿಲ್ಲೆಂದು ಮಾತ್ರ ನಾವು ಹೇಳುವದಿಲ್ಲ. ಪ್ರಾಥಮಿಕ ಶಿಕ್ಷಣದ ಯೋಜನೆಯಲ್ಲಿ ಇವು ಇರಲಾಗದೆಂದೂ ನಮ್ಮ ಅಭಿಪ್ರಾಯವಲ್ಲ. ನಮ್ಮ ಅಭಿಪ್ರಾಯಗಳ ಬಗ್ಗೆ ತಪ್ಪುತಿಳುವಳಿಕೆಯಾಗಬಾರದೆಂದು ಇದನ್ನು ನಾವು ಒತ್ತಿ ಹೇಳಬೇಕಾಗಿದೆ. ಹುಡುಗನ ಅಥವಾ ಹುಡಿಗೆಯ ಶಿಕ್ಷಣದಲ್ಲಿ ಇವೆಲ್ಲ ವಿಷಯಗಳಿಗೆ ತಕ್ಕ ಮಹತ್ವವು ಇರುವದೆಂದು ನಾವು ಒಪ್ಪಿಕೊಳ್ಳುತ್ತೇವೆ. ಇವುಗಳನ್ನು ಸಭ್ಯದ ಅಭ್ಯಾಸಪತ್ರಿಕೆಯಿಂದ ತೆಗೆದು ಹಾಕಿರೆಂದು ನಾವು ಶಿಫಾರಸು ಮಾಡುವದರ ಇಂಗಿತವೇನೆಂದರೆ— ಹಿಂದುಸ್ತಾನದಂಥ ಬಡರಾಷ್ಟ್ರವು ತನ್ನ ಎಲ್ಲ ಚಿಕ್ಕ ಮಕ್ಕಳಿಗೆ ಕೊಡಬೇಕಾಗಿರುವ ಪ್ರಾಥಮಿಕ ಶಿಕ್ಷಣದಲ್ಲಿ ಇವುಗಳಿಗೆ ಸ್ಥಾನವು ಇರಲಾಗದು. ಮುಖ್ಯವಾಗಿ ಬಡವರೂ ವಿದ್ಯೆಯ ಗಂಧವನ್ನರಿಯದವರೂ ಆದ ನಮ್ಮ ಬಹುಜನರ ಮಕ್ಕಳ ಅಭ್ಯಾಸಪತ್ರಿಕೆಯಲ್ಲಿ ಇವು ಬೇಕಾಗಿಲ್ಲ. ಹಿಂದುಸ್ತಾನಕ್ಕಿಂತ ಹೆಚ್ಚು ಊರ್ಜಿತದಿಶೆಯಲ್ಲಿದ್ದು ಆರ್ಥಿಕ ದೃಷ್ಟಿಯಿಂದ ಸುಖದಿಂದ ಬಾಳುವ ದೇಶಗಳ ಜನರು ಸಹ ತಮ್ಮ ಜನಸಾಮಾನ್ಯರ ಶಿಕ್ಷಣ ಯೋಜನೆಯ ಆರಂಭದ ಮೆಟ್ಟುಗಳಲ್ಲಿ ಇವುಗಳನ್ನು ಪ್ರಾಥಮಿಕ ಶಿಕ್ಷಣದಿಂದ ದೂರವಾಗಿಟ್ಟೇ ಸಾಗಬೇಕಾಯಿತು. ಆ ದೇಶಗಳಲ್ಲಿ ಶ್ರೀಮಂತರ ಮಕ್ಕಳಿಗಾಗಿ ಇಟ್ಟ ಶಾಲೆಗಳಲ್ಲಿ ಇವುಗಳನ್ನು ಕಲಿಸುತ್ತಿದ್ದಿರಬಹುದು ಆದರೆ ಜನಸಾಮಾನ್ಯರ ಮಕ್ಕಳಿಗಾಗಿ ನಡಿಸಿದ ಸಾಲೆಗಳಲ್ಲಿ ಇವುಗಳನ್ನು ಅವಶ್ಯಕವಾದ ವಿಷಯಗಳೆಂದು ಕಲಿಸುತ್ತಿರಲಿಲ್ಲ.

೧೮೭೨ ರಲ್ಲಿ ಇಂಗ್ಲಂಡದಲ್ಲಿ ಮೊದಲನೆಯ "ಎಜ್ಯುಕೇಶನ್ ಕೋಡ"ವು ಪ್ರಸಿದ್ಧವಾಯಿತು. ಅದರಲ್ಲಿ ೧ನೆಯ ಇಯತ್ತೆಯಿಂದ ೪ನೆಯ ಇಯತ್ತೆಯವರೆಗೆ ನಿಯಮಿತವಾದ ವಿಷಯಗಳೆಂದರೆ ಓದು, ಬರೆಹ, ಗಣಿತ ಇವು ಮೂರು ಮಾತ್ರ ಇದ್ದವು. (ಹೆಣ್ಣುಮಕ್ಕಳಿಗಾಗಿ ಹೊಲಿಗೆಯ ಕೆಲಸವನ್ನು ನಿಯಮಿಸಿದ್ದರು). ೧೮೮೦ರಲ್ಲಿ ಭೂಗೋಲ, ಇತಿಹಾಸ, ವ್ಯಾಕರಣ ಈ ಮೂರು ವಿಷಯಗಳನ್ನು ೪ನೆಯ ಇಯತ್ತೆಯಲ್ಲಿ "ಐಚ್ಛಿಕ" ವಿಷಯಗಳೆಂದು ಕಲಿಸಬಹುದೆಂದು ನಿರ್ಧರಿಸಿದರು. ಇವುಗಳಲ್ಲಿಯೂ ಬೇಕಾದ ಒಂದು ಇಲ್ಲವೆ ಎರಡು ವಿಷಯಗಳನ್ನು ಮಾತ್ರ ೪ನೆಯ ಇಯತ್ತೆಯಲ್ಲಷ್ಟೇ ಕಲಿಸಬಹುದಾಗಿತ್ತು. ೧೯೦೦ರ ವರೆಗೆ ಈ ವಿಷಯಗಳನ್ನು ಕಲಿಸುತ್ತಿದ್ದ ಪ್ರಾಥಮಿಕ ಶಾಲೆಗಳ ಸಂಖ್ಯೆಯು ತೀರ

ಪ್ಪಲ್ಪವಿತ್ತೆಂಬದನ್ನೂ ನಾವು ಲಕ್ಷ್ಯದಲ್ಲಿಡುವದು ಮಹತ್ವವಾದದ್ದು. ೧೮೬೨ರಿಂದ ೧೮೯೨ರ ವರೆಗೆ ಸಂದ ಮೂವತ್ತು ವರುಷಗಳ ಅವಧಿಯು ಇಂಗ್ಲಂಡಿನ ಪ್ರಾಥಮಿಕ ಶಾಲೆಗಳ ಇತಿಹಾಸದಲ್ಲಿ ಒಳ್ಳೇ ಮಹತ್ವದವಾದದ್ದಿತ್ತೆಂದು ಧಾರಾಳವಾಗಿ ಹೇಳಬಹುದು. ಯಾಕೆಂದರೆ ೧೮೬೨ರಲ್ಲಿ ಇಂಗ್ಲಂಡಿನ ಜನಸಂಖ್ಯೆಯಲ್ಲಿ ನೂರರಲ್ಲಿ ೫ ಇಲ್ಲವೆ ೬ ಜನರು ಮಾತ್ರ ಸಾಲೆಕಲಿಯುತ್ತಿದ್ದರು. ೧೮೭೦ರಲ್ಲಿ ಈ ಸಂಖ್ಯೆಯು ಸುಮಾರು ಮುಮ್ಮಡಿಯಾಗಿತ್ತು. ೧೮೯೩ರಲ್ಲಿ ಇತಿಹಾಸ, ಭೂಗೋಲ, ಹಾಗು ವ್ಯಾಕರಣ ಈ ಮೂರು ವಿಷಯಗಳಲ್ಲಿ ಒಂದು ಮಾತ್ರ ಆವಶ್ಯಕ ವಿಷಯವೆಂದು ಪ್ರಾಥಮಿಕ ಶಾಲೆಗಳ ಸ್ಟ್ಯಾಂಡರ್ಡ ಪತ್ರಿಕೆಯಲ್ಲಿ ಸೇರಿಸಲ್ಪಟ್ಟಿತು ಹಾಗು ಆ ವರುಷಕ್ಕಿಂತ ಹತ್ತು ವರುಷ ಮೊದಲೇ ಇಂಗ್ಲಂಡಿನ ಸಾಲೆಗೆ ಹೋಗುವ ವಯಸ್ಸಿನ ಎಲ್ಲ ಹುಡುಗರು ಪ್ರಾಥಮಿಕ ಸಾಲೆಗಳಲ್ಲಿ ಕಲಿಯುತ್ತಿರುವ ಸುದಿನಗಳನ್ನು ಆ ದೇಶದವರು ಕಣ್ತುಂಬ ಕಂಡಿದ್ದರು.

೮. ಇಂಗ್ಲಿಷ ಮಾದರಿಯ ಪೂರ್ಣ ಅನುಕರಣ.

ಇಂಗ್ಲಂಡದಲ್ಲಿ ಐಚ್ಛಿಕವೆಂದು ಕಲಿಸುತ್ತಿದ್ದ ವಿಷಯಗಳನ್ನು ನಮ್ಮ ಪ್ರಾಂತದಲ್ಲಿ ಐಚ್ಛಿಕವೆಂದಲ್ಲ ಆವಶ್ಯಕ ವಿಷಯಗಳೆಂದು ಪ್ರಾಥಮಿಕ ಶಿಕ್ಷಣದಲ್ಲಿ ಸೇರಿಸಿದ್ದರ ಇತಿಹಾಸವು ಮನೋರಂಜಕವಾದದ್ದೂ ಬೋಧಪ್ರದವಾದದ್ದೂ ಇರುವದು. ಇಂಗ್ಲಂಡದ ಪ್ರಾಥಮಿಕ ಸಾಲೆಗಳಲ್ಲಿ ಒಂದು ವಿಷಯವು ಹೊಸದಾಗಿ ಸೇರಿಸಲ್ಪಟ್ಟಿದೆಯೆಂದು ಗೊತ್ತಾದ ಕೂಡಲೆ ಇಲ್ಲಿಯ ಪ್ರಾಥಮಿಕ ಸಾಲೆಗಳಲ್ಲಿ ಅದರ ಸಮಾನೇಶವಾದಂತೆ ಕಾಣುತ್ತದೆ. ಹೀಗಾಗಿ ಇಲ್ಲಿಯ ಆವಶ್ಯಕ ವಿಷಯಗಳ ಸಂಖ್ಯೆಯು ಕ್ರಮೇಣ ಹೆಚ್ಚಾಯಿತು. ಈ ಮೂಲಕ ಇಂಗ್ಲಂಡಿನ ಸಾಮಾನ್ಯವಾದ ಪ್ರಾಥಮಿಕ ಶಾಲೆಯ ಅಭ್ಯಾಸಪತ್ರಿಕೆಗಿಂತ ನಮ್ಮಲ್ಲಿಯ ಅಭ್ಯಾಸಪತ್ರಿಕೆಯಲ್ಲಿ ವಿಷಯಗಳ ಸಂಖ್ಯೆಯಂತೂ ಬೆಳೆಯಿತು. ನಮ್ಮ ಸಾಲೆಗಳಲ್ಲಿ ಮೇಲ್ತರದ ಶಿಕ್ಷಣವು ದೊರೆಯತಕ್ಕದ್ದೆಂಬ ಉದಾತ್ತವಾದ ಸಂಕಲ್ಪವನ್ನು ಆ ಕಾಲದ ಈ ಇಲಾಖೆಯ ಶಿಕ್ಷಣಯೋಜಕರು ಮಾಡಿಕೊಂಡದ್ದು ಅವರಿಗೆ ಭೂಷಣವೇ ಸರಿ. ಇಂಗ್ಲಂಡಿನ ಪ್ರಾಥಮಿಕ ಸಾಲೆಗಳಿಗಿಂತ ನಮ್ಮಲ್ಲಿಯ ಪ್ರಾಥಮಿಕ ಸಾಲೆಗಳು ಕಡಿಮೆ ಪ್ರತಿಯವಿರಬಾರದೆಂದು ಅವರು ಹೆಣಗಾಡಿದರು ಇದು ಸ್ತುತ್ಯವಾದ ಉದ್ದೇಶವು. ಆ ಕಾಲದಲ್ಲಿ ಶಿಕ್ಷಣ ಪ್ರಸಾರಕ್ಕಿಂತ ಶಿಕ್ಷಣದ ಸುಧಾರಣೆಯು ಶಿಕ್ಷಣಯೋಜಕರ ಧ್ಯೇಯವಾಗಿತ್ತು. ಈಗ ಈ ಧ್ಯೇಯವು ಬದಲಾಗಬೇಕಾಗಿರುವದಷ್ಟೇ. ನಮ್ಮ ಉದ್ದೇಶವು ಬದಲಾದಂತೆ ಅದನ್ನು ಸಾಧಿಸುವ ಉಪಾಯಗಳಲ್ಲಿಯೂ ಬದಲಾವಣೆಯಾಗುವದು ಅವಶ್ಯ.

ವಾದದ್ದು. ಸದ್ಯಕ್ಕೆ ಸಾಲೆಗೆ ಹೋಗುವ ವಯಸ್ಸಿರುವ ಎಲ್ಲ ಹುಡುಗರನ್ನು ಸಾಲೆಗೆ ಬರಮಾಡಿಕೊಂಡು ಅವರಿಗೆ ಶಿಕ್ಷಣಕೊಡಬೇಕಾಗಿರುವದು. ಆ ಕಾಲದ ಇಂಗ್ಲಂಡದ ಔದ್ಯೋಗಿಕ ಹಾಗೂ ಸಾಂಪತ್ತಿಕ ಸ್ಥಿತಿಯು ಸದ್ಯದ ನಮ್ಮ ಈ ಪರಿಸ್ಥಿತಿಗಳಿಂದ ಭಿನ್ನವಾಗಿತ್ತು. ಆಗ ಇಂಗ್ಲಂಡವು ಔದ್ಯೋಗಿಕ ರಾಷ್ಟ್ರಗಳಲ್ಲಿ ಮುಂದುನರಿದಿತ್ತು. ನಮ್ಮ ದೇಶವು ಎಂದಿನಂತೆ ಇಂದಿಗೂ ಕೃಷಿ ಪ್ರಧಾನ ವಾದ ದೇಶವಾಗಿದೆ. ಆದ್ದರಿಂದ ಇಂಗ್ಲಂಡದಂಥ ಭಿನ್ನ ಪರಿಸ್ಥಿತಿಯುಳ್ಳ ದೇಶದ ಕೂಡ ನಮ್ಮ ಪ್ರಾಥಮಿಕ ಶಿಕ್ಷಣ ಪ್ರಪಂಚದಲ್ಲಿ ಮೇಲಾಟವನ್ನು ಹೂಡದಿದ್ದರೆ ಒಳಿತಾಗುತ್ತಿತ್ತೆಂದು ನಮಗೆ ತೋರುತ್ತದೆ. ನಮ್ಮ ಹಳ್ಳಿಗರಿಗೆ ವಾಚನ, ಬರೆಹ ಹಾಗು ಹಳ್ಳಿಯ ಸಾವುಕಾರ, ಹಳ್ಳಿಯ ಜಮೀನುದಾರ, ಸರಕಾರ, ಈ ಮೊದಲಾದವರೊಡನೆ ದಿನಾಲು ನಡೆಯುವ ಹಣದ ವ್ಯವಹಾರವನ್ನು ತಿಳಿದುಕೊಳ್ಳಲಿಕ್ಕೆ ಬೇಕಾಗುವಷ್ಟು ಗಣಿತ ಇವುಗಳ ಜ್ಞಾನವಾದರೆ ಸಾಕು.

೯. ಪ್ರತಿಯೊಬ್ಬ ಶಿಕ್ಷಕನು ಹೆಚ್ಚು ಹುಡುಗರಿಗೆ ಕಲಿಸತಕ್ಕದ್ದು.

ಪ್ರಾಥಮಿಕ ಶಾಲೆಗಳಲ್ಲಿ ಪ್ರತಿಯೊಬ್ಬ ಶಿಕ್ಷಕನು ಇಂತಿಷ್ಟು ವಿದ್ಯಾರ್ಥಿಗಳಿಗೆ ಕಲಿಸಬೇಕೆಂಬ ಬಗ್ಗೆ ನಿರ್ಬಂಧವಿರುವದಷ್ಟೇ. ಸದ್ಯಕ್ಕೆ ಈ ಸಂಖ್ಯೆಯು ೩೦ ಇರುವದು. ಇದು ೬೦ ಆಗತಕ್ಕದ್ದು. ಈ ನಮ್ಮ ಸೂಚನೆಯು ಕೆಲವರಿಗೆ ಸಿಡಿಲಿನಂತೆ ಅನಿಸಬಹುದು. ಆದರೂ ಇದು ಬಹು ಜನರ ಶಿಕ್ಷಣ ಯೋಜನೆಯ ಪ್ರಶ್ನದ ಜೀವಾಳುವಿನಂತೆ ಇರುವದು. ಈ ಮಹತ್ವದ ಪ್ರಶ್ನವನ್ನು ಸಮಾಧಾನಕರವಾಗಿ ನಾವು ಬಿಡಿಸಿದ ಹೊರತು ನಮ್ಮ ದೇಶದ ಬಹು ಜನರ ಪ್ರಾಥಮಿಕ ಶಿಕ್ಷಣದ ತೊಡಕನ್ನು ಬಿಡಿಸುವದಾಗದು. ಮಹತ್ವದ ದೃಷ್ಟಿಯಿಂದಲೂ ನಿಶ್ಚಿತವಾದ ಪರಿಣಾಮದ ದೃಷ್ಟಿಯಿಂದಲೂ ಈ ವಿಷಯದಲ್ಲಿ ಇದಕಿಂತ ಹೆಚ್ಚಿನ ಹಂಚಿಕೆಯು ಯಾವದೂ ಇರುವದಿಲ್ಲೆಂದು ನಮಗೆ ಮನವರಿಕೆಯಾಗಿರುವದು. ಯೋಗ್ಯ ಕಾಲಾವಧಿಯಲ್ಲಿ ನಮ್ಮ ಬಹು ಜನರ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣದ ಲಾಭವನ್ನು ನಾವು ಮಾಡಿಕೊಡಬೇಕಾದರೆ ಈ ಉಪಾಯವನ್ನು ನಾವು ಕೈಕೊಳ್ಳಲಿಕ್ಕೇಬೇಕು. ಆದ್ದರಿಂದ ಹಿಂದುಸ್ತಾನದ ಎಲ್ಲ ಪ್ರಾಂತಗಳ ಪ್ರಾಥಮಿಕ ಶಿಕ್ಷಣಾಧಿಕಾರಿಗಳೂ ಆ ಭಾರವನ್ನು ವಹಿಸಿದ ಇತರ ಜನರೂ ಈ ನಮ್ಮ ಸೂಚನೆಯನ್ನು ವಿಚಾರಪೂರ್ವಕವಾಗಿ ವಿಮರ್ಶಿಸಬೇಕೆಂದೂ ಇದು ಅಸಾಧ್ಯವೂ ಅಸಮಂಜಸವೂ ಎಂದು ಒಮ್ಮೆಲೆ ನಿರಾಕರಿಸಬಾರದೆಂದೂ ನಾವು ಆಗ್ರಹದಿಂದ ಹೇಳುತ್ತೇವೆ. ಬಹು ಜನರ ಪ್ರಾಥಮಿಕ ಶಿಕ್ಷಣ ಯೋಜನೆಯ ಪ್ರಶ್ನವು ಸದ್ಯಕ್ಕೆ ನಮ್ಮ ದೇಶದಲ್ಲಿರುವದಕ್ಕಿಂತ ಎಷ್ಟೋ ಪಾಲಿಗೆ ಕಡಿಮೆ ಗಡಚಿ

ದ್ದಾಗಿ ಇದ್ದ ಸಮಯದಲ್ಲಿ, ಸದ್ಯಃ ಕಾಲದಲ್ಲಿ ಮುಂದುವರಿದಿರುವ ರಾಷ್ಟ್ರಗಳು ತಮ್ಮ ದೇಶಗಳಲ್ಲಿ ಈ ಪದ್ಧತಿಯನ್ನು ಅಮಲಿನಲ್ಲಿ ತಂದಿದ್ದವು. ಇಂಗ್ಲಂಡವು ಸಹ ಇಂಥ ರಾಷ್ಟ್ರಗಳಲ್ಲಿ ಒಂದಾಗಿತ್ತು. ಇಂಗ್ಲಂಡ, ಜರ್ಮನಿ, ಜಪಾನ ಹಾಗು ಇತರ ರಾಷ್ಟ್ರಗಳ ಎಹು ಜನರ ಶಿಕ್ಷಣದಲ್ಲಿ ಯಾವ ಸಂಗತಿಯು ಸಯುಕ್ತಿಕವೂ ಹಿತಕರವೂ ಎಂದು ಎಣಿ ಸಲ್ಪಟ್ಟಿತ್ತೋ ಅದೇ ಸಂಗತಿಯು ಹಿಂದುಸ್ತಾನದ ಬಹು ಜನ ಶಿಕ್ಷಣದ ಬಗ್ಗೆ ಅಪಥ್ಯ ವೆನಿಸಲಾರದೆಂದು ನಾವು ನಂಬಿದ್ದೇವೆ.

ಸಾಲೆಯಲ್ಲಿ ಸಮಾಧಾನಕರವಾಗಿ ವಿದ್ಯಾರ್ಥಿಗಳ ಶಿಕ್ಷಣವು ಸಾಗಬೇಕಾದರೆ ಕಯೂ ಶಿಕ್ಷಕನು ಕಲಿಸಬೇಕಾಗಿರುವ ಹುಡುಗರ ನಿಯಮಿತ ಸಂಖ್ಯೆಯು ಒಂದು ಮಹ ತ್ವದ ಸಂಗತಿಯೆಂಬದನ್ನು ನಾವು ಒಪ್ಪಿಕೊಳ್ಳುತ್ತೇನೆ. ಹುಡುಗರ ಸಂಖ್ಯೆಯು ಕಡಿಮೆ ಯಾದಷ್ಟು ಶಿಕ್ಷಕನ ಕೆಲಸದ ಪರಿಣಾಮವು ಮೇಲಾದದ್ದಾಗುವದು. ಆದರೆ ನಮ್ಮ ದೇಶದಲ್ಲಿ ಪ್ರಾಥಮಿಕ ಶಿಕ್ಷಣದ ಕಕ್ಷೆಯಲ್ಲಿ ತರಬೇಕಾಗಿರುವ ಹುಡುಗರ ಸಂಖ್ಯೆಯು ಪ್ರಚಂಡವಾದದ್ದಿರುವದು; ಇದಕ್ಕೆ ಅವಶ್ಯವಿರುವ ಹಣವು ಮಾತ್ರ ಸ್ವಲ್ಪವೇ ಇರು ವದು. ಇಂಥ ಪರಿಸ್ಥಿತಿಯಲ್ಲಿ ಎಷ್ಟು ಸ್ವಲ್ಪ ಹುಡುಗರಿಗಾಗಿ ಒಬ್ಬೊಬ್ಬ ಶಿಕ್ಷಕನನ್ನು ನಿಯಮಿಸಬೇಕೆಂಬ ಪ್ರಶ್ನೆಯನ್ನು ನಾವು ಬಿಡಿಸಬೇಕಾಗಿದೆ. ಇದನ್ನು ವಾಚಕರು ಮರೆಯ ಲಾಗದು.

ಮುಂಬಯಿ ಇಲಾಖೆಯು ಸಾಮಾನ್ಯ ಪ್ರಾಥಮಿಕ ಶಿಕ್ಷಕನಿಂದ ಇಷ್ಟು ಹುಡು ಗರಿಗೆ ಕಲಿಸುವ ಕೆಲಸವು ತೂಗುವದಿಲ್ಲೆಂದು ಕೆಲವರು ಹೇಳಬಹುದು. ಮುಂಬಯಿ ಯಲ್ಲಿ ಟ್ರೇಂಡ ಶಿಕ್ಷಕರ ಸಂಖ್ಯೆಯ ಪ್ರಮಾಣವಾದರೂ ಇತರ ದೇಶಗಳ ಮಾನದಿಂದ ಸಣ್ಣದಿರುವದೆಂದು ಇತರರು ವಾದಿಸಬಹುದು. ಇಂಥ ಪರಿಸ್ಥಿತಿಯಲ್ಲಿ ೬೦ ವಿದ್ಯಾರ್ಥಿಗಳ ವರೆಗೆ ಒಬ್ಬನೇ ಶಿಕ್ಷಕನು ಕಲಿಸಲಿಕ್ಕೇಬೇಕೆಂದು ಹಟತೊಟ್ಟರೆ ವಿದ್ಯಾರ್ಥಿಗಳು ನಿಯ ಮಿತವಾಗಿ ಮೇಲಿನ ಇಯತ್ತೆಗಳಿಗೆ ಹೋಗದೆ ಸಾಲೆಯಲ್ಲಿ ಕೊಳೆಬೀಳಹತ್ತುವರೆಂದೂ ವಿದ್ಯಾರ್ಥಿಗಳ ಕಾಲದ ಅಪವ್ಯಯದ ಪ್ರಶ್ನೆವು ಭಯಂಕರ ಸ್ವರೂಪವನ್ನು ತಾಳುವ ದೆಂದೂ ಶಿಕ್ಷಣಕ್ಕಾಗಿ ವೆಚ್ಚವಾಗುವ ಸಾರ್ವಜನಿಕ ಹಣವು ವೃಥಾ ಹೋಗುವದೆಂದೂ ಬೇರೆಯವರು ಹೇಳಬಹುದು. ಇಷ್ಟು ವಿದ್ಯಾರ್ಥಿಗಳ ಶಿಕ್ಷಣಕ್ಕಾಗಿ ಒಬ್ಬ ಶಿಕ್ಷಕನನ್ನು ಮಾತ್ರ ಇಟ್ಟರೆ ಆತನು ಒಂದೆರಡಕ್ಕಿಂತ ಹೆಚ್ಚು ವರ್ಗಗಳಿಗೆ ಕಲಿಸಲೇಬೇಕಾಗುವ ದೆಂದೂ ಈ ಮೂಲಕ ಶಿಕ್ಷಣವು ಹೇಳಲಾರದಷ್ಟು ನಿರರ್ಥಕವಾನದ್ದಾಗುವದೆಂದೂ ಇವರು ತೋರಿಸಬಹುದು. ಇವೆಲ್ಲ ಪ್ರಶ್ನೆಗಳಿಗೂ ಇಂಥ ಇತರ ಪ್ರಶ್ನೆಗಳಿಗೂ ಒಂದೇ ಉತ್ತರವನ್ನು ಕೊಡಬಹುದು. ಅದು ಯಾವುದೆಂದರೆ, ಮುಂಬಯಿಯು ಪ್ರಾಥಮಿಕ ಶಿಕ್ಷಕನು ಇತರ ದೇಶಗಳ ಪ್ರಾಥಮಿಕ ಶಿಕ್ಷಕರಿಗೆ ಹೋಲಿಸಿ ನೋಡಲು ಕಡಿಮೆ ಪ್ರತಿ

ಯವನೆಂದು ಹೇಳಲಾಗದು; ಇದಲ್ಲದೆ ಇಂಗ್ಲಂಡದಲ್ಲಿ ಬಹುಜನರ ಪ್ರಾಥಮಿಕ ಶಿಕ್ಷಣದ ಯೋಜನೆಯ ಪ್ರಶ್ನವು ಒಳ್ಳೇ ತೀಕ್ಷ್ಣವಾಗಿದ್ದಾಗ ಅಲ್ಲಿದ್ದ ಟ್ರೇಂಡ ಶಿಕ್ಷಕರ ಪ್ರಮಾಣಕ್ಕಿಂತ ಸದ್ಯದ ಮುಂಬಯಿ ಇಲಾಖೆಯ ಟ್ರೇಂಡ ಶಿಕ್ಷಕರ ಪ್ರಮಾಣವು ಕಡಿಮೆಯಿರುವದಿಲ್ಲವೆಂಬದನ್ನು ತೋರಿಸಿಕೊಡಬಹುದು. ೧೮೭೦ರ ವರೆಗೆ ಅಂದರೆ ನಾವು ಹಿಂದೆ ಹೇಳಿದಂತೆ ಬಹುಜನರ ಪ್ರಾಥಮಿಕ ಶಿಕ್ಷಣದ ಪ್ರಶ್ನವು ಇಂಗ್ಲಂಡದಲ್ಲಿ ಪ್ರಬಲವಾದ ಪ್ರಶ್ನವಾಗಿದ್ದ ಸಮಯದಲ್ಲಿ ಅಲ್ಲಿ ಪ್ರತಿಯೊಬ್ಬ ಶಿಕ್ಷಕನು ಕಲಿಸುತ್ತಿದ್ದ ವಿದ್ಯಾರ್ಥಿಗಳ ಸಂಖ್ಯೆಯ ಸರಾಸರಿಯು ೫೦ ಕ್ಕಿಂತ ಕಡಿಮೆಯಿರಲಿಲ್ಲ ಸದ್ಯಕ್ಕೆ ನೂರರಲ್ಲಿ ನೂರರಂತೆ ಅಂದರೆ ಪೂರ್ಣವಾಗಿ ಸಾಕ್ಷರತೆಯನ್ನು ಹೊಂದಿದ ಜನರಿರುವ ಸುಧಾರಿಸಿದವೆನಿಸಿಕೊಳ್ಳುವ ಬಹುತರ ದೇಶಗಳಲ್ಲಿ ಸಹ ಪ್ರತಿಯೊಬ್ಬ ಶಿಕ್ಷಕನು ಕಲಿಸಬೇಕಾಗುವ ವಿದ್ಯಾರ್ಥಿಗಳು ಒಂದೇ ವರ್ಗದಲ್ಲಿರಬೇಕೆಂಬ ನಿಯಮವಿಲ್ಲ; ಒಂದಕ್ಕಿಂತ ಹೆಚ್ಚು ವರ್ಗಗಳಿಗೆ ಆತನು ಕಲಿಸಬೇಕಾಗುವದು. ಬೇರೆ ಬೇರೆ ವರ್ಗಗಳಲ್ಲಿರುವ ಹುಡುಗರ ಸಂಖ್ಯೆಯು ಅತನು ಕಲಿಸಬೇಕೆಂಬ ನಿರ್ಬಂಧವಿರುವ ಸಂಖ್ಯೆಯಷ್ಟು ಆಗುವವರೆಗೆ ಎಲ್ಲ ಇಯತ್ತೆಗಳಿಗೆ ಬರುವ ಹುಡುಗರಿಗೆಲ್ಲ ಆತನು ಶಿಕ್ಷಣ ಕೊಡಬೇಕಾಗುವದು. ಮುಂಬಯಿಯ ಪ್ರಾಥಮಿಕ ಶಿಕ್ಷಕನಿಗೆ ಈಗ ಆತನು ಕಲಿಸುತ್ತಿರುವ ವಿಷಯಗಳ ಸಂಖ್ಯೆಯನ್ನು ಕಡಿಮೆಮಾಡಿ ತೀರ ಸುಲಭವಾದ ಅಭ್ಯಾಸಪತ್ರಿಕೆಯನ್ನು ಅನುಸರಿಸಿ ಕಲಿಸುವ ಕೆಲಸವನ್ನು ಮಾತ್ರ ಒಪ್ಪಿಸಿದರೆ, ಹಾಗು ಒತ್ತಾಯದ ಶಿಕ್ಷಣದ ನೇನುಗಳನ್ನು ಅಮಲಿನಲ್ಲಿ ತಂದು ಹುಡುಗರು ನಿಯಮಿತವಾಗಿ ಸಾಲೆಗೆ ಬರುವಂತೆ ನಿರ್ಬಂಧವನ್ನು ಒದಗಿಸಿಕೊಟ್ಟರೆ ಸದ್ಯಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿಗೆ ಆತನು ಸರಿಯಾಗಿ ಕಲಿಸಲಾರನೆಂದು ನಾವು ಯಾಕೆ ಗ್ರಹಿಕೆಮಾಡಿಕೊಳ್ಳಬೇಕು ?

೧೦. ಕಲಿಸುವ ಕಾಲಾವಧಿಯ ವಿಭಜನೆ

ಪ್ರತಿಯೊಬ್ಬ ಶಿಕ್ಷಕನು ೬೦ ಜನ ವಿದ್ಯಾರ್ಥಿಗಳಿಗೆ ಕಲಿಸುವದು ಎಷ್ಟು ಆವಶ್ಯಕವಿರುವದೆಂಬ ಪ್ರಶ್ನದಬಗ್ಗೆ ನಾವು ಈ ಮೊದಲು ವಿವರಿಸಿದ್ದೇವೆ. ಈಗ ಮುಕ್ಕಾಲು ಶತಮಾನಗಳಿಂದ ನಾವೆಲ್ಲರು ಸಣ್ಣ ಸಣ್ಣ ವರ್ಗಗಳು, ಸ್ವಲ್ಪ ಹುಡುಗರು ಈ ಮೊದಲಾದ ಯೋಜನೆಗಳಲ್ಲಿ ಬೆಳೆದಿರುವೆವು. ನಮ್ಮಲ್ಲಿ ಈ ಕಲ್ಪನೆಗಳು ನೆಟ್ಟು ಬೇರೂರಿರುವವು. ಇವಕ್ಕೆ ತೀರ ಭಿನ್ನವಾದ ನಮ್ಮ ಸೂಚನೆಗಳಿಗೆ ಸುಲಭವಾಗಿ ಅನುಮೋದನವು ದೊರೆಯುವದೆಂದು ನಾವು ಭಾವಿಸಿಲ್ಲ; ಇದನ್ನು ಒಮ್ಮೆಲೆ ಅಮಲಿನಲ್ಲಿ ತರುವದೂ ಮುಃಸಾಧ್ಯವೆಂಬದನ್ನು ನಾವು ಒಪ್ಪಿಕೊಳ್ಳುತ್ತೇವೆ. ಭವಿಷ್ಯತ್ಕಾಲದ ಪರಿಸ್ಥಿತಿಯನ್ನು ಮನದಲ್ಲಿ ತಂದು ನಮ್ಮ ಸೂಚನೆಯನ್ನು ನೋಡಲಾರದ ಜನರು ಇದನ್ನು ಬಲವಾಗಿ ವಿರೋಧಿಸುವರು. ಶಿಕ್ಷಕರು ಸಹ ನಮ್ಮಮೇಲೆ ಹರಿದು ಬೀಳುವರು. ಬಹುಜನರ

ಪ್ರಾಥಮಿಕ ಶಿಕ್ಷಣದ ಪ್ರಶ್ನೆಯನ್ನು ಬಹುಮುಖವಾಗಿ ಪರೀಕ್ಷಿಸಿ ರಾಷ್ಟ್ರಹಿತಕ್ಕೆ ಅದರ ಮಹತ್ವವು ಎಷ್ಟಿರುವದೆಂಬದನ್ನು ಶಿಕ್ಷಕರು ತಿಳಿದುಕೊಳ್ಳುವ ಸ್ಥಿತಿಯಲ್ಲಿರುವದಿಲ್ಲ. ಸಾಲೆಯು ಶಿಕ್ಷಣದಲ್ಲಿ ಅವರ ದೃಷ್ಟಿಕೋನವು ಪರಿಣಾಮಕರವಾದ ಶಿಕ್ಷಣದಕಡೆಗೆ ಮಾತ್ರ ಒಲೆದಿರುವದು. ಈ ಶಿಕ್ಷಣದ ಇತರ ಅಂಗಗಳ ಕಡೆಗೆ ಅವರ ಲಕ್ಷ್ಯವು ಹೋಗುವಂತಿಲ್ಲ. ನಮ್ಮ ಅಭಿಪ್ರಾಯಗಳು ಸರ್ವಸಮ್ಮತವಾದವಿಲ್ಲದಿದ್ದರೂ ಸತ್ಯದ ನೆಲೆಗಟ್ಟಿನಮೇಲೆ ನಿಂತಿರುವವೆಂದು ಮನನರಿಕೆಯಾದವರು ಒಮ್ಮನಸಿನಿಂದ ಪ್ರಯತ್ನಗಳನ್ನು ಮಾಡಿದರೆ ನಮ್ಮ ಹೊಸ ಕಲ್ಪನೆಗಳು ಜನತೆಯಲ್ಲಿಯೂ ಶಿಕ್ಷಕ ವರ್ಗದಲ್ಲಿಯೂ ನೆಲೆಗೊಂಡು ಯೋಗ್ಯವಾದವುಗಳೆಂದು ನಿರ್ಧರಿಸಲ್ಪಡುವವು.

ಆರಂಭದಲ್ಲಿ ತೊಂದರೆಗಳು ಮುಂದೆ ಬರುವವು. ಇವುಗಳನ್ನು ದೂರಮಾಡಲಿಕ್ಕೆ ನಾವು ವಿದ್ಯಾರ್ಥಿಗಳಿಗೆ ಕಲಿಸುವ ಕಾಲಾವಧಿಯನ್ನು ಕಡಿಮೆಮಾಡಬಹುದು. ವ್ಯವಹಾರದಲ್ಲಿ ಈ ಯೋಜನೆಯನ್ನು ಹಲವು ಬಗೆಯಿಂದ ಅಮಲಿನಲ್ಲಿ ತರಬಹುದು. ಶಿಫ್ಟ್ ಸಿಸ್ಟೆಮ್ ಎಂಬ ಪದ್ಧತಿಯನ್ನು ಅಂದರೆ ಒಬ್ಬ ಶಿಕ್ಷಕನು ಮುಂಜಾನೆ ಕೆಲವು ಹುಡುಗರಿಗೂ ಮಧ್ಯಾಹ್ನದಲ್ಲಿ ಬೇರೆಯವರಿಗೂ ಕಲಿಸುವ ಪದ್ಧತಿಯನ್ನು ಅನುಸರಿಸಬಹುದು. ೨೦ ಕ್ಕಿಂತ ಹೆಚ್ಚು ಹುಡುಗರು ಕೂಡದಿರುವ ಹಳ್ಳಿಗಳು ಇರುವವಷ್ಟೇ. ಇಂಥ ಹಳ್ಳಿಗಳಲ್ಲಿ ವಾರವಲ್ಲಿ ಎರಡು ಇಲ್ಲವೆ ಮೂರು ದಿನ ಸಾಲೆ ನಡಿಸಬಹುದು. ಮಿಕ್ಕ ದಿವಸ ಶಿಕ್ಷಕನು ಇಂಥ ನೆರೆಹಳ್ಳಿಗೆ ಹೋಗಿ ಕಲಿಸಿಬರಬಹುದು. ಈ ವ್ಯವಸ್ಥೆಯನ್ನು ಮಾಡುವಾಗ ಪ್ರತಿಯೊಬ್ಬ ಶಿಕ್ಷಕನು ಸುಮಾರು ೬೦ಜನ ವಿದ್ಯಾರ್ಥಿಗಳ ಶಿಕ್ಷಣದಬಗ್ಗೆ ಜವಾಬುದಾರನಾಗುವನೆಂಬದನ್ನು ನೋಡಿಕೊಂಡರೆ ತೀರಿತು. ಅಭ್ಯಾಸಪತ್ರಿಕೆಯ ವಿಷಯಗಳನ್ನು ಕಡಿಮೆಮಾಡಬೇಕೆಂದು ಈ ಮೊದಲೇ ಹೇಳಿರುವೆವು. ಇದಲ್ಲದೆ ಸುಲಭವಾದ ಪಠ್ಯಪುಸ್ತಕಗಳನ್ನೂ ಬರೆಯಿಸಬೇಕಾಗುವದು.

ಈ ಮೇರಿಗೆ ಕಲಿಸುವ ವೇಳೆಯನ್ನು ಕಡಿಮೆಮಾಡುವದು ಒಳಿತೆಂದು ನಮ್ಮ ಅಭಿಪ್ರಾಯವಲ್ಲ; ಸದ್ಯದ ಅನೇಕ ದೇಶಗಳಲ್ಲಿ ಪರಿಸ್ಥಿತಿಗೆ ತಕ್ಕಂತೆ ಈ ವ್ಯವಸ್ಥೆಯನ್ನು ಮಾಡಿಕೊಂಡಿರುವರು. ಕಲಿಸಬೇಕಾಗಿರುವ ಹುಡುಗರ ಸಂಖ್ಯೆಯು ಬಹಳ ದೊಡ್ಡದಿದ್ದು ಈ ಬಗ್ಗೆ ಸಮರ್ಪಕವಾದ ವ್ಯವಸ್ಥೆಮಾಡಲಿಕ್ಕೆ ಅವಶ್ಯವಿರುವಷ್ಟು ಹಣವು ಇಲ್ಲದಿದ್ದರೆ ಮಾತ್ರ ಇಂಥ ಅರ್ಧಮರ್ಧ ಯೋಜನೆಯನ್ನು ನಿರುಪಾಯದಿಂದ ಮಾಡಿಕೊಳ್ಳಬೇಕಾಗುತ್ತದೆ. ಪರಿಸ್ಥಿತಿಯು ಬದಲಾಗಿ ಹಣದ ಕೊರತೆಯು ದೂರವಾಯಿತೆಂದರೆ ಈ ವ್ಯವಸ್ಥೆಯಲ್ಲಿ ಸುಧಾರಣೆಮಾಡಿಕೊಳ್ಳುತ್ತ ಹೋಗಬಹುದು. ಸದ್ಯಕ್ಕೆ ನಮ್ಮಲ್ಲಿ ಪ್ರಾಥಮಿಕ ಶಿಕ್ಷಣವು ಸಾರ್ವತ್ರಿಕವಾಗಬೇಕಾದರೆ ಈಗ ಸಾಲೆಗೆ ಹೋಗುತ್ತಿರುವ ಹುಡುಗರ ಸಂಖ್ಯೆಯು ಮುಮ್ಮಡಿಯಷ್ಟು ಹುಡುಗರನ್ನು ನಾವು ಸಾಲೆಗಳಲ್ಲಿ

ಸೇರಿಸಿಕೊಳ್ಳಬೇಕಾಗುವದು. ಇದನ್ನು ಸಾಧಿಸಬೇಕಾದರೆ ಕಲಿಸುವ ವೇಳೆಯಲ್ಲಿ ವಿಭಜನೆಯನ್ನು ಮಾಡಿಕೊಂಡ ಹೊರತು ಗತ್ಯಂತರವಿಲ್ಲೆಂದೇ ಈ ಸೂಚನೆಯನ್ನು ಮಾಡಿರುವೆವು.

೧೧. ಈ ವ್ಯವಸ್ಥೆಯನ್ನು ಹಲವು ರಾಷ್ಟ್ರಗಳು ಕೈಕೊಂಡಿರುವವು

ದಿನದಲ್ಲಿ ಎರಡು ಭಾಗ ಮಾಡಿ ಮುಂಜಾನೆ ಕೆಲವು ಹುಡುಗರಿಗೆ ಮಧ್ಯಾಹ್ನ ಕೆಲವು ಹುಡುಗರಿಗೆ ಒಬ್ಬನೇ ಶಿಕ್ಷಕನು ಕಲಿಸುವ ವ್ಯವಸ್ಥೆಯನ್ನು ಕೈಕೊಂಡ ರಾಷ್ಟ್ರಗಳಲ್ಲಿ ಜರ್ಮನಿಯು ಮೊದಲನೆಯದೆನಿಸುವದು. ಇಂದಿಗೂ ಜರ್ಮನಿಯಲ್ಲಿ ಮೊದಲನೆಯ ಇಯತ್ತೆಯಲ್ಲಿರುವ ಹುಡುಗರಿಗೆ ವಾರದಲ್ಲಿ ೧೮ ತಾಸಿಗಿಂತ ಹೆಚ್ಚು ಶಿಕ್ಷಣವನ್ನು ಕೊಡಲಾಗದೆಂದು ನಿರ್ಬಂಧವಿರುವದು.

೧೯೦೦ ಸುಮಾರಿಗೆ ಫ್ರಾನ್ಸ ದೇಶದಲ್ಲಿಯೂ ಶಾಲಾವ್ಯವಸ್ಥೆಯು ಈ ಬಗೆಯಲ್ಲಿ ಇರಬಹುದೆಂದು ನೇಮಗಳನ್ನು ಮಾಡಿದರು.

ಇತಾಲಿ, ಸಂಯುಕ್ತ ಸಂಸ್ಥಾನ, ಆಸ್ಟ್ರೇಲಿಯಾದ ಪ್ರಾಂತಗಳು ಇವೆಲ್ಲ ದೇಶಗಳಲ್ಲಿ ಒಂದಿಲ್ಲೊಂದು ಕಾಲದಲ್ಲಿ ಈ ಬಗೆಯ ವ್ಯವಸ್ಥೆಯು ಅಸ್ತಿತ್ವದಲ್ಲಿತ್ತು.

ಜಪಾನದಲ್ಲಿ ೧೮೭೨ರಲ್ಲಿ ಬಹು ಜನರ ಶಿಕ್ಷಣಕ್ಕೆ ಭರತಿಯ ಕಾಲವು ಒದಗಿತು. ಆರು ವರ್ಷಗಳಲ್ಲಿ ಸಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಇಮ್ಮಡಿಗಿಂತ ಹೆಚ್ಚಾಯಿತು. ೧೮೭೩ರಲ್ಲಿ ಹಾಜರಿಯ ಸರಾಸರಿಯು ೧೦೦ಕ್ಕೆ ೩೮ರಂತೆ ಇದ್ದದ್ದು ೧೮೭೯ರಲ್ಲಿ ನೂರಕ್ಕೆ ೪೧ ಆಯಿತು. ಜನಾಂಗದ ಶಿಕ್ಷಣದ ಪ್ರಗತಿಯು ಆರಂಭ ದಿಶೆಯಲ್ಲಿ ಕೂಡ ಬಹಳ ಜನರಿಗೆ ಸ್ವಲ್ಪವೇ ಕಲಿಸಿ ಅವರನ್ನು ಸಾಕ್ಷರರನ್ನಾಗಿ ಮಾಡುವದಕ್ಕಿಂತ ಸ್ವಲ್ಪ ಜನರಿಗೆ ಹಲವು ವಿದ್ಯೆಗಳನ್ನು ಕಲಿಸಿ ಅವರನ್ನು ಸುಶಿಕ್ಷಿತರೆನಿಸಿಕೊಳ್ಳುವಂತೆ ಮಾಡುವದೇ ಮೇಲು ಎಂದು ಅಭಿಪ್ರಾಯಪಡುವವರು ಈ ಅಂಕೆಗಳನ್ನು ವಿಚಾರಪೂರ್ವಕವಾಗಿ ಮನನಮಾಡತಕ್ಕದ್ದು.

ಜಪಾನದ ವಿದ್ಯಾಧಿಕಾರಿಗಳು ಮೊದಲು ಡಚ್ಚ ಹಾಗು ಫ್ರೆಂಚ ಪದ್ಧತಿಗಳನ್ನು ಅನುಸರಿಸಿ ಜನಾಂಗದ ಶಿಕ್ಷಣವನ್ನು ಸಾಗಿಸಲು ಮೊದಲಿಟ್ಟರು. ಆದರೆ ಇವಕ್ಕೆ ತಗಲುವ ವೆಚ್ಚವು ಅವರ ಶಕ್ತಿಗೆ ಮೀರಿದ್ದಾಯಿತು. ಆದ್ದರಿಂದ ೧೮೭೯ರಲ್ಲಿ ಅವರು ಹಲವು ವಿಷಯಗಳನ್ನೊಳಕೊಂಡ ಹಳೆಯ ಅಭ್ಯಾಸಪತ್ರಿಕೆಯನ್ನು ನಿರಾಕರಿಸಿದರು; ಪ್ರತಿಯೊಬ್ಬ ಹುಡುಗನಿಗೆ ಸಾಲೆಯು ಎಲ್ಲ ತಾಸುಗಳಲ್ಲಿ ಶಿಕ್ಷಣ ದೊರೆಯಬೇಕೆಂಬ ತತ್ವವನ್ನು ಒಟ್ಟುಕೊಟ್ಟರು. ಪ್ರಾಥಮಿಕ ಸಾಲೆಗಳಲ್ಲಿ ಕಲಿಸುವ ವಿಷಯಗಳ ಸಂಖ್ಯೆಯನ್ನು ಕಡಿಮೆ ಮಾಡಿದರು. ಕೆಲವು ೧೪ ವರುಷ ವಯಸ್ಸಿನ ಹುಡುಗರು ವರ್ಷ

ದಲ್ಲಿ ಆರು ತಿಂಗಳಷ್ಟು ದಿನಗಳ ವರೆಗೆ ಸಾಲೆಗೆ ಬಂದರೆ ಸಾಕೆಂದು ನಿಯಮವನ್ನು ಮಾಡಿದರು. ಸ್ವಂತವಾಗಿ ಸಾಲೆಯನ್ನು ನಡಿಸಲಿಕ್ಕೆ ಬೇಕಾಗುವಷ್ಟು ಹುಡುಗರಿಲ್ಲದ ಕೆಲವು ಹಳ್ಳಿಗಳಿಗಾಗಿ ತಿರುಗಾಡುವ ಶಿಕ್ಷಕರನ್ನು ಇಟ್ಟರು. ಅಂದರೆ ಒಬ್ಬ ಶಿಕ್ಷಕನು ನಿಯಮಿತ ವಾರಗಳ ದಿವಸ ಒಂದೊಂದು ಹಳ್ಳಿಗೆ ಹೋಗಿ ಕಲಿಸುವ ವ್ಯವಸ್ಥೆಯಾಯಿತು. ಗಲಭೆಯಲ್ಲಿ ಪ್ರಾಥಮಿಕ ಶಿಕ್ಷಣವು ಸುಲಭವೂ ವ್ಯವಹಾರಕ್ಕೆ ತಕ್ಕದ್ದೂ ಇದ್ದರೆ ಸಾಕೆಂಬ ತತ್ವವನ್ನು ಸರಕಾರದವರು ಒಪ್ಪಿಕೊಂಡರು. ಹುಡುಗರು ಆರಂಭದ ೩ ವರ್ಷದ ಅಭ್ಯಾಸವನ್ನು ಮುಗಿಸುವ ವರೆಗೆ ಅವರ ತಾಯ್ತಂದೆಗಳು ಅವರನ್ನು ವರ್ಷದಲ್ಲಿ ೧೬ ವಾರಗಳು ಪೂರ್ಣವಾಗುವವರೆಗಾದರೂ ಸಾಲೆಗೆ ಕಳಿಸಲಿಕ್ಕೇಬೇಕೆಂದು ನಿರ್ಬಂಧ ಮಾಡಿದರು.

ಇಜಿಪ್ತವೂ ತುರ್ಕಸ್ಥಾನವೂ ಪೌರ್ವಾತ್ಯ ದೇಶಗಳಷ್ಟೇ. ರೂಢಿಯಲ್ಲಿರುವದರಲ್ಲಿಯೇ ಸಮಾಧಾನ ಹೊಂದುವದು ಈ ನಮ್ಮ ಪೂರ್ವದ ರಾಷ್ಟ್ರಗಳ ಲಕ್ಷಣವು. ಆದರೆ ಇತ್ತಲಾಗಿ ಈ ದೇಶಗಳು ಪೌರ್ವಾತ್ಯರಿಗೆ ಸಹಜವಾದ ಅರಿನಿದ್ದೆಯಿಂದ ಎಚ್ಚರಗೊಳ್ಳುತ್ತಿರುವವು. ಈ ದೇಶಗಳ ಉದಾಹರಣದಿಂದ ನಮ್ಮ ಜನರ ದೃಷ್ಟಿಕೋನವು ಬದಲಾಗಬಹುದು. ಇಜಿಪ್ತದಲ್ಲಿ ಸಾಲೆಯ ಸ್ಥಳವು ಹುಡುಗರಿಗೂ ಹುಡಿಗೆಯರಿಗೂ ಕೂಡಿಯೇ ಸಾಲುವದಕ್ಕಾಗಿ ಒಪ್ಪತ್ತು ಗಂಡು ಹುಡುಗರಿಗಾಗಿಯೂ ಒಪ್ಪತ್ತು ಹುಡಿಗೆಯರಿಗಾಗಿಯೂ ಅದೇ ಸಾಲೆಯಲ್ಲಿ ಶಿಕ್ಷಣ ವ್ಯವಸ್ಥೆಯನ್ನು ಮಾಡುವ ಧೋರಣವನ್ನು ಶಿಕ್ಷಣಾಧಿಕಾರಿಗಳು ಕೈಕೊಳ್ಳುತ್ತಿರುವರು. ಈ ಮೂಲಕ ಕೂಡಲೆ ಶಿಕ್ಷಕರ ಸಂಖ್ಯೆಯನ್ನಾಗಲಿ ಸಾಲೆಯ ಮನೆಗಳನ್ನಾಗಲಿ ಹೆಚ್ಚಿಸದೆ ವಿದ್ಯೆ ಕಲಿಯುವ ಹುಡುಗ ಹುಡಿಗೆಯರ ಸಂಖ್ಯೆಯನ್ನು ಹೆಚ್ಚಿಸಬಹುದಾಗಿದೆ. ತುರ್ಕಸ್ತಾನದಲ್ಲಿ ೧೯೨೩ರಲ್ಲಿ ೩೨ ಲಕ್ಷ ಹುಡುಗರು ಸಾಲೆಯಲ್ಲಿದ್ದರು; ಸದ್ಯಕ್ಕೆ ಈ ಸಂಖ್ಯೆಯು ೪೨ ಲಕ್ಷವಾಗಿದೆ. ಹೀಗೆ ಹುಡುಗರ ಸಂಖ್ಯೆಯು ಬೆಳೆದ ಮೂಲಕ ಮುಂಜಾನೆ ಕೆಲವರಿಗೆ, ಮಿಕ್ಕವರಿಗೆ ಸಂಜೆಗೆ ಒಂದೇ ಸಾಲೆಯಲ್ಲಿ ಶಿಕ್ಷಣ ಕೊಡಬೇಕಾಗುತ್ತದೆ.

೧೨. ಸಮಾರೋಪಣ.

ಪ್ರಾಥಮಿಕ ಶಿಕ್ಷಣಕ್ಕಾಗಿ ಸದ್ಯಕ್ಕಿಂತ ಹೆಚ್ಚು ಹಣವನ್ನು ವೆಚ್ಚ ಮಾಡುವದು ಅಸಂಭವವೆಂದು ಕಂಡುಬಂದರೆ, ಹಾಗು ಈಗಿರುವ ಹಣದಲ್ಲಿಯೇ ಸಾಲೆಗೆ ಹೋಗುವ ವಯಸ್ಸುಳ್ಳ ಎಲ್ಲ ವಿದ್ಯಾರ್ಥಿಗಳ ಶಿಕ್ಷಣವನ್ನು ಸಾಗಿಸಬೇಕಾದರೆ ಕೆಳಗೆ ಕಾಣಿಸುವ ಮಹತ್ವದ ಸೂಚನೆಗಳನ್ನು ತೀವ್ರವೇ ಅಮಲಿನಲ್ಲಿ ತರಬೇಕೆಂದು ನಮ್ಮ ಅಭಿಪ್ರಾಯವು. ಇವುಗಳನ್ನು ನಾವು ಸಂಕ್ಷೇಪದಲ್ಲಿ ಇಲ್ಲಿ ಮಕ್ಕೊನ್ಮೆ ಕೊಡುವೆವು.

(೧) ಪ್ರತಿಯೊಬ್ಬ ಶಿಕ್ಷಕನು ೩೦ರ ಬದಲು ೬೦ ಹುಡುಗರಿಗೆ ಕಲಿಸಬೇಕು.

(೨) ಪ್ರಾಥಮಿಕ ಶಿಕ್ಷಣದ ಅಭ್ಯಾಸವನ್ನು ೪ ವರ್ಷಗಳಲ್ಲಿ ಮುಗಿಸಬೇಕು.

(೩) ಅಭ್ಯಾಸ ಪತ್ರಿಕೆಯೊಳಗಿನ ಕೆಲವು ವಿಷಯಗಳನ್ನು ಬಿಟ್ಟು ಮುಖ್ಯವಾದ ಓದು, ಬರಿಹ, ಗಣಿತ ಈ ಮೂರು ವಿಷಯಗಳಿಗೆ ಹೆಚ್ಚು ಲಕ್ಷ್ಯ ಕೊಡಬೇಕು.

(೪) ಸಾಲೆಗೆ ಬರುವ ವಯಸ್ಸನ್ನು ೬ರಿಂದ ೭ ಮಾಡಬೇಕು.

(೫) ಶಿಫ್ಟ್ ಪದ್ಧತಿ ಇಲ್ಲವೆ ಅದರಂಥ ಮತ್ತೊಂದು ಯೋಜನೆಯನ್ನು ಮಾಡಬೇಕು.

ಈ ಬದಲಾವಣೆಗಳು ವಿಪರೀತವಾದವೆಂದು ಕೆಲವರಿಗೆ ಅನಿಸಬಹುದು. ಆದರೆ ಸದ್ಯಕ್ಕೆ ಸುಧಾರಣೆಯ ಶಿಖರವನ್ನೈದಿದ ಜನಾಂಗಗಳು ಇವುಗಳನ್ನು ಹಿಂದೆ ತಮ್ಮಲ್ಲಿ ಅವಶ್ಯಕವೆನಿಸಿದಾಗ ರೂಢಿಯಲ್ಲಿ ತಂದಿವೆಯೆಂಬದನ್ನು ಇವರು ಲಕ್ಷ್ಯದಲ್ಲಿಡಬೇಕು.

ವಿದ್ಯಾರ್ಥಿಗಳನ್ನು ೭ ವರ್ಷ ವಯಸ್ಸು ಮುಗಿದ ಬಳಿಕ ಸಾಲೆಗೆ ಕಳಿಸತಕ್ಕದ್ದೆಂದು ಮಿ|| ಪರೂಳೇಕರ ಇವರು ಅಭಿಪ್ರಾಯಪಡುವರು. ನಮ್ಮ ದೇಶದ ಹುಡುಗರು ಐದು ವರುಷದವರಾದ ಕೂಡಲೆ ಸಾಲೆಗೆ ಅವರನ್ನು ಕಳಿಸುವ ಪರಿಪಾಠವುಂಟು. ನಮ್ಮ ಹಳ್ಳಿಗಳಲ್ಲಿ ಕೂಡ, ಹುಡುಗರು ಸ್ವಲ್ಪ ದೊಡ್ಡವರಾಗಿ ಹೊಲಗೆಲಸಗಳಲ್ಲಿ ತಾಯ್ತಂದೆಗಳಿಗೆ ನೆರವಾಗುವ ವಯಸ್ಸಿನವರಾದ ಕೂಡಲೆ ಅವರನ್ನು ಸಾಲೆ ಬಿಡಿಸುವದುಂಟು. ಈ ಮೂಲಕ ಏಳು ವರ್ಷಗಳು ಮುಗಿಯುವವರೆಗೆ ಹುಡುಗನನ್ನು ಮನೆಯಲ್ಲಿಟ್ಟುಕೊಂಡು ಮುಂದೆ ನಾಲ್ಕು ವರ್ಷಗಳ ವರೆಗೆ ಆತನನ್ನು ಒತ್ತಾಯದಿಂದ ಸಾಲೆಗೆ ಬರಮಾಡಿಕೊಳ್ಳುವದರಿಂದ ಹಳ್ಳಿಗರ ಉದ್ಯೋಗದ ಮೇಲೆ ಯಾವ ಪರಿಣಾಮುಗಳಾಗಬಹುದೆಂಬದು ವಿಚಾರಣೀಯವಾಗಿರುವದು.

ಸಾಲೆಗಳಲ್ಲಿ ಹುಡುಗರನ್ನು ನಿಯಮಿತ ಕಾಲದಲ್ಲಿ ಮಾತ್ರ ಸೇರಿಸಿಕೊಳ್ಳತಕ್ಕದ್ದೆಂಬ ಮಾತಿಗೆ ಸಾಮಾನ್ಯವಾಗಿ ಎಲ್ಲರೂ ಒಪ್ಪಬಹುದು. ಯಾಕೆಂದರೆ ಎಲ್ಲ ದಿನಗಳಲ್ಲಿ ಹುಡುಗರನ್ನು ಸೇರಿಸಿಕೊಳ್ಳುವದರಿಂದ ಹೊಸದಾಗಿ ಬಂದ ಹುಡುಗರ ಅಭ್ಯಾಸವು ಸುಸೂತ್ರವಾಗಿ ಸಾಗುವದಿಲ್ಲ; ಇವರನ್ನು ಪೂರ್ಣವಾಗಿ ದುರ್ಲಕ್ಷಿಸುವದು ಶಕ್ಯವಿರುವದಿಲ್ಲ. ಈ ಮೂಲಕ ಶಿಕ್ಷಕನ ಕೆಲಸಕ್ಕೆ ತೊಂದರೆಯುಂಟಾಗುತ್ತದೆ. ಬಾಲಕರ ವರ್ಗಕ್ಕೆ ವರ್ಷದಲ್ಲಿ ಎರಡು ಸಾರಿ ಅಂದರೆ ಆರಂಭದಲ್ಲಿ ಒಮ್ಮೆ ಮೊದಲನೆಯ ಷಣ್ಮಾಸವು ಮುಗಿದು ಎರಡನೆಯದು ಪ್ರಾರಂಭವಾಗುವಾಗ ಒಮ್ಮೆ ಹೆಸರು ಹಚ್ಚಿಕೊಳ್ಳುವದರಲ್ಲಿ ಲಾಭವಿರುವದೆಂದು ನಮಗೆ ತೋರುತ್ತದೆ. ಸದ್ಯಕ್ಕೆ ಎಷ್ಟೋ ಶಾಲೆಗಳಲ್ಲಿ ಆರು ತಿಂಗಳ ವರೆಗೆ ಕ್ರಮದಿಂದ ಸಾಲೆಗೆ ಬರುವ ಹುಡುಗರು ಒಂದು ವರ್ಷದಲ್ಲಿ,

ಒಮ್ಮೊಮ್ಮೆ ಅದಕ್ಕೂ ಕಡಿವೆ ಅವಧಿಯಲ್ಲಿ ಒಂದನೆಯ ಇಯತ್ತೆಯ ಅಭ್ಯಾಸವನ್ನು ಮುಗಿಸಿ ಎರಡನೆಯ ಇಯತ್ತೆಗೆ ಹೋಗಲು ತಕ್ಕವರಾಗುತ್ತಾರೆ.

ಅಭ್ಯಾಸಪತ್ರಿಕೆಯನ್ನು ಸುಲಭ ಮಾಡಿ ಪ್ರಾಥಮಿಕ ಶಾಲೆಗಳ ಮೊದಲಿನ ನಾಲ್ಕು ಇಯತ್ತೆಗಳಲ್ಲಿ ಓದು, ಬರೆಹ, ಗಣಿತ ಈ ಮೂರು ವಿಷಯಗಳನ್ನು ಮಾತ್ರ ಕಲಿಸಬೇಕೆಂದು ಮಿ॥ ಪರೂಳೇಕರ ಇವರ ಅಭಿಪ್ರಾಯವು. ಅವರು ಬಿಡತಕ್ಕವೆಂದು ಹೇಳಿರುವ ಆರರಲ್ಲಿ ಎರಡು ವಿಷಯಗಳನ್ನು ಈಗ ನಾಲ್ಕನೆಯ ಇಯತ್ತೆಯಲ್ಲಿ ಆರಂಭಿಸುವದುಂಟು. ವ್ಯಾಕರಣದ ಮೂಲತತ್ವಗಳನ್ನು ಇಲ್ಲಿ ಕಲಿಸುದುಂಟು. ಇತಿಹಾಸವನ್ನು ಕಥೆಯ ರೂಪವಾಗಿ ಹೇಳುವದುಂಟು. ಇವುಗಳನ್ನು ಒಂದು ವರುಷ ಮುಂಪೆ ಕಲಿಸಿದರೆ ಅಂಥ ಹಾನಿಯೇನೂ ಆಗದು. ಆದರೆ ಇದು ಅತ್ಯವಶ್ಯವೆಂದು ನಮಗೆ ಕಾಣುವದಿಲ್ಲ. ಡ್ರಾಯಿಂಗ, ವಸ್ತುಪಾಠ, ಪ್ರಕೃತಿ ವಿಮರ್ಶೆ, ಭೂಗೋಲ ಇವುಗಳಿಗಾಗಿ ಈಗ ವೆಚ್ಚ ಮಾಡುವ ವೇಳೆಯನ್ನು ವಾಚನ ಬರೆಹಗಳಿಗೆ ಕೊಡಬೇಕೆಂದು ಮಿ॥ ಪರೊಳೇಕರ ಇವರ ಮತವು. ನಮ್ಮ ಹುಡುಗರಿಗೆ ಓದು, ಬರೆಹ, ಸ್ವಲ್ಪ ಗಣಿತ, ಇವು ನೂರು ಮಾತ್ರ ಬಂದರೆ ಶೀರಿತೆಂಬ ಗ್ರಹಿಕೆಯು ಸರಿಯಲ್ಲ. ತಮ್ಮ ಸುತ್ತಲಿನ ಪರಿಸ್ಥಿತಿಯ ಜ್ಞಾನವು ಅವರಿಗಾಗತಕ್ಕದ್ದು. ಈ ವಿಷಯಗಳನ್ನು ಯೋಗ್ಯ ರೀತಿಯಿಂದ ಕಲಿಸುವದರಿಂದ ಹುಡುಗರು ಬುದ್ಧಿವಂತರಾಗುವರು. ಅವರಿಗೆ ವ್ಯವಹಾರದ ನಿಜಜ್ಞಾನವಾಗುವದು. ಆದ್ದರಿಂದ ಇವುಗಳ ಶಿಕ್ಷಣ ಪದ್ಧತಿಯಲ್ಲಿ ಸುಧಾರಣೆಯಾಗಬೇಕು. ಇವುಗಳನ್ನು ಪ್ರಾಥಮಿಕ ಸಾಲೆಗಳಿಂದ ಪೂರ್ಣವಾಗಿ ತೆಗೆದುಬಿಡತಕ್ಕದ್ದೆಂಬ ಮಾತು ಜನಸಮ್ಮತ ವಾಗಲಾರದು.

ಒಬ್ಬೊಬ್ಬ ಶಿಕ್ಷಕನು ೬೦ ಹುಡುಗರ ಶಿಕ್ಷಣದ ಜವಾಬುದಾರಿಯನ್ನು ಹೊರ ತಕ್ಕದ್ದೆಂಬ ಮಾತಿಗಾದರೂ ಒಪ್ಪಿಗೆಯು ದೊರೆಯುದು.

ಮಿ॥ ಪರೊಳೇಕರ ಇವರು ಬಹು ಜನರ ಶಿಕ್ಷಣವು ನಮ್ಮ ಧ್ಯೇಯವು ಎಂದು ಇಟ್ಟುಕೊಂಡು ಇದನ್ನು ಸದ್ಯಕ್ಕೆ ನಮ್ಮಲ್ಲಿರುವ ಹಣದಿಂದಲೇ ಹ್ಯಾಗೆ ಸಾಧಿಸಬಹುದೆಂಬ ಗಡಚಾದ ಪ್ರಶ್ನೆಕ್ಕೆ ಉತ್ತರವನ್ನು ತೆಗೆದಿರುವರು. ಆದರೆ ಶಿಕ್ಷಣವೆಂದರೆ ಅವರು ಓದು ಬರೆಹಗಳನ್ನು ಕಲಿಸುವದು ಎಂದು ಎಣಿಸಿದಂತೆ ಕಾಣುವದು. ಇದು ನಿಜವಾಗಿ ವ್ಯವಹಾರೋಚಿತವಾದ ಶಿಕ್ಷಣದ ವ್ಯಾಖ್ಯೆಯಲ್ಲ. ಇದಕ್ಕೆ ನಾಲ್ಕು ವರ್ಷದ ಅವಧಿಯು ಬೇಕಾಗಿಲ್ಲ.

ಆದರೆ ಸದ್ಯದ ಅಭ್ಯಾಸ ಪತ್ರಿಕೆಯಂತೆಯೇ ಹುಡುಗರು ನಾಲ್ಕನೆಯ ಇಯತ್ತೆಯನ್ನು ಮುಗಿಸುವದರೊಳಗಾಗಿ ಈಗ ಅವರು ಓದುವದಕ್ಕಿಂತ ಹೆಚ್ಚು ವಾಚನ ಪುಸ್ತಕಗಳನ್ನು ಓದುವ ರೂಢಿಯನ್ನು ಅವರಿಗೆ ನಾವು ಮಾಡಿಸತಕ್ಕದ್ದು. ಬರೆಹವೆಂದರೆ

ಈಗಿನಂತೆ ಅಕ್ಷರಗಳ ಗುರುತಿನ ಜ್ಞಾನಮಾಡಿಕೊಂಡು ಹೇಳಿದ್ದನ್ನು ಬರೆಯುವದು ಮಾತ್ರವಲ್ಲ, 'ಅಕ್ಷರಜ್ಞಾನ' ಈ ಶಬ್ದದ ವಾಚ್ಯೆಯು ಒಂದು ಪತ್ರವನ್ನು ಓದಿ ತಿಳಿದು ಕೊಳ್ಳಲಿಕ್ಕೂ ತಾನಾಗಿ ಬರೆಯಲಿಕ್ಕೂ ಬರುವವನು ಎಂದು ಮಾಡುವದುಂಟು. ಇದರಲ್ಲಿ ಮೊದಲಿನ ಭಾಗವನ್ನು ನಾಲ್ಕನೆಯ ಇಯತ್ತೆಯ ಹುಡುಗನು ಮಾಡಬಲ್ಲನು; ಅಂದರೆ ಅವನಿಗೆ ಸಾಧಾರಣ ಪತ್ರಗಳನ್ನು ಓದಿ ಅವುಗಳ ಅರ್ಥವನ್ನು ಓದಲರಿಯದವರಿಗೆ ಹೇಳಲಿಕ್ಕೆ ಬರುವದು. ಆದರೆ ಸ್ವಂತವಾಗಿ ಬರೆಯುವ ಶಕ್ಯಯು ಆತನಲ್ಲಿರುವದಿಲ್ಲ. ಅಕ್ಷರಜ್ಞಾನವನ್ನು ವರ್ಣಿಸುವ ಈ ವಾಚ್ಯೆಯು ಸಮರ್ಪಕವಾದದ್ದಲ್ಲ. ನಮ್ಮ ಅಭಿಪ್ರಾಯದ ಮೇರೆಗೆ ನಾಲ್ಕು ಇಯತ್ತೆಗಳ ಅಭ್ಯಾಸವನ್ನು ಮುಗಿಸಿದ ಹುಡುಗನು ದೇಶ ಭಾಷೆಯ ಶಾಸ್ತ್ರೀಯ ವಿಷಯಗಳನ್ನು ಬಿಟ್ಟು ಮಿಕ್ಕ ಬಹುತರ ವಿಷಯಗಳ ಬಗ್ಗೆ ಬರೆದ ಗ್ರಂಥಗಳನ್ನು ಓದಿ ತಿಳಿದುಕೊಳ್ಳುವ ಸಾಮರ್ಥ್ಯವುಳ್ಳವನಾಗಬೇಕು. ತನಗೆ ತಿಳಿದ ಸಂಗತಿಗಳನ್ನು ಇತರರಿಗೆ ಬರೆಹ ಮೂಲಕವಾಗಿ ತಿಳಿಸುವ ಶಕ್ತಿಯುಳ್ಳವನಾಗಬೇಕು. ಸದ್ಯದ ಹೊಸ ಅಭ್ಯಾಸಪತ್ರಿಕೆಯಲ್ಲಿ ಹೇಳಿದಷ್ಟು ಗಣಿತಜ್ಞಾನವು ಅವನಿಗಿರಬೇಕು. ಇವಲ್ಲದೆ ಸುಲಭವಾದ ಕವಿತೆಗಳನ್ನು ಓದಿ ತಿಳಿದುಕೊಳ್ಳುವ ಜಾಣ್ಮೆಯು ಅವನಿಗೆ ಬರತಕ್ಕದ್ದು. ತನ್ನ ಸುತ್ತಲಿನ ಪರಿಸ್ಥಿತಿಯ ಜ್ಞಾನವು ಅವನಿಗಾಗಿರಬೇಕು. ಇದಕ್ಕಾಗಿ ಅವನು ತಕ್ಕಮಟ್ಟಿಗೆ ತನ್ನ ನಾಡಿನಲ್ಲಿ ಆಗಿ ಹೋದ ಐತಿಹಾಸಿಕ ಮಹಾಪುರುಷರ ಕಥೆಗಳನ್ನು ಕೇಳಿರಬೇಕು. ತನ್ನ ಊರ ಸುತ್ತಲಿನ ಪ್ರಕೃತಿಯ ಲಕ್ಷಣಗಳು ಅವುಗಳಿಂದ ಜನರ ಬಾಳುವೆ, ಉದ್ಯೋಗ ಇವುಗಳ ಮೇಲಾದ ಪರಿಣಾಮ ಮೊದಲಾದವುಗಳನ್ನು ಅರಿತಿರಬೇಕು. ಇವುಗಳನ್ನು ಭಾಷೆಯಪಾಠಗಳೆಂದು ಕಲಿಸುವದಕ್ಕಿಂತ ಇತಿಹಾಸ, ಭೂಗೋಲ ಮೊದಲಾದ ಹೆಸರುಗಳನ್ನಿಟ್ಟು ಕಲಿಸುವದೇ ಮೇಲಾದದ್ದು. ಆದರೆ ಇದು ಪುಸ್ತಕಜ್ಞಾನವಾಗಿ ಉಳಿಯದೆ ವ್ಯವಹಾರಕ್ಕೆ ಸಂಬಂಧಿಸಿದ ಜ್ಞಾನವಾಗಬೇಕು.

ನಮ್ಮ ಶಾಲೆಗಳಿಂದ ಹೊರಬೀಳುವ ನಾಲ್ಕನೆಯ ಇಯತ್ತೆಯನ್ನು ಮುಗಿಸಿರುವ ವಿದ್ಯಾರ್ಥಿಯು ಸಾಮಾನ್ಯವಾಗಿ ಶಾಲಾಖಾತೆಯ ನಾಲ್ಕು ಪುಸ್ತಕಗಳ ಸುಮಾರು ಅರ್ಧ ಅರ್ಧ ಭಾಗಗಳನ್ನು ಮಾತ್ರ ಓದಿರುತ್ತಾನೆಂದು ಮಿ॥ ಪರೂಳೇಕರ ಇವರು ಹೇಳಿದ್ದು ನಿಜವಿರುವದು. ಈ ಮೂಲಕ ಆತನ ಭಾಷಾ ಪರಿಚಯವು ತೀರ ಸಂಕುಚಿತವಾದದ್ದಿರುತ್ತದೆ. ಇವರ ದೋಷವು ಪ್ರಾಥಮಿಕ ಶಿಕ್ಷಕರ ಪಾಲಿಗೆ ಬರಲಾರದು. ನಮ್ಮ ಪ್ರಾಥಮಿಕ ಶಾಲೆಗಳಲ್ಲಿ ಕನ್ನಡ ವಾಚನಾಲಯಗಳು ಇರುವದಿಲ್ಲ. ಹೆಸರಿಗೆ ಅಲ್ಲೊಂದು ಇಲ್ಲೊಂದು ಇದ್ದರೂ ಅವುಗಳೊಳಗಿನ ಪುಸ್ತಕಗಳು ಶಾಲೆಯ ಹುಡುಗರ ವಾಚನಕ್ಕೆ ಅರ್ಹವಾಗಿರುವದಿಲ್ಲ. ಈಚೆಗೆ ಸುಲಭವಾದ ಮಾತಿನಲ್ಲಿ ಸಣ್ಣ ಹುಡುಗರಿಗಾಗಿ ಕಥೆಯ ಪುಸ್ತಕಗಳು ಅಚ್ಚಾಗಹತ್ತಿವೆ. ಬಹುತರವಾಗಿ ಇವೆಲ್ಲ ಕಥೆಯ ಪುಸ್ತಕಗಳಿರುವವು. ಇವುಗಳಿಗೆ ಶಾಲಾಧಿಕಾರಿಗಳಿಂದ ಪೂರ್ಣ ಉತ್ತೇಜನವು ದೊರೆಯತಕ್ಕದ್ದು. ಪ್ರತಿ

ಯೊಂದು ಪ್ರಾಥಮಿಕ ಸಾಲೆಯಲ್ಲಿ–ಅದು ೨–೩ ಇಯತ್ತೆಗಳವರೆಗೆ ಕಲಿಸುವದಷ್ಟೇ ಇರಲೊಲ್ಲದೇಕೆ–ಆ ಎಳೆಮಕ್ಕಳಿಗೆ ತಿಳಿಯುವಂಥವೇ ಆದ ಚಿಕ್ಕ ಪುಸ್ತಕಗಳ ಸಂಗ್ರಹವೊಂದಿರಬೇಕು. ಇವುಗಳನ್ನು ಓದಲು ಶಿಕ್ಷಕನು ಅವರಿಗೆ ಉತ್ತೇಜನ ಕೊಡಬೇಕು. ಇಂಥ ಪುಸ್ತಕಗಳೊಳಗಿನ ಭಾಗಗಳನ್ನು ಓದಿಸಿ ಅರ್ಥಹೇಳಿಸಿ ಪರೀಕ್ಷಕರು ಹುಡುಗರಿಗೆ ಉತ್ತೇಜನ ಕೊಡತಕ್ಕದ್ದು. ಈ ಯೋಜನೆಯು ಅಸ್ತಿತ್ವದಲ್ಲಿ ಬಂದರೆ ನಮ್ಮ ಪ್ರಾಥಮಿಕ ಶಾಲೆಗಳ ವಾಚ್ಯಾಭ್ಯಾಸವು ಸದ್ಯದ ಕತೋರ ಟೀಕೆಗೆ ಪಾತ್ರವಾಗಿ ಉಳಿಯುವದೆಂದು ಸಂದೇಹವಿಲ್ಲದೆ ಹೇಳಬಹುದು. ಲೇಖಕರಿಗೆ ಉತ್ತೇಜನ ದೊರೆತರೆ ಅನೇಕ ವಿಷಯಗಳ ಬಗ್ಗೆ ಚಿಕ್ಕಮಕ್ಕಳಿಗಾಗಿ ಸುಲಭ ಪುಸ್ತಕಗಳು ಹೊರಬೀಳುವವೆಂಬದರಲ್ಲಿಯೂ ಸಂಶಯವಿಲ್ಲ.

ವಾಚನಿಕ ನಿಬಂಧ

[ಮುಂದೆ ಕೊಟ್ಟ ನಿಬಂಧದ ವಾತಪನ್ನು ಧಾರವಾಡ ಟ್ರೇನಿಂಗ ಕಾಲೇಜದಲ್ಲಿ ದ. ಭಾಗದ ಸೆಟಲ್‌ಮೆಂಟ ಶಾಲೆಗಳ ಶಿಕ್ಷಕಶಿಕ್ಷಿಕೆಯರಿಗಾಗಿ ವ್ಯವಸ್ಥೆಮಾಡಿದ್ದ "ರಿಫ್ರೆಷರ ಕೋರ್ಸಿ"ನ ಯೋಜನೆಯಲ್ಲಿ ತಾ॥ ೭–೫–೩೪ನೆಯ ದಿವಸ ಮಿ॥ ವ್ಹಿ. ಎನ್. ಮಗದಾಳ ಇವರು ನಾಲ್ಕನೆಯ ಇಯತ್ತೆಯ ವಿದ್ಯಾರ್ಥಿಗಳಿಗೆ ಕಲಿಸಿ ತೋರಿಸಿದರು.]

ದೇವರ ಮಹಿಮೆ

ಕಥೆ:— ನಮ್ಮ ನಾಡಿನಲ್ಲಿ, ಸಾವಿರಾರು ವರುಷಗಳ ಹಿಂದೆ, ದಂಡಕಾರಣ್ಯವೆಂಬ ಅಡವಿಯು ವಿಸ್ತಾರವಾಗಿ ಹಬ್ಬಿತ್ತು. ಆ ಕಾಡಿನಲ್ಲಿ, ಅರಳೆ, ಆಲ, ಅತ್ತಿ ಇವೇ ಮೊದಲಾದ ಫಲವೃಕ್ಷಗಳು ಸೊಕ್ಕಿನಿಂದ ಬೆಳೆದಿದ್ದವು. ಅಲ್ಲಲ್ಲಿ ಹಳ್ಳಗಳು ಜುಳು ಜುಳು ಹರಿಯುತ್ತಿದ್ದವು. ಇಂಥ ಒಂದು ತಿಳಿನೀರಿನ ಹಳ್ಳದ ದಂಡೆಯಮೇಲೆ ಒಂದು ಎತ್ತರವಾದ ಮಾವಿನ ಮರವಿತ್ತು. ಅದರ ಬೊಂಗೆಯಲ್ಲಿ ಎರಡು ಪಾರಿವಾಳಗಳು ಗೂಡು ಕಟ್ಟಿಕೊಂಡು ಸುಖದಿಂದ ಬಾಳುತ್ತಿದ್ದವು.

ಒಂದು ದಿನ, ಅವು ತಿಂದುಂಡು, ಸಂತೋಷದಿಂದ ಮಾತಾಡುತ್ತ ಕುಳಿತಿದ್ದವು. ಆಗ ಒಬ್ಬ ಬೇಡನು ಮೆಲ್ಲನೆ ಕೆಳಗೆ ಬರುತ್ತಿರುವದನ್ನು ಹೆಣ್ಣು ಪಾರಿವಾಳವು, ಒಮ್ಮಿಂದೊಮ್ಮೆ ಕಂಡಿತು. ಅದು ಮೇಲೆ ನೋಡಲು ಅಲ್ಲಿ ಒಂದು ಗಿಡಗವು ಸುಳಿದಾಡುತ್ತಿತ್ತು. ಅದು ಗಾಬರಿಯಾಗಿ, " ಪ್ರಿಯನೇ, ನಮ್ಮ ಅಂತ್ಯಕಾಲವು ಸಮೀಪಿಸಿರುವದು. ಅಗೋ ನೋಡು, ಆ ನಿರ್ದಯನಾದ ಬೇಡನು ಬಿಲ್ಲಿಗೆ ಬಾಣವನ್ನು ಹೂಡಿ, ನಮಗೆ ಗುರಿಯಿಡುತ್ತಿರುವನು. ಮೇಲಕ್ಕೆ ಹಾರಿ, ಪ್ರಾಣವನ್ನು ಉಳಿಸಿಕೊಳ್ಳಬೇಕೆಂದರೆ, ಅಗೋ, ಆ ಕೆಟ್ಟ ಗಿಡಗವು ಸುತ್ತುತ್ತಿರುವದು. ಇನ್ನು ನಾವು ಬದುಕುವ ಆಶೆ ಎಲ್ಲಿ?

ಎಂದು ದುಃಖದಿಂದ ಹೇಳಿತು. ಅದಕ್ಕೆ ಗುಂಡು ಪಾರಿವಾಳವು— "ಗೆಳತೀ, ಆಪತ್ತು ಬಂದಾಗ ದೇವರನ್ನು ಮರೆಹೊಗತಕ್ಕದ್ದು. ಕೊಲ್ಲುವವನೂ ಕಾಯುವವನೂ ಆತನೇ. ಆತನ ದಯವೊಂದಿದ್ದರೆ, ಎಂಥ ಗಂಡಾಂತರಗಳೂ ದೂರಾಗುವವು" ಎಂದು ಧೈರ್ಯ ಹೇಳಿತು.

ಹೀಗಿರಲು, ಒಂದು ನಾಗರಹಾವು, ಬೇಡನ ಕಾಲು ಕಡಿಯಿತು. ಅವನು ಗುರಿಯಿಟ್ಟ ಬಾಣವನ್ನು, ಲಗುಬಗೆಯಿಂದ ಬಿಟ್ಟನು ಹಾಗು ವಿಷವೇರಿ ದೊಪ್ಪನೆ ನೆಲಕ್ಕೆ ಬಿದ್ದನು. ಅತ್ತ, ಅವನು ಬಿಟ್ಟ ಬಾಣವು ಗಿಡಗಕ್ಕೆ ತಗಲಿತು; ಅದೂ ನೆಲಕ್ಕುರುಳಿತು. ಹೀಗೆ, ಗಿಡಗವೂ ಬೇಡನೂ ಯಮನಗರಕ್ಕೆ ತೆರಳಿದರು. ದೇವರ ದಯದಿಂದ ಪಾರಿವಾಳಗಳೆರಡೂ ಜೀವದಿಂದ ಉಳಿದವು; ಹಾಗು ದೇವರ ಮಹಿಮೆಯನ್ನು ಕೊಂಡಾಡುತ್ತ ಮತ್ತೆ ಸುಖದಿಂದ ಇದ್ದವು.

ಮೇಲಿನ ಕಥೆಯನ್ನು ಒಮ್ಮೆ ಸ್ಪಷ್ಟವಾಗಿ ಓದಿ ತೋರಿಸಿದ ಬಳಿಕ ಮಾಡಿದ ಪ್ರಶ್ನೆಗಳು.

೧. ಈ ಕಥೆಯಲ್ಲಿ ಮೊದಲು ಏನು ಹೇಳಿದೆ ?
೨. ಈ ಕಥೆಯಲ್ಲಿ ನಡುವೆ ಏನು ಹೇಳಿದೆ ?
೩. ಈ ಕಥೆಯಲ್ಲಿ ಕೊನೆಗೆ ಏನು ಹೇಳಿದೆ ?
೪. ಹೆಣ್ಣು ಪಾರಿವಾಳವು ಯಾಕೆ ಗಾಬರಿಯಾಯಿತು ?
೫. ಗಂಡು ಪಾರಿವಾಳವು ಏನೆಂದು ಧೈರ್ಯ ಹೇಳಿತು ?
೬. ಪಾರಿವಾಳಗಳ ಆಪತ್ತು ಹೇಗೆ ದೂರವಾಯಿತು ?
೭. ಈ ಕಥೆಗೆ ಯಾವ ಹೆಸರು ಕೊಡುವ ? ಯಾಕೆ ?

ಮೇಲಿನ ಪ್ರಶ್ನೆಗಳ ಸಹಾಯದಿಂದ ಹುಡುಗರಿಂದ ಕಥೆಯನ್ನು ತಿರುಗಿ ಹೇಳಿಸಿಕೊಳ್ಳಬೇಕು. ಪೂರ್ಣ ಕಥೆಯನ್ನು ಇಲ್ಲವೆ ಅದರ ಸಾರಾಂಶವನ್ನು ಅವರು ಹೇಳುವದು ಮಹತ್ವವಾದದ್ದಲ್ಲ. ಕೇಳಿದ ಪ್ರಶ್ನೆಗಳಿಗೆ ವಿಚಾರಮಾಡಿ ಉತ್ತರಗಳನ್ನು ಕೊಡತಕ್ಕದ್ದು. ಈ ಸಮಯದಲ್ಲಿ ಅವರಿಗೆ ತಮ್ಮ ಸ್ವಂತಭಾಷೆಯಲ್ಲಿ ಪೂರ್ಣ ಮಾತುಗಳಲ್ಲಿ ಮಾತಾಡಲಿಕ್ಕೆ ಉತ್ತೇಜನ ಕೊಡತಕ್ಕದ್ದು. ಈ ಸಮಯದಲ್ಲಿ ಅವರು ಕಥೆಯಲ್ಲಿ ಅವರು ಕೇಳಿದ ಚೆಂದವಾದ ಶಬ್ದಗಳನ್ನು ತಮ್ಮ ಮಾತಿನಲ್ಲಿ ಯೋಗ್ಯ ಸ್ಥಳಗಳಲ್ಲಿ ಉಪಯೋಗಿಸತಕ್ಕದ್ದು. ಮೊದಲಿನ ಮೂರು ಪ್ರಶ್ನೆಗಳಿಂದ ಕಥೆಯಲ್ಲಿ ಬಂದ ಸಂಗತಿಗಳ ಅನುಕ್ರಮವು ಅವರ ಲಕ್ಷ್ಯದಲ್ಲಿ ಬರತಕ್ಕದ್ದು.

ಆ ಬಳಿಕ ಯೋಗ್ಯ ಶಬ್ದಗಳ ಪುನರಾವರ್ತನೆ, ಅವುಗಳ ಅರ್ಥ, ಅವುಗಳ ಯೋಗ್ಯ ಉಪಯೋಗ ಈ ಬಗ್ಗೆ ಅಭ್ಯಸನಗಳನ್ನು ಬಿಡಿಸಹೇಳಬೇಕು.

೧. ಮುಂದೆ ಕೊಟ್ಟ ಶಬ್ದಗಳಲ್ಲಿ ತಕ್ಕವುಗಳನ್ನು ಹಾಕಿ ಕೆಳಗಿನ ವಾಕ್ಯಗಳನ್ನು ಪೂರ್ಣಮಾಡಿರಿ:—

ಬಾಳುತ್ತಿದ್ದವು, ತಿಂದುಂಡು, ಅಂತ್ಯಕಾಲವು, ಆಪತ್ತು, ತೆರಳಿದರು, ಮಹಿಮೆ, ಹೂಡಿ, ಕಾಯುವನು.

(ಅ) ಬೇಡನು ಬಿಲ್ಲಿಗೆ ಬಾಣವನ್ನು..... ಗುರಿಯಿಡುತ್ತಿರುವನು.

(ಬ) .....ಬಂದಾಗ ದೇವರನ್ನು ಮರೆಹೊಗತಕ್ಕದ್ದು.

(ಕ) ಪಾರಿವಾಳಗಳು..... ಮಾತಾಡುತ್ತ, ಕುಳಿತಿದ್ದವು.

(ಡ) ಕೊಲ್ಲುವವನೂ..... ದೇವರೇ.

(ಇ) ಆ ಪಾರಿವಾಳಗಳು ಸುಖದಿಂದ .....

(ಫ) ಗಿಡಗವೂ ಬೇಡನೂ ಯಮನಗರಕ್ಕೆ .....

(ಗ) ಪಾರಿವಾಳಗಳು ದೇವರ..... ಯನ್ನು ಕೊಂಡಾಡಿದವು.

(ಹ) ಪ್ರಿಯನೇ, ನಮ್ಮ..... ಸಮೀಪಿಸಿರುವದು.

೨. ಮುಂದಿನ ವಾಕ್ಯಗಳಲ್ಲಿ ದಪ್ಪ ಅಕ್ಷರದ ಶಬ್ದಗಳ ಬದಲು ಕಥೆಯಲ್ಲಿ ಬಂದ ಅದೇ ಅರ್ಥದ ಶಬ್ದಗಳನ್ನು ಹಾಕಿರಿ.

(ಅ) ದಂಡಕಾರಣ್ಯವೆಂಬ ಅಡವಿಯು **ದೊಡ್ಡದಾಗಿ** ಹಬ್ಬಿತ್ತು.

(ಬ) ಹಣ್ಣಿನ ಗಿಡಗಳು **ಚೆನ್ನಾಗಿ** ಬೆಳೆದಿದ್ದವು.

(ಕ) ಹಳ್ಳದ **ಒಳ್ಳೇ** ನೀರು ಅವುಗಳಿಗೆ ಯಾವಾಗಲೂ ಸಿಗುತ್ತಿತ್ತು.

(ಡ) **ತೊಂದರೆ** ಬಂದಾಗ ದೇವರನ್ನು ಸ್ಮರಿಸಬೇಕು; **ಅವನು** ಅದನ್ನು ದೂರಮಾಡುವನು.

(ಇ) ಗಿಡಗವೂ ಬೇಡನೂ **ಸತ್ತರು.**

ಈ ಅಭ್ಯಾಸವನ್ನು ಮಾಡಿಸಿಕೊಳ್ಳುವಾಗ ಇಲ್ಲಿ ಹಾಕಿರುವ ಶಬ್ದಗಳಿಗಿಂತ ಕಥೆಯಲ್ಲಿ ಬಂದ ಶಬ್ದಗಳು ಯಾಕೆ ಹೆಚ್ಚು ಯೋಗ್ಯವಾದವುಗಳೆಂಬದನ್ನು ಹುಡುಗರಿಂದ ಹೊರಡಿಸಿಕೊಳ್ಳತಕ್ಕದ್ದು.

೩. ತಕ್ಕ ಶಬ್ದಗಳನ್ನು ಹಾಕಿ ಕೆಳಗಿನ ವಾಕ್ಯಗಳನ್ನು ಪೂರ್ಣಮಾಡಿರಿ

(ಅ) ಶ್ರೀಮಂತರು.....ಸುಖದಿಂದಿರುವರು.

(ಬ) ಹುಟ್ಟಿದವರಿಗೆಲ್ಲ.....ಒಂದೇ ಬರುವದು; ಅಂದರೆ ಹುಟ್ಟಿದವರೆಲ್ಲ ಒಂದು ದಿನ.....ವರು.

(ಕ) ಜೀನನಿಗೆ ರೊಕ್ಕದ...ಬಹಳ; ಮಕ್ಕಳಿಲ್ಲದವರಿಗೆ ಮಕ್ಕಳ...ಬಹಳ

(ಡ) ಜಾತ್ರೆಗೆ.....ಜನರು ಬಂದಿದ್ದರು.

(ಇ) ಕನ್ನಡಿಗರ.....ಕರ್ನಾಟಕವು.

೪. ಕೆಳಗಿನ ಶಬ್ದಗಳಿಗೆ ವಿರುದ್ಧಾರ್ಥವಳ್ಳ ಶಬ್ದಗಳನ್ನು ಹೇಳಿರಿ.

ಸುಖ; ಗಾಬರಿ, ಬದುಕು, ಕೊಲ್ಲು. ಸಾವಿರಾರು, ತಿಂದುಂಡು ಕೊಂಡಾಡು

ಹಳ್ಳಿಯ ಸಾಲೆ

(ಹಳ್ಳಿಯ ಸುಧಾರಣೆಯ ಯೋಜನೆಯ ವಿಷಯದಲ್ಲಿ "ಶಿಕ್ಷಣದ" ಬಗ್ಗೆ ಸಿದ್ಧವಾದ ಒಂದು ಲೇಖನದ ಅನುವಾದವನ್ನು ಮೆ॥ ಎಜ್ಯುಕೇಶನಲ್ ಇನ್ಸಪೆಕ್ಟರ ದ. ಥಾ. ಇವರ ಅಪ್ಪಣೆಯ ಮೇರೆಗೆ ಇಲ್ಲಿ ಕೊಟ್ಟಿರುವೆವು.)

ಸಾಲೆಯ ಕಾರ್ಯಗಳು:—ಹಳ್ಳಿಯ ಸಾಲೆಗಳಿಂದ ಮೂರು ಮುಖ್ಯ ಕಾರ್ಯಗಳನ್ನು ನೆರವೇರಿಸಬೇಕಾಗಿದೆ. (೧) ಹುಡುಗ ಹುಡಿಗೆಯರಿಗೆ ಓದು ಬರಹಗಳ ಜ್ಞಾನವನ್ನು ಮಾಡಿಕೊಡಬೇಕು. (೨) ಅವರ ಬುದ್ಧಿಶಕ್ತಿ, ನಿರೀಕ್ಷಣಶಕ್ತಿ, ಮೇಲ್ಬುದ್ಧಿ ಇವುಗಳನ್ನು ಜಾಗ್ರತೆಗೊಳಿಸಿ ಅವರಲ್ಲಿ ಒಳ್ಳೆಯ ಚಟಗಳನ್ನು ಉಂಟುಮಾಡಬೇಕು. (೩) ಹಳ್ಳಿಯ ಹೊರಗಿನ ಸಂಗತಿಗಳಿಗೂ ಹಳ್ಳಿಯ ಸಂಗತಿಗಳಿಗೂ ಇರುವ ಸಂಬಂಧದ ಜ್ಞಾನವನ್ನು ಹೆಚ್ಚಿಸಬೇಕಾಗಿದೆ. ಈ ಕೆಲಸವನ್ನು ಶಿಕ್ಷಕನಿಗೆ ಒಪ್ಪಿಸಲ್ಪಟ್ಟಿದೆ. ಆದರೆ ತಾಯ್ತಂದೆಗಳ ಹಾಗು ಪಾಲಕರ ಸಹಕಾರಿತೆಯಿದ್ದ ಹೊರತು ಈ ಕೆಲಸವು ಅವನಿಂದ ನೆರವೇರಲಾರದು. ಜವಾಬ್ದಾರಿ ತಾಯ್ತಂದೆಗಳ ಮನಸಿನಲ್ಲಿ ಕೆಲಸು ಮಾತುಗಳನ್ನು ಬಿಂಬಿಸಬೇಕು. ಅವರು ತಮ್ಮ ಮಕ್ಕಳನ್ನು ನಿಯಮಿತವಾಗಿಯೂ ಹೊತ್ತು ಹೊತ್ತಿಗೂ ಸಾಲೆಗೆ ಕಳಿಸಬೇಕು. ೭ ಇಯತ್ತೆ ಮುಗಿಯುವವರೆಗೆ ಆಗದಿದ್ದರೂ ನಾಲ್ಕು ಇಯತ್ತೆಗಳ ಪೂರ್ಣವಾಗುವವರೆಗೆ ಇವರನ್ನು ಸಾಲೆ ಬಿಡಿಸಬಾರದು.

ಇನ್ನು ಶಿಕ್ಷಕರು ಮಾತಿನಿಂದ ಶಿಕ್ಷಣದ ಲಾಭಗಳನ್ನು ಎಷ್ಟು ತಿಳಿ ಹೇಳಿದರೂ ತಾಯ್ತಂದೆಗಳಿಗೆ ಅವು ಮನವರಿಕೆಯಾಗಲಾರವು; ಸಾಲೆಗೆ ಹೋಗುವ ತಮ್ಮ ಮಕ್ಕಳು ಸಾಲೆಗೆ ಹೋಗದ ಹಳ್ಳಿಯ ಹುಡುಗರಿಗಿಂತ ಮೇಲಾದವರಾಗುವರು; ಕೆಲಸಗಳನ್ನು ಜೆನ್ನಾಗಿ ಮಾಡುವರು, ಊರಲ್ಲಿ ಸಾಲೆ ಇರುವದರಿಂದ

ಊರ ಏಳಿಗೆಯಾಗುವದು; ಊರಲ್ಲಿ ಆರೋಗ್ಯವು ಹೆಚ್ಚುವದು, ಶಾಂತತೆಯು ಹರಡುವದು ಇವನ್ನೆಲ್ಲ ಅವರು ಕಣ್ಣಾಟ್ಟ ಕಂಡರೆ ತಮ್ಮ ಹುಡುಗರನ್ನು ಸಾಲೆಗೆ ಕಳಿಸುವರು; ಸಾಲೆಯ ಕೆಲಸಕ್ಕೆ ಶಿಕ್ಷಕನಿಗೆ ಸರವಾಗುವರು. ಆದ್ದರಿಂದ ಶಿಕ್ಷಣದ ಪರಿಣಾಮವು ಆ ಹುಡುಗರ ಮೇಲೆ ಯಾವ ಬಗೆಯಿಂದ ಆಗುತ್ತಿರುವದೆಂಬದು ಅವರಿಗೆ ಮನವರಿಕೆಯಾಗುವದು ಮೊದಲನೆಯ ಮಹತ್ವದ ಸಂಗತಿಯು. ಹಳ್ಳಿಯ ಮುಖ್ಯ ಹೋರೆಯು ಒಕ್ಕಲುತನವು; ಅಲ್ಲಿ ವ್ಯಾಪಾರ ಕೈಗಾರಿಕೆ ಇವಾದರೂ ತಕ್ಕ ಮಟ್ಟಿಗೆ ನಡೆಯುವವು. ಸಾಲೆಕಲಿತ ಹುಡುಗನು ಇವುಗಳಲ್ಲಿ ಯಾವದನ್ನು ಕೈಕೊಂಡರೂ ಒಳ್ಳೇ ಹಳ್ಳಿಗನಾಗುವನು. ಕೈದುಡಿತಕ್ಕೆ ಅವನ ಮನಸು ಒಪ್ಪುವದು. ಇಷ್ಟೇ ಅಲ್ಲ. ಅವನ ಬುದ್ಧಿವಂತಿಕೆಯು ಹೆಚ್ಚುವದು; ಅನನಿಗೆ ಓದು ಬರೆಹಗಳು ಬರುವವು. ಈ ಮೂಲಕ ತನ್ನ ಕೆಲಸವನ್ನು ಅವನು ಹೆಚ್ಚು ಬುದ್ಧಿವಂತಿಕೆಯಿಂದ ಮಾಡಿ ಅದರಲ್ಲಿ ಹೌದೆನಿಸಿಕೊಳ್ಳುವನು. ಯುರೋಪ ಖಂಡದ ಕೆಲಸಗಾರರ ವಿಷಯದಲ್ಲಿ ಈ ಮಾತು ಅನುಭವಕ್ಕೆ ಬಂದಿದೆ. ಸಾಲೆಗೆ ಹೋಗುವ ಹುಡುಗರು ಶಿಕ್ಷಕರು, ಕುಲಕರ್ಣಿಗಳು, ಸರಕಾರದ ನೌಕರರು ಆಗಬೇಕೆಂಬದು ಸಾಲೆಯ ಉದ್ದೇಶವಲ್ಲ.

ಸಾಲೆಯು ತಾನು ಕೈಕೊಂಡ, ಮೇಲೆ ಹೇಳಿದ ಕೆಲಸಗಳನ್ನು ಸರವೇರಿಸಲು ಸಮರ್ಥವಿರಬೇಕು. ಇದು ಎರಡನೆಯ ಮಹತ್ವದ ಸಂಗತಿಯು. ಸಾಲೆಯ ಉಪಯೋಗವು ತಮಗೆ ಆಗುತ್ತಿರುವದೆಂದು ಹಳ್ಳಿಗರಿಗೆ ಪ್ರತಿಕ್ಷಣವೂ ಅನಿಸುತ್ತಿರಬೇಕು. ಸಾಲೆಯ ಕಟ್ಟಡವು ಅವರಿಗೆ ಮಾದರಿಯ ಸ್ಥಳವಾಗಬೇಕು. ಸಾಲೆಯ ಹುಡುಗರ ನೀತಿನಡತೆಗಳು ಅವರಿಗೆ ಅನುಕರಣ ಮಾಡತಕ್ಕವು ಎಂದು ಅನಿಸಬೇಕು.

ಸಾಲೆಯ ಮನೆ:—ಸಾಲೆಯಲ್ಲಿ ಹುಡುಗರಿಗೆ ಸಾಕಷ್ಟು ಸ್ಥಳವಿರಬೇಕು; ಹಪ ಬೆಳಕುಗಳು ಬೇಕಾದಷ್ಟು ಇರಬೇಕು. ಸಾಲೆಯ ಮನೆಯನ್ನು ಆರೋಗ್ಯಶಾಸ್ತ್ರದ ನಿಯಮಗಳಿಗನುಸಾರವಾಗಿ ಕಟ್ಟಿರಬೇಕು. ಭಸ್ಮರದಿಂದ ಸೆಕೆಯು ಒಳಗೆ ಬರಬಾರದು. ಸಾಲೆಯಲ್ಲಿಯೂ ಹೊರಗೂ ಸ್ವಚ್ಛತೆಯು ಒಡೆದು ಕಾಣುತ್ತಿರಬೇಕು. ನೆಲವು ಗುಣಿಗಲ್ಲಿನಿಂದ ಗಟ್ಟಿಯಾದದ್ದಿರಬೇಕು.

ಅಲ್ಲಿ ಪ್ರತಿಯೊಬ್ಬ ಹುಡುಗನಿಗೆ ೧೦ ಚೌರಸ ಫೂಟಿನಂತೆ ಎಲ್ಲರಿಗೂ ಸಾಕಾಗಿ ಉಳಿಯುವಷ್ಟು ಸ್ಥಳವಿರಬೇಕು. ಸಾಲೆಯ ಮನೆಯನ್ನು ಪೂರ್ವಪಶ್ಚಿಮವಾಗಿ ಕಟ್ಟಬೇಕು. ದಕ್ಷಿಣದ ನಿಟ್ಟಿಗೆ ೬ ಫೂಟು ಜಗಲವಾದ ವ್ಹರಾಂಡವು ಇರಬೇಕು. ಪೂರ್ವಪಶ್ಚಿಮದ ನಿಟ್ಟಿನ ಕೊನೆಯ ಗೋಡೆಗಳಲ್ಲಿ ಕಿಡಿಕಿ

ಬಾಗಿಲುಗಳು ಬೇಕಾಗಿಲ್ಲ. ಕಿಡಿಕೆಗಳಿದ್ದರೆ ಅವಕ್ಕೆ ಹಲಗೆಯ ಬಾಗಿಲುಗಳ ಬೇಕು. ಬೆಳಕು ಮುಖ್ಯವಾಗಿ ಉತ್ತರದ ನಿಟ್ಟಿನಿಂದ ಬರಬೇಕು. ಉತ್ತರನಿಟ್ಟಿನ ಗೋಡೆಯಲ್ಲಿರುವ ಕಿಡಿಕಿಗಳ ಕ್ಷೇತ್ರಫಲವು ಕೋಣೆಯ ಕ್ಷೇತ್ರಫಲದ ಎಂಟರಲ್ಲಿ ಒಂದು ಪಾಲಿಗಿಂತ ಕಡಿಮೆಯಿರಲಾಗದು; ಉತ್ತರ ದಕ್ಷಿಣ ಈ ನಿಟ್ಟುಗಳಲ್ಲಿರುವ ಕಿಡಿಕಿಗಳ ಒಟ್ಟು ಕ್ಷೇತ್ರಫಲವು ನೆಲದ ಕ್ಷೇತ್ರಫಲದ ಐದರಲ್ಲಿ ಒಂದು ಪಾಲಿಗಿಂತ ಕಡಿಮೆಯಿರಬಾರದು. ಈ ವ್ಯವಸ್ಥೆಯಿದ್ದರೆ ಸಾಲೆಯ ಯಾವ ಭಾಗದಲ್ಲಿ ಹುಡುಗರು ಕುಳಿತರೂ ಓದಲಿಕ್ಕೆ ಸಾಕಷ್ಟು ಬೆಳಕು ಅವರಿಗೆ ದೊರೆಯುವದು; ಇವುಗಳನ್ನು ತಿರದು ಇಟ್ಟರೆ ಸಾಲೆಯಲ್ಲಿ ಹವೆಯು ಚೆನ್ನಾಗಿ ಆಡುವದು.

ಇದಕ್ಕೂ ಹೆಚ್ಚು ವಿವರವಾದ ಜ್ಞಾನವನ್ನು ಅಪೇಕ್ಷಿಸುವವರು ಸರಕಾರದವರು ಈ ಬಗ್ಗೆ ಪ್ರಸಿದ್ಧಪಡಿಸಿರುವ ಹೊತ್ತಿಗೆಗಳನ್ನು ನೋಡತಕ್ಕದ್ದು. ಬೇರೆ ಬೇರೆ ಮಾದರಿಯ ಸಾಲೆಯ ಕಟ್ಟಡಗಳ ನಕಾಶಗಳನ್ನೂ ಸರಕಾರದವರು ಪ್ರಸಿದ್ಧಿಸಿರುವರು. ಬೇಕಾದವರು ಇವುಗಳನ್ನು ಅಭ್ಯಾಸಿಸಬಹುದು.

ಸಾಲೆಯ ಸುತ್ತಲು ತೋಟ, ಆಟದ ಬೈಲು ಇವುಗಳನ್ನು ಮಾಡಿಕೊಳ್ಳಲಿಕ್ಕೆ ಸಾಕಷ್ಟು ಅವಾರದ ಸ್ಥಳವಿರತಕ್ಕದ್ದು. ಸಾಲೆಯು ಊರ ಇಲ್ಲವೆ ದಾರಿಯ ಗದ್ದಲದಿಂದ ದೂರ ಇರುವದು ಮಹತ್ವವಾದದ್ದು. ಇದಕ್ಕಾಗಿ ಸಾಲೆಯ ಮನೆಗಳನ್ನು ಹಳ್ಳಿಯ ಹೊರಗೆ ಇಲ್ಲವೆ ಅಂಚಿನ ಮೇಲೆ ಕಟ್ಟಿಸುವದು ವಿಹಿತವು. ಸಾಲೆಯಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆಗೆ ಸಾಲುವಷ್ಟು ಶೌಚಕೂಪಗಳು ಪ್ರತಿಯೊಂದು ಸಾಲೆಯ ಬಗ್ಗೆ ಇರಬೇಕು.

ಸಾಲೆಯಲ್ಲಿ ನೀರಿನ ವ್ಯವಸ್ಥೆಯು ಇರಬೇಕು. ಕುಡಿಯುವ ನೀರಿಗಾಗಿ ಒಂದು ಕೋಣೆ, ಕೈಕಾಲು ಮೋರೆ ತೊಳೆದುಕೊಳ್ಳಲಿಕ್ಕಾಗಿ ಒಂದು ಬೇರೆ ಕೋಣೆ ಇರುವದು ಒಳಿತು. ಇದಕ್ಕೆ ಹುಲ್ಲಿನ ಇಲ್ಲವೆ ತಗಡಿನ ಛಪ್ಪರವಿದ್ದರೆ ಸಾಕು.

ಸಾಲೆಯ ಸಾಮಾನು: — ಹಳ್ಳಿಯ ಸಾಲೆಗಳಲ್ಲಿ ಹುಡುಗರಿಗೆ ಕೂಡ್ರಲಿಕ್ಕೂ ಬರೆಯಲಿಕ್ಕೂ ಜೆಂಬು ಡೆಸ್ಕುಗಳು ಬೇಕಾಗಿಲ್ಲ; ೫, ೬, ೭ ಈ ಎತ್ತಿಗಳಿರುವಲ್ಲಿ ಡ್ಯುಅಲ್ ಅಂದರೆ ಇಬ್ಬರು ಕೂಡುವ ಡೆಸ್ಕುಗಳಿದ್ದರೆ ನೆಟ್ಟಗೆ. ಎಲ್ಲ ವರ್ಗಗಳ ವಿದ್ಯಾರ್ಥಿಗಳಿಗೂ ಕೂಡ್ರಲಿಕ್ಕೆ ಜಾಪೆಗಳು, ಬರೆಯಲಿಕ್ಕೆ ಗಿಡ್ಡ ಡೆಸ್ಕುಗಳೂ ಇದ್ದರೆ ಸಾಕು. ಇವು ಮಾತ್ರ ಹುಡುಗರ ಎತ್ತರಕ್ಕೆ ತಕ್ಕವಿರಬೇಕು. ವರ್ಗದಲ್ಲಿ ಡೆಸ್ಕುಗಳಾಗುವಂತೆ ಕಾಯಮಾಗಿ ಹಲಿಗೆಗಳನ್ನು ಬಡೆದಿಡಬಾರದು. ಇವುಗಳ ಬುಡದಲ್ಲಿ ಹುಳಹುಪ್ಪಡಿ ಕಸಕುಪ್ಪೆ ಕೂಡಿ ಬೀಳುತ್ತವೆ. ಇವುಗಳ ರಿಪೇರಿಗೂ ವೆಚ್ಚ ತಗಲುವದು.

ಮೇಲೆ ಹೇಳಿದ ಮಾದರಿಯ ಸಾಲೆಯ ಕಟ್ಟಡವಿದ್ದು ಅದನ್ನು ಸ್ವಚ್ಛ ವಿಟ್ಟಿದ್ದರೆ ಸಾಲೆಯ ಬಗ್ಗೆ ಹುಡುಗರಿಗೂ ಹಳ್ಳಿಗರಿಗೂ ಅಭಿಮಾನವೆನಿಸದಿರದು. ಂಥ ಸಾಲೆಗಳಲ್ಲಿ ಹುಡುಗರು ಮೊದಲು ಬಂದಂದಿನಿಂದ ಕೆಲವು ಸಂಗತಿಗಳನ್ನು ಮೂಡಿಯಲ್ಲಿ ತರಬಹುದು.

೧. ಹುಡುಗರ ಕೈಮೈ, ಅರಿವೆ ಅಂಚಡಿ; ಸಾಲೆಯ ಮನೆ, ಸುತ್ತಲಿನ ಸ್ಥಳ ಇವುಗಳನ್ನು ಸ್ವಚ್ಛವಿಡುವದು.

೨. ಶೌಚಕೂಪಗಳ ಯೋಗ್ಯ ಉಪಯೋಗ; ಕಸಕುಪ್ಪೆಯನ್ನು ಒಂದು ತಗ್ಗು ಇಲ್ಲವೆ ಗುಂಡಿಯಲ್ಲಿಯೇ ಒಗೆಯುವದು.

೩. ಆಟವಾಡಿ ಇಲ್ಲದೆ ತೋಟಮಾಡಿ ದಿನಾಲು ವ್ಯಾಯಮ ತೆಗೆದುಕೊಳ್ಳು ವದು, ಇವುಗಳನ್ನು ಅಮಲಿನಲ್ಲಿ ತರುವದು ಶಿಕ್ಷಕರ ಕೆಲಸವು; ಇದಕ್ಕಾಗಿ ತಾಯ್ತಂದೆಗಳು ಅವರಿಗೆ ಕೆಳಗೆ ಕಾಣಿಸಿದಂತೆ ನೆರವಾಗತಕ್ಕದ್ದು.

೧. ಹುಡುಗರನ್ನು ತಪ್ಪದೆ ಜೊತ್ತು ಜೊತ್ತಿಗೆ ಸಾಲೆಗೆ ಕಳಿಸಬೇಕು.

೨. ಹುಡುಗರಲ್ಲಿ ಅಂಟುರೋಗ ಇಲ್ಲವೆ ಸುಂಕು ರೋಗವು ಇರುವದೆಂದು ಶಿಕ್ಷಕರು ತಿಳಿಸಿದ ಕೂಡಲೆ ಅವರನ್ನು ಔಷಧೋಪಚಾರಕ್ಕಾಗಿ ಡಾಕ್ತರರ ಕಡೆಗೆ ಕಳಿಸಬೇಕು.

೩. ಹುಡುಗರ ಕೈಮೈ, ಅರಿವೆ ಅಂಚಡಿ ಇವು ಸ್ವಚ್ಛವಿರುವಬಗ್ಗೆ ಎಚ್ಚರ ಪಡಬೇಕು.

೪. ಶಿಸ್ತು ನೆಲೆಗೊಳ್ಳಲಿಕ್ಕೆ, ಸ್ವಚ್ಛತೆಯು ಉಳಿಯಲಿಕ್ಕೆ ಸಾಗು ಒಳ್ಳೆಯ ಜಟಗಳು ನೆಲೆಗೊಳ್ಳಲಿಕ್ಕೆ ಶಿಕ್ಷಕರು ಕೈಕೊಳ್ಳುವ ಉಪಾಯಗಳಲ್ಲಿ ಅವರಿಗೆ ನೆರ ವಾಗುವದು.

ಹಳ್ಳಿಯ ಶಿಕ್ಷಕ:— ಹಳ್ಳಿಯಲ್ಲಿ ತನ್ನ ಸಾಲೆಯ ಕೆಲಸವನ್ನು ಚನ್ನಾಗಿ ಮಾಡುವ ಶಿಕ್ಷಕನಿರುವನೆಂದು ಕಲ್ಪಿಸುವ, ಅವನು ಯಾವಾಗಲೂ ಒಂದಿಲ್ಲೊಂದು ಕೆಲಸದಲ್ಲಿ ತೊಡಗಿರುವನು ಈ ಮೂಲಕ ಹಳ್ಳಿಯಲ್ಲಿ ಅವನ ವರ್ಚಸ್ಸವು ಬೆಳೆ ಯತಕ್ಕದ್ದು. ಆದರೆ ತಾಯ್ತಂದೆಗಳೂ ಪಾಲಕರೂ ಇದನ್ನು ಕುಗ್ಗಿಸುವರು. ಇವರ ಆಚರಣೆಯ ಮೂಲಕ ಶಿಕ್ಷಕನ ಕೆಲಸವು ಗಡಚಾದವ್ವಾಗುವದು. ಉದಾ ಹರಣಾರ್ಥವಾಗಿ, ಶಿಕ್ಷಕನು ಹುಡುಗರನ್ನು ಸಾಲೆಯ ತೋಟದಲ್ಲಿ ದುಡಿಸಿದರೆ, ತನ್ನ ಸ್ವಂತ ಲಾಭಕ್ಕಾಗಿ ತಮ್ಮ ಮಕ್ಕಳನ್ನು ದುಡಿಸುತ್ತಾನೆಂದು ಆಡಿಕೊಳ್ಳು ವದು. ತಪ್ಪುಮಾಡಿದ ಹುಡುಗನಿಗೆ ಶಿಕ್ಷಕನು ಶಿಕ್ಷೆಕೊಟ್ಟರೆ, ತಾಯ್ತಂದೆಗಳ

ಮೇಲಿನ ಸಿಟ್ಟನ್ನು ಹುಡುಗನ ಮುಖಾಂತರ ತೀರಿಸಿಕೊಳ್ಳುವನೆಂದು ಆತನನ್ನು ದೂರುವರು. ಶಿಕ್ಷಕನು ಬಾಯ ಸ್ಕೌಟ ಟ್ರೂಪ ಇಲ್ಲವೆ ಜೂನಿಯರ ರೆಡ್‌ಕ್ರಾಸ ಶಾಖೆಯನ್ನು ಆರಂಭಿಸಲಿಕ್ಕೆ ಹವಣಿಸಿದನೆಂದು ತಿಳಿಯುವ– ಇದರಿಂದ ಹುಡುಗರು ಹೊಲಕೆಲಸಕ್ಕೆ ಸಿಕ್ಕದಾಗುವರು; ತಾಯ್ತಂದೆಗಳಿಗೆ ತುಸು ಕಷ್ಟವೆನಿಸುವದು. ಶಿಕ್ಷಕನ ಉದ್ದೇಶವು ಇವರಿಗೆ ತಿಳಿಯುವದಿಲ್ಲ. ಯಾಕಂದರೆ ಈ ಯೋಜನಗಳ ತತ್ವಗಳು ಅವರಲ್ಲಿರುವ ರೂಢಿಗಳಿಗೂ ಪರಂಪರೆಗೂ ಹೊಂದಿಕೆಯಾದವಿರುವದಿಲ್ಲ. ಆದ್ದರಿಂದ ಅವರು ಈ ಕೆಲಸದಲ್ಲಿ ಶಿಕ್ಷಕನಿಗೆ ನೆರವಾಗುವದಿಲ್ಲ.

ಮೇಲಾಗಿ, ಹಳ್ಳಿಯಲ್ಲಿ ಶಿಕ್ಷಕನ ಸ್ಥಿತಿಯು ಮೇಲ್ತರದ್ದಿರುವದಿಲ್ಲ. ಈ ಮೂಲಕ, ಹಳ್ಳಿಯಜನರ ಅಭಿಪ್ರಾಯಗಳ ವಿರುದ್ಧವಾಗಿ,ಅವನು ಆಚರಿಸುವಂತಿಲ್ಲ. ಆದ್ದರಿಂದ ಇತರ ಅಧಿಕಾರಿಗಳೂ ಆತನಿಗೆ ನೆರವಾಗತಕ್ಕದ್ದು. ಆತನಿಗೆ ತಕ್ಕ ಮರ್ಯಾದೆಯನ್ನು ಕೊಡತಕ್ಕದ್ದು, ಇವರ ನೆರವಿನಿಂದ ಆತನು ತನ್ನ ಸಾಲೆಯನ್ನು ಸ್ವಚ್ಛತೆ, ಆರೋಗ್ಯ, ವ್ಯವಹಾರ ಕುಶಲತೆ ಇವುಗಳ ಮಾದರಿಯ ಸ್ಥಳವನ್ನಾಗಿ ಮಾಡಬಹುದು. ಇದರಿಂದ ಹಳ್ಳಿಯ ಜನರಿಗೆ ಆತನು ಶಿಕ್ಷಣ ಕೊಟ್ಟಂತಾಗುವದು. ಆದ್ದರಿಂದ ಮುಲಕೀ ಹಾಗು ಪೋಲೀಸ ಅಧಿಕಾರಿಗಳೂ ಸಮಾಜ ಸುಧಾರಕರೂ ಆತನಿಗೆ ಜನರಿಂದ ಮನ್ನಣೆ ದೊರೆಯುವಂತೆ ನೋಡಿಕೊಳ್ಳಬೇಕು. ಹಳ್ಳಿಯ ಜನರಿಗೆ ಸ್ಕೌಟ ಸಂಘಗಳನ್ನು ವ್ಯಾಪಿಸಲಿಕ್ಕೆ ಉಪದೇಶಮಾಡಿ ಶಿಕ್ಷಕನಿಗೆ ನೆರವಾಗಹೇಳಬಹುದು. ಹಲವು ಚಟುವಟಿಕೆಗಳನ್ನು ಒಮ್ಮೆಲೆ ಆರಂಭಿಸುವದಕ್ಕಿಂತ ಶಿಕ್ಷಕನು ಒಂದನ್ನು ಮೊದಲು ಆರಂಭಿಸಿದರೆ ಸಾಕು.

ಹಳ್ಳಿಯ ಶಿಕ್ಷಕನು ವ್ಯಕ್ತಿಶಃ ಜನ ಶಿಕ್ಷಣವನ್ನು ಸಾಧಿಸುವದು ಕಠಿಣವು. ಆದರೆ ಸಾಲೆಯು ಮುಖಾಂತರವಾಗಿ ಅಪ್ರತ್ಯಕ್ಷರೀತಿಯಿಂದ ಈ ಕೆಲಸವು ಅವನಿಂದ ಚೆನ್ನಾಗಿ ಆಗುವದು. ಸರಕಾರದ ಹಾಗು ಸ್ಥಾನಿಕ ಸಂಘಗಳ ಅಧಿಕಾರಸ್ಥರೂ ಸಮಾಜ ಸುಧಾರಕನೂ ಹಳ್ಳಿಯ ಜನರಿಗೆ ಸಾಲೆಯ ಉದ್ದೇಶಗಳನ್ನೂ ಅವರಿಂದ ಜನರಿಗಾಗುವ ಲಾಭಗಳನ್ನೂ ತಿಳಿಸಿಕೊಡತಕ್ಕದ್ದು. ಶಿಕ್ಷಕರೊಡನೆ ಸಹಕಾರದಿಂದಲೂ ಸಹಾನುಭೂತಿಯಿಂದಲೂ ನಡಕೊಳ್ಳಲಿಕ್ಕೆ ಅವರಿಗೆ ಉತ್ತೇಜನಕೊಡತಕ್ಕದ್ದು. ಪ್ರತ್ಯಕ್ಷವಾಗಿಯೂ ಅಪ್ರತ್ಯಕ್ಷವಾಗಿಯೂ ಶಿಕ್ಷಕನ ವರ್ಚಸ್ಸವು ಹೆಚ್ಚಾಗುವಂತೆಮಾಡಿ ಅವನಿಗೆ ನೆರವಾಗತಕ್ಕದ್ದು.

ಜಿಜಾಬಾಯಿ

ಮಹಾರಾಷ್ಟ್ರದಲ್ಲಿ ಐತಿಹಾಸಿಕ ಸ್ತ್ರೀಯರಲ್ಲಿ ಶ್ರೀ ಶಿವಛತ್ರಪತಿಯ ಮಾತೃ ಶ್ರೀಯಾದ ಜಿಜಾಬಾಯಿಯು ಅತ್ಯಂತ ಹೆಚ್ಚಿನ ಯೋಗ್ಯತೆಯುಳ್ಳವಳು. ಅವಳ ಅನೇಕ ಸದ್ಗುಣಗಳ ಯೋಗದಿಂದಲೇ ಶಿವಾಜಿಯು ಉದಯಕ್ಕೆ ಬಂದು ರಾಜ್ಯ ಸ್ಥಾಪನ ಮಾಡಿದನು. ಜಿಜಾಬಾಯಿಯಲ್ಲಿ ಪ್ರಸಂಗಾವಧಾನ, ಧೈರ್ಯ, ಸಾಹಸ ಸ್ವಾಭಿಮಾನ, ಮುತ್ಸದ್ದಿತನ, ದೂರದರ್ಶಿತ್ವ, ಪ್ರಜಾವಾತ್ಸಲ್ಯ ಇವೇ ಮೊದಲಾದ ಶ್ರೇಷ್ಠ ಗುಣಗಳು ನೆಲೆಗೊಂಡಿದ್ದವು.

ಶಿವಾಜಿಯ ಉಭಯ ಮನೆತನಗಳು.

ದೇವಗಿರಿಯ ಸುಪ್ರಸಿದ್ಧ ರಾಜಮನೆತನವು ಮಲಿಖಕಾಫುರನ ಕತ್ತಿಗೆ ಪುತ್ತಾದ ಬಳಿಕ ಅವರು ಅತ್ಯಂತ ಕಷ್ಟಗಳನ್ನು ಅನುಭೋಗಿಸಿ ಪಾನ ದೇಶಕ್ಕೆ ಹೋದರು. ಅಲ್ಲಿ ಕೇವಲ ಬಡತನದಲ್ಲಿ ಕಾಲಕ್ಷೇಪ ಮಾಡಿದರು; ಆದರೂ ಅವರಲ್ಲಿದ್ದ ವಂಶಪರಂಪರಾಗತವಾದ ಕ್ಷಾತ್ರತೇಜವು ಮಾತ್ರ ನಾಶಹೊಂದಿದ್ದಿಲ್ಲ. ರಾಮದೇವನಿಂದ ೬ನೆಯ ತಲೆಯವನಾದ ಲಖೂಜ ಎಂಬವನು ಮೆಲ್ಲಮೆಲ್ಲನೆ ತಲೆಯೆತ್ತುತ್ತ ಅಹಮ್ಮದನಗರ ರಾಜ್ಯದಲ್ಲಿ ಬೆಳಕಿಗೆ ಬಂದನು. ಅಕಬರ ಬಾದಶಹನು ಅಹಮ್ಮದನಗರಕ್ಕೆ ಮುತ್ತಿಗೆಹಾಕಿದಾಗ ಚಾಂದಬೀಬಿಗೆ ಲಖೂಜಿಯು ಸಹಾಯಮಾಡಿ ೧೦ ಸಾವಿರ ಸೈನ್ಯದ ಮನಸಬದಾರಿಯನ್ನೂ ಜಾಧವರಾಯನೆಂಬ ಬಿರುದನ್ನೂ ಸಂಪಾದಿಸಿದನು.

ಇತ್ತ ಭೋಸಾಜಿ ಎಂಬವನೊಬ್ಬ ಉದೇಪುರದ ಅರಸುಮನೆತನದವನು ಅಲ್ಲಿ ಕೆಲವೊಂದು ಕಾರಣದಿಂದ ಬೇಸತ್ತು ತನ್ನ ಕುಟುಂಬದೊಂದಿಗೆ ದಕ್ಷಿಣಕ್ಕೆ ಬಂದಿದ್ದನು. ಅವನ ಮಕ್ಕಳು ಮೊಮ್ಮಕ್ಕಳು ವೇರುಳಗ್ರಾಮದ ಗೌಡಿಕೆ ಸಂಪಾದಿಸಿಕೊಂಡು ಬಡತನದಿಂದ ಕಾಲಕ್ಷೇಪ ಮಾಡುತ್ತಿದ್ದರು. ಅವರಲ್ಲಿ ಮಾಲೋಜಿ ಎಂಬವನು ಶೂರನೂ ಸಾಹಸಿಯೂ ಆಗಿದ್ದನು. ಅವನಾದರೂ ಅಹಮ್ಮದನಗರದ ಸೇನೆಯಲ್ಲಿ ಒಂದು ಸಣ್ಣ ಚಾಕರಿ ಸಂಪಾದಿಸಿ ಲಖೂಜಿಯ ಕೈಕೆಳಗೆ ಇದ್ದನು. ಅವನಿಗೆ ಶಹಾಜಿಯೆಂಬ ಮಗನಿದ್ದನು. ಇದೇ ವರುಷದವನಿದ್ದರೂ ಅವನು ಒಳ್ಳೇ ಚಟುವಟಿಕೆಯುಳ್ಳವನಾಗಿ ತನ್ನ ಚಲ್ಲಿಕೆಯಿಂದ ಪ್ರೇಕ್ಷಕರ ಮನಸ್ಸನ್ನು ಸೆಳಕೊಳ್ಳುವಂತೆ ಇದ್ದನು.

ಹೀಗಿರಲು ಲಖೂಜಿಯ ಮನೆಯಲ್ಲಿ ಒಂದು ಸಮಾರಂಭವು ನಡೆಯಿತು. ಆಗ ಎಲ್ಲ ಸರದಾರರೂ ಸೇರಿದ್ದರು. ಆಗ ಲಖೂಜಿಯ ಮೂರು ವರ್ಷದ

ಬಾಲಿಕೆಯೊಬ್ಬಳು ಶಹಾಜಿಯ ಮೈಮೇಲೆ ಗುಲಾಲನ್ನು ಚಲ್ಲಿದಳು. ಅವನೂ ಹಾಗೆಯೇ ಮಾಡಲು ಅವರೀರ್ವರ ಮೈಯು ಗುಲಾಲಿನಿಂದ ಕೆಂಪಾದವು. ಈ ಚಮತ್ಕಾರವನ್ನು ನೆರೆದ ಸರದಾರರೆಲ್ಲರೂ ನೋಡಿ ನಗಲಾರಂಭಿಸಿದರು. ಆಗ ಲಖೂಜಿಯು ನಮ್ಮ ಜಿಜಾಬಾಯಿಗೆ ಇವನೇ ತಕ್ಕ ವರನೆಂದು ಮನಸ್ಸು ತಡೆಯ ಲಾರದೆ ಒಮ್ಮೆ ಅಂದುಬಿಟ್ಟನು.

ಲಖೂಜಿಯು ದೊಡ್ಡ ಅಧಿಕಾರಿಯು; ಮಾಲೋಜಿಯು ಸೇನೆಯಲ್ಲಿ ಸಣ್ಣ ಚಾಕರನು. ಈ ಯೋಗ್ಯತಾ ವೈಷಮ್ಯವಿರುವಾಗ ಬೀಗತನ ಬೆಳೆಯುವದು ನಗೆ ಗೇಡೆಂದು ಎಲ್ಲರಿಗೂ ಅನಿಸಿತು. ಎಷ್ಟೋ ದಿವಸಗಳು ಸಂದಮೇಲೆ ಮಾಲೋ ಜಿಯು ಲಖೂಜಿಯ ಎದುರಿಗೆ ಬೀಗತನದ ಪ್ರಸ್ತಾಪವನ್ನೆತ್ತಿದನು. ಆ ಮಾತು ಲಖೋಜಿಗೂ ಇವನ ಪತ್ನಿಗೂ ತೀರ ಸರಿದೋರಲಿಲ್ಲ. ಅಂದಿನಿಂದಂತೂ ಮಾಲೋ ಜಿಯ ಹೃದಯದಲ್ಲಿ ಅಪಮಾನಾಗ್ನಿಯು ದಹಿಸತೊಡಗಿತು. ಅವನು ಮನಸ್ಸಿ ನಲ್ಲಿ ಹಟವನ್ನೇ ತೊಟ್ಟು ತನ್ನ ಯೋಗ್ಯತೆ ಬೆಳೆಯಿಸಿಕೊಳ್ಳುವದಕ್ಕಾಗಿ ಯತ್ನಿಸ ಲಾರಂಭಿಸಿದನು. ಮಾಲೋಜಿಯು ಶೂರತನದಿಂದ ನಿಜಾಮಶಾಹಿಯ ಪರವಾಗಿ ಯುದ್ಧಗೈಯುತ್ತ ಜಯಪಡೆಯಲಾರಂಭಿಸಿದನು. ನಿಜಾಮಶಾಹಿಯು ಅವನ ಕರ್ತೃತ್ವಕ್ಕೆ ಸಂತೋಷಪಟ್ಟು ಪುಣೆ ಸುಪೆ ಜಿಲ್ಲೆಗಳ ಜಹಾಗೀರನ್ನು ಕೊಟ್ಟು ಸನ್ಮಾನಾರ್ಥವಾಗಿ 'ರಾಜಾ' ಎಂಬ ಬಿರುದನ್ನಿತ್ತನು. ಕೊನಗೆ ಬಾದಶಹನೇ ಅತನ ಮನಸ್ಸಿನ ಸಂಕಲ್ಪವನ್ನು ಕಂಡುಹಿಡಿದು ಲಖೂಜಿಗೆ ಆಗ್ರಹದಿಂದ ಬೀಗ ತನ ಬೆಳೆಯಿಸಲಿಕ್ಕೆ ಅಪ್ಪಣೆ ಕೊಟ್ಟನು. ಆಗ ಶಹಾಜಿ, ಜಿಜಾಬಾಯಿಯವರ ಲಗ್ನವು ಒಳ್ಳೇ ಅಟ್ಟಹಾಸದಿಂದ ಗಟಂಳನೇ ಇಸ್ವಿಯಲ್ಲಿ ನೆರವೇರಿತು. ಆ ವಿವಾಹ ಪ್ರಸಂಗಕ್ಕೆ ನಿಜಾಮಶಾಹಿಯೇ ಮುಖ್ಯನಾಗಿದ್ದನು.

ಮುಂದೆ ಮಾಲೋಜಿಯು ವೃದ್ಧನಾಗಿ ಗಟಂಗಳಲ್ಲಿ ಮರಣ ಹೊಂದಿದನು. ಅವನ ಸ್ಥಾನದಲ್ಲಿ ಶಹಾಜಿಯೇ ವಿರಾಜಮಾನನಾಗಿ ಕರ್ತೃತ್ವಶಕ್ತಿ ಪರಾಕ್ರಮ ಗಳಿಂದ ಅಭಿವೃದ್ಧಿಗೈದಿದನು. ನಿಜಾಮ ಶಾಹಿಯಲ್ಲಿ ಶಹಾಜಿಯೇ ಪ್ರಬಲ ಸರದಾರ ನಾದನು. ಜಾಧವರಾಜನ ತೇಜವು ದರಬಾರದಲ್ಲಿ ದಿವಸ ದಿವಸಕ್ಕೆ ಕಡಿಮೆ ಕಡಿಮೆಯಾಗಲಾರಂಭಿಸಿತು. ಪಿತಾಮಹ ಲಖೂಜಿಗೆ ಶಹಾಜಿಯ ಬೆಳಕು ಅಸ ಹ್ಯವೆನಿಸಿ ಅಳಿಯನನ್ನು ಶತ್ರುಭಾವದಿಂದ ನೋಡಲಾರಂಭಿಸಿದನು. ಲಖೂಜಿಯು ಆ ದರಬಾರವನ್ನೇ ತೊಲಗಿ ಮೊಗಲರ ಕಡೆಗೆ ಸೇರಿಕೊಂಡು ನಿಜಾಮಶಾಹಿಯ ವಿರುದ್ಧವಾಗಿ ಹೆಣಗಲಾರಂಭಿಸಿದನು.

ಒಂದು ಸಾರೆ ಲಖೂಜಿಯು ಶಹಾಜಿಯನ್ನು ಮೊಗಲರ ಸಹಾಯದಿಂದ ಜಿನ್ನಪ್ಪಿದನು. ಹೀಗೆ ಓಡಿ ಹೋಗುತ್ತಿರುವಾಗ ಬಸುರಿದ್ದ ತನ್ನ ಪೆಂಡತಿಯನ್ನು ಸಂಗಡ ಕರಕೊಂಡು ಹೋಗುವದು ಶಹಾಜಿಗೆ ಅಸಾಧ್ಯವೆನಿಸಿ ಮಧ್ಯಮಾರ್ಗದಲ್ಲಿಯೇ ಬಿಟ್ಟುಹೋದನು. ಪಿತೃ-ಪತಿಗಳ ಸಂಗ್ರಾಮದಲ್ಲಿ ಯಾರಿಗೆ ಏನೂ ಜೇಳಲಿಕ್ಕೆ ಅವಳು ಸಮರ್ಥಳಾಗಲಿಲ್ಲ. ಸ್ರಸೂತಿಗಾಗಿ ತಂದೆಯ ಮನೆ ಸೇರಲು ಅವಳು ಬಯಸಿದ್ದರಿಂದ ಲಖೂಜಿಯು ಅವಳನ್ನು ಶಿವನೇರಿ ಕೋಟೆಗೆ ತಲಪಿಸಿ ಹೋದನು. ಇತ್ತಲಾನೆ ಇಸವಿಯ ಬೇಸಿಗೆ ಕಾಲದಲ್ಲಿ (ವೈಶಾಖ ಮಾಸದಲ್ಲಿ) ಭಾವೀ ಮಹಾರಾಷ್ಟ್ರ ರಾಜ್ಯ ಸಂಸ್ಥಾಪಕನಾದ ಶಿವಾಜಿಯು ಜನ್ಮನೆತ್ತಿದನು. ಶಹಾಜಿಯು ಮಾತ್ರ ಅಹಮ್ಮದನಗರದ ಶಾಹಿಯ ಕಡೆಗೇ ಇದ್ದನು. ಇತ್ತಲಿಂದ ನಿಜಾಮಶಾಹಿಯ ಸಂರಕ್ಷಣೆಯ ಭಾರವು ಶಹಾಜಿಯ ಕಡೆಗೇ ಇದ್ದಿತು. ಶಹಾಜಹಾನ ಬಾದಶಹನು ೧೬೩೬ರಲ್ಲಿ ನಿಜಾಮಶಾಹಿಯನ್ನು ಸ್ರಯಾಸದಿಂದ ಕಿತ್ತೊಗೆದನು. ಆಗ ಮಾತ್ರ ಶಹಾಜಿಯು ವಿಜಾಪೂರ ಬಾದಶಹರ ಪಕ್ಷಕ್ಕೆ ತೆರಳಿದನು.

ಶಿವಾಜಿಯ ಉದಯ

ಜಿಜಾಬಾಯಿಯ ವಿಷಯವಾಗಿ ಶಹಾಜಿಯು ಅವಳ ತಂದೆಯ ಮೂಲಕ ಕ್ರೂರ ದೃಷ್ಟಿಯುಳ್ಳವನೇ ಇದ್ದನು. ಪುನಃ ಬೇರೊಂದು ಲಗ್ನವನ್ನು ಶಹಾಜಿಯು ಮಾಡಿಕೊಂಡಿದ್ದರಿಂದ ಜಿಜಾಬಾಯಿಗೆ ಸೊಗಸು ಲೇಶವಾದರೂ ಇದ್ದಿದ್ದಿಲ್ಲ. ಅವಳ ತಂದೆ ಲಖೋಜಿ, ಅಣ್ಣನಾದ ಅಚಲೋಜಿ, ಖೇಳೋಜಿ ಇವರನ್ನು ಮುಸಲ್ಮಾನರು ಸಂಹರಿಸಿದ್ದರಿಂದ ಬಾದಶಹರ ವಿಷಯನಾಗಿಯೂ ಅವಳು ಕೋಪಪೂರ್ಣಳಾಗಿದ್ದಳು. ತನ್ನ ಉಭಯಮನೆತನಗಳ ವರ್ಚಸ್ಸನ್ನು ನೆನಿಸಿಕೊಂಡು ತನ್ನ ಮನಸತನವು ರಾಜಮನೆತನವಾಗಬೇಕೆಂದು ಉತ್ಕಟೇಚ್ಛೆಯುಳ್ಳವಳಾಗಿದ್ದಳು. ದಕ್ಷಿಣದಲ್ಲಿ ಮುಸಲ್ಮಾನೀ ರಾಜ್ಯವು ಹಿಂದುಗಳನ್ನು ಅವಲಂಬಿಸಿಕೊಂಡಿದ್ದರಿಂದ ಮಹಾರಾಷ್ಟ್ರ ರಾಜ್ಯಸ್ಥಾಪನೆಗೆ ಈ ಸ್ಥಳವು ಯೋಗ್ಯವೆಂದು ಬಗೆದಿದ್ದಳು. ತನ್ನ ಧರ್ಮದ ಮೇಲೂ ಮನೆತನದಮೇಲೆಯೂ ಬಹಳಪ್ರೇಮವುಳ್ಳವಳಾಗಿದ್ದಳು. ಆದರೂ ಪರಧರ್ಮ ಸಹಿಷ್ಣುತೆಯು ಅವಳಲ್ಲಿ ಇತ್ತು. ಅವಳಿಗೆ ಚನ್ನಾಗಿ ಓದಲಿಕ್ಕೂ ಬರೆಯಲಿಕ್ಕೂ ಬರುತ್ತಿದ್ದುದರಿಂದ ಮಹಾಭಾರತ ರಾಮಾಯಣಗಳನ್ನು ಓದುತ್ತ ಕೂಡುತ್ತಿದ್ದಳು. ಅವಳ ಮೈಮೇಲೆ ನಿರಂತರ ಸಂಕಟಗಳು ಒದಗುತ್ತಿದ್ದುದರಿಂದ ಅವಳಲ್ಲಿ ಪ್ರಸಂಗಾವಧಾನ, ಮಾರ್ಗದರ್ಶಿತ್ವ ಈ ಗುಣಗಳು ತಾನಾಗಿಯೇ ನೆಲಸಿದ್ದವು. ಶಹಾಜಿಯು ಕೂಡ ಇದ್ದು ರಾಜಕಾರಣಗಳನ್ನು ಅರಿತಿದ್ದವ

ಜೀಜಾಬಾಯಿಯ ಗುಣಗಳು

ರಿಂದ ಮನೆತನದಲ್ಲಿ ಗೃಹಛಿದ್ರಗಳು ಉತ್ಪನ್ನವಾಗಬಾರದೆಂದು ಪುಣೆಯಲ್ಲಿ ಮಗನೊಂದಿಗೆ ಪ್ರತ್ಯೇಕವಾಗಿ ವಾಸಿಸಿದಳು. ಶಿವಾಜಿಗೆ ಇಬ್ಬರು ಶಿಕ್ಷಕರಂತೆ ಇದ್ದರು; ಒಬ್ಬನು ದಾದಾಜಿ ಕೊಂಡದೇವನು ಮತ್ತೊಬ್ಬಳು ಜಿಜಾಬಾಯಿ. ದಾದೋಜಿಯು ೧೬೪೫ನೇ ಇಸ್ವಿಯಲ್ಲಿ ತೀರಿಕೊಂಡದ್ದರಿಂದ ಜಿಜಾಬಾಯಿಯ ಆಲೋಚನೆಯನ್ನು ಕೇಳಿಯೇ ಎಲ್ಲ ಕೆಲಸಗಳನ್ನು ಶಿವಾಜಿಯು ಮಾಡುತ್ತಿದ್ದನು. ತಾಯಿಯ ವಿಷಯವಾಗಿ ಆದರಬುದ್ಧಿ ವಿಶ್ವಾಸಗಳು ಶಿವಾಜಿಯಲ್ಲಿ ನೆಲೆಸಿದ್ದವು. ಜಿಜಾಬಾಯಿಯು ಒಳ್ಳೇ ವಿಚಾರಪೂರ್ವಕವಾಗಿ ಮಹಾರಾಷ್ಟ್ರರ ಕೂಡ ಚಿಕ್ಕಂದಿನಿಂದ ನಡೆಯಬೇಕಾದ್ದರಿಂದ ಮಹಾರಾಷ್ಟ್ರರ ಸ್ವಭಾವವನ್ನು ಅನುಭವಪೂರ್ವಕವಾಗಿ ಅವಳು ಅರಿತಿದ್ದಳು. ಮನುಷ್ಯರ ಸ್ವಭಾವಪರೀಕ್ಷಿಸುವ ಗುಣವೂ ಅವಳಲ್ಲಿತ್ತು. ಆದುದರಿಂದ ಇವೆಲ್ಲ ಗುಣಗಳ ಲಾಭವು ತಾಯಿಯ ಸಹವಾಸದಿಂದ ಶಿವಾಜಿಗೆ ಲಭಿಸಿತು. ಈ ಕಾಲಕ್ಕೆ ಪುಣೆ ಪ್ರಾಂತದಲ್ಲಿ ಬರ ಬಿದ್ದು ಜನವಸತಿಯು ಇಲ್ಲದಂತಾದ್ದರಿಂದ ರೈತರನ್ನು ಅನೇಕ ರೀತಿಯಿಂದ ಪಾಲಿಸಿಕೊಂಡು ಅವರ ನ್ಯಾಯಾನ್ಯಾಯಗಳನ್ನು ಯೋಗ್ಯವಾಗಿ ವಿಚಾರಿಸಿ ಅವರೆಲ್ಲರ ಸಹಾನುಭೂತಿ ವಿಶ್ವಾಸಗಳನ್ನು ಅವಳು ಪಡೆದಿದ್ದಳು. ಈ ಬಗೆಯ ನ್ಯಾಯ ತೀರಿಸಿದ ಕಾಗದ ಪತ್ರಗಳು ಈಗಲೂ ನೋಡಲಿಕ್ಕೆ ದೊರೆಯುವಂತೆ ಅವೆ. ಅವಳು ನ್ಯಾಯ ಶೀಲತೆಯುಳ್ಳವಳೂ ಚತುರಳೂ ಆಗಿದ್ದಳೆಂದು ಆ ಕಾಗದಪತ್ರಗಳಿಂದ ತಿಳಿಯುವಂತೆ ಅದೆ. ಒಮ್ಮೆ ವಿಚಾರಿಸಿ ಒಂದು ಕೆಲಸವನ್ನು ಕೈಕೊಂಡಬಳಿಕ ವಿಘ್ನಕ್ಕೆ ಹೆದರಿ ನಡುವೆಯೇ ಆ ಕೆಲಸವನ್ನು ಆ ಮಹನೀಯಳು ಬಿಡುತ್ತಿದ್ದಿಲ್ಲ. ಮಹಾರಾಷ್ಟ್ರರ ದೊಡ್ಡ ದೊಡ್ಡ ಮನೆತನಗಳ ಅಸ್ತಿತ್ವದಿಂದಲೇ ಮುಂದೆ ಮಹಾರಾಷ್ಟ್ರ ರಾಜ್ಯವು ಸ್ಥಾಪಿತವಾಗುವದೆಂದು ತಿಳಿದು ಆ ಮನೆತನಗಳ ರಕ್ಷಣೆಯ ಕಡೆಗೇ ಅವಳ ಒಲವು ಇದ್ದಿತು. ಬಜಾಜಿ ನಿಂಬಾಳಕರನೆಂಬ ಒಂದು ಸರದಾರನು ನಿರ್ವಾಹವಿಲ್ಲದೆ ಪರಧರ್ಮ ಸ್ವೀಕಾರಮಾಡಿದ್ದನು. ಅವನನ್ನು ಪುನಃ ತಮ್ಮ ಸಮಾಜದಲ್ಲಿ ಬಹುಜನ ಸಮ್ಮತಿಯಿಂದ ಸೇರಿಸಿಕೊಂಡು ಶಿವಾಜಿಯ ಮಗಳಾದ ಸಖೂಬಾಯಿಯನ್ನು ಅವನಿಗೆ ಲಗ್ನಮಾಡಿಕೊಟ್ಟಳು. ಈ ಪ್ರಕಾರವಾಗಿ ೧೬೪೫ ರಿಂದ ೧೬೭೯ರ ವರೆಗೆ ಶಿವಾಜಿಯ ತಾಯಿಯೇ ಅವನಿಗೆ ಮಾರ್ಗದರ್ಶಿಯಾಗಿದ್ದಳು. ಮುಂದೆ ರಾಮದಾಸ ಸ್ವಾಮಿಗಳ ಸಹವಾಸ ಲಾಭವು ಶಿವಾಜಿಗೆ ಲಭಿಸಿತು.

ಇಷ್ಟೆಲ್ಲ ಗುಣಗಳನ್ನು ಶಿವಾಜಿಯು ದೊರಕಿಸಿಕೊಂಡದ್ದರಿಂದ ಅವನ ಅನುಯಾಯಿಗಳು ಅವನ ವಿಷಯವಾಗಿ ಪೂರ್ಣ ವಿಶ್ವಾಸವುಳ್ಳವರಾಗಿದ್ದರು. ಸ್ವಾಮಿ

ಕಾರ್ಯದ ಮೂಲಕ ತಮ್ಮ ದೇಹವನ್ನು ಅರ್ಪಿಸಲಿಕ್ಕೆ ಸದಾ ಅವರು ಹಿಂದು ಮುಂದು ನೋಡುತ್ತಿದ್ದಿಲ್ಲ.

ತನ್ನ ಇಚ್ಛೆಯು ತನ್ನ ಮಗನಿಂದ ಕೈಗೂಡಿದ್ದನ್ನು ನೋಡಿ ಜಿಜಾಬಾಯಿಯು ಬಹಳ ಸಂತೋಷಪಟ್ಟದ್ದು ಆಶ್ಚರ್ಯದ ಮಾತಲ್ಲ. ತನ್ನ ಮಗನ ಪಟ್ಟಾಭಿಷೇಕ ಸಮಾರಂಭವನ್ನು ನೋಡಿ ತನ್ನ ಧನ್ಯತೆ ಬಗೆದುಕೊಂಡದ್ದಾದರೂ ಅವಳಿಗೆ ಅರಿದಾಗಿರಲಿಕ್ಕಿಲ್ಲ. ಹೀಗೆ ಅವಳು ತನ್ನ ಸದ್ಗುಣಗಳಿಂದ ಜನ್ಮ ಸಾರ್ಥಕ್ಯ ಪೊಂದಿ ಮಗನ ಪಟ್ಟಾಭಿಷೇಕ ಸಮಾರಂಭದ ತರುವಾಯ ಹತ್ತೀ ದಿವಸಗಳ ಮೇಲೆ ರಾಯಗಡಕೋಟೆಯ ಬದಿಗಿರುವ ಪಾಚಾಡಗಾವದಲ್ಲಿ ನಿಜ ನಿಶ್ರಾಂತಿ ಹೊಂದಿದಳು. ಉತ್ತಮ ತಾಯಿಯು ಏನುಮಾಡಲು ಶಕ್ತಳಿರುವ ಳೆಂಬ ಮಾತಿಗೆ ಜಿಜಾಬಾಯಿಯೇ ಉತ್ಕೃಷ್ಟ ಉದಾಹರಣ ಸ್ವರೂಪವಾಗಿದ್ದಾಳೆ. ಜಿಜಾಬಾಯಿಯಂಥ ಸ್ತ್ರೀರತ್ನವು ಹಿಂದಕ್ಕೊಮ್ಮೆ ಆಗಿಹೋದದ್ದಕ್ಕೆ ಮಹಾರಾಷ್ಟ್ರೀಯರಿಗೆ ಅಭಿಮಾನವೆನಿಸುವದರಲ್ಲಿ ಸಂದೇಹವಿಲ್ಲ.

ಶಾಲೆಯ ಶಿಸ್ತು ಅಥವಾ ಶಾಲೆಯ ಕೆಲಸಗಳ ಪದ್ಧತಿ

ಶಿಕ್ಷಕನು ಬರೆ ಶಿಕ್ಷಣಪದ್ಧತಿಗಳನ್ನು ಅರಿತಿದ್ದರೂ ಸಾಲದು; ಕೇವಲ ವಿದ್ವಾಂಸನಿದ್ದರೂ ನಡೆಯದು; ಶಾಲೆಯ ವರ್ಗಗಳಲ್ಲಿ ವೇಳೆವೇಳೆಗೆ ಜರುಗುತ್ತಿರುವ ಕೆಲಸಗಳು ಸಣ್ಣವೇ ಇರಲಿ. ಮಹತ್ವಪಾದವೇ ಇರಲಿ ಅವನ್ನು ಯೋಗ್ಯವಾಗಿ, ಚಂದಕಾಣಿಸುವಂತೆ ಜಬ್ಬುಕಟ್ಟಾಗಿ ಮಾಡುವ ರೂಢಿಯು ಅವಶ್ಯವಾಗಿ ಬೇಕು. ವೇಳೆವೇಳೆಗೆ ಮಾಡುವ ಕೆಲಸಗಳು ನೈಷ್ಠಿಯ ನಿಯಮಗಳಂತೆ ನಡೆಯುವ ರೂಢಿಯನ್ನಿಡಬೇಕು. ಈ ಬಗೆಯಾಗಿ ನಡೆಯುವದಕ್ಕೇ ಶಾಲೆಯ ಶಿಸ್ತು ಅಥವಾ ಕೆಲಸದ ಪದ್ಧತಿ ಎಂದೆನ್ನಬಹುದು. ಈ ಶಿಸ್ತನ್ನು ಪುಡುಗರು ಮುಂದೆ ನಾಗರಿಕರಾಗಿ ತಮ್ಮ ತಮ್ಮ ಮನೆಗಳಲ್ಲಿ ಅಥವಾ ತಂತಮ್ಮ ಕಾರ್ಯಕ್ಷೇತ್ರಗಳಲ್ಲಿ ಸಹ ಸರಿಯಾಗಿ ಉಪಯೋಗಮಾಡಿಕೊಳ್ಳಬೇಕಾಗುತ್ತದೆ. ಈ ಪ್ರಕಾರ ಕೆಲಸಮಾಡುವ ರೂಢಿಯಿದ್ದ ಜನಾಂಗದವರೇ ಜಗತ್ತಿನಲ್ಲಿ ಮುಂದೆ ಬರುವರು; ಆದದರಿಂದ ಭಾವೀ ರಾಷ್ಟ್ರವನ್ನು ಸಿದ್ಧಪಡಿಸುವ ಮೊದಲಿನ ರಂಗ ಭೂಮಿಯನಿಸಿದ ನಮ್ಮ ಶಾಲೆಯಲ್ಲಿ ಶಿಸ್ತಿನ ಉಪಯೋಗವೂ ರೂಢಿಯೂ ಬೇಕು.

ಉತ್ತಮ ಶಿಸ್ತು: ಸರ್ವಶಿಕ್ಷಣದ ಅಸ್ತಿವಾರವಾಗಿದೆ; ಇದರಹೊರತು ಶಾಲೆಯಲ್ಲಿ ಶಾರೀರಿಕ, ಬೌದ್ಧಿಕ, ಇಲ್ಲವೆ ನೈತಿಕ ಶಿಕ್ಷಣಗಳಲ್ಲಿ ಒಂದೂ ಸಿಗುವದು ಅಶಕ್ಯವೇ ಸರಿ. ಶಿಸ್ತಿಲ್ಲದೆ ಸಾಗುವ ಶಾಲೆಯು ಶಿಕ್ಷಣದ ಮಂದಿರವೆನಿಸಲಾರದು. ಯಾವ ಶಾಲೆಯಲ್ಲಿ ಉತ್ತಮ ಶಿಸ್ತು ಇರುವದೋ ಅಲ್ಲಿಯ ವಿದ್ಯಾರ್ಥಿಗಳು ಶಾಲೆಯ ನಿಯಮಗಳನ್ನು ಆನಂದದಿಂದಲೂ ಸ್ವಂತಮನಸ್ಸಿನಿಂದಲೂ ಪಾಲಿಸುವರು. ಅವರೆಲ್ಲರು ಶಿಕ್ಷಕನಿಗೆ ಯೋಗ್ಯ ಮರ್ಯಾದೆಯನ್ನು ಕೊಟ್ಟು ಅವನ ಅಪ್ಪಣೆಗಳನ್ನೆಲ್ಲ ಪಾಲಿಸುವರು; ಹುಡುಗರೆಲ್ಲರು ಪರಸ್ಪರ ಸಹಾನುಭೂತಿಯಿಂದ ನಡೆಯುವರು; ತಮ್ಮ ಕೆಲಸಗಳನ್ನೆಲ್ಲ ಸುವ್ಯವಸ್ಥಿತವಾಗಿಯೂ ಅಂತಃಕರಣಪೂರ್ವಕವಾಗಿಯೂ ಮಾಡುವರು; ವಿದ್ಯಾರ್ಥಿಗಳು ತಾವು ಮಾಡುವ ಕೆಲಸಗಳನ್ನೆಲ್ಲ ಸ್ವಾವಲಂಬನದಿಂದ ಮಾಡುವರು; ಅವರು ನಿಜವಾದದ್ದನ್ನು ನುಡಿಯುವರು. ಒಂದು ವೇಳೆ ತಮ್ಮಿಂದ ಅಪರಾಧವಾದರೆ ಅದಕ್ಕೊಪ್ಪುವರು; ಹಾಗೆ ಮಾಡುವದರಿಂದ ತಮ್ಮ ಅವಹೇಲನವಾಗುವದೆಂದು ತಿಳಿಯರು. ಈ ಪ್ರಕಾರ ನಡೆಯುವ ಪೂರ್ವಿಯು ಮೊದಲಿನಿಂದ ಇದ್ದದ್ದಾದರೆ ಮಕ್ಕಳಲ್ಲಿ ಸ್ವಾಭಿಮಾನ, ವಿನಯ ಇವೆರಡೂ ಗುಣಗಳು ಒಡಮೂಡುವವು. ಅವರಿಗೆ ಉದ್ಯೋಗವು ಆನಂದದಾಯಕವಾಗುತ್ತದೆ; ಸುಮ್ಮನೆ ಕೂಡುವದು ಕಷ್ಟದಾಯಕವಾಗುತ್ತದೆ. ಈ ರೀತಿಯ ಗುಣಗಳ ಯೋಗದಿಂದ ತಾವು ಕೈಕೊಂಡ ಕೆಲಸಗಳನ್ನೆಲ್ಲ ಪೂರೈಸಿಬಿಡುವ ಚಟವು ಬಿದ್ದಿತೆಂದರೆ ಮುಂದೆ ಅವರಿಗೆ ಯಶವು ಕಟ್ಟಿ ಇಟ್ಟಂತೆಯೇ ಇರುವದು. ಇಂಥವರ ಆಯುಷ್ಯವು ಸುಖದಲ್ಲಿಯೇ ಸವೆಯುವದು. ಉತ್ತಮ ಶಿಸ್ತೆಂಬದು ಚಿಕ್ಕಂದಿನಿಂದಲೇ ಪಾಲಿಸತಕ್ಕದ್ದಾಗಿರುವದು. ಅದಕ್ಕೆ ಮನೆಯು ತೌರುಮನೆಯೆಂದು ತಿಳಿಯಬಹುದಾದರೂ ಎಲ್ಲ ಮನೆಗಳೆಲ್ಲ ಒಂದೇತೆರನಾಗಿರುವದು ಅಸಂಭವವಾದ್ದರಿಂದ ನಮ್ಮ ಶಾಲೆಯೇ 'ಶಿಸ್ತಿನ ಬೀಡೆಂ'ದು ಹೇಳಬೇಕಾಗಿದೆ.

ಶಿಸ್ತಿಲ್ಲದ ಶಾಲೆಗಳ ಸ್ಥಿತಿ.

ಯಾವ ಶಾಲೆಯಲ್ಲಿ ಶಿಸ್ತು ಇರುವದಿಲ್ಲವೋ ಅಲ್ಲಿಯ ವಿದ್ಯಾರ್ಥಿಗಳ ಸ್ಥಿತಿಯು ಇದಕ್ಕೆ ವಿಪರೀತವಾಗಿರುತ್ತದೆ. ಅಲ್ಲಿಯ ವಿದ್ಯಾರ್ಥಿಗಳು ಪೊತ್ತಿಗೆ ಸರಿಯಾಗಿ ಸಾಲೆಗೆ ಬರುವದಿಲ್ಲ; ಒಟ್ಟುಗೂಡಿದ ಮೇಲೆಯೂ ಸಹ ತಮ್ಮ ಪಾಠಗಳನ್ನು ವ್ಯವಸ್ಥಿತರೀತಿಯಿಂದ ಅಭ್ಯಾಸವನ್ನು ಮಾಡಲರಿಯರು; ವರ್ಗದಲ್ಲಿ ಪಾಠ ನಡೆದಾಗ ಕೆಲವರು ಪಾಠದ ಕಡೆಗೆ ಲಕ್ಷ್ಯಗೊಡುವರು; ಮತ್ತೆ ಕೆಲವರು ಮಾತಾಡುತ್ತ ಕೂಡುವರು. ಇನ್ನುಳಿದವರು ಇಲ್ಲದಿದ್ದ ಅಪಹಾಸ್ಯ ಮಾಡುತ್ತ ಕುಳಿತು ಬಡಿದಾಡುತ್ತಿರುವರು; ಹಾಗು ಕೆಲವರು ಉದಾಹರಣ ಬಿಡಿಸುತ್ತ

ಗಳಿತರೆ ಉಳಿದವರು ಅವರ ಬರೆಹದ ನಕಲು ಮಾಡುವರು. ಇನ್ನುಳಿದವರು ಸಮ್ಮನೆ ಕೂಡುವರು. ಶಿಕ್ಷಕನು ಏನಾದರೂ ಕೇಳಿದ ಕೂಡಲೆ ಎದ್ದು ಕುಳಿತು ತಾವೂ ಲಕ್ಷ್ಯಗೊಟ್ಟವರಂತೆ ನಟಿಸಿ ಬೇಕುಬೇಕಾದಂತೆ ಉತ್ತರಕೊಡುವರು. ಈ ಕೆಟ್ಟ ರೂಢಿಯು ದೃಢವಾಗಿ ಬಿಟ್ಟರೆ ಆ ವಿದ್ಯಾರ್ಥಿಗಳಲ್ಲಿ ಅವ್ಯವಸ್ಥೆ, ಅನಿಯಮಿತತನ, ಆಲಸ್ಯ, ಕೆಲಸದ ಬಗ್ಗೆ ಹೇಸಿಕೆ ಮೊದಲಾದ ದುರ್ಗುಣಗಳು ಅಂಟಿಕೊಳ್ಳುತ್ತವೆ. ಸಹಕಾರಿತೆಯಿಂದಲೂ ಸಹಾನುಭೂತಿಯಿಂದಲೂ ನಡೆದುಕೊಳ್ಳುವ ಸಮಯಗಳು ಅವರಿಗೆ ಒಮ್ಮೆಯೂ ಬಾರದ್ದರಿಂದ ಚಲೋ ಗುಣಗಳು ಅವರಲ್ಲಿ ಎಂದೂ ನಲೆಗೊಳ್ಳಲಾರವು. ಏನಾದರೊಂದು ನೆವದ ಉತ್ತರಕೊಟ್ಟು ಪಾರಾಗುವ ಕೆಟ್ಟ ಗುಣವು ಅವರಲ್ಲಿ ಸ್ಥಿರವಾಗುತ್ತದೆ. ಆದದರಿಂದ ಅವರು ಅಪ್ರಾಮಾಣಿಕರೂ ಅಸತ್ಯಭಾಷಣಮಾಡುವವರೂ ಆಗುತ್ತಾರೆ. ಮನಸ್ಸಿನ ಮೇಲೆ ಬಲಾತ್ಕಾರವನ್ನಿಟ್ಟು ನಿಯಮದಂತೆ ನಡೆಯುವ ಚಟವು ಅವರಲ್ಲಿ ಇಲ್ಲದ್ದರಿಂದ ಸ್ವೇಚ್ಛಾಚಾರವು ಅವರಿಗೆ ದೇವರನಿಸುತ್ತದೆ. ಆತ್ಮಸಂಯಮನದ ಉತ್ಕೃಷ್ಟ ರೂಢಿಯು ಅವರಿಗೆ ಎಂದೂ ಸೇರದಂತೆ ಆಗುವದು. ಸಾಲೆ, ಅಭ್ಯಾಸಕ್ರಮ, ನಿಯಮಿತತನಗಳೆಂದರೆ ಅವರ ಜೀವದಸುತ್ತೇ ಬರುವದು. ಶಾಲೆಯಲ್ಲಿ ಕಟ್ಟು ಇಲ್ಲದ್ದರಿಂದ ಅವರಲ್ಲಿ ವಿನಯ, ಆಜ್ಞಾಪಾಲನ, ಸ್ವಾಭಿಮಾನ ಇತ್ಯಾದಿ ಗುಣಗಳು ಇಲ್ಲದಂತಾಗಿ ಅವರಿಗೆ ಕೆಲಸದ ಯಶದ ವಿಷಯವಾಗಿ ಪ್ರೀತಿಯೇ ಉಂಟಾಗುವದಿಲ್ಲ. ಹೀಗಾಗಿ ಅವರು ಉತ್ತಮರಾಗುವದು ಎತ್ತಟ್ಟಿಗೇ ಉಳಿದು ದುರ್ಗುಣಿಗಳಾಗುವರು. ಅವರ ಮುಂದಿನ ಆಯುಷ್ಯದಲ್ಲಿ ಕೆಟ್ಟ ಬಾಳುವೆಯುಳ್ಳದ್ದಾಗುವದೆಂದು ಹೇಳಲಿಕ್ಕೆ ಬೇಡ.

ಶಿಸ್ತಿನಿಂದ, ಅಭ್ಯಾಸ ನಿಟ್ಟಿಗೆ ನಡೆಯುವ ಕ್ರಮ.

ಶಿಸ್ತುಳ್ಳ ಶಾಲೆಯಲ್ಲಿ ಶಿಕ್ಷಕನು ಹೇಳುವದರ ಕಡೆಗೆ ವಿದ್ಯಾರ್ಥಿಗಳ ಲಕ್ಷ್ಯವಿರುವದು. ಅವರು ಅದನ್ನೆಲ್ಲ ಮನಸ್ಸಿನಲ್ಲಿ ವಿಚಾರಿಸುತ್ತ ಕೂಡುವರು. ತಮಗೆ ತಿಳಿಯದಂತೆ ಆದರೆ ಬಾಯಿಬಿಚ್ಚಿ ಕೇಳುವರು. ಅಂಥ ಶಾಲೆಯ ಶಿಕ್ಷಕನು ಅವರೊಳಗಿನವನೊಬ್ಬನೇ ಆ ಗತಿಳಿಯದ್ದನ್ನು ಸಹಾನುಭೂತಿಯಿಂದಲೂ ನಿಜವಾದ ಅಂತಃಕರಣದಿಂದಲೂ ತಿಳಿಸಿ ಹೇಳುವನು. ಶಿಕ್ಷಕನು ಹೇಳಿದಂತೆ ಅವರು ತಮ್ಮ ಕೃತಿಗಳನ್ನು ನಡೆಯಿಸುವರು. ಇದರಿಂದ ವಿದ್ಯಾರ್ಥಿ-ಶಿಕ್ಷಕರಲ್ಲಿ ಏಕಚಿತ್ತವು ನಲೆಗೊಳ್ಳುವದು.

ನಿಜವಾಗಿ ವಿಚಾರಿಸಿ ನೋಡಿದರೆ ಮಕ್ಕಳಿಗೆ ಶಿಸ್ತು ಬೇಕಾಗಿಲ್ಲವೆಂತಲ್ಲ. ಅಭ್ಯಾಸವು ವ್ಯವಸ್ಥಿತವಾಗಿಯೂ ನಿಯಮಿತವಾಗಿಯೂ ನಡೆಯುವ ಶಾಲೆಯಲ್ಲಿ

ಶಿಸ್ತು ಮಕ್ಕಳಿಗೆ ಪ್ರಿಯಕರವಾದದ್ದೂ ಸಹಜವಾದದ್ದೂ ಇರುತ್ತದೆ.

ಕಲಿಯಲಿಕ್ಕೆ ಮಕ್ಕಳಿಗೆ ಆನಂದವೆನಿಸುತ್ತದೆ. ಶಿಸ್ತು ಸೃಷ್ಟಿಯ ಸ್ವಾಭಾವಿಕ ಗುಣವಾಗಿದೆ. ಹೊರಗೆ ನೋಡಿದತ್ತೆಲ್ಲ ಉದಾಹರಣಾರ್ಥವಾಗಿ ಹಗಲು, ರಾತ್ರಿ, ಉದ್ಭಿಜ್ಜ ಮೊದಲಾದವುಗಳಲ್ಲೆಲ್ಲ ಒಂದು ಪ್ರಕಾರದ ಶಿಸ್ತು ಇದ್ದೇ ಇರುತ್ತದೆ. ಒಂದು ವೇಳೆ ನಿಯಮದಂತೆ ನಡೆಯುವ ಚಟವು ಮಕ್ಕಳಲ್ಲಿ ನೆಲೆಗೊಂಡರೆ ಅದರಂತೆಯೇ ನಡೆಯುವದಕ್ಕೆ ಅವರಿಗೆ ಆನಂದವೆನಿಸುತ್ತದೆ. ಶಿಸ್ತುಳ್ಳ ವರ್ಗದಲ್ಲಿ ಒಬ್ಬನು ನಿಯಮಕ್ಕೆ ಜೊರತಾಗಿ ನಡೆದರೆ ಅವನಿಗೆ ಉಳಿದ ವಿದ್ಯಾರ್ಥಿಗಳು ಮೆಚ್ಚಲಾರರು. ವಿದ್ಯಾರ್ಥಿಗಳು ಶಾಲೆಯಲ್ಲಿ ಕಳೆಯುವ ಕಾಲವು ಬಹಳ ಮಹತ್ವದ್ದಾಗಿರುವದು. ಆ ವೇಳೆಯಲ್ಲಿಯ ದೊರೆಯುವ ಶಿಕ್ಷಣದಿಂದ ವಿದ್ಯಾರ್ಥಿಗಳ ಸುಖದುಃಖವು ಅವಲಂಬಿಸಿರುವದು. ವಿದ್ಯಾರ್ಥಿಗಳು ಶಿಕ್ಷಕನಿಗೆ ಸಹಾಯಕಾರಿಗಳಾಗಿ ಆನಂದದಿಂದ ತಮ್ಮ ಕೆಲಸಗಳನ್ನು ಮಾಡುವರು. ಹೀಗೆ ಇಲ್ಲದೆ ಇದ್ದರೆ ಆ ಕಾಲವು ಒಳ್ಳೇ ಬೇಸರದಿಂದ ಕಳೆಯುತ್ತದೆ. ವಿದ್ಯಾರ್ಥಿಗಳ ಬಡದಾಟ ಹೊಡೆದಾಟಗಳು ಸಾಗಲು ಶಿಕ್ಷಕನು ಸಿಟ್ಟುಸಿಡುಕುತನವುಳ್ಳವನಾಗಿ ಅವನ ಪ್ರಕೃತಿಯ ಮೇಲೆ ಕೆಟ್ಟ ಪರಿಣಾಮವಾಗುವದು.

ಶಿಸ್ತು ಉತ್ತಮವಾಗಿ ನಡೆಯುವದಕ್ಕೆ ಶಿಕ್ಷಕನೂ ಕಾರಣವಾಗಿರುತ್ತಾನೆ. ಯಾವ ಶಿಕ್ಷಕನಲ್ಲಿ ದೃಢತೆ, ದಕ್ಷತೆ, ವ್ಯವಹಾರ, ಚಾತುರ್ಯ, ಮನುಷ್ಯಸ್ವಭಾವದ ತಿಳಿವಳಿಕೆಗಳು ಇರುವವೋ ವಿದ್ಯಾರ್ಥಿಗಳ ಮೇಲೆ ಆತನ ವರ್ಚಸ್ಸು ಬೀಳುವದು. ಶಿಕ್ಷಕನು ಪ್ರೇಮಿಯೂ ಆಸಕ್ತಿಯುಳ್ಳವನೂ ವಿದ್ವಾಂಸನೂ ಇದ್ದರೂ ಅವನಲ್ಲಿ ದೃಢತೆಯೊಂದು ಇಲ್ಲದಿದ್ದರೆ ಶಿಕ್ಷಣ ಕಾರ್ಯಕ್ಕೆ ಉಪಯೋಗವು ಆಗತಕ್ಕಷ್ಟು ಆಗಲಾರದು ಯಾಕೆಂದರೆ ನಿಯಮದಂತೆ ನಡೆಯದಿದ್ದರೆ ತಮಗೆ ನಿಶ್ಚಯವಾಗಿ ಏನಾದರೂ ಶಾಸ್ತಿಯಾಗೇ ತೀರುವದೆಂದು ವಿದ್ಯಾರ್ಥಿಗಳಿಗೆ ದೃಢನಂಬಿಗೆಯಾಗಿರುವದಿಲ್ಲ. ಹೀಗೆ ವಿದ್ಯಾರ್ಥಿಗಳಿಗೆ ದೃಢನಂಬಿಗೆಯಾಗದ್ದರೆ ಒಬ್ಬನು ಒಂದು ತಪ್ಪು ಮಾಡಿದರೆ ಮತ್ತೊಬ್ಬನು ಮತ್ತೊಂದು ತಪ್ಪು ಮಾಡುತ್ತ ವರ್ಗದಲ್ಲಿ ಒಟ್ಟಿನ ಮೇಲೆ ಅವ್ಯವಸ್ಥೆಯೂ ಅಸಡ್ಡಾಳತನವೂ ನೆಲೆಗೊಳ್ಳುವವು. ಹೀಗೆ ಆಗದೆ ಶಿಕ್ಷಕನು ತಪ್ಪದೆ ಅಪರಾಧಕ್ಕೆ ಶಿಕ್ಷಿಸುವನೆಂದು ತಿಳಿದರೆ ವಿದ್ಯಾರ್ಥಿಗಳು ಎಂದೂ ತಪ್ಪು ಮಾಡಲಾರರು. ಒಂದು ವೇಳೆ ತಪ್ಪು ಮಾಡಿದರೂ ನಾಚಿಕೊಳ್ಳುವರು. ಅಂಥ ಶಾಲೆಯು ಮೇಳೆಯು ಎಂದೂ ವ್ಯರ್ಥವಾಗಿ ಹೋಗಲಾರದು. ಅಪರಾಧಕ್ಕೆ ಶಿಕ್ಷೆ ಮಾಡದೆ ಇರುವದು, ಅಥವಾ

ತಪ್ಪು ನೋಡಿದರೂ ಕಾಣದಂತೆ ಕೂಡುವದು ಇವೆಲ್ಲ ದಬ್ಬಾಳುತ್ವದ ಚಿಹ್ನವೆಂದು ಕೆಲವರಿಗೆ ತಪ್ಪುಗ್ರಹಿಕೆಯಾಗಿರುವದು. ಆದರೆ ಅದು ನಿಜವಾದ ತಿಳಿವಳಿಕೆಯುಲ್ಲ, ಶಿಕ್ಷಕನ ದುರ್ಬಲ ಹೃದಯದ ಚಿಹ್ನವೆಂದು ತಿಳಿಯಬೇಕು. ಶಿಕ್ಷಣಜ್ಞರು ಶಾಲೆಯ ಶಿಸ್ತಿನ ವಿಷಯವಾಗಿ ಕೆಳಗೆ ಬರೆದಂತೆ ನಿಯಮಗಳನ್ನು ಹಾಕಿಕೊಟ್ಟಿರುವರು. ಅವುಗಳನ್ನು ಪಾಲಿಸಿದರೆ ಶಾಲೆಯಲ್ಲಿ ವ್ಯವಸ್ಥೆಯು ಉಳಿಯುವದು.

೧ ನಿಯಮಗಳನ್ನು ಪೂರ್ಣ ವಿಚಾರಮಾಡಿ ಅನುಲಿನಲ್ಲಿತರಬೇಕು.

೨. ವಿಶೇಷ ಮಹತ್ವದ ನಿಯಮಗಳನ್ನು ಬರೆದು ಯೋಗ್ಯ ಸ್ಥಳದಲ್ಲಿ ತೂಗ ಹಾಕಬೇಕು

೩. ನಿಯಮಗಳನ್ನು ತಪ್ಪಿದರೆ ಶಿಕ್ಷೆಯು ತಪ್ಪದೆ ಆಗುವದೆಂದು ವಿದ್ಯಾರ್ಥಿಗಳಿಗೆ ಮನವರಿಕೆಯಾಗಿರಬೇಕು.

೪. ನಿಯಮಗಳನ್ನು ವಿದ್ಯಾರ್ಥಿಗಳೆದುರಿಗೆ ಗಟ್ಟಿಯಾಗಿ ಒಮ್ಮೆ ಹೇಳಿಬಿಡಬೇಕು. ಅಂಥ ನಿಯಮಗಳನ್ನು ತಾನೇ ಎಂದೂ ಮರೆಯಬಾರದು.

೫. ವರ್ಗದ ವ್ಯವಸ್ಥೆಗಾಗಿ ಕೂಡುವ, ನಿಲ್ಲುವ, ಪುಸ್ತಕಗಳನ್ನಿಡುವ, ಹೊರಗೆ ಕೋಗುವ, ಬರುವ ಇತ್ಯಾದಿ ಕೆಲಸಗಳ ನಿಯಮಗಳನ್ನು ಮೊದಲೇ ಗೊತ್ತುಮಾಡಿಡಬೇಕು.

೬. ಶಿಕ್ಷಣದ ತತ್ವಗಳಿಗನುಸರಿಸಿ ವೇಳಾಪತ್ರಿಕೆಯ ರಚನೆಯಿರಬೇಕು. ಎಲ್ಲ ವರ್ಗಗಳನ್ನೂ ಒಂದಾನೊಂದು ಕೆಲಸದಲ್ಲಿ ಯಾವಾಗಲೂ ತೊಡಗಿಸುವಂತೆಯೇ ಇರಬೇಕು.

೭. ಅವಶ್ಯವಾಗಿ ಮಾಡತಕ್ಕ ಕೆಲಸದ ಕಾರಣಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿ ಹೇಳಬೇಕು. ಮೇಲಿನ ನಿಯಮಗಳೆಲ್ಲಾ ವರ್ಗಕ್ಕೆ ಸಂಭಂದಿಸಿರುವವು.

ಕೆಲಕೆಲವು ಸಾಲೆಗಳಲ್ಲಿ ಶಿಕ್ಷಕರು ತಮ್ಮ ತಮ್ಮೊಳಗೆ ಬೇಸರಪಟ್ಟುಕೊಳ್ಳುವುದುಂಟು. ಹಾಗೆ ಮಾಡದೆ ಮುಖ್ಯ ಶಿಕ್ಷಕನಮೇಲೆ ಎಲ್ಲರೂ ಪ್ರೇಮ ವಿಶ್ವಾಸಗಳನ್ನಿಟ್ಟುಕೊಂಡು ಸಹಕಾರಿತೆಯಿಂದಲೂ ಜವಾಬುದಾರಿಯಿಂದಲೂ ಕೆಲಸಮಾಡಿದರೆ ಅವುಗಳೊಳಗಿನ ಎಲ್ಲ ತೊಂದರೆಗಳು ಸಹಜವಾಗಿ ಅಡಗುವವು.

ಶಿಕ್ಷಕರೆಲ್ಲ ಕಾರ್ಯದಕ್ಷರೂ ನಿಯಮದಂತೆ ತಪ್ಪದಲೆ ನಡೆಯುವವರೂ ಆಗಿರಬೇಕು.

ಕಲ್ಪನಾಶಕ್ತಿ

ಕಲ್ಪನೆಯು ಶಕ್ತಿಯಲ್ಲಿ ಸಹಜ ಕಲ್ಪನಾಶಕ್ತಿ ಹಾಗು ಗಹನ ಕಲ್ಪನಾಶಕ್ತಿ ಎಂ
ರಡು ಬೇಧಗಳಾಗುವವು. ಯಾವದೊಂದು ವಸ್ತುವಿನ ಕಲ್ಪನೆಯು ಸ್ಮರಣದಲ್ಲಿ ಮೂ
ಕೊಂಡ ಆ ವಸ್ತುವಿನ ಪ್ರತಿಮೆಯಂತೆ ತದ್ರೂಪವಾಗಿ ಇದ್ದಾದ್ದಾದರೆ ಅದು ಸಹ
ಕಲ್ಪನೆಯು. ಇಂಥ ಪ್ರಸಂಗದಲ್ಲಿ ಅವನ್ನು ಸ್ಮರಣದಿಂದ ವಿಂಗಡಿಸಲಿಕ್ಕೆ ಬರುವದಿಲ್ಲ
ಅದ್ದರಿಂದ ಅನೇಕ ಮಾನಸಶಾಸ್ತ್ರಜ್ಞರು ಅನೇಕ ಬಿಂಬ ಇಲ್ಲವೆ ಅನುಭವಗಳನ್ನು
ಹೊಸ ಹೊಸ ಸಂವಿಧಾನಗಳಿಂದ ಗಹನವಾದ ರಚನೆಯನ್ನು ಉಂಟುಮಾಡಿ ಹೊ
ಹೊಸ ಬಿಂಬಗಳನ್ನು ಇಲ್ಲವೆ ಅನುಭವಗಳನ್ನು ಹುಟ್ಟಿಸುವಂಥ ಮಾನಸಿಕ ಶಕ್ತಿ
ಕಲ್ಪನಾಶಕ್ತಿ ಎಂಬ ಹೆಸರನ್ನು ಕೊಟ್ಟಿರುವರು. ಇದೇ ಅರ್ಥದಲ್ಲಿ ಈ ಶಬ್ದವನ್ನು ನಾ
ಉಪಯೋಗಿಸಿದ್ದೇವೆ. ಕಲ್ಪನಾಶಕ್ತಿಯು ಬೇರೆ ಬೇರೆ ವ್ಯಕ್ತಿಗಳಲ್ಲಿ ಬೇರೆ ಬೇರೆ ವಿ
ವಾಗಿರುವದು. ಅತಿ ಗಹನ ಸ್ವರೂಪವನ್ನು ಹೊಂದಿದ ಕಲ್ಪನಾಶಕ್ತಿಯು ಕಾಲಿದಾ
ಭವಭೂತಿ ಮೊದಲಾದ ಕವಿಶ್ರೇಷ್ಠರಲ್ಲಿಯೂ, ನ್ಯೂಟನ್, ಭಾಸ್ಕರಾಚಾರ್ಯ, ಹೆಕಾಲ
ಮೊದಲಾದ ಶೋಧಕರಲ್ಲಿಯೂ ಅತಿ ಪ್ರಬಲವಾಗಿದ್ದದ್ದು ಕಂಡುಬರುವದು.

ಜ್ಞಾನಾರ್ಜನ, ದೃಷ್ಟಾಂತ, ಶೋಧ, ರಚನೆ, ಮನೋದಾರ್ಢ್ಯ, ಶಾಸ್ತ್ರೀಯ
ತತ್ವಗಳ ಶೋಧ, ಕಲಾಕೌಶಲ್ಯಗಳ ಪರಿಪೂರ್ಣತೆ ಮೊದಲಾದ ಬೌದ್ಧಿಕ, ಭಾವನಾ-
ಜನಕ, ಹಾಗು ನೈತಿಕ ವಿಷಯಗಳ ಉತ್ಕರ್ಷ ಇಲ್ಲವೆ ಅಪಕರ್ಷಕ್ಕೆ ಕಾರಣೀಭೂ
ವಾದ ಮನೋವ್ಯಾಪಾರಗಳಲ್ಲಿ ಕಲ್ಪನಾಶಕ್ತಿಗೆ ಅಗ್ರೇಸರತ್ವವು ಉಂಟಾಗಿರುವದರಿಂ
ಸೌಲಭ್ಯತೆಗಾಗಿ ಕಲ್ಪನಾಶಕ್ತಿಯಲ್ಲಿ ಬೌದ್ಧಿಕ, ಶೋಧಕ, ಹಾಗು ಭಾವನಾಜನ
ಕಲ್ಪನಾಶಕ್ತಿಗಳೆಂದು ಮೂರು ವಿಭಾಗಗಳನ್ನು ಮಾಡಬಹುದು.

ಬೌದ್ಧಿಕ ಕಲ್ಪನಾಶಕ್ತಿ: — ನಾವು ಪ್ರತ್ಯಕ್ಷ ನೋಡಿ ಇಲ್ಲವೆ ಮುಟ್ಟಿ ವಸ್ತು
ಗಳ ಜ್ಞಾನಮಾಡಿಕೊಳ್ಳದೆ ಎರಡನೆಯವರು ವಸ್ತು, ಸ್ಥಳ ಹಾಗು ಬೇರೆ ವಿಷಯಗಳ
ಸಂಬಂಧವಾಗಿ ಹೇಳಿದ್ದನ್ನು ಕೇಳಿ ಜ್ಞಾನಮಾಡಿಕೊಳ್ಳುತ್ತಿರುವಾಗ ಇಲ್ಲವೆ ಪುಸ್ತಕ
ಗಳನ್ನು ಓದಿ ಕಲಿಯುತ್ತಿರುವಾಗ ನಮ್ಮ ಚೈತನ್ಯ ಕ್ಷೇತ್ರದಲ್ಲಿ ಸಂಚಿತವಾಗುವ ಶಾಬ್ದಿ
ಚಿತ್ರಗಳಲ್ಲಿ ಕೆಲವನ್ನು ವಿಚಾರಪೂರ್ವಕವಾಗಿ ಆರಿಸಿಕೊಂಡು ಅವುಗಳಿಗೆ ಒಂದೊಂದ
ಬಗೆಯ ರೂಪವನ್ನು ನಿರ್ಮಿಸಿ ಅವುಗಳ ಅರ್ಥಬೋಧವಾಗುವಂತೆ ಶಬ್ದಗಳನ್ನು ಗೊತ್ತು
ಮಾಡಿಕೊಂಡು ನಮ್ಮಲ್ಲಿ ಒಂದು ಪ್ರಕಾರದ ತಿಳುವಳಿಕೆಯು ಉಂಟಾಗುವಂತೆ ಮಾ
ಕೊಳ್ಳುವಾಗ ನಮ್ಮ ಮನಸ್ಸಿನಲ್ಲಿರುವ ಶಕ್ತಿಗೆ ಬೌದ್ಧಿಕ ಶಕ್ತಿ ಎಂಬ ಹೆಸರು.

ಅಂದರೆ ಬೌದ್ಧಿಕ ಶಕ್ತಿಯಿಂದ ತಿಳುವಳಿಕೆಯುಂಟಾಗುವಾಗ ನಾವು ವಿಚಾ
ಪೂರ್ವಕವಾಗಿ ಕೆಲವು ಕಲ್ಪನೆಗಳನ್ನು ಆರಿಸಿಕೊಳ್ಳುವೆವು. ಹಾಗು ಅವುಗಳಿಗೆ ಹೊ

ಹೊಸ ರೂಪಗಳನ್ನು ಕೊಟ್ಟು ಆಯಾರೂಪಗಳಿಗೆ ಸಂಬಂಧವಾದ ಹಾಗು ಭಾಷೆಯಲ್ಲಿ ರೂಢವಾದ ಶಬ್ದಗಳನ್ನು ಗೊತ್ತುಮಾಡಿ ಸ್ಮರಣಪಲ್ಲಿ ಇಟ್ಟುಕೊಳ್ಳುವೆವು. ಸಂಶೋಧನೆಯು ಹಾಗು ಸಂಯೋಜನೆಯು ಹೆಚ್ಚು ಹೆಚ್ಚು ಪೂರ್ಣತೆಯನ್ನು ಹೊಂದಿದಂತೆ ತಿಳುವಳಿಕೆಯು ಯಥಾರ್ಥವಾಗುವದು.

ಅಮೂರ್ತ ವಸ್ತುಗಳ ಕಲ್ಪನೆಯನ್ನು ಮಾಡಿಕೊಳ್ಳುವದು ಸಾಮಾನ್ಯ ಜನರಿಂದ ಆಗದಿರುವದರಿಂದ ಎಷ್ಟೋ ಪ್ರಸಂಗಗಳಲ್ಲಿ ಆಯಾ ಅಮೂರ್ತ ವಸ್ತುಗಳಿಗೆ ಸಂಬಂಧಿಸಿದ ಕಲ್ಪನೆಗಳಿಗೆ ಮೂರ್ತ ವಸ್ತುಗಳ ಕಲ್ಪನೆಯನ್ನು ಕಲ್ಪಿಸಬೇಕಾಗುವದು. 'ಸತ್ಯಕ್ಕೆ ಸಾವಿಲ್ಲ' ಎಂಬ ನೈತಿಕ ತತ್ವದ ಅರ್ಥವು ಯಾವಬಗೆಯಿಂದ ವಿವೇಚನೆಮಾಡಿದರೂ ಸಾಮಾನ್ಯ ಜನರಿಗೆ ಅದರ ಮಹತ್ವವು ತಿಳಿಯಲಾಗದು. ಆದರೆ ಆ ತತ್ವವನ್ನೇ ರಾಮಾಯಣದ ಕಥಾರೂಪದಿಂದ ಹೇಳಿಕೊಟ್ಟಿದ್ದಾದರೆ ಮೂರ್ತಸ್ವರೂಪವನ್ನು ಹೊಂದಿದ ರಾಮನೆಂಬ ಸತ್ಯಕ್ಕೆ ಕಡೆಗೆ ಜಯಪ್ರಾಪ್ತಿಯಾದದ್ದು ಕೇಳಿದವರ ಮನಸ್ಸಿನಲ್ಲಿ ಬಿಂಬಿಸಿಕೊಳ್ಳುವದು. ಈ ಕಾರಣದಿಂದ ಅಮೂರ್ತ ವಸ್ತುಗಳ ಸಂಬಂಧವಾಗಿ ಹೇಳುವಾಗ ದೃಷ್ಟಾಂತಗಳನ್ನು ಹೇಳಬೇಕಾಗುವದು.

ಶೋಧಕ ಕಲ್ಪನೆ:— ನಾವು ಹೊಸ ಹೊಸ ಶೋಧಗಳನ್ನು ಮಾಡುವಾಗ ಅವಲೋಕನದಿಂದ ಕಂಡುಹಿಡಿದ ಅನೇಕ ಸಂಗತಿಗಳಿಂದ ಕೆಲವು ಸಂಗತಿಗಳನ್ನು ಕಲ್ಪನಾಶಕ್ತಿಯಿಂದ ಆರಿಸಿಕೊಂಡು ಅವುಗಳ ನಿಜಸ್ವರೂಪವನ್ನು ವಿಚಾರವೆಂಬ ಒರೆಗಲ್ಲಿಗೆ ಹಚ್ಚಿ, ಗೊತ್ತುಮಾಡಿಕೊಂಡು, ಅವುಗಳ ಸಹಾಯದಿಂದ ಕೆಲವು ಅನುಮಾನಗಳನ್ನು ಮಾಡಿ ಸಾವಧಾನದಿಂದ ಗೊತ್ತಿದ್ದ ಸಂಗತಿಗಳಿಂದ ಗೊತ್ತಿಲ್ಲದ ಸಂಗತಿಗಳ ಜ್ಞಾನವಮಾಡಿಕೊಳ್ಳುತ್ತಿರುವಾಗ ನಡೆಯುವ ಕಲ್ಪನಾಶಕ್ತಿಯೇ ಶೋಧಕ ಕಲ್ಪನಾಶಕ್ತಿಯು. ಶಾಸ್ತ್ರಗಳ ತತ್ವಗಳನ್ನು ಪ್ರತ್ಯಕ್ಷ ಪ್ರಯೋಗಗಳಿಂದ ಮಾಡಿಕೊಳ್ಳುವಾಗ ಈ ತರದ ಕಲ್ಪನಾಶಕ್ತಿಯ ಕಾರ್ಯಕ್ಷೇತ್ರವು ಬಹು ವಿಸ್ತೃತವಾಗಹತ್ತುವದು. ಅವರಿಂದ ಅದೃಷ್ಟವಾಗಿಯೂ ಗೂಢವಾಗಿಯೂ ಇರುವ ಅನೇಕ ವಿಷಯಗಳಲ್ಲಿ ಶೋಧಕ ಶಕ್ತಿಯುಳ್ಳವರಿಗೆ ಚಂಚು ಪ್ರವೇಶ ಮಾಡಲಿಕ್ಕೆ ಬರುವದು. ಹೊಸ ಹೊಸ ಯಂತ್ರಗಳನ್ನು ರಚಿಸುವದರಲ್ಲಿಯೂ ನಾನಾತರದ ಚಿತ್ರಗಳನ್ನು ಚಿತ್ರಿಸುವದರಲ್ಲಿಯೂ ಶೋಧಕ ಕಲ್ಪನಾ ಶಕ್ತಿಯು ಅವಶ್ಯವಾಗಿ ಬೇಕಾಗುವದು.

ಭಾವನಾಜನಕ ಕಲ್ಪನಾಶಕ್ತಿ :— ಭಾವನಾ ಜನಕ ಕಲ್ಪನಾ ಶಕ್ತಿಗೆ ಸುಖದುಃಖ, ಮೋಹಕ ವಸ್ತುಗಳ ವಿಷಯವಾಗಿ ಪ್ರೀತಿ, ಮನೋರಾಜ್ಯ ಇವೇ ಮೊದಲಾದವುಗಳು ಉತ್ಪಾದಕಗಳೂ, ಉತ್ತೇಜಕಗಳೂ ಆಗಿರುವವು. ಈ ತರದ ಶಕ್ತಿಯು ವಿಶೇಷವಾಗಿ ಕಾವ್ಯಗಳಲ್ಲಿ ಕಂಡು ಬರುವ ಚಮತ್ಕೃತಿಯನ್ನುಂಟುಮಾಡುವದು

ಸರ್ವಸಮ್ಮತವಾದದ್ದು. ಕಲ್ಪನಾ ತರಂಗಗಳಿಗೆ ಹೊಸ ಹೊಸ ರೂಪಗಳನ್ನುಂಟು ಮಾಡಿ ಅವುಗಳ ಪ್ರವಾಹವು ಜಗತ್ತಿನ ಅನುಭವಗಳನ್ನು ಬಿಟ್ಟು ಕೇವಲ ಕಾಲ್ಪನಿಕವಾದ ಮನೋರಾಜ್ಯವಲ್ಲಿ ಹರಿಯುವಂತೆ ಮಾಡುವದೇ ಕವಿಗಳ ಅಂತಿಮೋದ್ದೇಶವಾಗಿರುವದು. ಕಾಲ್ಪನಿಕ ಕಥೆ ಕಾದಂಬರಿಗಳಲ್ಲಿ ಕಲ್ಪನೆಗಳ ಜಾಲವು ದೃಷ್ಟಿಗೋಚರವಾಗುವದೆಂಬ ಬಗ್ಗೆ ಬಾಣಕವಿಯ ಕಾದಂಬರಿಯೇ ಉತ್ತಮೋದಾಹರಣವಾಗಿದೆ.

ಕಲ್ಪನಾಶಕ್ತಿಯನ್ನು ಉಚ್ಛೃಂಖಲವಾಗಿ ಬೆಳೆಯಗೊಡಬೇಕೋ ಹೇಗೆ? ಅಥವಾ ಅದು ಅಂಕುರರೂಪದಲ್ಲಿದ್ದಾಗ ಅದನ್ನು ನಾಶಪಡಿಸಬೇಕೋ ಹೇಗೆ? ಎಂಬ ಬಗ್ಗೆ ಅನೇಕ ವಾದಗಳುಂಟಾಗಿರುವವು. ಬರೆ ಕಥೆ ಕಾದಂಬರಿಗಳನ್ನೇ ಓದಿ ಮನಸ್ಸಿನಲ್ಲಿ ಎಂದೂ ಸಾಧ್ಯವಾಗದ ಮನೋರಾಜ್ಯವನ್ನು ಕಲ್ಪಿಸಿಕೊಳ್ಳುವವರು ತಲೆತಿರುಕರು, ಅರಾಜಕರೂ, ಪಾಖಂಡಿಗಳೂ, ವಿಲಕ್ಷಣ ವಿಚಾರವುಳ್ಳವರೂ ಆಗುತ್ತಾರೆಂಬ ಬಗ್ಗೆ ಸಂದೇಹವಿಲ್ಲ. ಇಂಥವರು ವ್ಯವಹಾರ ದೃಷ್ಟಿಯಿಂದ ನಿರುಪಯೋಗಿಗಳೂ* ಹಾಗೂ ಪ್ರಪಂಚದಲ್ಲಿ ಕಂಡು ಬರುವ ವಸ್ತುಗಳ ವಿಷಯವಾಗಿ ಅನಾದರಮಾಡುವವರೂ ಆಗುವದೇನೋ ನಿಜ. ಇಂಥವರು ಎಷ್ಟೋ ಪ್ರಸಂಗಗಳಲ್ಲಿ ಮಾಯಾ ಮೃಗವನ್ನು ಬೆನ್ನಟ್ಟಿ ಹತಾಶರಾಗುವರು. ಆದರೆ ನಮಗೆ ಕಲ್ಪನಾ ಶಕ್ತಿಯು ಸಹಾಯದಿಂದಲೇ ಅನೇಕ ತರದ ಜ್ಞಾನವಾಗುವದೆಂಬದಕ್ಕೆ ಸಂದೇಹವಿಲ್ಲ. ಯಾವ ಹುಡುಗರಲ್ಲಿ ಕಲ್ಪನಾ ಶಕ್ತಿಯು ವಿಶೇಷತಃ ಪ್ರಬಲವಾಗಿರುವದೋ ಅಂಥ ಹುಡುಗರು ಅತಿ ಗಹನವಾದ ವಿಷಯಗಳನ್ನು ಗ್ರಹಣ ಮಾಡಲಿಕ್ಕೆ ಸಮರ್ಥರಾಗುವರು. ಆದರೆ ಯಾವ ಹುಡುಗರಲ್ಲಿ ಕಲ್ಪನಾ ಶಕ್ತಿಯು ಎಷ್ಟು ಮಾತ್ರವೂ ಇರುವದಿಲ್ಲವೋ ಅಂಥ ಹುಡುಗರು ಮಂದ ಹಾಗು ಬುದ್ಧಿಹೀನರಾಗುವರು. ಈ ವಿವೇಚನೆಯಿಂದ ಹುಡುಗರಲ್ಲಿರುವ ಕಲ್ಪನಾ ಶಕ್ತಿಯನ್ನು ಯೋಗ್ಯ ರೀತಿಯಿಂದ ಬೆಳಿಸತಕ್ಕದ್ದೆಂದೂ ಹಾಗು ಅದು ಉಚ್ಛೃಂಖಲವಾಗಿ ಬೆಳೆಯುವಂತೆ ಎಚ್ಚರಪಡಬೇಕೆಂಬದೂ ಸ್ಪಷ್ಟವಾಗುವದು. ಈ ವಿಷಯದಲ್ಲಿ ಕಲ್ಪನಾ ಶಕ್ತಿಯನ್ನು ಬೆಂಕಿಗೆ ಹೋಲಿಸಬಹುದು. ಬೆಂಕಿಯು ನಮ್ಮ ಕೈಯಲ್ಲಿರುವ ವರೆಗೆ ಗುಲಾಮನಂತೆ ಹೇಳಿದ ಕೆಲಸವನ್ನು ಮಾಡುವದು. ಆದರೆ ಅದು ನಮ್ಮ ಕೈಯೊಳಗಿಂದ ಪಾರಾಗಿ ನಮ್ಮನ್ನು ತನ್ನ ಕೈಯಲ್ಲಿ ತೆಗೆದುಕೊಂಡಿತೆಂದರೆ ಸುಟ್ಟು ಭಸ್ಮ ಮಾಡಿಬಿಡುವದು.

ಕಲ್ಪನಾಶಕ್ತಿಯ ಬೆಳವಣಿಗೆಯೂ ವಿಕಾಸವೂ

ಸ್ಮರಣಶಕ್ತಿಯಿಲ್ಲದೆ ಕಲ್ಪನಾಶಕ್ತಿಯು ಇರಲಾರದು. ಆದ್ದರಿಂದ ಶೈಶವಾವಸ್ಥೆಯಲ್ಲಿ ಸ್ಮರಣಶಕ್ತಿಯು ಇರುವದಿಲ್ಲೆಂದು ನಂಬಿದರೆ ಕಲ್ಪನಾಶಕ್ತಿಯು ಇರಲಾರ

* ಮೂಷ ಓದಿ ಮಗಕಟ್ಟ ಮಾಷ್ಟವಿಜಯ ಓದಿ ಆಳಿಯಕಟ್ಟ. ಎಂದು ನಾಣ್ನುಡಿಯುಂಟು.

ನೆಂದೂ ನಂಬಬೇಕಾಗುವದು. ಹಾಗೆ ತಿಳಿಯದೆ ಕಲ್ಪನಾಶಕ್ತಿಯು ಅಂಕುರ ಬೀಜ ರೂಪದಿಂದ ಇರುತ್ತದೆಂದು ತಿಳಿಯುವದು ಒಳ್ಳೇದು. ಬಾಲಕರಿಗೆ ಭಾಷಾಜ್ಞಾನವು ಕಡಬಳಿಕ ಅವರ ಕಲ್ಪನಾಶಕ್ತಿಯು ಎಷ್ಟುಮಟ್ಟಿಗೆ ಬೆಳೆದಿರುವದೆಂಬದನ್ನು ಗೊತ್ತು ಪಡಿಸಲಿಕ್ಕೆ ಆಗುವದು. ಯಾಕಂದರೆ ನಾವು ಹುಡುಗರಿಗೆ ಒಂದು ಕಥೆಯನ್ನು ಹೇಳಿ ಕೊಟ್ಟು ಪುನಃ ಆ ಕಥೆಯನ್ನು ಅವರಿಂದಲೇ ಹೇಳಿಸಹತ್ತಿದರೆ ಅವರಲ್ಲಿರುವ ಕಲ್ಪನಾ ಶಕ್ತಿಯು ಪ್ರಮಾಣದಂತೆ ಆ ಕಥೆಯಲ್ಲಿ ಹೆಚ್ಚುಕಡಿಮೆಯಾಡಿ ಇಲ್ಲವೆ ಅದರಲ್ಲಿ ತಮ್ಮ ಕಲ್ಪನೆಗಳನ್ನು ಸೇರಿಸಿ ಹೇಳತೊಡಗುವರು.

ಈ ಸಂಧಿಗೆ ಕೇವಲ ಶೈಶವಾವಸ್ಥೆಯಲ್ಲಿ ಅರ್ಥವಾಗದಂಥ ಕಥೆಗಳನ್ನು ಕೇಳಿದರೆ ಅವರಿಗೆ ಆನಂದವಾಗದೆ ಕಾಗಿಯ ಗುಬ್ಬಿಯ ಕಥೆಯನ್ನು ಉತ್ಸುಕತೆಯಿಂದ ಕೇಳಿ ಅವು ನಿಜವೆಂದು ನಂಬಹತ್ತುವರು. ಈ ಚಿಕ್ಕ ವಯಸ್ಸಿನಲ್ಲಿ ಅವರಿಗೆ ಅನುಭವವು ಕಡಿಮೆ ಇರುವದರಿಂದ ಹಾಗೂ ವಿಚಾರಶಕ್ತಿಯು ಇಲ್ಲದಿರುವದರಿಂದ ಅವರಿಗೆ ಸಂಭವನೀಯ ವಾದದ್ದು ಯಾವದು, ಅಸಂಭವನೀಯವಾದದ್ದು ಯಾವದು ಎಂಬದು ಮಾತ್ರ ಗೊತ್ತಾಗ ಲಾರದು.

ಚಿಕ್ಕ ಬಾಲಕರಿಗೆ ತಾವು ಪಕ್ಷಿಗಳಂತೆ ಹಾರಬೇಕೆಂದೂ ಮೀನದಂತೆ ನೀರಲ್ಲಿ ಈಸಬೇಕೆಂದೂ ಲಹರಿವಿಕೆಯು ವಿಲಕ್ಷಣ ಕಲ್ಪನೆಯು ಅತಿರೇಕದಿಂದ ಹುಟ್ಟುವದುಂಟು. ಅವರಿಗೆ ಜಗತ್ತಿನ ಅನುಭವವು ಬಹುಹಾಗೆ ಇವೆಲ್ಲ ಹುಚ್ಚುತನದ ವಿಚಾರಗಳೆಂದು ಮನ ಸ್ಸಿನಲ್ಲಿ ಹೊಳೆಯಹತ್ತುವದು. ಅನುಭವವು ಏಚ್ಚಾಗುತ್ತ ನಡೆದಂತೆ ಬೌದ್ಧಿಕ ಕಲ್ಪನಾ ಶಕ್ತಿಗಳ ಸಂಚಯವು ಬೆಳೆಯಹತ್ತುವದು. ಆದರೆ ಈ ತರದ ಸ್ಥಿತಿಯು ಉಂಟಾಗುವ ವರೆಗೂ ಅವರಲ್ಲಿ ಭಾವನಾಜನಕ ಕಲ್ಪನಾಶಕ್ತಿಯೇ ಪ್ರಬಲವಾಗಿರುವದು. ಇವಾಗ ಅವರಲ್ಲಿ ಚಟುವಟಿಕೆಯೂ ಉತ್ಸಾಹವೂ ಮಿತಿಮೀರಿ ಇರುವದರಿಂದ ಅವುಗಳನ್ನು ಆಟ ಆಡುವದರಲ್ಲಿ ಉಪಯೋಗಿಸಿಕೊಳ್ಳುವರು. ಅವರ ಆಟಗಳಲ್ಲಿ ಪ್ರಬುದ್ಧರಾದವರ ಕೃತಿಗಳಿಂದುಂಟಾದ ನಕಲು ಇರುವದು. (ಅನುಕರಣ) ತಮ್ಮಲ್ಲಿರುವ ಭಾವನಾ ಜನಕ ಕಲ್ಪನೆ ಎಂಬ ಯಕ್ಷಿಣಿಯು ಸಂಜೀವನ ಕಡ್ಡಿಯನ್ನು ಉಪಯೋಗಿಸಿ ನಿರ್ಜೀವ ವಸ್ತುಗಳಿಗೆ ಸಜೀವ ವಸ್ತುಗಳೆಂದು ಭಾವಿಸಿ ಅವುಗಳಿಗೆ ಒಂದೊಂದು ವಿಧವಾದ ಕೆಲಸ ಗಳನ್ನು ಹಚ್ಚುವರು. ಸಣ್ಣ ಹುಡುಗೆಯರು ಗೊಂಬೆಯು ಜೀವಂತ ಅದೆಯೆಂದು ಭಾವಿಸಿ ಅದಕ್ಕೆ ತಿನಿಸುವದು, ಉಣಿಸುವದು, ಎರೆಯುವದು, ಅರಿವೆಗಳನ್ನು ಹೊದಿಸು ವದು, ಅಡಿಸುವದು, ನೋಡಿಸುವದು, ಹೊಡೆಯುವದು, ಬಡಿಯುವದು ಮೊದಲಾದ ಕೆಲಸಗಳನ್ನು ಮಾಡುವದರಲ್ಲಿ ತಮ್ಮ ತಾಯಿತಂದೆಗಳು ಮಾಡುವ ಕೃತಿಯನ್ನು ಬಹು ಮಟ್ಟಿಗೆ ಅನುಕರಣವಾಡಿದಂತೆ ತೋರಿಸುವರು. ಇದರಂತೆ ಸಣ್ಣ ಹುಡುಗರು

ಕೋಲು ಕುದುರೆಯೆಂದು ಭಾವಿಸಿ ದೊಡ್ಡವರು ಕುದುರೆಯನ್ನು ಉಪಯೋಸುಗಿನಂತೆ ಬಹು ಆನಂದದಿಂದ ಉಪಯೋಗಿಸಿಕೊಂಡು ಆಡುವರು. ಕೋಲುಕುದುರೆಯಿಂದ ಅದಷ್ಟು ಆನಂದವು ಅವರಿಗೆ ಉತ್ಕೃಷ್ಟ ಕುದುರೆಯಮೇಲೆ ಕೂಡಿಸಿದರೆ ಎಂದೂ ಆಗಲಾರದು, ಆನಂದದಾಯಕ ಕಲ್ಪನೆಗಳು ಪ್ರಬಲವಾಗಿದ್ದಂತೆ ಚಿಕ್ಕ ಬಾಲಕರಲ್ಲಿ ದುಃಖ ಭೀತಿಗಳನ್ನುಂಟುಮಾಡುವ ಕಲ್ಪನೆಗಳು ಅವುಲ್ಲಿ ಬಹುಬೇಗ ಬರುವದರಿಂದ ಆ ವಯಸ್ಸಿನಲ್ಲಿ ರಾಕ್ಷಸ, ಭೂತ, ಪಿಶಾಚಿ ಮೊದಲಾದವುಗಳ ಸಂಬಂಧವಾಗಿ ಹೇಳಿ ಕೊಟ್ಟರೆ ಇಲ್ಲವೆ ಬಾವಾ ಬಂತೆಂದು ಹೆದರಿಸಿದರೆ ಅವರು ಅಂಜುಬುರುಕರೂ ಹೇಡಿಗಳೂ ಆಗುವ ಸಂಭವವಿರುವಲ್ಲದೆ ಅಂಥ ಭಾವನೆಗಳಿಂದ ಅವರ ಶರೀರದಮೇಲೆ ದುಷ್ಪರಿಣಾಮಗಳು ಆಗಹತ್ತುವವು. ಚಿಕ್ಕ ವಯಸ್ಸಿನಲ್ಲಿ ಕಲ್ಪನಾಶಕ್ತಿಯು (ವಿಶೇಷವಾಗಿ ಭಾವನಾಜನಕ ಶಕ್ತಿಯು) ಮಿತಿಮೀರಿ ಬೆಳೆಯುತ್ತದೆಂಬ ಬಗ್ಗೆ ಭಿನ್ನ ಅಭಿಪ್ರಾಯಗಳಿರಲಾರವು. ಆ ಶಕ್ತಿಯನ್ನು ನಿರಾತಂಕವಾಗಿ ಬೆಳಯಗೊಟ್ಟರೆ ಹುಡುಗರು ತಲೆತಿರುಕರು ಆಗುವದೇನೋ ನಿಜ; ಆದರೆ ಕಲ್ಪನಾಶಕ್ತಿಯ ಪ್ರವಾಹವು ಕೆಲವೊಂದು ವಿವಕ್ಷಿತವಾದ ಕಡೆಗೆ ಹರಿಯುವಂತೆ ಮಾಡಿದರೆ ಹಾಗು ಅದರಮೇಲೆ ವಿಚಾರದ ಅಮಲು ಕಾಲಕಾಲಕ್ಕೆ ನಡೆಯುವಂತೆ ಮಾಡಿದ್ದಾದರೆ ಕಲ್ಪನಾಶಕ್ತಿಯು ಇಚ್ಛಾಶಕ್ತಿಯ ಕೈವಶವಾಗಹತ್ತುವದು. ಆದರಿಂದ ಜ್ಞಾನ ಸಂಪಾದನೆಗೆ ಮೀಲ್ಪರದ ಸಾಧನವು ಉಂಟಾಗುವದು. ಈ ಕೆಲಸವು ಸುಶಿಕ್ಷಿತ ತಾಯಿತಂದೆಗಳಿಂದಲೂ, ಶಿಕ್ಷಕರಿಂದಲೂ ಸಹಜವಾಗುವಂತಿರುವದು. ಸಮಾನವಯಸ್ಕರಾದ ಹುಡುಗಿಯರಲ್ಲಿ ಹುಡುಗರಿಗಿಂತ ಕಲ್ಪನಾಶಕ್ತಿಯ ಬೆಳವಣಿಗೆಯು ಹೆಚ್ಚಾಗಿ ಆಗುವದು ಸ್ವಾಭಾವಿಕವು. ಯಾಕಂದರೆ ಹುಡುಗಿಯರ ಶಾರೀರಿಕ ಹಾಗು ಮಾನಸಿಕ ಬೆಳವಣಿಗೆಯು ಸುಮಾರು ೧೫ ವರ್ಷದ ವಯಸ್ಸಿಗೆ ಮುಗಿಯುವದು. ಆದರೆ ಹುಡುಗರ ಬೆಳವಣಿಗೆಯು ಕಾಲಾವಧಿಯು ೨೫ ವರ್ಷಗಳವರೆಗೆ ಇರುವದು.

ಕಲ್ಪನಾಶಕ್ತಿಯಲ್ಲಿ ಭಾವನೆಗೆ ಸಂಬಂಧಿಸಿದ ಕಲ್ಪನೆಗಳು ಹಾಗು ಬುದ್ಧಿಜನಕ ಕಲ್ಪನೆಗಳು ಸಮಾವೇಶವಾಗುವದರಿಂದ ಭಾವನಾಜನಕ ಕಲ್ಪನಾಶಕ್ತಿಯ ಕ್ಷೇತ್ರವು ಪ್ರಯತ್ನಪೂರ್ವಕವಾಗಿ ಮರ್ಯಾದಿತವಾಗುವಂತೆ ಮಾಡಬೇಕಾಗುವದು. ಹಾಗು ಬೌದ್ಧಿಕ ಕಲ್ಪನಾಶಕ್ತಿಯ ಕ್ಷೇತ್ರವನ್ನು ಪ್ರಯತ್ನಪೂರ್ವಕವಾಗಿ ಬೆಳಿಸಬೇಕಾಗುವದು. ಭೂತ ಪಿಶಾಚಿಗಳ ಕಥೆಗಳು ನಿಜವೆಂದು ಚಿಕ್ಕ ಬಾಲಕರು ನಂಬಿ ಅವುಗಳ ವಿಚಾರಗಳು ರಾತ್ರಿ ಮಲಗಿದಾಗ ಬಂದಕೂಡಲೆ ಅಂಜಿ ಚೀರುವರು. ಆದ್ದರಿಂದ ಅವರಲ್ಲಿ ಇಂಥ ದೋಷಗಳು ಸೇರದಂತೆ ತಾಯಿತಂದೆಗಳು ಎಚ್ಚರಪಡಬೇಕು.

ಆನಂದದಾಯಕ ಭಾವನೆಗಳು ಹುಟ್ಟುವಂಥ ಪರಿಸ್ಥಿತಿಯನ್ನು ಅವರಿಗೆ ಅವಶ್ಯವಾಗಿ ಒದಗಿಸಿಕೊಡಬೇಕು. ಬೌದ್ಧಿಕ ಶಕ್ತಿಗಳು ತಲೆದೋರಹತ್ತಿದಕೂಡಲೆ ಹುಡು

ರಿಂದ ನಿರೀಕ್ಷಣಮಾಡಿಸಹತ್ತಿ. ಸೃಷ್ಟಿಯಲ್ಲಿರುವ ವಸ್ತುಗಳ ನಿಜವಾದ ಕಲ್ಪನೆಯು ಹತ್ತುವಂತೆ ಮಾಡಬೇಕು. ವಿಚಾರಶಕ್ತಿಯು ಹುಡುಗರಲ್ಲಿ ಬಂದಕೂಡಲೆ ಅವರಿಗೆ ಕಾಲ್ಪನಿಕ ಕಥೆಗಳನ್ನು ಹೇಳದೆ ಐತಿಹಾಸಿಕ ಕಥೆಗಳನ್ನು ಮನರಂಜನವಾಗುವಂತೆ ಹೇಳ ಬೇಕು. ಮುಂದೆ ಅವರಲ್ಲಿ ಸಾರಾಸಾರ ವಿಚಾರವೂ ಶೋಧಕದೃಷ್ಟಿಯೂ ಉಂಟಾದ ಕೂಡಲೆ ಶಾಸ್ತ್ರೀಯ ತತ್ವಗಳು, ಕಲಾಕೌಶಲ್ಯಗಳು, ಯಂತ್ರಗಳ ರಚನೆಗಳು ಲಲಿತವಾದ ವಾಙ್ಮಯವು ಇವೇ ಮೊದಲಾದ ವಿಷಯಗಳಕಡೆಗೆ ಅವರು ಆಸಕ್ತಿಯನ್ನು ಉಪಯೋಗಿಸುವಂತೆ ಮಾಡಬೇಕು.

ನಾಲ್ಕರಿಂದ ಆರುವರ್ಷಗಳವರೆಗೆ ಬಾಲಕನಲ್ಲಿರುವ ಕಲ್ಪನಾಶಕ್ತಿಯನ್ನು ಕುಗ್ಗು ಬಿಡಿಯು ಬಿಟ್ಟಿದ್ದಾದರೆ ಭಾವೀ ಕವಿಶೋಧಕ, ಚಿತ್ರಗಾರರನ್ನು ಮಟ್ಟು ರಸಾತಳಕ್ಕೆ ಅಪ್ಪಿದಂತಾಗುವದು. ಆದರಿಂದ ಆ ವರ್ಷಗಳವರೆಗೆ ಹುಡುಗರ ಅನುಭವವು ಬೆಳೆದಂತೆ ಅವರು ತಮ್ಮ ಕಲ್ಪನಾಶಕ್ತಿಯು ಉಚ್ಛೃಂಖಲವಾಗದಂತೆ ಪ್ರಯತ್ನಮಾಡತೊಡಗು ವರು. ಇದೇ ಕ್ರಮವು ಅವರು ೧೦–೧೨ ವರ್ಷದವರಾಗುವವರೆಗೆ ನಿರಾತಂಕವಾಗಿ ನಡೆದದ್ದಾದರೆ ಕಲ್ಪನಾಶಕ್ತಿಯು ವಿಚಾರಶಕ್ತಿಯು ಗುಲಾಮನಾಗಿ ಉಳಿಯುವದು.

ಶಿಕ್ಷಣ ಕ್ರಮದಲ್ಲಿ ಕಲ್ಪನಾಶಕ್ತಿಯ ಮಹತ್ವವು

ಶಿಕ್ಷಣ ಕಾರ್ಯದಲ್ಲಿ ಕಲ್ಪನಾಶಕ್ತಿಯ ಮಹತ್ವವು ಮಿತಿಮೀರಿ ಇರುವದು. ಶಾಲೆಯಲ್ಲಿ ಕಲಿಸುವ ಅನೇಕ ವಿಷಯಗಳಲ್ಲಿ ಇತಿಹಾಸ. ಭೂಗೋಲ, ವಾಙ್ಮಯ, ಚಿತ್ರಕಲೆ ಭೌತಿಕಶಾಸ್ತ್ರ ಇವೇ ಮೊದಲಾದ ವಿಷಯಗಳಿಂದ ಕಲ್ಪನಾಶಕ್ತಿಗೆ ಯೋಗ್ಯವಾದ ಕಾರ್ಯಕ್ಷೇತ್ರವು ದೊರಕುವದು ಶಿಕ್ಷಕರು ಉಪಯೋಗಿಸುವ ಭಾಷೆಯು ವಿದ್ಯಾರ್ಥಿ ಗಳ ಯೋಗ್ಯತೆಗೆ ಸರಿಯಾದದ್ದೂ ಕಲಿಸುವ ಪದ್ಧತಿಯು ಉತ್ಸಾಹಜನಕವಾದದ್ದೂ ಶಾಲೆಯ ವ್ಯವಸ್ಥೆಯು ಆನಂದದಾಯಕವಾದದ್ದೂ ಇದ್ದಾದ್ದಾವೆ ಬೌದ್ಧಿಕ ಕಲ್ಪನಾ ಶಕ್ತಿಯು ಜಾಗ್ರತವಾಗಿ ವಿಕಾಸಹೊಂದಹತ್ತುವದು. ಗೊತ್ತಿದ್ದ ಸಂಗತಿಗಳಿಂದ ಗೊತ್ತಿಲ್ಲದಸಂಗತಿಗಳಿಗೆ ಹೋಗುವಾಗ ಹುಡುಗರು ತಮ್ಮಲ್ಲಿರುವ ಹಳೆ ಕಲ್ಪನೆಗಳ ಸಂಬಂಧವನ್ನು ಹೊಸ ಹೊಸ ಕಲ್ಪನೆಗಳಿಗೆ ಮಾಡಿಕೊಳ್ಳುವರು.

ಕಲ್ಪನಾಶಕ್ತಿಯು ಸುಯಂತ್ರಿತವಾಗಿ ನಡೆಯುವಂತೆ ಮಾಡುವ ಉಪಾಯ ಗಳು:—.

(೧) ಹುಡುಗರು ನಿರೀಕ್ಷಣದಿಂದ ಕಂಡುಹಿಡಿದ ಸಂಗತಿಗಳನ್ನು ಯಥಾರ್ಥ ವಾಗಿ ಮನಸ್ಸಿನಲ್ಲಿ ಇಟ್ಟುಕೊಳ್ಳುವಂತೆ ವ್ಯವಸ್ಥೆ ಇರಬೇಕು.

(೨) ಹುಡುಗರು ಸಿಕ್ಕಸಿಕ್ಕ ಪುಸ್ತಕಗಳನ್ನು ಓದದೆ ಶಿಕ್ಷಕರು ಅವರ ವಾಚನಕೆ ಯೋಗ್ಯವೆಂದು ಆರಿಸಿಟ್ಟ ಪುಸ್ತಕಗಳನ್ನೇ ಓದಬೇಕು.

(೩) ವಿದ್ಯಾರ್ಥಿಗಳು ವಾಙ್ಮಯದಲ್ಲಿಯೂ ಚಿತ್ರಕಲೆಯಲ್ಲಿಯೂ ಇರತಕ್ಕ ಸ್ವಾರಸ್ಯವನ್ನು ಗ್ರಹಿಸುವಂತೆ ಅವರ ಕಲ್ಪನಾಶಕ್ತಿಯು ಒಲವು ಆಗಗೊಡಬೇಕು.

(೪) ಸೃಷ್ಟಿಯಲ್ಲಿರುವ ಸೌಂದರ್ಯವನ್ನು ಲಕ್ಷಪೂರ್ವಕವಾಗಿ ನೋಡಿ ಆನಂದ ಪಡುವದಕ್ಕೆ ಶಿಕ್ಷಕರು ವಿದ್ಯಾರ್ಥಿಗಳಿಗೆ ಪ್ರೋತ್ಸಾಹನಕೊಡಬೇಕು. ಗಡಚಾದ ಯಂತ್ರಗಳ ರಚನೆಯನ್ನೂ ಶಾಸ್ತ್ರೀಯ ಪ್ರಯೋಗಗಳನ್ನೂ ವಿದ್ಯಾರ್ಥಿಗಳು ಪ್ರತ್ಯಕ್ಷ ಮಾಡಿ ನೋಡಿ ಅವುಗಳ ಮಹತ್ವವನ್ನು ಕಂಡು ಹಿಡಿಯಲಿಕ್ಕೆ ಆಸ್ಪದಕೊಡಬೇಕು. ಧೈರ್ಯ, ಶಾಂತಿ, ಔದಾರ್ಯ, ಮೊದಲಾದ ಉದಾತ್ತ ಗುಣಗಳುಳ್ಳ ಸ್ತ್ರೀಯರ ಹಾಗು ಪುರುಷರ ಬಗ್ಗೆ ಆದರವೂ ಅವರನ್ನು ಅನುಕರಣಮಾಡುವ ಇಚ್ಛೆಯೂ ವಿದ್ಯಾರ್ಥಿಗಳಲ್ಲಿ ಹುಟ್ಟುವಂತೆ ಮಾಡಬೇಕು.

ಪತ್ರಗಳ ಸಾರಾಂಶ

(೧) ಕೆಳಗಿನ ಮಾಹಿತಿಯನ್ನು ಒಬ್ಬ ಪ್ರೇಕ್ಷಕರು ಬರೆದು ಕಳಿಸಿರುವರು: —

ವಿಜಾಪುರ ಊರಿನ ಮತ್ತು ತಾಲೂಕಿನ ಶಿಕ್ಷಕರ ಸಮ್ಮೇಲನ —

ವಿಜಾಪೂರದಲ್ಲಿ ಶೇಫರ್ಡ ಹಾಲಿನಲ್ಲಿ ತಾರೀಖು ೩೦-೪-೩೪ನೇ ಸೋಮವಾರ ಮೇ॥ ಜಗತಾಪ ಆ॥ ಆ॥ ಡಿ॥ ಸ್ಕೂಲಬೋರ್ಡ ವಿಜಾಪೂರ ಇವರ ಅಧ್ಯಕ್ಷತೆಯ ಕೆಳಗೆ ಶಿಕ್ಷಕರ ಸಮ್ಮೇಲನವು ನೆರವೇರಿಸಲ್ಪಟ್ಟಿತ್ತು ಸಮ್ಮೇಲನಕ್ಕೆ ವಿಜಾಪುರ ಮುನಿಸಿಪಾಲ್ಟಿಯ ಮತ್ತು ವಿಜಾಪುರ ತಾಲೂಕಿನೊಳಗಿನ ಶಿಕ್ಷಕರು ಸುಮಾರು ೨೦೦ ವರೆಗೆ ಕೂಡಿದ್ದರು. ಮುನಿಸಿಪಲ್ ಲೋಕಲ್ ಬೋರ್ಡ ಮೆಂಬರರೂ ಕೆಲವು ಸಭ್ಯಗೃಹಸ್ಥರೂ ಬಂದಿದ್ದರು. ಕೆಳಗೆ ಕಾಣಿಸಿದ ಮಾದರಿಯ ಪಾಠಗಳು ನಡೆದವು.

(೧) ಸ್ಕೌಟ ಡ್ರಿಲ್.

(೨) ವ್ಯಾಕರಣದ ಆರಂಭ.

(೩) ಏಕಕಾಲಕ್ಕೆ ಮೂರು ಇಯತ್ತೆ ಕಲಿಸುವದು.

(೪) ಅಪೂರ್ಣಾಂಕದ ಆರಂಭ.

(೫) ಶಾಸ್ತ್ರೀಯ ಪಾಠ.

(೬) ಶಾಸ್ತ್ರೀಯ ಪಾಠಗಳ ಸುಲಭ ಉಪಕರಣಗಳ ವಿವರಣೆ.

(೭) ವಿದ್ಯುಲ್ಲೋಹ ಚುಂಬಕ ಎಂಬ ಶಾಸ್ತ್ರೀಯ ಪಾಠ

ಮಿ. ಆಥಣೆ (ಮುನಿಸಿಪಲ್) ಮಾಸ್ತರ

(೮) ೨ನೇ ಇಯತ್ತೆ ಗಣಿತ ಆರಂಭ — ಮಿ॥ ಪಟ್ಟಣಶೆಟ್ಟಿ

(೯) ವಾಚನ — ಮಿಸ್ಟ್ರೆಸ್ ಪೃಥ್ವಿಬಾಯಿ

(೧೦) ವಾಚನ (ಉರ್ದು ಭಾಷೆಯಲ್ಲಿ)

ಆ ಬಳಿಕ ಮಿ॥ ಗಾಯಿ ಮಿ॥ ಶೇಡಬಾಳ ಮಿ॥ ಭಗವತಿ ಇವರು ಚರ್ಚಾತ್ಮಕ ವಿಷಯಗಳ ಬಗ್ಗೆ ಮಾತಾಡಿದರು. ಮಿ॥ ಸಜ್ಜನ ವಕೀಲ ಇವರು ಶಿಕ್ಷಣದ ಪವಿತ್ರತೆಯನ್ನು ಕುರಿತು ಶಿಕ್ಷಕರಿಗೆ ಬೋಧಪ್ರದವಾಗುವಂತೆ ಉಪನ್ಯಾಸ ಮಾಡಿದರು. ಮಿ॥ ಮಹಂತಣ್ಣನವರು ಸುಪರವಾಯಝರ ಇವರು ಶಿಕ್ಷಕರ ಕರ್ತವ್ಯವೆಂಬ ವಿಷಯದ ಮೇಲೆ ಮಾತಾಡಿದರು. ಆ ಮೇಲೆ ಅಧ್ಯಕ್ಷರ ಭಾಷಣವಾಯಿತು.

(೨) (ಜಿ. ಕಾನಡಾ, ಪೇಠಾ ಸುಪ್ಪಾ) ಕುಂಭಾರವಾಡಾ ಶಾಲಾ ಮಾಸ್ತರರ ಬರೆದದ್ದು;—

(ದಕ್ಷಿಣಭಾಗದ ಅಂಟಿ ಮಲೇರಿಯಾದ ಡಾಕ್ಟರರಾದ ವಿ॥ ಯು. ಜಿ. ಹೊಸಮನೆ ಎಲ್. ಸಿ, ಪಿ. ಎಸ್. ಇವರು ನಮ್ಮ ಶಾಲೆಯ ವಿದ್ಯಾರ್ಥಿಗಳಿಗೆ ಇಂದು ಮೂರ ರೂಪಾಯಿ ನಾಲ್ಕು ಆಣೆ (೩-೪-೦) ಬೆಲೆ ಬಾಳುವ ಫುಟಬಾಲ ಒಂದನ್ನು ಕೊಟ್ಟಿದ್ದಾರೆ. ಇದು ಇವರಿಗೆ ಭೂಷಣವಾದದ್ದು.

ಪ್ರಕಟನೆ

ಡಿರೆಕ್ಟರ ಆಫ್ ಇನ್‌ಫರಮೇಶನ್ ಮುಂಬಯಿ ಇವರು ೨೩-೪-೨೪ನೇ ತಾರೀಖಿನ ದಿವಸ ಕೆಳಗೆ ಕಾಣಿಸಿದ ಪಿ. ೯೯ನೆಯ ನಂಬರಿನ ಪ್ರೆಸ್‌ನೋಟನ್ನು ಪ್ರಸಿದ್ಧಪಡಿಸಿರುವರು.

ಮರಾಠಿ ಗುಜರಾಥಿ ಸಿಂಧಿ ಹಾಗು **ಕನ್ನಡ** ಗಂಡು ಹುಡುಗರ ದೇಶಭಾಷೆಯ ವಾಚನ ಪುಸ್ತಕಗಳು.

೧೯೨೪ನೆಯ ಇಸವಿಯ ಮೊದಲನೆಯ ತಾರೀಖಿನಿಂದ ಐದು ವರ್ಷಗಳ ವರೆಗೆ ವಿದ್ಯಾಖಾತೆಯ ಮರಾಠಿ ಹಾಗು ಗುಜರಾಥಿ ಗಂಡು ಹುಡುಗರ ಕ್ರಮಿಕ ವಾಚನ ಪುಸ್ತಕಗಳನ್ನು ಪ್ರಕಾಶಪಡಿಸುವ ಕಂಟ್ರ್ಯಾಕ್ಟನ್ನು ಬ್ರಿಟಿಷ ಇಂಡಿಯಾ ಪ್ರೆಸ್ ಮುಂಬಯಿ ಇದರ ಏಜಂಟರಾದ ಮೆಸರ್ಸ ಗುಲಾಮಹುಸೇನ ಅಹಮ್ಮದಲ್ಲಿ ಲಿಮಿಟೆಡ್ ಹಾಗು ಕಂಪನಿ ಇವರಿಗೂ ಸಿಂಧಿ ಹಾಗು ಕನ್ನಡ ಭಾಷೆಗಳ ವಿದ್ಯಾಖಾತೆಯ ವಾಚನ ಪುಸ್ತಕಗಳನ್ನು ಮೆಸರ್ಸ ದತ್ತೋ ನಾರಾಯಣ ಹಾಗು ಬ್ರದರ್ಸ್ ಪುಣೆ ಇವರಿಗೂ ಸರಕಾರದವರು ಕೊಟ್ಟಿರುವರು.

ಈ ಹೊಸ ಪ್ರಕಾಶಕರು ಅಚ್ಚು ಹಾಕಿಸಿ ಪ್ರಸಿದ್ಧ ಪಡಿಸುವ ಮರಾಠಿ ಗುಜರಾಥಿ ಹಾಗು ಸಿಂಧಿ ಪುಸ್ತಕಗಳ ಪ್ರತಿಯೊಂದು ಪ್ರತಿಯನ್ನು ಎಲ್ಲ ಜನರಿಗೆ ಕೆಳಗೆ ಕಾಣಿಸಿದ ಹೊಸ ಬೆಲೆಗೆ ಮಾರುವರು; ಕನ್ನಡ ಪುಸ್ತಕಗಳ ಹೊಸ ಬೆಲೆಗಳು ಮಾತ್ರ ೧೯೨೫ನೆಯ ಇಸವಿಯ ಜುಲಾಯಿ ತಿಂಗಳ ೧ನೆಯ ತಾರೀಖಿನ ತರುವಾಯ ಅಮಲಿನಲ್ಲಿ ಬರುವವು.

	ಜೊಸ ಬೆಲೆಗಳು				ಸವ್ಯದ ಬೆಲೆಗಳು			
	ಮರಾಠಿ	ಗುಜರಾಥಿ	ಸಿಂಧಿ	ಕನ್ನಡ	ಮರಾಠಿ	ಗುಜರಾಥಿ	ಸಿಂಧಿ	ಕನ್ನಡ
ಪ್ರಾಯಮುರ	೦–೦–೯	೦–೦–೯	೦–೦–೯	೦–೦–೯	೦–೧–೦	೦–೮–೯	೦–೧–೦	೦–೧–೦
೧ನೆಯ ಪುಸ್ತಕ	೦–೧–೬	೦–೧–೬	೦–೨–೦	೦–೨–೦	೦–೨–೩	೦–೨–೩	೦–೩–೦	೦–೩–೩
೨ನೆಯ ಪುಸ್ತಕ	೦–೧–೯	೦–೧–೯	೦–೨–೦	೦–೨–೦	೦–೨–೯	೦–೨–೯	೦–೪–೦	೦–೩–೩
೩ನೆಯ ಪುಸ್ತಕ	೦–೩–೬	೦–೩–೬	೦–೩–೯	೦–೩–೯	೦–೫–೬	೦–೫–೬	೬–೬–೦	೦–೫–೦
೪ನೆಯ ಪುಸ್ತಕ	೦–೪–೩	೦–೪–೩	೦–೪–೪	೦–೪–೪	೦–೬–೯	೦–೬–೯	೦–೮–೮	೦–೬–೦
೫ನೆಯ ಪುಸ್ತಕ	೦–೬–೦	೦–೬–೦	೦–೬–೬	೦–೬–೬	೦–೯–೬	೦–೯–೬	೦·೧೦·೬	೦–೮–೦

(ಪ್ರಶ್ನೆ)

೧೯೫೪ನೆ ಇಸ್ವಿ ಮಾರ್ಚ್ ತಿಂಗಳಲ್ಲಿ ಆದ ಹೆಣ್ಣುಮಕ್ಕಳ ವ್ಹಿ. ಫಾಯನಲ್ ಪರೀಕ್ಷೆಯ ಪರಿಣಾಮವು

ಧಾರವಾಡ ಸೆಂಟರ

ಕನ್ನಡ

೧	ರಿಂದವ್ವಾ ರಾಮಚಂದ್ರಪ್ಪಾ ಬಡಿಗೇರ	೪೩೬
೨	ಪಾರ್ವತೆವ್ವಾ ಶಿಪ್ಪಣ್ಣಾ ತಲವಾಯಿ	೪೧೭
೩	ಗೋದಾವರೀ ವಾಸುದೇವ ನವಲಗುಂದ	೪೧೨
೪	ಗೌರವ್ವಾ ಚನ್ನಪ್ಪಾ ಲಗಳಿ	೩೯೮
೫	ಬಂಗಾರೆವ್ವಾ ಭೀಮರಾವ ಧಾರವಾಡ	೩೯೨
೬	ಸುಶೀಲಾಬಾಯಿ ಧೊಂಡೊ ಕುಲಕರ್ಣಿ	೩೭೨
೭	ಮಲಪೂರೆವ್ವಾ ಈರಪ್ಪ ಬೆಳವಲಗಿಡ	೩೭೦
೮	ನೀಲಗಂಗವ್ವಾ ಫಕ್ಕೀರಪ್ಪಾ ಕುರಿ	೩೬೫
೯	ಪಾರ್ವತೆವ್ವಾ ಶಿವಲಿಂಗಯ್ಯಾ ಮರಡೂರ	೩೬೦
೧೦	ಸುನೀತಾ ದಾನಪ್ಪಾ ಕುರಿ	೩೫೧
೧೧	ತಾರಾಬಾಯಿ ರಾಮಸಿಂಗ ಹಾನಗಲ್	೩೩೮
೧೨	ಪಾರ್ವತೆವ್ವಾ ಉಳ್ಳಾಸೆಟ್ಟಿ ಕಟ್ಟಿ	೩೩೫
೧೩	ಲೀಲಾ ವೆಂಕಟರಾಮಣ್ಣಾ ಹೆಗಡೆ	೩೩೧
೧೪	ಬಸವಣ್ಣೆವ್ವಾ ಈರಯ್ಯಾ ಚರಂತಿಮಠ	೩೨೯
೧೫	ಸುಶೀಲಾ ಪರ್ವತಪ್ಪಾ ಮೂರಗೇರಿ	೩೦೫
೧೬	ಬಸವ್ವಾ ಈರಭದ್ರಪ್ಪಾ ದೊಡ್ಡಮನಿ (ಗಾಣಿಗೇರ)	೩೦೩
೧೭	ಶೇವಂತಾ ದಾನಪ್ಪಾ ಕುರಿ	೩೦೩
೧೮	ಕಾಳವ್ವಾ ಗೋವಿಂದರಾವ ಟಂಕಸಾಲಿ	೨೯೮
೧೯	ಮಾಥಾ ಸಾಮುವೇಲಪ್ಪಾ ಗೋಕಾವಿ	೨೯೭

ಹುಬ್ಬಳ್ಳಿ ಸೆಂಟರ

ಕನ್ನಡ

೧	ಪ್ರೇಮು ಜಿನ್ನಪ್ಪಾ ಮುಲ್ಲೂರ	೩೮೫
೨	ಭಾಗೀರಥೀ ಗೋಪಾಲಾಚಾರ್ಯ ಕಟಿಗೇರಿ	೩೫೪
೩	ಬಸವ್ವಾ ವೀರಯ್ಯಾ ಯೆಕ್ಕೇರಿಮಠ	೩೪೪

೪	ಸ್ನೇಹಲತಾ ಸಣ್ಣಪ್ಪಾ ಗಾಂವಕರ	೩೪೧
೫	ಲೀಲಾವತೀ ಮ್ಯಾನುವೆಲ್ಲಪ್ಪಾ ಅರಳೀಕಟ್ಟಿ	೩೩೭
೬	ಜಾಯವ್ವಾ ಚಂದ್ರಪ್ಪಾ ಅಕ್ಕಸಾಲಿ	೨೩೫
೭	ಸುಭದ್ರಾ ಅಂದಾನಪ್ಪಾ ಭಾಸ್ಮೆ	೩೨೬
೮	ಚೂಡಾಮಣಿ ರಾಮದಾಸ ಬೆಂಗಳೂರ	೩೨೪
೯	ಸುಂದ್ರಾಬಾಯಿ ನೆಂಕಪ್ಪಾ ಗದ್ವಾಲ	೩೨೨

ಗದಗ ಸೆಂಟರ

ಕನ್ನಡ

೧	ಅಣ್ಣಮ್ಮಾ ಚಾರಪ್ಪಾ ಜಳಿಕಿ	೪೧೩
೨	ಶಾಂತಾ ಮ್ಯಾನುವೆಲ್ಲಪ್ಪಾ ತಿಗಳಣ್ಣವರ	೩೭೬
೩	ಸುಂದ್ರಾಬಾಯಿ ವೆಂಕಟದಾಸ ಡಂಬಳ	೩೬೩
೪	ಸೋನಾಬಾಯಿ ಹನಮಂತಪ್ಪಾ ಸಿಂಧೆ	೩೪೭
೫	ಅನ್ನಪೂರ್ಣಾ ಪೌಲಪ್ಪಾ ಅರವಟಿಗಿ	೩೩೩
೬	ಲೀಲಾವತಿ ಪೌಲಪ್ಪಾ ಕೋಲ್ಹಾರ	೩೧೫
೭	ಕಮಲಾ ವೆಂಕಟೇರಾವ ಕಾತರಕಿ	೩೧೪
೮	ಬಸವಣ್ಣೆವ್ವಾ ಬಸವಣ್ಣೆಪ್ಪಾ ಹುಂಡೇಕಾರ	೩೧೨
೯	ಬುದ್ಧಿವಂತೆವ್ವಾ ಶ್ರೀನಿವಾಸಪ್ಪಾ ಅಂಗಡಿ	೩೦೨
೧೦	ನೀಲವ್ವಾ ಸಂಗಪ್ಪಾ ಬಿಸನಳ್ಳಿ	೨೯೩

ಬೆಳಗಾವ ಸೆಂಟರ

ಕನ್ನಡ

೧	ಸರಸ್ವತೀಬಾಯಿ ಬಸಲಿಂಗಪ್ಪಾ ನಿರ್ದಿ	೩೩೦
೨	ನೀಲವ್ವಾ ಗಂಗಪ್ಪಾ ತಳವಾರ	೩೨೮
೩	ಶಿವೂಬಾಯಿ ವಿರೂಪಾಕ್ಷಯ್ಯಾ ಹಿರೇಮಠ	೩೧೭
೪	ಸಾವಿತ್ರಿ ಸಿವಲಿಂಗಪ್ಪಾ ಮೆಟ್ಟಗೋಳಿ	೩೧೪
೫	ಯಲ್ಲವ್ವಾ ಯಲ್ಲಪ್ಪಾ ಡೊಂಗರೆ	೩೦೬
೬	ವಸುಂಧರಾ ಕೃಷ್ಣರಾವ ಕುಲಕರ್ಣಿ	೩೦೫
೭	ಸಿವಗಂಗವ್ವಾ ರೇವಪ್ಪಾ ಕುಂದರಗಿ	೩೦೩
೮	ಕೃಷ್ಣಾಬಾಯಿ ಹನಮಂತಸಿಂಗ ರಜಪೂತ	೩೦೨
೯	ಗೌಡವ್ವಾ ಟೋಪಣ್ಣಾ ಸುಣಗಾರ	೨೮೭

ಮರಾಠಿ

೧	ಚಂದ್ರಾಬಾಯಿ ಅಣ್ಣಪ್ಪಾ ಶೇರಿ	೩೯೪
೨	ಗುರುಬಾಯಿ ಭೀಮಗೌಡಾ ಪಾಟೀಲ	೩೫೦
೩	ಇಂದುಮತಿ ರಾಮಚಂದ್ರ ತಿನೈಕರ	೩೪೯
೪	ಚಂದ್ರಭಾಗ ಮಂಗೇಶರಾವ ದೇಶಪಾಂಡೆ	೩೪೪
೫	ಜಯಂತೀ ಪಾಂಡರಂಗ ದಂಡಗಿ	೩೪೫
೬	ಇಂದುಮತಿ ನಿವೃತ್ತಿ ಪುರಾಣೆ	೩೪೨
೭	ಶಾಂತಾಬಾಯಿ ತುಕಾರಾಮ ಲೋಖಂಡೆ	೩೩೭
೮	ದಮಯಂತಿಬಾಯಿ ಗೋವಿಂದರಾವ ತಿಳಗುಳ	೩೩೩
೯	ಸರಲಾಬಾಯಿ ಶಂಕರರಾವ ದೇಶಪಾಂಡೆ	೩೩೧
೧೦	ದುರ್ಗಾ ಬಾಳುಕೃಷ್ಣ ಧೋಪೇಶ್ವರ	೩೨೯
೧೧	ದುರ್ಗಾ ಯಶವಂತರಾವ ಕಾವುತ	೩೨೮
೧೨	ರಾಧಾಬಾಯಿ ಶಂಕರರಾವ ಚಿತ್ರಗಾರ	೩೧೬
೧೩	ಅನ್ನಪೂರ್ಣಾಬಾಯಿ ಬಾಳಪ್ಪಾ ಘೋರ್ಪಡೆ	೩೧೫
೧೪	ಲೀಲಾ ಭೀಮರಾವ ಭಂಡಿವಾಡ	೩೧೫
೧೫	ವತ್ಸಲಾ ಕೃಷ್ಣಾಜಿ ದೇಸಾಯಿ	೩೧೩
೧೬	ಕೃಷ್ಣಾಬಾಯಿ ಬಾಳಕೃಷ್ಣ ಚಂದವಾಣಕರ	೩೧೨

ವಿಜಾಪೂರ ಸೆಂಟರ

ಕನ್ನಡ

೧	ಅಣ್ಣವ್ವಾ ಫ್ರಾನ್ಸಿಸಪ್ಪಾ ಝುಳಕಿ	೩೭೫
೨	ಸಿದ್ಧಲಿಂಗವ್ವಾ ಮಲ್ಲಪ್ಪಾ ಸಜ್ಜನರ	೩೭೫
೩	ಲೀಲಾ ಫ್ರಾನ್ಸಿಸ್ ಡಿಸಿಲ್ವಾ	೩೬೮
೪	ಲೀಲಾಬಾಯಿ ಶೇಷಗಿರಿರಾವ ಆಶ್ರಿತ	೩೬೭
೫	ಅಣ್ಣವ್ವಾ ಗಾಬ್ರಿಯಲ್ಲಪ್ಪಾ ಕರಡಿ	೩೫೬
೬	ಇಂದಿರಾ ರಾಘವೇಂದ್ರರಾವ ಖುದಾನಪುರ	೩೫೪
೭	ಇಂದಿರಾ ನರಸಿಂಹಾಚಾರ್ಯ ಜಹಾಗೀರದಾರ	೩೩೪
೮	ಸುಂದರಾಬಾಯಿ ಭಾಗ್ಯವಂತೆಪ್ಪಾ ಜೋಗೀನ	೩೩೩
೯	ಸೊಲಭವ್ವಾ ಸಂಗಪ್ಪಾ ಚಿತ್ತವಾಡಿಗಿ	೩೩೦
೧೦	ಅಂತೋನಿಯವ್ವಾ ದಾನಿಯಲ್ಲಪ್ಪ ಝುಳಕಿ	೩೧೬

೧೧	ಭೀಮಾಬಾಯಿ ಬಾಬಾಜಿ ಕ್ಷೀರಸಾಗರ	೩೧೧
೧೨	ಯಮುನವ್ವಾ ಹನಮಪ್ಪಾ ಒಡ್ಡರ	೩೧೧
೧೩	ಸುನೀತಾ ಶಾಂತಪ್ಪಾ ಪ್ರಭಾಕರ	೨೯೫

ಕಾರವಾರ ಸೆಂಟರ

ಕನ್ನಡ

೧	ಜಹಿರಾಬೀ ಇಬ್ರಾಹಿಮಖಾನ	೩೫೭
೨	ಚಿನ್ನಮ್ಮಾ ತಿಮೋಥಿ ಅಂಚನ	೩೪೨
೩	ಸಾರಾ ತಿಮೋಥಿ ಅಂಚನ	೩೩೭
೪	ಗ್ಲೋರೋಮಿನ್ ಫ್ರಾನ್ಸಿಸ್ ರೇಗೋ	೩೩೧
೫	ತಾರಾ ಸಂಜೀವಿ	೩೯೪

ಮರಾಠಿ

೧	ಕೃಷ್ಣೀ ಮೋಘು ಗಡಕರ	೪೦೩
೨	ದುರ್ಗಾ ಮಂಗೇಶ ಬ್ರಹ್ಮೆ	೩೯೭
೩	ಹೀರಾ ನಾರಾಯಣ ನಾಡಕರಣಿ	೩೯೧
೪	ಮಂಜುಳಾ ಮಹಾಬಳೇಶ್ವರ ವಾಘು	೩೮೮
೫	ಕಮಲಾ ಗೋವಿಂದ ಜೋಶಿ	೩೮೫
೬	ಸುಂದರೀ ದೇವೀದಾಸ ಮಂಕೀಕರ	೩೮೪
೭	ಸುಶೀಲಾ ಅನಂತರಾವ ಅಂಬೀಯೇ	೩೮೩
೮	ಲೀಲಾ ಜಯವಂತರಾವ ಫೇನಾನಿ	೩೭೧
೯	ರಮಾ ರಾಮಚಂದ್ರ ಬ್ರಹ್ಮೆ	೩೬೨
೧೦	ಕುಸುಮ ಶಿವರಾವ ನಾಡಕರ್ಣಿ	೩೫೯
೧೧	ತಾರಾ ವಾಸುದೇವ ಪಂಡೀತ	೩೫೩
೧೨	ಕಲ್ಯಾಣೀ ಗಣಪತೀ ಪಾಲೇಕರ	೩೩೮
೧೩	ಸಾವಿತ್ರಿ ಪಾಂಡುರಂಗ ವಾಘು	೩೩೫
೧೪	ಪ್ರಯಾಗೀಬಾಯೀ ಗಣಪತ ಪ್ರಭು	೩೨೯
೧೫	ಜುಲಯಾನ ವರಸೀ ಬೋರ್ಜ	೩೨೦
೧೬	ಲೀಲಾ ದುರ್ಗಪ್ಪಾ ನಾಡಕರ್ಣಿ	೩೧೫
೧೭	ವಿಮಲಾ ದತ್ತೇ ನಾಗವೇಕರ	೩೧೫
೧೮	ರೋಜೀನ ರುಜಾರ ರೋದ್ರಿಕ್ಸ	೩೦೮
೧೯	ಸುಂದರಿ ದತ್ತಾತ್ರಯ ಬೋರ್ಕರ	೨೯೦

ಕೊಲ್ಲಾಪುರ ಸೆಂಟರ

ಮರಾಠಿ

೧	ಸರಸ್ವತಿ ವಿನಾಯಕ ಗಾಡಗೀಳ	೪೩೮
೨	ಗೌರಾ ಖಲೀಫಸಾಹೇಬ	೩೮೩
೩	ಕಾಶೀತಾಯಿ ರಾಮಚಂದ್ರ ಖಾಡಿಲಕರ	೩೫೫
೪	ಶಕುಂತಲಾ ಸದಾಶಿವ ವಿಜಾಪೂರೆ	೩೫೩
೫	ಸತ್ಯಭಾಮಾ ಶ್ರೀಪಾದ ಲಾಟಕರ	೩೩೩
೬	ಇಂದಿರಾ ಶ್ರೀಧರ ದೇಶಪಾಂಡೆ	೩೩೧
೭	ಶಾಂತಾ ಮಹಾದೇವ ಕುಲಕರ್ಣಿ	೩೨೯
೮	ರೂಥ ಧೋಂಡೀಬಾ ಕಾಳೆ	೩೨೭
೯	ಗಂಗೂ ಕಾಳಪ್ಪ ಗಿರ್ಗಿ	೩೨೬
೧೦	ಜಾಂಗಬೀಬಿ ಅಹಮ್ಮದ ನಾಯಕವಾಡಿ	೩೨೫
೧೧	ಶಕುಂತಲಾ ಬಾಳಾ ತೋಂಡ್ಲೆ	೩೧೪
೧೨	ಶ್ರೀಮತಿ ಬಾಳಾ ಜೌಗುಲೆ	೩೧೨
೧೩	ಸುಶೀಲಾ ಸುಮಿತ್ರರಾವ ಮಲ್ಲಪಟಿಯನ್	೩೦೯
೧೪	ಹೌಶಿ ಧೋಂಡೀಬಾ ಕಾವಲೆ	೩೦೪
೧೫	ಲಕ್ಷ್ಮೀಬಾಯಿ ರಾಮಚಂದ್ರ ಪೊವಾರ	೩೦೪
೧೬	ಶಾರದಾ ಸಕ್ಕರಲಾಲ ಶಹಾ	೩೦೩
೧೭	ಯಮುನಾ ಶೀತಾರಾಮ ದಾತಾರ	೩೦೧
೧೪	ಮಾಲು ಕೇಶವ ಪಂಡಿತ	೨೯೬
೧೯	ಅನಸೂಯಾ ಅಪ್ಪಾಜಿ ಕುಲಕರ್ಣಿ	೨೮೭
೨೦	ಮಾಲುತಾಯಿ ನಾರಾಯಣ ಸಪ್ರೆ	೨೮೩
೨೧	ಯಮುನಾ ರಾಮಚಂದ್ರ ರಾಜೂರೀಕರ	೨೮೨
೨೨	ಸರಳು ಸುಂದರರಾವ ಕರೇಕರ	೨೮೦
೨೩	ರಾಧಾಬಾಯಿ ಗೋವಿಂದ ಮಾಲಿ	೨೮೧
೨೪	ಸುಧರ್ಮಾಬಾಯಿ ಬಾಲಾರಾಮ ಭಟ್ಟಿ	೨೮೨

ನಂ. ೬೨ ಬ. ೪೭೭೨ ಧಾರವಾಡ
ತಾ|| ೮೭–೪–೧೯೩೪

Syed Nurullah,
ಎ. ಇ. ದ. ಭಾ.

ಪ್ರಕಟನೆ

NO 47/P. $\frac{329}{16/4/34}$

೧೨-೯-೧೯೩೩ ನೆಯ ದಿವಸ ನಡೆದ ಕನ್ನಡ ಬುಕ್ ಕಮೀಟಿಯಲ್ಲಿ ಕೆಳಗೆ ಕಾಣಿಸಿದ ಪುಸ್ತಗಳು ಕೆಳಗೆ ಬರೆದಂತೆ ಮುಂಜೂರ ಮಾಡಲ್ಪಟ್ಟಿವೆ

ನಂಬರು	ಪುಸ್ತಕಗಳ ಹೆಸರು	ಗ್ರಂಥಕರ್ತರ ಹೆರಸು	ಪ್ರಕಾಶಕರ ಪೂರ್ಣ ಹೆಸರು ಹಾಗು ಪತ್ತೆ	ಬೆಲೆ	ಯಾತಕ್ಕೋಸ್ಕರ ಮುಂಜೂರ	ಶರಾ ಡಾಯರೆಕ್ಟರ ಸಾಹರ ಮುಂನುಂತೀರೀಖು
೧	ಬೆಳಗಾವ ಜಿಲ್ಲೆಯ ಭೂವರ್ಣನೆ	ಮಿ. ಜಿ.ಜೆ. ಸುರಪುರ ಮತ್ತು ಎನ್. ಎಚ್. ಶೇಡ ಬಾಳಕರ	ಮಿ. ಜಿ. ಜೆ. ಸುರಪುರ ಮತ್ತು ಎನ್.ಎಚ್.ಶೇಡಬಾಳಕರ ಕಾಗವಾಡ	೦– ೫–೦	ಈ ಪುಸ್ತಕದಟ್ಟಿನೇ ಪಾನಿನಲ್ಲಿದ್ದ 'ಈ ದೇವರಿಗೆ ನಡಕೊಳ್ಳುತ್ತಾರೆ' ಎಂಬ ವಾಕ್ಯವನ್ನು ಮುಂದಿನ ಆ ವೃತ್ತಿಯಲ್ಲಿ ತೆಗೆದು ಬಿಡುವ ಕರಾರಿನಿಂದ ಪ್ರಾಥಮಿಕ ಶಾಲೆಗಳ ಶಿಕ್ಷಕರ ಲಾಯಬ್ರರಿ ಬುಕ್ಕಾಗಿ	
೨	ಶಾಸ್ತ್ರೀಯಪಾತ, ಸೃಷ್ಟಿ ನಿರೀಕ್ಷಣ ಭಾಗ ೧	ಮಿ. ವ್ಹಿ. ಎನ್. ಗೋಖಲೆ	ವ್ಹಿ. ಎನ್. ಗೋಖಲೆ ಪುಣೆ	೦– ೮–೦	ಪ್ರಾಥಮಿಕ ಶಾಲೆಗಳ ಹಾಗು ದೇಶ ಭಾಷೆಯ ಟ್ರೈನಿಂಗ ಸಂಸ್ಥೆಗಳ ಲಾಯಬ್ರರಿ ಬುಕ್ಕಾಗಿ.	
೩	ಭಾಗ ೨	ಸದರ	ಸದರ	೦–೧೦–೦	ಸದರ	
೪	ಭಾಗ ೩	ಸದರ	ಸದರ	೦–೧೦–೦	ಸದರ	

೮—೪೨೨೧

೩	ಮರಾಠರು ಅವರ ಭಾಷೆಯು (೧೯೩೨)	ಮಿ. ಜಿ.ಜಿ. ಉಪ್ಪಾರ	ಮಿ. ಟಿ. ಕೆ. ಜಾಧವ ಬೆಳಗಾವ	೦– ೫–೦	ಪ್ರಾಥಮಿಕ ಹಾಗು ಮಾ. ಶಾಲೆ ಗಳ ಹಾಗು ಟ್ರೇನಿಂಗ ಸಂಸ್ಥೆಗಳ ಟೀಚರ್ಸ ಲಾಯಬ್ರರಿ ಬುಕ್ಕಾಗಿ	ಡಾಯರೆಕ್ಟ್ರಮಂಜೂರಿ ನಂ s 86 c) 446·c 20/11/33
೪	ಹಿಂದುಸ್ತಾನದಲ್ಲಿ ಮುಸಲ್ಮಾನರ ಇತಿಹಾಸ (೧೯೩೩)	ಮಿ. ಬಿ.ಕೆ. ಹಳೇಪೇಟಿ	ಏ. ಆರ್. ಶಿವನಾಗಪ್ಪ ಹುಬ್ಬಳ್ಳಿ	೦–೮–೦	೧೧ರಲ್ಲಿದ್ದ ಚಿತ್ರವನ್ನು ಮುಂದಿನ ಆವೃತ್ತಿಯಲ್ಲಿ ವರ್ಣನೆಯ ಪ್ರಕಾರ ಸರಿಯಾಗಿ ವಿವರಿಸುವ ಕರಾರಿನಿಂದ ಪ್ರಾಥಮಿಕ ಮಾಧ್ಯಮಿಕ ಶಾಲೆಗಳ ಹಾಗು ದೇಶ ಭಾಷೆ ಟ್ರೇನಿಂಗ ಸಂ. ಟೆಕ್ಸ್ಟ ಬುಕ್ಕಾಗಿ.	ಡಾಯರೆಕ್ಟರ ನಂ. s 86 (c) 445·c 20/11/33
೫	ಮರಾಹಾಜ ಸಿಂಹ (೧೯೩೧)	ವಿದ್ವಾನ್ ವಿದ್ಯಾಭೂಷಣ ಬಾಲ ಸರಸ್ವತಿ	ಜಿ. ಸಿದ್ದಪ್ಪ ಬೆಂಗಳೂರ	೧– ೦–೦	ಮಾಧ್ಯಮಿಕ ಶಾಲಾ ವಿದ್ಯಾರ್ಥಿಗಳ ಲಾಯಬ್ರರಿ ಬುಕ್ಕಾಗಿ	ಡಾ. ನಂ. s 86 (c) 443·c 20/11/33
೬	ಜೋಸೆಫ್ ಆಡಿಸನ್ (೧೨ನೆ. ಆವೃತ್ತಿ)	ಮಿ. ಡಿ. ಆರ್. ಚನ್ನೇಗೌಡರ	ಭಾರತಿ ಪ್ರಕಟನಾಲಯ ಬೆಂಗಳೂರ ಸಿಟಿ	೦–೧೦–೦	ಮಾಧ್ಯಮಿಕ ಶಾಲೆಗಳ ಟೀಚರ್ಸ ಲಾಯಬ್ರರಿ ಬುಕ್ಕಾಗಿ	ಡಾ. ನಂ s·86·(c) 442·c 20/11/33
೭	ಗೇಜೆಂದ್ರ ಮೋಕ್ಷಣೆ	ವಿದ್ವಾನ್ ವಿದ್ಯಾಭೂಷಣ ಬಾಲ ಸರಸ್ವತಿ	ಜಿ. ಸಿದ್ದಪ್ಪ ಬೆಂಗಳೂರ ಸಿಟಿ	೦– ೩–೦	ಪ್ರಾ. ಶಾಲೆಗಳ ಪ್ರಾಯಿಝು ಬುಕ್ಕಾಗಿ ಹಾಗು ವಿದ್ಯಾರ್ಥಿಗಳ ಲಾಯಬ್ರರಿ ಬುಕ್ಕಾಗಿ	
೮	ನೀತಿಬೋಧೆ ಭಾಗ ೧ ೩ನೇ ಆವೃತ್ತಿ	ಜಿ. ಸಿದ್ದಪ್ಪ	ಸದರ	೦– ೪–೦	ಪ್ರಾ. ಶಾ. ಹಾಗು ಮಾ. ಶಾ. ಮತ್ತು ಟ್ರೇ. ಸಂಸ್ಥೆಗಳ ಪ್ರಾಯಿಝು ಹಾಗು ಲಾ. ಬುಕ್ಕಾಗಿ.	ಡಾ. ನಂ. s·86 (c) 441·c 20/11/33
೯	ನೀತಿ ಬೋಧೆ ಭಾಗ ೨ ೨ನೆಯ ಆವೃತ್ತಿ	ಸದರ	ಸದರ	೦– ೪–೮	ಸದರ	

ಪ್ರಥಮ ಪುಸ್ತಕ ಪಟ್ಟಿ

	(೧ ನ ಜ.)				ಸದರ		
೧೧	ನೀತಿ ಬೋಧೆ ಭಾಗ ೪ (೧ ನೆ ೮.)	ಸದರ	ಸದರ	೦– ೪–೦	ಸದರ	ಸದರ	
೧೨	ರಾಣಿ ಚೌಧರಾಣಿ ಭಾಗ ೧ (೧೯೩೧)	ವಿದ್ವಾನ್ ವಿದ್ಯಾ ಭೂಷಣ ಭಾಲ ಸರಸ್ವತಿ	ಸದರ	೮–೧೪–೦	ಸದರ	ಡಾ ನಂ. s 86 (c) 451-c 20/11/33	
೧೩	ಹೆಂಗಸು ಅಂದರೆ ಹೆಂಗಸು	ಸದರ	ಸದರ	೮–೧೨–೦	ಸದರ	ಡಾ. ನಂ. s 86 (c) 450-c 20/11/33	
೧೪	ದುಷ್ಟ ಚತುಷ್ಟಯ ೧೯೩೧	ಸದರ	ಸದರ	೦– ೫–೦	ಸದರ	ಡಾ. ನಂ. s 86 (c) 449-c 20/11/33	ಪುಟ
೧೫	ನರಬಲಿ (೩ ನೆ ಆ.)	ಸದರ	ಸದರ	೦– ೬–೦	ಸದರ	ಡಾ. ನಂ. s 86 (c) 448 c 20/11/33	
೧೬	ಗುರುತು ಕಂಡ ಕಳ್ಳ (೧೯೩೧)	ಸದರ	ಸದರ	೦- ೫–೦	ಸದರ	ಡಾ ನಂ. s 86 (c) 447-c 20/11/33	
೧೭	ಪಿಶಾಚ ಪರಿವಾರ (೧೯೩೧)	ಸದರ	ಸದರ	೦–೧೦–೦	ಸದರ	ಡಾ. ನಂ. s 86 (c) 456-c 20/11/33	
೧೮	ಚಿನ್ನ ಹೆತ್ತಿದ ಬೇತಾಳ (೧೯೩೧)	ಸದರ	ಸದರ	೦–೧೨–೦	ಸದರ	ಡಾ ನಂ s 86 (c) 458-c 20/11/33	
೧೯	ಕಮಲಕಾಂತನ ಉಯಿಲು	ಸದರ	ಸದರ	೦–೧೨–೦	ಸದರ	ಡಾ. ನಂ s 86 (c) 459-c 20/11/33	೫೬

೨೦	ಸಚಿತ್ರ ಭೂವರ್ಣನೆ (ಪ್ರಾ. ಶಾ. ಳನೆ ಇ.) ೧ನೇ ಆ.	ಮಿ. ಜಿ.ಜೆ. ಸುರಪುರ ಮತ್ತು ಎನ್ .ಎಚ್. ಶೇಡಬಾಳಕರ	ಮಿ. ಜಿ ಜೆ. ಸುರಪುರ ಮತ್ತು ಎನ್. ಎಚ್. ಶೇಡಬಾಳಕರ ಕಾಗವಾಡ ಜಿ. ಬೆಳಗಾಂವ	೦– ೭–೦	ನಕಾಶಗಳಲ್ಲಿ ತೋರಿಸಿದ ಸ್ಥಳಗಳ ಸಂಖ್ಯೆಯನ್ನು ಕಡಿಮೆ ಮಾಡುವದು ಹಾಗು ಬುರಾಡಿ ಜಿ. ಬಗ್ಗೆ ಕೊಟ್ಟ ವಿವರವನ್ನು ಬಿಟ್ಟು ಬಿಡುವದು ಈ ಕರಾರಿನಿಂದ ಪ್ರಾ. ಶಾ. ಳನೇ ಇ. ಟೆಕ್ಸ್ಟ ಬುಕ್ಕಾಗಿ	ಡಾ. ನಂ 460-c	s 86 (c) 6/11/33
೨೧	ಫಸ್ಟಬುಕ್ ಆಫ್ ಔಟ್ ಲುಕ್ ಜಾಗ್ರಫಿ. ಪ್ರಾಣಿ ಗಳು ಪ್ರದೇಶಗಳುರ್ಗಷಿ	ಪಿ. ಮುಂಗೇಶರಾವ ಮತ್ತು ಯು ಭವಾನಿ ಶಂಕರರಾವ	ದಿ. ಬಾಸೆಲ್ ಮಿಶನ್ ಬುಕ್ ಆ್ಯಂಡ ಟ್ರ್ಯಾಕ್ ಡಿಪೋಜಟರಿ ಮಂಗಳೂರ	೦– ೬–೦	ಪ್ರಾ. ಶಾ. ಮಾ. ಶಾ. ಹಾಗು ಟ್ರೇ. ಸಂ. ಸಪ್ಲಿ. ಜಾಗ್ರಫಿರೀಡರ ಹಾಗು ಪ್ರಾಯಿ.ಝು ಹಾಗು ಲಾಯಬ್ರರಿ ಬುಕ್ಕಾಗಿ	ಡಾ. ನಂ 461-c	s 86 (c) 6/11/33
೨೨	ಕಥಾ ರೂಪದ ಕರ್ನಾಟಕದ ಇತಿಹಾಸ (ರ್ಗಷಿ)	ಮಿ. ಡಿ. ಆರ್. ಕುರಂದವಾಡ	ಮಿ. ಡಿ. ಆರ್. ಕುರಂದವಾಡ ಹಾವೇರಿ	೦– ೬–೦	ಪ್ರಾ ಶಾ. ಟೆಕ್ಸ್ಟಬ ಬುಕ್ಕಾಗಿ	ಡಾ. ನಂ. 462-c
೨೩	ಕನ್ನಡನುಡಿಗನ್ನಡಿ ಹಾಗು ಭಂಡೋಮಂಜರಿ ರ್ಗಷಿ	ಮಿ. ಎವರ್. ಪಿ. ಪೂಜಾರ	ಮಿ. ಜಿ. ಬಿ. ಜೋಸಿ ಲೈನಬಝಾರ ಧಾರವಾಡ	೦-೧೦–೦	ಪಾ. ಹಾಗು ಮಾ. ಶಾ. ಟೆಕ್ಸ್ಟ ಬುಕ್ಕಾಗಿ	ಡಾ. ನಂ. s 86 (c) 463-c 12/1/34
೨೪	ಮಹಾರಾಷ್ಟ್ರರ ಇಂಗ್ಲಿಷರ ಆಳಿಕೆ ರ್ಗಷಿ	ಮಿ. ಎನ್. ಪಿ. ಮೋಡಕ	ಮಿ. ಆರ್, ಆರ್. ಕಾಮಲಾಪೂರ ಗದಗ	೦-೧೦–೦	ಪ್ರಾ ಹಾಗು ಮಾ. ಶಾ. ಮತ್ತು ಟ್ರೇ. ಸಂ. ಟೆಕ್ಸ್ಟ ಬುಕ್ಕಾಗಿ	ಡಾ. ನಂ. s 86 (c) 455-c 6/11/33
೨೫	ಚುಂ ಚುಂ.	ಮಾಚಿಮಾಲೆ ಶಂಕರ ನಾರಾಯಣರಾವ	ಮಾಚಿಮಾಲೆ ಶಂಕರ ನಾರಾಯಣರಾವ	೦– ೨–೬	ಪ್ರಾ. ಶಾ. ಪ್ರಾಯಿಝು ಮತ್ತು ಲಾಯಬ್ರರಿ ಬುಕ್ಕಾಗಿ	
೨೬	ಶ್ರೀ ಕಾವೇರೀಕಥಾಮೃತಮ್	ಎಮ್. ಎಸ್. ಅನಂತ ಪದ್ಮನಾಭರಾವ	ಎಮ್. ಎಸ್. ಅನಂತ ಪದ್ಮನಾಭರಾವ	೦– ೪–೦	ಪ್ರಾ. ಶಾ. ದೇ. ಭಾ. ಟ್ರೇ. ಸಂ. ಲಾ. ಬು. ಮಾ. ಶಾ. ಟೀಚರ್ಸ ಲಾಯಬ್ರರಿ ಬುಕ್ಕಾಗಿ	ಡಾ. ನಂ. s 86 (c) 457-c 20/11/33

	ತತ್ವ್ಯವಹಾರತೋಪಯೋಗಿ ಕನ್ನಡ ಭಾ. ಮೂಲಾ ಭಾ.೧	ಮಿ. ಜಿ. ಪಿ. ಗೊಡಬೋಲೆ	ಮಿ. ಜಿ. ಪಿ. ಗೂಡಬೋಲೆ	೦– ೮–೦	ಪ್ರಾ. ಶಾ. ಲಾಗು. ಬುಕ್ಕಾಗಿ	
೨೮	ಆರೋಗ್ಯ ಶಾಸ್ತ್ರ ಭಾಗ ೧ (೪ನೇ ಆವೃತ್ತಿ)	ಮಿ. ಜಿ. ಎನ್. ದೇಶಮುಖ	ಮಿ. ವ್ಹಿ. ಎಚ್. ದಾಮಲೆ ನ್ಯೂ ಕಿತಾಬಖಾನಾ ಪುಣೆ	೦–೧೦–೦	ಪ್ರಾ. ಶಾ. ಹಾಗು ಟೀಕ್ಸ್ಟ ಬುಕ್ಕಾಗಿ.	ಟ್ರೇ. ಸಂ. ಡಾ. ನಂ. s 86 (c) 453·c 12/1/34
೨೯	ಅಭಿನಯ ಗೀತಾವಲಿ (೨ನೇ ಆವೃತ್ತಿ)	ಮಿ ಜಿ. ಎನ್. ಲಕ್ಷ್ಮಣ ಪೈ	ಹರಿಹರ ಬುಕ್ ಡಿಪೋ ಪುತ್ತೂರ	೦– ೩–೦	ಗ. ಹು. ಪ್ರಾ. ಶಾ. ಪ್ರಾಯಿಝು ಹಾಗು ಲಾಯಬ್ರರಿ ಬುಕ್ಕಾಗಿ	ಡಾ. ನಂ. s 86 (c) 413·c 25/7/33
೩೦	ಭೀಮಸೇನನ ಕಥೆ ೧೯೩೩	ಮಿ. ಎಮ್. ಪಿ. ಪೂಜಾರ	ಶಂಕರ ನರಹರ ಜೋಸಿ ಚಿತ್ರಶಾಲಾ ಪ್ರೆಸ್ ಪುಣೆ	೦– ೪–೦	ಸದರ	
೩೧	ಆರೋಗ್ಯ ಶಾಸ್ತ್ರ ೧೯೩೩	ಮಿ. ಕೆ. ಜಿ. ಕುಂದಣಗಾರ	ಯಶವಂತ ನಾರಾಯಣ ಭಟ್ಟ ಶಾಹುಪುರಿ ಕೊಲ್ಲಾಪುರ	೦– ೭–೦	ಹೆಡ್ ಮಾಸ್ತರ ಟ್ರೇ. ಧಾರವಾಡ ಇವರ ಸೂಚನೆಗಳಿಗೆ ಒಳಪಟ್ಟು ಪ್ರಾ. ಶಾ. ಮಾ.ಶಾ.ಹಾಗು ಟ್ರೇ. ಸಂ. ಟೀಕ್ಸ್ಟ ಬುಕ್ಕಾಗಿ	ಡಾ. ನಂ. s 86 (c) 452·c 6/11/33
೩೨	ಮುಗಿಲು (೧ನೆ ಆವೃತ್ತಿ)	ಮಿ. ಎಸ್. ಪಿ. ಗಾಂವಕರ	ಮಿ. ಎಸ್. ಪಿ. ಗಾಂವಕರ ಏ. ಓ. ಮ್ಯುನ. ಹುಬ್ಬಳ್ಳಿ	೦– ೮–೦	ಮಾ. ಶಾ. ಟೀಕ್ಸ್ಟ ಬುಕ್ಕಾಗಿ	ಡಾ. ನಂ. s 86 (c) 440·c 9·11·33
೩೩	ಅರಿಥ್‌ಮೆಟಿಕ್ ೩ನೇ ಇಯತ್ತೆಗಾಗಿ (೧ನೇ ಆವೃತ್ತಿ)	ಮಿ. ಎಸ್. ಪಿ. ಗಾಂವಕರ ಎಸ್. ಎಲ್. ಹಿರೇಗೌಡರ	ಮಿ. ಎಸ್. ಪಿ. ಗಾಂವಕರ ಎಸ್. ಎಲ್. ಹಿರೇಗೌಡರ ಹುಬ್ಬಳ್ಳಿ	೦– ೫–೧	ಪ್ರಾ. ಶಾ. ಲಾ. ಬುಕ್ಕಾಗಿ	
೩೪	ಎಲೆಯನ್ನು ಹೇಗೆ ಬೆಳಿಸ ಬೇಕು (೧ನೇ ಆವೃತ್ತಿ)	ಮಿ. ಎಸ್. ಜೆ. ಬಾಪಟ	ಮಿ. ಎಸ್. ಜೆ. ಬಾಪಟ ಮದಿಹಾಳ ಧಾರವಾಡ	೦– ೪–೦	ಪ್ರಾ. ಹಾಗು ಮಾ ಶಾ. ಲಾಯಬ್ರರಿ ಬುಕ್ಕಾಗಿ	ಡಾ. ನಂ. s 86 (c) 454 c 20·11·33

Syed Nurullah
ಎ. ಇ. ದ. ಭಾ.

(ಪ್ರತಿಷ್ಟೆ)

ಕೆಳಗೆ ಕಾಣಿಸಿದ ಪುಸ್ತಕಗಳು ಅವುಗಳ ಮುಂದೆ ವಿವರಿಸಿದಂತೆ ಮಂಜೂರಾಗಿವೆ

ನಂಬರು	ಪುಸ್ತಕಗಳ ಹೆಸರು	ಗ್ರಂಥಕರ್ತರ ಹೆಸರು	ಪ್ರಕಾಶಕರ ಹೆಸರು ಪೂರ್ಣ ಪತ್ತೆ	ಬೆಲೆ	ಯಾತಕ್ಕೋಸ್ಕರ ಮಂ.	ಡಾ. ಸಾ. ನಂ. ಮತ್ತು ತಾರೀಖು
೧	ಆದಿ ಶಕ್ತಿ ಪುರಾಣವು	ಶ್ರೀಮದ್ರಾಘ ವಾಂಕಕವಿ	ರಾವಸಾ. ಪಿ. ಜಿ. ಹಳಕಟ್ಟಿ. ವಿಜಾಪೂರ	೧–೦–೦	ಮೂ. ಶಾ. ಗಳ ಟೆಕ್ಸ್ಟ ಹಾಗು ಪ್ರಾ. ಶಾಲೆಗಳ ಸಪ್ಲಿಮೆಂಟರಿ ರೀಡರ	S. 86c. 382 c. 18–4–34
೨	ರಾಮಾಯಣ ಸಂಗ್ರಹ	ವಿ.ಎಸ್.ಜಿ.ಗೋವಿಂದರಾಜ ಅಯ್ಯಂಗಾರ	ಬೆಂಗಳೂರ ಪ್ರಿಂಟಿಂಗ ಅ್ಯಂಡ ಪಬ್ಲಿಷಿಂಗಕಂಪನಿ	೦–೮–೦	ಸದರ ಹಾಗು ಟ್ರೇ. ಸಂ. ಗಳ ಸಪ್ಲಿಮೆಂಟರಿ ರೀಡರಾಗಿ	S. 86c. 478 c. 21–4–34
೩	ಸೃಷ್ಟಿನೀರಿಕ್ಷಣ ಭಾಗ ೧	ವಿ. ಪ್ಹಿ. ಎನ್ ಗೋಖಲೆ	ವಿ. ಪ್ಹಿ. ಎನ್. ಗೋಖಲೆ. ಪುಣೆ.	೦–೮–೦	ಮಾಧ್ಯಮಿಕ ಶಾಲೆಗಳ ಹುಡುಗರ ಲಾಯಬ್ರರಿಗಾಗಿ	S. 86 c 444 18–4–34
೪	ಸದರ ಭಾಗ ೨	ಸದರ	ಸದರ	೦-೧೦–೦	ಸದರ	ಸದರ
೫	ಸದರ ಭಾಗ ೩	ಸದರ	ಸದರ	ಸದರ	ಸದರ	ಸದರ
೬	ಉಡುತಡಿಯ ಮಹಾದೇವಿಯಕ್ಕನ ರಗಳೆ	ಹರೀಶ್ವರ ಕವಿ	ಶ್ರೀ ಚೆನ್ನಮಲ್ಲಿಕಾರ್ಜುನ	೧–೦–೦	ಮೂ. ಶಾಲೆಗಳ ಲಾಯಬ್ರರಿ ಬುಕ್ಕಾಗಿ	S. 86 c 479 21-4–34
೭	ಹಳ್ಳಿಯ ಹಾಡುಗಳು	ವಿ. ಪ್ಹಿ. ಪ್ಹಿ ತೊರ್ಕೆ	ವಿ. ಪ್ಹಿ. ಪ್ಹಿ. ತೊರ್ಕೆ	೦-೩–೦	ಮೂ. ಶಾಲೆಗಳ ಹುಡುಗರ ಲಾಯಬ್ರರಿಗಾಗಿ	S. 86. c 480 c. 21–4–34

ಪ್ರತಿಯನ್ನು ಕಳಿಸಿಕೊಡಿ

೮	ಸ್ವಾಸ್ಥ್ಯರಕ್ಷಣಶಾಸ್ತ್ರ	ಮಿ.ಸಿ.ರಾಮಮೂರ್ತಿ	ಮ್ಯಾಕ್ಮಿಲನ್ ಅ್ಯಂಡಕೋ ಮುಂಬಯಿ			ಮೂ. ಶಾಲೆಗಳ ಪಾಠ್ಯ ಪ್ರೈ. S. 86 c. 481 c.
೯	ಹಿಂದೂ ಪದ್ಧತಿಯ ಜಪತಾಖರ್ಚು ಭಾಗ ೨	ಮಿ. ಎಚ್. ಬಿ. ಉಮಡಿ	ಮಿ. ಕೆ. ಆರ್. ಕುಲ ಕರ್ಣಿ ಧಾರವಾಡ	೧-೦-೦ ೦-೧೨-೦	ಸಂ. ಗಳ ಟೆಕ್ಸ್ಟ ಪ್ರಾ ಶಾಲೆಗಳ ಟೆಕ್ಸ್ಟ	21-4-34 S. 86 c. 482 c. 21-4-34
೧೦	ಪುರಾತನ ದೇವಿಯರ ತ್ರಿವಿಧಿ	ಹರೀಶ್ವರ ಕವಿ	ಶ್ರೀ ಚೆನ್ನಮಲ್ಲಿಕಾರ್ಜುನ	೦-೬-೦	ಮೂ. ಶಾ. ಗಳ ಹುಡುಗರ ಲಾಯಬ್ರರಿ ಬಕ್ಕಾಗಿ	S. 86 c. 484 21-4-34
೧೧	ಪ್ರಬುದ್ಧ ಒಕ್ಕಲಿಗ	ಮಿ. ವ್ಹಿ. ಸಿ. ಪಾವಟೆ	ಮಿ. ಎಚ್. ಎಸ್. ಶಿವ ಲಿಂಗಶಾಸ್ತ್ರಿ ಧಾರವಾಡ	೦-೮-೦	ಅಗ್ರಿಕಲ್ಚರಲ್ ಬಾಯಸ್ ಪ್ರಾ. ಶಾ. ಗಳ ಟೆಕ್ಸ್ಟ	S. 86 c. 485 c. 21-4-34
೧೨	ಗಜೇಂದ್ರ ಮೋಕ್ಷಣ	ಬಾಲ ಸರಸ್ವತಿ	ಸಿ. ಸಿದ್ದಪ್ಪ ಬೆಂಗಳೂರ	೦-೩-೦	ಪ್ರಾ. ಶಾ. ಗಳ ಸಪ್ಲಿಮೆಂಟರಿ ರೀಡರ	S. 86 c. 486 c. 21-4-34
೧೩	ಪರಶುರಾಮನ ಬಾಲ್ಯ	ಸದರ	ಭಾರತೀ ಪ್ರಕಟನಾಲಯ ಬೆಂಗಳೂರ	ಸದರ	ಸದರ	S. 86 c. 487 c. 21-4-34
೧೪	ಧರ್ಮವೇ ಜಯ	ಸದರ	ಸದರ	ಸದರ	ಸದರ	S. 86 c 488 c. 21-4-34
೧೫	ದೊಡ್ಡವರಾರು ?	ಸದರ	ಸದರ	ಸದರ	ಸದರ	S. 86 c. 489 c. 21-4-34
೧೬	ಹೊಸ ಅಂಕಗಣಿತ ಭಾಗ ೧	ಮಿ. ಬಿ. ಬಿ. ಮುಮು ದಾಪೂರ	ಮಿ. ಬಿ. ಬಿ. ಮುಮದಾ ಪೂರ	೦.೧೦-೦	ಪ್ರಾ. ಹಾಗು ಮೂ. ಶಾ. ಗಳ ಟೆಕ್ಸ್ಟ	S. 86 c. 490 c. 21-4-34

	ಎಸ್. ರಾಷ್ಟ್ರಪೇಂದ್ರ ಸಲ್ಲ ಬೆಳಗಾವ	ಎಸ್. ರಾಷ್ಟ್ರಪೇಂದ್ರ ಸಲ್ಲ ಬೆಳಗಾವ			
೧೭	ಸಂಪರ್ಕವ	ಶ್ರೀ. ಬಳಗೇರಿ ಕೆಳಿಕೆ ಪಬರ್ಸ್ ಜೆ. ಬಿ. ಜೋಷಿ	ಮಿ. ಜಿ. ಸಿ. ಚುಟಕೆ ಸಬಸಿಲೇಹರ ಗ್ರ ಸಂ. ಕಾರ್ಯರ್ಸ. ಧಾರವಾಡ	೦-೧೫-೦	ಸಂ. ಪಾ. ಗಳ ಪ್ರಾಥಮಿಕ ಶಾಲೆಯು B. 86 c. 491 c. ಹಾಗು ಹುಡುಗರ ಅಂಯಬ್ರಂ 21-4-34 ಎ.ಇ.ಡ ಭಾ. ಇನಿ ಸಂ.
೧೮	ಕರ್ನಾಟಕದ ಕಲ್ಲಾ ಮಯು ಇತಿಹಾಸ	ಮಿ. ಜಿ. ನಿ. ಜೋಗಳೇಕರ	ಮಿ.ಜಿ.ನಿ. ಜೋಗಳೇಕರ ಸಲ್ಲ. ಸಲ್ಲ. ಗದಗ	೦—೫—೦	ಪಾಲ್ಗ. ಪಾ. ಗಳ ಹುಡುಗರ 643 5-5-34 ಅಂಯಬ್ರಂ

Reg. No. B. 2567

ಜಾಹೀರಾತು

(೧) ಹಿಂದುಮುಸಲ್ಮಾನರ ಇತಿಹಾಸ.

(ಬಾಳಕೃಷ್ಣ ಹಳೇಪೇಟಕೃತ)

ಇದು, ಪ್ರಾಥಮಿಕ ಶಾಲೆಗಳ ೫ನೆಯ ಇಯತ್ತೆಯ ಉಪಯೋಗಕ್ಕಾಗಿ ಸುಲಭವಾದ ಅಲಂಕಾರಿಕ ಭಾಷೆಯಲ್ಲಿ ಹೊಸಪದ್ಧತಿಗನುಸಾರವಾಗಿ ಬರೆಯಲ್ಪಟ್ಟಿರುವದು. ಈ ವರೆಗೆ ಬರೆದ ಇತಿಹಾಸಗಳಲ್ಲಿ ಇದು ಒಳ್ಳೇ ಉಪಯುಕ್ತವಾಗಿರುವದು. ಮುಂಬಯಿ ಸರಕಾರದಿಂದ ಕನ್ನಡ ೫ ನೆ ಇಯತ್ತೆಗೆ ಪಠ್ಯಪುಸ್ತಕವೆಂದು ಮಂಜೂರ ಮಾಡಲ್ಪಟ್ಟಿರುವದು. ಬೆಲೆ ೦–೮–೦.

(೨) ಕರ್ನಾಟಕದ ವರ್ಣನೆಯೂ ಇತಿಹಾಸವೂ.

(ನಾರಾಯಣ ಶ್ರೀನಿವಾಸ ರಾಜಪುರೋಹಿತ ಕೃತ)

ಕರ್ನಾಟಕದ ಇತಿಹಾಸ ಸಂಶೋಧಕ ಮಂಡಲದ ಪ್ರಮುಖರಲ್ಲೊಬ್ಬರಾದ ಮಿ. ರಾಜಪುರೋಹಿತ ಇವರು ಕರ್ನಾಟಕದ ಎಲ್ಲ ಭಾಗಗಳಲ್ಲಿ ಸಂಚರಿಸಿ ಶಿಲಾಲೇಖ, ತಾಮ್ರಪಟ, ನಿಷಿದಿಯಕಲ್ಲು, ಮಾಸತಿಕಲ್ಲು, ವೀರಗಲ್ಲು ಮೊದಲಾದವುಗಳನ್ನು ಶೋಧಿಸಿ ಇವುಗಳ ಆಧಾರದಿಂದ ಸುಸಂಗತವಾಗಿ ಈ ಇತಿಹಾಸವನ್ನು ಬರೆದಿರುವರು. ೪ನೆಯ ಇಯತ್ತೆಯ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕವೆಂದು ಸರಕಾರದಿಂದ ಮಂಜೂರ ಆಗಿದೆ. ಬೆಲೆ ೦–೮–೦.

(೩) ದೇಶೀಯ ಜಮಾಖರ್ಚು ಪ್ರವೇಶ

(ಹನುಮಂತ ರಾಮಚಂದ್ರ ಕುಲಕರ್ಣಿ ಕೃತ)

ಪ್ರಾಥಮಿಕ ಕನ್ನಡ ಶಾಲೆಗಳ ೬ನೆಯ ೭ನೆಯ ಇಯತ್ತೆಯ ವಿದ್ಯಾರ್ಥಿಗಳಿಗೆ ಇದ್ದ ಈ ಜಮಾಖರ್ಚಿನ ವಿಷಯವು ೪ನೆಯ ಇಯತ್ತೆಗೆ ಆರಂಭವಾಗುವದರಿಂದ ಇದನ್ನು ಸುಲಭವಾದ ರೀತಿಯಲ್ಲಿ ತಿಳಿಯುವಂತೆ ಬರೆದಿದ್ದಾರೆ. ಅಭ್ಯಾಸಕ್ಕೆ ವಿಶೇಷ ಅನುಕೂಲವಾಗಿದೆ. ಮುಂಬಯಿ ಇಲಾಖೆಯ ವಿದ್ಯಾಖಾತೆಯಿಂದ ಮಂಜೂರಾಗಿದೆ. ಬೆಲೆ ೦–೩–೬.

(೪) ವಿಜಾಪುರ ಜಿಲ್ಲೆಯ ಸಾಮಾನ್ಯ ವರ್ಣನೆಯು.

ಕನ್ನಡ ಪ್ರಾಥಮಿಕ ಶಾಲೆಗಳ ೨ನೆಯ ೩ನೆಯ ಇಯತ್ತೆಯ ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವಂತೆ ಹೊಸ ಪದ್ಧತಿಯಿಂದ ಬರೆಯಲ್ಪಟ್ಟಿದೆ. ಈ ಮೊದಲು ಇದೇ ಪದ್ಧತಿಯಿಂದ ಬರೆದ ಮಿ. ಯ. ಕೃ. ಅಣ್ಣೀಗೇರಿ ಇವರಿಂದಲೇ ಇದನ್ನು ಬರೆಯಿಸಿದೆ. ಅಭ್ಯಾಸವು ಸುಲಭವೂ ಸುಗಮವೂ ಮನೋರಂಜಕವೂ ಆಗುವಂತೆ ಈ ಪುಸ್ತಕದಲ್ಲಿ ನಕಾಶೆಗಳೂ ಚಿತ್ರಗಳೂ ಸೇರಿಸಲ್ಪಟ್ಟಿವೆ. ಬೆಲೆ ೪–೬–೦.

ಪುಸ್ತಕ ದೊರೆಯುವ ಸ್ಥಳ :—

ಪಿ. ಆರ್. ಶಿವನಾಗಪ್ಪ,

ವಾಗ್ವಿಲಾಸ ಬುಕ್‌ಡಿಪೋ ಪಾವರ ಪ್ರಿಂಟಿಂಗ ಪ್ರೆಸ್, ಹುಬ್ಬಳ್ಳಿ

Reg. No. B. 2567

ಕನ್ನಡ

ಪ್ರಾಥಮಿಕ ಶಿಕ್ಷಣ

(ಇದರಲ್ಲಿ ಕನ್ನಡ ಶಾಲಾಪತ್ರಿಕೆಯೂ ಶಿಕ್ಷಕೆಯೂ ಸಮಾವೇಶವಾಗಿವೆ.)

Kannada Prathamik Shikshana

— JULY 1934 —

ಸಂಪಾದಕ— ವೆಂಕಟೇಶ ನರಸಿಂಗರಾವ ಮಗದಾಳ ಬಿ. ಎ.,

ಸಂಪುಟ ೭೧] ಜುಲೈ ೧೯೩೪ [ವ. ೬ ಸಂ. ೪

ವಿಷಯಾನುಕ್ರಮಣಿಕೆ

ಅ. ನಂ.	ವಿಷಯ			ಪುಟ
೧.	ಶಾಲೆಯ ಆರೋಗ್ಯ	...	...	೧
೨.	ಶಿಕ್ಷಣ ಸಪ್ತಾಹಗಳು	...	...	೮
೩.	ಪಡಕ್ಷರ ಕವಿ	...	...	೧೨
೪.	ಮಾನಸಶಾಸ್ತ್ರ	...	...	೧೩
೫.	ಡಿ. ಸ್ಕೂ. ಬೋ. ಧಾರವಾಡ ಇಲ್ಲಿಯ ಸೂಟಿಯ ಶಿಕ್ಷಣ ಸಪ್ತಾಹದ ಪರೀಕ್ಷೆಯ ಪ್ರಶ್ನೆಗಳು			೨೪
೬.	ಶಿಕ್ಷಣಕ್ಕ ಸಹಾಯ	..	...	೨೭
೭.	ಪ್ರಕಟನೆಗಳು	...	...	೨೮

Printed by K. R. Bhise at the Karnatak Printing Works, Dharwar
& Published by V. N. Magdal, B.A.,
Head Master, Training School, Dharwar, at his Office.

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:—ವೆಂಕಟೇಶ ನರಸಿಂಗರಾವ ಮಗದಾಳ, ಬಿ. ಎ.

ಸಂಪುಟ ೭೧ | ಜುಲೈ ೧೯೩೪ | ವರ್ಷ ೭ ಸಂ. ೪

ಶಾಲೆಯ ಆರೋಗ್ಯ*

ಮನುಷ್ಯನ ಆರೋಗ್ಯಕ್ಕೆ ಹವೆ ಬೆಳಕು ಇವು ಅತಿಶಯ ಮಹತ್ವದ ಸಾಧನಗಳು. ಇವು ಎಲ್ಲ ಜನರಿಗೆ ಏನೂ ವೆಚ್ಚವಿಲ್ಲದೆ ಬೇಕಾದಷ್ಟು ಸಿಕ್ಕುವವು. ಆದರೆ ಇಷ್ಟು ಸುಲಭಸಾಧ್ಯವಿರುವ ಮೂಲಕ, 'ಅತಿಪರಿಚಯಾದವಜ್ಞಾ' ಎಂಬಂತೆ ಜನರು ಇವುಗಳ ಉಪಯೋಗವನ್ನು ಮಾಡಿಕೊಂಡು ಶಾರೀರಿಕ ಸಂಪತ್ತನ್ನು ಕಾಯ್ದುಕೊಳ್ಳುವದನ್ನು ತೀರ ದುರ್ಲಕ್ಷಿಸುವದುಂಟು. ಆದರೆ ಶಿಕ್ಷಕರು ತಮ್ಮ ಶಾಲೆಯ ದಿನದ ಕೆಲಸದಲ್ಲಿ ಇವುಗಳ ಮಹತ್ವವನ್ನು ಮರೆತುಬಿಡುವದು ಉಕ್ಷಮ್ಯವಾದದ್ದು. ಶಾಲೆಯಲ್ಲಿ ಅನೇಕ ಹುಡುಗರು ಒತ್ತಟ್ಟಿಗೆ ಕುಳಿತು ಕೆಲಸ ಮಾಡುತ್ತಿರಬೇಕಾಗುವದು; ಆದ್ದರಿಂದ ಅಲ್ಲಿಯ ಹವೆಯು ತೀವ್ರವಾಗಿ ದೂಷಿತವಾಗುವ ಸಂಭವವು ಜೆಚ್ಚಾಗಿರುವದು.. ನಮ್ಮ ಪ್ರಾಥಮಿಕ ಶಾಲೆಗಳ ಮನಗಳು ಬಹುತರವಾಗಿ ಹಲವು ಹುಡುಗರು ಒತ್ತಟ್ಟಿಗೆ ಕುಳಿತು ಕೆಲಸ ಮಾಡಲಿಕ್ಕಾಗಿ ಕಟ್ಟಿದವಿರುವದಿಲ್ಲ. ಆದ್ದರಿಂದ ಈ ಸಂದರ್ಭದಲ್ಲಿರುವ ಪ್ರತಿಯೊಬ್ಬನಿಗೂ ಶ್ರಮವಿಲ್ಲದೆ ಕೆಲಸ ಮಾಡಲಿಕ್ಕೆ ಅವಶ್ಯವಿರುವಷ್ಟು ಬೆಳಕು ಅಲ್ಲಿ ದೊರೆಯುವ ವ್ಯವಸ್ಥೆಯು ಇರುವದಿಲ್ಲ. ಇನ್ನು ಕತ್ತಲೆಯೆಂದರೆ ರೋಗಗಳ ತವರು. ಬೆಳ

* ಡಿಸ್ಟ್ರಿಕ್ಟ ಸ್ಕೂಲಬೋರ್ಡ ಧಾರವಾಡ ಇವರು ಅರ್ಬನ್ ಶಿಕ್ಷಕರಿಗಾಗಿ ಏರ್ಪಡಿಸಿದ ಬೇಸಿಗೆಯ ಸೂಟಿಯ ಶಿಕ್ಷಣಯೋಜನೆಯಲ್ಲಿ ಮಿ. ವಿ. ಎನ್ ಮಗದಾಳ ಬಿ. ಎ. ಹೆ. ಮಾ. ಟೀ ಸ್ಕೂ. ಧಾರವಾಡ ಇವರು ಮಾಡಿದ ಒಂದು ಉಪನ್ಯಾಸದ ಅನುವಾದವು.

ಕಿಗೆ ಪ್ರತಿಬಂಧವಿರುವಲ್ಲಿ ಡಾಕ್ಟರನಿಗೆ ಆಮಂತ್ರಣವಿರುವದು ಎಂಬ ಇಂಗ್ಲಿಷ್ ಗಾದೆಯ ಮಾತು ಸರ್ವಥಾ ನಿಜವಾದದ್ದಿರುವದು. ಒಟ್ಟಿನ ಮೇಲೆ ಸಾಲೆಗೆ ಬರುವ ಹುಡುಗರ ಆರೋಗ್ಯವನ್ನು ಕಾಯ್ದುಕೊಳ್ಳಲಿಕ್ಕೆ ಸಾಕಷ್ಟು ಶುದ್ಧ ಹವೆಯೂ ಬೇಕಾಗುವಷ್ಟು ಬೆಳಕೂ ಅವಶ್ಯವಾಗಿ ಇರಬೇಕೆಂಬದನ್ನು ಶಿಕ್ಷಕರು ಕ್ಷಣಮಾತ್ರವೂ ಮರೆಯಲಾಗದು.

ಹವೆ ಬೆಳಕುಗಳು ಸಾಕಷ್ಟು ಇರಬೇಕೆಂದು ಹೇಳುವದರಿಂದ ಅವುಗಳ ಅವಶ್ಯಕತೆಯನ್ನೂ ತಿಳಿಸಿದಂತಾಗುವದಿಲ್ಲ. ಸಾಲೆಯಲ್ಲಿರುವ ಕೂಡುವ ಸ್ಥಳದ ಕ್ಷೇತ್ರಫಲದ ಏನಿಲ್ಲೆಂದರೂ ಐದರಲ್ಲಿ ಒಂದು ಪಾಲು ಕಿಡಿಕೆ ಬಾಗಿಲುಗಳ ಕ್ಷೇತ್ರಫಲವಿರಬೇಕೆಂದು ಶಾಸ್ತ್ರಜ್ಞರು ಗೊತ್ತುಪಡಿಸಿರುವರು. ಇಷ್ಟು ವಿಶಾಲವಾದ ಕಿಡಿಕೆ ಬಾಗಿಲುಗಳು ನಮ್ಮ ಶಾಲೆಗಳಲ್ಲಿ ಇನ್ನೆಷ್ಟು ವರುಷಗಳ ಬಳಿಕ ಆಗುವವೋ ದೇವರಿಗೇ ಗೊತ್ತು. ಸದ್ಯಕ್ಕಂತೂ ಇವುಗಳ ಪ್ರಮಾಣವು ತೀರ ಕಡಿಮೆಯಾಗಿರುವದು. ಇರಲಿ; ಅದರೆ, ಇದ್ದ ಕಿಡಿಕೆ ಬಾಗಿಲುಗಳನ್ನು ತೆರೆಯದೆ ಮುಚ್ಚಿಡುವ ಶಿಕ್ಷಕರು ಎಂಥ ಅಪರಾಧವನ್ನು ಮಾಡುತ್ತಿರುವರೆಂಬದನ್ನು ಹ್ಯಾಗೆ ಹೇಳೋಣ? ಎಷ್ಟೋ ಕಡೆಗೆ ಕಿಡಿಕೆಗಳನ್ನು ತೆರೆಯದೆ ಅವುಗಳ ಸ್ಥಳವನ್ನು ಮಾಡದಂತೆ ಉಪಯೋಗಿಸುವದುಂಟು. ಪ್ರತಿಯೊಬ್ಬ ಶಿಕ್ಷಕನು ಸಾಲೆಯ ಕೋಣೆಯಲ್ಲಿ ಕಾಲಿಟ್ಟ ಕೂಡಲೆ ಅದರಲ್ಲಿರುವ ಕಿಡಿಕೆ ಬಾಗಿಲುಗಳೆಲ್ಲ ಪೂರ್ಣವಾಗಿ ತೆರೆದಿರುವವೆಂಬದನ್ನು ತಪ್ಪದೆ ನೋಡಿಕೊಳ್ಳತಕ್ಕದ್ದು. ತೆರೆದ ಕಿಡಿಕೆಯಿಂದ ಗಾಳಿಯು ಒಂದೇಸವನೆ ಹುಡುಗರ ಮೇಲೆ ಬೀಸುತ್ತಿದ್ದರೆ ಅದರ ಕೆಳಗಿನ ಬದಿಯ ಅರ್ಧ ಭಾಗಕ್ಕೆ ಒಂದು ಪಡಪೆಯನ್ನು ಕಟ್ಟತಕ್ಕದ್ದು.

ಬಹುತರವಾಗಿ ನಮ್ಮ ಶಾಲೆಯ ಮನೆಗಳಲ್ಲಿ ಸಾಕಷ್ಟು ಹವೆ ಬೆಳಕುಗಳು ಸೊರೆಯುವದಿಲ್ಲ. ಇಂಥ ಪರಿಸ್ಥಿತಿಯಲ್ಲಿ ಸಾಲೆಯ ವರ್ಷಾಂಡಾದಲ್ಲಿ ಕೆಲವು ಹೊತ್ತಾದರೂ ಹುಡುಗರನ್ನು ಕೂಡಿಸಬಹುದು. ಕೆಲವು ಸಾಲೆಗಳಲ್ಲಿ ಆವರಣದೊಳಗೆ ಇಲ್ಲವೆ ಸರಿಯಲ್ಲಿ ದೊಡ್ಡ ಮರಗಳು ಇರುವದುಂಟು. ಇವುಗಳ ಸರಳಿನೊಳಗೆ ಸಾಲೆಯನ್ನು ಹಾಕುವದು ಬಹಳ ಹಿತಕರವಾದದ್ದು. ಸುಧಾರಿಸಿದ ದೇಶಗಳಲ್ಲಿ ಈ ಪದ್ಧತಿಯಿಂದ ವಿದ್ಯಾರ್ಥಿಗಳ ಆರೋಗ್ಯವು ಚೆನ್ನಾಗಿ ಸುಧಾರಿಸುವದೆಂದು ಗೊತ್ತುಪಡಿಸಿರುವರು. ಒಟ್ಟಿನ ಮೇಲೆ ಹವೆ ಬೆಳಕುಗಳ ನಿಜವಾದ ಮಹತ್ವವನ್ನು ಅರಿತು, ಅವು ನಮ್ಮ ವಿದ್ಯಾರ್ಥಿಗಳಿಗೆ ಅದಷ್ಟು ಜೆಚ್ಚಾಗಿ ದೊರೆಯುವಂತೆ ಮಾಡುವ ಶಿಕ್ಷಕನೇ ತನ್ನ ಉದ್ಯೋಗದ ಗೌರವವನ್ನು ಅರಿತವನೆಂದು ಹೇಳಬಹುದು.

ಕೆಲವು ಶಾಲೆಗಳು ಮಠ ಗುಡಿಗುಂಡಾರ ಇವುಗಳಲ್ಲಿ ಇರುವವಷ್ಟೇ. ನಮ್ಮಲ್ಲಿ ಗುಡಿಗಳು ಪೂರ್ವಮುಖವಾಗಿರುವ ಮೂಲಕ ಪಾಗು ಬೆಳಕಿಗೆ ಎದುರಾಗಿರುವ ಮೂಲಕ ಎಷ್ಟೋ ಶಾಲೆಗಳಲ್ಲಿ ಹುಡುಗರು ಮುಂಜಾನೆ ಸಾಲಿಗೆ ಬಂದ ಕೂಡಲೆ ಬಿಸಿಲಿನಲ್ಲಿಯೇ ಕೂಡಬೇಕಾಗುವದು. ಹೀಗೆ ಬೆಳಕಿಗೆ ಎದುರಾಗಿ ಹುಡುಗರನ್ನು ಕೂಡಿಸುವದು ಅಪಾಯಕರವಾದದ್ದು. ಬೆಳಗಿನ ಬಿಸಿಲು ಪಿತ್ತಕರವೆಂದು ಹಿರಿಯರು ಹೇಳುವದುಂಟು. ಈ ಮೂಲಕ ಹುಡುಗರು ಶಾಲೆಯಲ್ಲಿ ಬಳಲಿ ಉತ್ಸಾಹವಿಲ್ಲದಾಗುವರು; ಇಷ್ಟೇ ಅಲ್ಲ, ಮೀರಿದ ಬೆಳಕು ಕಣ್ಣಿನ ಮೇಲಾಗಲಿ ಪುಸ್ತಕದ ಮೇಲಾಗಲಿ ಬೀಳುವದರಿಂದ ಕಣ್ಣು ಕೆಡುವವು. ಇದನ್ನು ತಿರಿಯದ ಶಿಕ್ಷಕರು ಶಿಕ್ಷಣದ ಉದ್ಯೋಗವನ್ನು ಕೈಕೊಳ್ಳಲು ಅರ್ಹರಲ್ಲವೆಂದು ಧಾರಾಳವಾಗಿ ಹೇಳಬಹುದು. ಇಂಥ ಸ್ಥಳಗಳಲ್ಲಿ ಶಾಲೆ ಹಾಕಬೇಕಾದಲ್ಲಿ, ಜಾಪೆ ಗುಡಾರ ಮೊದಲಾದವುಗಳನ್ನು ಮೇಲಿನ ಅರ್ಧ ಭಾಗದವರೆಗಾದರೂ ಕಟ್ಟಿಸಿ ಮೀರಿದ ಬೆಳಕನ್ನು ಕಡಿಮೆಮಾಡತಕ್ಕದ್ದು.

ಇನ್ನು ಆರೋಗ್ಯದ ದೃಷ್ಟಿಯಿಂದ ವಿದ್ಯಾರ್ಥಿಗಳಿಗೆ ನಾವು ಯಾವ ಶಿಕ್ಷಣವನ್ನು ಕೊಡುವೆವೆಂಬದನ್ನು ಕುರಿತು ತುಸು ವಿಚಾರಿಸುವ. ಶಾರೀರಿಕ ಶಿಕ್ಷಣವನ್ನು ಕೊಡುವದಕ್ಕಾಗಿ ನಾವು ಅವರಿಂದ ಆಟಗಳನ್ನು ಆಡಿಸುವೆವು; ಡ್ರಿಲ್ ಮಾಡಿಸುವೆವು; ನಮಸ್ಕಾರಗಳನ್ನು ಹಾಕಿಸುವೆವು. ಇವುಗಳಿಂದ ಆರೋಗ್ಯವು ಬೆಳೆಯುವದೆಂಬದರಲ್ಲಿ ಸಂದೇಹವಿಲ್ಲ. ಆದರೆ ಇವುಗಳನ್ನು ನಾವು ಸರಿಯಾಗಿ ಮಾಡಿಸುವದಿಲ್ಲ. ಹೆಸರಿಗೆ ಇಲ್ಲವೆ ತೋರಿಕೆಗೆ ಮಾಡಿಸುವ ಶಿಕ್ಷಕರೇ ಬಹಳವೆಂದು ವಿಷಾದದಿಂದ ನಮ್ಮ ಅನುಭವವನ್ನು ಹೇಳಬೇಕಾಗುತ್ತದೆ. ಇವೆಲ್ಲವನ್ನು ನಿತ್ಯವೂ ಅಂದರೆ ಒಂದು ದಿನ ಸಹ ತಪ್ಪದೆ ದಿನಾಲು ನಿಯಮಿತ ವೇಳೆಯಲ್ಲಿ ಮಾಡಿಸುವದು ಒಳ್ಳೇ ಮಹತ್ವವಾದದ್ದು. ಸಾಲೆಗೆ ಹುಡುಗರು ಬಂದ ಕೂಡಲೆ ಮುಂಜಾನೆ ತೀರ ಸ್ವಲ್ಪವೆಂದರೆ ಹತ್ತು ನಿನಿಟುಗಳ ವರೆಗೆ ಸಾಲೆಯ ಹೊರಗೆ ಮೈದಾನ, ವರ್ಹಾಂಡಾ ಇಲ್ಲವೆ ಬೀದಿಯಲ್ಲಿ ಡ್ರಿಲ್ ಮಾಡಿಸತಕ್ಕದ್ದು. ಎಷ್ಟೋ ಕಡೆಗೆ ಅಂಗಿ, ಕೋಟು, ಟೊಪ್ಪಿಗೆ ರುಮಾಲು ಇವುಗಳನ್ನು ಹಾಕಿಕೊಂಡಂತೆಯೇ ಹುಡುಗರನ್ನು ಡ್ರಿಲ್ಲಿಗೆ ನಿಲ್ಲಿಸುವದುಂಟು. ಈ ಬಂಧನಗಳಿಂದ ಡ್ರಿಲ್ಲು ಸರಿಯಾಗಿ ಸಾಗುವದಿಲ್ಲೆಂಬದನ್ನು ಹೇಳಬೇಕೇ? ಡ್ರಿಲ್ ಮಾಡುವಾಗ ಪ್ರತಿಯೊಂದು ಅಂಗದ ಅಂದರೆ ಶರೀರದ ಭಾಗದ ಸ್ನಾಯುಗಳು ಚಟುವಟಿಕೆಯಿಂದಲೂ ಶಕ್ತಿಯನ್ನು ಉಪಯೋಗಿಸಿಯೂ ಕೆಲಸ ಮಾಡಬೇಕಾಗುವದು. ಹೀಗೆ ಪ್ರತಿಯೊಂದು ಅಭ್ಯಸನದಲ್ಲಿ ಕೆಲಸದಲ್ಲಿ ತೊಡಗಿರುವ ಸ್ನಾಯುಗಳಿಗೆ ಶ್ರಮ ಬೀಳದಿದ್ದರೆ ಹಾಗು ಈ ಸ್ನಾಯುಗಳು ಕೆಲಸ ಮಾಡಿ ಬಲಿಯುತ್ತಿರುವವೆಂಬ ಕಲ್ಪ

ನೆಯು ವಿದ್ಯಾರ್ಥಿಗಳ ಲಕ್ಷ್ಯದಲ್ಲಿ ಬಾರದಿದ್ದರೆ, ಆ ಡ್ರಿಲ್ಲಿನಿಂದ ಪ್ರಯೋಜ ವಾಗುವದಿಲ್ಲ. ಅಧಿಕಾರವಾಣಿಯಿಂದ ಆಜ್ಞೆಗಳನ್ನು ಕೊಟ್ಟು ಹತ್ತು ಮಿ ಟನ ಡ್ರಿಲ್ಲಿನಿಂದ ಶಾರೀರಿಕ ಶ್ರಮವು ಆಗುವಂತೆ ಡ್ರಿಲ್ ಮಾಡಿಸಿದ ಹೊರ ಡ್ರಿಲ್‌ನಿಂದ ವ್ಯರ್ಥಕಾಲಹರಣವಾಗುವದೆಂಬದನ್ನು ಶಿಕ್ಷಕರು ಮರೆಯಲಾಗದ

ಆಟಗಳನ್ನಾಡಿಸಲಿಕ್ಕೆ ಸಂಜೆಯ ವೇಳೆಯು ಮೇಲಾದದ್ದು; ಇವುಗಳನ್ನು ದಿನಾಲು ಆಡಿಸಬೇಕು. ವಿದ್ಯಾರ್ಥಿಗಳ ಶಾರೀರಿಕ ಶಿಕ್ಷಣವನ್ನು ಸಾಧಿಸಲಿಕ್ಕೆ ಇಂಥ ಬೇರೊಂದು ಉಪಾಯವಿಲ್ಲೆಂದು ಶಿಕ್ಷಣಶಾಸ್ತ್ರಜ್ಞರ ಅಭಿಪ್ರಾಯವು ಇದಕ್ಕೆ ಹಲವು ಕಾರಣಗಳುಂಟು. ಆಟಿಗಳೆಂದರೆ ಹುಡುಗರಿಗೆ ಸ್ವಾಭಾವಿ ಪಾಗಿ ಹುರುಪು ಬರುವದು ಭರದಿಂದ ಆಟವಾಡುವಾಗ ಶರೀರದ ಎಲ್ಲ ಸ್ನಾಯು ಗಳಿಗೆ ಕೆಲಸವು ಸಿಕ್ಕುವದು. ಪಣ್ಣ ಹುಡುಗರು ಹುರುಪಿನಿಂದ ಆಡಬಹುದಾದ ಹಲವು ಆಟಗಳು ಸ್ಕೌಟ ಪದ್ಧತಿಯಲ್ಲಿ ಇರುವವು. ಇವಕ್ಕೆ ವೆಚ್ಚ ತಗಲುವದಿಲ್ಲ ಇವುಗಳಿಗೆ ಸ್ಥಳವೂ ಬಹಳ ಬೇಕಾಗುವದಿಲ್ಲ. ಆದರೆ ಹುಡುಗರು ಆಟವಾಡ ನಾಗ ಶಿಕ್ಷಕರು ಮಾತ್ರ ಮೇಲ್ನೋಡುತ್ತಿರಬೇಕು; ಅವರೊಡನೆ ಆಟದಲ್ಲಿ ಸೇರಿದರೂ ಒಳ್ಳೆತೇ. ಆಟಗಳನ್ನು ನಿಯಮಾನುಸಾರವಾಗಿ ಆಡಿಸಿದರೆ ಆರೋಗ್ಯವ ಪೆಚ್ಚಿ ಶರೀರವು ಸುದೃಢವಾಗುವದಲ್ಲದೆ ಹಲವು ನೈತಿಕ ಚಟಗಳು ಹುಡುಗರಲ್ಲಿ ನೆಲೆಗೊಳ್ಳುವವು.

ಇತ್ತಲಾಗಿ ಕೆಲವು ಶಾಲೆಗಳಲ್ಲಿ ನಮಸ್ಕಾರ ಪದ್ಧತಿಯನ್ನು ರೂಢಿಯಲ್ಲಿ ತರಲು ಪ್ರಯತ್ನಗಳು ನಡೆದಿರುವವು. ಇವನ್ನೂ ದಿನಾಲು ನಿಯಮಿತ ಕಾಲಕ್ಕೆ ಸ್ವಲ್ಪ ಹೊತ್ತು ರೂಢಿ ಮಾಡಿಸತಕ್ಕದ್ದು.

ಆರೋಗ್ಯದ ಚಟಗಳು ಒಂದೆರಡುಂಟು. ಇವು ಶಿಕ್ಷಕರ ಲಕ್ಷ್ಯದಲ್ಲಿ ಬರುವದಿಲ್ಲ. ತೀರ ಪರಿಚಿತವಾದ ಸಂಗತಿಗಳನ್ನು ಮರೆತುಬಿಡುವದು ಮನುಷ್ಯ ಸ್ವಭಾವದ ಒಂದು ಕೊರತೆಯು. ಶಾರೀರಿಕ ಶಿಕ್ಷಣವೆಂಬ ದೊಡ್ಡ ಪೆಸರಿನಿಂದ ನಾವು ಡ್ರಿಲ್, ವ್ಯಾಯಾಮ, ಆಟ ಮೊದಲಾದವುಗಳ ಮಹತ್ವವನ್ನು ಕೊಂಡಾಡುತ್ತೇವೆ. ಅವುಗಳನ್ನು ಹುಡುಗರಿಂದ ಮಾಡಿಸುತ್ತೇವೆ. ಆದರೆ ಒಬ್ಬ ಶಾಸ್ತ್ರಜ್ಞನು ಹೇಳಿದ್ದೇನೆಂದರೆ–"ಹುಡುಗನು ಸರಿಯಾಗಿ ಕೂಡ್ರಬೇಕು; ಸರಿಯಾಗಿ ನಿಲ್ಲಬೇಕು; ಸರಿಯಾಗಿ ನಡೆಯಬೇಕು. ಇದನ್ನು ನೋಡಿಕೊಳ್ಳುವ ಶಿಕ್ಷಕನು ಆತನ ಆರೋಗ್ಯದ ಬಗ್ಗೆ ಹೆಚ್ಚು ಚಿಂತಿಸುವ ಕಾರಣವಿಲ್ಲ" ಈ ಚಟುಗಳು ಶಾರೀರಿಕ ಶಿಕ್ಷಣದ ಪರಿಣಾಮಗಳಾಗಿರಬೇಕೆಂದು ಎಲ್ಲರೂ ಒಪ್ಪಿಕೊಳ್ಳುವದು; ಇವು ಆರೋಗ್ಯದ ಕುರುಹುಗಳೆಂಬದನ್ನು ಸಹ ಶಿಕ್ಷಕರು ಒಪ್ಪಿಕೊಳ್ಳು

ವರು. ಆದರೆ ಇವು ನಮ್ಮ ವಿದ್ಯಾರ್ಥಿಗಳಲ್ಲಿ ಕಾಣದಿರುವದು ನಮ್ಮ ದೋಷ ವೆಂಬದನ್ನು ಯಾರೂ ಲಕ್ಷ್ಯಕ್ಕೆ ತರುವದಿಲ್ಲ. ಐದಾರು ವರುಷ ಶಾಲೆ ಕಲಿತ ಹುಡುಗನನ್ನು ನೋಡಿರಿ. ಅವನು ಮುದುಕರು ಕೂಡ್ರುವಂತೆ ಟೊಂಕದಲ್ಲಿ ಶಕ್ತಿಯಿಲ್ಲದವನಂತೆ ಮುದುಡಿಕೊಂಡು ಕೂಡ್ರುವನು; ಅಷ್ಟಾವಕ್ರನಾಗಿ ನಿಲ್ಲುವನು; ಸೋಮಾರಿಯಂತೆ ನಡೆಯುವನು. ಶಾಲೆಯಲ್ಲಿ ಐದಾರು ವರ್ಷ ಈ ಚಟವು ಬಿದ್ದ ಮೂಲಕ ಅವನ ಸ್ನಾಯುಗಳೆಲ್ಲ ಬಲಹೀನವಾಗಿರುವವು. ಮುಂದೆ ಅವನ ಆಯುಷ್ಯದಲ್ಲೆಲ್ಲ ಅವನು ಹೀಗೆಯೇ ನೋವಿನಿಂದ ಬಳಲುತ್ತಿರುವ ಪ್ರಾಣಿಗಿಂತ ಕೆಡೆಯಾಗಿ ಜೀವಿಸಬೇಕಾಗುವದು. ಬಾಗದೆ, ಎದೆ ಮುಂದೆ ಮಾಡಿ ಕೂಡಲಿಕ್ಕೂ ತಲೆಯೆತ್ತಿ ನಿಲ್ಲಲಿಕ್ಕೂ ಧೀರನಂತೆ ದಿಟ್ಟತನದಿಂದ ನಡೆಯಲಿಕ್ಕೂ ಹುಡುಗರಿಗೆ ರೂಢಿ ಮಾಡಿಸುವದು ಪ್ರತಿಯೊಬ್ಬ ಶಿಕ್ಷಕನ ಕರ್ತವ್ಯವು. ಇದನ್ನು ಸಾಧಿಸಲಿಕ್ಕೆ ವ್ಯಾಯಾಮ ಬೇಡ, ವೇಳೆ ಬೇಡ, ಸ್ಥಳ ಬೇಡ ಇತರ ಯಾವ ಅನುಕೂಲತೆಗಳೂ ಬೇಡ. ಪ್ರತಿಕ್ಷಣವೂ ಹುಡುಗರು ಕೂಡ್ರುವದು, ನಿಲ್ಲುವದು, ಓಡಾಡುವದು ಇವುಗಳನ್ನು ಸರಿಯಾಗಿ ಸಾಗಿಸುತ್ತಿರುವರೆಂಬದನ್ನು ನೋಡಿ ಅವರನ್ನು ಎಚ್ಚರಗೊಳಿಸಬೇಕಾಗುತ್ತದೆ. ಇವು ಆರೋಗ್ಯದ ಚಟಗಳು. ಇವುಗಳನ್ನು ವಿದ್ಯಾರ್ಥಿಗಳಲ್ಲಿ ನಾವು ನಲಿಗೊಳಿಸತಕ್ಕದ್ದು.

ಆರೋಗ್ಯವನ್ನು ಕಾಯ್ದುಕೊಳ್ಳಬೇಕಾದರೆ, ಅನಾರೋಗ್ಯಕರವಾದ ಚಟಗಳನ್ನು ನಿಲ್ಲಿಸಬೇಕೆಂದು ಹೇಳಲವಶ್ಯವಿಲ್ಲ. ಆದರೂ ಆರಂಭದಿಂದ ನಮ್ಮ ವಿದ್ಯಾರ್ಥಿಗಳಲ್ಲಿ ಇಂಥ ಚಟಗಳು ನಲಿಗೊಳ್ಳುತ್ತವೆ. ಇವುಗಳನ್ನು ತಪ್ಪಿಸಲಿಕ್ಕೆ ಬಹಳ ವೇಳೆಗಳು ಬೇಕಾಗುವದಿಲ್ಲ. ಇವು ಶಿಕ್ಷಕರ ಲಕ್ಷ್ಯದಲ್ಲಿ ಬರುವದಿಲ್ಲೆಂದು ಹೇಳಲಿಕ್ಕಾಗದು; ಆದರೆ ಇವುಗಳನ್ನು ನಾಶಪಡಿಸಲು ಅವರು ಉಪಾಯಗಳನ್ನು ಬಹಳ ಸುಲಭಸಾಧ್ಯವಿದ್ದರೂ ಮಾಡುವದಿಲ್ಲೆಂದು ಹೇಳಬಹುದು. ಇಂಥ ಕೆಲವು ಕೆಟ್ಟ ಚಟಗಳನ್ನು ಇಲ್ಲಿ ಹೇಳುವೆವು.

ಹುಡುಗರು ಪಾಟಿಗಳ ಮೇಲೆ ಬರೆದದ್ದನ್ನು ಅಳಿಸಲಿಕ್ಕಾಗಿ ಉಗುಳು ಹಚ್ಚುವರು. ಇದು ಬಹು ಅಸಹ್ಯಕರವಾದ ರೂಢಿಯು. ಇದು ಉಂಟಾಗಲಿಕ್ಕೆ ಶಿಕ್ಷಕರೇ ಕಾರಣರು. ಶಾಲೆಯಲ್ಲಿ ಸಣ್ಣ ಗಡಿಗೆಯಲ್ಲಿ ತುಸು ನೀರು ಹಾಗು ಎರಡು ಹಳೆ ಅರಿವೆಯ ತುಂಡುಗಳು ಇದ್ದರೆ ಈ ಚಟವನ್ನು ಸುಲಭವಾಗಿ ತಪ್ಪಿಸಬಹುದು. ಎಷ್ಟೋ ಹುಡುಗರು ಹೀಗೆ ಹೊಲಸು ಮಾಡಿದ ಪಾಟಿಗಳನ್ನು ತಮ್ಮ ಅಂಗಿಗಳ ಮುಂಬದಿಯಿಂದ ಒರಿಸಿ ಅಂಗಿಯ ಆ ಭಾಗವನ್ನು ಅಸಹ್ಯವಾಗಿ ಮಾಡುವದುಂಟು.

ಪೆನಸಿಲವನ್ನಾಗಲಿ ಸೀಸಕಡ್ಡಿಯನ್ನಾಗಲಿ ಬಾಯಲ್ಲಿ ಮೇಲಿಂದ ಮೇಲೆ ಸೆಕ್ಕುವ ಚಟವೂ ಸಾಮಾನ್ಯವಾದದ್ದು. ಪಾಟಿಯ ಮೇಲೆ ಇಲ್ಲವೆ ಕಾಗದದ ಮೇಲೆ ಇವು ಚೆನ್ನಾಗಿ ಮೂಡಬೇಕೆಂದೇ ಹೀಗೆ ಅವರು ಮಾಡುವರು. ಪಾಟಿಯನ್ನು ಸ್ವಚ್ಛವಾಗಿಟ್ಟರೆ ಹಾಗು ಮೂಡುವಂಥ ಮಿದುವಾದ ಸೀಸದ ಕಡ್ಡಿಗಳನ್ನೇ ಅವರು ಉಪಯೋಗಿಸುವಂತೆ ನೋಡಿಕೊಂಡರೆ ಈ ದುಶ್ಚಟವು ದೂರವಾಗುವದು.

ನಮ್ಮ ಹುಡುಗರಿಗೆ ಧೂಳು, ಕಸ, ಕುಪ್ಪೆ, ಕಾಗದದ ಚೂರುಗಳು ಮುಂತಾದವುಗಳಿರುವಲ್ಲಿ ಕೂಡ್ರಲಿಕ್ಕೆ ಜೀವಿಗೆ ಬರುವದಿಲ್ಲ; ಈ ಬಗ್ಗೆ ಶಿಕ್ಷಕರಿಂದಲೂ ಅವರಿಗೆ ಎಚ್ಚರಿಕೆಯು ಸಿಕ್ಕುವದಿಲ್ಲ. ಇದು ಸೋಜಿಗದ ಸಂಗತಿಯು. ನಮ್ಮ ಸುತ್ತಲು ಹರಕು ಕಾಗದ ಧೂಳು ಕಸ ಮೊದಲಾದವು ಇರುವದರಿಂದ ಮನಸ್ಸಿಗೆ ಅಸಹ್ಯವೆನಿಸತಕ್ಕದ್ದು; ಈ ಮಾನಸಿಕ ಒಲವು ಶಾಲೆಗಳಲ್ಲಿ ಹುಡುಗರು ಸಣ್ಣವರಿರುವಾಗಲೇ ಬಲವಾಗಿ ಅವರಲ್ಲಿ ನೆಲೆಗೊಳ್ಳತಕ್ಕದ್ದು. ಇದಕ್ಕಾಗಿ ಬಹಳ ಶ್ರಮಪಡಬೇಕಾಗಿಲ್ಲ. ಕಸ ಕುಪ್ಪೆಗಳನ್ನು ಶಾಲೆಯ ಕೋಣೆಯಲ್ಲಿ ಕ್ಷಣಮಾತ್ರವೂ ಇರಗೊಡಬಾರದು ಎಷ್ಟೋ ಶಾಲೆಗಳಲ್ಲಿ ಕಡಲೆಯ ಪೈರು ಭರದಲ್ಲಿರುವಾಗ ವರ್ಗಗಳು ಗೋದಲಿಯಂತೆ ಕಾಣುವವು; ನೆಲಗಡಲೆಯ ಸುಗ್ಗಿಯಲ್ಲಿ ಗಿರಣಿಗಳಂತೆ ಕಾಣುವವು. ಶಾಲೆಗೆ ಬಂದ ಹುಡುಗರು ಧೂಳು ಜಾಡಿಸದೆ ನೆಲದ ಮೇಲೆ ಕೂಡ್ರುವರು. ಎಷ್ಟೋ ಶಾಲೆಗಳಲ್ಲಿ ಹುಡುಗರು ತಮ್ಮ ತಮ್ಮ ಗೋಣಿಯ ತಟ್ಟುಗಳನ್ನು ತಂದು ಓರಣದಿಂದ ಹಾಸಿಕೊಂಡು ಕುಳಿತಿರುವದನ್ನು ಕಾಣಬಹುದು. ಎಲ್ಲ ಶಾಲೆಗಳಲ್ಲಿ ಈ ರೂಢಿಯು ಇಲ್ಲದಿರುವದು ದುಃಖದಾಯಕವಾದದ್ದು.

ಹುಡುಗರು ಶಾಲೆಗೆ ಕೈಕಾಲು ಮೋರೆಗಳನ್ನು ತೊಳೆದುಕೊಂಡೇ ಬರಬೇಕೆಂಬ ನಿರ್ಬಂಧವಿರಬೇಕು. ಹಸನಾಗಿ ಬಾರದಿರುವವರನ್ನು ಮನೆಗೆ ಕಳಿಸಿ ಸ್ವಚ್ಛವಾಗಿ ಬರಲು ಒತ್ತಾಯಪಡಿಸಬೇಕು. ಹೀಗೆ ನಾಲ್ಕಾರು ದಿನ ತಪ್ಪದೆ ಮಾಡಿದರೆ ಈ ದುಷ್ಟ ರೂಢಿಯು ಆರಂಭದಲ್ಲಿಯೇ ಇಲ್ಲವಾಗುವದು. ಹೊಲಸು ಮಾಡಿಕೊಂಡ ಅರಿವೆ ಅಂಚಡಿಗಳಿಂದ ಶಾಲೆಗೆ ಬರುವ ಹುಡುಗರ ತಾಯ್ತಂದೆಗಳಿಗೆ ಜೀವಿ ಅವುಗಳನ್ನು ಒಗೆದು ಸ್ವಚ್ಛವಿಡಲು ಪ್ರಯತ್ನಿಸಬೇಕು. ಹರಕು ಅರಿವೆಗಳನ್ನು ಹೊಲಿಸಿಕೊಂಡು ಬರಲಿಕ್ಕಾಗಿ ಹುಡುಗರನ್ನು ಮನೆಗೆ ಕಳಿಸಬಹುದು.

ಶಾಲೆಯ ಮುಂಭಾಗವನ್ನು ಯಾವಾಗಲೂ ಸ್ವಚ್ಛವಿಡಬೇಕು. ಈ ಕೆಲಸಕ್ಕಾಗಿ ಹುಡುಗರ ಸಹಾಯವನ್ನು ತೆಗೆದುಕೊಳ್ಳತಕ್ಕದ್ದು. ಹೊಲಸು, ಕಸ

ಮುಂತಾದವುಗಳಿಂದ ತುಂಬಿದ ಸ್ಥಳದಲ್ಲಿ ಉಗುಳಲಿಕ್ಕೂ ಕಸ ಕಾಗದಗಳನ್ನು ಚಲ್ಲಲಿಕ್ಕೂ ಹುಡುಗರು ಹಿಂಜರಿಯುವದಿಲ್ಲ. ಹಸನಾದ ಸ್ಥಳವನ್ನು ಹೊಲಸು ಮಾಡಲಿಕ್ಕೆ ಅವರಿಗೆ ಮನಸಾಗುವದಿಲ್ಲ. ಶಾಲೆಯ ಮುಂದೆ ಕಿಡಿಕಿಗಳ ಹೊರಗೆ ಉಗುಳುವ ದುಷ್ಟ ರೂಢಿಯನ್ನು ನಿಲ್ಲಿಸಬೇಕು. ಉಗುಳು ಭಯಂಕರವಾದ ರೋಗಗಳನ್ನು ಹಬ್ಬಿಸಲು ಒಂದು ಸಾಧನವು. ಸುಧಾರಿಸಿದ ದೇಶಗಳಲ್ಲಿ ಸಾರ್ವಜನಿಕ ರಸ್ತೆಗಳಲ್ಲಿ ಉಗುಳಿದವನನ್ನು ಅಪರಾಧಿಯೆಂದೆಣಿಸಿ ಶಿಕ್ಷೆಗೆ ಗುರಿ ಮಾಡುವರು. ನಮ್ಮಲ್ಲಿಯೂ ಈ ದುಷ್ಟ ರೂಢಿಯು ಇಲ್ಲದಾಗಬೇಕಾದರೆ ಹುಡುಗರಿಗೆ ಶಾಲೆಯಲ್ಲಿ ಈ ಬಗ್ಗೆ ಶಿಕ್ಷಣ ದೊರೆಯುವದು ಮಹತ್ವವಾದದ್ದು.

ಆರೋಗ್ಯರಕ್ಷಣೆಯ ಚಟಗಳನ್ನು ಕುರಿತು ವಿಚಾರಿಸುವಾಗ ಶಾಲೆಯಲ್ಲಿ ಸುಲಭವಾಗಿ ಹರಡಬಹುದಾದ ತೀರ ಸಾಮಾನ್ಯವಾದ ಕೆಲವು ರೋಗಗಳ ಬಗ್ಗೆ ಜಾಗ್ರತೆಯಿಂದಿರುವದರ ಮಹತ್ವವನ್ನು ಮರೆಯಲಾಗದು ಶಾಲೆಗಳಲ್ಲಿ ಹಲವು ಸ್ಥಿತಿಗಳ ಮನೆತನಗಳಿಂದ ಬಂದ ಹುಡುಗರು ಒತ್ತಟ್ಟಿಗೆ ಕೂಡುವರು. ಆದ್ದರಿಂದ ಅಲ್ಲಿ ಅಂಟುರೋಗಗಳು ತೀವ್ರವಾಗಿ ಹಬ್ಬುವವು. ಇವುಗಳಲ್ಲಿ ಕಣ್ಣುಬೇನೆ, ಕಜ್ಜಿ ತದ್ದು ಮೊದಲಾದವು ತೀರ ಸಾಮಾನ್ಯವಾದವು; ಮೈಲಿ, ಗೊಬ್ಬರ, ಕೋಡಿಗೆಗೆಮ್ಮು, ಗುದ್ದವ್ವನಬೇನೆ ಇವು ನಿಯಮಿತ ಕಾಲದಲ್ಲಿ ಬರುವವು; ಇವುಗಳ ಸುಳಿವು ಕಂಡಕೂಡಲೆ ರೋಗಪೀಡಿತರಾದವರನ್ನು ಶಿಕ್ಷಕರು ಮನೆಗೆ ಕಳಿಸಬೇಕು. ಶಾಲೆಗೆ ಬರುವ ಹುಡುಗರ ಆರೋಗ್ಯ ರಕ್ಷಣೆಯ ಭಾರವು ಶಿಕ್ಷಕನ ಮೇಲಿರುವದೆಂಬದನ್ನು ಆತನು ಮರೆಯುವದು ಕ್ಷಮ್ಯವಲ್ಲ. ಹಳ್ಳಿಗಳಲ್ಲಿ ಔಷಧೋಪಚಾರದ ಅನುಕೂಲ್ಯಗಳು ಬಹಳ ಕಡಿಮೆ; ಮೇಲೆ ಹೇಳಿದ ರೋಗಗಳಲ್ಲಿ ಆರಂಭದಲ್ಲಿ ತಕ್ಕ ಉಪಾಯಗಳನ್ನು ಮಾಡಿದರೆ ರೋಗವು ಬೀಜರೂಪದಲ್ಲಿರುವಾಗಲೇ ಕಮರಿಹೋಗುವದು. ಈ ಉಪಾಯಗಳು ತೀರ ಸುಲಭವಾದವೂ ಸುಸಾಧ್ಯವಾದವೂ ಇರುತ್ತವೆ. ಇವುಗಳನ್ನು ಕೈಕೊಳ್ಳುವ ಬಗ್ಗೆ ಮನಮುಟ್ಟುಹೋಗಿ ತಾಯ್ತಂದೆಗಳಿಗೆ ತಿಳಿಸುವದು ಶಿಕ್ಷಕನ ಕರ್ತವ್ಯವಲ್ಲವೇ? ಇದರಿಂದ ಶಿಕ್ಷಕನಿಗೆ ಪುಣ್ಯಬರುವದೆಂಬದನ್ನು ಯಾರು ಅಲ್ಲಗಳೆಯುವರು? ಮೇಲಾಗಿ ತಮ್ಮ ಹುಡುಗರ ಬಗ್ಗೆ ಶಿಕ್ಷಕನು ಇಷ್ಟು ಕಾಳಜಿ ಮಾಡುವನೆಂಬದನ್ನು ಜರಿತ ತಾಯ್ತಂದೆಗಳೂ ಪಾಲಕರೂ ಇದ್ದರೆ ಶಿಕ್ಷಕನ ವರ್ಚಸ್ಸವು ಎಷ್ಟು ಬೆಳೆಯುವದು! ಇವನ್ನೆಲ್ಲ ವಿಚಾರಿಸಿದರೆ ಹುಣ್ಣು, ಹುರುಕು, ಪಿಚ್ಚುಕಣ್ಣು, ಕೆಮ್ಮು ಮೊದಲಾದ ಸುಂಕರೋಗಗಳಿಂದ ಪೀಡಿತರಾಗಿ ಬಳಲುತ್ತಿರುವ ಹುಡುಗರನ್ನು ಶಾಲೆಯಲ್ಲಿ ನೋಡಿದರೆ ಎಷ್ಟು ಮನೋವ್ಯಥೆಯಾಗಿ ಉದ್ವೇಗವು ಬರುವದು.

ಈ ವ್ಯಾಖ್ಯಾನದಲ್ಲಿ ಆರೋಗ್ಯದ ಬಗ್ಗೆ ಉದ್ದಉದ್ದವಾದ ತಾತ್ವಿಕೋಪ ದೇಶಗಳನ್ನು ಮಾಡದೆ. ಪ್ರತಿಯೊಬ್ಬ ಶಿಕ್ಷಕನು ಪ್ರತಿದಿನದ ಕೆಲಸದಲ್ಲಿ ಮಾಡ ಬಹುದಾದ ಕೆಲವು ಸಂಗತಿಗಳನ್ನು ನಾವು ವಿವರಿಸಿರುವೆವು. ಆರೋಗ್ಯರಕ್ಷಣೆಯೂ ಆರೋಗ್ಯವೃದ್ಧಿಯೂ ಶಿಕ್ಷಕನ ಮಹತ್ವದ ಕರ್ತವ್ಯಗಳಲ್ಲೊಂದೆಂಬುದು ಇದರಿಂದ ಶಿಕ್ಷಕರ ಮನಸ್ಸಿನಲ್ಲಿ ಬಿಂಬಿಸುವದೆಂದು ಕೋರುತ್ತೇವೆ.

ಶಿಕ್ಷಣ ಸಪ್ತಾಹಗಳು

ಸದ್ಯದ ಶಿಕ್ಷಣಪದ್ಧತಿಗಳಲ್ಲಿ ಕಾಲಾನುಕ್ರಮದಿಂದ ಸುಧಾರಣೆಗಳು ಮುಂದೆ ಗೊಳ್ಳುತ್ತಿರುವವೆಂದು ಶಿಕ್ಷಣದಲ್ಲಿ ತೊಡಗಿದವರಿಗೆಲ್ಲ ಚೆನ್ನಾಗಿ ತಿಳಿದಿರುವದು. ಪಾಶ್ಚಾತ್ಯ ದೇಶಗಳಲ್ಲಂತೂ ಈ ಸುಧಾರಣೆಯು ಬಲವಾಗಿ ಮುಂದುವರಿಯುತ್ತಿರುವದು. ಪ್ರತಿ ತಿಂಗಳಲ್ಲಿ ಶಿಕ್ಷಣ ವಿಷಯವನ್ನು ಉದ್ದೇಶಿಸಿ ಪ್ರಸಿದ್ಧವಾಗುತ್ತಿರುವ ಪುಸ್ತಕಗಳ ಸಂಖ್ಯೆಯನ್ನು ಲಕ್ಷ್ಯಕ್ಕೆ ತಂದರೆ ಈ ಮಾತು ಮನವರಿಕೆಯಾಗುವದು. ನಮ್ಮ ಶಿಕ್ಷಣ ಪ್ರಪಂಚದಲ್ಲಿ ದುಡಿಯುತ್ತಿರುವ ವಿದ್ವಾಂಸರು ಪರದೇಶಗಳಿಗೆ ಮುಖ್ಯವಾಗಿ ಇಂಗ್ಲಂಡಕ್ಕೆ ಹೆಚ್ಚಿನ ಶಿಕ್ಷಣಾಭ್ಯಾಸಕ್ಕಾಗಿ ಹೋಗಿ ಬರುವ ಪರಿಪಾಠವು ಇತ್ತಲಾಗಿ ಹೆಚ್ಚುತ್ತಿರುವದು. ಹೀಗೆ ಸುಧಾರಿಸಿದ ರಾಷ್ಟ್ರಗಳ ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಣದ ಬಗ್ಗೆ ದೊರೆಯುವ ಪರಿಪೂರ್ಣವಾದ ಜ್ಞಾನವನ್ನು ಪಡೆದುಕೊಂಡು ಯುರೋಪಖಂಡದ ಹಲವು ದೇಶಗಳಿಗೆ ಹೋಗಿ ಅಲ್ಲಿಯ ಶಿಕ್ಷಣಕ್ರಮಗಳನ್ನೂ ಶಿಕ್ಷಣ ವ್ಯವಸ್ಥೆಯನ್ನೂ ಅವಲೋಕನಮಾಡಿ ನಮ್ಮದೇಶಕ್ಕೆ ಮರಳಿ ಬಂದು ಪ್ರಾಥಮಿಕ ಮಾಧ್ಯಮಿಕ ಹಾಗು ಉಚ್ಚ ಶಿಕ್ಷಣಾಲಯಗಳಲ್ಲಿ ಕೆಲಸಮಾಡುತ್ತಿರುವ ಹಿಂದ ನಾಗರಿಕರ ಸಂಖ್ಯೆಯು ಸದ್ಯದಲ್ಲಿ ಪ್ರಂ ಯೊಂದು ಪ್ರಾಂತದಲ್ಲಿಯೂ ತಕ್ಕಮಟ್ಟಿಗೆ ಇರುವದು. ಈ ಶಿಕ್ಷಣಾಭಿಮಾನಿಗಳ ಸಂಖ್ಯೆಯು ಹೆಚ್ಚಾದಮೂಲಕ ಆ ದೇಶಗಳಲ್ಲಿಯಂತೆ ನಮ್ಮಲ್ಲಾದರೂ ಶಿಕ್ಷಕರ ಸಂಘಗಳು ಹೆಚ್ಚಾಗಿ ಶಿಕ್ಷಣ ಸಮ್ಮೇಲನಗಳು ವರ್ಷದ ನಿತ್ಯಯೋಜನೆಗಳಾಗಲಾರಂಭಿಸಿವೆ. ನಮ್ಮ ಇಲಾಖೆಗಿಂತ ಮದ್ರಾಸ ಇಲಾಖೆಯಲ್ಲಿ ಇಂಥ ಸಂಘಗಳ ಹಾಗು ಸಮ್ಮೇಲನಗಳ ಸಂಖ್ಯೆಯು ಹೆಚ್ಚಾಗಿದೆ. ಅಲ್ಲಿ ಬಹುಶಃ ಪ್ರತಿಯೊಂದು ಜಿಲ್ಲೆಯಲ್ಲಿ ಒಂದೊಂದು ಶಿಕ್ಷಕರ ಸಂಘವಿರುವದು. ಈ ಸಂಘಗಳು ಬಹುತರವಾಗಿ ಮಾಧ್ಯಮಿಕ ಶಿಕ್ಷಕರಿಂದಲೇ ಆಗಿವೆ. ಇವುಗಳಲ್ಲಿ ಪ್ರತಿವರ್ಷ ಶಿಕ್ಷಣ

ಸಪ್ತಾಹಗಳು ತಪ್ಪದೆ ಒಳ್ಳೇ ಉತ್ಸಾಹದಿಂದ ಜರುಗುವವು. ನಮ್ಮ ಪ್ರಾಂತದ ಲ್ಲಿಯೂ ಇಂಥ ಸಂಸ್ಥೆಗಳು ಹೆಚ್ಚಾಗುತ್ತಿರುವವೆಂಬದು ಸಮಾಧಾನದ ಮಾತು. ಹೀಗೆ ಮಾಧ್ಯಮಿಕ ಶಿಕ್ಷಣ ಪ್ರಪಂಚದಲ್ಲಿ ಶಿಕ್ಷಣ ವಿಷಯದ ಬಗ್ಗೆ ಉಂಟಾದ ಜಾಗ್ರತೆಯು ಪ್ರಾಥಮಿಕ ಶಿಕ್ಷಕರಲ್ಲಿಯೂ ತಲೆದೋರಿ ಅವರಲ್ಲಿ ತಮ್ಮ ಉದ್ಯೋಗದ ಹಲವು ಪ್ರಶ್ನಗಳಬಗ್ಗೆ ಉತ್ಸಾಹವನ್ನು ಅಂಕುರಿಸಿಸಿದ್ದರಲ್ಲಿ ಸೋಜಿಗವಿಲ್ಲ.

ನಮ್ಮ ಭಾಗದಲ್ಲಿ ಎರಡು ವರುಷಗಳಿಂದ ಪ್ರಾಥಮಿಕ ಶಿಕ್ಷಕರು ಒತ್ತಟ್ಟಿಗೆ ಕಲೆತು ಶಿಕ್ಷಣ ಸಪ್ತಾಹಗಳನ್ನು ಸರಪೇರಿಸಿದರು. ಇವುಗಳಿಂದ ಒಳ್ಳೇ ಲಾಭ ವಿರುವದೆಂದು ಅನೇಕರು ಅಭಿಪ್ರಾಯಪಟ್ಟಿರುವದನ್ನು ನಾವು ಕೇಳಿರುವೆವು. ಈ ವರುಷದ ಬೇಸಿಗೆಯ ಶಿಕ್ಷಣ ಯೋಜನೆಯನ್ನು ಎಲ್ಲರ ಅನುಕೂಲತೆಯ ಪೇರೆಗೆ ಚಳಿಗಾಲದಲ್ಲಿ ಸಾಗಿಸಬೇಕೆಂದು ಯೋಚಿಸಿರುವಷ್ಟೇ. ಇದಕ್ಕಾಗಿ ಶಿಕ್ಷಕರಿಂದಲೂ ಸುಪರವಾಯಿಝರೇ ಮೊದಲಾದ ಅಧಿಕಾರಿಗಳಿಂದಲೂ ನಾವು ಸೂಚನೆಗಳನ್ನು ಅಪೇಕ್ಷಿಸುವೆವು. ಈ ಯೋಜನೆಗಳು ಈಗ ಒಂದೆರಡು ಆದ ಮೂಲಕ ಅವುಗಳಲ್ಲಿರುವ ಗುಣದೋಷಗಳು ಎಲ್ಲರ ಲಕ್ಷ್ಯದಲ್ಲಿಯೂ ಬಂದಿರು ವವು. ಇವುಗಳಲ್ಲಿಯ ಕೊರತೆಗಳನ್ನು ಸಾಧ್ಯವಿರುವಮಟ್ಟಿಗೆ ದೂರಮಾಡಿ ಅಲ್ಪ ವೇಳೆಯಲ್ಲಿ ಶಕ್ಯವಿರುವಷ್ಟು ನಿಜವಾದ ಲಾಭವಾಗುವಂತೆ ಮಾಡಿಕೊಳ್ಳುವದೇ ನಮ್ಮ ಉದ್ದೇಶವಿರುವದು.

ಸಾಮಾನ್ಯವಾದ ಕುತೂಹಲದಿಂದ ಇಂಥ ಸಮ್ಮೇಲನಗಳಿಗೆ ಬಂದು ಲಾಭ ಮಾಡಿಕೊಳ್ಳುವದಂತೂ ಹಾಗಿರಲಿ. ತಮ್ಮ ನಿತ್ಯದ ಉದ್ಯೋಗದಲ್ಲಿ ತಮಗುಂಟಾ ಗುತ್ತಿರುವ ಅನುಭವಗಳನ್ನು ತಮ್ಮ ಸಹೋದ್ಯೋಗಿಗಳ ಮುಂದೆ ಇಟ್ಟು ವಿಚಾರ ವಿನಿಮಯದಿಂದ ಶಿಕ್ಷಣಪದ್ಧತಿಗಳ ಯೋಗ್ಯತೆಯನ್ನು ನಿರ್ಣಯಿಸಿ ನಮ್ಮ ಪರಿಸ್ಥಿತಿಯಲ್ಲಿ ಅವುಗಳ ಯುಕ್ತಾಯುಕ್ತತೆಯು ಎಷ್ಟಿರುವದೆಂಬದನ್ನು ನಿಶ್ಚಯಿಸಿ, ಕಾರ್ಯಪರರಾಗುವ ಶಿಕ್ಷಕರು ಈ ಶಿಕ್ಷಣ ಯೋಜನೆಗಳಲ್ಲಿ ಹೆಚ್ಚಾಗಿ ಭಾಗವನ್ನು ವಹಿಸತಕ್ಕದ್ದೆಂದು ನಮ್ಮ ಮತವಿರುವದು. ಮಧ್ಯಭಾಗದಲ್ಲಿ ಈ ಸಮ್ಮೇಲನ ಗಳಿಗೆ ಜೊಸದೊಂದು ಸ್ವರೂಪವು ಉಂಟಾಗಿರುವದೆಂದು ನಾವು ಕೇಳಿಬಲ್ಲೆವು. ಅಲ್ಲಿ ನಡೆಯುವ ಸಮ್ಮೇಲನಕ್ಕೆ ಬರಲಿಚ್ಛಿಸುವ ಶಿಕ್ಷಕರ ಸಂಖ್ಯೆಯನ್ನು ಮರ್ಯಾ ದಿತವಾಗಿ ಮಾಡಬೇಕಾಗಿ ಬಂದಿದೆ. ಇಂತಿಷ್ಟು ಅನುಭವವುಳ್ಳ ಶಿಕ್ಷಕರಿಗೆ ಅವು ಗಳಿಗೆ ಬರಲು ಅನುವು ದೊರೆಯುತ್ತದೆ. ಇವರಲ್ಲಿಯೂ ಅನೇಕರಿಗೆ ಸ್ಥಳದ ಅನು ಕೂಲ್ಯವು ಇಲ್ಲದಮೂಲಕ ಸಮ್ಮೇಲನಕ್ಕೆ ಬರಲು ಅನುಮತಿಯನ್ನು ಕೊಡಲಾಗು ವದಿಲ್ಲ; ಇದು ಒಳಿತಾದದ್ದೆಂದು ನಾವು ಅಭಿಪ್ರಾಯಪಡುವದಿಲ್ಲ. ಆದರೆ ಇದ

ರಿಂದ ಒಂದು ಸಂಗತಿಯು ಸ್ಪಷ್ಟವಾಗುವದು. ಅದು ಯಾವದೆಂದರೆ, ಅಲ್ಲಿ ನಡೆಯುವ ಸಮ್ಮೇಲನಗಳಲ್ಲಿ ಶಿಕ್ಷಕರಿಗೆ ಉಪಯುಕ್ತವಾದ ವಿಷಯಗಳ ಚರ್ಚೆಯೂ ಪಾಠಗಳೂ ಇರಲಿಕ್ಕೆಬೇಕು; ಹಾಗು ಈ ಚರ್ಚೆಗಳಲ್ಲಿ ಸೇರಿ ತಮ್ಮ ಅನುಭವಗಳ ಲಾಭವನ್ನು ಇತರರಿಗೆ ಮಾಡಿಕೊಡುವ ಹುರುಪು ಶಿಕ್ಷಕರಲ್ಲಿ ವಿಶೇಷವಾಗಿ ಇದ್ದಿರಲಿಕ್ಕೇಬೇಕು. ಇದಲ್ಲದೆ, ಇಂಥ ಶಿಕ್ಷಣಯೋಜನಗಳಲ್ಲಿ ನಡೆಯುವ ಚರ್ಚೆಗಳಿಗೂ ನಿಷ್ಕರ್ಷೆಯಾಗುವ ಗೊತ್ತುವಳಿಗಳಿಗೂ ಒಂದು ಬಗೆಯ ಮಹತ್ವವು ಉಂಟಾಗಿ ಇದರಿಂದ ಶಿಕ್ಷಣಕ್ಕೆ ನಿಶ್ಚಿತವಾದ ಲಾಭವು ಆಗುವದು. ಈ ಲಾಭವು ಅನುವರ್ಷವೂ ಹೆಚ್ಚಾಗಿ ಆಗುತ್ತಿರುವದೆಂಬ ಭರವಸೆಯಿಲ್ಲದೆ ಶಿಕ್ಷಣ ಯೋಜನಗಳನ್ನು ಏರ್ಪಡಿಸಿ ಶಿಕ್ಷಕರ ಹಣವನ್ನು ಬಿಡುವನ್ನೂ ವ್ಯಯಮಾಡಿಸಿ, ಪಾಠಗಳನ್ನು ಕಲಿಸಿ ತೋರಿಸುವವರಿಗೂ ವ್ಯಾಖ್ಯಾನಗಳನ್ನು ಹೇಳುವವರಿಗೂ ವ್ಯರ್ಥ ಶ್ರಮವನ್ನು ಕೊಡುವದು ಸರಿಯಲ್ಲವೆಂದು ನಮಗೆ ತೋರುತ್ತದೆ.

ಮೇಲೆ ಹೇಳಿದಂತೆ ಎಲ್ಲ ದೇಶಗಳಲ್ಲಿ ಶಿಕ್ಷಣದ ಬಗ್ಗೆ ಜಾಗ್ರತೆಯೂ ಉತ್ಸಾಹಪೂರ್ಣವಾದ ಕಾರ್ಯಗಳೂ ಜರುಗುತ್ತಿರುವಾಗ ಶಿಕ್ಷಕರ ಶಿಕ್ಷಣ ಕಾರ್ಯದಲ್ಲಿ ತೊಡಗಿರುವ ನಾವೂ ನಮ್ಮ ಭಾಗದ ಪ್ರಾಥಮಿಕ ಶಿಕ್ಷಕರ ಲಾಭಕ್ಕಾಗಿ ಇವುಗಳನು ಏರ್ಪಡಿಸಿ ನಡೆಯಿಸುವದು ನಮ್ಮ ಕರ್ತವ್ಯವೆಂದು ಬಗೆದಿರುವೆವು. ಆದ್ದರಿಂದಲೇ ಕಳೆದ ಬೇಸಿಗೆಯಲ್ಲಿ ಇಂಥದೊಂದು ಸಪ್ತಾಹದಲ್ಲಿ ಧಾರವಾಡದ ಎರಡೂ ಶಿಕ್ಷಕ ಶಿಕ್ಷಣ ಸಂಸ್ಥೆಗಳ ಜಾಲಕರೂ ಶಿಕ್ಷಕರೂ ವಿಶೇಷ ಭಾಗವನ್ನು ತೆಗೆದುಕೊಳ್ಳಬೇಕಾಯಿತು.

ಮೇ ತಿಂಗಳ ಎರಡನೆಯ ತಾರೀಖಿನಿಂದ ಎಂಟನೆಯ ತಾರೀಖಿನವರೆಗೆ ಈ ಊರ ಟ್ರೇನಿಂಗ ಸಂಸ್ಥೆಗಳಲ್ಲಿ ದಕ್ಷಿಣಭಾಗದ ಸೆಟಲ್‌ಮೆಂಟ ಶಾಲೆಗಳ ಶಿಕ್ಷಕ ಶಿಕ್ಷಕೆಯರಿಗಾಗಿ ಒಂದು ಸಪ್ತಾಹವು ನಡೆಯಿತು. ಇದಕ್ಕೆ ಸುಮಾರು ೪೦ ಜನ ಶಿಕ್ಷಕರೂ ೧೫೦ ಜನ ಶಿಕ್ಷಕೆಯರೂ ಬಂದಿದ್ದರು. ಪ್ರತಿದಿವಸ ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜದಲ್ಲಿ ಮುಂಜಾನೆ ಮೂರು ತಾಸುಗ ವರೆಗೆ ಭಾಷೆ, ಗಣಿತ ಇವೆರಡು ವಿಷಯಗಳಿಗೆ ಸಂಬಂಧಿಸುವ ಮಾದರಿಯ ಪಾಠಗಳೂ ಅವುಗಳ ಸಂಬಂಧದಿಂದ ಹೊರಡುವ ಪ್ರಶ್ನೆಗಳಬಗ್ಗೆ ಚರ್ಚೆಯೂ ನಡೆಯುತ್ತಿದ್ದವು. ಮಧ್ಯಾಹ್ನದಲ್ಲಿ ಮೂರು ತಾಸುಗಳವರೆಗೆ ಈ ವಿಷಯಗಳಬಗ್ಗೆ ಎರಡು ಮಾದರಿಯ ಪಾಠಗಳೂ ಅವುಗಳ ಬಗ್ಗೆ ಚರ್ಚೆಯೂ ನಡೆಯುತ್ತಿದ್ದವು. ವ್ಯಾಖ್ಯಾನಗಳು ಈ ಯೋಜನೆಯಲ್ಲಿ ಇರಲಿಲ್ಲ. ಕೆಲವರ ಅಭಿಪ್ರಾಯದ ಮೇರೆಗೆ ಶಿಕ್ಷಣ ವಿಷಯಕವಾದ ವ್ಯಾಖ್ಯಾನಗಳನ್ನು ತಜ್ಞರು ಹೇಳುವದು ಇಂಥ ಸಮ್ಮೇಲನಗಳಲ್ಲಿ ವಿಶೇಷ ಫಲಕಾರಿಯಾಗುವದೆಂದು ಗೊತ್ತಾಯಿತು. ಶಿಕ್ಷಕ ಶಿಕ್ಷಕೆಯರ ಒಟ್ಟು ಸಂಖ್ಯೆಯು

ಮರ್ಯಾದಿತವಾಗಿದ್ದ ಮೂಲಕ ಈ ಚರ್ಚೆಗಳು ನಿಯಮಿತ ಪ್ರಶ್ನೆಗಳಿಗೆ ಮಾತ್ರ ಸಂಬಂಧಿಸುವಂಥವಾಗಿದ್ದವು.

ಟ್ರೇನಿಂಗ್‌ಸ್ಕೂಲಿನಲ್ಲಿ ಜರುಗಿದ ಎರಡನೆಯ ಮಹತ್ವದ ಶಿಕ್ಷಣ ಯೋಜನೆಯೆಂದರೆ ಧಾರವಾಡದ ಜಿಲ್ಲೆಯ ಸ್ಕೂಲಬೋರ್ಡಿನವರು ತಮ್ಮ ಜಿಲ್ಲೆಯ ಅನ್‌ಟ್ರೇಂಡ ಶಿಕ್ಷಕರಲ್ಲಿ ಕೆಲವರನ್ನು ಆರಿಸಿ, ಹದಿನೈದು ದಿನಗಳವರೆಗೆ ಬೋರ್ಡಿನ ಅಡವಿನಿಸ್ಪೇಟಿವ್ಹ ಆಫೀಸರರು, ಸುಪರವಾಯಿಜರರು ಹಾಗು ಶಿಕ್ಷಣದಲ್ಲಿ ಸಹಾನುಭೂತಿಯುಳ್ಳ ಇತರ ಸದ್ಗೃಹಸ್ಥರು ಇವರಿಂದ ಅಲ್ಲಿ ನೀಡಿದ ಶಿಕ್ಷಕರಿಗೆ ಉಪಯೋಗವಾಗುವಂಥ ವ್ಯಾಖ್ಯಾನಗಳನ್ನೂ ಮಾದರಿಯ ಪಾಠಗಳನ್ನೂ ಕೊಡಿಸಿದ್ದು. ಟ್ರೇಂಡ ಶಿಕ್ಷಕರ ಸಂಖ್ಯೆಯು ಜೆಜ್ಜಾಗುವದರಿಂದ ಶಿಕ್ಷಣದ ವೆಚ್ಚವು ಬೆಳೆಯುತ್ತದೆಂಬದು ಸ್ಪಷ್ಟವಾದದ್ದು. ಸದ್ಯದ ಆರ್ಥಿಕ ವಿಪತ್ತಿನ ಕಾಲದಲ್ಲಿ ಸ್ವಲ್ಪ ಖರ್ಚಿನಲ್ಲಿ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕಾಗಿದೆ. ಈ ಮೂಲಕ ನಮ್ಮ ಪ್ರಾಥಮಿಕ ಶಿಕ್ಷಣದಲ್ಲಿ ಅಂಟ್ರೇಂಡ ಶಿಕ್ಷಕರ ಸಂಖ್ಯೆಯು ಕ್ರಮೇಣ ಹಿಂದಿನ ಕಾಲಕ್ಕಿಂತ ಹೆಜ್ಜಾಗುತ್ತ ನಡೆದಿರುವದು. ಶಿಕ್ಷಣ ವಾಸ್ತವು ಹಾಗು ಕಲೆಯು ಎಲ್ಲ ದೇಶಗಳಲ್ಲಿ ಭರದಿಂದ ಬಲಿಯುತ್ತಿರುವ ಕಾಲದಲ್ಲಿ ನಮ್ಮಲ್ಲಿ ಟ್ರೇಂಡರ ಸಂಖ್ಯೆಯು ಸವಿಯುತ್ತ ನಡೆದಿರುವದು ದುರದೃಷ್ಟದ ಸಂಗತಿಯು. ಆದರೆ ಇಂಥ ಅಂಟ್ರೇಂಡ ಶಿಕ್ಷಕರಿಗೆ ಅವರ ಕೆಲಸದಲ್ಲಿ ಉಪಯುಕ್ತವೆನಿಸುವ ಕೆಲವು ಜ್ಞಾನವನ್ನಾದರೂ ಮಾಡಿಕೊಡುವದು ಮಹತ್ವವಾದದ್ದು. ಈ ವ್ಯವಸ್ಥೆಯನ್ನು ಧಾರವಾಡ ಜಿಲ್ಲೆಯ ಸ್ಕೂಲಬೋರ್ಡಿನವರು ಮಾಡಿದ್ದಕ್ಕಾಗಿ ನಾವು ಅವರನ್ನು ಅಭಿನಂದಿಸುವೆವು.

ಈ ಹದಿನೈದು ದಿನಗಳ ಶಿಕ್ಷಣವನ್ನು ಅವರು ಪಡೆದಬಳಿಕ ಕೊನೆಗೆ ಒಂದು ಪರೀಕ್ಷೆಯನ್ನು ಅಡ್ವಿನಿಸ್ಪೇಟಿವ ಆಫೀಸರರು ಏರ್ಪಡಿಸಿದ್ದರು. ಇವರಿಗಾಗಿ ಮೂರು ತಾಸಿನ ಒಂದು ಪ್ರಶ್ನಪತ್ರಿಕೆಯನ್ನು ಸಿದ್ಧಪಡಿಸಿದ್ದರು. ಈ ಪ್ರಶ್ನೆಗಳನ್ನು ನಾವು ಜೇರೆ ಕಡೆಗೆ ಕೊಟ್ಟಿರುವೆವು. ಈ ಪ್ರಶ್ನೆಗಳ ಸಂಖ್ಯೆಯು ದೊಡ್ಡದಿರುವದು. ಆದರೆ ಇದಕ್ಕೆ ತೀರ ಸಣ್ಣ ಉತ್ತರಗಳನ್ನು ಪರೀಕ್ಷಕರು ಅಪೇಕ್ಷಿಸಿರುವರು. ಇವುಗಳನ್ನು ಅಭ್ಯಾಸಿಸಿದರೆ ಅನ್‌ಟ್ರೇಂಡ ಶಿಕ್ಷಕರಿಗೆ ಯಾವ ಬಗೆಯ ಜ್ಞಾನವು ಇರುವದರಿಂದ ಅವರ ಶಿಕ್ಷಣದ ಕೆಲಸಕ್ಕೆ ಸಹಾಯವಾಗುವದೆಂಬದು ಗೊತ್ತಾಗಬಹುದು. ತೀರ ತುಸು ಅವಧಿಯವರೆಗೆ ಆದರೂ ತಮ್ಮ ನಿತ್ಯದ ಉದ್ಯೋಗಕ್ಕೆ ಸಂಬಂಧಿಸುವ ಕೆಲವು ಮಹತ್ವದ ಮಾತುಗಳನ್ನು ತಜ್ಞರಿಂದ ತಿಳಿದುಕೊಳ್ಳುವದರಿಂದ ಎಂಥ ಲಾಭಗಳಿರುವವೆಂಬದೂ ವಾಚಕರಿಗೆ ಮನವರಿಕೆಯಾಗಬಹುದು.

ಈ ಬಗೆಯ ಜ್ಞಾನಕ್ಕಿಂತ ಅಲ್ಲಿ ನಡೆದ ಮಾದರಿಯ ಪಾಠಗಳ ನಿರೀಕ್ಷಣದಿಂದ ಶಿಕ್ಷಕರಿಗೆ ಒಳ್ಳೇ ಲಾಭವಾಯಿತೆಂದು ನಮ್ಮ ಅಭಿಪ್ರಾಯವು. ಈ ಪಾಠಗಳನ್ನು ಈ ಸಾರಿ ಬೋರ್ಡಿನ ಸುಪರವಾಯಿಸುರರೇ ಕೊಡುವ ವ್ಯವಸ್ಥೆಯಾಗಿತ್ತು. ಇನ್ನು ಮುಂದೆ ಜಿಲ್ಲೆಯೊಳಗಿನ ಹೆಸರಾದ ಅನುಭವಿಕ ಶಿಕ್ಷಕರಿಂದ ಸಹ ಇಂಥ ಪಾಠಗಳನ್ನು ಕಲಿಸಿ ತೋರಿಸಹಚ್ಚುವದು ಹಿತಕರವಾದದ್ದೆಂದು ನಮಗೆ ತೋರುತ್ತದೆ. ಮಾದರಿಯ ಪಾಠಗಳಲ್ಲಿ ಪಾಠಗಳ ಕ್ರಮ, ಮೆಟ್ಟು ಇವಷ್ಟೇ ಮಹತ್ವವಾದವಿರುವದಿಲ್ಲ. ಮೇಲಾದ ಶಿಕ್ಷಕರ ಕಲಿಸುವ ಹತೋಟಿಯು ನೋಡತಕ್ಕದ್ದಿರುವದು. ಅವರ ಅನುಕರಣವು ಹೊಸ ಶಿಕ್ಷಕರಿಗೆ ಆವಶ್ಯವಾದದ್ದು.

ಇದಲ್ಲದೆ ಸಾಲೆಯ ಎಲ್ಲ ವಿಷಯಗಳ ಒಂದೊಂದು ಇಲ್ಲವೆ ಒಂದೆರಡು ಮಾದರಿಗಳನ್ನು ಹೊಸ ಶಿಕ್ಷಕರ ಮುಂದೆ ಇಡುವದಕ್ಕಿಂತ ಒಂದೆರಡು ಮಹತ್ವದ ವಿಷಯಗಳನ್ನು ಕುರಿತು ಹಲವು ಪಾಠಗಳನ್ನು ಕಲಿಸಿ ತೋರಿಸುವದರಿಂದ ಹೆಚ್ಚು ಪರಿಣಾಮವಾಗುವದೆಂದು ನಮ್ಮ ಅಭಿಪ್ರಾಯವಿರುವದು.

ಹಾಗೆಯೇ ಶಾಲೆಗಳಿಗೆ ಸಂಬಂಧಿಸುವ ಅನೇಕ ವಿಷಯಗಳಬಗ್ಗೆ ತಜ್ಞರ ಅನುಭವಗಳನ್ನು ವ್ಯಾಖ್ಯಾನರೂಪದಿಂದ ಹೇಳಿಸುವದರಿಂದಲೂ ಒಳ್ಳೇ ಲಾಭವಾಗುವದೆಂದು ನಮ್ಮ ಮತವಿರುವದು.

ಷಡಕ್ಷರ ಕವಿ

(ತಾ॥ ೧೩-೬-೩೪ನೆಯ ದಿನ ವೇ॥ ಕೀರ್ತನಕೇಸರಿ ಶಿವಮೂರ್ತಿಸ್ವಾಮಿಗಳು, ತುಮಕೂರ ಇವರು ಷಡಕ್ಷರ ಕವಿಯ ಬಗ್ಗೆ ಸ್ವಾರಸ್ಯವಾದ ಭಾಷಣವನ್ನು ಮಾಡಿದರು. ಇದು ಶಿಕ್ಷಕರಿಗೆ ಉಪಯುಕ್ತ ವಿಷಯವೆಂದು ಕೋರಿದ್ದರಿಂದ ಅದರ ಸಾರಾಂಶವನ್ನು ೨೧-೬-೩೪ರ ನವಕರ್ನಾಟಕದ ಸಂಚಿಕೆಯಿಂದ ಇಲ್ಲಿ ಉದ್ಧರಿಸಿರುವೆವು. ಸಂ. ಪ್ರಾ. ಶಿ.)

ನಮ್ಮ ಕನ್ನಡ ವಾಙ್ಮಯದ ಸೇವೆಯನ್ನು ಮನಃಪೂರ್ವಕವಾಗಿ ಮಾಡಿದ ಮಹಾಕವಿಗಳಲ್ಲಿ ೩ ಭಾಗಗಳನ್ನು ಮಾಡಬಹುದು. (೧) ಜೈನಕವಿಗಳು (೨) ವೀರಶೈವ ಕವಿಗಳು (೩) ಬ್ರಾಹ್ಮಣಕವಿಗಳು. ಜೈನಕವಿಗಳು ಕನ್ನಡ ವಾಙ್ಮಯ ಮಂದಿರಕ್ಕೆ ತಳಪದಿಯನ್ನು ಹಾಕಿದ್ದಾರೆ. ವೀರಶೈವಕವಿಗಳು ಬಂಧುರವಾದ ಕಟ್ಟಡವನ್ನು ಕಟ್ಟಿದ್ದಾರೆ ಬ್ರಾಹ್ಮಣ ಕವಿಗಳು ಆ ಕಟ್ಟಡವನ್ನು ಅಂದಚಂದವಾಗಿ ಅಲಂಕಾರ ಮಾಡಿದ್ದಾರೆ. ಪ್ರಾಚೀನ ಕಾಲದಲ್ಲಿ ಜೈನ ಕವಿಗಳ ಪ್ರಾಬಲ್ಯವು ಹೆಚ್ಚಾಗಿದ್ದಿತು. ಅವರು ಕಾವ್ಯ, ವ್ಯಾಕರಣ, ಅಲಂಕಾರ, ಮುಂತಾದ ಪ್ರೌಢ

ಗ್ರಂಥಗಳನ್ನು ಬರೆದವರಾಗಿದ್ದಾರೆ. ಕನ್ನಡನಾಡಿಗೆ ವಚನ ವಾಙ್ಮಯದ ರೂಪದಿಂದ ಹೊಸ ಜೈತನ್ಯವನ್ನೂ ಕಳೆಯನ್ನೂ ಹುಟ್ಟಿಸಿದ ಬಸವಾದಿ ಪ್ರಮಥರ ಕಾಲದಿಂದೀಚೆಗೆ ಮಹಾಮಹಾವೀರಶೈವ ಕವಿಗಳನೇಕರುದ್ಭವಿಸಿದರು ಷಡಕ್ಷರದೇವನು ಅಂಥ ಮಹಾಕವಿಗಳಲ್ಲೊಬ್ಬನಾಗಿದ್ದಾನೆ. ಅನಂತರ ಕೆಲವು ಬ್ರಾಹ್ಮಣ ಕವಿಗಳು ಹುಟ್ಟಿದರು.

ಕವಿಗಳನ್ನು ಮಹಾಕವಿಗಳೆಂದೂ ಸಾಮಾನ್ಯ ಕವಿಗಳೆಂದೂ ಎರಡು ವಿಧವಾಗಿ ವಿಂಗಡಿಸ ಬಹುದು. ಜೈನ ಕವಿಗಳಲ್ಲಿ ಪಂಪ ಪೊನ್ನ-ರನ್ನ-ಜನ್ನ ನೇಮಿಚಂದ್ರ-ಅಗ್ಗಳ ಮೊದಲಾದವರು ಮಹಾಕವಿಗಳು. ವೀರಶೈವರಲ್ಲಿ ಹರಿಹರ, ರಾಘವಾಂಕ, ಕೆರೆಯ ಪದ್ಮರಸ, ಪಾಲ್ಕುರಿಕೆಯ ಸೋಮನಾರಾಧ್ಯ, ಷಡಕ್ಷರದೇವ, ಭೀಮಕವಿ, ವಿರೂಪಾಕ್ಷಪಂಡಿತ ಮೊದಲಾದವರು ಕವಿಶ್ರೇಷ್ಠರೆನಿಸಿಕೊಂಡಿದ್ದಾರೆ. ಬ್ರಾಹ್ಮಣರಲ್ಲಿ ಲಕ್ಷ್ಮೀಶ, ರುದ್ರಭಟ್ಟ, ಕುಮಾರವ್ಯಾಸ, ಕುಮಾರವಾಲ್ಮೀಕಿ ಇವರು ಹೆಚ್ಚಿನವರೆನಿಸಿಕೊಂಡಿದ್ದಾರೆ. ರಸಾಲಂಕಾರ, ಅರ್ಥಾಲಂಕಾರ ಉದಾತ್ತಭಾವನೆಗಳನ್ನು ಪ್ರೇರೇಪಿಸುವದೇ ಮಹಾಕವಿಯ ಲಕ್ಷಣವಾಗಿದೆ. ಷಡಕ್ಷರ ದೇವನ ಕಾವ್ಯಗಳು ರಸಪೂರ್ಣವಾಗಿಯೂ ಭಾವನಾಪ್ರಾಧಾನ್ಯವಾಗಿಯೂ ಪರಿಶೋಭಿಸುತ್ತವೆ.

ವರಕವಿಗಳಲ್ಲಿ ಪ್ರತಿಭಾಶಕ್ತಿಯೊಂದುಂಟು. ಆ ಶಕ್ತಿಯಿಂದ ಅವರು ನೂತನವಾದ ಸೃಷ್ಟಿಯನ್ನೇ ಹುಟ್ಟಿಸಬಲ್ಲರು. 'ರವಿಕಾಣದುದಂ ಕವಿಕಂಡಂ' ಎಂಬ ಗಾದೆಯುಂಟು. ಕಪಿಗಳು ಸಮುದ್ರಕ್ಕೆ ಸೇತುವೆಯನ್ನು ಕಟ್ಟಿದರೋ ಇಲ್ಲವೋ ಶಿವನೇ ಬಲ್ಲ. ಆದರೂ ಕವಿಗಳು ಕಪಿಗಳಿಂದ ಅದನ್ನು ಕಟ್ಟಿಸಿಯೇ ಬಿಟ್ಟರು. ಅರ್ಜುನನು ಶಬರಶಂಕರ ವಿಳಾಸದಲ್ಲಿ ಶಿವನ ಗಂಟಲನ್ನು ಮೆಟ್ಟಿದನೋ ಇಲ್ಲವೋ ಯಾರಿಗೆಗೊತ್ತು ? ಕವಿಗಳು ಮೆಟ್ಟಿಸಿಯೇ ಬಿಟ್ಟರು. ವಾಮನ ಮೂರ್ತಿಯ ಒಂದು ಪಾದವು ಆಕಾಶಕ್ಕೆ ಮುಟ್ಟಿತೋ ಇಲ್ಲವೋ ಯಾರಿಗೂ ಗೊತ್ತಿಲ್ಲ. ಆದಾಗ್ಯೂ ಕವಿಗಳು ಅದನ್ನು ಮುಟ್ಟಿಸಿಯೇ ಬಿಟ್ಟರು. ಶ್ರೀರೋಹಣ ಪರ್ವತದಲ್ಲಿ ಮುತ್ತು, ರತ್ನ, ವಜ್ರ ವೈಡೂರ್ಯಗಳೇ ಇರುವವೆಂದು ಕವಿಗಳು ತಮ್ಮ ಸಮಯಾನುಸಾರವಾಗಿ ಕಲ್ಪಿಸಿದರು. ಇದು ಸತ್ಯವೋ ಅಸತ್ಯವೋ ಅವರಿಗೇಗೊತ್ತು. ಷಡಕ್ಷರದೇವನು ಕಾವ್ಯ ಸೃಷ್ಟಿಯಲ್ಲಿ ಅತ್ಯಂತ ಪ್ರತಿಭಾಶಕ್ತಿಯುಳ್ಳವನು.

ಕೆಲವರು ಕವಿಗಳಲ್ಲಿ ತಾರತಮ್ಯಭಾವವನ್ನೆಣಿಸಲಿಕ್ಕೆ ಹೋಗುತ್ತಾರೆ, ಇದು ಸಮಂಜಸವಲ್ಲ. ಲಕ್ಷ್ಮೀಶನು ಹೆಚ್ಚೋ, ಷಡಕ್ಷರದೇವನು ಹೆಚ್ಚೋ ? ಹರೀಶ್ವ

ರನು ಹೆಚ್ಚೋ, ಪಂಪನು ಹೆಚ್ಚೋ ? ಯಾರು ಹೆಚ್ಚೋ ಯಾರು ಕಡಿಮೆಯೋ ಇದನ್ನು ನಿರ್ಧರಿಸುವದು ಯಾರಿಗೂ ಶಕ್ಯವಿಲ್ಲ. ಆ ಮಹಾಕವಿಗಳು ಒಂದು ವಿಶಿಷ್ಟತರದ ಕವಿತಾಚಾತುರ್ಯದಲ್ಲಿ ಒಬ್ಬರಿಗಿಂತ ಒಬ್ಬರು ಮಿಗಿಲಾಗಿದ್ದಾರೆ. ಒಬ್ಬನ ಕಾವ್ಯದಲ್ಲಿ ಶೃಂಗಾರ ರಸವು ಹೆಚ್ಚಾಗಿ ಕಂಡು ಬರುತ್ತಿದ್ದರೆ ಇನ್ನೊಬ್ಬನ ಕಾವ್ಯದಲ್ಲಿ ಶೋಕರಸವು ಮಿಗಿಲಾಗಿರುತ್ತದೆ. ಒಬ್ಬನು ಸ್ವಭಾವೋಕ್ತಿಯನ್ನು ಹೆಚ್ಚಾಗಿ ಚಿತ್ರಿಸುತ್ತಿದ್ದರೆ ಇನ್ನೊಬ್ಬನು ಉತ್ಪ್ರೇಕ್ಷಾಲಂಕಾರವನ್ನೂ ಮತ್ತೊಬ್ಬನು ಭಕ್ತಿಭಾವನೆಗಳನ್ನೂ ಅಂದಚಂದವಾಗಿ ಚಿತ್ರಿಸುವನು. ಪಂಪರನ್ನರು ಶೋಕರಸವನ್ನು ಚಿತ್ರಿಸುವದರಲ್ಲಿ ಪರಿಪೂರ್ಣರು ನಿಜವಾಗಿ ಪರೀಕ್ಷಿಸಿದರೆ ಎಲ್ಲರ ಕಾವ್ಯಗಳಲ್ಲಿಯೂ ಅಲ್ಲಲ್ಲಿ ಎಲ್ಲ ತರಹದ ರಸಭಾವನೆಗಳೂ ಅರ್ಥ ಅಲಂಕಾರಗಳೂ ತೋರಿಬರುತ್ತಿರುವವಾದ್ದರಿಂದ ಒಬ್ಬರು ಹೆಚ್ಚು ಇನ್ನೊಬ್ಬರು ಕಡಿಮೆಯೆಂದು ತಿಳಿಯುವದು ಮೂರ್ಖತನವು. ಷಡಕ್ಷರದೇವನು ಶೃಂಗಾರ ರಸವನ್ನು ಚಿತ್ರಿಸುವದರಲ್ಲಿ ಎಲ್ಲ ಕವಿಗಳಿಗಿಂತಲೂ ಮಿಗಿಲಾಗಿರಬಹುದು. ಉಳಿದ ದೃಷ್ಟಿಯಿಂದ ಕೊಂಚ ಕಡಿಮೆಯಾಗಿರಬಹುದು. ಅದರಿಂದ ಅವನು ಕಡಿಮೆ ಯೋಗ್ಯತೆಯ ಕವಿಯೆಂದು ಹೇಳಲು ಯಾವನಿಗೂ ಧೈರ್ಯವಾಗಲಿಕ್ಕಿಲ್ಲ.

ಕೆಲವು ಕವಿಗಳು ರಾಜಾಶ್ರಯ ಹೊಂದಿ ಅವರನ್ನು ಇಂದ್ರ ಚಂದ್ರ ಕಾಮ ಭೀಮರಿಗೆ ಹೋಲಿಸಿ ತಮ್ಮ ಕವಿತಾ ಸಂಪತ್ತನ್ನು ಅವರಿಗೆ ಮೀರಿಕೊಂಡಿರುವರು ಇಂಥ ಕಾವ್ಯ ಸಂಪತ್ತು ಆಸುರೀ ಸಂಪತ್ತೆಂದು ತಿಳಿಯಬೇಕು. ಕೆಲವರು ಮಾತ್ರ ತಮ್ಮ ತಮ್ಮ ಕಾವ್ಯಸಂಪತ್ತನ್ನು ಪರಮಾತ್ಮನಿಗೂ ಅವನ ಶರಣರಿಗೂ ಒಪ್ಪಿಸಿ ಬಿಟ್ಟಿದ್ದಾರೆ. ನಾನು ಕಾವ್ಯ ಬರೆದೆನೆಂಬ ಹೆಮ್ಮೆಯನ್ನು ತಾಳದೆ ತಾವು ಬರೆದುದೆಲ್ಲವೂ ಆ ಪರವಸ್ತುವಿನದೆಂದೇ ನಮ್ರಭಾವನ್ನು ತಾಳಿದವರಾಗಿದ್ದಾರೆ. ಕುಮಾರವ್ಯಾಸನೂ ಲಕ್ಷ್ಮೀಶನೂ ಈ ತರಹದ ಕಿಂಕರಭಾವದ ವೈಷ್ಣವ ಕವಿಗಳು. ಮಹಾಕವಿಯಾದ ಷಡಕ್ಷರ ದೇವನಾದರೂ ವೈವೀ ಸಂಪತ್ತುಳ್ಳ ಹರಶರಣ ಪದಕಮಲ ಭೃಂಗವಾಗಿದ್ದಾನೆ

ವೀರಶೈವರಲ್ಲಿ ಷಡಕ್ಷರ ಕವಿಗಳೆಂದು ಮೂರು ಜನರು ಪ್ರಸಿದ್ಧಿ ಹೊಂದಿ ಹೋಗಿರುವರು. ಮಹಾ ವೈರಾಗ್ಯಶಾಲಿಗಳಾದ ಶಿವಯೋಗಿಗಳೊಬ್ಬರು ವೈರಾಗ್ಯದ ಪರಮಾವಧಿಯ ಬಗ್ಗೆ ಅನೇಕ ರಸವತ್ತಾದ ಪದ್ಯಗಳನ್ನು ರಚಿಸಿರುವರು. ನಾನಾಬಗೆಯ ಹಾಡುಗಳನ್ನು ಹಾಡಿರುವರು. ಅವರಿಗೆ ಮುಪ್ಪಿನ ಷಡಕ್ಷರಸ್ವಾಮಿಗಳೆನ್ನುವರು. 'ತಿರಕನೊರ್ವನ್ನೂರ ಮುಂದೆ' ಎಂಬ ಚಿಕ್ಕ ಕಾವ್ಯವೊಂದು ಅವರಿಂದ ಬರೆದದ್ದು ಈಗಿನ ಪಠ್ಯಪುಸ್ತಕದಲ್ಲಿ ಕಂಡು ಬರುತ್ತಿದೆ. ಷಡಕ್ಷರ

ಮಂತ್ರಿಯೆಂಬವರು ಮಂತ್ರಿಗಳಾಗಿದ್ದರೂ ಒಳ್ಳೆಯ ಕವಿತಾ ಶಕ್ತಿಯನ್ನು ಪಡೆದವ
ರಾಗಿದ್ದರು. ಆದರೆ ನಮ್ಮ ಕಥಾನಾಯಕನಾದ ಷಡಕ್ಷರ ದೇವನು ಇವರಿಬ್ಬ
ರಿಂದ ಭಿನ್ನವಾದವನು. ಮೈಸೂರ ಸೀಮೆಯ ಎಳಂದೂರ ಗ್ರಾಮದ ಪಟ್ಟಾ
ಧ್ಯಕ್ಷನು. ರೇಣುಕ ಗೋತ್ರದವನು ಶ್ರೀಮತ್ ಬಸವ ಪದಾಬ್ಜ ಭೃಂಗನು.
ಕವಿತನು ಉಭಯ ಕವಿತಾ ವಿಶಾರದನು. ಕನ್ನಡ ಸಂಸ್ಕೃತ ಭಾಷೆಗಳಲ್ಲಿ ಪ್ರೌಢ
ಕಾವ್ಯಗಳನ್ನು ಬರೆದು ಘನತೆಯನ್ನು ಪಡೆದಿದ್ದಾನೆ ಕನ್ನಡದಲ್ಲಿ ರಾಜಶೇಖರ
ವಿಳಾಸ, ವೃಷಭೇಂದ್ರ ವಿಜಯ, ಶಬರಶಂಕರ ವಿಳಾಸ ಎಂಬ ಗ್ರಂಥಗಳನ್ನೂ
ಸಂಸ್ಕೃತದಲ್ಲಿ ಕವಿಕರ್ಣ ರಸಾಯನ, ಭಕ್ತಾಧಿಕ್ಯ, ಶಿವಾಧಿಕ್ಯ. ಎಂಬ ಸಂಸ್ಕೃತ
ಗ್ರಂಥಗಳನ್ನೂ ಬರೆದಿದ್ದಾನೆ ಅವನ ಕವಿಕರ್ಣ ರಸಾಯನವು ಯಾವ ಸಂಸ್ಕೃತ
ಕಾವ್ಯಕ್ಕಿಂತಲೂ ಕಡಿಮೆಯಾಗಿಲ್ಲ. ರಾಜಶೇಖರ ವಿಳಾಸವೆಂಬುದು ವಿದ್ವನ್ಮಾ
ನ್ಯವಾದುದು. ಅದರಲ್ಲಿ ಕೆಲವು ಶ್ಲೇಷಾರ್ಥದ ಶ್ಲೋಕಗಳುಂಟು. ಒಂದಕ್ಕೆ
೩ ಪ್ರಕಾರದ ಅರ್ಥಗಳನ್ನು ವೇ. ಪಿ. ಆರ್. ಕರಿಬಸವ ಶಾಸ್ತ್ರಿಗಳು ಮಾಡಿ
ದ್ದಾರೆ. ಅದು ವಿಶ್ವವಿದ್ಯಾಲಯದ ಉಚ್ಚತರಗತಿಗಳಲ್ಲಿ ಪಠ್ಯಪುಸ್ತಕವಾಗಿದೆ.
ಶೃಂಗಾರ ರಸ ಪರಿಪೂರ್ಣವಾದುದು. ಕವಿಯು ಆ ಗ್ರಂಥವನ್ನು ತನ್ನ ನವ
ಯೌವನ ಕಾಲದಲ್ಲಿ ಬರೆದಂತೆ ಕಾಣುತ್ತದೆ. ಅದರಲ್ಲಿ ೨೦೦೦ ಪದ್ಯಗಳಿರು
ತ್ತವೆ. ವೃಷಭೇಂದ್ರವಿಜಯದಲ್ಲಿ ವೀರಶೈವ ಮತದ ಪ್ರತಿಪಾದನೆಯೂ ಶಿವಶರ
ಣರ ಕಥೆಗಳೂ ತುಂಬಿಕೊಂಡಿವೆ. ಶಬರಶಂಕರ ವಿಳಾಸದಲ್ಲಿ ಅರ್ಜುನನು ಶಿವ
ನಿಂದ ಪಾಶುಪತಾಸ್ತ್ರವನ್ನು ಪಡೆದುಕೊಂಡ ಕಥೆಯುಂಟು ಇವೆರಡು ಕಾವ್ಯ
ಗಳಾದರೂ ರಸ ಭರಿತವಾಗಿವೆ. ಭಕ್ತಾಧಿಕ್ಯ ಶಿವಾಧಿಕ್ಯಗಳನ್ನು ಕವಿಯು ಇಳಿ
ವರ ವಯಸ್ಸಿನಲ್ಲಿ ಬರೆದಿರಬಹುದು. ಅವುಗಳನ್ನು ಓದಿದರೆ ಶಾಸ್ತ್ರ, ವ್ಯಾಕರಣ,
ನ್ಯಾಯ, ಭಾಷ್ಯ ಮೊದಲಾದ ವಿಷಯಗಳಲ್ಲಿ ಷಡಕ್ಷರ ದೇವನು ಘನಪಾಂಡಿತ್ಯ
ವನ್ನು ಪಡೆದಿದ್ದಾನೆಂಬದು ಸ್ಪಷ್ಟ ಹೊಳೆಯುತ್ತಿದೆ. ಘನಪಾಂಡಿತ್ಯವನ್ನು
ಪಡೆದು ರಸಭರಿತವಾಗಿ ಕಾವ್ಯ ರಚಿಸುವ ಕವಿಯೇ ಕವಿಯು. ಅಲ್ಲದವನು
ಕವಿಯು ಈಗ ಏನೇನೋ ನಾಲ್ಕೆಂಟು ಸಾಲುಗಳನ್ನು ಬರೆದು ಕವಿಗಳಾಗಬೇ
ಕೆಂಬ ಹಂಬಲವುಳ್ಳ ಆಧುನಿಕಕವಿಗಳನೇಕರು ಹುಟ್ಟಿದ್ದಾರೆ

ಷಡಕ್ಷರದೇವನ ವಿಷಯವಾಗಿ ಕೆಲವು ಜನರು ಕೆಲವು ಆಕ್ಷೇಪಗಳನ್ನು
ಮಾಡುತ್ತಿದ್ದಾರೆ. ಅವುಗಳನ್ನು ಸ್ವಲ್ಪ ವಿಚಾರಿಸೋಣ:--ಷಡಕ್ಷರಿಯ ರಾಜ
ಶೇಖರ ವಿಳಾಸದಲ್ಲಿ ಶೃಂಗಾರ ರಸವು ಹೆಚ್ಚಾಗಿರುವದೆಂದು ಕೆಲವರು ಆಕ್ಷೇ
ಪಿಸುವದುಂಟು. ಆದರೆ ಶೃಂಗಾರ ರಸವು ಜೈಮಿನಿ, ಲೀಲಾವತಿ, ಚಂದ್ರಪ್ರಭ
ಪುರಾಣ ನಾಗವರ್ಮನ ಕಾದಂಬರಿಗಳಲ್ಲಿಯೂ ಕಡಿಮೆಯಾಗಿಲ್ಲ. ಶೃಂಗಾರ ರಸ

ಪ್ರಾಧಾನ್ಯವಿದೆಯೆಂದು ಅದು ಕಡಿಮೆತರಗತಿಯ ಕಾವ್ಯವೆಂದು ಹೇಳಲಿಕ್ಕಾಗು
ದಿಲ್ಲ ಷಡಕ್ಷರದೇವನು ಮಹಾಮತಾಭಿಮಾನಿಯಾಗಿದ್ದಾನೆಂದು ಕೆಲವರು ಆಕ್ಷೆ
ಪಿಸುವರು. ಇದು ನಿಜ, ಆದರೆ ತನೇ ಚಿಕ್ಕದೇವರಾಜನ ಆಳಿಕೆಯಲ್ಲಿ ಅವ
ಮಂತ್ರಿಯು ಜೈನನಿದ್ದು ಜಾತಿಮತ್ಸರದಿಂದ ಎಷ್ಟೋ ಜನ ವಿದ್ವನ್ಮಣಿಗಳಾ
ವೀರಶೈವರನ್ನು ಆಮಂತ್ರಣ ಕೊಟ್ಟು ಮೋಸದಿಂದ ಕೊಲ್ಲಿಸಿದ್ದನು. ಇದರಿಂ
ತಾಪವು ಹೆಚ್ಚಾಗಿ ಸ್ವಮತೋದ್ಧಾರಕ್ಕಾಗಿ ಷಡಕ್ಷರದೇವನು ಸ್ವಮತವನ್ನು
ಮನವಾರೆ ಕೊಂಡಾಡಿರಬಹುದು. ಇದು ಗುಣಗ್ರಾಹಿಗಳಿಗೆ ಗುಣವೇ ಹೊರತ
ದೋಷವಲ್ಲ.

ಷಡಕ್ಷರದೇವನು ತನ್ನ ಕಾವ್ಯದಲ್ಲಿ ಮುಕ್ಕಾಲುಪಾಲು ಸಂಸ್ಕೃತ ಶಬ್ದಗ
ನ್ನುಪಯೋಗಿಸುವನೆಂದು ಕುಂದನ್ನಿಡುವರು ಆದರೆ ಆಗಿನ ಕಾಲದಲ್ಲಿ ಸಂಸ್
ತದ ಪ್ರಾಬಲ್ಯವು ಹೆಚ್ಚಾಗಿದ್ದಿತು. ಸಂಸ್ಕೃತ ಮಿಶ್ರಿತವಾಗಿ ಕಾವ್ಯರಚಿಸಿದವ
ಗೇನೇ ವಿದ್ವಜ್ಜನ ಮಾಲಿಕೆಯಲ್ಲಿ ಹೆಚ್ಚು ಗೌರವವಿದ್ದಿತು. ಕಾಲಕ್ಕೆ ತಕ್ಕಂತೆ
ಕಾವ್ಯವನ್ನು ರಚಿಸಿದರೆ ಕವಿಯದೇನೂ ತಪ್ಪಲ್ಲ. ಮೇಲಾಗಿ ಕಾವ್ಯದ ಎಲ್ಲ
ಸೌಂದರ್ಯವನ್ನು ಬರೇ ಕನ್ನಡದಲ್ಲಿಯೇ ಚಿತ್ರಿಸುವದು ಸುಲಭವಲ್ಲ. ಕನ್ನಡಕ್ಕೆ
ಸಂಸ್ಕೃತವನ್ನು ಜೋಡಿಸಿದಾಗಲೇ ಬಂಗಾರಕ್ಕೆ ಸುಗಂಧವನ್ನು ಕೂಡಿಸಿದಂತಾ
ಗುವದು. ಷಡಕ್ಷರ ದೇವನ ಕಾಲದ ಬೇರಾವ ಕವಿಯಾದರೂ ಸಂಸ್ಕೃತವನ್ನು
ಹೆಚ್ಚಾಗಿ ಪ್ರಯೋಗಿಸದೆ ಕಾವ್ಯವನ್ನು ರಚಿಸಿಲ್ಲ. ಹೀಗಿರಲು ಷಡಕ್ಷರಿಯು
ದೋಷಾರ್ಹನಲ್ಲ.

ಷಡಕ್ಷರ ಕವಿಯು ತನ್ನ ಮೂಲ ಬುದ್ಧಿಯಿಂದ ಕಾವ್ಯ ಕಥೆಯನ್ನು ಕಲ್ಪಿ
ಸದೆ ಹಿಂದಿನವರು ಬರೆದುದನ್ನೇ ಬರೆದಿದ್ದಾನೆಂದು ಮತ್ತೆ ಕೆಲವರು ದೂರು
ವರು. ಉದಾಹರಣಾರ್ಥ—ರಾಜಶೇಖರವಿಳಾಸವನ್ನು ಗುಬ್ಬಿಮಲ್ಲಣಾರ್ಯರ
ಗ್ರಂಥಾಧಾರದಿಂದ ಬರೆದಿದ್ದಾನೆ ಕೃಷ್ಣಭೇಂದ್ರ ವಿಜಯವನ್ನು ಪಾಲ್ಕುರಿಕೆಯ
ಸೋಮನಾರಾಧ್ಯರ ಬಸವಪುರಾಣವನ್ನನುಸರಿಸಿ ಬರೆದಿದ್ದಾನೆ. ಆದರೆ ಬಂಗಾ
ರವು ಒಂದೇ ಆದರೂ ಆಭರಣಗಳು ಹೇಗೆ ಭಿನ್ನ ಭಿನ್ನವಾಗಿರುತ್ತವೆಯೋ
ಹಾಗೆಯೇ ಕಥಾಭಾಗವು ಒಂದೇ ಇದ್ದರೂ ಅದರ ಪೈಖರಿಯೂ, ಸೊಬಗೂ,
ಸೌಂದರ್ಯವೂ ಭಿನ್ನವಾಗಿರುತ್ತವಾದ್ದರಿಂದ ಕವಿಯಲ್ಲಿ ಮೂಲ ಬುದ್ಧಿಯಿಲ್ಲ
ವೆಂದು ಹೇಳುವದು ಯುಕ್ತವಾಗಲಾರದು.

ಷಡಕ್ಷರಿಯ ಕಾವ್ಯಗಳು ಬಹು ಕ್ಲಿಷ್ಟವಾದವುಗಳೆಂದು ಕೆಲವರು ದೋಷಾ
ರೋಪಣೆ ಮಾಡುವದುಂಟು. ಆದರೆ ಕ್ಲಿಷ್ಟಗುಣವು ಲೀಲಾವತಿ ಚಂದ್ರಪ್ರಭಾ

ಪುರಾಣಗಳಲ್ಲಿ ಮಿಗಿಲಾಗಿದೆ. ಕೇವಲ ವಿದ್ವಜ್ಜನರ ಮನೋರಂಜನೆಗಾಗಿಯೇ ಕ್ಲಿಷ್ಟವಾದ ಚಂಪೂ ಕಾವ್ಯಗಳನ್ನು ಬರೆಯುವದು ಆಗಿನ ಕಾಲದ ಕವಿಗಳ ಚಾತುರ್ಯವಾಗಿದ್ದಿತು. ಸಾಮಾನ್ಯರಿಗಾಗಿ ಷಟ್ಪದಿ, ಸಾಂಗತ್ಯ, ತ್ರಿಪದಿ ಮೊದಲಾದವುಗಳನ್ನು ರಚಿಸುತ್ತಿದ್ದರು. ಷಡಕ್ಷರಿಯ ಎಲ್ಲ ಪದ್ಯಗಳೂ ಬಹುಶಃ ಅರ್ಥವಾಗುತ್ತವೆ. ಆದರೆ ಲೀಲಾವತಿಯ ಎಷ್ಟೋ ಪದ್ಯಗಳು ಕೂಡ ಅರ್ಥವಾಗುವದಿಲ್ಲ. ಆಗಿನ ಕಾಲದಲ್ಲಿ ಕ್ಲಿಷ್ಟತೆಯು ಕಾವ್ಯಕ್ಕೆ ಗೌರವವಾಗಿತ್ತಲ್ಲದೆ ಕುಂದಕವಾಗಿದ್ದಿಲ್ಲ. ಆದುದರಿಂದ ಷಡಕ್ಷರಿಯು ದೋಷಪಾತ್ರನಲ್ಲ.

ಒಟ್ಟಿನ ಮೇಲಿಂದ ಷಡಕ್ಷರವೇವನು ಮಿಗಿಲಾದ ಕನ್ನಡ ಕವಿಗಳಲ್ಲೊಬ್ಬನಾಗಿದ್ದಾನೆ. ಅವನ ಮೇಲೆ ನಮಗೆ ತುಂಬಾ ಅಭಿಮಾನವಿದ್ದರೂ ಈತನು ಎಲ್ಲರಿಗಿಂತಲೂ ಶ್ರೇಷ್ಠನೆಂದು ಹೇಳಿದರೆ ತಪ್ಪಾಗುತ್ತದೆ. ಯಾಕಂದರೆ ಒಬ್ಬೊಬ್ಬರ ವೈಚಿತ್ರ್ಯ, ವೈಶಿಷ್ಟ್ಯ, ವೈಖರಿಗಳೇ ಬೇರೆ ಬೇರೆಯಾಗಿರುವವು.

ಉಚ್ಚತರದ ಬೌದ್ಧಿಕ ವ್ಯಾಪಾರಗಳು

ಇದುವರೆಗೆ ವಿವರಿಸಿದ ಇಂದ್ರಿಯ ಜನ್ಯ ಜ್ಞಾನ (ಬೋಧೆ) ಸ್ಮರಣ ಹಾಗು ಕಲ್ಪನೆಗಳಿಗೆ ಸಂಬಂಧಿಸಿದ ಮನೋವ್ಯಾಪಾರಗಳು ಬಾಹ್ಯಸೃಷ್ಟಿಯಲ್ಲಿರುವ ಪದಾರ್ಥಗಳನ್ನು ಬಹುಮಟ್ಟಿಗೆ ಆಶ್ರಯಿಸಿರುವವು; ಆದರೆ ಉಚ್ಚತರದ ಮನೋವ್ಯಾಪಾರಗಳಿಗೆ ವಸ್ತುಗಳ ಆವಶ್ಯಕತೆ ಇರದೆ ಅನೇಕ ವಸ್ತುಗಳಿಗೆ ಸಂಬಂಧಿಸಿದ ಸಾಮಾನ್ಯ ಕಲ್ಪನೆ, ವಸ್ತುಗಳ ಗುಣಧರ್ಮ, ಭಾವವಾಚಕನಾಮ, ಶಬ್ದ ಇವೇ ಮೊದಲಾದ ನಿಮೂರ್ತ ವಸ್ತುಗಳಿಗೆ ಸಂಬಂಧವುಳ್ಳವುಗಳಿರುವವು. ಈ ಮೇಲ್ತರದ ಮನೋವ್ಯಾಪಾರಗಳಲ್ಲಿ ಸಾಮಾನ್ಯ ಬೋಧೆ, ವಿಚಾರ, ಅನುಮಾನ, ನಿರ್ಣಯ ಮೊದಲಾದವುಗಳ ಸಮಾವೇಶವಾಗುವದು.

ಸಾಮಾನ್ಯಜ್ಞಾನ:— ಬಾಹ್ಯಸೃಷ್ಟಿಯೊಳಗಿನ ಪದಾರ್ಥ ಹಾಗು ನಮ್ಮ ಜ್ಞಾನೇಂದ್ರಿಯಗಳ ಸನ್ನಿಕರ್ಷವಾಗಲು ನಮಗೆ ಬೋಧೆ ಎಂಬ ಆ ಪದಾರ್ಥ ಜ್ಞಾನವಾಗುವದು. ಆ ಮೇಲೆ ಆ ಪದಾರ್ಥವು ನಮ್ಮ ಮನಸಿನಮೇಲೆ ತನ್ನ ಪ್ರತಿಮೆಯನ್ನು ಮೂಡಿಸಲು ಸ್ಮೃತಿಯ ವ್ಯಾಪಾರದಿಂದ ಆ ಪದಾರ್ಥವು ನಮ್ಮ ಇಂದ್ರಿಯ ಪಥದಲ್ಲಿ ಇಲ್ಲದಾಗ ಸಹ ಅದರ ಬಿಂಬವನ್ನು ಸ್ಮರಣದಲ್ಲಿ ತಂದುಕೊಟ್ಟು ಕಲ್ಪನಾಶಕ್ತಿಯನ್ನು

ಕೆಲಸಕ್ಕೆ ಹಚ್ಚಲು ಆ ಶಕ್ತಿಯು ತನ್ನ ಯೋಗ್ಯತಾನುಸಾರವಾಗಿ ಕಲ್ಪನೆಗೆ ಕಲ್ಪನೆಯನ್ನು ಜೋಡಿಸುತ್ತ ಹೊಸ ಹೊಸ ಕಾಲ್ಪನಿಕ ಪ್ರಕಾರವನ್ನು ತಂದುಕೊಟ್ಟು ನಮಗೆ ಒಂದು ಬಗೆಯ ಜ್ಞಾನವನ್ನು ಮಾಡಿಕೊಡುವದು. ಆದರೆ ವಿಚಾರ, ತರ್ಕ, ನಿರ್ಣಯ ಅಥವಾ ನಿಷ್ಕರ್ಷ ಮೊದಲಾದ ಮನೋ ವ್ಯಾಪಾರಗಳಿಂದಾಗುವ ಜ್ಞಾನವು ಈ ವ್ಯಾಪಾರಗಳಿಂದ ಭಿನ್ನವಾಗಿದ್ದರೂ ಆ ಜ್ಞಾನವು ಕಡಿಮೆ ಮಹತ್ವವುಳ್ಳದ್ದಿರುತ್ತದೆ. ನಾವು ಸಾಮಾನ್ಯವಾಗಿ ಉಪಯೋಗಿಸುವ ಗಿಡ, ಪ್ರಾಣಿ, ಪಶು, ಪಕ್ಷಿ ಮೊದಲಾದ ಶಬ್ದಗಳು ತೋರಿಸುವ ಕಲ್ಪನೆಗಳು ನಮಗೆ ಪ್ರತ್ಯಕ್ಷವಾಗಿ ಇಂದ್ರಿಯಗಳ ಮುಖಾಂತರವಾಗಿ ಉಂಟಾಗಿರುವದಿಲ್ಲ. ನಾವು ಗಿಡವೆಂದು ಹೇಳುವ ಪದಾರ್ಥವು ನಿಜವಾಗಿ ಅಸ್ತಿತ್ವದಲ್ಲಿ ಇರುವದೇ ಇಲ್ಲ. ಹುಣಸೆಯ ಗಿಡ, ಮಾವಿನಗಿಡ, ಜಾಲಿಯಗಿಡ ಎಂಬ ವಿವಕ್ಷಿತ ಗಿಡಗಳು ಮಾತ್ರ ಇದ್ದದ್ದು ಕಂಡುಬರುವದು. ಇದರಂತೆ ನಾಯಿಯೆಂಬ ಪ್ರಾಣಿಯು ಅಸ್ತಿತ್ವದಲ್ಲಿರದೆ ಟ್ಯಾಮ್ಯಾ, ಮೋತಿಯ್ಯ, ಗುಲ್ಬ ಮೊದಲಾದ ವಿವಕ್ಷಿತ ನಾಯಿಗಳು ಮಾತ್ರ ಅಸ್ತಿತ್ವದಲ್ಲಿರುವವು. ನಾವು ಅನೇಕ ವಸ್ತುಗಳ ಜ್ಞಾನಮಾಡಿಕೊಂಡು ಆ ಜ್ಞಾನಕ್ಕೆ ಸಂಬಂಧಿಸಿದ ಕಲ್ಪನೆಗಳನ್ನು ವಿಸ್ಪಲಿತವಾಗಿ ಉಳಿಯದಂತೆ ವರ್ಗೀಕರಣ ಮಾಡಿಕೊಳ್ಳುವಾಗ ಸ್ಥೂಲಮಾನದಿಂದ ಒಂದುಬಗೆಯ ಸಾದೃಶ್ಯವುಳ್ಳ ವಸ್ತುಗಳ ಕಲ್ಪನೆಯನ್ನು ಸಾಮ್ಯವೈಷಮ್ಯಗಳಿಂದ ಬೇರ್ಪಡಿಸಿ ಅವುಗಳಲ್ಲಿಯೂ ವಿಭಾಗಗಳನ್ನು ಮಾಡಿಕೊಳ್ಳುತ್ತೇವೆ.

ಸಾಮಾನ್ಯಜ್ಞಾನಮಾಡಿಕೊಳ್ಳುವದು ಸುಲಭ ಸಾಧ್ಯವಲ್ಲ. ಒಂದೊಂದು ವರ್ಗಕ್ಕೆ ಸೇರಿದ ಅನೇಕ ವಸ್ತುಗಳ ಸಾಮಾನ್ಯಭಾವಗ್ರಹಣವು ಬಹು ಗಡಜಾಗಿರುವದು ಸಾಮಾನ್ಯಜ್ಞಾನಕ್ಕೆ ವಿಶೇಷ ಜ್ಞಾನವೇ ಮೂಲಾಧಾರವೆಂಬ ಬಗ್ಗೆ ಸಂದೇಹವಿಲ್ಲ. ನಾವು ಅನೇಕ ನಾಯಿಗಳನ್ನು ವ್ಯಕ್ತಿಶಃ ನಿರೀಕ್ಷಣಮಾಡಲು ಒಂದೊಂದು ನಾಯಿಯ ಗುಣ ಧರ್ಮಗಳು ಒಂದೊಂದು ವಿಧವಾಗಿರುವ ವೈಯಕ್ತಿಕ ಜ್ಞಾನವಾಗುವದು. ಆದರೆ ಆ ನಾಯಿಗಳ ಬಗ್ಗೆ ನಮಗಿರುವ ಕಲ್ಪನೆಗಳಲ್ಲಿ ವೃಥಭಾಜಕದಂತಿರುವ ಒಂದು ಸಾಮಾನ್ಯ ಧರ್ಮವನ್ನು ವಿಚಾರಶಕ್ತಿಯಿಂದ ಕಂಡುಹಿಡಿಯಲು ನಮಗೆ ನಾಯಿಯ ಜಾತಿಗೆ ಸೇರಿದ ಪ್ರಾಣಿಗಳ ಸಾಮಾನ್ಯ ಜ್ಞಾನವಾಗುವದುಂಟು. ನಮ್ಮ ನಿರೀಕ್ಷಣ ಶಕ್ತಿಯು ಹಾಗು ವಿಚಾರ ಸರಣಿಯು ಪ್ರಬಲವಾಗಿದ್ದಂತೆ ಸಾಮಾನ್ಯ ಜ್ಞಾನದ ತಥ್ಯಾಂಶವು ಹೆಚ್ಚುತ್ತ ಹೋಗುವದು. ಅಪೂರ್ಣವಾದ ಅವಲೋಕನದಿಂದ ನಾವು ಕೆಲವು ಹಾರುವ ಪ್ರಾಣಿಗಳನ್ನು ಕಂಡುಹಿಡಿದು ಹಾರುವ ಪ್ರಾಣಿಗಳೆಲ್ಲ ಪಕ್ಷಿಗಳೆಂದು ಸಾಮಾನ್ಯ ಜ್ಞಾನವನ್ನು ಮಾಡಿಕೊಂಡರೆ ನಾವು ಮಾಡಿಕೊಂಡ ಪಕ್ಷಿಗಳ ವರ್ಗದಲ್ಲಿ ಪತಂಗಗಳ ಹಾಗೆ ಕಣ್ಕಪ್ಪಡೆಯ ಸಮಾವೇಶವಾಗುವದು. ಇದರಂತೆ ಜಲಚರ ಪ್ರಾಣಿಗಳಿಗೆಲ್ಲ ಮೀನುಗಳೆಂದು ಭಾವಿಸಿದರೆ ಆ ವರ್ಗದಲ್ಲಿ ಸೀಲ್ ಎಂಬ ದೇವ (ತಿಮಿಂಗಲ) ಮೀನು

ಸಮಾವೇಶವಾಗುವದುಂಟು. ಆದರೆ ಆ ಪ್ರಾಣಿಗೆ ಶ್ವಾಸೋಚ್ಛ್ವಾಸಕ್ಕಾಗಿ ಮಾನಗಳಿಗೆ ಇರುವಂತೆ ಕಲ್ಲಿಗಳಿರದೆ ಪುಪ್ಪುಸಗಳಿರುವವು. ಇದರಂತೆ ಜಗತ್ತಿನಲ್ಲಿರುವ ಪ್ರಾಣಿಗಳ ಮೆಲ್ಲ ಅವಲೋಕನದ ಅಪೂರ್ಣತೆಯಿಂದ ಭೂಚರ ಪ್ರಾಣಿಗಳು ಹಾಗು ಜಲಚರ ಪ್ರಾಣಿಗಳು ಎಂಬೆರಡು ವರ್ಗಗಳಲ್ಲಿ ವಿಂಗಡಿಸಿ ಬಿಟ್ಟರೆ ಭೂಚರ ಜಲಚರ ಪ್ರಾಣಿ ರುವ ಕಪ್ಪೆಯ ಸಮಾವೇಶವು ಪ್ರಾಣಿಕೋಟಿಯಲ್ಲಿ ಆಗುವದೇ ಇಲ್ಲ. ಎರಡು ಕಾಲಿನ ಪ್ರಾಣಿಗಳು ಪಕ್ಷಿಗಳೆಂದು ನಾವು ತಪ್ಪು ಜ್ಞಾನಮಾಡಿಕೊಂಡರೆ ಪಕ್ಷಿಗಳ ವರ್ಗದಲ್ಲಿ ಎರಡು ಕಾಲಿನ ಪ್ರಾಣಿಯಾದ ಮನುಷ್ಯನು ಬರುವನು. ಈ ವಿವರಣದಿಂದ ಸಾಮಾನ್ಯ ಜ್ಞಾನವು ಎಷ್ಟು ಗಹನವಾದದ್ದೂ ಯಥಾರ್ಥವಾದ ಆ ಥರದ ಜ್ಞಾನವನ್ನು ದೊರ ಸಿಕೊಳ್ಳುವಾಗ ನಮ್ಮ ವಿಚಾರ ಸರಣಿಯು ಎಷ್ಟು ಪರಿಪೂರ್ಣತೆಯನ್ನು ಹೊಂದಿರ ಬೇಕೆಂಬದೂ ಗೊತ್ತಾಗುವದು. ಸಾಮಾನ್ಯ ಜ್ಞಾನವನ್ನು ದೊರಕಿಸುವಾಗ ಅನೇಕ ವಸ್ತುಗಳಲ್ಲಿರುವ ಸಾಮಾನ್ಯ ಭಾವಗ್ರಹಣವನ್ನು ಮಾಡಿಕೊಳ್ಳಲಿಕ್ಕೆ ನಾಲ್ಕು ಬಗೆಯ ವ್ಯಾಪಾರಗಳು ಅವಶ್ಯವಾಗಿ ನಡೆಯಬೇಕು.

(೧) ಅವಲೋಕನ (೨) ತುಲನೆ (೩) ನಿಷ್ಕರ್ಷ (೪) ಸಾಮಾನ್ಯ ಸಂಕ ಲನ. ಸಾಮಾನ್ಯ ಜ್ಞಾನದ ಪ್ರಾರಂಭವು ವಸ್ತುಗಳ ವಿಶೇಷ ಜ್ಞಾನದಿಂದ ಆಗುವ ಕಾರಣ ಅವಲೋಕನ ಶಕ್ತಿಯಿಂದ ಸಾಮಾನ್ಯ ಜ್ಞಾನವು ಹೆಚ್ಚು ತಿಳಿಯಾಗ ಹತ್ತುವದು.

ತುಲನೆ:— ಈ ವ್ಯಾಪಾರದಿಂದ ನಮ್ಮ ಅವಲೋಕನ ಪಥದಲ್ಲಿ ಬಂದ ಇಲ್ಲವೆ ನಮ್ಮ ಸ್ಮರಣದಲ್ಲಿರುವ ವಸ್ತುಗಳ ಚಿತ್ರಗಳನ್ನು ಒಂದಕ್ಕೊಂದು ಹೋಲಿಸಿ ಅವುಗಳಲ್ಲಿ ಕಂಡುಬರುವ ಸಾಮಾನ್ಯ ವೈಷಮ್ಯಗಳನ್ನು ಅರಿತುಕೊಳ್ಳುತ್ತೇವೆ. ಸಾಮ್ಯವೈಷಮ್ಯ ಗಳನ್ನು ಕಂಡುಹಿಡಿದು ಒಂದು ವಸ್ತುವನ್ನು ಮತ್ತೊಂದರಿಂದ ಬೇರ್ಪಡಿಸುವದು ಬೌದ್ಧಿಕ ವ್ಯಾಪಾರದ ವಿಕಾಸವನ್ನು ವ್ಯಕ್ತಪಡಿಸುವದು. ರೂಪ ಗುಣಧರ್ಮಗಳಲ್ಲಿ ತೀರ ಭಿನ್ನವಾಗಿರುವ ಪದಾರ್ಥಗಳನ್ನು ಒಂದರಿಂದೊಂದು ಬೇರ್ಪಡಿಸುವದು ತೀರ ಸುಲಭ. ಮನುಷ್ಯನು ಪಶುಗಳಿಂದ ತೀರ ಭಿನ್ನ ಎಂಬ ಜ್ಞಾನವು ಚಿಕ್ಕಬಾಲಕರಿಗೆ ಸಹ ಆಗುವದು. ಆದರೆ ಬಂಗಾರ ಹಾಗು ಪಾರಜಗಳು ಧಾತು ವರ್ಗಕ್ಕೆ ಸೇರಿರುವವೆಂಬ ವನ್ನು ಕೇವಲ ಅವುಗಳ ರೂಪದಿಂದ ತಿಳಿಯಲಿಕ್ಕೆ ಆಗದು. ಎರಡಕ್ಕಿಂತ ಹೆಚ್ಚು ವಸ್ತು ಗಳನ್ನು ತೆಗೆದುಕೊಂಡರೆ ಅಂದರೆ ಕಬ್ಬಿಣ, ಸೀಸ, ಬಂಗಾರ, ಪಾರಜಗಳನ್ನು ತೆಗೆದು ಕೊಂಡು ಅವೆಲ್ಲವುಗಳಲ್ಲಿರತಕ್ಕ ಸಾಮಾನ್ಯ ಗುಣಧರ್ಮವನ್ನು ಕಂಡುಹಿಡಿಯುವದು ಸುಲಭ ಸಾಧ್ಯವಲ್ಲ. ಆ ಗುಣಧರ್ಮವು ಗೊತ್ತಾಗವಿದ್ದರೆ ಅವೆಲ್ಲವುಗಳನ್ನು ಧಾತು ವರ್ಗದಲ್ಲಿ ಶೇರಿಸಲಿಕ್ಕೆ ಬರುವದಿಲ್ಲ.

ಸಾಮಾನ್ಯ ಜ್ಞಾನದ ಪೂರ್ಣತೆಗೆ ಅವಶ್ಯವಾದ ಮೊದಲನೇ ಮೆಟ್ಟು, ಅವಲೋ ಕನ ಪಥದಲ್ಲಿ ಬಂದ ವಸ್ತುಗಳ ಗುಣಗಳನ್ನು ಪ್ರತ್ಯೇಕಪ್ರತ್ಯೇಕವಾಗಿ ಅರಿತುಕೊಂಡು

ಅವುಗಳ ಅವಯವಗಳನ್ನು ಪೃಥಕ್ಕರಿಸಿ ನಿಷ್ಕರ್ಷಿಸುವದು. ಹೀಗೆ ಮಾಡುವಾಗ ನಾವು ನಮ್ಮ ಅವಧಾನ ಶಕ್ತಿಯ ವ್ಯಾಪಾರವನ್ನು ಉಳಿದ ವಸ್ತುಗಳಿಂದ ಸೆಳಕೊಂಡು ಅದನ್ನು ಯಾವ ವಸ್ತುಗಳ ಸಂಬಂಧಿ ಜ್ಞಾನವನ್ನು ಮಾಡಿಕೊಳ್ಳುವದಿರುವದೋ ಅಷ್ಟೇ ವಸ್ತುಗಳ ಕಡೆಗೆ ಬುದ್ಧಿ ಪುರಸ್ಸರವಾಗಿ ತಿರುಗಿಸಬೇಕಾಗುವದು. ಲಕ್ಷಪೂರ್ವಕವಾಗಿ ಅವಲೋಕಿಸುವ ಸೀಸ, ತವರ, ಕಬ್ಬಿಣ, ಬಂಗಾರ ಮೊದಲಾದ ಭಿನ್ನ ಜಾತಿಯ ಧಾತುಗಳಲ್ಲಿ ಒಡೆದು ಕಾಣಿಸುವ ಕೆಲವು ಗುಣಧರ್ಮಗಳು ನಮ್ಮ ಅವಧಾನವನ್ನು ತಮ್ಮ ಕಡೆಗೆ ಎಳಕೊಳ್ಳ ಹತ್ತಿದರೂ ಆ ಮೋಹದಿಂದ ಮನಸ್ಸನ್ನು ಇಚ್ಛಾಪೂರ್ವಕವಾಗಿ ಸೆಳಕೊಂಡು ಅವೆಲ್ಲ ವುಗಳಲ್ಲಿದ್ದ ಅವಶ್ಯವಾದಂಥ ಒಂದು ಸಾಮಾನ್ಯ ಗುಣವಕಡೆಗೆ ತಿರುಗಿಸಿ, ವಿಚಾರಮಾಡಿ ನೋಡಿದರೆ ಅವೆಲ್ಲವುಗಳ ಸಮಾವೇಶವು ಧಾತುವರ್ಗದಲ್ಲಿ ಆಗುವದೆಂಬ ಸಾಮಾನ್ಯ ಜ್ಞಾನವಾಗದು. ಹೈಡ್ರೋಜನ್‌ವು ಧಾತುವೆಂದು ಹೇಳಿದರೆ ಎಷ್ಟೋಜನರು ನಗ ಬಹುದು. ಆದರೆ ವಿದ್ಯುತ್‌ಶಕ್ತಿಯಿಂದ ರಾಸಾಯನಿಕ ಪೃಥಕ್ಕರಣಮಾಡುವ ಶಾಸ್ತ್ರ ಜ್ಞಾನಿಗೆ ಎಲ್ಲ ಧಾತುಗಳು ಋಣ ದ್ರುವಿಗಳಿರುವದರಿಂದ ಹಾಗು ನೀರಿನ ಪೃಥಕ್ಕರಣ ದಿಂದ ಹೈಡ್ರೋಜನವು ಋಣದ್ರುವಿ ಆಗುವದೆಂದು ಕಂಡುಬಂದದ್ದರಿಂದ ಅವನು ಹೈಡ್ರೋಜನವನ್ನು ತನ್ನ ಸಾಮಾನ್ಯ ಜ್ಞಾನದಿಂದ ಧಾತುವರ್ಗದಲ್ಲಿ ಶೇರಿಸುವನು.

ಸಾಮಾನ್ಯ ಸಂಕಲನ:— ಸಾಮಾನ್ಯ ಸಂಕಲನದಿಂದ ಸಾಮಾನ್ಯ ಜ್ಞಾನಕ್ಕೆ ಪರಿಪೂರ್ಣತೆಯುಂಟಾಗುವದು. ಇದರಿಂದ ವಸ್ತುಗಳ ವರ್ಗೀಕರಣವು ಸುಲಭವಾಗು ವದು. ವ್ಯಾಕರಣದಲ್ಲಿ ರೂಢನಾಮವೆಂದು ಹೇಳುವದೇ ಸಾಮಾನ್ಯ ಸಂಕಲನವು.

ಸಾಮಾನ್ಯ ಜ್ಞಾನವು ಹೆಚ್ಚು ಹೆಚ್ಚು ಪರಿಪೂರ್ಣತ್ವವನ್ನು ಹೊಂದಿದಂತೆ ಅಮೂರ್ತ ವಸ್ತುಗಳಾದ ಸಂಖ್ಯಾಪರಿಮಾಣಕಾಲ, ದಿಕ್, ಅವಕಾಶ ಮೊದಲಾವವು ಗಳ ವರ್ಗೀಕರಣವನ್ನು ಕಾಲ್ಪನಿಕ ರೀತಿಯಿಂದ ಮಾಡಿಕೊಳ್ಳಲಿಕ್ಕೆ ಆಗುವದು. ಸಾಮಾನ್ಯ ಜ್ಞಾನವು ಬೆಳೆಯುತ್ತ ಹೋದಂತೆ ಅದರ ಒಂದೊಂದು ವರ್ಗದಲ್ಲಿ ಶೇರ್ಪಡೆ ಯಾಗುವ ವಸ್ತುಗಳ ಸಂಖ್ಯೆಯು ಬೆಳೆಯುವದು. ಅಂದರೆ ಆಯಾವರ್ಗದ ವ್ಯಾಪ್ತಿಯು ಬೆಳೆಯುವದು. ಆ ವರ್ಗಕ್ಕೆ ಶೇರಿದ ಅನೇಕ ವಸ್ತುಗಳಲ್ಲಿ ಒಂದನ್ನು ಆರಿಸಿ ಹೇಳುವಾಗ ಆ ವರ್ಗವನ್ನು ಸೂಚಿಸುವ ರೂಢನಾಮಕ್ಕೆ ಅವಶ್ಯವಾದ ವಿಶೇಷಣಗಳನ್ನು (ಗುಣ ಧರ್ಮಗಳನ್ನು) ಜೋಡಿಸುತ್ತ ಆದರ ವ್ಯಾಪ್ತಿಯು ಮರ್ಯಾದಿತವಾಗುವಂತೆ ಮಾಡಿ ದರೆ ನಮಗೆ ಆಯಾ ವಿಶಿಷ್ಟ ವಸ್ತುಗಳ ಜ್ಞಾನವು ಅಂಕಿತನಾಮದಂತೆ ಆಗುವದು.

ಸಾಮಾನ್ಯಜ್ಞಾನ ಪ್ರಾಪ್ತಿಗೆ ವಿಘಾತಕ ಸಂಗತಿಗಳು

ಅಸ್ಪಷ್ಟ ಶೋಧ ಅಪೂರ್ಣವಾದ ನಿರೀಕ್ಷಣ, ಅಯೋಗ್ಯವಾದ ನಿಷ್ಕರ್ಷ, ಅಸಮ್ಮತವಾದ ಸಂಕಲನ, ಅರ್ಥ ತಿಳಿಯದಿದ್ದ ಭಾಷೆಯೊಳಗಿನ ಶಬ್ದಗಳು ಇವೇ ಮೊದ

ಲಾದ ಕಾರಣಗಳಿಂದ ನಮಗೆ ತಪ್ಪಾದ ಸಾಮಾನ್ಯ ಜ್ಞಾನವಾಗುವದುಂಟು.

ಸಾಮಾನ್ಯಜ್ಞಾನದ ಬೆಳವಣಿಗೆಯೂ ವಿಕಾಶವೂ

ಸಾಮಾನ್ಯ ಜ್ಞಾನವು ವಿಶೇಷಜ್ಞಾನದ ವಿಸ್ತಾರವಿರುವದರಿಂದ ಸಾಮಾನ್ಯಜ್ಞಾನದ ಪ್ರಾರಂಭವು, ಶಿಶುಗಳು ಸಾಮ್ಯನೈಷಮ್ಯದಿಂದ ಒಂದು ಪದಾರ್ಥವನ್ನು ಬೇರೊಂದರಿಂದ ವಿಂಗಡಿಸುವಾಗ ಆಗುವದು. ತಾಯಿಯು ಮುಖವನ್ನು ಇಲ್ಲವೆ ಧ್ವನಿಯನ್ನು ಬೇರೆ ಜನರ ಮುಖ ಇಲ್ಲವೆ ಧ್ವನಿಯಿಂದ ಬೇರ್ಪಡಿಸಿ ಗೊತ್ತುಮಾಡಿಕೊಳ್ಳುವ ಶಕ್ತಿಯು ಶಿಶುಗಳಲ್ಲಿ ಒಂದು ವರ್ಷ ಮುಗಿಯುವದರೊಳಗಾಗಿ ಉಂಟಾಗುವದು. ಆದರೂ ಆ ವಯಸ್ಸಿನಲ್ಲಿ ತುಲನಾಶಕ್ತಿಯು ಅಂಕುರ ರೂಪದಲ್ಲಿ ಇರುವದೆಂದು ಹೇಳಬಹುದು. ವಸ್ತುತಃ ಶೈಶವಾವಸ್ಥೆಯಲ್ಲಿ ಬಾಲಕರ ಜ್ಞಾನವು ವ್ಯಕ್ತಿ ವಿಷಯಕವಿರುವದಲ್ಲದೆ ಅವರಲ್ಲಿ ಸಾಮಾನ್ಯ ಜ್ಞಾನವು ಇರಲಾರದು. ಮೂರುವರ್ಷಗಳಾದಮೇಲೆ ಅವರಿಗೆ ಬಾಷೆಯೊಳಗಿನ ಶಬ್ದಗಳ ಜ್ಞಾನವು ತುಸುಮಟ್ಟಿಗೆ ಆಗಿದ್ದರೂ ಅವರು ಭಾಷೆಯೊಳಗಿನ ಗಿಡಮನೆ, ನಾಯಿ, ಪೆಕ್ಕು ಮೊದಲಾದ ಶಬ್ದಗಳು ಜಾತಿ ವಾಚಕ ಶಬ್ದಗಳಿರದೆ ಅವರಿಗೆ ಗೊತ್ತಿದ್ದ ಮನೆ ಗಿಡ ಮೊದಲಾದ ವಿಶಿಷ್ಟ ವಸ್ತುಗಳನ್ನು ತೋರಿಸುವವು. ಎಷ್ಟೋ ಶಬ್ದಗಳನ್ನು ಅವರು ಹೊಸದಾಗಿ ಕಲ್ಪಿಸಿಕೊಂಡು ತಮ್ಮ ಮನಸ್ಸಿನಲ್ಲಿದ್ದ ಅರ್ಥದಲ್ಲಿಯೇ ಅವುಗಳನ್ನು ಉಪಯೋಗಿಸುತ್ತಿರುವರು. (ಮಾವು, ಬಾವು, ಹಮ್ಮಾ, ಆ,) ಮುಂದೆ ಅವರು ಹಾಲು, ನೀರು, ಚಹ ಮೊದಲಾದ ಶಬ್ದಗಳನ್ನು ತಮ್ಮ ಮಾತಿನಲ್ಲಿ ಉಪಯೋಗಿಸಹತ್ತಿದರೂ ಆ ವಯಸ್ಸಿನಲ್ಲಿ ಅವರಿಗೆ ಪೇಯವೆಂಬ ಸಾಮಾನ್ಯ ಜ್ಞಾನವು ಆಗಿರುವದಿಲ್ಲ. ಬರಬರುತ್ತ ಅವರು ತಮ್ಮ ಭಾಷೆಯಲ್ಲಿ ಜಲೋ ಕೆಟ್ಟ, ಭಾರ ಹಗರು ಮೊದಲಾದ ವಿಶೇಷಣಗಳನ್ನು ಉಪಯೋಗಿಸ ಹತ್ತಲು ಅವರಲ್ಲಿ ತುಲನಾ ಶಕ್ತಿಯುಂಟಾಯಿತೆಂದು ನಂಬಬೇಕಾಗುವದು. ಈ ಕ್ರಮವು ೧೪ ವರ್ಷಗಳವರೆಗೆ ನಡೆದಮೇಲೆ ಹುಡುಗರಲ್ಲಿ ಹಿಮ್ಮೆಲೆ ಬುದ್ಧಿ ವಿಕಾಸವಾಗಿ ಅವರು ಭೌತಿಕ ಶಾಸ್ತ್ರಗಳನ್ನೂ, ಗಣಿತ ಶಾಸ್ತ್ರಗಳನ್ನೂ, ವಿಚಾರಪೂರ್ವಕ ಕಲಿಯಲಿಕ್ಕೂ ಜ್ಞಾನದ ವರ್ಗೀಕರಣಮಾಡಿಕೊಳ್ಳಲಿಕ್ಕೂ ಸಮರ್ಥರಾಗುವರು. ಈ ಸ್ಥಿತಿಯು ಬರುವವರೆಗೆ ಅವರು ಸ್ವಂತ ನಿರೀಕ್ಷಣಮಾಡಿ ಅನೇಕ ವಸ್ತುಗಳ ಪ್ರತ್ಯಕ್ಷಜ್ಞಾನವನ್ನು ಮಾಡಿಕೊಂಡು ಆಯಾ ವಸ್ತುಗಳಿಗೆ ಸಂಬಂಧಿಸಿದ ಶಬ್ದಗಳನು ಪ್ರಸಂಗಬಂದಾಗ ತಾಯಿತಂದೆಗಳಿಂದಲೂ ಗುರುಹಿರಿಯರಿಂದಲೂ ಕೇಳಿ ಸ್ಮರಣದ ಲಿಟ್ಟುಕೊಂಡು ನಿಜವಾದ ಅರ್ಥಗಳಲ್ಲಿ ಅವುಗಳನ್ನು ಉಪಯೋಗಿಸುತ್ತ ಹೋಗಬೇಕು. ತಮ್ಮ ಶಬ್ದಸಂಗ್ರಹವನ್ನು ಹೆಚ್ಚಿಸುತ್ತ ಹೋಗಬೇಕು. ಹೀಗೆ ಮಾಡದೆ ಚಿಕ್ಕ ವಯಸ್ಸಿನ ಹುಡುಗರಿಗೆ ವ್ಯಾಕರಣದ ನಿಯಮಗಳನ್ನೂ ಭೂಮಿತಿಯ ವ್ಯಾಖ್ಯೆಗಳನ್ನೂ, ಭೂಗೋಲದ ನಾಮಾವಳಿಗಳನ್ನೂ ಹುಡುಗರಿಂದ ಗಿಳಿಯಂತೆ ಪಾಠಮಾಡಿಸುವದೆ ಅವರಿಗೆ ಇತಿಮಿತಿಜ್ಞಾನವಾಗುವದು

ಸಾಮಾನ್ಯಜ್ಞಾನಕ್ಕೆ ಅವಶ್ಯವಾದ ಶಿಕ್ಷಣಕ್ರಮ

ಸಾಮಾನ್ಯ ಜ್ಞಾನವು ಗಹನವಾಗಿರುವದರಿಂದ ಅದು ಹುಡುಗರಿಗೆ ಸಹಜವಾಗಿ ಆಗುವದಿಲ್ಲ. ಸ್ವಾಭಾವಿಕವಾಗಿ ಬಾಲಕರ ಲಕ್ಷ್ಯವು ವಿಶೇಷ ವಸ್ತುಗಳಕಡೆಗೆ ಇದ್ದು ಅವರ ಪ್ರವೃತ್ತಿಯು ಬಗೆಬಗೆಯ ವಸ್ತುಗಳಲ್ಲಿ ಕಂಡುಬರುವ ಸಾಮ್ಯಗಳನ್ನೇ ಹುಡುಕುವದರಕಡೆಗೆ ಇರುವದು. ಆ ಕೆಲಸದಲ್ಲಿ ಅವರಿಗೆ ಆನಂದವು ಅನಿಸುವದು. ಸಾಮ್ಯಗಳನ್ನು ಕಂಡುಹಿಡಿಯುವಾಗ ಅವರು ಒಂದು ಪದಾರ್ಥವನ್ನು ಮತ್ತೊಂದು ಪದಾರ್ಥಕ್ಕೆ ಹೋಲಿಸಿ ನೋಡುತ್ತ ಅವುಗಳಲ್ಲಿ ಸಾಮಾನ್ಯವಾಗಿರುವ ಗುಣಧರ್ಮಗಳನ್ನು ಪರೀಕ್ಷಿಸುವಾಗ ಸಕೃದ್ದರ್ಶನಕ್ಕೆ ಅವ್ಯಕ್ತವಾಗಿದ್ದ ವೈಷಮ್ಯಗಳ ಜ್ಞಾನವು ಅವರಿಗೆ ಮುಸಮುಸಕಾಗಿ ಆಗಹತ್ತುವದು. ಈ ಕ್ರಮದಿಂದ ಸಾಮಾನ್ಯ ಜ್ಞಾನದ ಮೆಟ್ಟಿಲ್ಲ ಬೆಳೆಯುತ್ತ ಹೋಗುವಾಗ ಶಿಕ್ಷಕರು ವಿದ್ಯಾರ್ಥಿಗಳ ಮುಂದೆ ಕೆಲವು ವಸ್ತುಗಳನ್ನೇ ಇಟ್ಟು ಅವರು ತಮ್ಮ ಸ್ವಂತ ನಿರೀಕ್ಷಣದಿಂದಲೂ ವಿಚಾರ ಶಕ್ತಿಯಿಂದಲೂ ಆ ವಸ್ತುಗಳ ವರ್ಗೀಕರಣವನ್ನು ಯಥಾಮತಿ ಮಾಡಿಕೊಂಡಬಳಿಕ ಆ ವರ್ಗಕ್ಕೆ ಸಂಬಂಧಿಸಿದ ಶಬ್ದಗಳನ್ನು ಅವರಿಗೆ ಹೇಳಿಕೊಡಬೇಕು. ಒಂದೊಂದು ವರ್ಗದಲ್ಲಿ ಶೇರುವ ಪದಾರ್ಥಗಳ ಪ್ರಧಾನ ಗುಣ ಧರ್ಮಗಳು ಯಾವವು ? ಗೌಣ ಗುಣಧರ್ಮಗಳು ಯಾವವು ? ಎಂಬದು ಶಿಕ್ಷಕರಿಗೆ ಗೊತ್ತಿದ್ದರೆ ಮಾತ್ರ ಅವರು ಹುಡುಗರಿಗೆ ಯೋಗ್ಯವಾದ ಮಾರ್ಗವನ್ನು ತೋರಿಸಲು ಸಮರ್ಥರಾಗುವರು. ಹೂಗಳಬಗ್ಗೆ ಜ್ಞಾನಮಾಡಿಕೊಳ್ಳುವಾಗ ಅವುಗಳಿಗಿರುವ ಬಣ್ಣವು ಗೌಣ ಧರ್ಮವು. ಇದರಂತೆ ಧಾತುಗಳ ಜ್ಞಾನಮಾಡಿಕೊಳ್ಳುವಾಗ ಅನೇಕ ಧಾತುಗಳಿಗಿರುವ ಘನರೂಪವು ಗೌಣ ಧರ್ಮವು; ಯಾಕಂದರೆ ಪಾರಜವು ದ್ರವಾಕಾರ ರೂಪದಲ್ಲಿರುವದು. ಸದೋಷ ಶಿಕ್ಷಣ ಕ್ರಮದಲ್ಲಿ ಶಿಕ್ಷಕರು ವ್ಯಾಕರಣದೊಳಗಿನ ಕೆಲವು ಭಾಗವನ್ನೂ ವ್ಯಾಖ್ಯೆಗಳನ್ನೂ ಹುಡುಗರಿಗೆ ಅರ್ಥ ತಿಳಿಯದಿದ್ದ ಶಬ್ದಗಳನ್ನೂ, ಗಣಿತ ಹಾಗು ಭೌತಿಕ ಶಾಸ್ತ್ರಗಳಲ್ಲಿರುವ ಪಾರಿಭಾಷಿಕ ಶಬ್ದಗಳನ್ನೂ ಗಿಳಿಪಾಠಮಾಡಲಿಕ್ಕೆ ಹಚ್ಚುವದರಿಂದ ಅವರು ಗೊಂದಲದಲ್ಲಿ ಬಿದ್ದು ಹೊಸ ಹೊಸ ಜ್ಞಾನಮಾಡಿಕೊಳ್ಳಲಿಕ್ಕೆ ಬೇಸರಿಯುವರು. ಆದಕಾರಣ ಹುಡುಗರು ತಮ್ಮ ಜ್ಞಾನವನ್ನು ಬೆಳಿಸಿಕೊಂಡ ಮೇಲೆ ಆಯಾ ವ್ಯಾಖ್ಯೆಗಳನ್ನು ತಮ್ಮ ತಿಳುವಳಿಕೆಯಂತೆ ಕಟ್ಟಿಕೊಳ್ಳಬೇಕು. ಅವುಗಳಲ್ಲಿ ಏನಾದರೂ ತಪ್ಪಿದ್ದರೆ ಶಿಕ್ಷಕರು ಆ ತಪ್ಪುಗಳನ್ನು ತಿದ್ದಿ ಆ ತಿದ್ದುಪಡಿಯ ಕಾರಣವನ್ನು ಹುಡುಗರಿಗೆ ತಿಳಿಸಿಹೇಳಬೇಕು. ಸಾಮಾನ್ಯ ಬೋಧಶಕ್ತಿಯ ವಿಕಾಸಕ್ಕೆ ಅವಶ್ಯವಾದ ವಿಷಯಗಳಲ್ಲಿ ವಸ್ತುಪಾಠ, ಪ್ರಕೃತಿ ವಿಮರ್ಶೆ, ರಸಾಯನಶಾಸ್ತ್ರ, ಪದಾರ್ಥ ವಿಜ್ಞಾನ ಶಾಸ್ತ್ರ, ಗಣಿತ ಶಾಸ್ತ್ರ, ವ್ಯಾಕರಣ, ನಿಬಂಧ ಲೇಖನ ಇವೇ ಮುಖ್ಯವಾದವು. ಚಿಕ್ಕ ಬಾಲಕರಿಗೆ ವಸ್ತುಪಾಠವನ್ನು ಕಲಿಸುವಾಗ ಶಿಕ್ಷಕರ ಮುಖ್ಯ ಉದ್ದೇಶವು ಬಾಲಕರ ಇಂದ್ರಿಯಗಳಿಗೆ ಶಿಕ್ಷಣಕೊಡುವದೂ ಆ ಇಂದ್ರಿಯಗಳ ಮುಖಾಂತರ ಬಾಹ್ಯ ಸೃಷ್ಟಿ

ಯಲ್ಲಿರುವ ವಸ್ತುಗಳ ಪರಿಚಯವನ್ನು ಮಾಡಿಕೊಳ್ಳುವದೂ ಇರುವದರಿಂದ ಶಿಕ್ಷಕರು ಬಹುಮಟ್ಟಿಗೆ ಸಾಮ್ಯವುಳ್ಳ ಎರಡು ವಸ್ತುಗಳನ್ನು ಒಂದರಬದಿಗೊಂಡು ಇಟ್ಟು ಅವರ ಕಡೆಯಿಂದ ನಿರೀಕ್ಷಣ ಮಾಡಿಸಬೇಕು. ಆ ಮೇಲೆ ವೈಷಮ್ಯ ಗುಣಗಳುಳ್ಳ ಎರಡು ಪದಾರ್ಥಗಳನ್ನು ಅವರ ಮುಂದೆ ಇಟ್ಟು ಅವುಗಳನ್ನು ನಿರೀಕ್ಷಣ ಮಾಡಲಿಕ್ಕೆ ಹಚ್ಚಬೇಕು. ಈ ಕ್ರಮದಿಂದ ಹುಡುಗರು ಅನೇಕ ವಸ್ತುಗಳನ್ನು ಟ್ಟಾಗ ವಿಚಾರಪೂರ್ವಕವಾಗಿ ಸಾಮ್ಯ ವೈಷಮ್ಯಗಳನ್ನು ಕಂಡುಹಿಡಿದು ಆ ವಸ್ತುಗಳಲ್ಲಿರುವ ಪ್ರಧಾನ ಹಾಗು ಗೌಣ ಗುಣಗಳನ್ನು ಗೊತ್ತುಮಾಡಿಕೊಳ್ಳಹತ್ತಲು ಸಾಮಾನ್ಯ ಜ್ಞಾನವೆಂಬ ಮುಂದಿರವ ಹದಿಗಲ್ಲು ಇಟ್ಟಂತಾಗುವದು. ವಸ್ತುಪಾಠವು ಕ್ರಮಕ್ರಮದಿಂದ ಬೆಳೆಯುತ್ತ ಶಾಸ್ತ್ರವ ಮೂಲಾರಂಭವಾಗಿ ಪರಿಣಮಿಸದಿದ್ದರೆ ಶಿಕ್ಷಣದಲ್ಲಿ ಅದರ ಪ್ರಯೋಜನವೇ ಇಲ್ಲ. ಭೌತಿಕ ಶಾಸ್ತ್ರಗಳು ಸಾಮಾನ್ಯ ಜ್ಞಾನಮಾಡಿಕೊಡುವದರಲ್ಲಿ ಉತ್ಕೃಷ್ಟ ಸಾಧನಗಳಾಗಿವೆ. ವನಸ್ಪತಿಶಾಸ್ತ್ರ, ಖನಿಜಶಾಸ್ತ್ರ, ರಸಾಯನಶಾಸ್ತ್ರ ಮೊದಲಾದ ಶಾಸ್ತ್ರಗಳ ವಿಷಯಗಳಾದ ವಸ್ತುಗಳ ಹಾಗು ನಿಯಮಗಳ ಜ್ಞಾನವನ್ನು ವಿದ್ಯಾರ್ಥಿಗಳು ಸ್ವಂತ ನಿರೀಕ್ಷಣೆಯಿಂದಲೂ ಸ್ವತಃ ಮಾಡಿದ ಪ್ರಯೋಗಗಳಿಂದಲೂ, ಮಾಡಿಕೊಳ್ಳಬೇಕಲ್ಲದೆ ಶಿಕ್ಷಕರು ಹುಡುಗರ ದೆಸೆಯಿಂದ ಅವರ ಕೆಲಸವನ್ನು ತಾವು ಎಂದೂ ಮಾಡಬಾರದು. ಯಾಕಂದರೆ ಹುಡುಗರು ತಮ್ಮ ಹಸಿವೆಯನ್ನು ತಾವೇ ಉಂಡು ಶಾಂತಪಡಿಸಬೇಕಲ್ಲದೆ ಅವರ ಸಲುವಾಗಿ ಶಿಕ್ಷಕರು ಊಟಮಾಡುವದು ಹಾಸ್ಯಾಸ್ಪದವು. 'ಬಾರ್ಡವಿನ್' ಎಂಬ ಶಾಸ್ತ್ರಜ್ಞನು ಹೇಳುವದೇನಂದರೆ– "ಶಿಕ್ಷಕರು ವಿದ್ಯಾರ್ಥಿಗಳ ಅನ್ನವನ್ನು ಬೇಕಾದರೆ ತಾವು ಉಣಬಹುದು; ಆದರೆ ವಿದ್ಯಾರ್ಥಿಗಳು ಮಾಡತಕ್ಕ ವಿಚಾರಗಳನ್ನು ಅವರ ಸಲುವಾಗಿ ಶಿಕ್ಷಕನು ಎಂದೂ ಮಾಡಕೂಡದು. ಸಾಮಾನ್ಯ ಜ್ಞಾನ ಬೆಳಿಸಲಿಕ್ಕೆ ಭಾಷೆಯು ಮೇಲ್ತರದ ಸಾಧನವಾಗಿದೆ. ಎಷ್ಟೋ ಬಾಲಕರು ಜನರು ಮಾತಾಡುವಾಗ ಉಪಯೋಗಿಸುವ ಶಬ್ದಗಳ ನಿಜವಾದ ಅರ್ಥವನ್ನು ಅರಿತುಕೊಳ್ಳದೆ ತಾವೂ ದೊಡ್ಡವರಂತೆ ಮಾತಾಡಬೇಕೆಂಬ ಲವಲವಿಕೆಯಿಂದ ಎಷ್ಟೋ ಶಬ್ದಗಳನ್ನು ತಮ್ಮ ಮಾತಿನಲ್ಲಿ ಉಪಯೋಗಿಸುವರು. ಇಂಥ ಪ್ರಸಂಗಗಳಲ್ಲಿ ಶಿಕ್ಷಕರು ಅವರಿಗೆ ಪರೀಕ್ಷೆಯ ಪ್ರಶ್ನೆಗಳನ್ನು ಕೇಳಿ ಅವರಿಗೆ ಶಬ್ದಗಳ ಅರ್ಥವು ತಿಳಿದದೆಯೋ ಇಲ್ಲವೋ ನೋಡಬೇಕು. ಹಾಗು ನಿಜವಾದ ಅರ್ಥಗಳನ್ನು ಹೇಳಿಕೊಡಬೇಕು. ನಿಬಂಧಲೇಖನದಿಂದ ವಿದ್ಯಾರ್ಥಿಗಳಲ್ಲಿರುವ ಸಾಮಾನ್ಯ ಜ್ಞಾನದ ಪರಿಮಿತಿಯು ಗೊತ್ತಾಗುವದು.

ಡಿಸ್ಟ್ರಿಕ್ಟ ಸ್ಕೂಲ ಬೋರ್ಡ ಧಾರವಾಡ
ಸೂಟಿಯ ಶಿಕ್ಷಣ ಸಪ್ತಾಹ,

ಮೇ ೬೧, ೧೯೩೪

ಪರೀಕ್ಷೆಯ ಪ್ರಶ್ನೆಗಳು

ವೇಳೆ ೧೨ ರಿಂದ ೩ ರ ವರೆಗೆ

ಸೂಚನೆ :—ಉತ್ತರಗಳು ಆದಷ್ಟು ಸಂಕ್ಷಿಪ್ತವಾಗಿರಬೇಕು.

೧. ಮಾಡಿ ತಿಳಿ, ನೋಡಿ ತಿಳಿ, ಕೇಳಿ ತಿಳಿ, ಈ ಮೂರು ಶಿಕ್ಷಣ ತತ್ವಗಳಲ್ಲಿ ಅತಿ ಹೆಚ್ಚು ಪರಿಣಾಮಕರವಾದದ್ದು ಯಾವದು ? ಯಾಕೆ

೨. ಕಲಿಸುವಾಗ ಶಿಕ್ಷಕನು ಧ್ವನಿಯಲ್ಲಿಯೂ ಮಾತಿನಲ್ಲಿಯೂ ಮಿತವ್ಯಯಿಯಾಗಿರಬೇಕೆಂಬುದೇಕೆ ? ಎಷ್ಟರ ಮಟ್ಟಿಗೆ ?

೩. ಶಾರೀರಿಕ ಶಿಕ್ಷೆಯ ಉದ್ದೇಶವೇನು ? ಎಷ್ಟು ವಯಸ್ಸಿನ ವರೆಗೆ ಅದನ್ನು ವಿಧಿಸಬಹುದು ?

೪. ಸಾಲೆಗಳಲ್ಲಿ ಶಾರೀರಿಕ ಶಿಕ್ಷೆಯನ್ನು ಯಾರು ಮಾಡಬೇಕು ? ಶರೀರದ ಯಾವ ಭಾಗದಲ್ಲಿ ?

೫. ವರ್ಗದಲ್ಲಿ ಶಿಕ್ಷಕನು ಕಲಿಸುತ್ತಿರುವಾಗ ಕೆಲವು ಹುಡುಗರು ನಿದ್ರೆ ಮಾಡಲಿಕ್ಕೆ ಹತ್ತಿರುವರೆಂದು ತಿಳಿಯಿರಿ. ಆಗ ಶಿಕ್ಷಕನು ಏನು ಉಪಾಯ ಮಾಡಬೇಕು ?

೬. $\frac{\text{ಷಿಜಿಗ} + \text{ಟಿರಿಲ್} + \text{ಧಿ}}{\text{ಳಖಿಗಷಿ} - \text{ಳಳಧಿಲ್ಲ}} = ?$ (ಸುಲಭ ರೀತಿ ಬರೆಯಿರಿ)

೭. ಷಿ × ಷಿ = ತ್ರಿರ ಎಂಬುವದನ್ನು ತೋರಿಸುವ ಆಕೃತಿ ತೆಗೆಯಿರಿ.

೮. ೧೩ ಹಣ್ಣು + ೫ ಹಣ್ಣು = ?
ಆಃ ಕುದುರೆ + ೫ ಕುದುರೆ = ?
೧೩ ಗೊಂಬೆ + ೬ ಗೊಂಬೆ = ?
೯೧ ರೂ. + ೪ ರೂ. = ? ಇವುಗಳಲ್ಲಿ ಬಿನ್ ಮತ್ತು ೧೩೯ ಇವುಗಳೊಂದಿಗೆ ಕಲಿಸತಕ್ಕ ಬಾಯಿಲೆಕಗಳ ಗುಂಪುಗಳನ್ನು ಬೇರೆ ಬೇರೆಯಾಗಿ ಬರೆಯಿರಿ.

೯. ಯಾವದೊಂದು ಸಂಖ್ಯೆಗೆ ೯೯ ರಿಂದ ಗುಣಿಸುವ ಸುಲಭ ಕ್ರಮ ಯಾವದು ?

೧೦. ಬಿನ್ ಇಯತ್ತ್ರೆಯಿಂದ ೨ನೆ ಇಯತ್ತ್ರೆಯವರೆಗೆ ಗಣಿತ ವಿಷಯವು ಸುಲಭವಾಗಿ ಸಾಗಬೇಕಾದರೆ ಅವಶ್ಯವಾಗಿ ಬೇಕಾದ ಉಪಕರಣಗಳನ್ನು ಬರೆಯಿರಿ

೧೧. ಸಾಲೆಯೆಂದರೆ ಕೋಟೆ, ಹಾಗಾದರೆ ಶಿಕ್ಷಕನು ಯಾರು? ಸಸಿಗಳು ಯಾವವು? ಅವು ಬೆಳೆಯಲಿಕ್ಕೆ ಶಿಕ್ಷಕನು ಏನೇನು ಒದಗಿಸಿ ಕೊಡುವನು ?

೧೨. ನೀವು ಪ್ರಾ. ಶಾಲೆಯಲ್ಲಿ ಕಲಿಸುವ ವಿಷಯಗಳಲ್ಲಿ ತೀರ ಮಹತ್ವವಾದ ಮೂರು ವಿಷಯ ಬೇಳಿರಿ

೧೩. ಸಾಲೆಯಲ್ಲಿ ಯಾರ ಮಾತು ಬಹಳ ಕೇಳಿಸುತ್ತಿರಬೇಕು ? ಬಹುತರವಾಗಿ ಯಾರದು ಕೇಳಬರುತ್ತಿರುವದು ?

೧೪. ಕಲಿಯುವ ಇಚ್ಛೆ ಇಲ್ಲದ ಹುಡುಗನು ಏನೂ ಕಲಿಯಲಾರನು. ಯಾಕೆ ?

೧೫. ಓದುವ ಪ್ರೀತಿಯು ಹುಡುಗರಲ್ಲಿ ಉಂಟಾಗಬೇಕಾದರೆ ಏನು ಮಾಡಬೇಕು ?

೧೬. ಮೌನ ವಾಚನದಿಂದ ಹುಡುಗರಲ್ಲಿ ಯಾವ ರೂಢಿಯು ಉಂಟಾಗುವದು ?

೧೭. ಶಬ್ದದ ಅರ್ಥ ತಿಳಿಸಲಿಕ್ಕೆ ಏನು ಮಾಡಬಾರದು ? ಏನು ಮಾಡಬೇಕು ?

೧೮. ಕವಿತೆಯಲ್ಲಿ ಹುಡುಗನ ಮನಸಾಗಬೇಕಾದರೆ ಶಿಕ್ಷಕನು ಎಂಥ ಕವಿತೆ ಆರಿಸಬೇಕು ? ತಾನು ಏನು ಮಾಡಬೇಕು ?

೧೯. ಆರಂಭದಲ್ಲಿ ಹುಡುಗರಿಂದ ಎಂಥ ಅಕ್ಷರಗಳನ್ನು ಬರೆಯಿಸುವಿರಿ ?

೨೦. ಹುಡುಗರು ಅಶುದ್ಧ ಬರೆಯುವದನ್ನು ತಿದ್ದಲಿಕ್ಕೆ ಯಾವ ಉಪಾಯವು ಮೇಲಾದದ್ದು ?

೨೧. ಶುದ್ಧ ಬರೆಹವನ್ನು ಒಂದೇ ಸಾರೆ ಯಾಕೆ ಹೇಳಬೇಕು ?

೨೨. ಶುದ್ಧ ಬರೆಹವನ್ನು ಎಷ್ಟು ಸಾವಕಾಶವಾಗಿ ಹೇಳುವಿರಿ ?

೨೩. ಡ್ರಿಲ್ ಮಾಡಿಸುವಾಗ ಅಂಗಿ, ರುಮಾಲು ತೆಗೆದು ಗಂಡುಗಚ್ಚೆಯಾಕೆ ಹಾಕಿಸಬೇಕು ?

೨೪. ಗಿಡದ ನೆಳಲಿನಲ್ಲಿ ದಿನಾಲು ಒಂದೆರಡು ತಾಸಾದರೂ ಸಾಲೆ ಹಾಕಬೇಕು. ಯಾಕೆ ?

೨೫. ಹುಡುಗರ ಅನಾರೋಗ್ಯಕರವಾದ ಎರಡು ಚಟಗಳನ್ನು ಹೇಳಿರಿ. ಇವುಗಳನ್ನು ಹ್ಯಾಗೆ ತಪ್ಪಿಸಬೇಕು ?

೨೬. ಕಣ್ಣು ಬೇನೆ ಬಂದ ಹುಡುಗನ ಬಗ್ಗೆ ನೀವು ಏನೇನು ಮಾಡುವಿ?

೨೭. ೧೯೩೪ನೇ ಇಸವಿಯ ಜನೆವರಿ ತಿಂಗಳಲ್ಲಿ ೧೫ನೇ ತಾರೀಖಿನ ದಿವಸ ಒಬ್ಬ ಫೀ ಹುಡುಗನು ಮಾಫಿ ಸರ್ಟಿಫಿಕೇಟ ಹಾಜರ ಮಾಡಿದರೆ ಅವನಿಗೆ ಫೀ ಉಳಿತಾಯವು ಯಾವ ತಿಂಗಳದಿಂದ ಪ್ರಾರಂಭವಾಗುವದು.

೨೮. ನಿಮ್ಮ ಶಾಲೆಯಿಂದ ಒಬ್ಬ ಹುಡುಗನು ಲೀವ್ಹಿಂಗ ಸರ್ಟಿಫಿಕೇಟ ತಕ್ಕೊಂಡು ಎರಡನೇ ಶಾಲೆಗೆ ಹೋದರೆ ಲೀವ್ಹಿಂಗ ಸರ್ಟಿಫಿಕೇಟ ಕೊಟ್ಟ ಬಗ್ಗೆ ಯಾವ ಪುಸ್ತಕದಲ್ಲಿ ಗುರ್ತು ಮಾಡುವಿರಿ ?

೨೯. ನೀವು ಒಂದು ಶಾಲೆಯ ಹೆಡ್‌ಮಾಸ್ತರರೆಂದು ತಿಳಿದು ೨ ದಿವಸ ಸ್ಥಾನಿಕ ಸೂಟಿ ಕೊಡುವ ಬಗ್ಗೆ ವರಿಷ್ಠರಿಗೆ ಅವಶ್ಯವಾದ ಮಾಹಿತಿಯುಳ್ಳ ಒಂದು ರಿಪೋರ್ಟ ಮಾಡಿರಿ.

೩೦. ವಾಚನವನ್ನು ಕಲಿಸುವಾಗ ಮಾಡತಕ್ಕ ಮೆಟ್ಟುಗಳನ್ನು ಬರೆಯಿರಿ.

೩೧. ಮಾದರಿಯ ವಾಚನದಿಂದಾಗುವ ಒಳಿತು (ಲಾಭ)ಗಳನ್ನು ಸಕಾರಣವಾಗಿ ಹೇಳಿರಿ.

೩೨. ಕ್ರಿಯಾಪದ ಹಾಗು ವಿಶೇಷಣ ಇವುಗಳ ಬಗ್ಗೆ ಪಾಠಗಳು ಮುಗಿದ ಕೂಡಲೆ ಹುಡುಗರು ಸರಿಯಾಗಿ ಜೋಳಬಹುದಾದ ವ್ಯಾಖ್ಯೆಗಳನ್ನು ಬರೆಯಿರಿ.

೩೩. ಸ್ಟೆನ್ಸಿಲ್, ಜೋಕಾಯಂತ್ರ, ಮಾಡೆಲ್ ಇವುಗಳ ಬಗ್ಗೆ ಟಿಪ್ಪಣ ಬರೆಯಿರಿ.

೩೪. ಪಾಟಿಯ ಮೇಲಿನ ಬರೆಹದ ಪ್ರಮಾಣವು ಬಿನ್ ಇಯತ್ತ್ರೆಯಿಂದ ಎನೇ ಇಯತ್ತ್ರೆಯ ವರೆಗೆ ಹೇಗೆ ಇರತಕ್ಕದ್ದು.

೩೫. ಕೈ ಬರೆಹದ ಧ್ಯೇಯವೇನು ?

ಶಿಕ್ಷಣಕ್ಕೆ ಸಹಾಯ

ಕಳೆದ ವರುಷ ಟ್ರೇನಿಂಗ ಸ್ಕೂಲಿನಲ್ಲಿದ್ದ ಮಿ॥ ಸಾ. ಭೀ. ಕಾಖಂಡಿಕಿ ಎಂಬ ಅಸ್ಪೃಶ್ಯ ವರ್ಗದ ವಿದ್ಯಾರ್ಥಿಯು ಜಡವನಿದ್ದ ಕಾರಣ, ಈ ಸ್ಕೂಲಿನ ವಿದ್ಯಾರ್ಥಿಗಳಲ್ಲೊಬ್ಬರಾದ ಮಿ॥ ಚಿ. ಮು. ಗದ್ದೀಗೌಡ್ರ ಇವರು ದಿಸೆಂಬರ ತಿಂಗಳ ಸಾತಾಳಿಯ ಸೂಟಿಯಲ್ಲಿ ತಮ್ಮೂರಿಗೆ (ರಡ್ಡೇರ ನಾಗನೂರ, ಜೇಕಾ ನರಗುಂದ) ಹೋದಾಗ ಕೆಳಗೆ ಕಾಣಿಸಿದ ಸದ್ಗೃಹಸ್ಥರಿಂದ ವರ್ಗಣೆ ಹಣ ಕೂಡಿಸಿ ತಂದು ಅತನಿಗೆ ಸಹಾಯ ಮಾಡಿದರು. ಈ ಪ್ರಯತ್ನವು ಸ್ತುತ್ಯವಾದದ್ದು. ಹಣ ಕೊಟ್ಟವರ ಹೆಸರು:—

(೧) ಶ್ರೀ. ತಾ. ಮ. ಶಾಲವಾರ ಸಾ॥ ಶಿರೋಳ ೩ ರೂ.

(೨) ಶ್ರೀ. ವೀ. ಬ. ಕುಬಸದ ,, ೨ ರೂ.

(೩) ಶ್ರೀ. ವೀ. ರಾ. ಚವಡಿ ,, ೧ ರೂ.

(೪) ಶ್ರೀ. ಪರಪ್ಪ ಘೋತರದ ,, ೧ ರೂ.

(೫) ಶ್ರೀ. ಮಲ್ಲನಗೌಡಾ ಹೊಸಮನಿ ಸಾ॥ ಖಾನಾಪೂರ ೧ ರೂ.

(೬) ಶ್ರೀ. ಫಕ್ಕೀರಗೌಡಾ ಪೋಲೀಸ ಪಾಟೀಲ ಸಾ॥ ಮಾಡವಾಳ ೧ ರೂ.

(೭) ಶ್ರೀ. ಗಿರಿಯಪ್ಪಗೌಡಾ ಪೋಲೀಸ ಪಾಟೀಲ ಸಾ॥ ಮಾಡವಾಳ ೧ ರೂ.

(೮) ಶ್ರೀ. ಮು. ಲಿಂ. ಪಾಟೀಲ ಸಾ॥ ರಡ್ಡೇರ ನಾಗನೂರ ೧ ರೂ.

ಉದಾರಭಾವದ ಈ ಮಹನೀಯರನ್ನು ನಾವು ಅಭಿನಂದಿಸುತ್ತೇವೆ.

ಪ್ರಕಟಣೆ

ಡಿರೆಕ್ಟರ ಆಫ ಇನ್‌ಫರಮೇಶನ್, ಮುಂಬಯಿ ಇವರು ೭-೬-೩೪ನೇ ತಾರೀಖಿನ ದಿವಸ ಕೆಳಗೆ ಕಾಣಿಸಿದ ಪಿ. ೧೩೩೩ನೆಯ ನಂಬರಿನ ಪ್ರೆಸ್ ನೋಟನ್ನು ಪ್ರಸಿದ್ಧಪಡಿಸಿರುವರು.

ಮರಾಠಿ ಗುಜರಾಥಿ ಹಾಗು ಕನ್ನಡ ಹೆಣ್ಣುಹುಡಿಗೆಯರ ದೇಶಭಾಷೆಯ ವಾಚನ ಪುಸ್ತಕಗಳು

೧೯೩೪ನೆಯ ಇಸವಿಯ ಮಾರ್ಚ ತಿಂಗಳ ೧೫ನೆಯ ತಾರೀಖಿನಿಂದ ಐದ ವರ್ಷಗಳ ವರೆಗೆ ವಿದ್ಯಾಖಾತೆಯ ಮರಾಠಿ, ಗುಜರಾಥಿ ಹಾಗು ಕನ್ನಡ ಹೆಣ್ಣು ಹುಡಿಗೆಯರ ಕ್ರಮಿಕ ವಾಚನ ಪುಸ್ತಕಗಳನ್ನು ಪ್ರಕಾಶಪಡಿಸುವ ಕಂಟ್ರ್ಯಾಕ್ಟನ್ನು ಮೆಸರ್ಸ ದತ್ತೋ ನಾರಾಯಣ ಹಾಗು ಬ್ರದರ್ಸ, ಪುಣೆ ಇವರಿಗೆ ಸರಕಾರದವರು ಕೊಟ್ಟಿರುವರು.

ಈ ಹೊಸ ಪ್ರಕಾಶಕರು ಅಚ್ಚುಹಾಕಿಸಿ ಪ್ರಸಿದ್ಧಪಡಿಸುವ ಮರಾಠಿ, ಗುಜರಾಥಿ ಹಾಗು ಕನ್ನಡ ಹೊಸ ಪುಸ್ತಕಗಳ ಪ್ರತಿಯೊಂದು ಪ್ರತಿಯನ್ನು ಎಲ್ಲ ಜನರಿಗೆ ಕೆಳಗೆ ಕಾಣಿಸಿದ ಹೊಸ ಬೆಲೆಗೆ ಮಾರುವರು.

	ಹೊಸ ಬೆಲೆಗಳು	ಸದ್ಯದ ಬೆಲೆಗಳು
ಮರಾಠಿ	ಆ. ಪೈ.	ಆ. ಪೈ.
ಮೊದಲನೆಯ ಪುಸ್ತಕ	೪ – ೬	೬ – ೦
ಎರಡನೆಯ ಪುಸ್ತಕ	೫ – ೦	೭ – ೬
ಗುಜರಾಥಿ		
ಮೊದಲನೆಯ ಪುಸ್ತಕ	೪ – ೬	೬ – ೦
ಎರಡನೆಯ ಪುಸ್ತಕ	೫ – ೦	೬ – ೬
ಮೂರನೆಯ ಪುಸ್ತಕ	೫ – ೦	೭ – ೬
ಕನ್ನಡ		
ಮೊದಲನೆಯ ಪುಸ್ತಕ	೪ – ೦	೭ – ೬

ಪ್ರ ಕ ಟ ನೆ

ಪುಣೆಯಲ್ಲಿ ೧೭-೩-೧೯೩೪ನೆಯ ದಿನಸ ನೆರೆದ ಉರ್ದು ಬುಕ್ ಕಮೀಟಿಯವರು ಮುಂಬಯಿ ಇಲಾಹೆಯ ಉರ್ದು ಶಾಲೆಗಳಲ್ಲಿ ಉಪಯೋಗಿಸುವದಕ್ಕಾಗಿ ಮುಂಜೂರ ಮಾಡಿದ ಪುಸ್ತಕಗಳ ಯಾದಿಯು ಕೆಳಗೆ ಬರೆದಂತೆ ಅದೆ.

ಲಾಯಬ್ರರಿ ಬುಕ್ಕು=L, ಪ್ರಾಯಿಝು ಬುಕ್ಕು P ಟೆಕ್ಸ್ಟ ಬುಕ್ಕು T

ನಂಬರು.	ಪುಸ್ತಕಗಳ ಹೆಸರು.	ಗ್ರಂಥಕರ್ತರ ಹೆಸರು.	ಪ್ರಕಾಶಕರ ಹೆಸರು ಇಲ್ಲವೆ ಪ್ರೆಸ್ಸಿನ ಹೆಸರು.	ಬೆಲೆ.	ಯಾತಕ್ಕೋಸ್ಕರ ಮಂಜೂರ
೧	ಪಾಂದಿಸ್ತಾನ ೨ನೇ ಆ.	ಮೌಲಾನಾ ಅಬುಮುಹಮ್ಮದ ಹುಸೇನ ಸಾಹಿ ಸೈಫಿ ಸುಭಾನಿ	ಆರ್ಯುಮ್ ಸ್ಪ್ರೀಮ್‌ಪ್ರೆಸ್ ಜಾಮಿರ್ದನರ ಹೈದ್ರಾಬಾದ (ಡೆಕ್ಕನ್)	೦-೧೨-೦	ಉರ್ದು ಪ್ರಾ. ಮಾ. ಶಾ. ಗೂ ಟ್ರೇ. ಸಂ. ಗೂ P ಮತ್ತು L
೨-೫	ಉರ್ದು ಖುಷ್ಕತಿ ಕಾಪಿನಂ೧ ೧-೪ ೧ನೆ ಆವೃತ್ತಿ ೧೯೩೩	ಮೌಲ್ವಿ ಮಹಮ್ಮದ ನಸಿರುದ್ದೀನ	ಮುಸ್ಲೀಮಯುನಿವ್ಹರ್ಸಿಟಿ ಪ್ರೆಸ್ ಅಲೀಗಡ	ಪ್ರತಿಕಾಪಿ ಬುಕ್ಕಿಗೆ ೦-೧-೩	೨ನೆ ಇ. ಗೆ ನಂ. ೧ ಮತ್ತು ೨ನಂ೧ ಕಾಪಿ. ೩ನ ಇ. ಗೆ ೩ ಮತ್ತು ೪ ನಂ೧
೩	ತಖ್ತೆ ತಾವೂಸ ೧೯೩೩	ಮೌಲ್ವಿ ಮಹಮ್ಮದ ಅಬ್ದುಲ್ ಲತೀಫಖಾನ	ರಾಯ್ ಸಾಹಿ ಮುನ್ಸಿ ಗುಲಾಬ ಸಿಂಗ ಆ್ಯಂಡ ಸನ್ಸ ಲಾಹೋರ	೧-೮-೦	ಉರ್ದು ಪ್ರಾ. ಹಾಗು ಮಾ.ಶಾ.ಗಳಿಗೆ ಟ್ರೇ.ಸಂ. ಗೆ P ಮತ್ತು L.
೪	ಆನೋಖಿ ದುನಿಯಾ ಹಿಸ್ಸಾ ೪	ಮುನ್ಸಿ ಆಗ್ರಾವಾಲಾ B A.	ಮೆ॥ ಮ್ಯಾಕ್ಮಿಲನ್ ಆ್ಯಂಡ ಕಂ೧ ಮುಂಬಯಿ	೧-೦-೦	ಕನ್ನಡ
೫	ಹಾಲಾತಿ ಹರಮೈನ ಶರೀ ಫೈನ, ನಕಾಶ ಸಹ ೩ನೆ ಆ. ೧೯೩೩	ಹಾಜಿ ಮಹಮ್ಮದ ಮೊಯಿನುದ್ದೀನ	ಇಂಟರ್ನ್ಯಾಶನಲ್ ಪ್ರೆಸ್ ಕಲಕತ್ತಾ	೧-೧೦	ಕನ್ನಡ

೯	ಇಬ್‌ತಿದಾಯಿ ಸಾಯಿನ್ಸ್ ಹಿಸ್ಸಾ ೧ ಸಪ್ಟಂಬರ ೧೯೩೩	ಡಾ. ಡಿ, ಡಿ ಸೆಂಡರಕರ	ಶಾಮಸುಲ್ ಮತಾಬೆ ಮಿಸನ್ ಪ್ರೆಸ್ ನಿಜಾಮಶಾಹಿ ರೋಡ ಹೈದ್ರಾಬಾದ	೧–೦–೦	ಸಪ್ಲಿಮೆಂಟರಿ ರೀಡರ	೫೦
೧೦	ಇಬ್ ತಿದಾಇ ಸಾಯನ್ಸ್ ಹಿಸಾ್ಸ ೨ ೧೯೩೩	ಡಾ. ಡಿ. ಡಿ. ಸೆಂಡರಕರ	ಸದರ	೧–೦–೦	ಸದರ	
೧೧	ಇಬ್ ತಿದಾಇ ಸಾಯನ್ಸ್ ಹಿಸಾ್ಸ ೩ ೧೯೩೩	ಸದರ	ಸದರ	೧–೪–೦	ಸದರ	
೧೨	ಸಿಲ್‌ಸಿಲಾ ಎ-ಆಫ್ತಾಬ್ ರೀಡರ ನಂ। ೧ ೧ನೆ ಆವೃತ್ತಿ ೧೯೩೩	–	ಭಾರತ ಹೌಸ ಲಾಹೋರ	೦–೫–೯	ಉರ್ದು ಪ್ರಾ. ಶಾ. P ಮತ್ತು L	ಪ್ರೈಮರಿ ಪಬ್ಲಿಕೇಷನ್ಸ
೧೩	ಸದರ ಆಫ್ತಾಬ್ ರೀಡರ ನಂ. ೨	–	ಸದರ	೦–೬–೦	ಸದರ	
೧೪	,, ಆಫ್ತಾಬ್ ರೀಡರ ನಂ. ೩	–	ಸದರ	೦–೯–೨	ಸದರ	
೧೫	ದಿ, ಇನ್‌ಫ್ಲ್ಯೂಯೆನ್ಸ ಆಫ್ ದಿ ಪರ್ಸಿಯನ್ ಆನ್ ದಿ ಮರಾಠಿ ಲ್ಯಾಂಗ್ವೇಜ ೧೯೩೩	ಮೌಲ್ವಿ ಅಬ್ದುಲ್ ಹಾಖ್ ಬಿ. ಎ.	ಅಂಜುಮನ್ ಉರ್ದು ಪ್ರೆಸ್ ಹೈದ್ರಾಬಾದ	೦-೧೨-೦	ಉರ್ದು ಪ್ರಾ. ಮತ್ತು ಮಾ. ಶಾ.ಗೆ ಪ್ರೀ. ಸಂ. ಗೆ P ಮತ್ತು L	

೧೫	ಅಸಾನ ಸರಫ್ರೋನಹವ ಹಿಸ್ಸಾ ೨ ೧ನೆ ಆ. ೧೯೩೩	ಶೇಖ ಮುನಸಿ ಮುಸ್ತಾಫಾ ಅಹಮ್ಮದ ಸಾಹೇಬ	ಗ್ರಂಥಕರ್ತ	೦-೮-೦	ಉರ್ದು ಶಾ. ೩ನೇ ಇ.ಗೆ ಮಾಧ್ಯಮಿಕ ೧ನೆ ಇ. ಗೆ (ಆಂಗ್ಲೋ ವ್ಹ. ಶಾಲೆಗಳ) T
೧೭.	ಕಾಮುಸುಲ್ ಮಶಾಹೀರ ಹಿಸ್ಸಾ ೧ ೧ನೆ ಆ. ೧೯೨೪	ನಿಝಾಮಿ ಬೇಡಾಯುನಿ	ನಿಝಾಮ ಪ್ರೆಸ್ ಬೆಡಾಯುನ್	೧೧೫ ಭಾಗ ೧-೨	ಉರ್ದು ಶಾ. ಹಾಗು ವಾ. ಹಾಗು ಟ್ರೇ. ಸಂ. ಗೆ
೧೮	ಕಾಮುಸುಲ್ ಮಶಾಹೀರ ಹಿಸ್ಸಾ ೨ ೧೯೨೪	ಸದರ	ಸದರ	–	ಸದರ
೧೯	ತಾರೀಖೆ ಅರಬ್ ೧೯೨೪	ಮೌಲ್ವಿ ಅಬ್ದುಲ್ ಗಫೂರ ಖಾನಸಾಹೇಬ ಆ್ಯಂಡ ಮೌಲ್ವಿ ಮಹಮ್ಮದ ಹಲೀಮಸಾಹೇಬ	ನಾಝೀರ ಪ್ರೆಸ್ ಲಖನೌ	೫-೦-೦	ಸದರ
೨೦	ಕುಲ್ಲಿಯಾತೆ ಇಸ್ಮಾಯಿಲ್ ೧ನೆ ಆ. ೧೯೧೦	ಮೌಲ್ವಿ ಮಹಮ್ಮದ ಇಸ್ಮಾಯಿಲ್	ದಿ. ಓರಿಯಂಟಲ್ ಪಬ್ಲಿಸಿಂಗ ಕಂ। ಮೀರತ	೩-೦-೦	ಉರ್ದು ಶಾ. ಹಾಗು ವಾ.ಹಾಗು ಟ್ರೇ. ಸಂ. P ಮತ್ತು L
೨೧	ಹಯಾತಿ ಸಾದಿ ೨ನೆ ಆ.	ಮೌಲ್ವಿ ಅಫ್ತಾಬ್ ಹುಸೇನ ಅಲಿ	ಮುಫೀದ-ಎ-ಆಮ್ ಪ್ರೆಸ್ ಆಗ್ರಾ	೧-೩-೦	ಸದರ
೨೨	ರಿಯಾಸತ್ ೧ನೆ ಆ. ೧೯೩೨	ಡಾ. ಝುಕೀರ ಹುಸೇನ	ಅಂಜುಮನ್ ಎ ತಾರಾಕ್ಕೀತೆ ಉರ್ದು, ಔರಂಗಾಬಾದ	೫-೦-೦	ಸದರ

೨೩	ಬಾಗೋ ಬಹಾರ ೧೯೩೧	ಮೀರ ಅಮ್ಮನ್‌ಡೆಹಲ್ವಿ	ಸದರ	೨-೦-೦	ಸದರ	
೨೪	ಯಾದಗಾರೆ ಗಾಲೀಬ ೨ನೆ ಆ.	ಶಾಮಸುಲ್ ಉಲಮ್ ಮೌಲ್ವಿ ಅಲ್ತಾಫ ಹುಸೇನ ಆಲಿ	ಮಾತ್ಬಾ-ಎ-ಫೈಜ-ಎ ಆಮ್ ಅಲೀಗಡ	೨-೦-೦	ಸದರ	
೨೫	ತಾರೀಖೆ ಆಖ್ಲಾಕೆ ಯುರೋಪ ಹಿಸ್ಸಾ ೧	ಅಬ್ದುಲ್ ಮಜಿದ ಬಿ. ಎ.	ಆ್ಯನ್ ನಾಯ್ಸಿರ ಪ್ರೆಸ್ ಲಖನೌ	೩-೦-೦	ಸದರ	
೨೬	ತಾರೀಖೆ ಆಖ್ಲಾಕೆ ಯುರೋಪ ಹಿಸ್ಸಾ ೨	ಸದರ	ಇನ್‌ಸ್ಟಿಟ್ಯೂಟ ಪ್ರೆಸ್ ಅಲೀಗಡ	೨-೮-೦	ಸದರ	
೨೭	ಸಿಯರುಲ್ ಮುಸನ್ನಿ ಫೀನ್ ಪೂನಾ ೧-೬-೧೯೩೪	ಮಹಮ್ಮದ ಯಹಯಾ ಬಿ. ಎ.	ಮ್ಯಾನೇಜರ ಡರೂಲ್ ಇಸ್ಲ್ಯಾಟ್ ಗಾಯ್ಸಿಬಾದ ಮಹಬೂಬುಲ್ ಮಾತಾಬ್ಬಿ ದಿಲ್ಲಿ	೨-೦-೦	ಸದರ	

ಡಿ. ಎ. ಇ. ಉರ್ದು ಸ್ಕೂಲ್
ಸೆಂಟ್ರಲ್ ಡಿ.

Reg. No. B. 2567

ಜಾಹೀರಾತು

(೧) ಹಿಂದುಮುಸಲ್ಮಾನರ ಇತಿಹಾಸ.

(ಬಾಳಕೃಷ್ಣ ಹಳೀಪೇಟಕೃತ)

ಇದು, ಪ್ರಾಥಮಿಕ ಶಾಲೆಗಳ ೫ನೆಯ ಇಯತ್ತೆಯ ಉಪಯೋಗಕ್ಕಾಗಿ ಸುಲಭವಾದ ಅಲಂಕಾರಿಕ ಭಾಷೆಯಲ್ಲಿ ಹೊಸಪದ್ಧತಿಗನುಸಾರವಾಗಿ ಬರೆಯಲ್ಪಟ್ಟಿರುವದು. ಈ ವರೆಗೆ ಬರೆದ ಇತಿಹಾಸಗಳಲ್ಲಿ ಇದು ಒಳ್ಳೇ ಉಪಯುಕ್ತವಾಗಿರುವದು. ಮುಂಬಯಿ ಸರಕಾರದಿಂದ ಕನ್ನಡ ೫ ನೆ ಇಯತ್ತೆಗೆ ಪಠ್ಯಪುಸ್ತಕವೆಂದು ಮಂಜೂರ ಮಾಡಲ್ಪಟ್ಟಿರುವದು. ಬೆಲೆ ೦–೮–೦.

(೨) ಕರ್ನಾಟಕದ ವರ್ಣನೆಯೂ ಇತಿಹಾಸವೂ.

(ನಾರಾಯಣ ಶ್ರೀನಿವಾಸ ರಾಜಪುರೋಹಿತ ಕೃತ)

ಕರ್ನಾಟಕದ ಇತಿಹಾಸ ಸಂಶೋಧಕ ಮಂಡಲದ ಪ್ರಮುಖರಲ್ಲೊಬ್ಬರಾದ ಮಿ. ರಾಜಪುರೋಹಿತ ಇವರು ಕರ್ನಾಟಕದ ಎಲ್ಲ ಭಾಗಗಳಲ್ಲಿ ಸಂಚರಿಸಿ ಶಿಲಾಲೇಖ, ತಾಮ್ರಪಟ, ನಿಷಿದಿಯಕಲ್ಲು, ಮಾಸತಿಕಲ್ಲು, ವೀರಗಲ್ಲು ಮೊದಲಾದವುಗಳನ್ನು ಶೋಧಿಸಿ ಇವುಗಳ ಆಧಾರದಿಂದ ಸುಸಂಗತವಾಗಿ ಈ ಇತಿಹಾಸವನ್ನು ಬರೆದಿರುವರು. ೪ನೆಯ ಇಯತ್ತೆಯ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕವೆಂದು ಸರಕಾರದಿಂದ ಮಂಜೂರ ಆಗಿದೆ. ಬೆಲೆ ೦–೮–೦.

(೩) ದೇಶೀಯ ಜಮಾಖರ್ಚು ಪ್ರವೇಶ.

(ಹನುಮಂತ ರಾಮಚಂದ್ರ ಕುಲಕರ್ಣಿ ಕೃತ)

ಪ್ರಾಥಮಿಕ ಕನ್ನಡ ಶಾಲೆಗಳ ೬ನೆಯ ೭ನೆಯ ಇಯತ್ತೆಯ ವಿದ್ಯಾರ್ಥಿಗಳಿಗೆ ಇದ್ದ ಈ ಜಮಾಖರ್ಚಿನ ವಿಷಯವು ೪ನೆಯ ಇಯತ್ತೆಗೆ ಆರಂಭವಾಗುವದರಿಂದ ಇದನ್ನು ಸುಲಭವಾದ ರೀತಿಯಲ್ಲಿ ತಿಳಿಯುವಂತೆ ಬರೆದಿದ್ದಾರೆ. ಅಭ್ಯಾಸಕ್ಕೆ ವಿಶೇಷ ಅನುಕೂಲವಾಗಿದೆ. ಮುಂಬಯಿ ಇಲಾಖೆಯ ವಿದ್ಯಾಖಾತೆಯಿಂದ ಮಂಜೂರಾಗಿದೆ. ಬೆಲೆ ೦–೫–೬.

(೪) ವಿಜಾಪುರ ಜಿಲ್ಲೆಯ ಸಾಮಾನ್ಯ ವರ್ಣನೆಯು.

ಕನ್ನಡ ಪ್ರಾಥಮಿಕ ಶಾಲೆಗಳ ೨ನೆಯ ೩ನೆಯ ಇಯತ್ತೆಯ ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವಂತೆ ಹೊಸ ಪದ್ಧತಿಯಿಂದ ಬರೆಯಲ್ಪಟ್ಟಿದೆ. ಈ ಮೊದಲು ಇದೇ ಪದ್ಧತಿಯಿಂದ ಬರೆದ ಮಿ. ಯ. ಕೃ. ಅಣ್ಣೀಗೇರಿ ಇವರಿಂದಲೇ ಇದನ್ನು ಬರೆಯಿಸಿದೆ. ಅಭ್ಯಾಸವು ಸುಲಭವೂ ಸುಗಮವೂ ಮನೋರಂಜಕವೂ ಆಗುವಂತೆ ಈ ಪುಸ್ತಕದಲ್ಲಿ ನಕಾಶಗಳೂ ಚಿತ್ರಗಳೂ ಸೇರಿಸಲ್ಪಟ್ಟಿವೆ. ಬೆಲೆ ೪–೬–೦.

ಪುಸ್ತಕ ದೊರೆಯುವ ಸ್ಥಳ :—

ವಿ. ಆರ್. ಶಿವನಾಗಪ್ಪ,

ವಾಗ್ವಿಲಾಸ ಬುಕ್‌ಡಿಪೋ ಪಾವರ ಪ್ರಿಂಟಿಂಗ ಪ್ರೆಸ್, ಹುಬ್ಬಳ್ಳಿ

Reg. No. B. 2567

ಕನ್ನಡ

ಪ್ರಾಥಮಿಕ ಶಿಕ್ಷಣ

(ಇದರಲ್ಲಿ ಕನ್ನಡ ಶಾಲಾಪತ್ರಿಕವೂ ಶಿಕ್ಷಕೆಯೂ ಸಮಾವೇಶವಾಗಿವೆ.)

Kannada Prathamik Shikshana

— AUGUST 1934 —

ಸಂಪಾದಕ— ವೆಂಕಟೇಶ ನರಸಿಂಗರಾವ ಮಗದಾಳ ಬಿ. ಎ.,

ಸಂಪುಟ ೭೧] ಆಗಷ್ಟ್ ೧೯೩೪ [ವ. ೬ ಸಂ. ೫

ವಿಷಯಾನುಕ್ರಮಣಿಕೆ

ಅ. ನಂ.	ವಿಷಯ			ಪುಟ
೧.	ಸ್ಮರಣ	...	...	೧
೨.	ಕಲಿಸುವ ಪಾಠಗಳು	...	...	೯
೩.	ಶಿಕ್ಷಕರು ಲಕ್ಷ್ಯದಲ್ಲಿಡಬೇಕಾದ ಮಾತುಗಳು		...	೧೧
೪.	ದೂರದರ್ಶಕ ಯಂತ್ರಗಳೂ ನಕ್ಷತ್ರಮಂಡಲವೂ			೧೬
೫.	ಅಮೇರಿಕೆಯ ವನಾಹತು	...	...	೨೦
೬.	ಮಾನಸಶಾಸ್ತ್ರ	...	...	೨೪
೭.	ಪ್ರಕಟನೆ	...	...	೩೨

Printed by K. R. Bhise at the Karnatak Printing Works, Dharwar
& Published by V. N. Magdal, B. A.,
Head Master, Training School, Dharwar, at his Office.

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:— ವೆಂಕಟೇಶ ನರಸಿಂಗರಾವ ಮಗದಾಳ, ಬಿ. ಎ.

ಸಂಪುಟ ೭೧ | ಆಗಸ್ಟ ೧೯೩೪ | ವರ್ಷ ೬ ಸಂ. ೫

ಸ್ಮರಣ

ಸ್ಮರಣಶಕ್ತಿ ಅಂದರೆ ನೆನಪಿನಲ್ಲಿಡುವ ಹಾಗು ನೆನಪಿಗೆ ತರುವ ಶಕ್ತಿ. ಇದ ಸ್ಮರಣೆಯದ ಶಿಕ್ಷಕರಿಲ್ಲ. ಇಷ್ಟೇಕೆ ? ಬಹುಕಾಲದಿಂದ ಶಿಕ್ಷಣದಲ್ಲಿ ಇದು ಮುಖ್ಯ ಸ್ಥಾನವನ್ನು ಆಕ್ರಮಿಸಿರುವದು. ಎಷ್ಟೋ ಕಾಲದವರೆಗಂತೂ ಕಲಿತದ್ದನ್ನೆಲ್ಲ ಸ್ಮರಣದಲ್ಲಿಡುವದೇ ಶಿಕ್ಷಣವೆಂದೆನಿಸಿತ್ತು. ನಮ್ಮ ಪರೀಕ್ಷಾ ಪದ್ಧತಿಯ ಸಹಾಯದ ಮೂಲಕ ಇಂದಿಗೂ ಇದು ಶಿಕ್ಷಣದಲ್ಲಿ ತನಗೆ ದೊರೆತ ಮಂತ್ರಿಪದವನ್ನು ಬಿಡುವದಿಲ್ಲ. ಕಲಿತ ಸಂಗತಿಗಳು ನೆನಪಿನಲ್ಲಿ ಉಳಿಯುವದಕ್ಕಾಗಿ ಅನೇಕ ಉಪಾಯಗಳನ್ನು ಯೋಜಿಸುವ ರೂಢಿಯೂ ಹಿಂದೆ ಇತ್ತು. ಸದ್ಯಕ್ಕೆ ಅವು ಇಲ್ಲದಾಗ ಸಾರಂಭಿಸಿವೆ. ಇದು ಸುಲಕ್ಷಣವು.

ನೆನಪಿನಲ್ಲಿ ಯಾವ ಮಾತುಗಳು ಚೆನ್ನಾಗಿ ಉಳಿಯುವವು ? ಸ್ಮರಣ ಶಕ್ತಿಯ ರಹಸ್ಯವು ಯಾವದು ? ಈ ಪ್ರಶ್ನೆಗಳಿಗೆ ಉತ್ತರವನ್ನು ಕಂಡು ಹಿಡಿಯುವದು ಕಠಿಣವಲ್ಲ. ಒಬ್ಬ ಹೆಸರಾದ ಶಿಕ್ಷಣ ಶಾಸ್ತ್ರಜ್ಞನು ಈ ಬಗ್ಗೆ ಒಂದು ಸುಲಭವಾದ ಪ್ರಯೋಗವನ್ನು ಮಾಡಿ ನೋಡಿ ಇದನ್ನು ಕಂಡು ಹಿಡಿದಿರುವನು. ಅದನ್ನು ಬೇಕಾದ ಶಿಕ್ಷಕರು ಮಾಡಿನೋಡಿ ಮನಗಾಣಬಹುದು. ಆತನು ಮಾಡಿದ ಪ್ರಯೋಗವನ್ನೂ ಅದರಿಂದ ಹೊರಟಿ ಸಿದ್ಧಾಂತವನ್ನೂ ನಮ್ಮ ವಾಚಕರಿಗಾಗಿ ಇಲ್ಲಿ ಕೊಡುವೆವು.

ಪ್ರಾಥಮಿಕ ಶಿಕ್ಷಣ

ಹದಿಮೂರು ಶಬ್ದಗಳ ಒಂದು ಯಾದಿಯನ್ನು ಸಿದ್ಧ ಪಡಿಸಿರಿ. ಈ ಶಬ್ದಗಳು ಒಂದಕ್ಕೊಂದು ಸಂಬಂಧವಿಲ್ಲದವಿರಬೇಕು. ಇವುಗಳಲ್ಲಿ ಹನ್ನೆರಡು ಮಕ್ಕಳಿಗೆ ಸಮಾನ ಪರಿಚಯವುಳ್ಳವಿರಬೇಕು. ಒಂದು ಶಬ್ದವು ಮಾತ್ರ ವಿಕ್ಷಣೆಗಿಂತ ಜೆಚ್ಚು ಸೇರಿಕೆಯುಳ್ಳದ್ದಿರಬೇಕು. ಇಂಥ ಒಂದು ಯಾದಿಯನ್ನು ಮಾದರಿಗಾಗಿ ಇಲ್ಲಿ ಕೊಟ್ಟಿರುವೆವು.

೧	ಇಲಿ	೬	ಅಮ್ಮ	೧೧	ಮನೆ ಮನೆ ಮನೆ
೨	ಗಣಿತ	೭	ಸಕ್ಕರೆ		
೩	ನೀರು	೮	ಹುಲ್ಲು		
೪	ಪುಸ್ತಕ	೯	ಕಾಗದ	೧೨	ಮೀನು
೫	ಕುದುರೆ	೧೦	ಕಲ್ಲು	೧೩	ಇದ್ದಲು

ಪ್ರತಿಯೊಬ್ಬ ಹುಡುಗನಿಗೆ ಕಾಗದ ಹಾಗು ಸೀಸಕಡ್ಡಿಯನ್ನು ಕೊಡಬೇಕು

ಈಗ ಹದಿಮೂರು ಶಬ್ದಗಳ ಒಂದು ಯಾದಿಯನ್ನು ಓದುವೆನು. ಇವುಗಳಲ್ಲಿ ಯಾರು ಯಾರು ಎಷ್ಟು ಎಷ್ಟು ಶಬ್ದಗಳನ್ನು ನೆನಪಿನಲ್ಲಿಡುವರೆಂಬದನ್ನು ನೋಡುವದಿರುವದು, ಎಂದು ಅವರಿಗೆ ತಿಳಿಸಬೇಕು. ಶಿಕ್ಷಕನು ಓದುವಾಗ ಯಾದಿಯೊಳಗಿನ ಎಲ್ಲ ಶಬ್ದಗಳು ಮುಗಿಯುವವರೆಗೆ ಎಲ್ಲರೂ ಲಕ್ಷ್ಯಗೊಟ್ಟು ಕೇಳುತ್ತಿರಬೇಕು; ನಡುವೆಯೇ ಯಾರೂ ಯಾವ ಶಬ್ದವನ್ನೂ ಬರೆಯಬಾರದು ಎಂದು ಅವರಿಗೆ ಎಚ್ಚರಿಕೆ ಕೊಡಬೇಕು. ಬರೆಯಿರಿ ಎಂದು ಹೇಳಿದಕೂಡಲೆ ಪ್ರತಿಯೊಬ್ಬನು ತನ್ನ ನೆನಪಿನಲ್ಲಿರುವ ಶಬ್ದಗಳನ್ನೆಲ್ಲ ನೆನಪಿಗೆ ಬಂದಂಥ ಕ್ರಮದಲ್ಲಿ ಬರೆದರೂ ಅಡ್ಡಿಯಿಲ್ಲ ಎಂದು ತಿಳಿಸಬೇಕು. ಶಬ್ದಗಳನ್ನು ಓದುವದಕ್ಕಿಂತ ಮೊದಲು ತಾವು ಏನು ಮಾಡತಕ್ಕದ್ದಿರುವದೆಂಬದು ಹುಡುಗರಿಗೆ ಜೆನ್ನಾಗಿ ಗೊತ್ತಾಗಿರಬೇಕು. ಮೇಲಿನ ಯಾದಿಯಲ್ಲಿ ಒಂದು ಶಬ್ದವನ್ನು ಮಾತ್ರ ತಿರುತಿರುಗಿ ನೂರು ಸಾರೆ ಹೇಳುವದಿರುವದಷ್ಟೇ. ಈ ಬಗ್ಗೆ ಹುಡುಗರಿಗೆ ಏನೂ ಹೇಳಬಾರದು.

ವರ್ಗದಲ್ಲಿ ೩೦ ಹುಡುಗರಿರುವರೆಂದು ತಿಳಿಯೋಣ. ಅವರು ಬರೆದದ್ದನ್ನು ನೋಡಿದರೆ ಕೆಳಗೆ ಕಾಣಿಸಿದ ಪರಿಣಾಮವು ಬಹುಶಃ ಕಂಡುಬರುವದು. ಪ್ರತಿಯೊಂದು ಶಬ್ದದ ಮುಂದೆ ಕೊಟ್ಟ ಸಂಖ್ಯೆಯು ಎಷ್ಟು ಹುಡುಗರು ಆ ಶಬ್ದವನ್ನು ನೆನಪಿನಲ್ಲಿಟ್ಟರೆಂಬದನ್ನು ತೋರಿಸುವದು.

ಇಲಿ	೨೭	ಅವ್ವ	೨೯	ಮನೆ	೨೮
ಗಣಿತ	೨೪	ಸಕ್ಕರೆ	೨೬	ಮನೆ	
ನೀರು	೧೪	ಹುಲ್ಲು	೨೦	ಮನೆ	
ಪುಸ್ತಕ	೨೧	ಕಾಗದ	೧೬	ಮೀನ	೨೩
ಕುದುರೆ	೨೨	ಕಲ್ಲು	೧೯	ಇದ್ದಲು	೨೫

ಅಂದರೆ ಮೊದಲಿನ ಶಬ್ದ, ಕೊನೆಯ ಶಬ್ದ, ತಿರುತಿರುಗಿ ಬರುವ ಶಬ್ದ ಹಾಗು ಹುಡುಗರ ಸೇರಿಕೆಯ ಶಬ್ದ ಇವು ಅವರ ನೆನಪಿನಲ್ಲಿ ಖಚಿತವಾಗಿ ನಿಲ್ಲಿಯುತ್ತವೆಂಬದು ಇದರಿಂದ ಸ್ಪಷ್ಟವಾಗುವದು. ಇನ್ನು ಮರುದಿವಸ ಹಿಂದೀ ಪರೀಕ್ಷೆಯನ್ನು ಮತ್ತೊಮ್ಮೆ ಮಾಡಿನೋಡಬೇಕು ಹಿಂದಿನ ದಿವಸ ತಿರ ಕವಿಸಿ ಹುಡುಗರು ನೆನಪಿನಲ್ಲಿಟ್ಟ ಶಬ್ದವನ್ನು ಈ ದಿನ ತಿರುತಿರುಗಿ ಹೇಳಿದ ಶಬ್ದ ವಾಗಿ ಹೇಳಿರಿ; ಹಾಗು ಕವಿಸಿ ಹುಡುಗರು ನೆನಪಿನಲ್ಲಿಟ್ಟ ಇನ್ನುರಡು ಶಬ್ದಗಳನ್ನು ತರಿಸಿಕೊಂಡು ಈ ದಿನ ಅವನ್ನು ಮೊದಲಿನ ಹಾಗು ಕೊನೆಯ ಶಬ್ದವಾ ಗುವಂತೆ ಹೇಳಿರಿ. ಹುಡುಗರಿಗೆ ಸೇರಿಕೆಯಿರುವಂಥ ಬೇರೊಂದು ಶಬ್ದವನ್ನು ತಂದು ಹೇಳಿರಿ. ಹೊಸ ಶಬ್ದಗಳ ಯಾದಿಯು ಕೆಳಗಿನಂತೆ ಆಗುವದು.

೧	ಕಲ್ಲು	೬	ನಾಗಪಂಚಮಿ	೯	ಸಕ್ಕರೆ
೨	ಪುಸ್ತಕ	೭	ಮನೆ	೧೦	ಕುದುರೆ
೩	ಇದ್ದಲು	ಲ	ಕಾಗದ	೧೧	ಇಲಿ
೪	ಮೀನು		ಕಾಗದ	೧೨	ಹುಲ್ಲು
೫	ಕಾಗದ		ಕಾಗದ	೧೩	ನೀರು

ಹೀಗೆ ಶಬ್ದಗಳನ್ನು ಹೊಸ ಅನುಕ್ರಮದಲ್ಲಿ ಹೇಳುವಾಗ ಒಂದಕ್ಕೊಂದು ಸಂಬಂಧವಿರುವ ಶಬ್ದಗಳು ಒಂದೇ ಕಡೆಗೆ ಬಾರದಂತೆ ಜಾಗ್ರತೆಗೊಳ್ಳಬೇಕು; ಅಂದರೆ ಕುದುರೆ, ಹುಲ್ಲು ಈ ಶಬ್ದಗಳು ಕೂಡಿ ಬಂದರೆ ಸಂಬಂಧದ ಮೂಲಕ ಅವನ್ನೊಂದು ಸೂಚಿಸುವವು. ಇಂಥ ಶಬ್ದಗಳು ಕೂಡಿ ಬರಲಾಗದು. ಈ ದಿನ ಹುಡುಗರು ಬರೆದದ್ದರ ಪರಿಣಾಮವು ಕೆಳಗಿನಂತೆ ಆಗುಬಹುದು.

ಕಲ್ಲು	೧೮	ನಾಗಪಂಚಮಿ	೧೮	ಸಕ್ಕರೆ	೨೫
ಪುಸ್ತಕ	೨೫	ಮನೆ	೧೮	ಕುದುರೆ	೨೦
ಇದ್ದಲು	೨೦	ಕಾಗದ		ಇಲಿ	೨೨
ಮೀನು	೨೧	ಕಾಗದ	೨೭	ಹುಲ್ಲು	೧೯
ಗಣಿತ	೨೪	ಕಾಗದ		ನೀರು	೧೬

ಇಂದಿನ ಪರೀಕ್ಷೆಯಿಂದಲೂ ಹಿಂದಿನ ದಿವಸದ ಸಂಗತಿಗಳೇ ನಮ್ಮ ಗೊತ್ತಾಗುವವು ಅಂದರೆ ಮೊದಲಿನ ಶಬ್ದ, ಕೊನೆಯ ಶಬ್ದ, ಪುನರುಚ್ಚರಿಸಿದ ಶಬ್ದ ಹಾಗು ಹುಡುಗರ ಪ್ರೀತಿಯ ಶಬ್ದ ಇವನ್ನೇ ಅವರು ಚೆನ್ನಾಗಿ ನೆನಪಿನಲ್ಲಿಡುವರು. ಈ ಪರೀಕ್ಷೆಯಿಂದ ನಮ್ಮ ಅಂಕೆಗಳು ತೋರಿಸುವಷ್ಟೇ ಸರಿಯಾದ ಪರಿಣಾಮಗಳು ಕಂಡು ಬರುವವೆಂದು ನಾವು ನಿಶ್ಚಯವಾಗಿ ಹೇಳುವದಿಲ್ಲ ಆದರೆ ನಾವು ಬೇಕಾದ ಶಬ್ದಗಳ ಯಾದಿಯನ್ನು ಮಾಡಿ, ಹುಡುಗರಿಗೆ ಹೇಳಬೇಕಾದ ಸೂಚನೆಗಳನ್ನು ಪೂರ್ಣವಾಗಿ ಅವರಿಗೆ ತಿಳಿಯುವಂತೆ ಕೊಟ್ಟು, ಅವರಿಂದ ಬರೆಯಿಸಿ ನೋಡಿದರೆ, ನಾವು ತೋರಿಸಿದ ಪರಿಣಾಮಗಳೇ ಒಟ್ಟಿನ ಮೇಲೆ ಗೋಚರವಾಗುವವೆಂದು ಧಾರಾಳವಾಗಿ ಹೇಳಬಹುದು. ನಮ್ಮ ಯಾದಿಯಲ್ಲಿರುವ ಪ್ರತಿಯೊಂದು ಶಬ್ದವು ಹುಡುಗರಿಗೆ ಪರಿಚಯವುಳ್ಳದ್ದಿರುವದು; ಆದ್ದರಿಂದ ಅವರಿಗೆ ಅದು ಹೆಚ್ಚು ಕಡಿಮೆ ಸೇರಿಕೆಯುಳ್ಳದ್ದಿರುವದು. ಈ ಶಬ್ದವು ಪ್ರತಿಯೊಬ್ಬ ಹುಡುಗನಿಗೆ ಇಷ್ಟೇ ಸೇರುವದೆಂದು ನಮಗೆ ಹೇಳಲಿಕ್ಕಾಗದು. ಈ ಕಾರಣಗಳ ಮೂಲಕ ನಮ್ಮ ಪರೀಕ್ಷೆಯ ಪರಿಣಾಮವು ಪ್ರತಿಯೊಂದು ಸಾರೆ ಒಂದೇ ತರದ್ದಾಗುವದೆಂದು ಹೇಳಲಾಗುವದಿಲ್ಲ. ಆದರೂ ನಾವು ಮೇಲೆ ತೋರಿಸಿದ ಮೇರೆಗೆ ಎರಡು ದಿನ ಪರೀಕ್ಷಿಸುವದರಿಂದ ಹುಡುಗರ ಸ್ಮರಣದ ಬಗ್ಗೆ ಕೆಲವು ಮಾತುಗಳು ಸಿದ್ಧವಾಗುವವು. ಸ್ಮರಣದ ಆಧಾರಗಳು ಯಾವವನ್ನು ಅವಲಂಬಿಸುವವೆಂದರೆ:—

೧.	ಮೊದಲು	Primacy	ಪ್ರಥಮತೆ
೨.	ಈಚೆ	Recency	ಆಧುನಿಕತೆ
೩.	ತಿರುತಿರುಗಿ ಅನ್ನುವದು	Repetition	ಪುನರುಕ್ತತೆ
೪.	ಸೇರಿಕೆ	Interest	ಆಸಕ್ತತೆ

ನಾವು ಮಾಡಿದ ಪರೀಕ್ಷೆಗಳಲ್ಲಿ ಮೊದಲು ಜೇಳಿದ ಶಬ್ದವನ್ನು ಹುಡುಗರು ಪ್ರತಿಯೊಂದು ಸಾರೆ ಮಿಕ್ಕ ಎಲ್ಲ ಶಬ್ದಗಳಿಗಿಂದ ಹೆಚ್ಚಾಗಿ ನೆನಪಿನಲ್ಲಿಟ್ಟರು. ಅಂದರೆ ಮೊದಲು ಮನಸ್ಸನ್ನು ಸೇರುವ ಸಂಗತಿಯು ಅದರ ಹಿಂದೆ ಸೇರುವ ಸಂಗತಿಗಳಿಗಿಂತ ದೃಢವಾಗಿ ಅಲ್ಲಿ ನಿಲ್ಲುವದು; ಹಾಗು ತೀವ್ರವಾಗಿ ನೆನಪಿಗೆ ಬರುವದು. ಇದರಂತೆಯೇ ಕೊನೆಗೆ ಜೇಳಿದ ಶಬ್ದವನ್ನು ಬಹಳ ಹುಡುಗರು ನೆನಪಿನಲ್ಲಿಟ್ಟರು. ಅಂದರೆ ತೀರ ಈಚೆಗೆ ಮನಸ್ಸಿನಲ್ಲಿ ಸೇರಿದ್ದು ತೀವ್ರವಾಗಿ ನೆನಪಿಗೆ ಬರುವದು. ಇವಲ್ಲದೆ, ಪುನರುಚ್ಚರಿಸಿದ ಶಬ್ದವನ್ನು ಪ್ರತಿಯೊಂದು ಸಾರೆ ಬಹಳ ಹುಡುಗರು ನೆನಪಿನಲ್ಲಿಟ್ಟರು. ತಿರುತಿರುಗಿ ಮನಸ್ಸನ್ನು ಸೇರಿದ್ದರ ಮಹತ್ವವು ಇದರಿಂದ

ಸಿದ್ಧವಾಗುವದು. ಕೊನೆಗೆ, ಹುಡುಗರಿಗೆ ವಿಶೇಷವಾಗಿ ಸೇರುವಂಥ ಅಂದರೆ ಯಾತರ ಬಗ್ಗೆ ಅವರ ಮನಸ್ಸು ಹರಿಯುವದೋ ಆ ಶಬ್ದವನ್ನು ಅವರು ಜೆಜ್ಜಾಗಿ ನೆನಪಿನಲ್ಲಿಟ್ಟರು. ಅಂದರೆ ನೆನಪಿನಲ್ಲಿ ಉಳಿಯಬೇಕಾದರೆ, ಆ ಸಂಗತಿಯ ಇಲ್ಲವೆ ಮಾತಿನ ಬಗ್ಗೆ ನಮಗೆ ಸೇರಿಕೆ ಇಲ್ಲವೆ ಪ್ರೀತಿಯು ಅಂದರೆ ಆಸಕ್ತಿಯು ಇರುವದು ಮಹತ್ವದ್ದಾಯಿತು.

ಹೀಗೆ, ಸುಲಭವಾದ ಒಂದೆರಡು ಪ್ರಯೋಗಗಳಿಂದ ನಾವು ನೆನಪಿನ ಶಕ್ತಿಯ ಆಧಾರದ ಸಂಗತಿಗಳನ್ನು ಗೊತ್ತುಮಾಡಿಕೊಂಡಂತಾಯಿತು. ಇನ್ನು ಇವು ನಿಜವೋ ಹ್ಯಾಗೆ ಎಂಬದನ್ನು ಅನುಭವದಲ್ಲಿ ನಮಗೆ ಕಂಡುಬರುವ ಕೆಲವು ಸಂಗತಿಗಳನ್ನು ಪರೀಕ್ಷಿಸಿ ದೃಢಪಡಿಸಿಕೊಳ್ಳಬೇಕು. ಅನುಭವವನ್ನು ಇವು ಪುರಸ್ಕರಿಸಿದರೆ ನಮ್ಮ ಸಿದ್ಧಾಂತಗಳು ಸರಿಯಿರುವವೆಂದೂ ಇವು ಅನುಭವಕ್ಕೆ ವಿರುದ್ಧವಾಗಿದ್ದರೆ ನಮ್ಮ ಸಿದ್ಧಾಂತಗಳು ದೋಷಯುಕ್ತವಾದವೆಂದೂ ನಾವು ನಿಷ್ಕರ್ಷಿಸಬಹುದು.

(೧) ಮುದುಕರ ಸ್ಮರಣಶಕ್ತಿಯ ಅನುಭವವು ನಮ್ಮೆಲ್ಲರಿಗೆ ಇರುವದಷ್ಟೇ. ಈ ಬಗ್ಗೆ ನಾವು ಏನು ಮನಗಂಡಿರುವೆವು? ನರೆಗೂದಲಿನ ಅಂದರೆ ಇಳಿ ವಯಸ್ಸಿನ ಮನುಷ್ಯನಿಗೆ ತನ್ನ ಆಯುಷ್ಯದ ಎಷ್ಟೋ ಅನುಭವಗಳು ಮರೆತು ಜೋಗಿರುತ್ತವೆ. ಆದರೆ ಆತನ ಚಿಕ್ಕಂದಿನ ಅನುಭವಗಳನ್ನು ಅವನು ಮರೆತಿರುವದಿಲ್ಲ. ಈ ಅನುಭವಗಳು ಆತನ ಚಿತ್ತವನ್ನು ಮೊದಲು ಸೇರಿರುವವು. ಸಾಲೆಯಲ್ಲಿ ನಮ್ಮ ಅನುಭವಕ್ಕೆ ಬರುವ ಒಂದು ಉದಾಹರಣವನ್ನು ತೆಗೆದುಕೊಳ್ಳುವ ಹುಡುಗರು ಒಂದು ನಾಟಕವನ್ನು ಆಡಿ ತೋರಿಸಬೇಕಾಗಿದೆ. ಮಾತುಗಳನ್ನು ಪಾಠ ಮಾಡುವಾಗ ಒಬ್ಬ ಹುಡುಗನು ತಪ್ಪು ಪಾಠವನ್ನು ಮಾಡಿದ ಮೂಲಕ ಅದು ಅವನ ಬಾಯಲ್ಲಿ ಕಟ್ಟಿದಂತಾಗಿದೆ. ಅದನ್ನು ತಿದ್ದಲಿಕ್ಕಾಗಿ ಶಿಕ್ಷಕನು ಹತ್ತಿಪ್ಪತ್ತು ಸಾರಿ ಅದನ್ನು ಅವನಿಂದ ಸರಿಯಾಗಿ ಅನ್ನಿಸಿ ಅವನಿಗೆ ಸರಿಯಾದ ಮಾತು ಬಂತೆಂದು ಧೈರ್ಯದಿಂದಿರುತ್ತಾನೆ. ಹುಡುಗನಾದರೂ ಸರಿಯಾದ ಮಾತನ್ನೇ ಪ್ರಯತ್ನಪೂರ್ವಕವಾಗಿ ಶಿಕ್ಷಕನದುರಿಗೆ ಅನ್ನುತ್ತಾನೆ. ಆದರೆ ನಿಜವಾಗಿ ನಾಟಕ ಆಡುವಾಗ ಸುತ್ತಲಿನ ಪ್ರೇಕ್ಷಕರ ಹೊಸಪರಿಸ್ಥಿತಿಯಲ್ಲಿ ಅವನು ಎಲ್ಲವನ್ನೂ ಮರೆತು ತಪ್ಪು ಮಾತನ್ನಾಡಿ ಬಿಡುತ್ತಾನೆ! ಯಾಕೆ? ಮೊದಲಿನ ಸಂಸ್ಕಾರವು ಅವನ ಮನದಲ್ಲಿ ದೃಢವಾಗಿರುವದು. ಅಂದರೆ ನಮ್ಮ ಆದ್ಯ ಸಂಸ್ಕಾರಗಳು ನಮ್ಮಲ್ಲಿ ಪ್ರಬಲವಾಗಿ ಉಳಿಯುತ್ತವೆ. ಇದಕ್ಕಾಗಿಯೇ ಪ್ರಾಥಮಿಕ ಶಿಕ್ಷಕರ ಕೆಲಸವೂ ಭಾರವೂ ಅಪರಿಮೇಯವಾದ ಮಹತ್ವದವೆಂದು ಶಾಸ್ತ್ರಜ್ಞರು ಸಾರುವದುಂಟು.

ಎರಡನೆಯ ನಮ್ಮ ಸಿದ್ಧಾಂತವಂದರೆ ಮನಸ್ಸು ಇತ್ತೀಚಿಗೆ ಅನುಭವಿಸಿದ ಸಂಗತಿಯನ್ನು ಚೆನ್ನಾಗಿ ನೆನಪಿನಲ್ಲಿಡುವದು. ಈ ಬಗ್ಗೆ ನಮ್ಮ ಅನುಭವವು ಏನಿರುವದು? ಪರೀಕ್ಷೆಗೆ ಕೂಡ್ರುವವರು ಯಾವಕಾಲದಲ್ಲಿ ಎಲ್ಲಕ್ಕೂ ಹೆಚ್ಚು ದುಡಿಯುವರು? ಪರೀಕ್ಷೆಯು ಸಮೀಪಿಸಿದಂತೆ ಅವರ ಅಭ್ಯಾಸವು ಬಲಿಯುತ್ತದೆ. ಪರೀಕ್ಷೆಗೆ ಒಂದು ತಿಂಗಳಿರುವಾಗ ಇಲ್ಲ; ಒಂದು ವಾರ ಇಲ್ಲವೆ ಒಂದೆರಡು ದಿನಗಳಿರುವಾಗ ಉಜಳಣಿಯು ಅಭೂತಪೂರ್ವವೇಗದಿಂದ ನಡೆದಿರುವದನ್ನು ಕಾಣಬಹುದು. ಅಂದರೆ ಈಚೆಗೆ ಮನಸ್ಸಿನಲ್ಲಿ ಬಂದದ್ದೇ ತೀವ್ರ ನೆನಪಿಗೆ ಬರುವದೆಂಬದು ನಮ್ಮ ಅನುಭವದಿಂದಲೂ ಸಿದ್ಧವಾಗುವದು.

ಪುನರುಕ್ತಿಯು ನೆನಪಿನ ಮೂರನೆಯ ಆಧಾರವು; ಈ ಬಗ್ಗೆ ಎಲ್ಲರಿಗೂ ಅನುಭವವಿರುವದು ಮಗ್ಗಿಯನ್ನು ನಾವು ಹುಡುಗರಿಂದ ಬಿಡದೆ ಪಾಠಮಾಡಿಸುತ್ತೇವೆ. ಪದರೂಪಿಯ ತಾಸು ಪ್ರತಿನಿತ್ಯವೂ ತಪ್ಪದೆ ನಡೆಯುತ್ತದೆ. ಕವಿತೆಯನ್ನೂ ವ್ಯಾಕರಣ ನಿಯಮವನ್ನೂ ಎಷ್ಟು ಗಟ್ಟಿಮಾಡಿದರೂ ಮತ್ತೊಮ್ಮೆ ಗಟ್ಟಿಮಾಡಿರೆಂದು ನಾವು ವಿದ್ಯಾರ್ಥಿಗಳನ್ನು ಹುರಿದುಂಬಿಸುತ್ತೇವೆ. ಆದರೆ ಹೀಗೆ ಎಲ್ಲ ವಿಷಯಗಳಲ್ಲಿ ಎಲ್ಲ ಸಂಗತಿಗಳನ್ನು ಗಟ್ಟಿಮಾಡಿಸುವದರಿಂದ ಮನಸ್ಸಿನಲ್ಲಿ ದೃಢವಾಗಬೇಕೆಂದು ಇವೆಲ್ಲ ಒಮ್ಮೆಲೆ ಹರಿಬಿದ್ದು ಒಂದನ್ನೊಂದು ದೂಡಿ ಬಿಡುವದರಿಂದ ಮನಸ್ಸಿನಲ್ಲಿ ಯಾವದೂ ನಿಲ್ಲದಾಗುತ್ತದೆ. ಇದು ಪ್ರತಿಯೊಬ್ಬ ಶಿಕ್ಷಕನ ಅನುಭವಕ್ಕೆ ಬಂದಿರುವದಷ್ಟೇ. ಇರಲಿ, ನಮ್ಮ ಪ್ರಯೋಗದಿಂದ ಸಿದ್ಧವಾದ ಸಂಗತಿಯು ಅಂದರೆ ಪುನರುಕ್ತಿಯು ನೆನಪಿನ ಆಧಾರವೆಂಬ ಮಾತು ಅನುಭವದಿಂದ ಪುರಸ್ಕೃತವಾಗುವದೆಂಬದರಲ್ಲಿ ಸಂದೇಹವಿಲ್ಲ.

ನೆನಪಿನ ಕೊನೆಯ ಆಧಾರವು ಯಾವದು? ಸೇರುವಿಕೆಯು, ಮನಸ್ಸಿಗೆ ಬೇಕೆನಿಸುವದು. ನಮಗೆ ಯಾವದರಲ್ಲಿ ಆಸಕ್ತಿಯು ಇರುವದೋ ಅದು. ನಾವು ಒಂದು ವ್ಯಾಖ್ಯಾನವನ್ನು ಕೇಳಿಬಂದಬಳಿಕ ಯಾವ ಮಾತುಗಳು ನಮ್ಮ ನೆನಪಿನಲ್ಲಿ ಬಲವಾಗಿ ಉಳಿಯುತ್ತವೆ? ನಮ್ಮ ಮನಸ್ಸನ್ನು ಎಳೆದ ಮಾತುಗಳೇ. ಹೀಗೆ ಚಿರವಾಗಿ ಉಳಿಯುವವೆಂಬದು ಅನುಭವ ಸಿದ್ಧವಾದದ್ದು. ನಾವು ಪ್ರವಾಸಮಾಡಿ ಬಂದಬಳಿಕ ಯಾವ ಸಂಗತಿಗಳು ನೆನಪಿನಲ್ಲಿ ನಿಲ್ಲುವವು? ನಮಗೆ ಮನೋಹರವೆನಿಸಿದ ಸಂಗತಿಗಳಷ್ಟೇ. ವರ್ತಮಾನ ಪತ್ರವನ್ನು ಓದಿದೆವು. ಯಾವ ಮಾತುಗಳು ನಮ್ಮ ನೆನಪಿನಲ್ಲಿ ಉಳಿಯುವವು? ಮನಸ್ಸನ್ನು ಎಳೆದ ಮಾತುಗಳಲ್ಲವೇ? ನಮ್ಮ ಆಯುಷ್ಯದ ಅನುಭವಗಳಲ್ಲಿಯೂ ಈ ಮಾತು ನಿಜವಿರುತ್ತದೆ. ಆದ್ದರಿಂದ ಮನಸ್ಸನ್ನು ಎಳೆಯುವಂಥದೇ ನೆನಪಿನಲ್ಲಿ ದೃಢವಾಗಿ ಉಳಿಯುವದೆಂಬದು ಸಿದ್ಧವಾದಂತಾಯಿತು.

ಒಟ್ಟಿನಮೇಲೆ ಸೇರಿಕೆ, ತಿರುತಿರುಗಿ ಅನ್ನುವದು, ಮೊದಲು, ಈಚೆ ಇವು ಮನಸ್ಸಿನ ನೆನಪಿನ ಶಕ್ತಿಯ ಆಧಾರಗಳೆಂದು ನಾವು ಎಣಿಸತಕ್ಕದ್ದು;

ಇನ್ನು ನಮಗೆ ಇರುವ ಜ್ಞಾನಕ್ಕೆ ಯಾವ ಸಂಬಂಧವೂ ಇಲ್ಲದಂಥ ಸಂಗತಿಯು ನಮ್ಮ ಮನಸ್ಸನ್ನು ಸೇರಲಾರದು ಎಂಬ ಮಾತನ್ನು ನಾವು ಲಕ್ಷ್ಯಗೊಟ್ಟು ವಿಚಾರಿಸಿ ಮನಗಾಣತಕ್ಕದ್ದು. ನಮಗೆ ಏನೂ ಅರ್ಥವಾಗದ ಮಾತು ನಮ್ಮ ಮನಸ್ಸನ್ನು ಸೇರದು; ಅದರ ಅರಿವು ನಮಗೆ ಆಗದು. ನಮಗಿರುವ ಜ್ಞಾನಕ್ಕೂ ಅದಕ್ಕೂ ಯಾವ ಸಂಬಂಧವೂ ಇಲ್ಲದಿದ್ದರೆ, ನಮಗೆ ಅದರ ಅರ್ಥವೇ ಆಗಲಾರದು. ಇದಕ್ಕೆ ಪ್ರತಿಯಾಗಿ ಯಾವದೊಂದು ಸಂಗತಿಯು ಅಥವಾ ಮಾತು ನಮ್ಮ ಹಿಂದಿನ ಜ್ಞಾನಕ್ಕೆ ಒಂದಕ್ಕಿಂತ ಹೆಚ್ಚು ರೀತಿಯಾಗಿ ಸಂಬಂಧವುಳ್ಳದ್ದಿದ್ದರೆ, ಅದು ಸುಲಭವಾಗಿ ಮನಸ್ಸನ್ನು ಸೇರುವದು; ಅಲ್ಲಿ ನಿಲ್ಲುವದು ಹಾಗು ತೀರ ಸ್ವಲ್ಪ ಪ್ರಯತ್ನದಿಂದ ನೆನಪಿಗೆ ಬರುವದು. ಒಬ್ಬ ಕೀರ್ತನಕಾರರ ಕೀರ್ತನವನ್ನು ನಾವು ಒಂದು ಗುಡಿಯಲ್ಲಿ ಕೇಳಿದೆವೆಂದು ತಿಳಿಯೋಣ. ಬೇರೊಬ್ಬ ಕೀರ್ತನಕಾರನ ಬಗ್ಗೆ ನಾವು ಕೇಳಿದಕೂಡಲೆ, ನಾವು ಹಿಂದೆ ಕೇಳಿದ ಕೀರ್ತನ, ಕೀರ್ತನಕಾರ, ಗುಡಿ ಇವುಗಳ ನೆನಪು ನಮಗೆ ಆಗುವದು ಇಲ್ಲವೆ ಆ ಗುಡಿಯನ್ನು ನೋಡಿದಕೂಡಲೆ, ಕೀರ್ತನ, ಕೀರ್ತನಕಾರ ಇವರ ನೆನಪು ಬರುವದು ಈ ಮೇರೆಗೆ ಒಂದಕ್ಕಿಂತ ಹೆಚ್ಚು ಸಂಗತಿಗಳನ್ನು ಸಂಬಂಧಪಡಿಸುವ ಕಾರ್ಯಕ್ಕೆ ನಾವು ವಿಚಾರವೆನ್ನುತ್ತೇವೆ. ಯಾವ ಪ್ರಕಾರದ ಸಂಬಂಧಗಳೂ ಇಲ್ಲದ ಮಾತು ಗಳು ಇಲ್ಲವೆ ಸಂಗತಿಗಳು ನಮ್ಮ ಮನದಲ್ಲಿಯೇ ಜೋಗಲಾರವೆಂದು ನಾವು ಮೇಲೆ ಹೇಳಿರುವೆವಷ್ಟೇ; ಅಂದಮೇಕ ಅವು ನಮ್ಮ ಮುಂದೆ ಮೊದಲು ಬರಲಿ, ಈಚೆಗೆ ಬರಲಿ, ಪುನಃ ಪುನಃ ಬರಲಿ ಹಿಂದಿನ ನಮ್ಮ ಜ್ಞಾನಕ್ಕೆ ಏನೂ ಸಂಬಂಧವಿಲ್ಲದವಿದ್ದರೆ ನಮ್ಮ ಮನದಲ್ಲಿ ಸೇರಲಾರವು; ಅವುಗಳ ನೆನಪು ಇಂಥ ಪ್ರಸಕ್ತಿಯುಳ್ಳಿ ಆಗುವ ಪ್ರಶ್ನವೇ ಹುಟ್ಟುವದಿಲ್ಲ. ಆದರೆ ಅವು ನಮ್ಮ ಮನಸ್ಸನ್ನು ಸೇರಬೇಕಾದರೆ, ಆ ಮೊದಲು ನಮಗಿರುವ ಜ್ಞಾನಕ್ಕೆ ಸಂಬಂಧಪಟ್ಟೇ ಸೇರಬೇಕು. ಆದ್ದರಿಂದ ಸಂಬಂಧಗಳನ್ನು ಬಲಪಡಿಸುವದು ಅಂದರೆ ವಿಚಾರಮಾಡುವದು ನೆನಪಿನ ಗುರುಮಂತ್ರವಿರುವದು

ಸ್ಮರಣಶಕ್ತಿಯ ಬಗ್ಗೆ ಮಾನಸಶಾಸ್ತ್ರವು ಶಿಕ್ಷಕರ ಸಹಾಯಕ್ಕೆ ಇದಕ್ಕಿಂತ ಹೆಚ್ಚು ಮಹತ್ವವಾದ ಬೇರೊಂದು ನಿಯಮವನ್ನು ಹೇಳಿಲ್ಲ. ವಿದ್ಯಾರ್ಥಿಗಳ ಮನಸ್ಸಿನಲ್ಲಿ ಸಂಗತಿಗಳನ್ನು ನಿಲ್ಲುವಂತೆ ಮಾಡಬೇಕಾದರೆ ಶಿಕ್ಷಕನು ಆ ಸಂಗತಿಗಳಬಗ್ಗೆ ಅವರಿಂದ ವಿಚಾರಮಾಡಿಸಬೇಕು. ಅವರು ಆ ಸಂಗತಿಯ ಇಲ್ಲವೆ ಮಾತಿನ

ಕಾರಣವನ್ನು ಮನಗಾಣಲಿ; ಆ ಸಂಗತಿಯ ಇಲ್ಲವೆ ಮಾತಿನ ಪರಿಣಾಮವನ್ನು ಕುರಿತು ವಿಚಾರಿಸಲಿ; ಆ ಮಾತಿನಿಂದ ತಮಗೆ ಏನು ಉಪಯೋಗವಿರುವದೆಂಬದನ್ನು ಮನವರಿಯಲಿ. ಆ ಮಾತಿನಬಗ್ಗೆ ಹುಡುಗನ ಮನಸಿನಲ್ಲಿ ಈ ಸಂಬಂಧಗಳನ್ನು ಉಂಟುಮಾಡಿದ ಹೊರತು ಆ ಮಾತು ಹುಡುಗನ ಮನಸಿನಲ್ಲಿ ದೃಢವಾಗಿ ನಿಲ್ಲದು ಹುಡುಗನ ಮನಸಿನ ಭಾಗವಾಗಲಾರದು. ಊಟಕ್ಕೆ ಕುಳಿತಾಗ ನೊಣಗಳನ್ನು ಎಲೆಯಮೇಲೆ ಕೂಡಗೊಡಬಾರದು ಎಂಬ ಮಾತನ್ನು ತೆಗೆದುಕೊಳ್ಳೋಣ. ನಾವು ಇದನ್ನು ಸುಮ್ಮನೆ ಅವನ ಮುಂದೆ ಹೇಳಿಬಿಟ್ಟರೆ ಅದು ಆತನ ಮನಸಿನಲ್ಲಿ ಸೇರಲಾರದು; ಅಲ್ಲಿ ಉಳಿಯುವದಂತೂ ಒತ್ತಟ್ಟಿಗೆ ಇರಲಿ. ಆದರೆ ನೊಣದ ಕಾಲಿಗೆ ಅಂಟಿಕೊಂಡಿರುವ ಹೊಲಸನ್ನು ಆತನಿಗೆ ತೋರಿಸೋಣ; ಅಂದರೆ ನಾವು ಹೇಳಿವ ಮಾತಿಗೂ ಆ ಹೊಲಸಿಗೂ ಇರುವ ಸಂಬಂಧವು ಅವನ ಮನಸಿಗೆ ಹೊಳೆಯುವದು; ಇದಲ್ಲದೆ ವಿಷಮಜ್ವರ ಪೀಡಿತರಾದವರ ರಕ್ತದಲ್ಲಿ ನೊಣದ ಕಾಲಿಗೆ ಅಂಟಿಕೊಂಡಿರುವ ಅಣುಜಂತುಗಳು ಇರುವವೆಂದೂ ಅವು ಆಹಾರದ ಮಾರ್ಗವಾಗಿ ಒಳಸೇರಿರಬಹುದೆಂದೂ ಅವನು ತಿಳಿಯಲಿ. ಅಂದರೆ ಇವೆರಡು ಸಂಬಂಧಗಳು ಅವನಿಗೆ ಗೊತ್ತಾಗುವವು. ಆ ಬಳಿಕ ಆ ಮಾತು ಅವನ ಮನಸಿನಲ್ಲಿ ಚೆನ್ನಾಗಿ ಉಳಿಯುವದು. ಅಂದರೆ ನೊಣವನ್ನು ನೋಡಿದಕೂಡಲೆ ಅವನಿಗೆ ಈ ಮಾತಿನ ನೆನಪಾಗದಿರದು.

ಗಣತದಲ್ಲಿ ಶಿಕ್ಷಕರು ನಿಯಮುಗಳನ್ನು ಪಾಠಮಾಡಿಸುವದುಂಟು; ಹುಡುಗರು ಅದನ್ನು ಕೂಡಲೆ ಮರೆಯುವದುಂಟು; ನಿಯಮದ ಕಾರಣಗಳನ್ನು ಅವರು ಅರಿತಿರುವದಿಲ್ಲ. ಅದರ ಉಪಯೋಗವನ್ನು ಅವರು ಮಾಡಿರುವದಿಲ್ಲ. ಆ ನಿಯಮಕ್ಕೂ ತಮ್ಮ ಹಿಂದಿನ ಜ್ಞಾನಕ್ಕೂ ಇರುನ ಸಂಬಂಧವು ಗೊತ್ತಿರುವದಿಲ್ಲ. ಆದ್ದರಿಂದ ಆ ನಿಯಮವು ಅವರ ಮನಸಿನಲ್ಲಿ ಉಳಿಯುವದಿಲ್ಲ. ಇದಕ್ಕೆ ಪ್ರತಿಯಾಗಿ ಅವರಿಗೆ ಗೊತ್ತಿರುವ ಇಲ್ಲವೆ ಗೊತ್ತಾಗುವ ಸಂಗತಿಗಳಿಂದ ಅವರೇ ತಮಗೆ ಹೊಳೆಯುವ ಒಂದು ನಿಯಮವನ್ನು ಹೇಳಲಿ; ಅದನ್ನು ಉಪಯೋಗಿಸಲಿ; ಆ ಬಳಿಕ ಅದನ್ನು ನೆನಪಿನಲ್ಲಿಡಲು ಅವರಿಗೆ ಕಠಿಣವಾಗುವದಿಲ್ಲ. ಇತಿಹಾಸದಲ್ಲಿ ಕಾರ್ಯಕಾರಣ ಸಂಬಂಧವನ್ನು ವಿದ್ಯಾರ್ಥಿಗಳು ಅಭ್ಯಾಸಿಸಲಿ; ವ್ಯಾಕರಣದಲ್ಲಿ ನಿಯಮಗಳನ್ನು ಗೊತ್ತುಹಿಡಿದು ತಮ್ಮ ಬರಿಹದಲ್ಲಿ ಅವುಗಳನ್ನು ಉಪಯೋಗಿಸಲಿ. ಸಾಲೆಯಲ್ಲಿ ಕಲಿಸುವ ಯಾವತ್ತು ವಿಷಯಗಳಲ್ಲಿ ನಾವು ಹುಡುಗರಿಂದ ವಿಚಾರ ಮಾಡ ಹಚ್ಚಬೇಕು; ಹೀಗೆ ಮಾಡುವದರಿಂದ ಶಿಕ್ಷಣದ ಫಲವು ಕಾಣಬರುತ್ತವದು. ಪ್ರತಿಯೊಂದು ಪಾಠದಲ್ಲಿ ಬಂದ ಸಂಗತಿಗಳನ್ನು ಕಂಠಪಾಠ ಮಾಡಿಸಲು ಹವಣಿಸಿದರೆ ಏನೂ ಪ್ರಯೋಜನವಾಗಲಾರದು.

ಕಲಿಸುವ ಪಾಠಗಳು

ಶಿಕ್ಷಕರು ಕಲಿಸುತ್ತಿರುವಾಗ ತಮ್ಮ ಕೆಲಸವು ಪರಿಣಾಮಕರವಾಗಿ ಸಾಗಿರುವದೋ ಎಂಬದನ್ನು ನೋಡಿಕೊಳ್ಳಬೇಕಾದರೆ, ಕೆಲವು ಮಾತುಗಳನ್ನು ಲಕ್ಷ್ಯದಲ್ಲಿಡಬೇಕಾಗುವದು. ಅವು ಯಾವವೆಂದರೆ:—

ಅ. **ಪಾಠದ ಉದ್ದೇಶ:**—

೧. ಯಾವ ಪಾಠವನ್ನು ಯಾತಕ್ಕೋಸ್ಕರ ಕಲಿಸುವೆನೆಂಬದನ್ನು ಶಿಕ್ಷಕನು ಹೇಳಿದನೋ? ಅದು ಹುಡುಗರಿಗೆ ತಿಳಿಯಿತೋ?

ಬ. **ಉಪೋದ್ಘಾತ:**—

೧. ಉಪೋದ್ಘಾತವು, ಉದ್ದನಾಯಿತೋ? ತೀರ ಚಿಕ್ಕದಾಯಿತೋ?

೨. ಹೊಸದನ್ನು ಗ್ರಹಿಸಲಿಕ್ಕೆ ಇಲ್ಲವೆ ಮಾಡಲಿಕ್ಕೆ ಇದರಿಂದ ಹುಡುಗರು ಸಿದ್ಧರಾದರೋ?

ಕ. **ವಿಷಯ:**—

೧. ವಿಷಯವು ಪೂರ್ಣ ಸರಿಯಾದದ್ದಿತ್ತೋ?

೨. ಹುಡುಗರ ಯೋಗ್ಯತೆಗೆ ಅದು ತಕ್ಕದ್ದಾಗಿತ್ತೋ? ಸಾಕಷ್ಟು ಇತ್ತೋ? ಹೆಚ್ಚಾದದ್ದಿತ್ತೋ?

೩. ಅದು ಕ್ರಮಪಡಿಸಿ ಹೇಳಿದ್ದಿತ್ತೋ?

ಕಲಿಸುವ ಕ್ರಮ

೪. ಪಾಠವು ತೀರ ಸುಲಭವಾದದ್ದಿತ್ತೋ? ಬಹಳ ಕಠಿಣವಾದದ್ದಿತ್ತೋ ಹುಡುಗರು ಪ್ರಯತ್ನಪೂರ್ವಕವಾಗಿ ಕಲಿಯಲು ಆಸ್ಪದವುಳ್ಳದ್ದಿತ್ತೋ!

೫. ಹುಡುಗರಿಗೆ ಪಾಠದಲ್ಲಿ ಆಸಕ್ತಿಯುಂಟಾಯಿತೋ? ಇಲ್ಲವಾದರೆ ಯಾಕೆ ಆಗಲಿಲ್ಲ?

೬. ಎವರಣೆಯೂ ದೃಷ್ಟಾಂತಗಳೂ, ಸ್ಪಷ್ಟವಾದವೂ ಸಂಕ್ಷಿಪ್ತವಾದವೂ ಇದ್ದವೋ!

೭. ನಕಾಶೆ, ಚಿತ್ರ, ಆಕೃತಿ ಇವುಗಳ ಉಪಯೋಗವು ಸರಿಯಾಗಿ ಆಯಿತೋ?

ಡ. ಕಲಿಸಿದ್ದರ ಬಗ್ಗೆ ವಿವೇಚನೆ, ಅದರ ಉಪಯೋಗ:—

೧. ವಿಷಯವನ್ನು ದೃಢಪಡಿಸಲಿಕ್ಕಾಗಿ ಹೇಳಿದ್ದನ್ನೇ ಪುನಃ ಪುನಃ ಹೇಳಿದರೋ ? ಆ ಬಗ್ಗೆ ವಿಚಾರಮಾಡಿಸಿದರೋ ? ಉದಾಹರಣಗಳನ್ನು ಹೇಳಿದರೋ ?

೨. ಕಲಿಸಿದ ಸಂಗತಿಗಳನ್ನು ಇಲ್ಲವೆ ನಿಯಮಗಳನ್ನು ವ್ಯವಹಾರದ ಸಂಗತಿಗಳಿಗೆ ಸಂಬಂಧಪಡಿಸಿದರೋ ?

೩. ಹುಡುಗರು ಪಾಠದ ಕೊನೆಗೆ ಜೊಸಜ್ಞಾನವನ್ನು ಗಳಿಸುವ ಕುರಿತೂ ಹಲವುಳ್ಳವರಾದರೋ !

ಇ. ಕರೆಹಲಗೆ: —

೧. ಕರೆಹಲಗೆಯ ಮೇಲಿನ ಕೆಲಸವು ಅಚ್ಚುಕಟ್ಟಾಗಿತ್ತೋ ? ವ್ಯವಸ್ಥಿತವೂ ಸುವಾಚ್ಯವೂ ಇತ್ತೋ ? ಅಕ್ಷರಗಳು ತಕ್ಕಷ್ಟು ದೊಡ್ಡವೂ ಮೂಡಿಸಿ ಬರೆದಂಥವೂ ಇದ್ದವೋ !

೨. ಕರೆಹಲಗೆಯನ್ನು ನಿಷ್ಕಾರಣವಾಗಿ ಉಪಯೋಗಿಸಿದರೋ ?

೩. ಶಿಕ್ಷಕನು ಕ. ಹಲಗೆಯಮೇಲೆ ಬರೆಯುವಾಗ ಹುಡುಗರು ಕೆಲಸ ಮಾಡುತ್ತಿದ್ದರೋ ?

ಫ. ಪ್ರಶ್ನೆಗಳು:—

೧. ಇವು ಸಣ್ಣವೂ ನಿಶ್ಚಿತವಾದವೂ ಇದ್ದವೋ !

೨. ವಿಚಾರವನ್ನು ಹುಟ್ಟಿಸುವಂಥವಿದ್ದವೋ ! ಉತ್ತರವನ್ನು ಸೂಚಿಸುವಂಥವಿದ್ದವೋ ?

೩. ಹೌದು, ಅಲ್ಲ ಇಷ್ಟೇ ಉತ್ತರ ಬರುವಂಥವಿದ್ದವೋ !

೪. ಸಂಬಂಧವುಳ್ಳವಿದ್ದವೋ ! ಎಲ್ಲರಿಗೂ ಪ್ರಶ್ನೆಗಳು ಬರಿದವೋ ?

೫. ಉತ್ತರಗಳನ್ನು ಶಿಕ್ಷಕರು ಲಕ್ಷ್ಯಗೊಟ್ಟು ಕೇಳಿಕೊಂಡರೋ ! ಅಪೂರ್ಣ ಹಾಗು ಅಸ್ಪಷ್ಟ ಉತ್ತರಗಳ ಬಗ್ಗೆ ಎಚ್ಚರಪಟ್ಟರೋ ! ಉತ್ತರಗಳನ್ನು ತಾವು ನುಡಿಯುತ್ತಿದ್ದರೋ !

ಗ. ಶಿಕ್ಷಕ: —

೧. ಶಿಕ್ಷಕನಲ್ಲಿ ಸಹಾನುಭೂತಿಯು ಕಾಣುತ್ತಿತ್ತೋ ? ವಿದ್ಯಾರ್ಥಿಗಳು ಉಲ್ಲಾಸದಿಂದಿದ್ದರೋ !

೨. ವರ್ಗವು ಶಿಕ್ಷಕನ ಅಂಕಿತದಲ್ಲಿತ್ತೋ ?

೩. ಶಿಕ್ಷಕನಲ್ಲಿ ಚಟುವಟಿಕೆಯು ತೋರುತ್ತಿತ್ತೋ ?

೪. ಶಿಕ್ಷಕನ ಭಾಷೆಯು ಶುದ್ಧವಿತ್ತೋ ? ಉಚ್ಚರಣೆಯು ಸ್ಪಷ್ಟವಾಗಿತ್ತೋ ?

೫. ಶಿಕ್ಷಕನ ಧ್ವನಿಯು ಸ್ಪಷ್ಟವಾಗಿತ್ತೋ ? ಇಲಿಸ್ವರದ್ದಿತ್ತೋ ? ಸಣ್ಣದಾಗಿತ್ತೋ ?

ಪ. ಪಾಠದಗುಣ:—

ಉತ್ತಮ	ಸಾಧಾರಣ ನಿಟ್ಟಗೆ	ತೀರ ಮಧ್ಯಮ
ನಿಟ್ಟಗೆ	ಸಾಧಾರಣ	ಕೆಟ್ಟದು.

ಶಿಕ್ಷಕರು ಲಕ್ಷ್ಯದಲ್ಲಿಡಬೇಕಾದ ಮಾತುಗಳು

ಪ್ರತಿಯೊಬ್ಬ ಶಿಕ್ಷಕನು ಅಗತ್ಯವಾಗಿ ಲಕ್ಷ್ಯದಲ್ಲಿಡತಕ್ಕ ಕೆಲವು ಮಾತುಗಳನ್ನು ಅನುಭವಿಕರಾದ ಒಬ್ಬ ಶಿಕ್ಷಣಜ್ಞರು ಒಂದೆಡೆಯಲ್ಲಿ ಸಂಕ್ಷಿಪ್ತವಾಗಿ ಕೊಟ್ಟಿರುವರು. ಅವುಗಳನ್ನು ನಮ್ಮ ವಾಚಕರಿಗಾಗಿ ಇಲ್ಲಿ ಅನುವಾದಿಸಿರುವೆವು.

೧. ವರ್ಗದ ಕೋಣೆ:—

೧. ಎಲ್ಲ ಕಿಡಿಕೆ ಬಾಗಿಲುಗಳು ತೆರೆದಿವೆಯೆಂಬದನ್ನು ನೋಡಿಕೊಳ್ಳಿರಿ.

೨. ಎಲ್ಲ ಹುಡುಗರು ಒಬ್ಬರಿಗೊಬ್ಬರು ತಗಲದೆ ಸಾಕಷ್ಟು ಸ್ಥಳಬಿಟ್ಟು ಕುಳಿತಿರುವರೆಂಬದನ್ನು ನೋಡಿಕೊಳ್ಳಿರಿ.

೩. ಮುಂದೆ ಡೆಸ್ಕುಗಳಿಲ್ಲದೆ ಬೆಂಚಿನಮೇಲೆ ಹುಡುಗರನ್ನು ಕೂಡಿಸಬೇಡಿರಿ. ಬೆಂಚಿನ ಹಿಂಬದಿಗೆ ಆನಿಕೆಯು ಬೇಕೇಬೇಕು.

೪. ಕ. ಹಲಗೆ, ನಕಾಶದ ಸ್ಯಾಟ್ಯಂಡು ಇವು ತಕ್ಕ ಸ್ಥಳದಲ್ಲಿ ಅಂದರೆ ಎಲ್ಲ ಹುಡುಗರಿಗೆ ಸ್ಪಷ್ಟವಾಗಿ ಕಾಣುವ ಸ್ಥಳದಲ್ಲಿ ಇರುವದನ್ನು ನೋಡಿಕೊಳ್ಳಿರಿ. ಬಡು, ಒರಿಸುವ ಅರಿವೆ ಕ. ಹಲಗೆಯ ಹತ್ತಿರ ಇರಬೇಕು.

೫. ವರ್ಗದಲ್ಲಿ ತೂಗಹಾಕಿರುವ ನಕಾಶ, ಚಿತ್ರ, ಪಟ ಮುಂತಾದವು ಸ್ಪಷ್ಟವಾಗಿಯೂ ಹರಕು ಹೊಲಸು ಆಗದೆಯೂ ಇರಬೇಕು.

೬. ಒಳಗೆ ಬಂದಕೂಡಲೆ ಓರಣ, ಅಚ್ಚುಕಟ್ಟುತನ, ಸ್ವಚ್ಛತೆ, ಅಂ ಇವು ಒಡೆದು ಕಾಣುತ್ತಿರಬೇಕು.

೨. **ಸಿದ್ಧತೆ:** —

೧. ನೀವು ವೇಳೆಗೆ ಸರಿಯಾಗಿ ಎಲ್ಲ ಕೆಲಸಗಳನ್ನು ಮಾಡಿರಿ; ಹುಡುಗ ಕೂಡ ವೇಳೆಗೆ ಸರಿಯಾಗಿ ಹೀಗೆ ಮಾಡುವಬಗ್ಗೆ ಒತ್ತಾಯಪಡಿಸಿರಿ.

೨. ವರ್ಗದ ಎದುರಿಗೆ ನಿಂತು ಕಲಿಸಿರಿ; ಹುಡುಗರು ಸರಿಯಾಗಿ ಅಂದ ಟೊಂಕ ಎದೆ ಬಾಗಿಸದೆ ಕುಳಿತಿರುವದನ್ನು ನೋಡಿಕೊಳ್ಳಿರಿ.

೩. ಪಾಠಕ್ಕೆ ಅವಶ್ಯವಿರುವ ಪುಸ್ತಕ, ಉಪಕರಣ ಇವು ಮಾತ್ರ ಹುಡ ಗರ ಮುಂದಿರಲಿ; ಮಿಕ್ಕವುಗಳನ್ನು ಅವರು ಗಂಟಿನಲ್ಲಿ ಇಟ್ಟಿರಲಿ.

೪. ಪಾಠವನ್ನು ಸಮಾಧಾನದಿಂದ ಹಾಗು ಚಟುವಟಿಕೆಯಿಂದ ಆರಂಭಿಸಿ

೩. **ಪಾಠ:** —

೧. ಉಪೋದ್ಘಾತದಿಂದ ಹುಡುಗರಲ್ಲಿ ಕುತೂಹಲವೂ ಚಟುವಟಿಕೆಯ ಉಂಟಾಗಬೇಕು. ಉಪೋದ್ಘಾತವು ಹಿಂದೆ ಆದ ಪಾಠದ ಉಜಳಣಿಯಿಮ್ದ ಹೊಸ ಪಾಠಕ್ಕೆ ಅವಶ್ಯವಿರುವ ಮಾತುಗಳನ್ನು ಮಾತ್ರ ನನಪುಮಾಡಿಕೊಡಿರಿ.

೨. ಹೊಸಪಾಠದ ಮೆಟ್ಟುಗಳು ನಿಮ್ಮ ಲಕ್ಷ್ಯದಲ್ಲಿ ಪ್ರತ್ಯೇಕವಾಗಿ ಬ ತಕ್ಕದ್ದು. ಪ್ರತಿಯೊಂದು ಮೆಟ್ಟಿನ ಕೊನೆಗೆ ಅದರಲ್ಲಿ ತಿಳಿಸಿದ ಮಾತುಗಳನ್ನು ಹುಡುಗರಿಂದ ಸಂಕ್ಷೇಪದಲ್ಲಿ ಜೊರಡಿಸಿಕೊಳ್ಳಿರಿ. ಇದನ್ನು ಸ್ವಲ್ಪದರಲ್ಲಿ ಕ. ಹ ಗೆಯಮೇಲೆ ಬರೆಯಿರಿ. ಅವಶ್ಯಕಂಡರೆ, ಹುಡುಗರು ತಮ್ಮ ನೋಟ ಪುಸ್ತ ಗಳಲ್ಲಿ ಬರೆದುಕೊಳ್ಳಲಿ.

೩. ನೀವು ಹೇಳಿದ್ದನ್ನು ಹುಡುಗರಿಂದ ಗಳಿಪಾಠದಂತೆ ಅನ್ನಿಸಿಗೊ ಬೇಡಿರಿ. ಇದರಿಂದ ಶಾಬ್ದಿಕ ಜ್ಞಾನವು ಮಾತ್ರ ಆಗುವದು. ನೀವು ತಿಳಿಸಿದ್ದನ್ನು ಹುಡುಗರು ತಮ್ಮ ಮಾತಿನಲ್ಲಿ ಜೋಳಲಿಕ್ಕೆ ಉತ್ತೇಜನಕೊಡಿರಿ, ಇದರಿಂದ ನಿ ವಾದ ಜ್ಞಾನವಾಗಲಿಕ್ಕೆ ನೆರವಾಗುವದು.

೪. ಒಂದೆರಡು ಉದಾಹರಣಗಳಿಂದ ಮಾತ್ರ ಸಾಮಾನ್ಯ ನಿಯಮವನ್ನು ಹೊರಡಿಸಲಿಕ್ಕೆ ಯತ್ನಿಸಬೇಡಿರಿ. ಹೆಚ್ಚು ಉದಾಹರಣಗಳನ್ನು ಅವರ ಮುಂ ಇಡಿರಿ. ಆ ಬಳಿಕ ಹುಡುಗರಿಂದ ಇಂಥ ಒಂದೆರಡು ಉದಾಹರಣಗಳನ್ನು ಜೋ ಸಿರಿ; ಆಂದರೆ ಹೊಸ ಮಾತು ಅವರ ಲಕ್ಷ್ಯದಲ್ಲಿ ನಿಜವಾಗಿ ಬಂದಂತಾಗುವದು

ಆ ಬಳಿಕ ನೇಮವನ್ನು ಅವರು ತಮ್ಮ ಮಾತಿನಲ್ಲಿ ಹೇಳಲಿ; ಹೊಸ ಜ್ಞಾನದಬಗ್ಗೆ ಯಾವದೊಂದು ಕೆಲಸಮಾಡಿ ನಾವೆಲ್ಲ ಕಲಿಯುವದುಂಟು.

೬. ಪುನರುಚ್ಚಾರಣೆ (ಅಂದದ್ದನ್ನು ಅಂದು ಗಟ್ಟಿಮಾಡೋಣ)ಯನ್ನು ಬೇರೆ ಬೇರೆ ರೂಪದಿಂದ ಮಾಡಿಸಿರಿ. ಅಂದದ್ದನ್ನೇ ೧೦ ೧೫ ಸಾರಿ ತಿರುತಿರುಗಿ ಅನ್ನಿಸಿದರೆ ಬೇಸರಬರುವದು. ಮೊದಲಿನ ಪುನರುಚ್ಚರಣೆಯು ಸರಿಯಿರುವ ಬಂಬದನ್ನು ಎಚ್ಚರದಿಂದ ನೋಡಿಕೊಳ್ಳಿರಿ.

೭. ತಿಳಿಸಿಕೊಡಬೇಕಾದ ಸಂಗತಿಯನ್ನು ಮರೆಯಬೇಡಿರಿ. ಒಮ್ಮೊಮ್ಮೆ ಉದಾಹರಣ ದೃಷ್ಟಾಂತಗಳನ್ನು ಕೊಡುವಾಗ ಅವಕ್ಕೇ ಮಹತ್ವಕೊಟ್ಟು ಉದ್ದ ಮಾಡಿ ಬೇಳಿ, ತಿಳಿಸಿಕೊಡಬೇಕಾದ ಮಾತನ್ನು ಮರೆತುಬಿಡುವದುಂಟು. ಉದಾಹರಣ ದೃಷ್ಟಾಂತಗಳು ಸಹಾಯಕಗಳು; ಅಂದರೆ ಅವುಗಳನ್ನು ಸೇವಕರಂತೆ ಣಿಸಬೇಕು. ಅವೇ ಯಜಮಾನರಾಗಬಾರದು.

೮. ತಿಳಿಸಬೇಕಾದದ್ದರಲ್ಲಿ ಮಹತ್ವದ ಮಾತನ್ನು ಮರೆತು ಮುಖ್ಯವಲ್ಲದ ಸಂಗತಿಗಳನ್ನು ಒತ್ತಿ ಹೇಳುವದುಂಟು. ಹೀಗೆ ಆಗದಂತೆ ಎಚ್ಚರದಿಂದಿರಬೇಕು

೯. ವಿದ್ಯಾರ್ಥಿಗಳನ್ನು ಶಿಕ್ಷಕರಂತೆ ಆದಷ್ಟು ಜೆಚ್ಚು ಉಪಯೋಗಿಸಿರಿ. ವಿದ್ಯಾರ್ಥಿಯು ತನ್ನ ಬೇಳಿಕೆಯನ್ನು ವರ್ಗಕ್ಕೆ ತಿಳಿಸಿ ಹೇಳಲಿ. ವರ್ಗದ ಇತರ ಹುಡುಗರು ಆತನಿಗೆ ಪ್ರಶ್ನಗಳನ್ನು ಕೇಳಲಿ.

೧೦. ಹುಡುಗರ ಬುದ್ಧಿವಂತಿಕೆಯನ್ನು ಹೊಗಳಿರಿ. ಆದರೆ ಅವರಿಂದ ಬಹಳ ಅಪೇಕ್ಷಿಸಬೇಡಿರಿ. ಹುಡುಗರು ಎಷ್ಟುಮಾತ್ರ ಹೇಳಬಲ್ಲರೆಂಬದನ್ನು ಅನುಭವದಿಂದ ಗೊತ್ತುಪಡಿಸಿಕೊಳ್ಳಿರಿ,

೧೧. ಹಿಂದುಳಿದ ಅಂದರೆ ಮಂದಬುದ್ಧಿಯ ಹುಡುಗರಿಗೆ ನೆರವಾಗಿರಿ. ಚುರುಕು ಬುದ್ಧಿಯ ಹುಡುಗರಿಗೆ ನಿಮ್ಮ ಸಹಾಯವು ಅಷ್ಟು ಬೇಕಾಗುವದಿಲ್ಲ;

೪. **ಪ್ರಶ್ನಗಳು:** —

ಕಲಿಸುವ ಹಂಚಿಕೆಗಳಲ್ಲಿ ಪ್ರಶ್ನಗಳು ಒಳ್ಳೇ ಮಹತ್ವವಾದವು; ಇವುಗಳನ್ನು ಜಾಣ್ಮೆಯಿಂದ ಉಪಯೋಗಿಸಬಲ್ಲಶಿಕ್ಷಕನು ಮೇಲಾದವನು.

೧. ಪ್ರಶ್ನಗಳು ಸ್ಪಷ್ಟವಾದವು, ಸಣ್ಣವು ಹಾಗು ಸುಲಭ ಭಾಷೆಯಲ್ಲಿ ಕೇಳಿದಂಥವು ಇರಬೇಕು. ಉದ್ದವಾದ, ದೊಡ್ಡ ದೊಡ್ಡ ಶಬ್ದಗಳನ್ನು ಉಪಯೋಗಿಸದಂತೆ ಎಚ್ಚರಗೊಳ್ಳಬೇಕು.

೨. ಪ್ರಶ್ನೆಗಳು ನಿಶ್ಚಿತವಾದವಿರಬೇಕು; ಅಂದರೆ ಅವು ಸಂಶಯ ಬಾ ವಂಥವು ಇರಬಾರದು. "ಇಲ್ಲಿ ನಮಗೆ ಏನು ಕಾಣುವದು"? ಈ ಪ್ರಶ್ನೆಕ್ಕೆ ಹಲ ಉತ್ತರಗಳು ಇರಬಹುದು. ಇದರಂತೆ "ಇದು ಹ್ಯಾಗೆ ಕಾಣುತ್ತದೆ?" ಇದಕ್ಕೂ ಬೇಕಾದಷ್ಟು ಉತ್ತರಗಳು ಬರುವವು. ಒಂದು ಪ್ರಶ್ನೆಕ್ಕೆ ನಿಶ್ಚಿತವಾದ ಒಂದ ಉತ್ತರವು ಬರುತ್ತಿರಬೇಕು.

೩. ಪ್ರಶ್ನೆಗಳು ಹುಡುಗರನ್ನು ವಿಚಾರಕ್ಕೆ ಹಚ್ಚುವಂಥವಿರಬೇಕು ಆದರೆ ಅವು ಹುಡುಗರ ಬುದ್ಧಿಸಾಮರ್ಥ್ಯವನ್ನು ಮೀರಿದಂಥವು ಇರಬಾರದು ನೀವು ಕೇಳುವ ರೀತಿಯಿಂದಲೇ ಉತ್ತರವು ಸೂಚಿತವಾಗಿರುವಂಥವಿರಬಾರದು ಹೌದು ಅಥವಾ ಇಲ್ಲ ಇಷ್ಟೇ ಉತ್ತರ ಹೊರಡುವಂಥವಿರಬಾರದು.

೪. ಪ್ರಶ್ನೆಗಳು ಸರಪಳಿಯ ಕೊಂಡಿಗಳಂತೆ ಒಂದಕ್ಕೊಂದು ಒಂದ ಕ್ರಮದಿಂದ ಸಂಬಂಧಿಸಿದವಿರಬೇಕು; ಇಂಥ ಪ್ರಶ್ನೆಗಳಿಂದ ಹುಡುಗರ ವಿಚಾರಕ್ಕೆ ಹುರುಪು ಬರುವದು. ಕ್ರಮವಿಲ್ಲದೆ ಅಲ್ಲೊಂದು ಇಲ್ಲೊಂದು ಪ್ರಶ್ನೆ ಕೇಳುವದ ರಿಂದ ಹುಡುಗರು ಗೊಂದಲದಲ್ಲಿ ಬೀಳುವರು.

೫. ಪ್ರಶ್ನೆಗಳನ್ನು ಇಡೀ ವರ್ಗಕ್ಕೆ ಕೇಳಿರಿ; ಶಿಕ್ಷಕನ ಪ್ರತಿಯೊಂದ ಪ್ರಶ್ನೆವು ತನಗೆ ಕೇಳಿದ್ದೆಂದು ವರ್ಗದ ಪ್ರತಿಯೊಬ್ಬ ವಿದ್ಯಾರ್ಥಿಗೆ ಅನಿಸಲಿ; ಹೀಗ ಮಾಡುವದರಿಂದ ಎಲ್ಲ ಹುಡುಗರು ಕೆಲಸಮಾಡುತ್ತಿರುವರು. ಸಾಕಷ್ಟು ಹೊತ್ತಾದ ಬಳಿಕ ಇಂಥವರೇ ಉತ್ತರ ಹೇಳಬೇಕೆಂದು ಅಪೇಕ್ಷಿಸಿರಿ.

೬. ಉತ್ತರ ಹೇಳಲಿಕ್ಕೆ ಅಲ್ಲೊಬ್ಬ ಇಲ್ಲೊಬ್ಬ ಹುಡುಗನಿಗೆ ಜೇಳಿರಿ. ಕುಳಿತ ನಂಬರಿನಂತೆ ಕೇಳಬೇಡಿರಿ. ಹೀಗೆ ಕೇಳುವಾಗ ಎಲ್ಲ ಹುಡುಗರಿಗೂ ಪಾಳಿಯು ಬರುವಂತೆ ಎಚ್ಚರಗೊಳ್ಳಿರಿ. ಉತ್ತರ ಹೇಳಲಿಕ್ಕೆ ಹುರುಪು ತೋರಿಸುವ ಚುರುಕು ಹುಡುಗರನ್ನೇ ಶಿಕ್ಷಕರು ಪ್ರಶ್ನೆ ಮಾಡುವದುಂಟು. ಇದರಿಂದ ಮಂದ ಬುದ್ಧಿಯ ಹುಡುಗರು ಹಿಂದೆ ಉಳಿಯುವರು.

೭. ಹುಡುಗರ ಉತ್ತರಗಳನ್ನು ಎಚ್ಚರದಿಂದ ಕೇಳಿಕೊಳ್ಳಿರಿ. ಏನಾದ ರೊಂದು ಉತ್ತರಕೊಟ್ಟರಾಯಿತೆಂದು ಹುಡುಗರಿಗೆ ಅನಿಸಬಾರದು. ಉತ್ತರಗ ಳನ್ನು ಕೊಟ್ಟವರಿಗೆ ಸರಿ, ಚೆನ್ನಾಗಿ ಜೇಳಿದಿ, ಇದಕ್ಕೂ ಚೆನ್ನಾಗಿ ಹೇಳು, ಪೂರ್ಣ ಸರಿಯಿಲ್ಲ, ಬೇರೆ ರೀತಿಯಿಂದ ಜೇಳು, ಬೇರೆಯಾದರೂ ಹೇಳಿರಿ, ಎಂದು ಹುರುಪುಗೊಡಬೇಕು. ತಪ್ಪು ಉತ್ತರಗಳನ್ನು ಅಲ್ಲವೆಂದು ನಿರಾಕರಿಸ ಬೇಡಿರಿ. ತಪ್ಪು ಉತ್ತರ ಬರುವದರ ಕಾರಣವನ್ನು ಗೊತ್ತುಹಚ್ಚಿ, ಮತ್ತೆ

ಪ್ರಶ್ನಮಾಡಿರಿ. ಕೆಲಕೆಲವು ಸಾರೆ ಸರಿಯಾದ ಉತ್ತರಗಳು ಬಂದಕೂಡಲೆ "ಯಾಕೆ" ಎಂದು ಮತ್ತೆ ಪ್ರಶ್ನಮಾಡಿರಿ

೮. ಹುಡುಗರೆಲ್ಲರು ಒಮ್ಮೆಲೆ ಉತ್ತರವನ್ನು ಒದರಿಕೊಳ್ಳಬಾರದು. ಪ್ರಶ್ನವು ಇಡೀ ವರ್ಗದ ವಿಚಾರಕ್ಕಾಗಿ. ಹೀಗೆ ಎಲ್ಲರೂ ವಿಚಾರಮಾಡಿದಬಳಿಕ, ಶಿಕ್ಷಕರು ತೋರಿಸುವ ಒಬ್ಬ ವಿದ್ಯಾರ್ಥಿಯೇ ಉತ್ತರ ಹೇಳತಕ್ಕದ್ದು. ಪ್ರಶ್ನವನ್ನು ತಿರುತಿರುಗಿ ಅನ್ನಬೇಡಿರಿ. ಉತ್ತರವನ್ನು ನುಡಿಯುವ ಚಟವನ್ನು ಹಚ್ಚಿಕೊಳ್ಳಬೇಡಿರಿ. ಈ ಚಟವಿರುವ ಶಿಕ್ಷಕನು ಕಲಿಸುತ್ತಿರುವ ಅರ್ಧಪೇಳೆಯು ನಿರರ್ಥಕವಾಗಿ ಹೋಗುವದು.

೯. ಪ್ರಶ್ನಗಳು ಹೊಸ ವಿಷಯವನ್ನು ತಿಳಿದುಕೊಳ್ಳಲಿಕ್ಕೆ ಸಹಾಯಕವಾಗುತ್ತಿರುವವೆಂದು ಹುಡುಗರಿಗೆ ಅನಿಸ. ತಮ್ಮ ಪರೀಕ್ಷೆಯೇ ನಡೆದಿರುವದೆಂದು ಅನಿಸುವ ಪ್ರಶ್ನಗಳು ಮೇಲಾದವಲ್ಲ.

೫. ಕರಿಹಲಗೆ:—

೧. ಕರಿಹಲಗೆಯು ವರ್ಗದ ಎದುರಿಗೆ ಇರಬೇಕು; ಒಂದು ಬದಿಗೆ ಇರಬಾಗದು; ಅದರ ಮೇಲೆ ಬರೆಯುವ ಖಡು, ಅದನ್ನು ಅಳಿಸುವ ಅರಿವೆ ಮೊದಲಾದವು ಅದರ ಹತ್ತಿರ ಇರಬೇಕು.

೨. ಕರಿಹಲಗೆಯನ್ನು ಮೇಲಿಂದಮೇಲೆ ಉಪಯೋಗಿಸಿರಿ. ಪಾಠದ ಸಾರಾಂಶವನ್ನು ಬರೆಯಲಿಕ್ಕೆ, ಆಕೃತಿ, ನಕಾಶ ಮೊದಲಾದವುಗಳನ್ನು ತೆಗೆಯಲಿಕ್ಕೆ ಮರೆಯಬೇಡಿರಿ.

೩. ಕರಿಹಲಗೆಯಮೇಲೆ ಸುವಾಚ್ಯವಾದ ಅಕ್ಷರಗಳನ್ನು ಚೆನ್ನಾಗಿ ಮೂಡಿಸಿ ಬರೆಯಿರಿ.

೪. ಕರಿಹಲಗೆಯಮೇಲೆ ಅಚ್ಚುಕಟ್ಟಾಗಿ ಕ್ರಮದಿಂದ ಬರೆಯಿರಿ. ಯಾವ ಕಾರಣದಿಂದಲೂ ಗಿಜಿಬಿಜಿಯಾಗಿ ಬರೆಯಬಾರದು. ಸಾರಾಂಶವನ್ನು ಬರೆಯುವದಾದರೆ ಇಡೀ ಪಾಠದ ಸಾರಾಂಶವು ಅಲ್ಲಿ ಬರಬೇಕು. ಈ ಸಾರಾಂಶದ ಸಹಾಯದಿಂದ ಪಾಠದ ಉಜಳಣಿ ಮಾಡಿಸಬಹುದು.

೫. ಚಿತ್ರ ಆಕೃತಿ ಮೊದಲಾದವುಗಳನ್ನು ತೀವ್ರವಾಗಿ ತೆಗೆಯಬೇಕು; ಅವಶ್ಯಕಂಡಲ್ಲಿ ಸ್ಪಷ್ಟತೆಗೋಸ್ಕರ ಬಣ್ಣದ ಖಡುವನ್ನು ಉಪಯೋಗಿಸಬಹುದು.

ದೂರದರ್ಶಕ ಯಂತ್ರಗಳೂ ನಕ್ಷತ್ರಮಂಡಲವೂ

(ಶ್ರೀ ಅಂಬಿಕಾದತ್ತ ಉಪಾಧ್ಯಾಯ ಎಮ್. ಎ. ಇವರ ಹಿಂದೀ ಲೇಖದ ಅನುವಾದವು).

ಅನುವಾದಕ:—ಆರ್. ವ್ಹಿ. ಬೆಟಗೇರಿ, ಬಿ. ಎಸ್. ಅಮರಗೋಳ.

ಪಾಶ್ಚಿಮಾತ್ಯ ದೇಶಗಳು ವಿಜ್ಞಾನಶಾಸ್ತ್ರದಲ್ಲಿ ವಿಲಕ್ಷಣ ಉನ್ನತಿಯನ್ನು ಪಡೆದಿರುವವು. ಅಪೂರ್ವವಾದ ಹಾಗೂ ಆಶ್ಚರ್ಯಜನಕವಾದ ಯಂತ್ರಗಳ ಶೋಧದಿಂದ, ಅಸಾಧ್ಯವಾದ ಕಾರ್ಯಗಳು ನಿಮಿಷಮಾತ್ರದಲ್ಲಿ ಸಾಧ್ಯವಾಗುತ್ತಲಿರುವವು. ಮತ್ತು ಅಲ್ಲಿಯ ವೈಜ್ಞಾನಿಕರು ಇವುಗಳ ಸಹಾಯದಿಂದ ಆಕಾಶ—ಪಾತಾಳಗಳನ್ನು ಒಂದು ಮಾಡಿ ಬಿಟ್ಟಿರುವರು. ಬಹುತರ ಸಾವಿರಾರು ಪ್ರತಿಭಾಶಾಲಿ ವಿಚಕ್ಷಣ ಜ್ಯೋತಿಃ ಶಾಸ್ತ್ರಜ್ಞರು ಯಾವಾಗಲೂ ಇದೇ ಕಾರ್ಯದಲ್ಲಿ ಮಗ್ನರಾಗಿ ಬಿಟ್ಟಿರುವರು. ಅವರಲ್ಲಿ ಕೆಲಕೆಲನರಂತೂ ಈ ಕಾರ್ಯಕ್ಕೆ ತಮ್ಮ ಆಯುಷ್ಯವನ್ನು ಧಾರೆಯೆರೆದಿರುವರು. ಇದ್ದರಿಂದಲೇ ಯಂತ್ರಗಳಲ್ಲಿ ದಿನದಿನಕ್ಕೆ ಹೆಚ್ಚು ಹೆಚ್ಚು ಉನ್ನತಿಯಾಗುತ್ತ ನಡೆದಿರುವದು. ಆದರೆ ಇಷ್ಟರಿಂದಲೇ ಅವರು ಸಂತುಷ್ಟರಾಗಿಯೂ ಕೃತಕೃತ್ಯರಾದೆವೆಂಬದಾಗಿಯೂ ತಿಳಿದುಕೊಂಡು ಸುಮ್ಮನೆ ಕುಳಿತಿರುವದಿಲ್ಲ.

ನಮ್ಮ ಭರತಖಂಡದಲ್ಲಿ ಆಗಿ ಹೋದ ಮಹರ್ಷಿಗಳು ಸೂರ್ಯಮಂಡಲದ ಬಗ್ಗೆಯೂ, ನಕ್ಷತ್ರಮಂಡಲದ ಬಗ್ಗೆಯೂ, ಪೂರ್ಣವಾಗಿ ಅಧ್ಯಯನ ಮಾಡಿದ್ದರು. ಮತ್ತು ಅವರು ಎಷ್ಟೋ ಉತ್ತಮವಾದ ಗ್ರಂಥಗಳನ್ನು ಕೂಡ ಬರೆದಿಟ್ಟಿರುವರು. ಈ ಸಿದ್ಧಾಂತ ಗ್ರಂಥಗಳೊಳಗಿನ ಸಿದ್ಧಾಂತಗಳ ಸಹಾಯದಿಂದ ನಾವು ಇಂದಿಗೂ ಮುಖ್ಯ ಮುಖ್ಯ ಗ್ರಹ ಹಾಗೂ ನಕ್ಷತ್ರಗಳ ಗತಿ—ಆಕಾರ, ಮೊದಲಾದವುಗಳ ಬಗ್ಗೆ ಎಷ್ಟೋ ಪೂರ್ಣ ಸಂಗತಿಗಳನ್ನು ತಿಳಿದುಕೊಳ್ಳಬಹುದು. ನಮ್ಮ ಜ್ಯೋತಿರ್ವಿದರು ಆ ಕಾಲದಲ್ಲಿ ಸೂರ್ಯಗ್ರಹಣ ಹಾಗೂ ಚಂದ್ರಗ್ರಹಣಗಳ ಬಗ್ಗೆ ಸ್ಥೂಲಮಾನದಿಂದ ಮಾಡಿದ ಗಣಿತಗಳಿಗೂ, ಈ ಕಾಲದವರು ದುರ್ಬೀನು ಮೊದಲಾದ ಯಂತ್ರಗಳ ಸಹಾಯದಿಂದ ಮಾಡಿದ ಗಣಿತಗಳಿಗೂ, ಒಂದು ಮಿನಿಟಿನ ಅಂತರವು ಕೂಡ ಬೀಳುವದಿಲ್ಲ. ಇದರಿಂದ ನಮ್ಮಲ್ಲಿಯ ಪೂರ್ವಕಾಲದ ಜ್ಯೋತಿಃಶಾಸ್ತ್ರದ ಬಗ್ಗೆ ನಮಗೆ ಅಭಿಮಾನವೆನಿಸುವದು ಸಹಜವಾಗಿದೆ.

ಆದರೆ ಅಲ್ಪ ಸಂತುಷ್ಟಿಗಳಾದ ಭಾರತೀಯರು ಇಷ್ಟರಿಂದಲೇ ಧನ್ಯರಾದೆವೆಂದು ತಿಳಿದುಕೊಂಡು, ಸುಮ್ಮನೆ ಕುಳಿತು ಬಿಟ್ಟರು. ಇವರು ಈ ಶಾಸ್ತ್ರದಲ್ಲಿ ಹೆಚ್ಚಿನ

ಪ್ರಗತಿಯನ್ನು ಹೊಂದುವ ಹವ್ಯಾಸಕ್ಕೆ ಬೀಳದ್ದರಿಂದ, ಎಷ್ಟೋ ಜನರು ಚಂದ್ರನ ಮೇಲೆ ಕಾಣುವ ಕಪ್ಪು ಕಲೆಗಳಿಗೆ ಕಲಂಕವೆಂದೂ, ಕೆಲವರು ಅದು ಸಮುದ್ರದ ಕೆಸರೆಂದೂ, ಬೇರೆ ಕೆಲವರು ಬಿಗರೆಯೆಂದೂ ಮತ್ತೆ ಕೆಲವರು ಪೃಥ್ವಿಯ ನೆರಳೆಂದೂ, ಹೀಗೆ ಬಗೆಬಗೆಯಾಗಿ ತರ್ಕಮಾಡಹತ್ತಿದರು.

ಆದರೆ ನಾವೀಗ ಈ ತರದ ಕಟ್ಟು-ಕಥೆಗಳಿಗೂ, ಕಾಲ್ಪನಿಕ ವಿಚಾರಗಳಿಗೂ ಮಹತ್ವ ಕೊಡುವ ಕಾಲವು ಹೋಗಿಬಿಟ್ಟಿರುವದು. ನಾವು ಪ್ರತ್ಯಕ್ಷ ನಮ್ಮ ಚರ್ಮ ಜಕ್ಷುಗಳಿಂದ ಸೂರ್ಯ-ಚಂದ್ರ ಮೊದಲಾದ ಗ್ರಹಗಳು ಎಂಥ ಪದಾರ್ಥಗಳಿರುತ್ತವೆ? ಮತ್ತು ನಮ್ಮಿಂದ ಎಷ್ಟು ದೂರದಲ್ಲಿವೆ ? ಅವುಗಳ ಗುಣ-ಧರ್ಮಗಳು ಯಾವವು ? ಎಂಬದನ್ನು ನೋಡಬಹುದು. ಅಲ್ಲದೆ ದೂರದರ್ಶಕ ಯಂತ್ರಗಳ ಸಹಾಯದಿಂದ ಕೋಟ್ಯವಧಿ ಮೈಲುಗಳ ಆಚೆಯಲ್ಲಿರುವ ನಕ್ಷತ್ರ-ಗ್ರಹ ಮೊದಲಾದವುಗಳು ಕರತಲಾ ಮಲಕದಂತೆ ಭಾಸವಾಗುತ್ತವೆ. ಇಷ್ಟೆಲ್ಲ ತಿಳಿದುಕೊಳ್ಳಲು ಶ್ರಮವೂ ಕೂಡಾ ಹತ್ತು ವಂತಿಲ್ಲ.

ಆದರೆ ಇಂಥ ದುರ್ಬೀನುಗಳನ್ನು ಮೊದಲು ಯಾರು ಶೋಧ ಮಾಡಿದರೆಂಬದು ಇನ್ನೂ ಚನ್ನಾಗಿ ಗೊತ್ತಾಗುವಂತಿಲ್ಲ. ಹದಿಮೂರನೆಯ ಶತಮಾನದಲ್ಲಿ ಆಗಿ ಹೋದ ರಾಜರ ಬೇಕನ್ (Roger Bacon) ಎಂಬಾತನು, ದುರ್ಬೀನದ ಕೆಲವು ಮೂಲ ಸಿದ್ಧಾಂತಗಳನ್ನು ಜಗತ್ತಿನ ಮುಂದೆ ಇಟ್ಟನು. ಮುಂದೆ ಎಷ್ಟೋ ಶೋಧಕರು, ಇವೇ ಸಿದ್ಧಾಂತಗಳ ಆಧಾರದಿಂದ ತಮ್ಮ ತನು-ಮನ-ಧನಗಳನ್ನು ವೆಚ್ಚಮಾಡಿ, ಚಿಕ್ಕ ಹೆಚ್ಚ ಶೋಧ ಮಾಡುತ್ತ, ಅದರಲ್ಲಿ ಪ್ರಗತಿಯನ್ನು ಪಡೆಯುತ್ತ ನಡೆದರು. ಸನ್ ೧೫೫೦ರಲ್ಲಿ ಡೆಲಾ ಪೋರ್ಟಾ (Della Porta) ಎಂಬವನು ಒಂದು ಸಾಧಾರಣ ದೂರದರ್ಶಕ ಯಂತ್ರವನ್ನು ತಯಾರಿಸಿದನು. ಅದರ ಅನುಕರಣವನ್ನೇ ಎಲ್ಲರೂ ಮಾಡುತ್ತ ಹೋದರು.

ಇಂದಿಗೆ ಸುಮಾರು ಮೂರನೂರಾ ಇಪ್ಪತ್ತೈದು ವರ್ಷಗಳ ಪೂರ್ವದಲ್ಲಿ ಅಂದರೆ, ಲಿಪ್ಪರ್ಶಿಲ (Lippershay) ಎಂಬ ಹೆಸರಿನ ಶೋಧಕನು, ಒಂದು ಸಣ್ಣ ದುರ್ಬೀನಿನ ಶೋಧ ಮಾಡಿದನು. ಈ ಯಂತ್ರದ ಸಹಾಯದಿಂದ ದೂರವಿದ್ದ ಪದಾರ್ಥಗಳು ನಿಚ್ಚಳವಾಗಿಯೂ, ದೊಡ್ಡವಾಗಿಯೂ ಕಾಣಹತ್ತಿದವು. ಮಾರ್ಗಪ್ರದರ್ಶನದ ಅವಶ್ಯಕತೆಯಿತ್ತು. ಅದು ಸಿಕ್ಕ ಕೂಡಲೆ ಶೋಧಕರ ತಂಡವು ಹೊಸ ಹೊಸ ಸಂಗತಿಗಳನ್ನು ಶೋಧಿಸಹತ್ತಿದರು. ಮರುವರ್ಷ ಗ್ಯಾಲಿಲಿಯೋ (Galileo) ಎಂಬವನು

೩೫ ಇಂಚು ವ್ಯಾಸವುಳ್ಳ ಒಂದು ಯಂತ್ರವನ್ನು ತಯಾರಿಸಿದನು. ಈ ಯಂತ್ರದಲ್ಲಿ ಬಹಳ ದೂರದ ವಸ್ತುಗಳು ನಿಚ್ಚಳವಾಗಿ ಕಾಣಹತ್ತಿದವು.

ಇ. ಸ. ೧೬೬೬ರಲ್ಲಿ ಯುರೋಪದಲ್ಲಿ, ಪ್ರಸಿದ್ಧ ಶಾಸ್ತ್ರಜ್ಞನಾದ ನ್ಯೂಟನ್ನನು ಪರಾವರ್ತಕ ಯಂತ್ರದ (Refracting Telescope) ಶೋಧ ಮಾಡಿದನು. ಈ ಯಂತ್ರದ ಸಹಾಯದಿಂದ ಗುರುಗ್ರಹದ ಸಮೀಪದಲ್ಲಿ ಭ್ರಮಣ ಮಾಡುತ್ತಿರುವಂಥ ನಕ್ಷತ್ರಗಳನ್ನೂ, ಶುಕ್ರನ ಕಲೆಗಳನ್ನೂ ನೋಡಿದರು. ಇವರಿಂದ ಯಾವತ್ತೂ ಶೋಧಕರ ಉತ್ಸಾಹವು ಮತ್ತಿಷ್ಟು ಹೆಚ್ಚಿ, ಅವರು ಈ ಯಂತ್ರದಲ್ಲಿದ್ದ ನ್ಯೂನತೆಗಳನ್ನು ತೆಗೆದು, ಅದನ್ನು ಸರ್ವಾಂಗ ಪರಿಪೂರ್ಣಮಾಡುವದರಲ್ಲಿಯೇ ಆಸಕ್ತರಾದರು.

ಈ ಮೇರೆಗೆ ಒಂದೇ ಸವನೆ ನಡೆದ ಪ್ರಯತ್ನದಿಂದ ಇ. ಸ. ೧೭೮೬ರಲ್ಲಿ ವಿಲಿಯಮ್ ಹರಷೆಲ್ (William Herschel) ನು ಒಂದು ವಿಶಾಲವಾದ ಯಂತ್ರವನ್ನು ಸಿದ್ಧಪಡಿಸಿದನು. ಇದರ ವ್ಯಾಸವು ೪೮" ಇತ್ತು. ಇದರ ಸಹಾಯದಿಂದ ಜ್ಯೋತಿಃಶಾಸ್ತ್ರದಲ್ಲಿ ಅಪೂರ್ವ ಕ್ರಾಂತಿಯಾಗಿ ಹೋಯಿತು. ಸಾಧಾರಣವಾಗಿ ಒಬ್ಬ ಮನುಷ್ಯನ ಕಣ್ಣಿನಲ್ಲಿ ಪ್ರಕಾಶಗ್ರಹಣ ಮಾಡುವ ಶಕ್ತಿಯು ಎಷ್ಟು ಇರುವದೋ, ಅದರ ೫೦ ಸಾವಿರ ಪಟ್ಟು ಪ್ರಕಾಶವನ್ನು ಗ್ರಹಣ ಮಾಡುವ ಶಕ್ತಿಯು ಈ ಯಂತ್ರದಲ್ಲಿತ್ತು. ಆ ಸಮಯದ ಕಾಚಿನ ದೊಡ್ಡ ದೊಡ್ಡ ವ್ಯಾಪಾರಸ್ಥರು ನಿರ್ದೋಷವಾದ ಕಾಚನ್ನು ಮಾಡಲು, ಬಹಳವಾಗಿ ಪ್ರಯತ್ನಿಸಿದರು. ಆದರೆ ಇಷ್ಟು ದೊಡ್ಡ ಹಾಗೂ ನಿರ್ದೋಷವಾದ ಕಾಚನ್ನು ಮಾಡುವದು ಅವರ ಶಕ್ತಿಯನ್ನು ಮೀರಿದ್ದರಿಂದ, ಅವರಿಗೆ ಸಾಧಿಸಲಿಲ್ಲ. ಆದರಿಂದ ಈ ಲೋಕೋಪಯೋಗಿ ಕಾರ್ಯದಲ್ಲಿ ದೊಡ್ಡ ತೊಂದರೆ ತಗಲಿತು.

ಸುಮಾರು ಐವತ್ತು ವರ್ಷಗಳ ನಂತರ ಅಂದರೆ ೧೮೪೫ನೆಯ ಇಸ್ವಿಯಲ್ಲಿ ಲಾರ್ಡ ರೋಸೆ (Lord Rosse) ಎಂಬ ಶಾಸ್ತ್ರಜ್ಞನು ೬೫" ವ್ಯಾಸವುಳ್ಳ ಒಂದು ದುರ್ಬೀನನ್ನು ತಯಾರಿಸಿದನು. ಇದರ ಶಕ್ತಿಯು ವಿಪರೀತವಾಗಿದ್ದಿತು. ಇದೇ ಪ್ರಕಾರದ ಎರಡನೆಯದೊಂದು ಯಂತ್ರವನ್ನು ಬ್ರಿಟಿಷ ಕೋಲಂಬಿಯದ ವೇಧಶಾಲೆಯಲ್ಲಿಯೂ ಸ್ಥಾಪಿಸಿದರು. ಇದು ವಿದ್ಯುತ್‌ಶಕ್ತಿಯ ಸಹಾಯದಿಂದ ನಡೆಯುತ್ತಿತ್ತು. ಇದರಿಂದ ಶಾಸ್ತ್ರಜ್ಞರಿಗೆ ಬಹಳೇ ಅನುಕೂಲವಾಯಿತು.

೧೯೧೭ನೆಯ ಇಸ್ವಿಯಲ್ಲಿ ಕ್ಯಾಲಿಫೋರ್ನಿಯಾದಲ್ಲಿ "ವಿಲ್ಸನ್" ವೆಂಬ ಹೆಸರುಳ್ಳ ವೇಧಶಾಲೆಯಲ್ಲಿ (Wilson observatory) ಒಂದು ದೊಡ್ಡ ಹಾಗೂ ಆಶ್ಚರ್ಯಕರವಾದ ದೂರದರ್ಶಕ ಯಂತ್ರವನ್ನು ರಚಿಸಿರುವರು. ಇದರ ವ್ಯಾಸವು ೧೦೦"

ಇರುವದು. ಮತ್ತು ಇದರ ತೂಕವು ೨೭೦೦೦ ಮಣವದೆ. ಇದರ ಸಹಾಯದಿಂದ ೨೦ ಲಕ್ಷ ನಕ್ಷತ್ರಗಳು ಇದ್ದಕ್ಕಿದ್ದಂತೆ ಕಾಣುತ್ತವೆ. ಮತ್ತು ಅವುಗಳ ಚಲನ–ವಲನಗಳ ಜ್ಞಾನವೂ ಸಂಪೂರ್ಣವಾಗಿ ಆಗುತ್ತದೆ. ಇದರಂತೆಯೇ ಅಮೇರಿಕೆಯಲ್ಲಿಯು ಓಹಿಯೋ (Ohio) ಪ್ರಾಂತದಲ್ಲಿ ಒಂದು ದೊಡ್ಡದಾದ ಹಾಗೂ ಸುಂದರವಾದ ಯಂತ್ರವು ರಚಿಸಲ್ಪಟ್ಟಿತು. ಅದರ ವ್ಯಾಸವು ೬೬" ಇದ್ದರೂ, ಅದು ೧೦೦" ವ್ಯಾಸವುಳ್ಳ ಪರಾವರ್ತಕ ದುರ್ಬೀನಿನಷ್ಟೇ ಕೆಲಸವನ್ನು ಕೊಡುತ್ತಿರುವದು.

ಈ ವರೆಗೆ ಈ ಜಗತ್ತಿನಲ್ಲಿ ಶೋಧಿಸಲ್ಪಟ್ಟ ಯಂತ್ರಗಳಲ್ಲಿ ೧೦೦" ವ್ಯಾಸವುಳ್ಳ ಯಂತ್ರವೇ ದೊಡ್ಡದಾಗಿರುವದು. ಈ ಯಂತ್ರದ ನಾಲ್ಕು ಪಟ್ಟು ಪ್ರಕಾಶವನ್ನು ಗ್ರಹಣ ಮಾಡುವ ಶಕ್ತಿಯುಳ್ಳಂಥ ಹಾಗೂ ಅದರ ಎರಡಷ್ಟು ದೂರ ಅಂತರದಲ್ಲಿದ್ದ ತಾರಾಗಣಗಳನ್ನು ನೋಡಲಿಕ್ಕೆ ಅನುಕೂಲವಾಗುವಂಥ ಹಾಗೂ ೨೦೦" ವ್ಯಾಸವುಳ್ಳಂಥ ಮತ್ತೊಂದು ಯಂತ್ರವನ್ನು ಈಗ ತಯಾರಿಸುತ್ತಲಿರುವರು. ಇದಕ್ಕೆ ಕಾಚಿನ ಸ್ಥಳದಲ್ಲಿ ಕ್ವಾರ್ಟ್ಜ್ (Quartz) ಎಂಬ ಹೆಸರಿನ ಧಾತುವನ್ನು ಉಪಯೋಗಿಸಿರುವದು. ಈ ಧಾತುವನ್ನು ದುರ್ಬೀನುಗಳಲ್ಲಿ ಉಪಯೋಗಿಸುವದರಿಂದ ಉಷ್ಣತೆಯ ತಾಪವು ಕಡಿಮೆಯಾಗುವದಲ್ಲದೆ, ದೂರದೂರಿನ ಪದಾರ್ಥಗಳ ಯಥಾರ್ಥ ಜ್ಞಾನವು ಆಗುವದು. ಇದರ ಸಹಾಯದಿಂದ ಜ್ಯೋತಿರ್ವಿದರು ಸೂರ್ಯನ ಪ್ರತ್ಯಕ್ಷ ರೂಪದ ನಿರೀಕ್ಷಣೆಯನ್ನು ಯಥಾರ್ಥವಾಗಿ ಮಾಡಲು ಅರ್ಹರಾಗುವರು. ಆದರೆ ಪರಾವರ್ತಕ ಯಂತ್ರದಿಂದ ಈ ತರದ ಅನುಕೂಲತೆಯು ಆಗುವದು ಶಕ್ಯವಿಲ್ಲ. ಈ ಯಂತ್ರದ ಸಹಾಯದಿಂದ ೧೫೬೩ ಪರಾರ್ಧ ಮೈಲು ದೂರದಲ್ಲಿಯು ವಸ್ತುಗಳು ಕಾಣುವವು. ಮತ್ತು ಇವರಿಂದ ೨ ಕೋಟಿ ೬೦ ಲಕ್ಷ ಸ್ಥೂಲ ನಕ್ಷತ್ರಗಳ ಅಭ್ಯಾಸ ಮಾಡಲಿಕ್ಕೆ ಸುಲಭವಾಗುವದು. ಇಷ್ಟೆಲ್ಲ ಅನುಕೂಲತೆಗಳು ಈ ಯಂತ್ರದಿಂದ ಆದಾಗ್ಯೂ, ಒನ್ನೂ ೫೦೦ ಕೋಟಿ ಸೂಕ್ಷ್ಮ ನಕ್ಷತ್ರಗಳ ಅಭ್ಯಾಸವು, ಈ ಯಂತ್ರದಿಂದ ಸಾಧ್ಯವಾಗುವದಿಲ್ಲೆಂದು ಕೆಲವು ಶಾಸ್ತ್ರಜ್ಞರ ಅಭಿಪ್ರಾಯವಿದೆ.

ಪಾಶ್ಚಾತ್ಯ ಜ್ಯೋತಿರ್ವಿದರೆಲ್ಲರೂ, ಈ ದುರ್ಬೀನಿನಲ್ಲಿ ಆಶ್ಚರ್ಯಜನಕವಾದ ಉನ್ನತಿಯನ್ನು ಮಾಡಬೇಕೆಂದು, ಆ ಪ್ರಯತ್ನದಲ್ಲಿ ತೊಡಗಿದ್ದಾರೆ. ಅವರು ಈ ಪ್ರಯತ್ನದಲ್ಲಿ ಉನ್ನತಿಯ ಶಿಖರಕ್ಕೆ ಮುಟ್ಟಿ, ಅದ್ಭುತ ಶಕ್ತಿಯುಳ್ಳ ಈ ಯಂತ್ರವು ಸಿದ್ಧವಾದಲ್ಲಿ, ಇಡೀ ವಿಶ್ವದ ಸಂದೇಹೊಂದೇಗಳನ್ನು ಸಹ ಶೋಧಿಸಬಹುದು. ಅವೇ ರೀತಿಯ ಪ್ರಸಿದ್ಧ ಪರಿಕಲ್ಪಕನಾದ (Designer) ಡಾಕ್ಟರ ಜಿ. ಡಬ್ಲೂ. ರೇಚೆ (Dr. G. W. Retchey) ಎಂಬವನು ಈ ತರದಿಂದ ಶಾಸ್ತ್ರ ಹಾಗೂ ಯಂತ್ರಗಳಲ್ಲಿ ಉನ್ನತಿಯಾವರೆ, ಇನ್ನು ಸ್ವಲ್ಪೇ ದಿವಸಗಳಲ್ಲಿ ೩೦೦" ವ್ಯಾಸವುಳ್ಳ ಯಂತ್ರ

ವನ್ನೂ, ಅಲ್ಲಿಂದ ೧೦೦೦'' ವ್ಯಾಸವುಳ್ಳ ಯಂತ್ರವನ್ನೂ ತಯಾರಿಸಬಹುದೆಂಬ ಅಭಿ ಪ್ರಾಯವುಳ್ಳವನಾಗಿದ್ದಾನೆ. ಮತ್ತು ಈ ಯಂತ್ರದ ಸಹಾಯದಿಂದ ೮೦,೦೦೦ ಪರಾರ್ಧ ಮೈಲು ದೂರದಲ್ಲಿರುವ ನಕ್ಷತ್ರಗಳು ಸ್ಪಷ್ಟವಾಗಿ ಕಾಣಬಹುದೆಂದೂ ಅವನ ಅಭಿಪ್ರಾಯವದೆ.

ಇಲ್ಲಿಯ ವರೆಗೆ ತಯಾರಾದ ದುರ್ಬೀನುಗಳ ಸಹಾಯದಿಂದ ವಿಶ್ವದೊಳಗಿನ ಆಶ್ಚರ್ಯಕರವಾದ ವಿಭೂತಿಗಳಾದ ಸೂರ್ಯ–ಚಂದ್ರ–ಗ್ರಹ–ನಕ್ಷತ್ರ ಮೊದಲಾದವು ಗಳ ಬಗ್ಗೆ ಎಷ್ಟೋ ಸೋಜಿಗದ ಸಂಗತಿಗಳ ಶೋಧವು ಆಗಿರುವದು. ಅವುಗಳ ಯಥಾರ್ಥಜ್ಞಾನವು ವಿಶ್ವಕರ್ತನಾದ ಪರಮೇಶ್ವರನ ಹೊರತು ಬೇರೆಯವರಿಗೆ ಅಸಾ ಧ್ಯವು. ಆದರೂ ಶೋಧಕರು ಹೆಚ್ಚು ಹೆಚ್ಚು ಶೋಧ ಮಾಡುತ್ತಾ ಹೋದ ಹಾಗೆ, ಪರಮೇಶ್ವರನಿಂದ ನಿರ್ಮಿತವಾದ ಅಗಾಧವಾದ ಈ ವಿಶ್ವವು ಬೆಳೆಯುತ್ತಲೇ ಹೋಗು ವದು. ಈ ಅಖಿಲ ವಿಶ್ವದ ಸಂಪೂರ್ಣ ಸಂಗತಿಗಳು ವಿಜ್ಞಾನ ಶಾಸ್ತ್ರಜ್ಞರಿಂದ ಆಗು ವದು ಎಂದಿಗೂ ಶಕ್ಯವಾಗದು. ಇದು ಬ್ರಹ್ಮಜ್ಞಾನವುಳ್ಳವರಿಗೆ ಮಾತ್ರ ತಿಳಿಯು ಬಹುದು. ಯೋಗಿಗಳು ಮಾತ್ರ ತಮ್ಮಲ್ಲಿಯ ಯೋಗಬಲದ ಸಹಾಯದಿಂದ ಕೆಲವು ಸಂಗತಿಗಳನ್ನು ತಿಳಿದುಕೊಳ್ಳಬಲ್ಲರು. ಆದರೆ ಶೋಧಕರು ಯಂತ್ರಗಳ ಸಹಾಯದಿಂದ ಈ ವರೆಗೆ ಮಾಡಿದ ಈ ವಿಶ್ವದ ಶೋಧದ ಬಗ್ಗೆ ಅವರಿಗೆ ಧನ್ಯವಾದಗಳನ್ನು ಅರ್ಪಿಸು ವದು ಪ್ರತಿಯೊಬ್ಬನ ಕರ್ತವ್ಯವಾಗಿರುವದು. ಅವರು ಇಂದಿನ ವರೆಗೆ, ದೂರದರ್ಶಕ ಯಂತ್ರಗಳ ಸಹಾಯದಿಂದ ಗ್ರಹ–ನಕ್ಷತ್ರಗಳ ಬಗ್ಗೆ ಗೊತ್ತು ಹಚ್ಚಿದ ಸಂಗತಿಯನ್ನು ಇನ್ನೊಂದು ಲೇಖದಲ್ಲಿ ನಾವು ವಾಚಕರ ಮುಂದೆ ಇಡುವೆವು.

ಅಮೇರಿಕೆಯ ವಸಾಹತು

ಅಮೇರಿಕೆಯಲ್ಲಿ ಸಂಯುಕ್ತ ರಾಷ್ಟ್ರದ ವಸತಿಯು ೧೦ ಕೋಟಿಯಿಂದ ೧೫ ಕೋಟಿಯವರೆಗೆ ಇರುವದು. ಅಲ್ಲಿಯ ಶಿಕ್ಷಣ–ವ್ಯಾಪಾರೋದ್ಯೋಗ–ನವೀನ ಶೋಧ– ಮೊದಲಾದವುಗಳೆಲ್ಲ ಜಗತ್ತಿನಲ್ಲೆಲ್ಲ ಮಾನ್ಯತೆಯನ್ನು ಪಡೆದಿರುವವು. ಆ ದೇಶವು ಖನಿಜ ಸಂಪತ್ತಿಯಿಂದಲೂ ಉದ್ಭಿಜ್ಜ ಸಂಪತ್ತಿಯಿಂದಲೂ ಮೆರೆಯುತ್ತಿರುವದು. ಈ ಬಗೆಯ ಸುಸಂಪನ್ನ ದೇಶದ ಜನವಸತಿಯು ಹ್ಯಾಗೆ ಅಲ್ಪ ಪ್ರಮಾಣದಿಂದ ಬರುತ್ತ ಬಾಯಿತೆಂಬ ಸಂಗತಿಯು ಒಳ್ಳೇ ಮನೋರಂಜಕವಾಗಿರುವದು. ಅದು ಹ್ಯಾಗೆಂದರೆ: –

ಇಂಗ್ಲಂಡ ದೇಶದಲ್ಲಿ ೧೬ನೆಯ ಶತಮಾನದಲ್ಲಿ ಜನತೆಯು ಲಕ್ಷ್ಯವೆಲ್ಲ ಕೇವಲ ಧರ್ಮದ ಕಡೆಗೆ ಇದ್ದಿತು. ಬಾಯಿಬಲದ ಆಧಾರವಿಲ್ಲದ ಆಚಾರವಿಚಾರಗಳಿಗೆಲ್ಲ ಅವರ ಸಹಾ ನುಭೂತಿಯು ಇರಲಿಲ್ಲ. ಕೇವಲ ಕರ್ಮಮಾರ್ಗದ ವಿಷಯವಾಗಿ ತಿರಸ್ಕಾರವು ಬಿದ್ದಿತ್ತು. ಬಾಯಿಬಲಕ್ಕೆ ಅನುಸರಿಸಿನ ಆಚಾರವಿಚಾರಗಳು ಗಂಭೀರವೂ ಶುದ್ಧವೂ ಎಂಬುದಾಗಿ ತಿಳಿವಳಿಕೆ ಇತ್ತು. ಈ ಮಾದರಿಯ ಜ್ಞಾನವುಳ್ಳವರಿಗೆ 'ಪ್ಯಾಟಿಸ್ಟಂಟ್' ಎಂಬ ಹೆಸರಿತ್ತು. ಪೋಪನೇ ಮಾರ್ಗದರ್ಶಕನೆಂದು ತಿಳಿದು ಮೊದಲು ಪ್ರಚಾರ ದಲ್ಲಿದ್ದ ಧರ್ಮದಂತೆ ನಡೆಯುವವರಿಗೆ 'ರೋಮನ್ ಕಥೋಲಿಕ' ಮತದವರೆಂಬುದಾಗಿ ಪ್ರಸಿದ್ಧಿಗಿತ್ತು. ತಮ್ಮ ತಮ್ಮ ಮತಗಳ ರಾಜರಿದ್ದಾಗ ಇನ್ನೊಂದು ಮತದವರಿಗೆ ತೊಂದರೆ ತೊಂದರೆ ಆಗುತ್ತಿತ್ತು. ಪ್ರೊಟೆಸ್ಟಂಟ್ ಮತದಲ್ಲಿ ಇನ್ನೊಂದು 'ಪ್ಯೂರಿಟ್' ಎಂಬ ಪಂಥವಿರುವದು. ಆ ಪಂಥದವರು ಒಳ್ಳೇ ಧರ್ಮನಿಷ್ಠರೂ ಪಾಪಭೀರುಗಳೂ ನೀತಿಗೆ ಹೇಸುವಂಥವರೂ ಆಗಿದ್ದರು. ಅವರ ಇರುವಿಕೆಯು ತೀರ ಸರಳ, ವಿಲಾಸ ಡಂಬರಗಳನ್ನು ಅವರು ತೀರ ಸೇರದಂಥವರು.

ಹೀಗೆ ಧರ್ಮಭೇದಗಳಿರುವಾಗ ೧೬೦೩ನೆಯ ಇಸ್ವಿಯಲ್ಲಿ ಮೊದಲನೆಯ ಜೇಮ್ಸನು ಪಟ್ಟವೇರಿದನು. ಅವನ ಕಾಲದಲ್ಲಿ ಯಾರಿಗೂ ವಿಶೇಷ ತೊಂದರೆಯಾಗ ಲಿಲ್ಲ. ಆ ರಾಜನು ಧರ್ಮಸಂಬಂಧವಾದ ಪರಿಷತ್ತಗಳನ್ನು ನೆರೆಯಿಸಿ ಧರ್ಮಸಂಬಂಧ ವಾದ ವಿವಾದಗಳನ್ನು ಮಾತ್ರ ನಡೆಯಿಸುತ್ತಿದ್ದನು. ಹೀಗೆ ಇದ್ದರೂ ಪ್ಯೂರಿಟನ್ ಪಂಥದವರು ಬೇಸತ್ತು ಪರದೇಶಕ್ಕೆ ಹೋಗಿ ವಸತಿ ಮಾಡಬೇಕೆಂದು ಆಲೋಚಿಸಿ ಇಂಗ್ಲಂಡ ದೇಶದ ಲೈಡನ್ ಬಂದರಕ್ಕೆ ತಮ್ಮ ಹೆಂಡರುಮಕ್ಕಳೊಂದಿಗೆ ಹೋಗಿ ವಾಸ ಮಾಡಿದರು. ಅಲ್ಲಿ ೧೧ ವರ್ಷ ಕಳೆದ ಬಳಿಕ ಪರಕೀಯ ದೇಶದಲ್ಲಿರುವದಕ್ಕಿಂತ ಹೊಸ ದಾಗಿ ಶೋಧಿಸಲ್ಪಟ್ಟ ಅಮೇರಿಕೆಗಾದರೂ ಹೋಗಿ ಸ್ವತಂತ್ರ ರೀತಿಯಿಂದ ಇರಬೇ ಕೆಂದು ಅವರು ಯೋಚಿಸಿದರು. ನಾವೇ ಸ್ವತಂತ್ರರಾದ ಮೇಲೆ ನಮ್ಮ ಮತದಂತೆ ವಾಸ ನಡೆಯಲಿಕ್ಕೆ ಏನೂ ಬಾಧೆ ಇಲ್ಲವೆಂದು ಆಲೋಚನೆ ಮಾಡಿದರು. ಇದಕ್ಕೆ ಕಾರಣಕರ್ತರಾದ ಬ್ರುಸ್ಟರ, ಬಾಡಫರ್ಡ, ರಾಬಿನ್‌ಸನ್ ಇವರೇ ಮೊದಲಾದವರು ಮುಖಂಡ ರಾದ ಕೆಲವೊಂದು ಜನರ ಗುಂಪು ಅಮೇರಿಕೆಗೆ ಹೊರಟಿತು. ಇವರಿಗೆ ಇತಿಹಾಸದಲ್ಲಿ "ಪಿಲಗ್ರಿಮ್ ಫಾದರ್ಸ" ಅಂದರೆ ಆದ್ಯಪರದೇಶಗಮನಪ್ರವರ್ತಕರೆಂಬದಾಗಿ ಹೆಸರು ಬಿದ್ದಿದೆ.

ಅವರು 'ಮೇಫ್ಲಾವರ' ಮತ್ತು ಸ್ಪೀಡವೆಲ ಎಂಬ ಎರಡು ಹಡಗಗಳನ್ನು ಉಪಯೋಗಿಸಿಕೊಂಡರು. ಮೊದಲನೆಯದರಲ್ಲಿ ೯೦ ಜನಗರಿಗೂ ಎರಡನೆಯದರಲ್ಲಿ ನೂರವತ್ತು ಜನರಿಗೂ ಸಾಲುವಷ್ಟು ಸ್ಥಳವಿತ್ತು. ಈ ಪ್ರಕಾರ ೧೭೦ ಜನರು

ಆ ಹಡಗಗಳನ್ನೇರಿ ಲೈಡನ್ ಬಂದರವನ್ನು ಬಿಟ್ಟರು. ಲೈಡನ್ ಬಂದರದಲ್ಲಿ ಉಳಿಸಿ ರಕ್ಷಣಾರ್ಥವಾಗಿ ರಾಬಿನ್‌ಸನ್ ಎಂಬವನು ಉಳಿದುಕೊಂಡನು. ಮಿಕ್ಕವರೆಲ್ಲ ಮೂ ಟರು. ೩೦೦ ಮೈಲು ಹೋದಬಳಿಕ ಸ್ಪೀಡವೆಲ್ ಹಡಗಕ್ಕೆ ತೂತು ಬಿತ್ತು. ಆವ ಹೆದರಿದ ಗಲ ಜನರು ಅದರಲ್ಲೇ ಕುಳಿತು ತಿರುಗಿದರು. ಮಿಕ್ಕ ೧೦೨ ಜನರು 'ಮೇಫ್ಲ ವರ್' ಎಂಬ ಹಡಗದಲ್ಲಿ ಕುಳಿತು ೧೬೨೦ನೆ ಇಸ್ವಿಯ ಅಗಷ್ಟ ತಿಂಗಳಿನ ೧೬ನೆ ತಾರೀಖಿನ ದಿವಸ ಮುಂದೆ ಸಾಗಿದರು. ಮಾರ್ಗದಲ್ಲಿ ಅನೇಕ ತೊಂದರೆಗಳು ಬಂದವು. ಇಷ್ಟೇ ಅಲ್ಲ, ಅವರಲ್ಲಿ ಕೆಲವರು ಸತ್ತುಹೋದರು. ಹೀಗಾದರೂ ಅವರು ತಿರುಗಲಿಲ್ಲ, ಉಳಿದವರೆಲ್ಲ ಒಟ್ಟುಗೂಡಿ ತಮ್ಮಲ್ಲಿ ಒಬ್ಬನನ್ನು ಗವರ್ನರನನ್ನಾಗಿ ಮಾಡಿಕೊಂಡರು. ಮುಂದೆ ೬೫ ತಿಂಗಳು ಒಂದೇಸವನೆ ಸಾಗಿದಮೇಲೆ ಅವರ ಕಣ್ಣಿಗೆ ಹೊಸ ಭೂ ಪ್ರದೇಶವು ತೋರಿತು. ಹೊಸದೇಶ, ಅಲ್ಲಿಯ ನಿವಾಸಿಗಳ ಕಾಟ, ಚಳಿ ಮೇಲೆ ಎಲ್ಲಿ ಉಳಿಯಬೇಕು, ಇತ್ಯಾದಿ ವಿಚಾರಗಳೆಲ್ಲ ಹೊಸ ನೋಟದಿಂದ ಕಣ್ಣಮುಂ ಕಟ್ಟಿದವು. ಒಂದು ತಿಂಗಳವರೆಗೆ ಒಂದು ಆಖಾತದ ಬಳಿ ಹಡಗಕ್ಕೆ ನಾಂಗೂರ ಅಲ್ಲೇ ವಾಸಿಸಿದರು. ಮುಂದೆ ಅದೇ ಇಸ್ವಿ ದಿಶಂಬರ ತಿಂಗಳ ೨೬ನೆ ತಾರೀಖಿನ ದಿವ ಅಲ್ಲಿಯ ಭೂಮಿಯಮೇಲೆ ಇಳಿದು ಆ ಪ್ರದೇಶಕ್ಕೆ 'ಪ್ಲಿಮಥ್‌ರಾಕ್' ಎಂಬ ಹೆಸರು ಕೊಟ್ಟರು.

ಆ ಮೇಲೆ ಅಲ್ಲಿಯ ಕೆಂಪು ಇಂಡಿಯನ್ನರು ಯುದ್ಧ ಸೂಚನಾರ್ಥವಾಗಿ ಜಮು ದಲ್ಲಿ ಬಾಣಗಳನ್ನು ಸುತ್ತಿ ಕಳಿಸಿಕೊಟ್ಟರು. ಇವರಾದರೂ ಪ್ರತಿಯಾಗಿ ತುಬಾಕಿ ಗುಂಡ ಗಳನ್ನು ಕಳಿಸಿಕೊಟ್ಟರು. ಅಷ್ಟರಲ್ಲಿ ಅವರಲ್ಲಿದ್ದವರಲ್ಲಿ ಅರ್ಧಕ್ಕರ್ಧ ಜನರು ಪ್ರಯಾಸ ತ್ರಾಸದಿಂದ ಜಡ್ಡಾಗಿ ಮರಣಹೊಂದಿದರು. ಆದರೂ ಅವರಲ್ಲಿ ಗಟ್ಟಿಗರಾದ ೪ ಜನರು ಯಾತಕ್ಕೂ ಹೆದರದೆ ಎದೆಗೊಟ್ಟು ವಾಸಮಾಡಿದರು. ಇವರೇ ಈಗಿನ ಯುನೈ ಯಿಟೆಡ್ ಸ್ಟೇಟ್ಸಿನ ಆದ್ಯಸಂಸ್ಥಾಪಕರು.

ಮುಂದೆ ತುಸು ದಿನಗಳಲ್ಲಿಯೇ ಹೊಸ ಹಡಗದಲ್ಲಿ ಕುಳಿತು ಕೆಲವು ಸಾಮಾನು ಗಳನ್ನು ಕಟ್ಟಿಕೊಂಡು ಮತ್ತೆ ಮೂವತ್ತೈದು ಜನರು ಬಂದರು. ಹಾಗೆಯೇ ಬ ಬರುತ್ತ ೧೬೨೩ ಸುಮಾರಕ್ಕೆ ೨೩೩ ಜನರು ನೆರೆದರು. ಆಗ ಅವರಿಗೆ ಒಳ್ಳೇ ಧೈರ್ಯ ಬಂದಿತು.

ಇಂಗ್ಲಂಡದಲ್ಲಿ ಜೇಮ್ಸನ ತರುವಾಯ ಮೊದಲನೆಯ ಚಾರ್ಲಸನು ಪಟ್ಟದಮೇಲೆ ಬಂದನು. ಆಗಂತೂ ಪ್ಯುರಿಟನ್ ಪಂಥದವರಿಗೆ ಮತ್ತಿಷ್ಟು ಅಲ್ಲಿ ನಿಲ್ಲದ ಹಾಗೆ ಆಯಿತು ಆದದರಿಂದ ಸ್ವದೇಶ ಬಿಟ್ಟು ಹೊರಡುವ ಪ್ರವೃತ್ತಿಯು ಒಂದೇಸವನೆ ಬೆಳೆಯು ಹೊರ

ತು. ಅದದರಿಂದ ಈಗಿನ ಮಾಸಾಚುಸೆಟ್ಸ್ ಎಂಬ ಸಂಸ್ಥಾನವೇ ಹೊಸ ವಸತಿಯಿಂದ ಸ್ಥಾಪಿತವಾಯಿತು. ಮುಂದೆ ಅಲ್ಲಿ ಶಾಲೆ ಕಾಲೇಜುಗಳು ಸ್ಥಾಪಿಸಲ್ಪಟ್ಟವು. ಅವು ಲ್ಲಿ ಹರವಾರ್ಡ ಕಾಲೇಜುನೇ ಮೊದಲನೆಯದು. ಮುಂದೆ ಮೆಲ್ಲಮೆಲ್ಲನೆ ರೋಮನ್ ಥೋಲಿಕರೂ ಬರಲಾರಂಭಿಸಿದರು. ನ್ಯೂಹ್ಯಾಂಪಶಾಯರ, ಕನೆಕ್ಟಿಕಟ್, ಹ್ರೋಡ ಯಲಂಡ ಎಂಬದಾಗಿ ಪ್ರಾಟೆಸ್ಟಂಟರ ವಸತಿಗಳೂ ಮುಂದೆ ಮೇರೀಲ್ಯಾಂಡ ಎಂಬ ೋಮನ್ ಕಥೋಲಿಕ ವಸತಿಯೂ ಸ್ಥಾಪಿತವಾದವು. ಇಂಥ ವಸತಿಗಳು ಒಂದರ ಂದೊಂದು ಬೆಳೆಯ ತೊಡಗಿದವು. ೧೬೬೦ರ ಸುಮಾರಕ್ಕೆ ಈ ವಸತಿಯ ಜನ ಂಖ್ಯೆಯು ೨ ಲಕ್ಷದವರೆಗೆ ಆಯಿತು. ೩೦ ವರ್ಷಗಳ ಒಳಗಾಗಿ ೩೦ ಲಕ್ಷ ಜನ ಂಖ್ಯೆಯವರೆಗೆ ಬೆಳೆಯಿತು. ಹೀಗೆ ಬೆಳೆ ಬೆಳೆದಂತೆ ಸಂಘಗಳು ಸ್ಥಾಪಿತವಾಗಿ ುಂದೆ ಅವೆಲ್ಲ ಒಟ್ಟುಗೂಡಿ 'ಯುನೈಟೆಡ್‌ಸ್ಟೇಟ್ಸ್ ಆಫ ಅಮೇರಿಕಾ' ಎಂಬ ಸಾಧಾ ಣ ಹೆಸರು ಸ್ಥಾಪ್ತವಾಯಿತು.

ಈಗ ಅಮೇರಿಕೆಯಲ್ಲಿ ೪೬ ಸಂಸ್ಥಾನಗಳಿದ್ದು ಜನಸಂಖ್ಯೆಯು ೧೦–೧೧ ಕೋಟಿ ಳವಡಿಗೆ ಅದೆ. ೧೬೨೦ರಲ್ಲಿ ಇದರ ಆರಂಭವು ಬಹು ಕಷ್ಟಪಟ್ಟು ೧೦೦ ಜನರಿಂದ ಲ್ಪಸಂಖ್ಯೆಯಿಂದ ತಾವು ಈಗ ಇಂಥ ಊರ್ಜಿತ ಸ್ಥಿತಿಗೆ ಸ್ವಲ್ಪ ವರ್ಷಗಳಲ್ಲಿಯೇ ಂದನ್ನು ಅಮೇರಿಕನ್ ಜನರಿಗೆ ಒಳ್ಳೇ ಅಭಿಮಾನಾಸ್ಪದವಾದ ಸಂಗತಿಯಾಗಿದೆ. ೧೭೭೦ರ ಸುಮಾರಕ್ಕೆ ೩೦೦ ವರ್ಷಗಳನ್ನು ಕಳೆದಬಗ್ಗೆ ಶತ ಸಾಂವತ್ಸರಿನ ಸಮಾ ಭವನ್ನು ಅಲ್ಲಿ ನೆರವೇರಿತು.

ಅಮೇರಿಕೆಯ ಸಂಸ್ಥಾಪಕರು ಮೊದಲಿಗೆ ಇಂಗ್ಲಂಡದೇಶದವರು, ಅಂದರೆ ಂಗ್ಲಂಡದೇಶದ ಬಂಧುಗಳು. ಅದನ್ನು ಮರೆಯುದಲೆ ಮೊನ್ನಿನ ಮಹಾಯುದ್ಧದಲ್ಲಿ ನ್ನು ಇಂಗ್ಲಂಡದೇಶಕ್ಕೆ ಒಳ್ಳೇ ನೆರವಾದರು. ಇಂಥವರಿಗೇ ಅಣ್ಣತಮ್ಮಂದಿರೆಂದು ಸ್ಪಬೇಕು!

ಮಾನಸಶಾಸ್ತ್ರ

ನಿರ್ಣಯ

ಇದು ವರೆಗೆ ಮಾಡಿದ ವಿವೇಚನದಿಂದ ನಮಗೆ ವಸ್ತುವಿಷಯಕಜ್ಞಾನ ಅಂದರೆ ಬೋಧೆ ಕಲ್ಪನೆ ಹಾಗು ಸಾಮಾನ್ಯ ಜ್ಞಾನ ಮೊದಲಾದವು ಯಾವ ಬಗೆಯಿಂದ ಉಂಟಾಗುವವೆಂಬದು ಗೊತ್ತಾಗಿರುವದು. ಈ ಬಗೆಯ ಜ್ಞಾನಗಳೆಲ್ಲ ನಮ್ಮ ಜ್ಞೇತೃ ಕ್ಷೇತ್ರಗಳಲ್ಲಿ ಏಕಾಕಿಯಾಗಿ ಉಳಿಯಬಹುದು. ಆದರೆ ನಿರ್ಣಯವೆಂಬ ಉಚ್ಚ ಮನೋವ್ಯಾಪಾರದಿಂದ ನಾವು ಎರಡು *ಕಲ್ಪನೆಗಳಲ್ಲಿರುವ ಸಂಬಂಧ ಇಲ್ಲವೆ ವಿರೋಧವನ್ನು ಗೊತ್ತುಪಡಿಸುತ್ತೇವೆ. ವಿಚಾರವೆಂಬ ಗಹನವಾದ ಮನೋವ್ಯಾಪಾರದ ಅವಯವಗಳು ನಾನಾತರದ ನಿರ್ಣಯಗಳೇ.

ಸೌಲಭ್ಯತೆಗಾಗಿ ಗ್ರಹಿಕೆ, ಕಲ್ಪನೆ, ಹಾಗು ಸಾಮಾನ್ಯ ಜ್ಞಾನಗಳು ಜ್ಞೇತೃ ಕ್ಷೇತ್ರದಲ್ಲಿ ಏಕಾಕಿಯಾಗಿರುವವೆಂದೂ ನಿರ್ಣಯದಿಂದ ಎರಡು ಕಲ್ಪನೆಗಳ ಸಂಬಂಧವು ಇಲ್ಲವೆ ವಿರೋಧವು ನಿರ್ಣಯಿಸಲ್ಪಟ್ಟು ಅದರಿಂದ ಸಂಕಲ್ಪವೆಂಬ ಫಲಿತಾಂಶವು ಉಂಟಾಗುವದೆಂದು ಗ್ರಹಿಸಿದ್ದೇವೆ. ಈ ವಿಷಯದ ಬಗ್ಗೆ ತುಸು ಸೂಕ್ಷ್ಮರೀತಿಯಿಂದ ವಿಚರಿಸಿದರೆ ನಮ್ಮ ಎಲ್ಲ ಬಗೆಯ ಬೌದ್ಧಿಕ ವ್ಯಾಪಾರಗಳಲ್ಲಿ ನಿರ್ಣಯಶಕ್ತಿಯು ಅವಶ್ಯವಾಗಿ ಉಪಯೋಗಿಸಲ್ಪಡುವದೆಂಬದು ಗೊತ್ತಾಗುವದು. ಮನುಷ್ಯಪ್ರಾಣಿಗೆ ಹುಟ್ಟುಬುದ್ಧಿ ಹಾಗು ಮೇಲುಬುದ್ಧಿ ಎಂಬೆರಡು ಬೌದ್ಧಿಕ ವ್ಯಾಪಾರಗಳು ಉಂಟೆಂಬದು ಸರ್ವಸಮ್ಮತವಾದದ್ದು. ಮೇಲುಬುದ್ಧಿಗೆ ಅವಶ್ಯವಾದ ಮನೋವ್ಯಾಪಾರಗಳಲ್ಲಿ ನಿರ್ಣಯಶಕ್ತಿಯು ಉಪಯೋಗವು ಕಂಡುಬರುವದು. ಸಣ್ಣ ಹುಡುಗರು ಕೂಡ ಎರಡು ಪದಾರ್ಥಗಳಲ್ಲಿರುವ ಸಾಮ್ಯವೈಷಮ್ಯಗಳನ್ನು ಇಂದ್ರಿಯಗಳ ಮುಖಾಂತರ ಕಂಡು ಹಿಡಿದು ನಿರ್ಣಯಶಕ್ತಿಯ ಸಹಾಯದಿಂದ ಒಂದರಗೂಡೊಂದು ಹೋಲಿಸಿ ನೋಡಿ ಅವುಗಳ ವಿಷಯವಾಗಿ ಜ್ಞಾನಮಾಡಿಕೊಳ್ಳುವರು. ಆದ್ದರಿಂದ ಗ್ರಹಿಕೆ, ಕಲ್ಪನೆ ಸಾಮಾನ್ಯಜ್ಞಾನ ಮೊದಲಾದವುಗಳೂ ಅವುಗಳಿಗೆ ಸಂಬಂಧಿಸಿದ ನಿರ್ಣಯಕ್ಕೂ ಇರುವ ಸಂಬಂಧವು ಬೀಜಾಂಕುರಗಳಿಗೆ ಇರುವ ಸಂಬಂಧದಂತೆ ಇರುತ್ತದೆಂದು ಹೇಳಿದರೆ ತಪ್ಪಾಗಲಾರದು. ನಿರ್ಣಯವು ಸಹಜ ಇಲ್ಲವೆ ಗಡಚಾದದ್ದು ಇರಬಹುದು. ಸಹಜ ಇಲ್ಲವ ಸಾದಾ ನಿರ್ಣಯಕ್ಕೆ ಅವಶ್ಯವಾದ ಕಲ್ಪನೆಗಳೆಂಬ ಕಾರಣ ಸಾಮಗ್ರಿಗಳನ್ನು ನಾವು ನಮ್ಮ ಸ್ವಂತ ಅನುಭವದಿಂದ ಇಲ್ಲವೆ ಎರಡನೆಯವರು ಹೇಳಿದ ಸಂಗತಿಗಳಲ್ಲಿ ವಿಶ್ವಾಸವಿಟ್ಟು ಬೊರಕಿಸಿಕೊಳ್ಳುತ್ತೇವೆ. ಈ ತರದ ನಿರ್ಣಯದಲ್ಲಿ ಪ್ರತ್ಯ

* ಕಲ್ಪನೆಯು ಸಾದಾ ಕಲ್ಪನೆ ಇರಬಹುದು ಇಲ್ಲವೆ ಗಡಚಾದ ಸಾಮಾನ್ಯಜ್ಞಾನ ಇರಬಹುದ

ಹಾಗು * ಆಪ್ತವಾಕ್ಯ ಎಂಬೆರಡು ಪ್ರಮಾಣಗಳ ಸಮೂಹವಾಗುವದು. ಈ ಎರಡು ಪ್ರಕಾರಗಳಲ್ಲಿ ಪ್ರತ್ಯಕ್ಷ ಪ್ರಮಾಣದಿಂದ ನಿರ್ಣಯಮಾಡಿಕೊಳ್ಳುವದು ಹೆಚ್ಚು ಮಹತ್ವವುಳ್ಳದ್ದು; ಯಾಕಂದರೆ ಈ ತರದ ನಿರ್ಣಯವನ್ನು ಮಾಡಿಕೊಳ್ಳಲೆತ್ನಿಸುವವರಲ್ಲಿ ಸಮ ಬಗೆಯ ಸ್ವಾವಲಂಬನದ ತೇಜವು ಉಂಟಾಗುವದು. ಆದರೆ ಕೇವಲ ಆಪ್ತ ವಾಕ್ಯಪ್ರಮಾಣದಿಂದಲೇ ಎರಡನೆಯವರು ಹೇಳಿದ ನಿರ್ಣಯವನ್ನು ಗ್ರಹಿಸುತ್ತ ಹೋಗುವವರು ಪರಾವಲಂಬಿಗಳೂ ಅತಂತ್ರರೂ ಆಗುವರೆಂಬ ಬಗ್ಗೆ ಸಂದೇಹವಿಲ್ಲ. ಈ ಎರಡೂ ಪ್ರಕಾರಗಳು ಅತಿರೇಕವಾಗದಂತೆ ಜ್ಞಾನಸಂಪಾದನೆಯಲ್ಲಿ ಇವುಗಳ ಸಮ್ಮಿ ಶ್ರಣವು ಅವಶ್ಯವಾಗಿರಬೇಕು. ಗಹನವಾದ ನಿರ್ಣಯವಲ್ಲಿ ಇಚ್ಛಾಶಕ್ತಿಯ ಉಪ ಯೋಗವು ಬಹುಮಟ್ಟಿಗೆ ಆಗುವದು. ಈ ತರದ ನಿರ್ಣಯವನ್ನು ಮಾಡುವಾಗ ಮನಸ್ಸು ನಿರ್ಣಯಿಸತಕ್ಕ ಸಂಗತಿಗಳ ಬಗ್ಗೆ ತನ್ನ ಮುಂದೆ ಬಂದ ಪ್ರಮಾಣಗಳಲ್ಲಿ ಸಾಧಕಪ್ರಮಾಣಗಳು ಯಾವವು ? ಬಾಧಕ ಪ್ರಮಾಣಗಳು ಯಾವವು ? ಎಂಬದನ್ನು ಹುಡುಕಿ ಹುಡಿಸಿ ಸಾಧಕ ಬಾಧಕ ಪ್ರಮಾಣಗಳ ಮಹತ್ವವಿದ್ದಂತೆ ಆಯಾ ಬಗೆಯ ತೀರ್ಪು ಮಾಡುವದುಂಟು. ಈ ಬಗೆಯಾದ ಕೆಲಸಮಾಡುವ ಮನಸ್ಸನ್ನು ನಾವು ತನ ಮುಂದೆ ಬಂದ ಪುರಾವೆಗಳಲ್ಲಿಯ ತಥ್ಯಾಂಶಗಳನ್ನೆಲ್ಲ ತೂಗಿನೋಡಿ ತೀರ್ಪುಮಾಡುವ ನ್ಯಾಯಾಧೀಶನಿಗೆ ಹೋಲಿಸಬಹುದು.

ಮೇಲಿನ ವಿವೇಚನದಿಂದ ಪ್ರತಿಯೊಂದು ನಿರ್ಣಯದ ಅವಯವಗಳು (೧) ಕಲನೆ (೨) ತೀರ್ಪುಗಳೆಂದು ವ್ಯಕ್ತವಾಗುವದು. ನಿರ್ಣಯಗಳಲ್ಲಿ ನಿಶ್ಚಯಾರ್ಥಕ ಸಂಧಾರ್ಥಕ ಹಾಗು ಸಂಶಯಾರ್ಥಕ ಸಾಪೇಕ್ಷ ಎಂಬ ಅನೇಕ ಪ್ರಕಾರಗಳುಂಟು. ಪ್ರತಿಯೊಂದು ಪ್ರಕಾರದ ನಿರ್ಣಯದಲ್ಲಿ ಪೃಥಃಕರಣಾತ್ಮಕ ಹಾಗು ಏಕೀಕರಣಾತ್ಮಕ ಎಂಬ ಎರಡು ಉಪಭೇದಗಳುಂಟು. ನಾವು ಸಾಮಾನ್ಯ ಜ್ಞಾನವನ್ನಾಡಿಕೊಳ್ಳುವಾಗ ಯಾವದೊಂದು ಜಾತಿಗೆ ಇಲ್ಲವೆ ವರ್ಗಕ್ಕೆ ಶೇರಿರುವ ವಸ್ತುಗಳ ಪ್ರಧಾನ ಹಾಗು ಸೌಣಧರ್ಮಗಳನ್ನು ಪರೀಕ್ಷಿಸಿ, ಕಂಡುಹಿಡಿದು ಪೃಥಃಕರಣಾತ್ಮಕ ನಿರ್ಣಯಗಳಿಂದ ವೈಜ್ಞಾನಿಕವುಗಳಲ್ಲಿರತಕ್ಕ ಪ್ರಧಾನಗುಣಧರ್ಮವನ್ನು ಆ ವರ್ಗಕ್ಕೆ ಶೇರಿದ ಎಲ್ಲ ವಸ್ತುಗಳ ಮೇಲೆ ಆರೋಪಿಸುತ್ತೇವೆ. ಗಿಡಗಳಿಗೆ ಗಡುತರವಾದ ಬೊಡ್ಡೆ ಇರುತ್ತದೆಂಬ ನಿರ್ಣಯವು ಪೃಥಃಕರಣಾತ್ಮಕವಾದದ್ದು. ಪೃಥಃಕರಣಾತ್ಮಕ ನಿರ್ಣಯದಿಂದ ವೈಜ್ಞಾನ ಜ್ಞಾನವಾಗದೆ ಸಾಮಾನ್ಯಜ್ಞಾನವು ಹೆಚ್ಚು ತಿಳಿಯಾಗುವದು. ಆಕಳಗಳು ಮೆಲಕಾಡಿಸುವ ಪ್ರಾಣಿಗಳು ಎಂಬದು ಏಕೀಕರಣಾತ್ಮಕನಿರ್ಣಯವು. ಈ ನಿರ್ಣಯದಿಂದ ಮೆಲಕಾಡಿಸುವ ಧರ್ಮವು ಆಕಳದ ಕಲ್ಪನೆಗೆ ಜೋಡಿಸಲ್ಪಟ್ಟು ಅಜ್ಞಾನದ ವ್ಯಾಪ್ತಿ ಯನ್ನು ಬೆಳಸಿತು.

आप्तवाक्यं प्रमाणं । आप्तस्तु यथार्थवक्ता
೪– ೪೪೩೮

ನಿರ್ಣಯಕ್ಕೆ ಬೇಕಾಗುವ ಕಾರಣಸಾಮಗ್ರಿಗಳು ಬೋಧೆ ಹಾಗು ಸಾಮಾನ್ಯ ಜ್ಞಾನಗಳನ್ನು ಪೂರೈಸಿಕೊಡುವವು. ವಿಚಾರಶಕ್ತಿಯು ಆ ಸಾಮಗ್ರಿಗಳನ್ನು ಉಪಯೋಗಿಸಿಕೊಂಡು ಕೆಲವೊಂದು ನಿರ್ಣಯವನ್ನು ಮಾಡುವದು. ಅರ್ಥಾತ್ ಆ ಸಾಮಗ್ರಿಗಳಲ್ಲಿ ದೋಷವಿದ್ದುದಾದರೆ ನಿರ್ಣಯವಾದರೂ ಸದೋಷವಾಗುವದು.

ನಿರ್ಣಯದ ಬಾಹ್ಯಸ್ವರೂಪವೆಂದರೆ ಪ್ರತಿಯೊಂದು ವಾಕ್ಯದಲ್ಲಿ ಅಖ್ಯೇಯ, ಆಖ್ಯಾತಗಳ ಸಂಬಂಧವು ಹೇಳಲ್ಪಟ್ಟಿರುವದು. ನಾಯಿಯು ಒಂದು ಪಶುವು. ಎಂಬ ವಾಕ್ಯದಲ್ಲಿ ನಾಯಿ ಹಾಗು ಪಶು ಎಂಬೆರಡು ಕಲ್ಪನೆಗಳಿದ್ದು ಆ ಎರಡು ಕಲ್ಪನೆಗಳು, ವಿಚಾರಶಕ್ತಿಯಿಂದ ಜೋಡಿಸಲ್ಪಟ್ಟಿರುವವು. ಹೀಗೆ ಮಾಡುವಾಗ ನಮ್ಮ ವಿಚಾರಶಕ್ತಿಯ ಪಥದಲ್ಲಿ ನಾಯಿ ಹಾಗು ಪಶು ಎಂಬೆರಡು ಕಲ್ಪನೆಗಳು ಸ್ವತಂತ್ರರೀತಿಯಿಂದ ಬಂದು ನಿಲ್ಲಲು ವಿಚಾರಶಕ್ತಿಯು ಅವೆರಡೂ ಕಲ್ಪನೆಗಳನ್ನು ಹೋಲಿಸಿ ತೂಗಿ ನೋಡಿ ಪಶುವೆಂಬ ಕಲ್ಪನೆಯನ್ನು ನಾಯಿಯೆಂಬ ಕಲ್ಪನೆಯಮೇಲೆ ಅರೋಪಿಸಲಿಕ್ಕೆ ಬರುವದೆಂದು ನಿರ್ಣಯಿಸಿ ನಾಯಿಯು ಒಂದು ಪಶುವು ಎಂದು ತೀರ್ಪುಮಾಡುವದು. ಹೀಗೆ ತೀರ್ಪು ಮಾಡುವಾಗ ನಾಯಿಯು ಮನುಷ್ಯನಲ್ಲ, ಪಕ್ಷಿಯಲ್ಲ, ಕ್ರಿಮಿಯಲ್ಲ. ಹೀಗೆ ಅನೇಕ ನಿಷೇಧಾತ್ಮಕ ನಿರ್ಣಯಗಳನ್ನು ಮಾಡಬೇಕಾಗುವದು. ವಾಕ್ಯಗಳಿಂದ ನಾವು ಮಾಡಿಕೊಂಡ ನಿರ್ಣಯಗಳನ್ನು ಪರರಿಗೆ ತಿಳಿಸಬೇಕಾಗುವದರಿಂದ ವಾಕ್ಯದಲ್ಲಿ ಉಪಯೋಗಿಸಿದ ಅಖ್ಯೇಯ ಆಖ್ಯಾತ ಪದಗಳ ಯಥಾರ್ಥ ಜ್ಞಾನವು ನಮಗೆ ಅವಶ್ಯವಾಗಿ ಆಗಿರಲಿಕ್ಕೆ ಬೇಕು. ಅಂದರೆ ಯಥಾರ್ಥವಾದ ನಿರ್ಣಯಗಳನ್ನು ಮಾಡುವವನಲ್ಲಿ ಯೋಗ್ಯವಾದ ಸಂಚಯವು ಇರಬೇಕು.

ನಿಶ್ಚಯಾತ್ಮಕ ಹಾಗು ನಿಷೇಧಾತ್ಮಕ ನಿರ್ಣಯಗಳು

ನಿಶ್ಚಯಾತ್ಮಕ ನಿರ್ಣಯದಲ್ಲಿ ಎರಡು ಕಲ್ಪನೆಗಳಲ್ಲಿರುವ ನಿಶ್ಚಿತವಾದ ಸಂಬಂಧವು ಹೇಳಲ್ಪಡುತ್ತದೆ. ಹೀಗೆ ನಿರ್ಣಯಿಸಲ್ಪಟ್ಟ ಸಂಬಂಧಕ್ಕೆ ವಿರುದ್ಧವಾದ ಕಲ್ಪನೆಗಳೆಲ್ಲ ಸುಳ್ಳೆಂದು ದೂರಿಬಿಡುವದೇ ನಿಷೇಧಾತ್ಮಕ ನಿರ್ಣಯವು ಇದು ಸಮಭುಜ ತ್ರಿಕೋಣವಲ್ಲ ಎಂದು ನಿರ್ಣಯಿಸುವ ಮೊದಲು ಸಮಭುಜ ತ್ರಿಕೋಣದ ವಿಷಯವಾಗಿ ಮಾಡಿದ ನಿರ್ಣಯವು ನಮಗೆ ಗೊತ್ತಾಗುವದು. ಆದ್ದರಿಂದ ನಮ್ಮ ವಿಚಾರಪಥದಲ್ಲಿ ಬಂದ ಕಲ್ಪನೆಗಳು ಮೊದಲಿನ ಕಲ್ಪನೆಗೆ ವಿರುದ್ಧವಾಗಿರುವದರಿಂದ "ಇದು ಸಮಭುಜ ತ್ರಿಕೋಣವಲ್ಲ" ಎಂಬ ನಿಷೇಧಾತ್ಮಕ ನಿರ್ಣಯವನ್ನು ಮಾಡುವೆವು. ನಿಷೇಧಾತ್ಮಕ ನಿರ್ಣಯದ ಉಪಯೋಗವು ವಿಶೇಷವಾಗಿ ಶಾಸ್ತ್ರದ ತತ್ವಗಳನ್ನು ಶೋಧಿಸುವದರಲ್ಲಿ ತೊಡಗಿದ ಶಾಸ್ತ್ರಜ್ಞರಿಗೆ ಆಗುವದು.

ಸಂಶಯಾತ್ಮಕ ನಿರ್ಣಯಗಳು

ನಾವು ವಿಶ್ವಾಸವಿಡುವ ಅನೇಕ ಸಂಗತಿಗಳು ನಮ್ಮಿಂದ ನಿರ್ಣಯಿಸಲ್ಪಡದೆ ಬಹುಮಟ್ಟಿಗೆ ಎರಡನೆಯವರ ನಿರ್ಣಯಗಳನ್ನು ಅವಲಂಬಿಸಿರುವವು. ಕೆಲಕೆಲವು ಪ್ರಸಂಗಗಳಲ್ಲಿ ನಮಗೆ ನಿರ್ಣಯಿಸುವದಾಗದೆ ನಮ್ಮ ಮನಸ್ಸು ತಟಸ್ಥ ವೃತ್ತಿಯಲ್ಲಿರುವದು. ಬೆಲೆಯುಳ್ಳ ವಜ್ರ ಮುತ್ತುಗಳನ್ನು ಪರೀಕ್ಷಿಸುವಾಗ ನಮ್ಮ ನಿರ್ಣಯವು ತ್ರಿಶಂಕುವಿನಂತೆ ಇರುವದು ವೇದಾಂತ ವಿಚಾರದಲ್ಲಿ ಸಂಶಯಾತ್ಮಕ ನಿರ್ಣಯಗಳು ತುಂಬಿರುವದು. ಸಾಪೇಕ್ಷ ನಿರ್ಣಯವಲ್ಲ. ಮೇಲೆ ಹೇಳಿದ ಮೂರೂ ತರದ ನಿರ್ಣಯಗಳ ಅಂಶವಿದ್ದು ಎರಡು ಸಾಪೇಕ್ಷ ನಿರ್ಣಯಗಳ ಒಂದು ಕಲ್ಪನೆಯ ತಥ್ಯಾಂಶವು ಅದಕ್ಕೆ ಸಂಬಂಧಿಸಿರುವ ಬೇರೊಂದು ಕಲ್ಪನೆಯ ತಥ್ಯಾಂಶವನ್ನು ಅವಲಂಬಿಸಿರುವದು. 'ಮಳೆಯಾದರೆ ಬೆಳೆಬರುವದು' ಎಂಬದು ಸಾಪೇಕ್ಷ ನಿರ್ಣಯವು.

ನಿರ್ಣಯವು ಸದೋಷವಾಗುವ ಕಾರಣವು

(೧) ಸರಿಯಾದ ನಿರ್ಣಯವು ನಿಜವಾದ ಬೋಧೆ, ಕಲ್ಪನೆ, ಹಾಗು ಸಾಮಾನ್ಯ ಜ್ಞಾನಗಳನ್ನು ಅವಲಂಬಿಸಿರುವದರಿಂದ ಅವುಗಳಲ್ಲಿ ದೋಷವಿದ್ದದ್ದಾದರೆ ನಿರ್ಣಯವು ಸದೋಷವಾಗುವದು. ಈ ಕಾರಣದಿಂದ ಸಣ್ಣ ಹುಡುಗರ ನಿರ್ಣಯಗಳು ಬಹುಶಃ ದೋಷಯುಕ್ತವಾದವುಗಳು ಇರುತ್ತವೆ.

(೨) ನಿರ್ಣಯಿಸುವ ಮೊದಲು ಸಾಧಕ ಬಾಧಕ ಪ್ರಮಾಣಗಳನ್ನು ತೂಗಿ ನೋಡದೆ ಉತಾವಳಿಯಿಂದ ಒಮ್ಮೆಲೇ ನಿರ್ಣಯಮಾಡಿಬಿಟ್ಟರೆ ಅದು ದೋಷವುಳ್ಳದ್ದಾಗುವದು. ಹಾರುವ ಪ್ರಾಣಿಗಳೆಲ್ಲ ಪಕ್ಷಿಗಳೆಂದು ನಿರ್ಣಯಿಸಿಬಿಟ್ಟರೆ ಪತಂಗಗಳೂ ಕಣ್ಣುಕಪ್ಪಡಿಗಳೂ ಪಕ್ಷಿಗಳ ವರ್ಗದಲ್ಲಿ ಸೇರುವವು. ವಸ್ತುತಃ ಪತಂಗವು ಕ್ರಿಮಿ ವರ್ಗಕ್ಕೆ ಸೇರಿದ್ದು. ಕಣ್ಣುಕಪ್ಪಡೆಯು ಸಸ್ತನ ಪ್ರಾಣಿಯಿರದೆ ಪಕ್ಷಿಗಳಂತೆ ತತ್ತಿಗಳನ್ನಿಡದೆ ಮರಿಯನ್ನಿಡುವದು.

(೩) ಏನೂ ವಿಚಾರಮಾಡದೆ ಎರಡನೆಯವರ ಮಾತಿನಲ್ಲಿ ವಿಶ್ವಾಸವಿಟ್ಟು ಮಾಡಿಕೊಂಡ ನಿರ್ಣಯವು ದೋಷವುಳ್ಳದ್ದಾಗಬಹುದು. ಆಪ್ತ ವಾಕ್ಯವೆಂಬದು ಒಂದು ಪ್ರಮಾಣವಿದ್ದರೂ ಅಧಿಕಾರದಿಂದ ನಿರ್ಣಯಮಾಡುವವರಲ್ಲಿಯೂ ಕೂಡ ಕೆಲವು ಥರ ದೋಷಗಳು ಇರುವವು. ಸ್ವರ್ಗ, ನರಕ; ಪಾಪ ಪುಣ್ಯ, ದೈವಿಕ ಶಕ್ತಿ, ದೇವರ ಸ್ವರೂಪ, ಮೊದಲಾದ ಗಹನ ವಿಷಯಗಳ ಕಲ್ಪನೆಗಳು ಒಂದೊಂದು ಧರ್ಮದಲ್ಲಿ ಒಂದೊಂದು ವಿಧವಾಗಿರುವದರಿಂದ ಅವುಗಳ ಸಂಬಂಧವಾದ ನಿರ್ಣಯಗಳು ಅಸ್ಥಿತ ಪ್ರಜ್ಞೆಯಿಂದಲೇ ಉಳಿಯುವವು.

(೪) ಮನಸಿನ ಸಮತೋಲತೆಯ ಅಭಾವದಿಂದ ನಿರ್ಣಯಗಳು ದೂಷಿತವಾಗುವವು. ಗುಂಗೀ ಹುಳವು ತನ್ನ ಮಗನಿಗೆ ಗಂಗಾಧರನೆನ್ನುವದು ಎಂಬ ನಾಣ್ಣುಡಿಯುಂಟು. ಎಷ್ಟೋ ಸಾರೆ ಶಿಕ್ಷಕರು ತನ್ನ ಪ್ರೀತಿಗೆ ಪಾತ್ರರಾದ ವಿದ್ಯಾರ್ಥಿಗಳ ಒಳ್ಳೇ ಜಾಣರೆಂದು ಭಾವಿಸಿ ಅವರ ಯೋಗ್ಯತೆಯ ವಿಷಯವಾಗಿ ತಪ್ಪು ನಿರ್ಣಯವನ್ನು ಮಾಡಿಕೊಳ್ಳುವರು.

ನಿರ್ಣಯ ಶಕ್ತಿಯ ಬೆಳೆವಣಿಗೆ

ನಿರ್ಣಯದ ಅವಯವಗಳೆಂದರೆ ತುಲನೆಯು ಹಾಗು ತೀರ್ಪುಗಳಿರುವವರಿಂದ ಮಗುವು ತಾಯಿ ತಂದೆಗಳ ಗುರ್ತನ್ನು ಅವರ ಮುಖ ನೋಡಿ ಮಾಡಿಕೊಳ್ಳಹತ್ತಿದ ಕೂಡಲೆ ಅದರಲ್ಲಿ ನಿರ್ಣಯ ಶಕ್ತಿಯ ಅಂಕುರವು ತೋರಹತ್ತುವದು. ಮುಂದೆ ಕ್ರಮೇಣ ಅದಕ್ಕೆ ವಾಚಾಶಕ್ತಿಯು ಬಂದಂತೆ ಅದು ತಾನುಮಾಡಿಕೊಂಡ ನಿರ್ಣಯವನ್ನು ಕೆಲವೊಂದು ಕಾಲ್ಪನಿಕ ಶಬ್ದದಿಂದ ಇಲ್ಲವೆ ಅಕ್ಷರದಿಂದ ಎರಡನೇಯವರಿಗೆ ತಿಳಿಸಹತ್ತುವದು ಆದರೆ ಮಗುವಿನ ಅನೇಕ ನಿರ್ಣಯಗಳು ಅದರ ವಿಚಾರದ ಫಲಿತಾಂಶವಿರದೆ ದೊಡ್ಡವರು ಹೇಳಿಕೊಟ್ಟ ಗಿಳಿಯಂತೆ ಪಾಠಮಾಡಿಸಿದ ನಿರ್ಣಯಗಳ ಪುನರಾವರ್ತನವು. ಹುಡುಗರಿಗೆ ಚನ್ನಾಗಿ ಮಾತಾಡಲಿಕ್ಕೆ ಬಂದಮೇಲೆ ಅವರ ನಿರ್ಣಯ ಶಕ್ತಿಯು ಎಷ್ಟರಮಟ್ಟಿಗೆ ಎಂದು ಗೊತ್ತುಪಡಿಸಲಿಕ್ಕೆ ಆಗುವದು. ಈ ಸಂಧಿಗೆ ಅವರಿಗೆ ತಕ್ಕ ಶಿಕ್ಷಣವು ದೊರೆಯಹತ್ತಿತೆಂದರೆ ಅವರ ನಿರ್ಣಯಶಕ್ತಿಯು ತಿಳಿಯಾಗಹತ್ತುವದು.

ನಿರ್ಣಯ ಶಕ್ತಿಯನ್ನು ಬೆಳಿಸುವ ಶಿಕ್ಷಣದ ವಿಷಯಗಳು.

(೧) ತೀರ ಸಣ್ಣ ಹುಡುಗರಿಗೆ ಯೋಗ್ಯವಾದ ವಿಷಯಗಳೆಂದರೆ ಬಾಲೋದ್ಯಾನ, ವ್ಯವಸಾಯ, ವಸ್ತುಪಾಠವು, ಅಕ್ಷರಗಳನ್ನು ಬರೆಯುವದು, ಚಿತ್ರ ತೆಗೆಯುವದು ಈ ವಿಷಯಗಳನ್ನು ಕಲಿಸುವಾಗ ಹುಡುಗರು ಒಂದು ಅಕ್ಷರವು ಇಲ್ಲವೆ ಚಿತ್ರವು ಬೇರೆಯಿಂದು ಅಕ್ಷರ ಅಥವಾ ಚಿತ್ರದಿಂದ ಹ್ಯಾಗೆ ಭಿನ್ನವಾಗಿರುವದೆಂಬವನ್ನು ಪರೀಕ್ಷಿಸಿ ಸಾಮ್ಯವೈಷಮ್ಯಗಳನ್ನು ತಿಳಕೊಳ್ಳಹತ್ತುವರು.

(೨) ಹಸ್ತಶಿಕ್ಷಣ ಇದರಲ್ಲಿ ಕಾಗದ ಮಡಿಚುವದು, ಕತ್ತರಿಸುವದು, ಮಣ್ಣಿನ ಆಟಿಕೆಗಳನ್ನು ಮಾಡುವದು ಮೊದಲಾದವುಗಳ ಸಮಾವೇಶವಾಗುವದು. ಪ್ರಾಯುಕ್ತ ವಿದ್ಯಾರ್ಥಿಗಳ ನಿರ್ಣಯ ಶಕ್ತಿಯನ್ನು ಬೆಳಿಸಲಿಕ್ಕೆ ಉತ್ತಮವಾದ ವಿಷಯಗಳೆಂದೆ ಗಣಿತ, ಶಾಸ್ತ್ರೀಯ ವಿಷಯ, ವ್ಯಾಕರಣ ಹಾಗು ನೇಮಬದ್ಧವಾದ ಆಟಗಳು.

ನಿರ್ಣಯಶಕ್ತಿಯು ಕುಗ್ಗುವಂತೆ ಮಾಡುವ ತಪ್ಪಾದ ಶಿಕ್ಷಣ ಕ್ರಮವು.

ಹುಡುಗರ ಅನುಭವಕ್ಕೆ ಇಲ್ಲವೆ ನಿದರ್ಶನಕ್ಕೆ ಬಾರದ ಸಂಗತಿಗಳನ್ನು ಅವರಿಂದ ಬಾಯಿಪಾಠಮಾಡಿಸುವದು. ಶಿಕ್ಷಕರು ತಾವೇ ನಿರ್ಣಯಮಾಡಿ ಹುಡುಗರಿಗೆ ಅದನ್ನು ಹೇಳಿಕೊಡುವದು.

ಹಳೆಪದ್ಧತಿಯು ಶಿಕ್ಷಣಕ್ರಮದಲ್ಲಿ ಶಿಕ್ಷಕರು ಹುಡುಗರ ಯೋಗ್ಯತೆಯನ್ನು ತಿಳಿದು ಕೊಳ್ಳದೆ ಅನೇಕ ವಿಷಯಗಳ ಶಾಬ್ದಿಕ ಜ್ಞಾನವನ್ನು ಅವರಿಗೆ ಮಾಡಿಕೊಡುತ್ತಿದ್ದರು. ಆದರೆ ಹೊಸ ಪದ್ಧತಿಯ ಶಿಕ್ಷಣ ಕ್ರಮದಲ್ಲಿ ಹುಡುಗರು ಪ್ರತ್ಯಕ್ಷ ನಿರೀಕ್ಷಣಮಾಡಿ, ಆವಶ್ಯವಾದ ನಿರ್ಣಯಗಳನ್ನು ಮಾಡಿಕೊಳ್ಳುವರು. ಶಿಕ್ಷಕನು ಮಾರ್ಗದರ್ಶಿಯಾಗಿದ್ದು ಅವರಿಗೆ ತಕ್ಕ ಸಹಾಯವನ್ನು ಮಾಡಿದ್ದಾದರೆ ವಿದ್ಯಾರ್ಥಿಗಳಿಗೆ ನಿಜವಾದ ಶಿಕ್ಷಣವು ದೊರೆದಂತಾಗುವದು.

(೩) ಕೇವಲ ಪುಸ್ತಕಗಳಿಂದ ಕೊಡಲ್ಪಡುವ ಶಿಕ್ಷಣದಿಂದ ವಿದ್ಯಾರ್ಥಿಗಳ ನಿರ್ಣಯಶಕ್ತಿಯು ಬೆಳೆಯಲಾರದು. ಇತಿಹಾಸ ಭೂಗೋಲ ಮೊದಲಾದ ವಿಷಯ ಗಳನ್ನು ವಿದ್ಯಾರ್ಥಿಗಳು ಬರೆ ಪುಸ್ತಕಗಳನ್ನೋದಿ ಇಲ್ಲವೆ ಬಾಯಿಪಾಠಮಾಡಿ ಕಲಿತ ದ್ದಾದರೆ ಆ ವಿಷಯಗಳ ಅಭ್ಯಾಸದಿಂದ ಅವರ ನಿರ್ಣಯಶಕ್ತಿಯು ಎಂದೂ ಬೆಳೆಯ ಲಾರದು.

ವಿಚಾರವೂ ಅನುಮಾನವೂ

ಎರಡು ಇಲ್ಲವೆ ಅನೇಕ ನಿರ್ಣಯಗಳಲ್ಲಿರುವ ಪರಸ್ಪರ ಸಂಬಂಧವನ್ನು ಅರಿತು ಕೊಳ್ಳುವ ಶಕ್ತಿಗೆ ವಿಚಾರಶಕ್ತಿಯೆಂಬ ಹೆಸರು. ಇದು ಎಲ್ಲ ಮನೋವ್ಯಾಪಾರಗಳಲ್ಲಿ ಉಚ್ಚತಮವಾದದ್ದು. ವಿಚಾರಶಕ್ತಿಯ ಫಲಿತಾಂಶವೇ ವಿಚಾರವು (ಸಾರಾಸಾರ ವಿಚಾ ರಃ). ಈ ಶಕ್ತಿಯ ಯೋಗದಿಂದಲೇ ಮನುಷ್ಯನಿಗೆ ಶ್ರೇಷ್ಠತೆಯುಂಟಾಗಿರುವದು.

ವಿಚಾರದ ಮುಖ್ಯ ಪ್ರಕಾರವೆಂದರೆ ಅನುಮಾನವು. ಇದರಲ್ಲಿ ಉದ್ಗಾಮಿ (ನಿಗಮನ) ಅನುಮಾನವೆಂದೂ ಅವಗಾಮಿ (ವಿಗಮನ) ಅನುಮಾನವೆಂದೂ ಎರಡು ಪ್ರಕಾರ ಗಳುಂಟು.

ಉದ್ಗಾಮಿ ಇಲ್ಲವೆ ಅನುಮಾನವೆಂದರೆ ಪ್ರತ್ಯಕ್ಷ ವಸ್ತುಗಳ ನಿರೀಕ್ಷಣದಿಂದ ಸಿಡುಹಿಡಿದ ಗುಣಧರ್ಮಗಳಿಂದ ಕೆಲವೊಂದು ಸಾಮಾನ್ಯ ನಿಯಮವನ್ನು ಇಲ್ಲವೆ ಸಿದ್ಧಾಂತವನ್ನು ಸ್ಥಾಪಿಸುವ ಕ್ರಿಯೆಯು ಇಲ್ಲವೆ ಆ ಕ್ರಿಯೆಯ ಫಲಿತಾಂಶವು.

ಅವಗಾಮಿ ಇಲ್ಲವೆ ನಿಗಮನ ಅನುಮಾನವೆಂದರೆ ನಿಗಮನ ಪದ್ಧತಿಯಿಂ ಸ್ಥಾಪಿಸಿಕೊಂಡ ನಿಯಮವು ಇಲ್ಲವೆ ಸಿದ್ಧಾಂತವು ಕೆಲವೊಂದು ವಿವಕ್ಷಿತ ವಸ್ತುವಿ ಇಲ್ಲವೆ ಆ ಸಂಗತಿಗೆ ಹತ್ತುವದೋ ಅಥವಾ ಹತ್ತದಿರುವದೋ ಎಂಬದನ್ನು ವಿಚಾರಿ ಆ ವಸ್ತುವಿನ ವಿಷಯವಾಗಿ ಕೆಲವೊಂದು ಮಾಡುವ ಕ್ರಿಯೆಯು ಇಲ್ಲವೆ ಅದರ ಫಲಿ ತಾಂಶವು. ರೂಢಿಯಲ್ಲಿ ಸಾಧಾರಣವಾಗಿ ಅನುಮಾನವೆಂಬ ಶಬ್ದವು ಅನುಮಾನದಿಂದ ತೆಗೆದ ಫಲಿತವೆಂಬ ಅರ್ಥದಲ್ಲಿಯೇ ಉಪಯೋಗಿಸಲ್ಪಡುವದು.

ಉದ್ಗಾಮಿ ಅವಗಾಮಿ ಪದ್ಧತಿಗಳನ್ನು ಉದಾಹರಣೆಗಳಿಂದ ಪ್ಪಷ್ಟೀಕರಿಸುವದು. ಶಿಕ್ಷಕನು ಒಂದು ಕಬ್ಬಿಣದ ಗುಂಡನ್ನು ಕಾಸದೆ ಒಂದು ಉಂಗುರದಲ್ಲಿ ಹಾಯಿಸಿ ವಿದ್ಯಾರ್ಥಿಗಳಿಗೆ ತೋರಿಸಿ ಆ ಮೇಲೆ ಆ ಗುಂಡನ್ನು ಕಾಸಿ ಆ ಬಳಿಯಲ್ಲಿ ಹಾಯಿಸ ಹೋಗಲು ಅದು ಹಾಯದಂತಾಗುವದು. ಆಗ ಹುಡುಗರು ಉಷ್ಣತೆಯಿಂದ ಕಬ್ಬಿಣದ ಗುಂಡು ವಿಸ್ತಾರವಾಗುವದೆಂದು ಹೇಳುವರು. ಆ ಮೇಲೆ ಆ ಥರದ ಪ್ರಯೋಗವನ್ನು ತಾಮ್ರ, ಸೀಸ, ಬೆಳ್ಳಿ, ಬಂಗಾರ ಕಾಜು ಮೊದಲಾದ ಬೇರೆ ಬೇರೆ ಪದಾರ್ಥಗಳ ಗುಂಡು ಗಳನ್ನು ತೆಗೆದುಕೊಂಡು ಮಾಡಿದರೆ ವಿದ್ಯಾರ್ಥಿಗಳು ಶಕೆಯಿಂದ ಘನ ಪದಾರ್ಥಗಳು ವಿಸ್ತಾರವನ್ನು ಹೊಂದುವವು. ಎಂಬ ಅನುಮಾನವನ್ನು ಮಾಡಿಕೊಳ್ಳುವರು. ಆ ಮೇಲೆ ತಿಕ್ಷಕನು ಒಂದು ಕಾಚಿನ ಪಾತ್ರೆಯಲ್ಲಿ ನೀರುತುಂಬಿ ಅವನ್ನು ಕಾಸಿದರೆ ನೀರು ಹೊರ ಚಲ್ಲ ಹತ್ತುವದು. ಆಗ ವಿದ್ಯಾರ್ಥಿಗಳು ಉಷ್ಣತೆಯಿಂದ ನೀರು ವಿಸ್ತಾರ ಹೊಂದುವ ದೆಂಬದನ್ನು ಕಂಡುಹಿಡಿಯುವರು. ಆ ಥರದ ಪ್ರಯೋಗವನ್ನು ಹಾಲು ಮೊದಲಾದ ಬೇರೆ ಪದಾರ್ಥಗಳನ್ನು ತೆಗೆದುಕೊಂಡು ಮಾಡಿನೋಡಿ ವಿದ್ಯಾರ್ಥಿಗಳು ಪ್ರವಾಹಿಗಳು ಶಕೆಯಿಂದ ವಿಸ್ತಾರಹೊಂದುವವು, ಎಂಬ ಅನುಮಾನವನ್ನು ಮಾಡಿಕೊಳ್ಳುವರು. ಆ ಮೇಲೆ ಶಿಕ್ಷಕನು ಒಂದು ರಬ್ಬರಿನ ಚೀಲದಲ್ಲಿ ಸ್ವಲ್ಪು ಹವೆ ತುಂಬಿ ದಾರಕಟ್ಟಿ ಅದನ್ನು ಕಾಸಲು ಚೀಲವು ಉಬ್ಬಹತ್ತುವದು. ಆ ಹುಡುಗನು ಶಕೆಯಿಂದ ಹವೆಯು ವಿಸ್ತಾರವಾಗುವದೆಂದು ಮನಗಾಣುವನು. ಈ ತರದ ಪ್ರಯೋಗವನ್ನು ಕಾರ್ಬನಿಕ್ ಆಸಿಡ್ ಗ್ಯಾಸ, ಮೊದಲಾದ ವಾಯುಗಳನ್ನು ತೆಗೆದುಕೊಂಡು ಮಾಡಿ ಶಕೆಯಿಂದ ವಾಯುಗಳು ವಿಸ್ತಾರಹೊಂದುವವು, ಎಂಬ ಅನುಮಾನವನ್ನು ಮಾಡುವನು. ಮೇಲೆ ಹೇಳಿದ ಮೂರೂ ತರದ ಅನುಮಾನಗಳ ವಿಷಯವಾಗಿ ಪುನಃ ವಿಚಾರಿಸಿ ಘನ, ಪ್ರವಾಹಿ ಹಾಗು ವಾಯುರೂಪವುಳ್ಳವು ಪದಾರ್ಥವಿರುವದರಿಂದ ಶಕೆಯಿಂದ ಪದಾರ್ಥಗಳು ವಿಸ್ತಾರವನ್ನು ಹೊಂದುವವು, ಎಂಬ ಸಾಮಾನ್ಯ ನಿಯಮವನ್ನು ಅನುಮಾನದಿಂದ ಸ್ಥಾಪಿಸುವನು.

ಪಕ್ಷಿಗಳು ಸಾಯುವವು, ಕ್ರಿಮಿಗಳು ಸಾಯುವವು, ಪಶುಗಳು ಸಾಯುವವು, ಮನುಷ್ಯರು ಸಾಯುವರು ಎಂಬದನ್ನು ಪ್ರತ್ಯಕ್ಷ ನಿರೀಕ್ಷಣದಿಂದ ವಿದ್ಯಾರ್ಥಿಗಳು

ಕಂಡುಹಿಡಿದು ಎಲ್ಲ ಪ್ರಾಣಿಗಳು ಸಾಯುವವು. ಎಂಬ ಸಿದ್ಧಾಂತವನ್ನು ಮಾಡಿಕೊಂಡ ಮೇಲೆ ಅವರು ವನಸ್ಪತಿಗಳು ಹುಟ್ಟಿ ಬೆಳೆದು ಸಾಯುವದನ್ನು ನಿರೀಕ್ಷಿಸಿದಕೂಡಲೆ ಅವರ ವಿಚಾರ ಸರಣಿಯು ಮತ್ತಿಷ್ಟು ತಿಳಿಯಾಗಹತ್ತಿ ಅವರು ಎಲ್ಲ ಹುಟ್ಟಿ ಬೆಳೆಯುವ ವಸ್ತುಗಳು ಸಾಯುವವೆಂಬ ಬಹು ವ್ಯಾಪಕವಾದ ಸಿದ್ಧಾಂತವನ್ನು ಗಡಚಾದ ಅನುಮಾನದಿಂದ ಮಾಡಿಕೊಳ್ಳುವರು. ಈ ತರದ ಅಬಾಧಿತ ಸಿದ್ಧಾಂತಗಳನ್ನು ಸ್ಥಾಪಿಸಿಕೊಳ್ಳುವಾಗ ಅವರು ತಮ್ಮ ಮೆಟ್ಟು ಮೀರಿ ಕಾಲ್ಪನಿಕ ಕ್ಷೇತ್ರದಲ್ಲಿ ವಿಹಾರಮಾಡಬೇಕಾಗುವದು ಇಲ್ಲವೆ ಎರಡನೆಯವರ ಮಾತಿನಮೇಲೆ ವಿಶ್ವಾಸವಿಡಬೇಕಾಗುವದು.

ಅನುಮಾನವಾಡತಕ್ಕನರ ಅನುಭವವು ಇಲ್ಲವೆ ಶೋಧಕ ಬುದ್ಧಿಯು ಮರ್ಯಾದಿತವಾದದ್ದಾದರೆ ಸಿದ್ಧಾಂತಗಳು ದೋಷಯುಕ್ತವಾಗುವವು. ಮೇಲೆ ಕೊಟ್ಟ "ಶಕೆಯಿಂದ ಪದಾರ್ಥಗಳು ವಿಸ್ತಾರವಾಗುವವು" ಎಂಬ ಸಿದ್ಧಾಂತವು ಸದೋಷವಾದದ್ದು ಯಾಕಂದರೆ ಶಕೆಯಿಂದ ಚರ್ಮ, ಕೂದಲು, ಉಣ್ಣೆ ಮೊದಲಾದ ಪದಾರ್ಥಗಳು ವಿಸ್ತಾರವಾಗದೆ ಆಕುಂಚಿತವಾಗುವವು. ಇದರಿಂದ ಸಾಮಾನ್ಯ ನೇನು ಇಲ್ಲವೆ ಸಿದ್ಧಾಂತ ಮಾಡಿಕೊಳ್ಳುವದು ಎಷ್ಟು ಕಠಿಣವಾದದ್ದೆಂಬದು ವ್ಯಕ್ತವಾಗುವದು. ಗಣಿತಶಾಸ್ತ್ರದ ಸಿದ್ಧಾಂತಗಳೇ ಅಖಾಧಿತ ಸಿದ್ಧಾಂತಗಳು ಯಾಕಂದರೆ ಅವುಗಳಿಗೆ ಅಪವಾದಗಳಿಲ್ಲ. ಬೇರೆ ಶಾಸ್ತ್ರಗಳ ನೇಮಗಳು ಇಲ್ಲವೆ ಸಿದ್ಧಾಂತಗಳು ಆಯಾಕಾಲದ ಮನುಷ್ಯಪ್ರಾಣಿಯ ಜ್ಞಾನ ಇಲ್ಲವೆ ಅನುಭವದ ಮಾನದಿಂದ ನಿಜವಾಗಿರುವವು.

ವಿಗಮನ ಪದ್ಧತಿಯಲ್ಲಿ ನಿಗಮನ ಪದ್ಧತಿಯಿಂದ ಸ್ಥಾಪಿಸಿಕೊಂಡ ಸಿದ್ಧಾಂತವು ಹೇತುವಾಗಿರುವದು. ಯಾವ ವಸ್ತುವಿನ ವಿಷಯವಾಗಿ ನಾವು ಯಾವದೊಂದು ಗುಣವನ್ನು ಗೊತ್ತುಪಡಿಸಬೇಕಾಗಿದೆಯೋ ಅದು ಪಕ್ಷವು ಹೇತು ಪಕ್ಷಗಳಿಂದ ಮಾಡಿಕೊಂಡ ನಿರ್ಣಯವೇ ಸಾಧ್ಯವು.

ಉದಾ:— ಹೇತು-ಎಲ್ಲ ಘನ ಪದಾರ್ಥಗಳು ಶಕೆಯಿಂದ ವಿಸ್ತಾರವಾಗುವವು.
ಪಕ್ಷ:— ಕಬ್ಬಿಣವು ಘನ ಪದಾರ್ಥವು.
ಸಾಧ್ಯ:— ಕಬ್ಬಿಣವು ಶಕೆಯಿಂದ ವಿಸ್ತಾರವಾಗುವದು.

ಅನುಭವ ಹೆಚ್ಚಾಗಿರುವ ಪ್ರಬುದ್ಧಜನರಿಗೆ ಈ ಪದ್ಧತಿಯಿಂದ ಹೆಚ್ಚಿನ ಜ್ಞಾನವನ್ನು ಮಾಡಿಕೊಳ್ಳಲಿಕ್ಕೆ ಸುಲಭವಾಗುವದು. ಆದರೆ ಚಿಕ್ಕ ಬಾಲಕರಿಗೆ ಇದು ಸರಿಯಾದದ್ದಲ್ಲ ಇದರಿಂದ ಅವರು ಪರಾವಲಂಬಿಗಳೂ ಅಂಥ ಪರಂಪರೆಯಿಂದ ಎರಡನೆಯವರು ಹೇಳಿದ್ದನ್ನು ವಿಶ್ವಾಸದಿಂದ ನಂಬುವವರೂ ಆಗುವರು. ಶಿಕ್ಷಣದಲ್ಲಿ ಈ ಎರಡೂ ಪದ್ಧತಿಗಳ ಸಮ್ಮಿಶ್ರಣವು ಇರುವದು ಒಳ್ಳೇದು.

ಮಂಜೂರಾದ ಪುಸ್ತಕಗಳು

೧	ನಮ್ಮ ಹಳ್ಳಿಯ ವಿವೇಕಿ	—	ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್ ಮುಂಬಯಿ	೧–೪–೦	ಮೂ. ಶಾ. ಹುಡುಗರ ಲಾಯಬ್ರರಿ.	ಈ ಮೊದಲೇ ಮಂಜೂರಾಗಿದೆ ಸರಕಾರೀ ಗ್ಯಾಝೆಟ್ ಭಾಗ ೨ ೧೨–೫–೩೨. ಪುಟ ೯೦೭
೨	ಶಿಕ್ಷಣಕಲಾರಹಸ್ಯ	ಎ. ಎಮ್. ಬರನಾರ್ಡ ಹಾಗು ಎ. ಎಮ್. ಜೋಸೆಫ್ ಬೆಂಗಳೂರು	ಎ. ಎಮ್. ಬರನಾರ್ಡ ಹಾಗು ಎ. ಎಮ್. ಜೋಸೆಫ	೦–೧೨–೦	ಪ್ರಾ. ಶೆ. ಟೀಚರ್ಸ ಲಾಯಬ್ರರಿ	ಎ. ಇ. ನಂ. ೨೦೩೫ ೫–೭–೩೪
೩	ಗಣಿತಾದರ್ಶ ಭಾಗ ೩	ಜಿ. ಬಿ. ಜೋಶಿ	ಜಿ. ಬಿ. ಜೋಶಿ ಹೆ. ಮೂ. ಅರಳಿಕಟ್ಟಿ	೦–೫–೦	ಸದರ	ಎ. ಇ. ನಂ. ೨೦೩೭ ೭–೭–೩೪
೪	ಚಿಕ್ಕೋಡಿ ತಾಲೂಕಿನ ಭೂವಿವರಣೆ	ಎಸ್. ಕೆ. ಕುಲಕರ್ಣಿ	ಎಸ್. ಕೆ. ಕುಲಕರ್ಣಿ ಹೆ. ಮೂ. ಎಕ್ಸಂಬಾ	೦–೨–೦	ಸದರ	ಎ. ಇ. ನಂ ೨೦೦೬ ೪–೭–೩೪
೫	ಕನ್ನಡ ನುಡಿ	ಕೆ. ಆರ್. ಗಣಾಚಾರಿ	ಕೆ ಆರ್. ಗಣಾಚಾರಿ ಹೆ. ಮೂ. ಗದಗಬೆಟಗೇರಿ	೦–೪ –೦	ಸದರ	ಎ. ಇ. ನಂ. ೧೯೫೯ ೨–೭–೩೪
೬	ನನ್ನ ನಲ್ಲ	ಮಧುರಚೆನ್ನ	ತರಿಕೆರೆ ಶಿವಲಿಂಗಯ್ಯ ಕೆ. ಎಸ್. ಮಂಡಲ ಧಾರವಾಡ	೦–೧೦–೦	ಸದರ ಹಾಗು ಟ್ರೇ. ಸಂ. ಹುಡುಗರ ಲಾ.	ಎ. ಇ. ನಂ ೨೦೧೦ ೪–೭–೩೪
೭	ಹಿಂದುಸ್ತಾನದ ರಾಜ್ಯಪದ್ಧತಿ	ಸಿ. ಬಿ. ಜಮಖಂಡಿ	ಸಿ. ಬಿ. ಜಮಖಂಡಿ ಹೆ. ಮೂ. ಭತ್ತಗುಣಕಿ ಜಿ. ಬಿಜಾಪೂರ	೦-೧೨–೦	ಸದರ	ಎ. ಇ ನಂ ೨೦೦೪ ೪–೭–೩೪
೮	ಗಣಿತ ಶಿಕ್ಷಕ ೨ನೆಯ ಆ.	ಬಿ. ಬಿ. ಹಿರೇಮಠ	ಬಿ.ಬಿ. ಹಿರೇಮಠ ಶಿಕ್ಷಕ ಮ್ಯು. ಶಾಲೆ ಬಿಜಾಪುರ	೦–೧೪–೦	ಟೀಕ್ಷ್ಮ. ಪ್ರಾ. ಮೂ. ಶಾ. ಟ್ರೇ. ಸಂ.	ಡಿ.ಪಿ.ಐ.ನಂ S.86 (೧)483೮ ೨೧–೪–೩೪

Reg. No. B. 2567

ಜಾಹೀರಾತು

(೧) ಹಿಂದುಮುಸಲ್ಮಾನರ ಇತಿಹಾಸ.

(ಬಾಳಕೃಷ್ಣ ಹಳೇಪೇಟಿಕೃತ)

ಇದು, ಪ್ರಾಥಮಿಕ ಶಾಲೆಗಳ ೫ನೆಯ ಇಯತ್ತೆಯ ಉಪಯೋಗಕ್ಕಾಗಿ ಸುಲಭವಾದ ಅಲಂಕಾರಿಕ ಭಾಷೆಯಲ್ಲಿ ಹೊಸಪದ್ಧತಿಗನುಸಾರವಾಗಿ ಬರೆಯಲ್ಪಟ್ಟಿರುವದು. ಈ ವರೆಗೆ ಬರೆದ ಇತಿಹಾಸಗಳಲ್ಲಿ ಇದು ಒಳ್ಳೇ ಉಪಯುಕ್ತವಾಗಿರುವದು. ಮುಂಬಯಿ ಸರಕಾರದಿಂದ ಕನ್ನಡ ೫ ನೆ ಇಯತ್ತೆಗೆ **ಪಠ್ಯಪುಸ್ತಕ**ವೆಂದು ಮಂಜೂರ ಮಾಡಲ್ಪಟ್ಟಿರುವದು. ಬೆಲೆ ೦–೮–೦.

(೨) ಕರ್ನಾಟಕದ ವರ್ಣನೆಯುಳ್ಳ ಇತಿಹಾಸವೂ.

(ನಾರಾಯಣ ಶ್ರೀನಿವಾಸ ರಾಜಪುರೋಹಿತ ಕೃತ)

ಕರ್ನಾಟಕದ ಇತಿಹಾಸ ಸಂಶೋಧಕ ಮಂಡಲದ ಪ್ರಮುಖರಲ್ಲೊಬ್ಬರಾದ ಮಿ. ರಾಜಪುರೋಹಿತ ಇವರು ಕರ್ನಾಟಕದ ಎಲ್ಲ ಭಾಗಗಳಲ್ಲಿ ಸಂಚರಿಸಿ ಶಿಲಾಲೇಖ, ತಾಮ್ರಪಟ, ನಿಷಿದಿಯಕಲ್ಲು, ಮಾಸತಿಕಲ್ಲು, ವೀರಗಲ್ಲು ಮೊದಲಾದವುಗಳನ್ನು ಶೋಧಿಸಿ ಇವುಗಳ ಆಧಾರದಿಂದ ಸುಸಂಗತವಾಗಿ ಈ ಇತಿಹಾಸವನ್ನು ಬರೆದಿರುವರು. ೪ನೆಯ ಇಯತ್ತೆಯ ವಿದ್ಯಾರ್ಥಿಗಳಿಗೆ **ಪಠ್ಯಪುಸ್ತಕ**ವೆಂದು ಸರಕಾರದಿಂದ ಮಂಜೂರ ಆಗಿದೆ. ಬೆಲೆ ೦–೮–೦.

(೩) ದೇಶೀಯ ಜಮಾಖರ್ಚು ಪ್ರವೇಶ.

(ಹನುಮಂತ ರಾಮಚಂದ್ರ ಕುಲಕರ್ಣಿ ಕೃತ)

ಪ್ರಾಥಮಿಕ ಕನ್ನಡ ಶಾಲೆಗಳ ೬ನೆಯ ೭ನೆಯ ಇಯತ್ತೆಯ ವಿದ್ಯಾರ್ಥಿಗಳಿಗೆ ಇದ್ದ ಈ ಜಮಾಖರ್ಚಿನ ವಿಷಯವು ೪ನೆಯ ಇಯತ್ತೆಗೆ ಆರಂಭವಾಗುವದರಿಂದ ಇದನ್ನು ಸುಲಭವಾದ ರೀತಿಯಲ್ಲಿ ತಿಳಿಯುವಂತೆ ಬರೆದಿದ್ದಾರೆ. ಅಭ್ಯಾಸಕ್ಕೆ ವಿಶೇಷ ಅನುಕೂಲವಾಗಿದೆ. ಮುಂಬಯಿ ಇಲಾಖೆಯ ವಿದ್ಯಾಖಾತೆಯಿಂದ ಮಂಜೂರಾಗಿದೆ. ಬೆಲೆ ೦–೩–೬.

(೪) ವಿಜಾಪುರ ಜಿಲ್ಲೆಯ ಸಾಮಾನ್ಯ ವರ್ಣನೆಯು.

ಕನ್ನಡ ಪ್ರಾಥಮಿಕ ಶಾಲೆಗಳ ೫ನೆಯ ೬ನೆಯ ಇಯತ್ತೆಯ ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವಂತೆ ಹೊಸ ಪದ್ಧತಿಯಿಂದ ಬರೆಯಲ್ಪಟ್ಟಿದೆ. ಈ ಮೊದಲು ಇದೇ ಪದ್ಧತಿಯಿಂದ ಬರೆದ ಮಿ. ಯು. ಕೃ. ಅಣ್ಣಿಗೇರಿ ಇವರಿಂದಲೇ ಇದನ್ನು ಬರೆಯಿಸಿದೆ. ಅಭ್ಯಾಸವು ಸುಲಭವೂ ಸುಗಮವೂ ಮನೋರಂಜಕವೂ ಆಗುವಂತೆ ಈ ಪುಸ್ತಕದಲ್ಲಿ ನಕಾಶಗಳೂ ಚಿತ್ರಗಳೂ ಸೇರಿಸಲ್ಪಟ್ಟಿವೆ. ಬೆಲೆ ೪–೬–೦.

ಪುಸ್ತಕ ದೊರೆಯುವ ಸ್ಥಳ :—

ವಿ. ಆರ್. ಶಿವನಾಗಪ್ಪ,

ವಾಗ್ವಿಲಾಸ ಬುಕ್‌ಡಿಪೋ ಪಾವರ ಪ್ರಿಂಟಿಂಗ ಪ್ರೆಸ್, ಹುಬ್ಬಳ್ಳಿ

Reg. No. B. 2567

ಕನ್ನಡ

ಪ್ರಾಥಮಿಕ ಶಿಕ್ಷಣ

ಬ್ಯು

(ಇದರಲ್ಲಿ ಕೆನ್ನಡ ಶಾಲಾಪತ್ರಿಕೆಯೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

Kannada Prathamik Shikshana

— SEPTEMBER 1934 —

ಸಂಪಾದಕ—ವೆಂಕಟೇಶ ನರಸಿಂಗರಾವ ಮುಗದಾಳ ಬಿ. ಎ.,

ಸಂಪುಟ ೭೧] ಸಪ್ಟಂಬರ ೧೯೩೪ [ವ. ೬ ಸಂ. ೬

ವಿಷಯಾನುಕ್ರಮಣಿಕೆ

ಅ. ನಂ.	ವಿಷಯ.	ಪುಟ.
೧.	ಶುದ್ಧಲೇಖನ ಹಾಗೂ ಉಕ್ತಲೇಖನ	೧
೨.	ಭಾಷಾಭ್ಯಾಸ	೧೦
೩.	ಅಭ್ಯಸನಗಳು	೧೬
೪.	ಮಾನಸಶಾಸ್ತ್ರ	೨೦
೫.	ಆಹಾರದ ಬಗ್ಗೆ ಉಪಯುಕ್ತವಾದ ಮಾಹಿತಿಯು	೨೫
೬.	ಪ್ರಕಟನೆಗಳು	೩೬

Printed by K. R. Bhise at the Karnatak Printing Works, Dharwar
& Published by V. N. Magdal, B.A.,
Head Master, Training School, Dharwar, at his Office.

ಪತ್ರಗಳಸಾರಾಂಶ.

ಅಡವಿಸೋಮಾಪುರ (ತಾ ಗದಗ) ೧೯೨೫ನೇ ಇಸ್ವಿಯಲ್ಲಿ ಶಾಲೆಯ ಸಲುವಾಗಿ ಎರಡು ಕೋಣೆಗಳುಳ್ಳ ಒಂದು ಇಮಾರತಿಯು ಲೋ. ಬೋ. ದಿಂ ಕಟ್ಟಲ್ಪಟ್ಟಿತು. ಆದರೆ ಇದರ ನೆಲಕ್ಕೆ ಕಲ್ಲುಹಾಸಿಗೆ ಇಲ್ಲದ್ದರಿಂದ ನೆಲ ಮೇಲೆಮೇಲೆ ಒಡೆದು, ಹುಡುಗರಿಗೆ ತೊಂದರೆಯಾಗುತ್ತಿತ್ತು. ಊರ ಸ ಗ್ರಹಸ್ಥರೆಲ್ಲರು ಕೂಡಿ ೭೨ ರೂ. ಖರ್ಚುಮಾಡಿ ಶಾಲೆಯ ವ್ಹರಾಂಡಕ್ಕೂ, ಒಂ ಕೋಣೆಗೂ ಕಲ್ಲುಹಾಸಿಗೆಯನ್ನು ಮಾಡಿಸಿದರು. ಮತ್ತು ಊರ ಕುಲಕರ್ಣಿ ರಾದ ಶ್ರೀ. ವೆಂಕಪ್ಪಯ್ಯ ದೇಸಾಯಿಯವರು ೧೧ ರೂ. ಖರ್ಚುಮಾಡಿ ಒಂ ಕರೇಹಲಿಗೆಯನ್ನೂ, ಸದ್ಯಕ್ಕೆ ಇಲ್ಲಿಯ ಸ್ಕೂ. ಕ. ಚೇಅರಮನ್ನರಾಗಿರು ಶ್ರೀ. ಮಹಾದೇವಪ್ಪ ಮೆಣಶಿನಕಾಯಿ ಇವರು ೧೫ ರೂ. ಖರ್ಚುಮಾಡಿ ಒಂ ಜಾಂಗಟಿಯನ್ನೂ ಕೊಡಿಸಿದರು (ಇ. ಸ. ೧೯೨೯)

ಶಾಲೆಗೆ ಕಂಪೌಂಡು ಇಲ್ಲದ್ದರಿಂದ ಪ್ರಕೃತಿವಿಮರ್ಶೆಯ ಅಭ್ಯಾಸಕ್ಕೆ ಬೇಕಾ ಗುವ ಗಿಡಬಳ್ಳಿಗಳನ್ನು ಬೆಳೆಯಿಸಲಿಕ್ಕೆ ಬಹಳ ತೊಂದರೆಯಾಗಿದೆಯೆಂದೂ, ಶಾ ಯಲ್ಲಿ ವ್ಯಾಯಾಮದ ಸಾಧನಗಳು ಇಲ್ಲದ್ದರಿಂದ ಹುಡುಗರ ಶಾರೀರಿಕ ಶಿಕ್ಷಣ ವಿಶೇಷವಾದ ಅನುಕೂಲತೆಯಿಲ್ಲೆಂದೂ ಶಿಕ್ಷಕರು ಊರವರಿಗೆ ತಿಳಿಸಿದೇ ದರ ಆಗ ಶಾಲೆಯ ಪಂಚರೂ ಮತ್ತು ಸಭ್ಯಗೃಹಸ್ಥರೂ ಕೂಡಿ ಇಂಥ ಆರ್ಥಿಕ ನ್ಯೂ ತೆಯ ಕಾಲದಲ್ಲಿ ಸಹ ತಮ್ಮ ಕೊರತೆಗಳನ್ನು ಬದಿಗಿಟ್ಟು, ೯೪ರೂ. ಖರ್ಚುಮಾ ೬೦೦ ಫೂ. ಸುತ್ತಳತೆಯುಳ್ಳ ಶಾಲೆಯ ಬೈಲಿನ ಸುತ್ತಲು ೫ ಸೆತ್ತು ಮುಳ್ ತಂತಿಯನ್ನು ಹಾಕಿಸಿರುವರು. ಮತ್ತು ೪ ರೂ. ಕೊಟ್ಟು ಒಂದು ಮಲ್ಲಗಂಬವನ ತಂದುಕೊಟ್ಟಿರುವರು. ಇದಲ್ಲದೆ ಶಾಲೆಯ ಇನ್ನೊಂದು ಕೋಣೆಗೆ ಕಲ್ಲುಹಾಸಿ ಮಾಡಿಸುವೆವೆಂದು ಆಶ್ವಾಸನವಿತ್ತಿರುವರು.

ಈ ಪ್ರಕಾರ ಇಲ್ಲಿಯ ಸ್ಕೂಲ ಪಂಚರೂ, ಸಭ್ಯಗೃಹಸ್ಥರೂ ಶಾಲೆಯ ಸಂಬಂಧದ ತಮ್ಮ ನಿಜವಾದ ಕರ್ತವ್ಯವನ್ನು ಮಾಡಿರುವರು. ಒಂದು ಸೈ ಬಾಯಿಬಿಡುವ ಈಗಿನ ಕಠಿಣಕಾಲದಲ್ಲಿ "ಕಗ್ಗಕುರುಬರ ಪಡ್ಡಿ ಎನ್ನಿ ಕೊಳ್ಳುವ ಅಡವಿಸೋಮಾಪುರ (ಈ ಊರ ಜನಸಂಖ್ಯೆಯಲ್ಲಿ ಮುಕ್ಕಾಲುಪಾ ಕುರುಬರ ಸಂಖ್ಯೆಯೇ ಇದೆ.) ದಲ್ಲಿ ಇಂಥ ಔದಾರ್ಯದ ಕೆಲಸಗಳೊದಗಿದ ಅಭಿನಂದನದ ಸಂಗತಿಯಲ್ಲವೇ?

ಈ ಕೆಲಸಕ್ಕೆ ಸಹಾಯ ಮಾಡಿದ ಮಹನೀಯರ ಹೆಸರುಗಳು.

೧. ಶ್ರೀ. ರಾ. ರಾ. ವೆಂಕಪ್ಪಯ್ಯ ಕೃಷ್ಣಪ್ಪಯ್ಯ ದೇಸಾಯಿ. ೨. ಮಲ್ಲ ಗೌಡಾ ನಾಗನಗೌಡಾ ಪಾಟೀಲ. ೩. ಮಹಾದೇವಪ್ಪ ಗುರಪ್ಪ ಮೆಣಶಿ ಕಾಯಿ. ೪. ಎಲ್ಲಪ್ಪ ಸಿದ್ದಪ್ಪ ಜಡಿಯವರ. ೫. ಹನುಮಪ್ಪ ಭೀಮಪ್ಪ ಬೆಳ್

(ಕವ್ಹರ ಳನೆಯ ಪುಟ ನೋಡಿರಿ)

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:—ವೆಂಕಟೇಶ ನರಸಿಂಗರಾವ ಮುಗದಾಳ, ಬಿ. ಎ.

ಸಂಪುಟ ೭೧ | ಸೆಪ್ಟೆಂಬರ ೧೯೩೪ | ವರ್ಷ ೬ ಸಂ. ೬

ಶುದ್ಧಲೇಖನ ಹಾಗೂ ಉಕ್ತಲೇಖನ

ನಮ್ಮ ಸಾಲೆಗಳಲ್ಲಿ ಶುದ್ಧಲೇಖನ ಉಕ್ತಲೇಖನ ಇವೆರಡರ ಬಗ್ಗೆಯೂ ವಿದ್ಯಾರ್ಥಿಗಳಿಗೆ ಶಿಕ್ಷಣಕೊಡುವ ಅವಶ್ಯಕತೆಯು ವಿಶೇಷವಾಗಿ ಇರುವದು.

ರೂಢಿಯಲ್ಲಿ ಮಾತ್ರ ಸಾಲೆಗಳಲ್ಲಿ ಶುದ್ಧಲೇಖನವೊಂದನ್ನೇ ಮೇಲಿಂದ ಮೇಲೆ ಹೇಳುವದುಂಟು. ಇದರಲ್ಲಿಯೇ ಪರೀಕ್ಷೆಯನ್ನೂ ತೆಗೆದುಕೊಳ್ಳುವ ದುಂಟು ತುಸು ವಿಚಾರಿಸಿ ನೋಡಲು, ಈ ರೂಢಿಯು ಸಾರ್ವತ್ರಿಕವಾಗಿ ನೆಲೆ ಗೊಂಡಿರುವದರ ಕಾರಣವು ಸ್ಪಷ್ಟವಾಗುವದು. ಶುದ್ಧಲೇಖನದ ರೂಢಿಯನ್ನು ನಾವು ವಾಡಿಕೆಯಾಗಿ ಮಾಡಿಸುತ್ತಿರುವಂತೆ ಸಾಗಿಸಿದರೆ ಹಾಗು ಈ ಬಗ್ಗೆ ಪರೀಕ್ಷೆ ಯನ್ನು ತೆಗೆದುಕೊಂಡಡೆ, ಉಕ್ತಲೇಖನದಿಂದಲೂ ಸಾಧಿಸತಕ್ಕ ಉದ್ದೇಶಗಳು ಕೈಗೂಡುವವೆಂದು ಶಿಕ್ಷಕರ ನಂಬುಗೆಯು. ವಾಸ್ತವಿಕವಾಗಿ ನೋಡಲು ಈ ಉದ್ದೇಶಗಳು ಇದರಿಂದ ಜಿನ್ನಾಗಿ ಕೈಗೂಡಲಾರವು. ಈ ಉದ್ದೇಶಗಳು ಸ್ಪಷ್ಟ ವಾಗಿ ಗೋಚರವಾಗದ ಮೂಲಕವೇ ಈ ಪರಿಸ್ಥಿತಿಯು ಉಂಟಾಗಿದೆಯೆಂದು ಘಂಟಾಘೋಷವಾಗಿ ಹೇಳಬಹುದು.

ಶುದ್ಧಲೇಖನದ ಮುಖ್ಯ ಉದ್ದೇಶವೇನು? ಹುಡುಗರು ಶಬ್ದಗಳನ್ನು ಶುದ್ಧರೂಪವಾಗಿ ಬರೆಯುವ ರೂಢಿಯು ಅವರಲ್ಲಿ ನೆಲೆಗೊಳ್ಳಬೇಕೆಂಬದೇ ಇದರ ಉದ್ದೇಶವು.

ಇನ್ನು ಇದನ್ನು ಸಾಧಿಸಲಿಕ್ಕೆ ನಾವು ಕೈಕೊಳ್ಳುವ ಪದ್ಧತಿಯು ಸಯುಕ್ತಿಕ ವಾದದ್ದೇ ಎಂಬದನ್ನು ವಿಚಾರಿಸುವ.

ಹುಡುಗರು ಶುದ್ಧವಾದ ಶಬ್ದರೂಪಗಳನ್ನೇ ತಮ್ಮ ಬರೆಹದಲ್ಲಿ ಉಪಯೋಗಿಸಬೇಕಾದರೆ, ಶಬ್ದಗಳ ಶುದ್ಧರೂಪಗಳು ಅವರಿಗೆ ಚೆನ್ನಾಗಿ ಗೊತ್ತಿರಲಿಕ್ಕೆ ಬೇಕೆಂಬದು ಸ್ಪಷ್ಟವು. ಇನ್ನೊಬ್ಬರು ನುಡಿಯುತ್ತಿರುವದನ್ನು ಕೇಳಿ ಬರೆಯುವವನು ಅವರ ಬಾಯಿಂದ ಬಂದ ಉಚ್ಚಾರಗಳನ್ನು ಬರೆಯಬೇಕಾಗುವದು. ನಾವು ಹುಡುಗರಿಗೆ ಶುದ್ಧಲೇಖನವನ್ನು ಜೇಳಿ ಬರೆಯಿಸುವದರಿಂದ ಈ ರೂಢಿಯು ನಲೆಗೊಳ್ಳಬಹುದು. ಆದರೆ ಇದು ನಮ್ಮ ಉದ್ದೇಶವಲ್ಲೆಂಬದು ಸ್ಪಷ್ಟವು. ಆದ್ದರಿಂದ ನಮ್ಮ ನಿಜವಾದ ಉದ್ದೇಶವು ಸಫಲವಾಗಲಿಕ್ಕೆ ನಾವು ಕೈಕೊಳ್ಳುವ ಉಪಾಯವು ಯುಕ್ತವಾದದ್ದೆನ್ನಲಾಗದು.

ಆದರೂ ಈ ಉಪಾಯವು ಇಷ್ಟು ಸಾರ್ವತ್ರಿಕವಾಗಿ ರೂಢಿಯಲ್ಲಿರುವದರ ಕಾರಣವನ್ನು ಸ್ವಲ್ಪ ವಿಚಾರಿಸಬಹುದು. ನಮ್ಮ ಶಿಕ್ಷಣ ಪದ್ಧತಿಗಳು ಬಹುತರವಾಗಿ ಇಂಗ್ಲಿಷವನ್ನು ಅಭ್ಯಾಸಿಸಿದವರಿಂದ ನಮ್ಮಲ್ಲಿ ಪ್ರಚಾರದಲ್ಲಿ ತರಲ್ಪಟ್ಟಿವೆ. ಇಂಗ್ಲಿಷ ಭಾಷೆಯಲ್ಲಿ ಒಂದು ಉಚ್ಚಾರವುಳ್ಳ ಶಬ್ದಕ್ಕೆ ಅನೇಕ ಅರ್ಥಗಳಾಗುವದುಂಟು. ಆದರೆ ಆಯಾ ಶಬ್ದದ ವರ್ಣಯೋಜನೆಯು ಬೇರೆಯಾಗಿರುವದೂ ಉಂಟು. ಉದಾಹರಣಾರ್ಥವಾಗಿ ಇಂಗ್ಲಿಷದಲ್ಲಿ "ಟೇಲ" ಎಂಬ ಶಬ್ದಕ್ಕೆ "ಕಥೆ" ಎಂದೂ "ಬಾಲ" ಎಂದೂ ಎರಡರ್ಥಗಳು. ಕಥೆ ಎಂಬ ಅರ್ಥವಾಗುವಾಗ ಅದು ಟಿ. ಏ. ಎಲ್. ಇ ಎಂಬ ನಾಲ್ಕು ಅಕ್ಷರಗಳ ಯೋಜನೆಯಿಂದ ಆಗಿರುವದು; ಬಾಲ ಎಂಬ ಅರ್ಥವಾಗುವಾಗ ಅದು ಟಿ. ಏ. ಆಯ್. ಎಲ್. ಎಂಬ ಸ್ವಲ್ಪ ಭಿನ್ನವಾದ ನಾಲ್ಕು ಅಕ್ಷರಗಳಿಂದ ಆಗಿರುವದು. ಎರಡೂ ಅರ್ಥಗಳಾಗುವಾಗ ಉಚ್ಚಾರವು ಒಂದೇ ಆಗುವ ಮೂಲಕ ಕೇಳುವವನು ಇಲ್ಲವೆ ಬರೆಯುವವನು ಸಂದರ್ಭವನ್ನು ಅನುಲಕ್ಷಿಸಿ ವಿಚಾರಮಾಡಿ, ತಕ್ಕ ಅಕ್ಷರ ಯೋಜನೆಯುಳ್ಳ ಶಬ್ದವನ್ನೇ ಬರೆಯಬೇಕಾಗುವದು. ತಪ್ಪು ಅಕ್ಷರ ಯೋಜನೆಯನ್ನು ಸಂದರ್ಭಕ್ಕೆ ಅನುಚಿತವಾಗಿ ಉಪಯೋಗಿಸಿದರೆ ಅದು ಅಶುದ್ಧವೆನಿಸುವದು. ಈ ಬಗೆಯ ಗೊಂದಲವು ಕನ್ನಡದಲ್ಲಿ ಆಗುವಂತಿಲ್ಲ. ಕನ್ನಡದಲ್ಲಿ ಒಂದೇ ಶಬ್ದವು ಸಂದರ್ಭಾನುಸಾರವಾಗಿ ಬೇರೆ ಬೇರೆ ಅರ್ಥಗಳನ್ನು ಜೇಳುವದಿಲ್ಲೆಂದಲ್ಲ; ಇಂಥ ಶಬ್ದಗಳು ಅಪರೂಪವಾಗಿ ನಮ್ಮಲ್ಲಿಯೂ ದೊರೆಯುವವು. ಆದರೆ ನಮ್ಮ ಭಾಷೆಯಲ್ಲಿ ಇಂಗ್ಲಿಷಕ್ಕೆ ವಿರುದ್ಧವಾಗಿ, ಒಂದು ಉಚ್ಚಾರಕ್ಕೆ ಒಂದು ಪ್ರತ್ಯೇಕವಾದ ಅಕ್ಷರ ಇರುವದು.

ಇರಲಿ, ಒಂದೇ ಉಚ್ಚಾರವುಳ್ಳ ಶಬ್ದವು ಸಂದರ್ಭಾನುಸಾರವಾಗಿ ಬೇರೆ ಬೇರೆ ಅರ್ಥಗಳನ್ನು ಹೇಳುವ ಪ್ರಸಂಗಗಳನ್ನು ವಿಚಾರಪೂರ್ವಕವಾಗಿ ಅರಿತು, ಯೋಗ್ಯ ಅಕ್ಷರ ಯೋಜನೆಯುಳ್ಳ ಶಬ್ದವನ್ನೇ ಉಪಯೋಗಿಸುವ ರೂಢಿಯಾಗ ಬೇಕೆಂದು ಇಂಗ್ಲಿಷದಲ್ಲಿ ಉಕ್ತಲೇಖನವನ್ನು ರೂಢಿಮಾಡಿಸುವದುಂಟು. ಶುದ್ಧ ಲೇಖನವೆಂಬ ಶಬ್ದವನ್ನು ಇಂಗ್ಲಿಷಿನಲ್ಲಿ ಉಪಯೋಗಿಸುವ ರೂಢಿಯಿಲ್ಲ. ನಮ್ಮಲ್ಲಿ ಶಬ್ದಗಳ ಶುದ್ಧರೂಪದ ಬಗ್ಗೆ ಬಹಳ ಗೊಂದಲವಿರುವ ಮೂಲಕ ಹುಡುಗರಿಗೆ ಶುದ್ಧರೂಪದಲ್ಲಿ ಶಬ್ದಗಳನ್ನು ಬರೆಯುವ ರೂಢಿಯಾಗುವದು ಮಹತ್ವದ್ದೆಂದು ಎಣಿಸಿ, ಈ ರೂಢಿಯು ಉಂಟಾಗಲಿಕ್ಕೆಂದು ಇಂಗ್ಲಿಷ ವಿದ್ಯಾರ್ಥಿಗಳಿಗೆ ಜೇಳುವಂತೆ ಶಬ್ದಗಳನ್ನಾಗಲಿ, ವಾಕ್ಯಗಳನ್ನಾಗಲಿ ಓದಿಹೇಳಿ, ಅವರಿಂದ ಬರೆಯಿಸಿಕೊಳ್ಳುವ ದಕ್ಕೆ ನಾವು ಶುದ್ಧಲೇಖನವೆಂಬ ಹೆಸರನ್ನಿಟ್ಟುಕೊಂಡಿರುವೆವು. ಹಾಗು ಪೆಸ ರಿಗೆ ತಕ್ಕಂತೆ ಅದರ ಕಾರ್ಯವು ಆಗುತ್ತದೆಂದು ಕಣ್ಣುಮುಚ್ಚಿ ನಂಬಿರುವೆವು.

ಶುದ್ಧರೂಪವನ್ನೇ ಹುಡುಗರು ಬರೆಹದಲ್ಲಿ ಉಪಯೋಗಿಸಬೇಕೆಂದು ನಾವು ಅಪೇಕ್ಷಿಸಿದರೆ, ಅದನ್ನು ಸಾಧಿಸಲಿಕ್ಕೆ ಉಪಾಯಗಳು ಬೇರೆ ಇರುವವು. ನಾವು ಮಾತಾಡುವಾಗ ಒಂಟಿ, ಕುದರಿ, ಹಲಿಗೆ, ಬಾಗಲು ಎಂದು ತೀರ ಅಶುದ್ಧವಾದ ಶಬ್ದರೂಪಗಳನ್ನು ಉಪಯೋಗಿಸುತ್ತೇವೆ. ಬರೆಯುವಾಗ ಮಾತ್ರ ಇವುಗಳ ಶುದ್ಧರೂಪಗಳನ್ನು ಅಂದರೆ ಒಂಟೆ, ಕುದುರೆ, ಹಲಗೆ, ಬಾಗಿಲು ಎಂದು ಹುಡು ಗರು ಬರೆಯಬೇಕೆಂದು ಅಪೇಕ್ಷಿಸುತ್ತೇವೆ. ಅಶುದ್ಧರೂಪದಲ್ಲಿ ಈ ಶಬ್ದಗಳು ನೇಲಿಂದ ಮೇಲೆ ಅವರ ಕಿವಿಗಳಲ್ಲಿ ಸೇರಿರುವದರಿಂದ ಹಾಗು ಅನೇಕ ಸಾರೆ ಈ ಅಶುದ್ಧರೂಪಗಳೇ ಅವರು ಓದುವ ಪುಸ್ತಕಗಳಲ್ಲಿಯೂ ಬಂದಿರುವದರಿಂದ ಅವರ ಕಣ್ಣಿನಲ್ಲೂ ಅವು ಕೂತಿರುತ್ತವೆ. ಮೊದಲು ಒಂದೆರಡುಸಾರೆ ಅವರು ಬರೆಹ ದಲ್ಲೂ ಇವೇ ರೂಪಗಳನ್ನು ಉಪಯೋಗಿಸುವದರಿಂದ ಅವರ ಬೆರಳುಗಳಲ್ಲಿಯೂ ಈ ಅಶುದ್ಧರೂಪಗಳೇ ನೆಲೆಗೊಂಡಿರುತ್ತವೆ. ಆದ್ದರಿಂದ ಶುದ್ಧಲೇಖನವನ್ನು ಓದುವವನು ಸರಿಯಾದ ಉಚ್ಚಾರವನ್ನು ಮಾಡಿದರೂ ಬರೆಯುವವನು ಅಶುದ್ಧ ರೂಪವನ್ನೇ (ಶುದ್ಧರೂಪವನ್ನು ಲಕ್ಷ್ಯಗೊಟ್ಟು ಕೇಳಿದ್ದರೂ) ಬರೆಯುವದುಂಟು. ಬೇಕಾದಷ್ಟು ಸಾರೆ ಶುದ್ಧಲೇಖನವನ್ನು ಜೇಳಿ ಹುಡುಗನ ತಪ್ಪನ್ನು ಅವನಿಗೆ ತೋರಿಸಿಕೊಟ್ಟರೂ ಈ ರೂಢಿಯನ್ನು ತಪ್ಪಿಸುವದು ಸುಲಭವಲ್ಲ.

ಹುಡುಗರಲ್ಲಿ ಶುದ್ಧವಾಗಿ ಬರೆಯುವ ರೂಢಿಯು ನೆಲೆಗೊಳ್ಳಬೇಕಾದರೆ ಅವರು ಮೇಲಿಂದಮೇಲೆ ಶಬ್ದಗಳ ಶುದ್ಧರೂಪದ ಉಚ್ಚರಣೆಯನ್ನು ಕೇಳುತ್ತಿರ ಬೇಕು; ಶುದರೂಪದ ಶಬ್ದಗಳನ್ನು ಓದುತ್ತಿರಬೇಕು; ಅಂದರೆ ಅವರ ಕಣ್ಣಿ

ನಲ್ಲಿ ಶಬ್ದಗಳ ಶುದ್ಧರೂಪವನ್ನು ಕೊಡಬೇಕು; ಇಷ್ಟೇ ಅಲ್ಲ, ಹಲವು ಸಾರಿ ಅವರು ಶುದ್ಧರೂಪಗಳನ್ನೇ ಬರೆಯುತ್ತಿರಬೇಕು. ಆರಂಭದಿಂದ ಶುದ್ಧರೂಪದಲ್ಲಿಯೇ ಶಬ್ದಗಳನ್ನು ಹುಡುಗರು ಬರೆಯುವರೆಂಬುದನ್ನು ನೋಡಿಕೊಳ್ಳುವದು ಬಹಳ ಮಹತ್ವವಾದದ್ದು. ಕೈಗೆ ಚಟವು ಬಹು ತೀವ್ರ ಹತ್ತುವದು; ಅಂದರೆ ಒಮ್ಮೆ ಶುದ್ಧ ಇಲ್ಲವೆ ಅಶುದ್ಧರೂಪದಲ್ಲಿ ಹುಡುಗನು ಶಬ್ದವನ್ನು ಬರೆದರೆ ಎರಡನೆಯ ಸಾರೆ ಅದೇ ರೀತಿಯಲ್ಲಿ ಬರೆಯುವ ಒಲವು ಕೈಗೆ ಇರುವದು.

ಈ ಮೂಲಕ ಶಬ್ದಗಳ ಶುದ್ಧರೂಪವು ಹುಡುಗರ ಕಿವಿ, ಕಣ್ಣು, ಕೈಬೆರಳುಗಳಲ್ಲಿ ನೆಲೆಗೊಳ್ಳಬೇಕಾದರೆ ನಾವು ಅವರಿಗೆ ಆ ರೂಪದಲ್ಲಿ ಬಹಳ ಸಾರೆ ಹುಡುಗರ ಮುಂದೆ ಶಬ್ದಗಳು ಬರುವಂತೆ ಎಚ್ಚರಪಡಬೇಕು; ಅವರು ಓದುವ ರೂಢಿಯು ಹೆಚ್ಚಾಗಬೇಕು; ನೋಡಿ ಬರೆಯುವ ರೂಢಿಯು ಹೆಚ್ಚಾಗಬೇಕು.

ನಿಜವಾಗಿ ನೋಡಲು, ಹಳ್ಳಿಯ ಸಾಲೆಗಳಲ್ಲಿ ಮೊದಲಿನ ನಾಲ್ಕೈದು ಇಯತ್ತೆಗಳ ಹುಡುಗರಿಂದ ಪ್ರತಿದಿವಸ ಅವರು ಮನೆಯಿಂದ ಸಾಲೆಗೆ ಬರುವಾಗ ಪಾಟಿಯತುಂಬ ಪುಸ್ತಕ ನೋಡಿ ಬರೆದು ತರಜೇಳುವದುಂಟು. ಇದು ನಿಜವಾದ ಶುದ್ಧಲೇಖನವು. ಇದರಿಂದ ಶಬ್ದಗಳ ಶುದ್ಧರೂಪವು ಹುಡುಗರ ಕಣ್ಣಿನಲ್ಲಿಯೂ ಕೈಬೆರಳುಗಳಲ್ಲಿಯೂ ನೆಲೆಗೊಳ್ಳುವದು.

ಉಕ್ತಲೇಖನವೆಂದರೆ ಓದಿ ಹೇಳಿದ್ದನ್ನು ಲಕ್ಷ್ಯಗೊಟ್ಟು ಕೇಳಿ, ಅರ್ಥವನ್ನು ಗ್ರಹಿಸಿಕೊಂಡು ಕೇಳಿದ್ದನ್ನು ನೆನಪಿನಲ್ಲಿಟ್ಟು, ತೀವ್ರವಾಗಿ ಅದನ್ನು ಬರೆಯುವದು. ಇದು ವ್ಯವಹಾರದ ದೃಷ್ಟಿಯಿಂದ ನೋಡಲು ಶುದ್ಧಲೇಖನಕ್ಕಿಂತ ಮಹತ್ವವಾದದ್ದು. ವ್ಯವಹಾರದಲ್ಲಿ ಶುದ್ಧರೂಪಕ್ಕಿಂತ ಲಕ್ಷ್ಯಗೊಟ್ಟು ಕೇಳುವದು, ಕೇಳಿದ್ದರ ಅರ್ಥವನ್ನು ಗ್ರಹಿಸುವದು, ಕೇಳಿದ ಮಾತನ್ನು ಲಕ್ಷ್ಯದಲ್ಲಿಡುವದು (ಅದನ್ನು ಕೇಳಿದಂತೆಯೇ ಹೇಳುವದು), ಅದನ್ನು ಕೇಳಿದಂತೆಯೇ ಬರೆಯುವದು ಇವು ಮಹತ್ವಪೂರ್ಣವಾದವು. ವಿದ್ಯಾವಂತನೆನಿಸಿಗೊಳ್ಳುವವನು ಈ ಕಾರ್ಯಗಳಲ್ಲಿ ತೀಕ್ಷ್ಣನಾಗಿರತಕ್ಕದ್ದು. ಇವುಗಳ ಉಪಯೋಗವು ಪ್ರತಿಯೊಬ್ಬ ಮನುಷ್ಯನಿಗೆ ವ್ಯವಹಾರದಲ್ಲಿ ನಿತ್ಯವೂ ವಿಶೇಷವಾಗಿ ಆಗುವದುಂಟು. ಈ ಕುಶಲತೆಯನ್ನು ಹುಡುಗರಲ್ಲಿ ನೆಲೆಗೊಳಿಸುವದಕ್ಕಾಗಿ ಉಕ್ತಲೇಖನವನ್ನು ಜೇಳಿ ರೂಢಿಮಾಡಿಸುವದುಂಟು.

ಉಕ್ತಲೇಖನದಲ್ಲಿ ಶುದ್ಧವಾಗಿ ಬರೆಯುವದಕ್ಕೆ ಮಹತ್ವವು ಇಲ್ಲವೆಂದಲ್ಲ; ಆದರೆ ಅದಕ್ಕೆ ವಿಪರೀತ ಮಹತ್ವವು ಮಾತ್ರ ಇರಲಾಗದು. ಶುದ್ಧ ಬರೆಹವು ನೆಲೆಗೊಳ್ಳಲಿಕ್ಕೆ ಇದರಲ್ಲಿಯೂ ನಾವು ಉಪಾಯಗಳನ್ನು ಮಾಡುವದುಂಟು.

ಆದರೆ ಶುದ್ಧಲೇಖನವೆಂಬ ಹೆಸರಿಗೆ ಮರುಳಾಗಿ ಶುದ್ಧರೂಪವು ನಂ
ಸೊಳ್ಳಲಿಕ್ಕೆಂದೇ ಉಕ್ತಲೇಖನವನ್ನು ಹೇಳುವದು ತಪ್ಪಾದದ್ದು.

ಇರಲಿ ನಾವು ಸಾಲೆಯಲ್ಲಿ ದಿನಾಲು ಶುದ್ಧಲೇಖನವೆಂದು ಹೇಳಿ ಬರೆಯಿಸುವ
ಪಾಠದ ಮೆಟ್ಟಿಲುಗಳನ್ನು ಇಲ್ಲಿ ಸೂಕ್ಷ್ಮವಾಗಿ ಅಭ್ಯಾಸಿಸೋಣ. ಅಂದರೆ, ಉಕ್ತ
ಲೇಖನದ ಉದ್ದೇಶಗಳೇ ಇದರಲ್ಲಿ ಹೆಚ್ಚಾಗಿ ಇರುವವೆಂಬದು ನಮಗೆ ಗೊತ್ತಾಗು
ವದು.

೧. ನಾವು ಶುದ್ಧಲೇಖನಕ್ಕಾಗಿ ಹೇಳಬೇಕೆಂದಿರುವ ಪ್ಯಾರಾಗ್ರಾಫಿನೊಳಗೆ
ಬಂದಿರುವ ಕಠಿಣ ಶಬ್ದಗಳನ್ನು ಕರಿಹಲಗೆಯಮೇಲೆ ಬರೆದು ಹುಡುಗರಿಂದ ಅವನ್ನು
ಓದಿಸುವದುಂಟು. ಇವುಗಳಿಗೆ ಕಠಿಣ ಶಬ್ದಗಳು ಅನ್ನುವದಕ್ಕಿಂತ ಹುಡುಗರಿಗೆ
ಅಪರಿಚಿತವಾದ ಶಬ್ದಗಳು ಅನ್ನುವದು ಯಥಾಯೋಗ್ಯವಾದದ್ದು. ಆದರೆ ಒಂದೆ
ರಡು ಸಾರೆ ಅವನ್ನು ನೋಡುವದಕ್ಕಿಂತ ಬರೆಯುವದರಿಂದ ಹುಡುಗರಿಗೆ ಹೆಚ್ಚು
ಲಾಭವಾಗುವದು. ಈ ಶಬ್ದಗಳಲ್ಲಿ ಕೆಲವನ್ನು ಒಬ್ಬಿಬ್ಬರಿಂದ ಕರಿಹಲಗೆಯಮೇಲೆ
ಬರೆಯಿಸುವ ಪರಿಪಾಠವೂ ಉಂಟು. ಆದರೆ ಎಲ್ಲ ಹುಡುಗರು ಇವುಗಳನ್ನು ತಮ್ಮ
ತಮ್ಮ ಪಾಟಿಯಮೇಲಾಗಲಿ ಪುಸ್ತಕದಲ್ಲಾಗಲಿ ಬರೆಯುವದು ಮಹತ್ವವಾದದ್ದು
ಇವು ಅಪರಿಚಿತ ಶಬ್ದಗಳು. ಆರಂಭದಲ್ಲಿ ಅವುಗಳ ನಿಜವಾದ ರೂಪಗಳು ಹುಡು
ಗರ ಕಣ್ಣಿನಲ್ಲಿ ತುಂಬುವಂತೆಯೇ ಕೈಗಳಲ್ಲಿ ನಲಿಗೊಳ್ಳುವದೂ ಮಹತ್ವವಾದದ್ದು
ಆದ್ದರಿಂದ ಎಲ್ಲ ಹುಡುಗರು ಇವುಗಳನ್ನು ಲಕ್ಷ್ಯಗೊಟ್ಟು ನೋಡಿ, ಬರೆಯುವದು
ಒಳಿತು.

ಆದರೆ ಶುದ್ಧ ಲೇಖನವು ಮುಗಿದ ಬಳಿಕ ಅನೇಕ ಹುಡುಗರು ಬೇರೆ ಕೆಲವ
ಶಬ್ದಗಳನ್ನು ತಪ್ಪಿ ಬರೆದಿರುವದು ಶಿಕ್ಷಕರಿಗೆ ಗೊತ್ತಿರುವ ಮಾತು. ಇವು ಬಹು
ತರವಾಗಿ ಸುಲಭ ಶಬ್ದಗಳಿರುವವು. ಅಂದರೆ ಇವುಗಳ ಅಕ್ಷರ ಯೋಜನೆಯು
ಕಠಿಣವಾದದ್ದಿರುವದಿಲ್ಲ. ಉದಾ- ಉತ್ಕೃಷ್ಟ, ಮುನಲ್ಮಾನ, ಧರ್ಮ ಇಂಥ ಶಬ್ದ
ಗಳು ಕಠಿಣವೆಂದು ನಮಗೆ ತೋರಿದರೂ ಪೈಗಂಬರು (ಪೈಗಂಬರರು ಎಂಬ
ಶಬ್ದವನ್ನು ಬರೆಯುವ ಬದಲು), ಸಂತೋಶ (ಸಂತೋಷ ಎಂದು ಬರೆಯುವ
ಬದಲು), ಊರಿನಲ್ಲಿ (ಊರಿನಲ್ಲಿ ಎಂದು ಬರೆಯುವ ಬದಲು) ಎಂಬ ಸುಲಭ
ಶಬ್ದಗಳನ್ನು ಹುಡುಗರು ಅಶುದ್ಧವಾಗಿ ಬರೆಯುವದುಂಟು. ಅಂದರೆ ಇವುಗಳನ್ನು
ಸರಿಯಾಗಿ ಬರೆಯುವ ರೂಢಿಯು ಅವರಿಗೆ ಇರುವದಿಲ್ಲ; ಆದ್ದರಿಂದ ಇಂಥ ಶಬ್ದ
ಗಳನ್ನು ಆರಂಭದಲ್ಲಿಯೇ ಕರಿಹಲಗೆಯಮೇಲೆ ಬರೆದು, ಓದಿಸಿ ಬರೆಯಿಸುವದು
ಮಹತ್ವವಾದದ್ದು.

ಇವನ್ನು ಹುಡುಗರು ನೋಡಿ ಬರೆಯುತ್ತಿರುವಾಗ ಶಿಕ್ಷಕನು ಮೇಲೆ ನೋಡುತ್ತ ತಪ್ಪುಗಳನ್ನು ಹುಡುಗರ ಲಕ್ಷ್ಯಕ್ಕೆ ಕೈಸನ್ನೆಯಿಂದ ತಂದುಕೊಡುತ್ತ ವರ್ಗದಲ್ಲಿರುವ ಎಲ್ಲ ಹುಡುಗರ ಬರೆಹವನ್ನು ಪರೀಕ್ಷಿಸುತ್ತಿರಬೇಕು. ಇದಕ್ಕೆ ೫–೬ ನಿಮಿಷಗಳು ಸಾಕು.

೨. ಓದಿಹೇಳುವ ಭಾಗವನ್ನು ಹುಡುಗರಿಗೆ ಒಮ್ಮೆ ಓದಿ ತೋರಿಸುವದು. ಓದುವ ಭಾಗವು ಹುಡುಗರ ಪರಿಚಯದ್ದಲ್ಲದಿದ್ದರೆ ಅದನ್ನು ಒಮ್ಮೆ ಓದುವದುಂಟು. ಇಂಗ್ಲಿಷಿನಲ್ಲಿ ಇದು ಅವಶ್ಯವಾದದ್ದು. ಶಬ್ದದ ಉಚ್ಚಾರವು ಒಂದೆ ಇದ್ದರೂ ಅರ್ಥವು ಭಿನ್ನವಾಗುವ ಮೂಲಕ ಸಂದರ್ಭವನ್ನು ಅರಿತಿದ್ದರೆ, ಅರ್ಥವನ್ನು ಗ್ರಹಿಸುವದು ಸುಲಭವು. ಆದ್ದರಿಂದಲೇ ಆ ಭಾಷೆಯಲ್ಲಿ ಉಕ್ತಲೇಖನದ ಭಾಗವನ್ನು ಒಮ್ಮೆ ಓದಿ ಹೇಳುವದುಂಟು. ಆದರೆ ನಮ್ಮ ಸಾಲೆಗಳಲ್ಲಿ ರೂಢಿಗಾಗಲಿ ಪರೀಕ್ಷೆಗಾಗಲಿ ಹುಡುಗರು ಓದಿದ ಪಾಠಗಳೊಳಗಿನ ಭಾಗವನ್ನೇ ಹೇಳವದುಂಟು. ಆದ್ದರಿಂದ ದಿನದ ಉಕ್ತಲೇಖನದ ಪಾಠಗಳಲ್ಲಿ ಈ ಮೆಟ್ಟಿ ಆವಶ್ಯಕವೆಂದು ನಮಗೆ ತೋರುವದಿಲ್ಲ. ಹೊಸ ಪುಸ್ತಕದೊಳಗಿನ ಭಾಗವನ್ನು ಉಕ್ತಲೇಖನದಲ್ಲಿ ಮೇಲಿಂದ ಮೇಲೆ ಹೇಳುವ ರೂಢಿಯಿಡುವದು ಮೇಲಾದದ್ದು. ಇಂಥ ಪ್ರಸಂಗಗಳಲ್ಲಿ ಈ ಮೆಟ್ಟಿನ ಉಪಯೋಗವು ಅವಶ್ಯವಾದದ್ದು.

೩. ಉಕ್ತಲೇಖನದ ಭಾಗವನ್ನು ಒಮ್ಮೆ ಮಾತ್ರ ಸ್ವಲ್ಪ ಸ್ವಲ್ಪವಾಗಿ ಹೇಳುವದು. ಒಮ್ಮೆ ಮಾತ್ರ ಓದಿ ಹೇಳುವದೆಂಬದು ಅತಿಶಯ ಮಹತ್ವವಾದದ್ದು. ಇದು ಉಕ್ತಲೇಖನದ ರಹಸ್ಯವು. ನಾವು ವ್ಯವಹಾರದಲ್ಲಿ ಕೇಳಬೇಕಾಗಿರುವ ಮಾತುಗಳನ್ನು ಒಮ್ಮೆಗಿಂತ ಹೆಚ್ಚಾಗಿ ಯಾರೂ ಹೇಳುವದಿಲ್ಲ. ಲಕ್ಷ್ಯಗೊಟ್ಟು ಕೇಳುವರೂಢಿಯು ನಮ್ಮಲ್ಲಿ ನೆಲೆಗೊಳ್ಳುವದು ಮಹತ್ವವಾದದ್ದು. ಕೇಳಿದ್ದನ್ನೆಲ್ಲ ಪೂರ್ಣವಾಗಿ ಗ್ರಹಿಸುವ ಕೌಶಲ್ಯವೂ ನಮ್ಮಲ್ಲಿರತಕ್ಕದ್ದು. ಒಮ್ಮೆ ಹೇಳಿದ ಬಳಿಕ ಯಾವ ಕಾರಣದಿಂದಲೂ ಎರಡನೆಯ ಸಾರೆ ಹೇಳುವದಿಲ್ಲೆಂದು ವರ್ಗದ ಪ್ರತಿಯೊಬ್ಬ ವಿದ್ಯಾರ್ಥಿಗೆ ಮನವರಿಕೆಯಾಗಲಿಕ್ಕೆ ಬೇಕು. ಹೀಗಾದರೆ ಮಾತ್ರ ನಡುವೆ ಬಾಯಿಹಾಕಿ ಇತರರ ಚಿತ್ತೈಕಾಗ್ರತೆಯನ್ನು ಕೆಡಿಸಿಬಿಡುವ ದುಷ್ಟ ರೂಢಿಯು ಕಟ್ಟಾಗುವದು.

ಆದರೆ ಸ್ವಲ್ಪ ಸ್ವಲ್ಪ ಭಾಗವನ್ನು ಹೇಳಬೇಕೆಂಬದರ ಇಂಗಿತವನ್ನು ಎಷ್ಟೋ ಶಿಕ್ಷಕರು ತಿಳಿಯುವದಿಲ್ಲ. ಬಹುತರವಾಗಿ ಎರಡು ಇಲ್ಲವೆ ಮೂರು ಶಬ್ದಗಳನ್ನು ಅವರು ಹೇಳುವದುಂಟು. ಹುಡುಗರು ಕೇಳಿದ್ದನ್ನು ಲಕ್ಷ್ಯದಲ್ಲಿಡ

ಬೇಕಾದರೆ ಅವರಿಗೆ ಏನಾದರೂ ಅರ್ಥವಾಗಲಿಕ್ಕೆ ಬೇಕು. ಎರಡು ಇಲ್ಲವೆ ಮೂರು ಶಬ್ದಗಳನ್ನು ಲಕ್ಷ್ಯದಲ್ಲಿಡುವದು ಮನಸ್ಸಿಗೆ ಶ್ರಮಸಾಧ್ಯವು; ಇಷ್ಟೇ ಅಲ್ಲ. ನಿಷ್ಪ್ರಯೋಜಕವು.ಹೀಗೆಮಾಡಲು ಯತ್ನಿಸುವದರಿಂದಲಕ್ಷ್ಯಶಕ್ತಿಯು ಬಲಪಡುವ ದೆಂದು ಕೆಲವರ ನಂಬುಗೆ. ಇದು ತಪ್ಪಾದದ್ದು. ಇದರಿಂದ ಲಕ್ಷಶಕ್ತಿಯು ಕೆಡುತದು. ಗೊಂದಲದಲ್ಲಿ ಬೀಳುವದು. ಅದ್ದರಿಂದ ಅರ್ಥವಾಗುವಷ್ಟು ವಾಕ್ಯ ಖಂಡವನ್ನು ಒಮ್ಮೆ ಹೇಳತಕ್ಕದ್ದೆಂದು ಎಣಿಸುವದು ಯೋಗ್ಯವಾದದ್ದು. ಒಮ್ಮೊಮ್ಮೆ ಒಂದೇ ಶಬ್ದಕ್ಕೆ ನಿಲ್ಲಬೇಕಾಗಬಹುದು. ಕೆಲವು ಪ್ರಸಂಗಗಳಲ್ಲಿ ನಾಲ್ಕೈದು ಶಬ್ದಗಳನ್ನು ಹೇಳಬೇಕಾಗುವದು. ಇಂಥಲ್ಲಿ ಅದನ್ನೆಲ್ಲ ಒಮ್ಮೆಲೆ ಹೇಳಿ ಬರೆಯಲಿಕ್ಕೆ ಸಾಕಷ್ಟು ಹೊತ್ತು ಕೊಡುವದು ಉಚಿತವಾದದ್ದು.

ಬರೆಯಲಿಕ್ಕೆ ಎಷ್ಟು ಹೊತ್ತು ಕೊಡತಕ್ಕದ್ದೆಂಬದನ್ನು ನಿರ್ಧರಿಸುವದು ಕಠಿಣವಲ್ಲ; ಸಾಕಷ್ಟು ಅವಕಾಶಕೊಡದಿದ್ದರೆ ಹುಡುಗರು ಲಗುಬಗೆಯಿಂದ ಬರೆಯಲು ಯತ್ನಿಸುವರು. ಇದರಿಂದ ಅಕ್ಷರಗಳೂ ಬರೆಹವೂ ಕೆಡುವವು. ಬಹಳ ಹೊತ್ತು ಕೊಟ್ಟರೆ ಸಾವಕಾಶವಾಗಿ ಬರೆಯುವ ರೂಢಿಯು ಅವರಲ್ಲಿ ನೆಲೆ ಗೊಳ್ಳುವದು. ಬರೆಹದಲ್ಲಿ ತೀವ್ರತೆಯು ಒಂದು ಮಹತ್ವವುಳ್ಳ ಗುಣವು. ಮೇಲಾಗಿ ಬರೆಯುವ ಗತಿಯು ಹುಡುಗರ ವಯಸ್ಸು, ಇಯತ್ತೆ ಇವನ್ನು ಅವಲಂ ಬಿಸಿರುವದು. ಆದ್ದರಿಂದ ವರ್ಗದ ಅರ್ಧಕ್ಕಿಂತ ಹೆಚ್ಚು ಹುಡುಗರು ಬರೆಯು ವಷ್ಟು ಹೊತ್ತು ಮಾತ್ರ ಕೊಟ್ಟು ಮುಂದಿನ ಭಾಗವನ್ನು ಹೇಳಬಹುದು. ಹೀಗೆ ಎಲ್ಲ ಹುಡುಗರನ್ನು ನೋಡುತ್ತ ನಿಲ್ಲುವದು ಸುಲಭವಲ್ಲೆಂದು ಕೆಲವರು ಆಕ್ಷೇ ಪಿಸಬಹುದು. ಇಂಥ ಒಬ್ಬಿಬ್ಬ ಹುಡುಗರನ್ನು ಶಿಕ್ಷಕನು ಮನದಲ್ಲಿಯೇ ಗೊತ್ತು ಮಾಡಿಟ್ಟುಕೊಂಡು ಸಾಗಬಹುದು ಹೀಗೆ ಮಾಡುವದರಿಂದ ಹುಡುಗರ ಯೋಗ್ಯ ತೆಗೆ ತಕ್ಕ ಅವಕಾಶವು ದೊರೆತಂದಾಗಿ ಹಿಂದುಳಿದ ಹುಡುಗರಿಗೂ ಯಥಾ ಸಾವ ಕಾಶವಾಗಿ ಬರೆಯುವವರಿಗೂ ತೀವ್ರ ಬರೆಯಲು ಹಚ್ಚಿದಂತಾಗುವದು.

೪. ಉಕ್ತಲೇಖನದ ಭಾಗವನ್ನು ಮತ್ತೊಮ್ಮೆ ಓದಿ ಹೇಳುವದು.

ಉಕ್ತಲೇಖನದ ಉದ್ದೇಶವನ್ನು ನಾವು ನೆನಪಿಗೆ ತಂದುಕೊಂಡರೆ, ಹೀಗೆ ಪುನರಪಿ ಓದುವದು ಅನವಶ್ಯಕವೆಂದು ನಮಗೆ ಗೊತ್ತಾಗಬಹುದು; ಇಷ್ಟೇ ಅಲ್ಲ; ಇನ್ನೊಮ್ಮೆ ನೋಡಿಕೊಳ್ಳುವ ಅನುಕೂಲವು ತಮಗೆ ದೊರೆಯುತ್ತದೆಂದು ಹುಡು ಗರಿಗೆ ತಿಳಿದರೆ, ಅವರ ಲಕ್ಷ್ಯಶಕ್ತಿಯು ಅವರ ನರವಿಗೆ ಅಷ್ಟಾಗಿ ಬಾರದು. ಕಾರಣಾಂತರಗಳಿಂದ ಒಂದೆರಡು ಶಬ್ದಗಳು ಬರೆಯದೆ ಉಳಿದಿದ್ದರಾಗಲಿ, ಜೆನ್ನಾಗಿ ಕೇಳಿಸದ ಮೂಲಕ ತಪ್ಪು ಉಳಿದಿದ್ದರಾಗಲಿ ಅವುಗಳನ್ನು ತಿದ್ದಿಕೊಳ್ಳಲಿಕ್ಕೆ ಅನು

ಕೂಲತೆಯನ್ನು ಒದಗಿಸಿಕೊಡಲಿಕ್ಕಾಗಿ ಮುತ್ತೊತ್ತೆ ಒದು ಹೇಳುವದು ಯೋಗ್ಯವಾದದ್ದೆಂದು ಕೆಲವರು ವಾದಿಸುವರು. ಅದರೆ ಹೀಗೆ ಮೂರು ನಾಲ್ಕು ಶಬ್ದಗಳನ್ನು ಬಿಟ್ಟಿರುವ ಅಥವಾ ತಪ್ಪಿರುವ ಹುಡುಗರಿಗೆ ನಮ್ಮ ಪುನರ್ವಾಚನದಿಂದ ಲಾಭವಾಗುವದಿಲ್ಲೆಂಬದು ಸ್ಪಷ್ಟವು. ಯಾಕೆಂದರೆ ನಾವು ಮುತ್ತೊತ್ತೆ ಓದುತ್ತಿರುವಾಗ ಮೊದಲನೆಯ ತನ್ನ ತಪ್ಪನ್ನು ಅತನು ತಿದ್ದಿಕೊಳ್ಳುವಷ್ಟರಲ್ಲಿ ನಾವು ಒಂದು ಸಾಲಾದರೂ ಮುಂದೆ ಓದಿರುವೆವು. ಮೇಲಾಗಿ, ಬೇರೆ ಬೇರೆ ಹುಡುಗರು ಬೇರೆ ಬೇರೆ ಶಬ್ದಗಳನ್ನು ಬಿಟ್ಟಿರುವದರಿಂದ ಇಲ್ಲವೆ ತಪ್ಪಿರುವದರಿಂದ ನಾವು ಎಷ್ಟು ಸಾವಕಾಶವಾಗಿ ಓದಿದರೂ ಎಲ್ಲರಿಗೂ ತೃಪ್ತಿಯಾಗುವಂತೆ ಓದುವದು ಅಸಾಧ್ಯವಾದದ್ದು. ಇವೆಲ್ಲ ಕಾರಣಗಳ ಮೂಲಕ ಈ ಮೆಟ್ಟನ್ನು ಬಿಟ್ಟುಬಿಡುವದೇ ಮೇಲಾದದ್ದೆಂದು ನಮ್ಮ ಅಭಿಪ್ರಾಯವು.

ಹಾಗಾದರೆ ಒಮ್ಮೆ ಬರೆದದ್ದನ್ನು ತಿರುಗಿ ಓದಿನೋಡಿಕೊಳ್ಳಲಿಕ್ಕೆ ಹುಡುಗರಿಗಾದರೂ ಪ್ರಸಂಗವನ್ನು ಯಾಕೆ ಕೊಡಬಾರದು ? ಎಂದು ಕೆಲವರು ಕೇಳುವರು ಹೀಗೆ ಅವರೇ ಓದಿಕೊಂಡು ಏನಾದರೂ ಹೆಚ್ಚು ಕಡಿಮೆಗಳನ್ನು ಮಾಡಿಕೊಳ್ಳಲಿಕ್ಕೆ ಅವರಿಗೆ ಅವಕಾಶವನ್ನು ಕೊಡುವದು ಒಳಿತಾದದ್ದೆಂದು ನಮ್ಮ ಮತವು. ಒಮ್ಮೆ ಬರೆದದ್ದನ್ನು ಓದಿನೋಡಿ ತಿದ್ದಿಕೊಳ್ಳುವ ರೂಢಿಯು ನಮ್ಮ ಸಾಲೆಗಳಲ್ಲಿ ಹುಡುಗರಲ್ಲಿ ಕಿಂಚಿತ್ತಾದರೂ ನೆಲೆಗೊಳ್ಳುವದಿಲ್ಲ. ಈ ಮೂಲಕ ಎಷ್ಟೋ ಹುಡುಗರು ಪರೀಕ್ಷೆಯಲ್ಲಿ ಗುಣಗಳನ್ನು ಕಳೆದುಕೊಳ್ಳುವರು; ಹಲವರು ನಾಪಾಸಾಗುವರು. ಎಂಥ ಬುದ್ಧಿವಂತರೂ ಬರೆಹದಲ್ಲಿ ಕೈತಪ್ಪುಗಳನ್ನು ಮಾಡುವದುಂಟು. ಬರೆದದ್ದನ್ನು ವಿಚಾರಪೂರ್ವಕವಾಗಿ ಲಕ್ಷ್ಯಗೊಟ್ಟು ಓದಿ ನೋಡಿಕೊಳ್ಳುವದು ಒಳ್ಳೇ ಉಪಯುಕ್ತವಾದ ಚಟವು. ಉಕ್ತಲೇಖನವನ್ನು ಜೇಳಿ ಮುಗಿಸಿದ ಬಳಿಕ ತುಸು ಹೊತ್ತು ಓದಿಕೊಳ್ಳಜೇಳಿ ಅಪ್ಪಣೆ ಮಾಡಿದ ಕೂಡಲೆ ಎಲ್ಲರು ಪಾಟಿಗಳನ್ನು ಹಾಕಬೇಕೆಂದು ನಿಯಮವಿರಬೇಕು.

೫. ತಿದ್ದುವದು:

ಎಲ್ಲ ಹುಡುಗರ ಬರೆಹವನ್ನು ತೀವ್ರವಾಗಿ ಶೀಕ್ಷಕನೇ ತಿದ್ದಬೇಕು. ಕೆಲವರು ಹುಡುಗರಿಂದಲೇ ತಮ್ಮ ತಮ್ಮ ಬರೆಹವನ್ನು ತಿದ್ದಹಚ್ಚುವರು; ಆಗ ಹುಡುಗರು ಪುಸ್ತಕಗಳನ್ನು ನೋಡಿ ತಿದ್ದುವರು. ಇದು ಅಷ್ಟು ಮೇಲಾದದ್ದಲ್ಲ; ಯಾಕಂದರೆ ತಪ್ಪುಗಳನ್ನು ಮುಚ್ಚಿಕೊಳ್ಳುವ ಅಂದರೆ ಅಪ್ರಾಮಾಣಿಕತನದ ಚಟವು ಹತ್ತಲಿಕ್ಕೆ ನಾವು ಅವಕಾಶವನ್ನು ಕೊಟ್ಟಂತಾಗುವದು. ಕೆಲವರು ಇದನ್ನು ತಪ್ಪಿಸಲಿಕ್ಕಾಗಿ ಪಾಟಿಗಳನ್ನು ಅದಲು ಬದಲು ಮಾಡಿಸಿ ತಿದ್ದಹಚ್ಚುವರು.

ಇದರಲ್ಲಿಯೂ ದೋಷಗಳು ಅಡಗಿರುವವು. ಹೀಗೆ ಮಾಡುವದರಿಂದ ಅನೇಕಸಾರೆ ಶಿಕ್ಷಕನು ನ್ಯಾಯಾಧೀಶನಾಗುವ ಪ್ರಸಂಗವು ಬರುವದು. ಹುಡುಗರಲ್ಲಿ ಈರ್ಷೆ ಅಸೂಯೆಗಳು ಉಂಟಾಗುವವು. ಆದ್ದರಿಂದಲೇ ಶಿಕ್ಷಕನು ಸ್ವಂತವಾಗಿ ತಪ್ಪು ನೋಡುವದು ಹಿತವಾದದ್ದು.

ಹೀಗೆ ಶಿಕ್ಷಕನು ಬರೆಹವನ್ನು ಪರೀಕ್ಷಿಸುತ್ತಿರುವಾಗ ಹುಡುಗರನ್ನು ಕೆಲಸದಲ್ಲಿ ತೊಡಗಿಸುವದು ಬಹಳ ಮಹತ್ವವಾದದ್ದು. ಕೆಲವರು ಉಕ್ತಲೇಖನವನ್ನು ಜೇಳಿದ ಭಾಗವನ್ನು ಓದಿಕೊಳ್ಳಲಿಕ್ಕೆ ಜೇಳುವದುಂಟು. ಇದು ಸರ್ವ ಸಾಮಾನ್ಯವಾದದ್ದು. ಉಕ್ತಲೇಖನದ ಭಾಗದಲ್ಲಿ ಬಂದ ವಿಚಾರ, ಶಬ್ದಗಳು ಈ ಬಗ್ಗೆ ಕೆಲವು ಅಭ್ಯಸನಗಳನ್ನು ಕೊಟ್ಟು ಅವುಗಳನ್ನು ನೋಟನಲ್ಲಿ ಬಿಡಿಸ ಜೇಳುವದು ಒಳಿತು. ಈ ಅಭ್ಯಸನಗಳಲ್ಲಿ ವಿಚಾರಕ್ಕೂ ಜಾಣ್ಮೆಗೂ ಅವಕಾಶ ವಿದ್ದರೆ ಹುಡುಗರು ಮನಸೊಪ್ಪಿ ಕೆಲಸದಲ್ಲಿ ತೊಡಗುವರು. ಬರೆಹವನ್ನು ತಿದ್ದಿದ ಕೂಡಲೆ, ಶಿಕ್ಷಕನು ಗುರುತು ಹಾಕಿದ ತಪ್ಪುಗಳನ್ನು ಪುಸ್ತಕ ನೋಡಿ ತಿದ್ದಿ ಕೊಳ್ಳಲಿಕ್ಕೆ ಕೆಲವರು ಜೇಳುವರು. ಹೀಗೆ ಮಾಡಿಸಬಹುದು. ತಪ್ಪಿದ ಶಬ್ದಗಳ ಶುದ್ಧ ರೂಪಗಳನ್ನು ನಾಲ್ಕಾರುಸಾರೆ ಕೆಲವರು ಬರೆಯಿಸುವದುಂಟು. ಆದರೆ ಇದಕ್ಕಿಂತ ಮೇಲಾದ ಉಪಾಯವೂ ಉಂಟೆಂದು ಬಲ್ಲವರು ಜೇಳುವರು. ಪ್ರತಿ ಯೊಬ್ಬ ಹುಡುಗನು ಕೆಲವು ತಪ್ಪುಗಳನ್ನು ಸಹಜವಾಗಿ ಮಾಡುವದುಂಟು. ಈ ತಪ್ಪುಗಳನ್ನು ಆತನು ವಾಕ್ಯಗಳನ್ನು ಬರೆಯುವಾಗ ಮಾಡುವನು. ಶಬ್ದಗಳನ್ನು ಮತ್ತು ಬರೆಯ ಹೇಳಿದಾಗ ಬಹುತರವಾಗಿ ಶುದ್ಧವಾಗಿ ಬರೆಯುವನು. ಇದರ ಕಾರಣವೇನೆಂದರೆ, ಶಬ್ದ ಬರೆಯುವಾಗ ಅದರ ಶುದ್ಧ ರೂಪದಕಡೆಗೆ ಮಾತ್ರ ಅವನ ಲಕ್ಷ್ಯವು ಹೋಗುವದು. ವಾಕ್ಯವನ್ನು ಬರೆಯುತ್ತಿರುವಾಗ ಅರ್ಥದಕಡೆಗೆ ಲಕ್ಷ್ಯವು ಸ್ವಾಭಾವಿಕವಾಗಿ ಹೆಚ್ಚಾಗಿ ಹೋಗುವದು; ಈ ಮೂಲಕ ಶುದ್ಧರೂಪದಕಡೆಗೆ ಕಡಿಮೆಯಾಗಿ ಹೋಗುವದಿಲ್ಲ. ಬರೆಹವು ಕೈಯಕೆಲಸವೆಂದು ಆದ್ದರಿಂದಲೇ ಹೇಳುವದುಂಟು. ಆದ್ದರಿಂದ ಪ್ರತಿಯೊಬ್ಬ ಹುಡುಗನು ಸಹಜವಾಗಿ ಮೇಲಿಂದ ಮೇಲೆ ಮಾಡುತ್ತಿರುವ ತಪ್ಪುಗಳ ಶುದ್ಧರೂಪವು ವಾಕ್ಯಗಳಲ್ಲಿರುವಂಥ ಕೆಲವು ವಾಕ್ಯಗಳನ್ನು ಉಕ್ತಲೇಖನದ ನೋಟಪುಸ್ತಕದ ಕೊನೆಯಲ್ಲಿ ಬರೆಯಿಸಿ, ಉಕ್ತಲೇಖನವನ್ನು ಶಿಕ್ಷಕನು ಪರೀಕ್ಷಿಸುತ್ತಿರುವಾಗ ಇವುಗಳ ಉಜಳಣಿ ಮಾಡಿಕೊಳ್ಳಲಿಕ್ಕೆ ಹುಡುಗನಿಗೆ ಜೇಳುವದು ಮೇಲಾದದ್ದೆಂದು ಅನುಭವಿಕರಾದ ಶಿಕ್ಷಕರ ಅಭಿಪ್ರಾಯವಿರುವದು. ಈ ರೂಢಿಯನ್ನಿಟ್ಟರೆ ನಮ್ಮಲ್ಲಿ ಮುಲ್ಕೀಪರೀಕ್ಷೆಗೆ ಕೂಡುವ

ಹುಡುಗರ ಬರೆಹದಲ್ಲಿ ಕಂಡುಬರುವ "ಉರಳ್ಳಿ" "ಶಾಸ್ತ್ರೀಪಾಠ" "ಪಾಠಿನ" "ಯರಡು" ಮೊದಲಾದ ದೋಷಗಳು ದೂರಾಗುವವು.

ಉಕ್ತಲೇಖನದ ಬರೆಹಕ್ಕೆ ಅಶುದ್ಧದ ಬಗ್ಗೆ ಮಾತ್ರ ಗುಣಗಳನ್ನು ಕೊಡುವದು ಸರಿಯಲ್ಲ. ಓದಿದ ಭಾಗದ ಅರ್ಥವನ್ನು ತಿಳಿದುಕೊಂಡು ಬರೆದದ್ದರ ಯೋಗ್ಯತೆಯನ್ನು ಅನುಲಕ್ಷಿಸಿ ಗುಣಗಳನ್ನು ಕೊಡತಕ್ಕದ್ದು.

ಉಕ್ತಲೇಖನಕ್ಕಾಗಿ ಹುಡುಗರು ಓದಿದ ಪುಸ್ತಕಗಳನ್ನು ಬಿಟ್ಟು ಮೇಲಿಂದ ಮೇಲೆ ಹೊರಗಿನ ಭಾಗಗಳನ್ನು ಅನಿಸುವದು ಒಳಿತಾದದ್ದು.

ಎ, ಏ, ಳ, ಈ ಇಯತ್ತ್ರಿಗಳಿಗೆ ಎ, ಏ, ಳ ಪಂಕ್ತಿಗಳನ್ನು ಮಾತ್ರ ಉಕ್ತಲೇಖನಕ್ಕಾಗಿ ಹೇಳುವ ವಾಡಿಕೆಯುಂಟು. ಸುಲಭವಾದ ಭಾಗಗಳನ್ನು ಆರಿಸಿ ಳ, ೬, ೮ ಇಲ್ಲವೆ ಹೆಚ್ಚು ಪಂಕ್ತಿಗಳನ್ನು ಹೇಳುವದು ಮೇಲಾದದ್ದು.

ಭಾಷಾಭ್ಯಾಸ

ಮಾಧ್ಯಮಿಕ ಸಾಲೆಗಳಲ್ಲಿ ಕಲಿಸುವ ಅನೇಕ ವಿಷಯಗಳಲ್ಲಿ ಇಂಗ್ಲೀಷ ಭಾಷೆಗೆ ಸಹಜ ಪ್ರಾಪ್ತವಾದ ಪ್ರಾಶಸ್ತ್ಯವು ಇನ್ನು ಬೇರೆ ಯಾವದಕ್ಕೂ ಇಲ್ಲೆಂಬದು ಎಲ್ಲರಿಗೂ ವಿದಿತವಾದದ್ದೇ ಸರಿ. ಈ ಭಾಷೆಯು ನಮಗೆ ಹೊಸದಾಗಿ ಪ್ರಚಯವಾದದ್ದು; ನಮ್ಮ ದೇಶದ ಅನೇಕಾನೇಕ ಭಾಷೆಗಳಿಗೂ ಇದಕ್ಕೂ ವ್ಯತ್ಯಾಸಗಳು ಬಹಳ. ಇದನ್ನು ಬಹುಕಾಲದವರೆಗೆ ಭಾಷಾಂತರ ಪದ್ಧತಿಯಿಂದಲೇ ಎಲ್ಲರೂ ಪಠಿಸುತ್ತಿದ್ದರು. ಈ ಪದ್ಧತಿಯು ಬಹ್ವಂಶದಿಂದ ತಪ್ಪೆಂದು ಕಂಡುಬಂದ ಕಾರಣ ಈಗೀಗ ಹಲವು ಸಾಲೆಗಳಲ್ಲಿ ಮಾತ್ರ ಪ್ರತ್ಯಕ್ಷ ಪದ್ಧತಿ (Direct-Method) ಯಿಂದ ಕಲಿಸುವರು. ಇಂಗ್ಲೀಷ ಭಾಷೆಯಲ್ಲಿ ಶಬ್ದೋಚ್ಚಾರ; ಆಘಾತ ಮೊದಲಾದವುಗಳ ಕಡೆಗೆ ಆ ಜನರು ಹೆಚ್ಚು ಗಮನವನ್ನು ಕೊಡುವರು. ನಾವು ಯಾವ ಭಾಷೆಯ ಅಭ್ಯಾಸವನ್ನೇ ಮಾಡಲಿ ಆ ಆ ಜನರು ಆಡುವಂತೆಯೂ, ನುಡಿಯುವಂತೆಯೂ ಕಲಿಯಲಿಕ್ಕೆ ಪ್ರಯತ್ನಿಸಬೇಕಾದದ್ದು. ಇನ್ನು ಎಲ್ಲರೂ ಆಂಗ್ಲೇಯರ ಮುಖದಿಂದಲೇ ಈ ಭಾಷೆಯ ಅಭ್ಯಾಸವನ್ನು ಮಾಡಲಾರರು. ಆದಕಾರಣ ಉತ್ಕೃಷ್ಟ ವಕ್ತಾರರಿಂದ ಕೆಲವು ಭಾಷಣಗಳನ್ನು ಮಾಡಿಸಿ ಅವುಗಳನ್ನು ಬೇಕಾದಾಗ ಕೇಳುವಂತೆ ಕೆಲವು ಗ್ರಾಮೋಫೋನ ಪ್ಲೇಟುಗಳನ್ನು ಕೂಡ ಮಾಡಿರುವರು; ಹಾಗೂ ಎಷ್ಟೋ ಸಾಲೆಗಳಲ್ಲಿ ಪ್ರತಿನಿತ್ಯದ ಪಾಠಗಳಲ್ಲಿ ಈ ಯಂತ್ರದ

ಸಹಾಯವನ್ನು ಮಾಡಿಕೊಳ್ಳುತ್ತಿರುವರು. ಎಲ್ಲಕ್ಕಿಂತಲೂ ಈ ವಿಷಯದ ವಾಚನವನ್ನು ಕಲಿಸುವದು ಹೆಚ್ಚು ಕಠಿಣವಾಗಿರುವದು. ಒಂದು ವಾರದಲ್ಲಿ ಮೂರು ನಾಲ್ಕು ತಾಸುಗಳ ಮಟ್ಟಿಗಾದರೂ ವೇಳೆಯನ್ನು ವಾಚನ ವಿಷಯಕ್ಕೆ ಕಾದಿಡುವರು. ಮಾಧ್ಯಮಿಕ ಶಾಲೆಗಳಲ್ಲಿ ಒಂದೊಂದು ವರ್ಗದಲ್ಲಿ ಏನಿಲ್ಲೆಂದರೂ ಮೂವತ್ತು–ಮೂವತ್ತೈದರವರೆಗೆ ಹುಡುಗರ ಸಂಖ್ಯೆಯಿರುವದು. ಒಬ್ಬೊಬ್ಬ ಹುಡುಗನಿಗೆ ಎರಡೆರಡು ಮಿನಿಟುಗಳಷ್ಟಾದರೂ ಓದಿಸಿಕೊಳ್ಳಬೇಕೆಂದರೆ ಎರಡು ದಿವಸಕ್ಕೊಮ್ಮೆ ಒಬ್ಬನ ಬಾರಿ ಬರುವದು. ಇನ್ನು ಒಬ್ಬನು ಓದುವಾಗ ಎಲ್ಲರೂ ಏಕಚಿತ್ತರಾಗಿದ್ದರೆ ಸಾಲದೇ ಎಂದು ಕೇಳಬಹುದು. ನಾಲ್ವತ್ತೈದು ಮಿನಿಟಿನ ಒಂದು ಅವಧಿಯಂತೆ ಒಂದು ಒಂದೂವರೆ ಅವಧಿಯೊಳಗೆ ಒಬ್ಬ ಹುಡುಗನಿಗೆ ಎರಡು ಮಿನಿಟು ಮಾತ್ರ ವೇಳೆ ಪ್ರತ್ಯಕ್ಷ ಕೆಲಸವಿದ್ದು ಮಿಕ್ಕ ಹುಡುಗರು ಸಮಾಧಿ ಹೊಂದಿದ ಋಷಿಗಳಂತೆ ಸಾವಧಾನಚಿತ್ತರಾಗಿ ತಪ್ಪಾಗಲಿ, ತಡೆಯಾಗಲಿ, ರಾಗ ತೆಗೆದಂತೆಯಾಗಲಿ ಜೆನ್ನಾಗಿಯಾಗಲಿ ಓದಿದ್ದನ್ನೇ ಪುನಃ ಪುನಃ ಓದುವ ಸರಿಕರ ಕಡೆಗೆ ಲಕ್ಷ್ಯಕೊಡುವದೆಂದರೆ ಸೆರೆಮನೆಯೊಳಗಿನ ಒಂದು ವಿಧದ ಶಿಕ್ಷೆಯೆಂದೇ ಹೇಳಬಹುದು. ಇನ್ನು ಶಿಕ್ಷಕನು ಪೋಲೀಸ ಖಾತೆಯ ಶಿಸ್ತನ್ನು ಕಾಯ್ದುಕೊಳ್ಳುವವನಿದ್ದರೆ ಅವನ ಅಂಜಿಕೆಯಿಂದ ಮಕ್ಕಳು ಬಾಹ್ಯತಃ ಸುಮ್ಮನಿರಬಹುದು; ಹೀಗಿದ್ದರೂ ಮಕ್ಕಳ ಮನಸ್ಸು ಇತರತ್ರ ಸಂಚರಿಸಲಿಲ್ಲೆಂದು ಹೇಳಲಾಗದು.

ಆದಕಾರಣ ಹೀಗೆ ಮಾಡದೆ ವಾಚನ ಪಾಠವನ್ನು ತೆಗೆದುಕೊಳ್ಳುವಾಗ ವರ್ಗದ ಮಕ್ಕಳಲ್ಲಿ ಕೆಲವು ಗುಂಪುಗಳನ್ನು ಮಾಡಿ ನಾಲ್ಕಾರು ಮಕ್ಕಳನ್ನು ಪ್ರತ್ಯಕ್ಷ ವಾಚನದಲ್ಲಿ ನಿಯೋಗಿಸಿ ಉಳಿದವರನ್ನು ಯಾವದಾದರೊಂದು ಭಾಷಾ ವಿಷಯಕ್ಕೆ ಸಂಬಂಧಪಟ್ಟ ಲೇಖನ ವ್ಯವಸಾಯದಲ್ಲಿ ತೊಡಗಿಸುವದೇ ಸರಿಯಾದ ದ್ದೆಂದು ಕಂಡುಬಂದಿದೆ. ಈ ವ್ಯವಸಾಯಗಳು ಶಿಕ್ಷಕರಿಂದ ಆಗಿಂದ ಗ ಮಕ್ಕಳ ಯೋಗ್ಯತೆ, ಪೂರ್ವಾಭ್ಯಾಸ, ಅಭಿರುಚಿ ಮೊದಲಾದವುಗಳನ್ನು ಲಕ್ಷ್ಯದಲ್ಲಿ ತಂದು ಕೊಂಡು ರಚಿತವಾದಂತಹವಿರಬೇಕು. ಅವು ಯಾವಾಗಲೂ ನೂತನವಾದವೂ ವಿದ್ಯಾರ್ಥಿಗಳ ಮನಸ್ಸಿಗೆ ಒಪ್ಪಿಗೆಯಾಗುವಂತಹವೂ ಇರಬೇಕು. ಪ್ರತಿಸಾರಿ ಈ ಅಭ್ಯಾಸನಗಳು (Exercises) ಬೇರೆ ಬೇರೆ ತರಹದವಿರಬೇಕು. ಇವುಗಳ ಪ್ರತಿಯೊಂದು ಪ್ರತಿಯು ಪ್ರತಿಯೊಬ್ಬರ ಕೈಸೇರಬೇಕು. ಅಲ್ಲದೆ ಇವುಗಳನ್ನು ಕರೇ ಹಲಗೆಯಮೇಲೆ ಬರೆದಿಟ್ಟು ಸಾಮುದಾಯಕವಾಗಿ ಓದಿಕೊಳ್ಳುವಂತೆ ಮಾಡಬಾರದು. ಆ ಆ ಪ್ರಶ್ನಕಾಗದಗಳ ಮೇಲೆಯೇ ಮಕ್ಕಳು ಉತ್ತರಗಳನ್ನು ಬರೆಯುವಂತೆ ಯೋಜನೆಯಿರಬೇಕು. ಆ ತಾಸಿನ ಅಭ್ಯಾಸವು ಪ್ರಾರಂಭವಾಗುವ

ಮೊದಲು ಆ ದಿನದ ಕಾರ್ಯಕ್ರಮವನ್ನು ಕುರಿತು ಮಕ್ಕಳು ಏನು ಮಾಡತಕ್ಕ ದ್ದೆಂಬ ಬಗ್ಗೆ ಶಿಕ್ಷಕರು ಸ್ಪಷ್ಟವಾಗಿ ಎಲ್ಲರಿಗೂ ಸಾಕಷ್ಟು ಸೂಚನೆಗಳನ್ನು ಕೊಟ್ಟ ಬಳಿಕ ಒಂದು ಗುಂಪಿನವರನ್ನು ತನ್ನ ಸಮೀಪಕ್ಕೆ ಕರೆದುಕೊಂಡು ಅವರಿಗೆ ವಾಚನ ವನ್ನು ಕಲಿಸಬೇಕು. ಹೀಗೆ ಮಾಡುವದರಿಂದ ವೈಯಕ್ತಿಕ ಗಮನವನ್ನು ಕೊಡಲು ಶಿಕ್ಷಕನಿಗೆ ಸಾಧ್ಯವಾಗುವದು. ಆಗ ಉಳಿದವರು ತಮ್ಮ ತಮ್ಮ ಪಠ್ಯ ಪತ್ರಗಳಲ್ಲಿ ಶಿಕ್ಷಕನು ಕೊಟ್ಟ ಪ್ರಶ್ನೆಗಳಿಗೆ ಸ್ವಂತ ಬುದ್ಧಿಯನ್ನುಪಯೋಗಿಸಿ ವಿಚಾರಪರಿಪ್ಲುತವಾದ ಉತ್ತರಗಳನ್ನು ಕೊಡಬೇಕು. ಒಂದು ಗುಂಪಿನವರ ವಾಚನ ಮುಗಿದಕೂಡಲೆ ಇನ್ನೊಂದು ಗುಂಪಿನವರನ್ನು ತನ್ನಕಡೆಗೆ ಬರಮಾಡಿ ಕೊಳ್ಳಬೇಕು. ಆಗ ಈ ಮಕ್ಕಳು ತಮ್ಮ ಲೇಖನ ವ್ಯವಸಾಯವನ್ನು ಅಪೂರ್ಣ ಮಾಡಿದ್ದರೂ ಅಡ್ಡಿಯಿಲ್ಲ. ಅವರವರ ವಾಚನ ಮುಗಿದಕೂಡಲೆ ಪುನಃ ಲೇಖನ ವ್ಯವಸಾಯವನ್ನು ಮುಂದೆ ಸಾಗಿಸಲು ಅವರಿಗೆ ಸಾಕಷ್ಟು ಅವಕಾಶ ದೊರೆಯು ವದು. ವಾಚನದಲ್ಲಿ ತೀರ ಹಿಂದುಳಿದ ಮಕ್ಕಳ ಸುಧಾರಣೆಯಾಗುವಂತೆ ಶಿಕ್ಷಕ ನಿಗೆ ಎತ್ತುಗಡೆ ಮಾಡಲು ಅನುವಾಗುವದು. ಮೇಲೆ ಹೇಳಿದಂತೆ ಈ ಅಭ್ಯಸನ ಗಳ ಒಂದೊಂದು ಪ್ರತಿಯು ಪ್ರತ್ಯೇಕವಾಗಿ ಪ್ರತಿಯೊಬ್ಬರ ಕೈಸೇರಬೇಕೆಂಬ ನಿರ್ಬಂಧವಿದ್ದಾಗ್ಯೂ ಕೆಲವು ಸಾಲೆಗಳಲ್ಲಿ ಹೀಗೆ ಮಾಡುವದು ತೀರ ಅಶಕ್ಯವಿರ ಬಹುದು. ಅಂಥ ಸಾಲೆಗಳಲ್ಲಿ ಮಾತ್ರ ಶಿಕ್ಷಕರು ಪ್ರಾರಂಭದಲ್ಲಿ ದೊಡ್ಡ ಪಟಗ ಳನ್ನು ಮಾಡಿ ವರ್ಗದ ಮುಂದೆ ನಕಾಶ-ಚಿತ್ರ-ವಿಷಯಪಟ ಮೊದಲಾದವು ಗಳನ್ನು ತೂಗಹಾಕುವಂತೆ ಇವುಗಳನ್ನೂ ತೂಗಹಾಕಬೇಕು. ಉತ್ತರಗಳನ್ನು ಪ್ರತಿಯೊಬ್ಬ ವಿದ್ಯಾರ್ಥಿಯು ಸ್ವಂತ ಪುಸ್ತಕದಲ್ಲಿಯೇ ಬರೆಯುವಂತೆ ಎಚ್ಚರವಹಿಸ ತಕ್ಕದ್ದು. ಹೀಗೆ ಹೇಳಿದ ಮಾತ್ರಕ್ಕೆ ಸಾಧ್ಯವಿದ್ದಲ್ಲಿ ಕೂಡ ಈ ಸೇರಿಗೆ ಬದ ಲಾವಣೆ ಮಾಡಬೇಕೆಂಬ ಅಭಿಪ್ರಾಯವಲ್ಲ.

ಮೇಲಿನ ವಿವರಣೆಯನ್ನು ಓದಿ ಪಾಶ್ಚಾತ್ಯ-ಪೌರ್ವಾತ್ಯ ಭಾಷೆಗಳಲ್ಲಿ ವ್ಯತ್ಯಾಸ ವಿದ್ದರೂ ಇದೊಂದು ಶೈಕ್ಷಣಿಕ ಪಿಡುಗು ತಮ್ಮ ಮೇಲೆ ಏಕೆ ಜೊರಿಸುವಿರೆಂದು ಕೆಲವರು ಆಕ್ಷೇಪಿಸಬಹುದು. ನಾವು ನಿಂತಲ್ಲಿಯೇ ನಿಂತು ಕೂಪಮಂಡೂಕ ರಾಗದೆ ಹಂಸಕ್ಷೀರನ್ಯಾಯವನ್ನು ಸ್ವೀಕರಿಸುವವರಾಗಬೇಕಲ್ಲವೇ? ಯಾವ ಪದ್ಧತಿ ಯಲ್ಲಿ ಗುಣಗಳಿರುವವೋ ನಮ್ಮ ಸ್ಥಿತಿ-ರೀತಿಗಳಿಗೆ ಯಾವವು ತಕ್ಕವುಗಳಾಗು ವವೋ ಅವುಗಳನ್ನು ಅವಶ್ಯವಾಗಿ ಗ್ರಹಿಸುವ ಔದಾರ್ಯಬುದ್ಧಿಯುಳ್ಳವರಾ ಬೇಕು. ಈ ಲೇಖನ ವ್ಯವಸಾಯಗಳಲ್ಲಿ ಮಕ್ಕಳಿಗೆ ಸ್ವಂತ ವಿಚಾರಕ್ಕೆ ಇದ್ದ ಅವ ಕಾಶವು ಅಷ್ಟಿಷ್ಟೆಂದು ಹೇಳಲಾಗದು. ಅವರು ಮಾಡುವ ಸಕಲ ಪ್ರಯತ್ನಗಳು

ಸವರವೇ ಆಗಿರುವವು. ಲೇಖನವು ನಮ್ಮಲ್ಲಿದ್ದ ಜ್ಞಾನವನ್ನು ನಿಶ್ಚಿತವಾದದ್ದನ್ನು ಕೂಡುತ್ತದೆ. ಎಷ್ಟೋ ಮಕ್ಕಳಿಗೆ ಗೊತ್ತಿದ್ದರೂ ಅವುಗಳನ್ನು ಹೇಳುವಾಗ ತೊಡರು-ಬಡರಾಗಿ ಅನಿಶ್ಚಿತವಾದ ತಿಳಿವಳಿಕೆಯಾಗುವ ಸಂಭವವಿರುವದು. ಈ ರದ್ಧತಿಯ ಲೇಖನವ್ಯವಸಾಯದಿಂದ ಅಂಥ ತಪ್ಪುಗಳು ದೂರಾಗುವವು. ಉದಾ ಹರಣಾರ್ಥವಾಗಿ ನಾವು ಕೊಡುವ ಅಭ್ಯಸನಗಳಿಂದ ಶಬ್ದಸಂಗ್ರಹ, ವಾಕ್ಯರಚನೆ, ಗ್ರಬಂಧ ಮೊದಲಾದವುಗಳನ್ನು ಕುರಿತು ಈ ವ್ಯವಸಾಯವು ಮಕ್ಕಳಿಗೆ ಎಷ್ಟು ಫಲದಾಯಕವಾಗಿರುವದೆಂಬದು ಕಂಡುಬರುವದು.

ಮ್ಯುನಿಸಿಪ್ಯಾಲಿಟಿಗಳಿದ್ದ ದೊಡ್ಡ ದೊಡ್ಡ ಪಟ್ಟಣಗಳ ಪ್ರಾಥಮಿಕ ಸಾಲೆ ಗಳಲ್ಲಿ ಕೂಡ ಒಂದೊಂದು ವರ್ಗದಲ್ಲಿ ೩೦-೩೫ ಹುಡುಗರಿದ್ದು ಅವರೆಲ್ಲರೂ ಒಬ್ಬನೇ ಒಬ್ಬ ಶಿಕ್ಷಕನಿಂದ ಕಲಿಯುತ್ತಿರುವರು. ಇಂಥ ಶಿಕ್ಷಕರು ಮುಂದೆ ನಾವು ಕೊಟ್ಟಿರುವ ಮಾದರಿಯ ಅಭ್ಯಸನಗಳನ್ನು ಪರೀಕ್ಷಿಸಿ ಅವು ಯೋಗ್ಯವೆಂದು ಕಂಡುಬಂದರೆ ತಮ್ಮ ಸಾಲೆಗಳಲ್ಲಿ ಅವನ್ನಾಗಲಿ ಅಂತಹ ಬೇರೆ ಅಭ್ಯಸನಗಳನ್ನಾಗಲಿ ರಚಿಸಿ ತಮ್ಮ ಕೈಯಲ್ಲಿದ್ದ ಮಕ್ಕಳಿಗೆ ಇವುಗಳ ಲಾಭವನ್ನು ಮಾಡಿಕೊಡುವರೆಂದು ನಮ್ಮ ಕೋರಿಕೆ. ಹಳ್ಳಿಗಳಲ್ಲಿದ್ದ ಸಾಲೆಗಳಲ್ಲಿ ಒಂದೇ ಒಂದು ವರ್ಗದಲ್ಲಿ ಇಷ್ಟು ಜನ ಮಕ್ಕಳಿಲ್ಲದಿದ್ದರೂ ಅಲ್ಲಿಯ ಶಿಕ್ಷಕರಿಗೆ ಎರಡು ಮೂರು ಇಯತ್ತೆಗಳನ್ನು ಒಂದೇ ವೇಳೆಗೆ ಕಲಿಸಬೇಕಾಗಿರುವದು. ಒಂದು ವರ್ಗದವರ ಕಡೆಗೆ ವಿಶೇಷ ಲಕ್ಷ್ಯ ಕೊಟ್ಟು ವಿಷಯವನ್ನು ತಿಳಿಸಿಕೊಡುತ್ತಿರುವಾಗ ಇನ್ನೊಂದು ವರ್ಗದವರಿಗೆ ಈ ಅಭ್ಯಸನಗಳನ್ನು ಕೊಡಲು ಅನಾಯಾಸವಾಗಿ ಮಕ್ಕಳು ತಾವೇ ಕಲಿತುಕೊಳ್ಳುವ ಹಾಗೆ ಸಾಲೆಯ ಶಿಸ್ತು ಕಾಯ್ದುಕೊಳ್ಳಲು ಇವು ಒಳ್ಳೆಯ ಸಾಧನವೆಂದು ಹೇಳ ಬಹುದು. ಇದಲ್ಲದೆ ಮಕ್ಕಳು ಮೇಲಿನ ವರ್ಗಕ್ಕೆ ಹೋದಹಾಗೆ ಅವರಿಗೆ ನಿಬಂಧ ವಿಷಯವನ್ನು ಪೆಚ್ಚಾಗಿ ಕಲಿಸತಕ್ಕದ್ದಿರುವದು. ಈ ವಿಷಯಕ್ಕೆ ಬೇಕಾಗುವ ಭದ್ರವಾದ ತಳಹದಿಯನ್ನು ಕೂಡ ಒದಗಿಸಿಕೊಡಬಹುದೆಂದು ನಮಗೆ ತೋರು ತ್ತದೆ. ಶಬ್ದಸಂಗ್ರಹ, ವಾಕ್ಯರಚನೆ, ವಾಕ್ಯಗಳಲ್ಲಿ ಬೇರೆ ಬೇರೆ ಪದವಿನ್ಯಾಸ ಗಳನ್ನು ಕೂಡ ಚೆನ್ನಾಗಿ ಕಲಿಸಬಹುದು.

ನಮ್ಮ ಶಾಲೆಗಳಲ್ಲಿ ಭಾಷಾಪಾಠ ವಾಚನ ಪಾಠಗಳು ಹೇಗೆ ಸಾಗುತ್ತವೆಂಬ ದನ್ನು ಸ್ವಲ್ಪ ವಿಚಾರಮಾಡಿ ನೋಡಿದರೆ ಅದು ಅಪ್ರಾಸಂಗಿಕವಾಗಲಿಕ್ಕಿಲ್ಲೆಂದು ನಮಗೆ ತೋರುತ್ತದೆ. ಮೊದಲು ಶಿಕ್ಷಕನು ಕಥೆ ಹೇಳಿ ಇಲ್ಲವೆ ವಾಚನ ಪಾಠ ವನ್ನು ಓದಿ ತೋರಿಸಿ ಆ ವಿಷಯವನ್ನು ಕುರಿತು ಮಕ್ಕಳ ಮನಸ್ಸಿನಲ್ಲಿ ಆಸ್ಥೆಯನ್ನು ಹುಟ್ಟಿಸಿದ ಬಳಿಕ ಮಕ್ಕಳು ಆ ಪಾಠದ ಮೌನವಾಚನ ಮಾಡುವರು. ಮಕ್ಕಳೇ

ಸ್ವತಃ ಪಾಠದ ವಿಷಯವನ್ನು ಆದಷ್ಟು ಮಟ್ಟಿಗೆ ತಾವೇ ಕಲಿಯಲಿ ಎಂಬುದೇ ಇದರ ಮುಖ್ಯ ಉದ್ದೇಶ. ಬಳಿಕ ಶಿಕ್ಷಕನು ಪ್ರಶ್ನೆಗಳನ್ನು ಮಾಡಿ ಅವರು ಎಷ್ಟರಮಟ್ಟಿಗೆ ತಿಳಿದುಕೊಂಡಿರುವರೆಂಬ ಬಗ್ಗೆ ಪರೀಕ್ಷಿಸಿ ನೋಡುವನು. ಕಠಿಣ ಶಬ್ದಗಳಿದ್ದಲ್ಲಿ ಪ್ರತಿಶಬ್ದಗಳನ್ನು ಜೇಳುವನು. ಇನ್ನು ಕೆಲವು ಸಾಲೆಗಳಲ್ಲಿ ಈ ಶಬ್ದಗಳನ್ನು ಉಪಯೋಗಿಸಿ ವಾಕ್ಯಗಳನ್ನು ಮಾಡಲಿಕ್ಕೆ ಹೇಳುತ್ತಿರುವರು. ವಾಕ್ಯಾರ್ಥ ವಿಷಯಜ್ಞಾನ ಮೊದಲಾದವುಗಳನ್ನು ಶಿಕ್ಷಕನು ಮಾಡಿಕೊಡುವನು. ಪಾಠದ ಸಾರಾಂಶವನ್ನು ಬೇರೆ ಬೇರೆ ಮಕ್ಕಳ ಕಡೆಯಿಂದ ಜೇಳಿಸಿಕೊಳ್ಳುವನು. ಕೊನೆಗೆ ಶಿಕ್ಷಕನ ಮಾದರಿಯ ವಾಚನ ಮಕ್ಕಳ ಸ್ಪಷ್ಟ ವಾಚನಗಳಾಗಿ ಈ ಪಾಠಗಳ ಸಂಪೂರ್ತಿಯಾಗುವದು.

ಆದರೆ ವಾಚನ ವಿಷಯದಲ್ಲಿ ಮಕ್ಕಳು ವಿಚಾರಮಾಡುವದೊಂದು ಮಹತ್ವದ ಅಂಗವಿರುತ್ತದೆಂಬದನ್ನು ನಾವು ಮರೆಯಲಾಗದು. ಅವರಲ್ಲಿ ಈ ವಿಚಾರ ಮಾಡುವ ಚಟವು ಚೆನ್ನಾಗಿ ನೆಲೆಗೊಳ್ಳಬೇಕಾದರೆ ಬೇರೆ ಬೇರೆ ಅಭ್ಯಸನಗಳ ಅವಶ್ಯಕತೆಯು ಹೆಚ್ಚಿರುವದು. ಮಕ್ಕಳು ತಾವೇ ಅರ್ಥವನ್ನು ತಿಳಿದುಕೊಳ್ಳುವದು, ತಮ್ಮ ವಿಚಾರಗಳನ್ನು ತೊಡಕು-ಬಡಕುಗಳಾಗದೆ ಕೇಳುವವರಿಗೆ ಸ್ಪಷ್ಟವಾಗಿ ತಿಳಿಯುವಂತೆ ಹೇಳುವದು, ಇವೆಲ್ಲವುಗಳಲ್ಲಿ ವಿಚಾರ ಕಾರ್ಯವು ಬಹಳಮಟ್ಟಿಗಿರುವದು. ಸದ್ಯದ ಪದ್ಧತಿಯಲ್ಲಿ ಶಿಕ್ಷಕರ ಕಾರ್ಯಭಾಗವೇ ಬಹಳವಿರುವದು. ಮಕ್ಕಳು ಶಾಂತಚಿತ್ತವುಳ್ಳ ಶ್ರೋತೃಮಾತ್ರರಾಗಿರುವರು. ಇಲ್ಲವೆ ಶಿಕ್ಷಕರು ಹೇಳಿ ಕೊಟ್ಟದ್ದನ್ನೇ ಕಂಠಪಾಠ ಮಾಡುವರು. ಅಂದರೆ ಸ್ಮರಣಶಕ್ತಿಯಕಡೆಗೆ ಹೆಚ್ಚು ಗಮನವಿರುವದಲ್ಲದೆ ಮಕ್ಕಳ ಸ್ವಂತ ವಿಚಾರಮಾಡುವ ಅಭ್ಯಾಸದಕಡೆಗೆ ಹೆಚ್ಚು ಅವಕಾಶವಿರುವದಿಲ್ಲ. ಆದ್ದರಿಂದ ಈ ಲೇಖನ ವ್ಯವಸಾಯಗಳ ಪದ್ಧತಿಯು ಹೆಚ್ಚು ಶ್ರೇಯಸ್ಕರವೆಂದು ನಾವು ಜೇಳಲು ಸಾಹಸಮಾಡುತ್ತೇವೆ.

ಮಕ್ಕಳಲ್ಲಿ ಶುದ್ಧವಾದ ವಾಕ್ಯಸರಣಿಯಾಗಲಿಕ್ಕೂ ಅಂಥ ಭಾಷೆಯಲ್ಲಿ ತಮ್ಮ ವಿಚಾರಗಳನ್ನು ವ್ಯಕ್ತಗೊಳಿಸಲಿಕ್ಕೂ ಈಗಿನ ಪದ್ಧತಿಯಲ್ಲಿ ಸಾಕಷ್ಟು ಅವಕಾಶವಿಲ್ಲೆಂದು ನಮ್ಮ ಸವಿನಯಾಭಿಪ್ರಾಯ; ಅಲ್ಲದೆ ಕ್ರಮಿಕ ಪುಸ್ತಕದೊಳಗಿನ ಪಾಠಗಳನ್ನಾಗಲಿ ಕಥೆ-ಕಾದಂಬರಿಗಳನ್ನಾಗಲಿ ತಾವಾಗಿಯೇ ಓದಿದರೆ ಇಲ್ಲವೆ ಓದುವವರನ್ನು ಕೇಳಿದರೆ ಭಾಷೆಯಲ್ಲಿರುವ ವೈಶಿಷ್ಟ್ಯಗಳನ್ನು ಅರಿತುಕೊಳ್ಳಲು ಮಕ್ಕಳಲ್ಲಿ ಬಲವಿರುವದಿಲ್ಲ. ಇಂಥ ಬಲ ಬರಬೇಕಾದರೆ ಓದಿದ ವಿಷಯಗಳು ಹೆಚ್ಚು ದೃಢವಾಗಬೇಕು. ಪಾಠಗಳಲ್ಲಿಯ ಭಾಷೆಯು ಮಕ್ಕಳ ಭಾಷೆಯಾಗಬೇಕು. ಬೇರೆ ಬೇರೆ ಲೇಖನ ವ್ಯವಸಾಯಗಳ ರೂಢಿಯಾದರೆ ಅವರಲ್ಲಿ ಶಬ್ದಸಂಗ್ರಹವಾಗಲಿ

ವಾಕ್ಯರಚನಾ ಸಾಮರ್ಥ್ಯವಾಗಲಿ ನೆಲೆಗೊಳ್ಳಬಹುದು. ಕನ್ನಡ ಭಾಷೆಯಲ್ಲಿ ಒಂದೇ ಒಂದು ಶಬ್ದವು ಅನೇಕಾರ್ಥಗಳನ್ನು ಸೂಚಿಸುವದು. ಉದಾ– ಜೊಳೆ, ಬೀಸು, ಸೇರು, ಇತ್ಯಾದಿ. ಒಂದೇ ಅರ್ಥವನ್ನು ಅನೇಕ ಶಬ್ದಗಳು ಹೇಳುವವು. ಉದಾ - ಗುಡಿಸಲು, ಕೊಂಪೆ, ಝೋಪಡಿ, ಮನೆ. ಇದೇ ಮೇರೆಗೆ ವಿರುದ್ಧಾರ್ಥ ಗಳನ್ನು ಹೇಳುವ ಅನೇಕ ಶಬ್ದಗಳಿರುವವು. ಅಂದರೆ ಏಕಾರ್ಥ, ಅನೇಕಾರ್ಥ, ವಿರುದ್ಧಾರ್ಥಗಳನ್ನು ಹೇಳುವ ಶಬ್ದಗಳ ಕೊರತೆ ಏನೂ ಇರುವದಿಲ್ಲ. ಬೇರೆ ಬೇರೆ ಅಭ್ಯಸನಗಳಿಂದ ಇಂಥ ಶಬ್ದಸಂಗ್ರಹ ಮಾಡಿಕೊಡಬೇಕು. ಮೇಲಿನ ವರ್ಗದ ಮಕ್ಕಳಿಗೆ ವಾಕ್ಯಗಳ ಬೇರೆ ಬೇರೆ ಭಾಗಗಳನ್ನು ಮಾಡುವಂಥ ಹಾಗು ಸಣ್ಣ ಸಣ್ಣ ವಾಕ್ಯಗಳನ್ನು ಕೊಟ್ಟಿರಲು ಅವುಗಳನ್ನು ಜೋಡಿಸುವಂಥ ಅನೇಕ ಅಭ್ಯಸನಗಳ ರೂಢಿ ಮಾಡಿಸಬೇಕು. ಆಗ ವ್ಯಾಕರಣ ನೇಮಗಳನ್ನೂ ಆವುಗಳ ಲ್ಲಿಯ ಪಾರಿಭಾಷಿಕ ಹೆಸರುಗಳನ್ನೂ ಹೇಳಿ ಕೊಡಬಾರದು. ರೂಢಿಯಿಂದ ಆ ಪ್ರಯೋಗಗಳು ಅವರಿಗೆ ತಾವಾಗಿಯೇ ಬರಬೇಕೆಂಬುದೇ ನಮ್ಮ ಉದ್ದೇಶವಿರುವ ದಲ್ಲದೆ ಆ ಹೆಸರುಗಳ ಅಭ್ಯಾಸವು ನಮ್ಮ ಪಾಠಗಳ ಗುರಿಯಿರುವದಿಲ್ಲ.

ಈ ಅಭ್ಯಸನಗಳನ್ನು ಹುಡುಗರು ಬಹಳ ಆಸ್ಥೆಯಿಂದಲೂ ಪ್ರೀತಿಯಿಂದಲೂ ಮಾಡುವರೆಂದು ನಾವು ವಿಶ್ವಾಸದಿಂದಲೂ ಅನುಭವದಿಂದಲೂ ಹೇಳುತ್ತೇವೆ. ಯಾವ ವಿಷಯವನ್ನು ಕುರಿತು ಮಕ್ಕಳ ಮನಸ್ಸು ಹಾತೊರೆಯುವದೋ ಅಂಥ ಪ್ರಸಂಗಗಳನ್ನು ಒದಗಿಸಿಕೊಡುವದು ಶಿಕ್ಷಕರ ಆದ್ಯಕರ್ತವ್ಯವಾಗಿರುವದು. ಇನ್ನು ಪ್ರತಿಯೊಂದು ಇಯತ್ತ್ರಿಗೆ ಎಂಥ ಅಭ್ಯಸನಗಳನ್ನು ಯೋಜಿಸಬಹುದೆಂಬ ದಕ್ಕೆ ಕೆಲವು ಮಾದರಿಯ ಅಭ್ಯಸನಗಳನ್ನು ಕೊಡುವೆವು. ಶಿಕ್ಷಕರು ಆಯಾ ಇಯತ್ತ್ರಿಗೆ ಇಂಥವುಗಳನ್ನು ಉಪಯೋಗಿಸಬಹುದು. ಈ ಅಭ್ಯಸನಗಳು ವಿವಿಧ ರೂಪದವುಗಳಿರಬೇಕು. ಮಕ್ಕಳ ಯೋಗ್ಯತೆಗೆ ಮೀರಿರಕೂಡದು. ಕ್ರಮವಾಗಿ ಅವರಲ್ಲಿ ಭಾಷೆಯ ಬಗ್ಗೆ ವಿಚಾರಗಳನ್ನು ಹುಟ್ಟಿಸುವಂತಹವಿರಬೇಕು.

—— o ——

ಅಭ್ಯಸನಗಳು

೧ನೆಯ ಇಯತ್ತೆ

ಹೆಸರುಗಳು

ಕೆಳಗೆ ಕೇಳಿದ ಹೆಸರುಗಳನ್ನು ಕೊಡಿರಿ:—

೧. ನಿನ್ನ ಹೆಸರು.
೨. ಒಂದು ದೊಡ್ಡ ಪಟ್ಟಣದ ಹೆಸರು.
೩. ಒಂದು ಸಾಲೆಯ ಹೆಸರು.
೪. ಒಂದು ಬಳ್ಳಿಯ ಹೆಸರು.
೫. ಒಬ್ಬ ಹುಡುಗೆಯ ಹೆಸರು.
೬. ಒಂದು ಹೂಗಿಡದ ಹೆಸರು.
೭. ಒಂದು ಬೀದಿಯ ಹೆಸರು.
೮. ಒಂದು ಗುಡಿಯ ಹೆಸರು.
೯. ಒಂದು ಪೇಟೆಯ ಹೆಸರು.
೧೦. ಒಂದು ಗುಡ್ಡದ ಹೆಸರು.
೧೧. ಒಂದು ಹೊಳೆಯ ಹೆಸರು.
೧೨. ಒಂದು ವರ್ತಮಾನಪತ್ರದ ಹೆಸರು.
೧೩. ಒಂದು ಮಾಸಿಕ ಪುಸ್ತಕದ ಹೆಸರು.
೧೪. ಒಂದು ಔಷಧದ ಹೆಸರು.
೧೫. ಮೈಯ ಒಂದು ಭಾಗದ ಹೆಸರು.

ಟೀಪು:—ಇದರಲ್ಲಿ ಕೆಲವು ಹಳ್ಳಿಯಮಕ್ಕಳಿಗೆ ಗೊತ್ತಿರಲಾರವು. ಅಂಥವುಗಳ ಬದಲು ಬೇರೆ ಹೆಸರುಗಳನ್ನು ಶಿಕ್ಷಕರು ಸೇರಿಸಿಕೊಳ್ಳಬಹುದು. ಇಂಥ ಅಭ್ಯಸನಗಳಿಂದ ಮಕ್ಕಳಲ್ಲಿ ವ್ಯವಹಾರಜ್ಞಾನವು ಬೆಳೆಯುವದು.

೨ನೆಯ ಇಯತ್ತೆ

ವಿರುದ್ಧಾರ್ಥ ಶಬ್ದಗಳು

ಕೆಳಗೆ ಎರಡು ಕೋಷ್ಟಕಗಳಲ್ಲಿ ಒಂದಕ್ಕೊಂದು ವಿರುದ್ಧಾರ್ಥವನ್ನು ಸೂಚಿಸುವ ಶಬ್ದಗಳು ಕೊಟ್ಟವೆ. ಅವುಗಳನ್ನು ಗುರುತುಹಿಡಿದು ಕೆಳಗೆ ತೋರಿಸಿದಂತೆ ಒಂದರೆದುರಿಗೆ ಒಂದನ್ನು ಬರೆಯಿರಿ.

I ಸಣ್ಣ, ಗಿಡ್ಡ, ಧನಿಕ, ಅಶಕ್ತ, ಒಳ್ಳೆಯ, ಕಿರಿಯ, ಹಗುರ

II ಹಿರಿಯ, ಸಶಕ್ತ, ದೊಡ್ಡ, ಎತ್ತರ, ಜಡ, ಕೆಟ್ಟ, ದರಿದ್ರ

	ಉತ್ತರ
೧. ಜಾಣ	— ದಡ್ಡ.
೨.	
೩.	

೨ನೆಯ ಇಯತ್ತೆ:—

ಒಂದೇ ಅರ್ಥವನ್ನು ಹೇಳುವ ಶಬ್ದಗಳು

ಒಂದೇ ಅರ್ಥವನ್ನು ಹೇಳುವ ಶಬ್ದಗಳು ಇಲ್ಲಿ ಎರಡೂ ಕೋಷ್ಟಕಗಳಲ್ಲಿ ಕೊಟ್ಟಿವೆ. ಅವುಗಳನ್ನು ಗೊತ್ತುಹಿಡಿದು ಕೆಳಗೆ ತೋರಿಸಿದ ಮೇರೆಗೆ ಒಂದ ೞದುರಿಗೆ ಮತ್ತೊಂದನ್ನು ಬರೆಯಿರಿ.

I

ಚಿಕ್ಕ	ತಪ್ಪು	ಹಸುಗೂಸು
ಬಾಲಕ	ಪ್ರೀತಿ	ಬೀದಿ
ಬೇಗನೆ	ಪಶು	ಬೇನೆ
ಮಾತಾಡು	ಸರಿ	ತುಸು.

II

ಅಪರಾಧ	ಪುಟ್ಟ	ಕೂಡಲೆ
ಮಮತೆ	ಓಣಿ	ದನ
ಎಳೆಮಗು	ಹುಡುಗ	ಸೈ
ರೋಗ	ನುಡಿ	ಸ್ವಲ್ಪ

ಉತ್ತರ

ಚಿಕ್ಕ ... ಪುಟ್ಟ

೩ನೆಯ ಇಯತ್ತೆ:—

ವಸ್ತುಗಳ ಹೆಸರುಗಳು

೧. ಚಿನ್ನ, ತಾಮ್ರ, ಕಟ್ಟಿಗೆ, ನಿಕೆಲ್, ಬೆಳ್ಳಿ, ಕಾಗದ, ಕಬ್ಬಿಣ, ಉಕ್ಕು, ಸಣ್ಣಿ, ಕಾಜು, ರೇಸಿಮೆ, ರಬ್ಬರ, ಕಲ್ಲು, ಚರ್ಮ, ಅರಿವೆ.

ಇವುಗಳಿಂದ ಬೇರೆ ಬೇರೆ ವಸ್ತುಗಳನ್ನು ಮಾಡುತ್ತಾರೆ. ಇವುಗಳಲ್ಲಿ ಯಾವ ವಸ್ತುವಿನಿಂದ ಕೆಳಗಿನವು ಆಗಿವೆ ಎಂಬದನ್ನು ಹೇಳಿರಿ:—

೧.	ಟಾಕಿನ ತುದಿಗಳನ್ನು	...	ನಿಂದ	ಮಾಡುತ್ತಾರೆ.
೨.	ಕಂಬಳಿಗಳನ್ನು	...	ಯಿಂದ	ಮಾಡುತ್ತಾರೆ.
೩.	ಆಣೆಯ ನಾಣ್ಯಗಳನ್ನು	...	ನಿಂದ	ಮಾಡುತ್ತಾರೆ.
೪.	ರೂಪಾಯಿಯನ್ನು	...	ಯಿಂದ	ಮಾಡುತ್ತಾರೆ.
೫.	ಪಾಪೋಸಗಳನ್ನು	...	ದಿಂದ	ಮಾಡುತ್ತಾರೆ.
೬.	ಪುಸ್ತಕವನ್ನು	..	ದಿಂದ	ಮಾಡುತ್ತಾರೆ.

೭.	ಕುರ್ಚಿ ಬಾಕುಗಳನ್ನು	...	ಯಿಂದ	ಮಾಡುತ್ತಾರೆ.
೮.	ದೀವಿಗೆಯ ಕೊಳವೆಗಳನ್ನು	...	ನಿಂದ	ಮಾಡುತ್ತಾರೆ.
೯.	ಅಂಗಿಗಳನ್ನು	...	ಯಿಂದ	ಹೊಲೆಯುತ್ತಾರೆ
೧೦.	ಮರಹಗಳನ್ನು	...	ದಿಂದ	ಮಾಡುತ್ತಾರೆ.
೧೧.	ಕೋಟೆಗಳನ್ನು	...	ನಿಂದ	ಕಟ್ಟುತ್ತಾರೆ.
೧೨.	ಮೋಟಾರಬಂಡಿಯ ಹಲಿಗಳನ್ನು	...	ದಿಂದ	ಮಾಡುತ್ತಾರೆ.
೧೩.	ತಂತಿಯ ಶಿಂಬಿಯನ್ನು	...	ದಿಂದ	ಮಾಡುತ್ತಾರೆ.
೧೪.	ಪೀತಾಂಬರಗಳನ್ನು	...	ಯಿಂದ	ನೇಯ್ಯುತ್ತಾರೆ.
೧೫.	ಕೊಡ ತಪ್ಪೇಲಿಗಳನ್ನು	...	ದಿಂದ	ಮಾಡುತ್ತಾರೆ.

೩ನೆಯ ಇಯತ್ತೆ:—

ಒಂದನೆಯ ಕೋಷ್ಟಕದಲ್ಲಿ ಕೆಲಸಗಾರರ ಹೆಸರುಗಳೂ ಎರಡನೆಯ ಕೋಷ್ಟಕದಲ್ಲಿ ಅವರು ಉಪಯೋಗಿಸುವ ಉಪಕರಣಗಳ ಹೆಸರುಗಳೂ ಇರುತ್ತವೆ ಯಾರು ಯಾರು ಯಾವ ಯಾವ ಉಪಕರಣಗಳಿಂದ ಕೆಲಸಗಳನ್ನು ಮಾಡುತ್ತಾರೆಂಬದನ್ನು ಜೋಳಿರಿ. ಪ್ರತಿಯೊಬ್ಬರ ದೆಸೆಯಿಂದ ಒಂದೊಂದು ವಾಕ್ಯವನ್ನು ರಚಿಸಿರಿ:—

I ಕೆಲಸಗಾರರು:— ಕಮತಿಗ, ಬಲಿಗಾರ, ಅಡಿಗೆಯವ, ಬಡಿಗ, ಚಿತ್ರಗಾರ, ಸಿಂಪಿಗ, ಕಾರಕೂನ, ತೋಟಿಗ, ಶಿಕ್ಷಕ, ಅಗಸ, ವೈದ್ಯ (ಡಾಕ್ಟರ) ಬಂಡೀ ಹೊಡೆಯುವವ.

II ಸಬಕಾರ, ಸೇಗಿಲು, ಕರಗಸ, ಬಾರಿಕೋಲು, ಜ್ವರಮಾಪಯಂತ್ರ, ಸೂಜಿ, ಸವಟು, ಸಲಕೆ, ಬಲೆ, ಕುಂಚ, ಪುಸ್ತಕ, ಲೆಕ್ಕಣಿಕೆ.

ಮೂದರಿಯ ಉತ್ತರ

೧. ಆ ಬಡಿಗನು ಉದ್ದನ್ನ ಕರಗಸದಿಂದ ಹಲಿಗೆಗಳನ್ನು ಕೊರೆಯುತ್ತಾನೆ

೪ನೆಯ ಇಯತ್ತೆ:—

ಮತ್ತು, ಹಾಗು, ಆದರೆ ಇವುಗಳ ಉಪಯೋಗ:— ಗೆರೆ ಹಾಕಿದ ಇವುಗಳಲ್ಲಿ ಒಂದನ್ನು ಹಾಕಿ ವಾಕ್ಯ ಪೂರ್ಣಮಾಡಿರಿ.

೧. ಅವನು ಜಾಣನು;— ಆಲಸ್ಯವುಳ್ಳವನು.

೨. ಮಕ್ಕಳಿಗೆ ಆಡುವದು— ಹಾಡುವದು ಸೇರುತ್ತವೆ.

೩. ರಾಮನು ಲಗುಬಗೆಯಿಂದ ಸಾಲೆಗೆ ಹೋದನು— ಜೊತ್ತಿಗೆ ಸಯಾಗಿ ಹೋಗಲು ಆಗಲಿಲ

೪. ಮುಲ್ಲನ ಸೋದರಮಾವನು ಅವನಿಗಾಗಿ ವರ್ಗದ ಪುಸ್ತಕಗಳನ್ನು— ಕಥೆಯ ಪುಸ್ತಕಗಳನ್ನು ಕಳುಹಿಸಿಕೊಟ್ಟನು.

೫. ಶಾರದೆಗೆ ವಿದ್ಯಾಭ್ಯಾಸದಲ್ಲಿ ಅಭಿರುಚಿ ವಿಶೇಷ— ಮನೆಗೆಲಸದಲ್ಲಿ ಅವಳು ಯಾವಾಗಲೂ ಮುಂದಿರುವಳು;— ರಾಧೆಯು ಹಾಗಿಲ್ಲ.

೬. ಭೀಮಾ, ಮನೆಗೆ ಹೋಗು— ನನ್ನ ಪೆಟ್ಟಿಗೆಯ ಮೇಲಿಟ್ಟ ಹಣದ ಚೀಲವನ್ನು ತೆಗೆದುಕೊಂಡು ಬಾ.

೭. ಎರೆನಾಡಿನಲ್ಲಿ ಹತ್ತಿ– ಗೋದಿ ಧಾರಾಳವಾಗಿ ಬೆಳೆಯುತ್ತವೆ; — ಸಲ್ಲು ಕಬ್ಬುಗಳು ಬೆಳೆಯುವದಿಲ್ಲ.

೮. ಸಾಲೆಯಲ್ಲಿ ಮಕ್ಕಳು ಓದು–ಬರಹಗಳನ್ನು ಕಲಿಯುತ್ತಾರೆ— ತಮ್ಮ ಶಾರೀರಿಕ ವ್ಯಾಯಾಮಗಳ ಕಡೆಗೆ ಅಷ್ಟು ಲಕ್ಷ್ಯಕೊಡುವದಿಲ್ಲ.

೯. ಉಷ್ಣಕಟಿಬಂಧದಲ್ಲಿ ಬಿಸಿಲು ಬಹಳ;— ಮಳೆ ಬಹಳ.

೧೦. ರಾವಣನು ಮಾದೇವರ ಬಿಲ್ಲನ್ನು ಎತ್ತಿದನು;— ಅದನ್ನು ಮಣಿಸುವದು ಅವನಿಂದ ಆಗಲಿಲ್ಲ.

೪ನೆಯ ಇಯತ್ತೆ:—

ಇಲ್ಲಿ ಕೆಳಗೆ ಕೆಲವು ವಾಕ್ಯಗಳನ್ನು ಒಡೆದು ಎರಡೆರಡು ಭಾಗಗಳನ್ನಾಗಿ ಮಾಡಿರುವೆವು. ಒಂದನೆಯ ಭಾಗದಲ್ಲಿ ' ಯಾರವಿಷಯವಾಗಿ ಹೇಳಿದೆ ' ಎಂದೂ ಎರಡನೆಯ ಭಾಗದಲ್ಲಿ ಅವರ ವಿಷಯವಾಗಿ ' ಏನು ಹೇಳಿದೆ ' ಎಂದೂ ಹೇಳಿರುವೆವು. ಅವುಗಳನ್ನು ಸರಿಯಾಗಿ ಕಂಡುಹಿಡಿದು ವಾಕ್ಯಗಳನ್ನು ಜೋಡಿಸಿ ಬರೆಯಿರಿ.

I	II
೧ ಗುಣವಂತರಾದ ಬಾಲಕರು	ಪಶ್ಚಿಮದಿಕ್ಕಿನಲ್ಲಿ ಮುಳುಗುತ್ತಾನೆ.
೨ ಅಂಚೆಕಟ್ಟೆಯವನು	ಕಟ್ಟೆಗೆಯ ತೊಲೆಗಳನ್ನು ಒಯ್ಯುತ್ತವೆ.
೩ ಸಿಂಹಗಳು	ತೋಟದಲ್ಲಿ ಬೆಳೆಯುತ್ತವೆ.
೪ ಪೋಲೀಸ ಸೀಪಾಯರು	ಉಗಿಬಂಡಿಯಲ್ಲಿ ಪ್ರವಾಸಮಾಡುತ್ತಾರೆ.
೫ ಸೂರ್ಯನು	ಇರುಳೆಲ್ಲ ಕೇರಿ ಕೇರಿಗಳಲ್ಲಿ ತಿರುಗಿ ನಮ್ಮ ಆಸ್ತಿ, ಪ್ರಾಣಗಳನ್ನು ರಕ್ಷಿಸುತ್ತಾರೆ.

೬ ಶಿಕ್ಷಕರು	ಒಳ್ಳೇ ಸುಂದರವಾದ ಪಟ್ಟಣವು,
೭ ಆನೆಗಳು	ಶಾಲೆಯಲ್ಲಿ ವಿದ್ಯಾಬುದ್ಧಿಗಳನ್ನು
	ಕಲಿಸುತ್ತಾರೆ.
೮ ಚಂದವಾದ ಹೂಗಳು	ನಮ್ಮ ನಮ್ಮ ಪತ್ರಗಳನ್ನು ತಂದು
	ಕೊಡುವನು.
೯ ದಾರಿಗರು	ತಮ್ಮ ತಾಯಿ-ತಂದೆಗಳ ಮಾತುಗ
	ಳನ್ನು ಪಾಲಿಸುತ್ತಾರೆ.
೧೦ ಮುಂಬಯಿಯು	ಅರಣ್ಯಗಳಲ್ಲಿ ಗವಿಗಳಲ್ಲಿರುವವು.

ಮಾದರಿಯ ಉತ್ತರ

೧. ಸೂರ್ಯನು ಪಶ್ಚಿಮ ದಿಕ್ಕಿನಲ್ಲಿ ಮುಳುಗುತ್ತಾನೆ.

ಮಾನಸಶಾಸ್ತ್ರ

ನಿಗಮನ ವಿಗಮನ ಪದ್ಧತಿಗಳಲ್ಲಿ ಕಂಡುಬರುವ ವ್ಯತ್ಯಾಸಗಳು.

ನಿಗಮನ ಅನುಮಾನದಲ್ಲಿ ವಿಚಾರಶಕ್ತಿಯು ಏರುತ್ತ ಹೋಗುವದು. ಅದರಿಂದ ಮೆಟ್ಟಿ ಮೆಟ್ಟಿಗೆ ಹೊಸ ಜ್ಞಾನವಾಗಹತ್ತಿ ವ್ಯಕ್ತಿ ವಿಷಯಕ ಜ್ಞಾನದಿಂದ ಸಾಮಾನ್ಯ ಜ್ಞಾನವೂ, ವ್ಯಾಖ್ಯೆಗಳೂ, ಸಿದ್ಧಾಂತಗಳೂ, ನಿಯಮಗಳೂ ಹೊಸ ಹೊಸ ಶೋಧಗಳೂ ನಿಷ್ಪನ್ನವಾಗುವವು. ಶಿಕ್ಷಣ ಸಂಬಂಧದಿಂದ ನಿಗಮನ ಪದ್ಧತಿಯು ಉತ್ಕೃಷ್ಟವಾದದ್ದು ಆದರೆ ವಿದ್ಯಾರ್ಥಿಗಳು ಪ್ರತ್ಯಕ್ಷ ನಿರೀಕ್ಷಣ ಹಾಗು ಪ್ರಯೋಗಗಳ ಸಹಾಯದಿಂದ ಹೊಸ ಹೊಸ ಜ್ಞಾನಗಳನ್ನು ಮಾಡಿಕೊಳ್ಳಬೇಕಾಗುವದರಿಂದ ಇದಕ್ಕೆ ಕಾಲಾವಧಿಯು ಬೇಕು. ಇದರಲ್ಲಿ ಗೊತ್ತಿದ್ದ ಸಂಗತಗಳಿಂದ ಗೊತ್ತಿಲ್ಲದ ಸಂಗತಿಗಳಿಗೆ ಹೋಗುವ ಕಾರಣ ಇದು ಸ್ವಾಭಾವಿಕ ಪದ್ಧತಿ ಇದ್ದು ಅದರಿಂದ ವಿದ್ಯಾರ್ಥಿಗಳಲ್ಲಿ ಸಾಮಾನ್ಯ ಜ್ಞಾನ ಬೋಧೆ ಅನುಮಾನ ಮೊದಲಾದ ಶಕ್ತಿಗಳು ಕ್ರಮಶಃ ವಿಕಾಸ ಹೊಂದುವವು. ಕಲಿತದ್ದು ದೃಢವಾಗಿ ನಿಲ್ಲುವದು. ಪ್ರಸಂಗಬಂದಾಗ ವಿದ್ಯಾರ್ಥಿಗಳಿಗೆ ಆ ಜ್ಞಾನದ ಉಪಯೋಗವಾಗುವದು. ಅದರಿಂದ ವಿದ್ಯಾರ್ಥಿಗಳು ಸ್ವಾವಲಂಬಿಗಳಾಗುವರು.

ವಿಗಮನ ಅನುಮಾನದಲ್ಲಿ ವಿಚಾರದ ಗತಿಯು ಮೇಲಿನಿಂದ ಕೆಳಗೆ ಇಳಿಯುತ್ತ ಹೋಗುವದು. ಆದ್ದರಿಂದ ವಿದ್ಯಾರ್ಥಿಗಳ ವಿಚಾರವು ಸಿದ್ಧಾಂತದಿಂದ ಇಲ್ಲವೆ ನಿಯ

ಮಗಳಿಂದ ವ್ಯಕ್ತಿಗಳ ಕಡೆಗೆ ಹೋಗುವದು. ಹೀಗೆ ಮಾಡುವದರಿಂದ ಅವರಿಗೆ ಹೊಸ ಜ್ಞಾನವಾಗದೆ ಮಾಡಿಕೊಂಡ ಜ್ಞಾನವು ನಿಜವೆಂದು ವ್ಯಕ್ತವಾಗುವದು. ಹಾಗು ನಿಯಮ ಸಿದ್ಧಾಂತ ಮೊದಲಾದವುಗಳು ಗಟ್ಟಿಯಾಗಿ ಅವರ ಮನಸ್ಸಿನಲ್ಲಿ ಉಳಿಯುವವು. ವಿಗಮನ ಪದ್ಧತಿಯು ಪ್ರಬುದ್ಧ ವಿದ್ಯಾರ್ಥಿಗಳ ಶಿಕ್ಷಣಕ್ಕೆ ತಕ್ಕದ್ದು. ಇದರಿಂದ ಅಂಥ ವಿದ್ಯಾರ್ಥಿಗಳು ಎರಡನೇಯವರ ಅನುಭವವನ್ನು ತಮ್ಮ ಅನುಭವಕ್ಕೆ ಬಹುಬೇಗ ಹೊಂದಿಸಿಕೊಳ್ಳುವರು. ಆದರೂ ಶಿಕ್ಷಣಶಾಸ್ತ್ರದಂತೆ ಇದು ಸ್ವಾಭಾವಿಕ ಪದ್ಧತಿಯಾಗಲಾರದು. ಯಾಕಂದರೆ ಇದರಲ್ಲಿ ವಿದ್ಯಾರ್ಥಿಗಳು ಗೊತ್ತಿಲ್ಲದ ಸಂಗತಿಗಳಿಂದ ಗೊತ್ತಿದ್ದ ಸಂಗತಿಗೆ ಹೋಗಬೇಕಾಗುವದು. ಎಷ್ಟೋಸಾರಿ ಈ ಪದ್ಧತಿಯಿಂದ ವಿದ್ಯಾರ್ಥಿಗಳಿಗೆ ಶಾಬ್ದಿಕ ಜ್ಞಾನವಾಗುವದು ಹಾಗು ಅವರು ಪರಾವಲಂಬಿಗಳಾಗುವರು.

ಸಾದೃಶ್ಯ ಅನುಮಾನ:— ಎರಡು ವಸ್ತುಗಳು ಬಹ್ವಂಶದಿಂದ ಒಂದನ್ನೊಂದು ಹೋಲುತ್ತಿದ್ದಾಗ ಅವುಗಳಲ್ಲಿ ಒಂದು ವಸ್ತುವಿನ ವಿಷಯವಾಗಿ ಸ್ಥಾಪಿಸಿದ ಸಿದ್ಧಾಂತವು ನಿಜವೆಂದು ಕಂಡುಹಿಡಿದು ಅದೇ ಸಿದ್ಧಾಂತವು ಆ ವಸ್ತುವನ್ನು ಹೋಲುವ ಬೇರೊಂದು ವಸ್ತುವಿನ ಸಂಬಂಧದಿಂದ ನಿಜವಾಗಬಹುದೆಂದು ತರ್ಕಿಸುವದೇ ಸಾದೃಶ್ಯ ಅನುಮಾನವು. ಜ್ಯೋತಿಷ ಶಾಸ್ತ್ರ, ವೇದಾಂತ ಮೊದಲಾದ ಶಾಸ್ತ್ರಗಳಲ್ಲಿ ಈ ತರದ ಅನುಮಾನಗಳು ತುಂಬಿರುವವು. ಸೂರ್ಯಮಾಲೆಯಲ್ಲಿ ಪೃಥ್ವಿಯು ಒಂದು ಗ್ರಹವಾಗಿದ್ದು ಅದರ ಪ್ರಾಕೃತಿಕ ಸ್ವರೂಪ ಸ್ಥಿತಿ ಮೊದಲಾದವು ಪ್ರಾಣಿ ವನಸ್ಪತಿಗಳ ಇರುವಿಕೆಗೆ ಅನುಕೂಲವಾಗಿರುವವು. ಮಂಗಳನು ಸೂರ್ಯಮಾಲೆಯ ಒಂದು ಗ್ರಹವಿದ್ದು ಅದರ ಪ್ರಾಕೃತಿಕ ಸ್ವರೂಪ ಹಾಗು ಸ್ಥಿತಿಯು ಪೃಥ್ವಿಯ ಪ್ರಾಕೃತಿಕ ಸ್ವರೂಪ ಹಾಗು ಸ್ಥಿತಿಯಂತೆ ಇರುವದರಿಂದ ಮಂಗಳನ ಮೇಲೆ ಪ್ರಾಣಿ ವನಸ್ಪತಿಗಳು ಇರಬಹುದೆಂದು ಮಾಡುವ ಅನುಮಾನವು ಸಾದೃಶ್ಯ ಅನುಮಾನವು. ದೇವರ ಸ್ವರೂಪವು ಮನುಷ್ಯನ ಸ್ವರೂಪದಂತಿರುವದೆಂದು ಭಾವಿಸಿದರೆ ಮನುಷ್ಯನ ಆಹಾರ ವಿಹಾರಗಳು ದೇವರಿಗೂ ಸಂಬಂಧಿಸಲ್ಪಡುವದೆಂಬುದು ಸಾದೃಶ್ಯ ಅನುಮಾನವು.

ಅನುಮಾನಶಕ್ತಿಯ ವಿಕಾಸವು:— ಸಣ್ಣ ಹುಡುಗರಲ್ಲಿ ಅನುಮಾನ ಶಕ್ತಿಯ ಅಂಕುರವು ತೋರಿದರೂ ಅವರ ಅನುಮಾನಗಳು ಸಂಕುಚಿತವಾದ ಅನುಭವದ ಮೂಲಕ ದೋಷಯುಕ್ತವಾಗುವವು. ನಿಜವಾದ ಅನುಮಾನಗಳನ್ನು ಮಾಡಿಕೊಳ್ಳುವ ಶಕ್ತಿಯ ಪ್ರಾರಂಭವು ಹುಡುಗರು ೧೫ ವರ್ಷದವರಾದಮೇಲೆ ಆಗ ಹತ್ತುವದು. ಮುಂದೆ ಅವರಿಗೆ ದೊರೆತ ತಕ್ಕ ಶಿಕ್ಷಣಕ್ರಮದಲ್ಲಿ ನಿಗಮನ ವಿಗಮನ ಎರಡೂ ಪದ್ಧತಿಗಳ ಮಿಶ್ರಣ ಇರಬೇಕಾಗುವದು. ವಿಚಾರಶಕ್ತಿಯ ಪರಮಾವಧಿಯ ವಿಕಾಸವು ಶಿಕ್ಷಣದ ವ್ಯಾಪ್ತಿಯನ್ನು ಅವಲಂಬಿಸಿರುವದರಿಂದ ಶಿಕ್ಷಣವು ಬೆಳೆಯುತ್ತ ಹೋದಂತೆ ವಿಚಾರ

ಶಕ್ತಿಯು ಬೆಳೆಯುತ್ತ ಹೋಗುವದು. ನೈಸರ್ಗಿಕ ಕಾರಣದಿಂದ ನ್ಯೂಟನ್ನನಂಥ ವ್ಯಕ್ತಿಗಳಲ್ಲಿ ಸ್ವಭಾವತಃ ನಿಗಮನ ಅನುಮಾನಶಕ್ತಿಯು ವಿಶೇಷ ಪ್ರಬಲವಾಗಿರುವದು. ಹಾಗು ಯುಕ್ಲೀಡನಂಥ ಗಣಿತ ಶಾಸ್ತ್ರಜ್ಞನಲ್ಲಿ ವಿಗಮನ ಅನುಮಾನ ಶಕ್ತಿಯು ಸ್ವಭಾವತಃ ಪ್ರಬಲವಾಗಿರುವದು.

ನಿಗಮನ ಪದ್ಧತಿಯಿಂದ ಕಲಿಸತಕ್ಕ ವಿಷಯಗಳು

ವನಸ್ಪತಿಶಾಸ್ತ್ರ (ಪ್ರಕೃತಿವಿಮರ್ಶೆ) ರಸಾಯನ ಶಾಸ್ತ್ರ, ಶಾರೀರಿಕ ಶಾಸ್ತ್ರ.

ವಿಗಮನ ಪದ್ಧತಿಯಿಂದ ಕಲಿಸತಕ್ಕ ವಿಷಯಗಳು:—

ಗಣಿತ ಶಾಸ್ತ್ರ ವ್ಯಾಕರಣ ಶಾಸ್ತ್ರ.

ಶಿಕ್ಷಣದಲ್ಲಿ ಶಿಕ್ಷಕನ ಕರ್ತವ್ಯವು ವಿದ್ಯಾರ್ಥಿಗಳ ಎಲ್ಲ ಮಾನಸಿಕ ಶಕ್ತಿಗಳು ವಿಕಾಸವಾಗುವಂತೆ ಮಾಡುವದಿರುವದರಿಂದ ವಿದ್ಯಾರ್ಥಿಗಳ ವಯೋಮಾನವನ್ನು ನೋಡಿಕೊಂಡು ಗಣಿತ ಮೊದಲಾದ ವಿಷಯಗಳನ್ನು ಸಹ ಪ್ರತ್ಯಕ್ಷ ವಸ್ತುಗಳ ಸಹಾಯದಿಂದ ಕಲಿಸತಕ್ಕದ್ದು.

ವಿಕಾರ

ಇಲ್ಲಿಯವರೆಗೆ ಬೌದ್ಧಿಕ ವ್ಯಾಪಾರಗಳಿಗೆ ಸಂಬಂಧಪಟ್ಟ ಮನೋವ್ಯಾಪಾರಗಳ ವಿವೇಚನೆಯಾಯಿತು. ಇನ್ನು ವಿಕಾರಗಳ ಉದಯವೂ ವಿಕಾಸವೂ ಹ್ಯಾಗಾಗುತ್ತ ವೆಂಬದನ್ನು ಕುರಿತು ವಿಚಾರಿಸುವ.

ನಮ್ಮ ಮನಸಿನಲ್ಲಿ ಸುಖದುಃಖಗಳನ್ನು ಅನುಭವಿಸುವದೊಂದು ಸ್ಥಿತಿ ಇಲ್ಲವೆ ಶಕ್ತಿ ಇರುವದು. ಅದಕ್ಕೆ ಮನೋವಿಕಾರವೆಂಬ ಸಂಜ್ಞೆಯು. ಈ ತರದ ವಿಕಾರಗಳಲ್ಲಿ ಕೆಲವು ಹಸಿವೆ, ನೀರಡಿಕೆ ಮುಂತಾದವು ಶರೀರಕ್ಕೆ ಸಂಬಂಧಿಸಿದವು, ಬೇರೆ ಕೆಲವು ಆಶೆ ಪ್ರೀತಿ, ಸಹಾನುಭೂತಿ ಮೊದಲಾದವು ಮನಸಿಗೆ ಸಂಬಂಧಿಸಿದವು ಇರುವವು. ಇವ್ದರಿಂದ ವಿಕಾರಗಳಲ್ಲಿ ಶಾರೀರಿಕ ಹಾಗು ಮಾನಸಿಕ ವಿಕಾರಗಳು ಎಂಬೆರಡು ಮುಖ್ಯ ಭಾಗಗಳನ್ನು ಮಾಡಬಹುದು. ಮಾನಸಿಕ ವಿಕಾರಕ್ಕೆ ಭಾವನೆ ಎಂಬ ಸಂಜ್ಞೆಯನ್ನು ಕೊಡಬಹುದು. ಶಾರೀರಿಕ ಹಾಗು ಮಾನಸಿಕ ವಿಕಾರಗಳಲ್ಲಿ ಸಾದಾ, ಸಂಕಲಿತ, ಉಚ್ಚ, ನೀಚ ಎಂಬ ಒಳಭೇದಗಳು ಕಂಡುಬರುವವು. ಇದಲ್ಲದೆ ವಿಕಾರದ ಬಲದಮಾನದಿಂದ ಸೌಮ್ಯ ಹಾಗು ತೀವ್ರ (ಕುಪಿತ) ಎಂಬ ಭೇದಗಳಾಗುವವು.

ವಿಕಾರಗಳು ಬೌದ್ಧಿಕ ವ್ಯಾಪಾರಗಳನ್ನು ಪ್ರವರ್ತಕ ವ್ಯಾಪಾರಗಳಿಗೆ ಮಧ್ಯವರ್ತಿಗಳಾಗಿದ್ದು ಸಂಬಂಧ ಮಾಡುವಕಾರಣ ಅವುಗಳ ಮಹತ್ವವು ಮನೋವ್ಯಾಪಾರಗಳಲ್ಲಿ

ಮಿತಿಮೀರಿ ಇರುವದು. ವಿಕಾರದ ಅತಿರೇಕವಾದಾಗ ಉದಾಹರಣಾರ್ಥ—ನಾವು ಮಿತಿ ಮೀರಿ ಸಿಟ್ಟಿಗೆದ್ದಾಗ ಬೌದ್ಧಿಕ ವ್ಯಾಪಾರಗಳು ಕುಗ್ಗುವದೇನೋ ನಿಜ. ಆದರೆ ವಿಕಾರಗಳ ಸ್ವರೂಪವು ಸೌಮ್ಯವಿದ್ದಾಗ ನಮ್ಮಲ್ಲಿ ಒಂದುಬಗೆಯ ಆಸ್ಥೆಯುಂಟಾಗಿ ನಾವು ಇಚ್ಛಾಪೂರ್ವಕವಾಗಿ ಯಾವದೊಂದು ಮಾನಸಿಕ ಶ್ರಮವನ್ನು ಮಾಡತೊಡಗುತ್ತೇವೆ. ಆದ್ದರಿಂದ ಬೌದ್ಧಿಕ ಶಕ್ತಿಗಳು ವಿಕಾಸ ಹೊಂದಹತ್ತುವವು. ಬೌದ್ಧಿಕ ಶಕ್ತಿಗಳು ವಿಕಾಸ ಹೊಂದಿದ್ದಾದರೆ ನಮ್ಮ ಒರಟಾದ ವಿಕಾರಗಳು ನಯವಾಗಹತ್ತಿ ಸ್ವಾಭಿಮಾನ, ಸತ್ಯ ಪ್ರೀತಿ, ಸಹಾನುಭೂತಿ ಮೊದಲಾದ ಉಚ್ಚ ಭಾವನೆಗಳ ಸ್ವರೂಪವನ್ನು ಹೊಂದುವವು.

ಈ ವಿವರಣದಿಂದ ಬೌದ್ಧಿಕ ವ್ಯಾಪಾರಗಳಿಗೂ ಭಾವನೆಗಳಿಗೂ ನಿಕಟ ಸಂಬಂಧ ವಿರುವದೆಂಬದು ಗೊತ್ತಾಗುವದು. ನಮ್ಮ ಮನೋಭಾವನೆಗಳೇ ನಮ್ಮನ್ನು ಯಾವ ದೊಂದು ಉದ್ಯೋಗದಲ್ಲಿ ತೊಡಗಿಸುವವು. ಆ ಭಾವನೆಗಳ ಪ್ರಕಾರಗಳಿದ್ದಂತೆ ನಾವು ಕೈಕೊಂಡ ಉದ್ಯೋಗಗಳಲ್ಲಿ ಪ್ರಕಾರಗಳಾಗುವವು. ಮನಸಿನಂತೆ ಕೃತಿ ಎಂಬದು ಎಲ್ಲರಿಗೂ ಗೊತ್ತಿದ್ದ ಮಾತೇ ಸರಿ.

ಸುಖದುಃಖ ಅಂದರೇನು?—ಸುಖವೆಂಬದು ದುಃಖಕ್ಕೆ ವಿರುದ್ಧವಾದದ್ದು. ಮಿತಿ ಮೀರಿದ ಶಾರೀರಿಕ ಇಲ್ಲವೆ ಮಾನಸಿಕ ಶಕ್ತಿಗಳನ್ನು ತಕ್ಕ ಕ್ರಮದಿಂದ ಉಪಯೋಗಿಸಿ ದಾಗ ನಮಗುಂಟಾಗುವ ಅನುಭವವೇ ಸುಖವು. ಸೀಯಾದ ವಸ್ತುವನ್ನು ಬಾಯಿ ಕಟ್ಟುವಷ್ಟು ತಿನ್ನದೆ ಅಲ್ಪ ಪ್ರಮಾಣದಿಂದ ತಿನ್ನುತ್ತಿರುವಾಗ ನಮಗೆ ಒಂದು ಬಗೆ ಜಿವ್ಹಾಲೌಲ್ಯ ಉಂಟಾಗಿ ಆನಂದವೆನಿಸುವದು. ಇದರಂತೆ ತಲೆಬೇಸರ ಬಾರದಂತೆ ಮಾನಸಿಕ ಶ್ರಮವನ್ನು ಮಾಡುವಾಗ ನಮಗೆ ಒಂದು ಬಗೆಯ ಆನಂದವೆನಿಸುವದು. ಆದರೆ ನಮ್ಮ ಶಾರೀರಿಕ ಇಲ್ಲವೆ ಮಾನಸಿಕ ಶಕ್ತಿಗಳಿಗೆ ಉತ್ತೇಜಕವಾಗಿ ಅವುಗಳನ್ನು ಕೆಲಸಕ್ಕೆ ಹಚ್ಚುವ ಉತ್ತೇಜನದ ಪ್ರಮಾಣವು ಮಿತಿಮೀರಿ ಬೆಳೆಯಿತೆಂದರೆ ನಮಗಾ ಗುವ ಆನಂದವು ಕುಗ್ಗಿ ತ್ರಾಸ ಇಲ್ಲವೆ ದುಃಖವು ಅನಿಸಹತ್ತುವದು. ಪ್ರಾತಃಕಾಲದಲ್ಲಿ ಸೂರ್ಯಬಿಂಬವನ್ನು ನೋಡಿದರೆ ನಮ್ಮ ಕಣ್ಣಿಗೆ ಆನಂದವಾಗುವದು. ಆದರೆ ಸೂರ್ಯನು ನೆತ್ತಿಯ ಮೇಲಿದ್ದಾಗ ಸೂರ್ಯಬಿಂಬದ ಕಡೆಗೆ ದೃಷ್ಟಿಸಿ ನೋಡಿದರೆ ಕಣ್ಣಿನ ನರಗಳು ಮೃತಪ್ರಾಯವಾಗಿ ಅಸಹ್ಯವೇದನೆಯಾಗುವದು. ಇದರಂತೆ ಮಿತಿಮೀರಿ ಮಾನಸಿಕ ಶ್ರಮ ಮಾಡಿದರೆ ತಲೆಬೇಸರಿಕೆ ಬರುವದು. ನಮ್ಮ ಒಲವುಗಳಿಗೆ ತಕ್ಕ ಶಾರೀರಿಕ ಇಲ್ಲವೆ ಮಾನಸಿಕ ವ್ಯಾಸಂಗವು ದೊರತದ್ದಾದರೆ ನನುಗೆ ದುಃಖವೆನಿಸುವದು. ಚಿಕ್ಕ ಬಾಲಕರು ಸ್ವಭಾವತಃ ಚಟುವಟಿಕೆಯುಳ್ಳವರು ಇರುವದರಿಂದ ಚಟುವಟಿಕೆಗೆ ತಕ್ಕ ಶಾರೀರಿಕ ವ್ಯಾಯಾಮವನ್ನು ತಾಯಿತಂದೆಗಳು ಅವರಿಗೆ ಮಾಡಗೊಡದಿದ್ದರೆ ಹುಡು ಗರು ಸ್ವಸ್ಥ ಕುಳಿತುಕೊಳ್ಳಲಾರದೆ ತಮ್ಮ ಚಟುವಟಿಕೆಯು ನಿರೋಧಿಸಲ್ಪಟ್ಟದ್ದಕ್ಕಾಗಿ

ದುಃಖಪಡುವರು. ನಮ್ಮ ಕೈಯ್ಯಿಂದ ಯಾವದಾದರೊಂದು ಕೆಲಸ ಮಾಡಲಾಗದಿದ್ದಾಗ ಇಲ್ಲವೆ ಯಾವದೊಂದು ಸಂಗತಿಯು ಕಾರ್ಯಕಾರಣ ಭಾವವು ತಿಳಿಯದಿದ್ದಾಗ ನಮಗೆ ಒಂದು ಬಗೆಯ ದುಃಖವೆನಿಸುವದು.

ಮೇಲಿನ ವಿವರಣದಿಂದ ಸುಖವನ್ನುಂಟು ಮಾಡುವ ಕಾರಣಗಳ ಅಭಾವದಿಂದಲೂ ಅತಿರೇಕದಿಂದಲೂ ದುಃಖವಾಗುತ್ತದೆಂದೂ ಮಧ್ಯಮ ತರದ ವ್ಯಾವಸಾಯಿ ಇಲ್ಲವೆ ಉತ್ತೇಜನದಿಂದ ಸುಖವಾಗುತ್ತದೆಂದೂ ಗೊತ್ತಾಗುವದು. ಮಧ್ಯಮ, ಅತಿರೇಕ ಮೊದಲಾದ ಪ್ರಮಾಣಗಳು ಸಾಪೇಕ್ಷವಾಗಿಯೂ, ವ್ಯಕ್ತಿಶಃ ಭಿನ್ನವಾಗಿಯೂ ಇರುವವು. ದಷ್ಟಪುಷ್ಟನಾದ ಹಾಗು ಸ್ನಾಯು ಬಲವುಳ್ಳ ಒಬ್ಬ ಹುಡುಗನಿಗೆ ಆನಂದವನ್ನುಂಟು ಮಾಡುವ ವ್ಯಾಯಾಮವು ಬಲಹೀನನಾದ ಹುಡುಗನಿಗೆ ದುಃಖದಾಯಕವಾಗಿರುವದು ಇದರಂತೆ ಬಲಹೊಂದಿ ವಿಕಾಸವಾದ ಮಿದುಳುಳ್ಳ ಯಾವನೊಬ್ಬನಿಗೆ ತಕ್ಕ ಮಾನಸಿಕ ಶ್ರಮವು ವಿಕಾಸಹೊಂದದ ಮಿದುಳುಳ್ಳವರಿಗೆ ಅಸಹ್ಯವಾಗುವದು.

ಸುಖದುಃಖಗಳ ಪರಿಣಾಮಗಳು

ಮಧ್ಯಮ ಪ್ರಮಾಣದ ಹಾಗು ಯೋಗ್ಯವಾದ ಶಾರೀರಿಕ ಹಾಗು ಮಾನಸಿಕ ವ್ಯಾಪಾರಗಳಿಂದ ಆನಂದವೆನಿಸುವದಲ್ಲದೆ ಅವುಗಳ ಅಭಿವೃದ್ಧಿಯು ಆಗಹತ್ತುವದು. ಇದಕ್ಕೆ ವಿಪರೀತವಾಗಿ ಅಯೋಗ್ಯವಾದ ವ್ಯವಸಾಯದಿಂದಲೂ ಮಿತಿಮೀರಿದ ಚಟುವಟಿಕೆಯಿಂದಲೂ ಶಾರೀರಿಕ ಹಾಗು ಮಾನಸಿಕ ಶಕ್ತಿಗಳು ಕುಗ್ಗಹತ್ತುವವು. ಶರೀರಕ್ಕೂ ಮನಸಿಗೂ ನಿಕಟ ಸಂಬಂಧವಿರುವದರಿಂದ ಮನಸಿಗುಂಟಾದ ಸುಖದುಃಖಗಳ ಪರಿಣಾಮವು ಶರೀರದ ಮೇಲೆ ಆಗುವದು. ಮನಸ್ಸು ಆನಂದವೃತ್ತಿಯಲ್ಲಿ ಇದ್ದದ್ದಾದರೆ ಶ್ವಾಸೋಚ್ಛ್ವಸನ, ರಕ್ತಾಭಿಸರಣ ಪಚನ ಮೊದಲಾದ ಅನೈಚ್ಛಿಕ ವ್ಯಾಪಾರಗಳು ಕೂಡ ಸುಯಂತ್ರಿತವಾಗಿ ನಡೆಯಹತ್ತುವವು. ಆದರೆ ಮನಸಿಗೆ ದುಃಖ ಇಲ್ಲವೆ ಭೀತಿ ಎನಿಸಿದಾಗ ಎದೆಯು ಡಬ್, ಡಬ್ ಎಂದು ಹಾರಹತ್ತಿ ರಕ್ತಾಭಿಸರಣ ಕಾರ್ಯವು ಅಕ್ರಮಣವಾಗುವಂತೆ ಮಾಡಿ ನಮ್ಮ ಕೈಕಾಲುಗಳಲ್ಲಿರುವ ತ್ರಾಣವನ್ನು ಕುಂದಿಸುವಂತೆ ಮಾಡುವದು.

ಈ ಕಾರಣದಿಂದಲೆ ಶಾಲೆಯಲ್ಲಿ ಹುಡುಗರು ಆನಂದವೃತ್ತಿಯಲ್ಲಿದ್ದು ಕಲಿಯಬೇಕೆಂದೂ ಶಾಲೆಯಲ್ಲಿದ್ದಾಗ ಅವರ ಸ್ವಾಭಾವಿಕ ಒಲವುಗಳಿಗೆ ಅನುಗುಣವಾದ ವ್ಯವಸಾಯಗಳನ್ನು ಶಿಕ್ಷಕನು ಪೂರೈಸಿಕೊಡತಕ್ಕದ್ದೆಂದೂ ಕಲಿಸುವ ಪಾಠಗಳಿಂದ ಹುಡುಗರಿಗೆ ತಲೆಬೇಸರ ಬಾರದಂತೆ ಶಿಕ್ಷಕನು ಜಾಗರೂಕನಾಗಿರಬೇಕೆಂದೂ ಹೊಸ ಪದ್ಧತಿಯ ಶಿಕ್ಷಣಕ್ರಮದಲ್ಲಿ ಹೇಳಿಯದೆ.

ಆಹಾರದ ಬಗ್ಗೆ ಉಪಯುಕ್ತವಾದ ಮಾಹಿತಿಯು.

೧. **ಚಪ್ಪರಬದನೆಯಕಾಯಿ:—**

ಚಪ್ಪರಬದನೆಯಕಾಯಿಯಲ್ಲಿ ಜೀವನ ಸತ್ವವು (Vitamins) ಇತರ ಯಾವದೊಂದು ಕಾಯಿಪಲ್ಯದೊಳಗಿರುವದಕ್ಕಿಂತ ಹೆಚ್ಚಾಗಿರುವದು. ಇದು ಅನೇಕ ರೋಗಗಳಿಗೆ ಮೇಲಾದ ಔಷಧವೆಂದು ಗೊತ್ತುಪಡಿಸಿರುವರು. ಇದರ ರಸವು ರಕ್ತಪಿತ್ತವಿಕಾರವನ್ನು ಹಿಂಗಿಸುತ್ತದೆ. ಚಿಕ್ಕಮಕ್ಕಳಿಗೆ ಆಗುವ ಮುಡ ದೋಷವೆಂಬ ರೋಗಕ್ಕೆ ಇದು ಒಳ್ಳೇ ಮದ್ದು. ಒಂದೇ ತರದ ಆಹಾರವನ್ನು ದಿನಾಲು ಸೇವಿಸುವದರಿಂದ ಉತ್ಪನ್ನವಾಗುವ ದೇಹವಿಕಾರವನ್ನು ಪ್ರತಿಬಂಧಿಸುವದರಲ್ಲಿ ಚಪ್ಪರಬದನೆಯಕಾಯಿಯಷ್ಟು ಉತ್ತಮವಾದ ಔಷಧವು ಬೇರೊಂದಿಲ್ಲ. ನೆಂದು ತಜ್ಞರ ಮತವಿರುವದು. ಇದು ಬೇಕಾದಲ್ಲಿ ಬೆಳೆಯುತ್ತದೆ. ಇದಕ್ಕೆ ಬೆಲೆ ಬಹಳ ಬೀಳುವದಿಲ್ಲ. ಹೀಗಿದ್ದರೂ ನಮ್ಮ ಜನರು ಇದರ ಉಪಯೋಗವನ್ನು ಹೆಚ್ಚಾಗಿ ಮಾಡದಿರುವದು ಸೋಜಿಗವಾದದ್ದು. ಜ್ವರಬಂದ ರೋಗಿಗಳಿಗೆ ಇದರ ರಸವನ್ನು ಕೊಡಲು ಅವರ ನೀರಡಿಕೆಯು ಕಡಿಮೆಯಾಗುವದು. ಇದರಲ್ಲಿ ಪಸಿವೆಯನ್ನು ಹೆಚ್ಚಿಸುವ ಗುಣವಿರುವದು. ಇದಲ್ಲದೆ ಇದರಿಂದ ಅನ್ನಕ್ಕೆ ಒಂದು ಬಗೆಯ ರುಚಿಯು ಬರುವದು. ಸಿಕ್ಯಾಗೋದ ಒಬ್ಬ ಹೆಸರಾದ ಡಾಕ್ಟರರು ಬರೆಯುವದೇನಂದರೆ :—

೧. ಎಲ್ಲ ಅನ್ನಗಳಿಗಿಂತ ಚಪ್ಪರಬದನೆಯಕಾಯಿಯಲ್ಲಿ ಜೀವನ ಸತ್ವವು ಜಾಚ್ಚುಂಟು.

೨ ಹೊಟ್ಟೆ ಮತ್ತು ಕರಳು ಇವುಗಳನ್ನು ಒಳ್ಳೆಯ ಸ್ಥಿತಿಯಲ್ಲಿ ಇಡುವದಕ್ಕೆ ಬೇಕಾಗುವ ಎಲ್ಲ ಬಗೆಯ ನೈಸರ್ಗಿಕ ಆಮ್ಲತತ್ವಗಳು ಇದರಲ್ಲಿ ತುಂಬಿರುವವು.

೩. ಇದು ರಕ್ತ ಶುದ್ಧಿಯನ್ನು ಮಾಡುವದು.

೪. ಹೊಟ್ಟೆಯಲ್ಲಿ ವಿಷಯುಕ್ತವಾದ ಅಂದರೆ ಶರೀರಕ್ಕೆ ಅಪಾಯಕರವಾದ ಪದಾರ್ಥಗಳು ಹುಟ್ಟುವದುಂಟು; ಇವುಗಳನ್ನು ಮೂತ್ರಪಿಂಡಗಳು ಹೊರಗೆ ಹಾಕುವವು. ಈ ಕೆಲಸದಲ್ಲಿ ಚಪ್ಪರಬದನೆಯ ರಸದಿಂದ ಒಳ್ಳೇ ಸಹಾಯವಾಗುವದು.

ಹೀಗೆ ಬಡವರ ಈ ಕಾಯಿಪಲ್ಯದ ಯೋಗ್ಯತೆಯು ಕಂಡುಬಂದ ಮೇಲಾದರೂ ಅದನ್ನು ಜನರು ಹೆಚ್ಚು ಪ್ರಮಾಣದಲ್ಲಿ ಉಪಯೋಗಿಸತಕ್ಕದ್ದು.

(ಮೈಸೂರ ಎಕನಾಮಿಕ್ ಜರ್ನಲದ ಆಧಾರದಿಂದ)

೨. ಆಡಿನ ಹಾಲು :—

ರೋಗಿಗೆ ಆಕಳ ಹಾಲಿಗಿಂತ ಆಡಿನಹಾಲು ಮೇಲಾದದ್ದು. ಇದು ಸುಲಭವಾಗಿ ಜೀರ್ಣವಾಗುವದು. ಇದರಲ್ಲಿರುವ ಕೊಬ್ಬಿನ ಕಣಗಳು ಬಹಳ ಸಣ್ಣವಿರುವವು. ಆದ್ದರಿಂದ ಅಶಕ್ತವಾದ ಇಲ್ಲವೆ ಜೀರ್ಣಶಕ್ತಿಯಿಲ್ಲದ ಮಕ್ಕಳಿಗೆ ಇದು ಶ್ರೇಷ್ಠವಾದದ್ದು. ಇದು ಬೇಸಿಗೆಯಲ್ಲಿ ಸಹ ಆಕಳ ಹಾಲಿನಷ್ಟು ತೀವ್ರ ಕೆಡುವದಿಲ್ಲ. ಆಡಿನಹಾಲು, ಆಕಳಹಾಲು, ತಾಯಿಯಹಾಲು ಇವುಗಳಲ್ಲಿರುವ ಬೇರೆ ಬೇರೆ ಪದಾರ್ಥಗಳ ಪ್ರಮಾಣವನ್ನು ಕೆಳಗೆ ಕೊಟ್ಟಿರುವೆವು. ಪ್ರೊಟೀನವು ಅಂದರೆ ಮಾಂಸವನ್ನುಂಟುಮಾಡುವ ಪದಾರ್ಥವು ಆಕಳ ಹಾಲಿಗಿಂತ ಆಡಿನ ಹಾಲಿನಲ್ಲಿ ಹೆಚ್ಚಾಗಿರುವದು; ತಾಯಿಯ ಹಾಲಿನಲ್ಲಿರುವದರ ಎರಡಷ್ಟು ಪ್ರಮಾಣದಿಂದಿರುವದು. ಲೋಹಲವಣಗಳಂತೂ ಇದರಲ್ಲಿ ತಾಯಿಯ ಹಾಲಿನಲ್ಲಿರುವದರ ಮೂರರಷ್ಟು ಇರುವವು; ಸಾಕಲಿಕ್ಕೆ ಆಡು ಅಗ್ಗವಾದ ಪ್ರಾಣಿಯು.

	ಆಡಿನ ಹಾಲು	ಆಕಳ ಹಾಲು	ತಾಯಿಯ ಹಾಲು
ನೀರು	೮೬·೪೫	೮೭·೪೦	೮೬·೪೦
ಒಣ ವಸ್ತುಗಳು	·೮೫	·೭೫	·೯೦
ಕೇಸಿನ್	೩·೦೦	೩·೦೦	೧·೦೦
ಆಲ್ಬುಮಿನ್	೧·೦೦	·೪೦	೧·೨೦
ಕೊಬ್ಬು	೪·೨೦	೩·೭೫	೩·೫೦
ಸಕ್ಕರೆ	೪·೫೦	೪·೭೦	೭·೦೦

—ಗುಡ್ ಹೆಲ್ಥ (ಲಂಡನ್).

ಪ್ರಕಟನೆಗಳು.

ಕೆಳಗೆ ಕಾಣಿಸಿದ ಸಂಗತಿಯನ್ನು ಹೆಡ್‌ಮಾಸ್ತರರು, ಸ್ಕೂಲಬೋರ್ಡ ಅಡ್ಮಿನಿ ಸ್ಟ್ರೇಟಿವ ಆಫೀಸರರು ಮೊದಲಾದ ಅಧಿಕಾರಿಗಳ ಮಾಹಿತಿಗಾಗಿ ಇಲ್ಲಿ ಪ್ರಸಿದ್ಧಪಡಿಸಿರುವೆವು.

ನಂ. $\frac{೧೯೪೩}{೪-೭-೩೪}$ ರಲ್ಲಿ ಸರಕಾರದವರು ಮುಂಬಯಿ ಇಲಾಖೆಯ ಸ್ಕೂಲಬುಕ್ ಕಮಿಟಿಯ ನಿಯಮಗಳಲ್ಲಿ ಕೆಳಗೆ ಕಾಣಿಸಿದ ೧ (ಬ) ಎಂಬ ಹೊಸ ನಿಯಮವನ್ನು ಸೇರಿಸಿರುವರು.

" ಸರಕಾರದವರಿಂದಾಗಲಿ ಡಿರೆಕ್ಟರ ಆಫ್ ಪಬ್ಲಿಕ್ ಇನ್ಸ್ಟ್ರಕ್ಶನ್‌ರವರಿಂದಾಗಲಿ ಆಯಾ ಉಪಯೋಗಕ್ಕಾಗಿ ಮಂಜೂರಾದ ಪುಸ್ತಕಗಳನ್ನು (೧) ಪಠ್ಯ

ಪುಸ್ತಕಗಳು (೨) ವಿದ್ಯಾರ್ಥಿಗಳ ಲಾಯಬ್ರರಿಯ ಪುಸ್ತಕಗಳು (೩) ಶಿಕ್ಷಕರ ಲಾಯಬ್ರರಿಯ ಪುಸ್ತಕಗಳು ಎಂದು ವರ್ಗೀಕರಣ ಮಾಡತಕ್ಕದ್ದು. ವಿದ್ಯಾರ್ಥಿಗಳ ಲಾಯಬ್ರರಿಗೆಂದು ವರ್ಗೀಕರಣಮಾಡಿದ ಯಾವದೊಂದು ಪುಸ್ತಕವನ್ನು ಸಾಲೆಯ ಹೆಡ್‌ಮಾಸ್ತರರು ತಮ್ಮ ಮನಸಿಗೆ ಬಂದರೆ ಇನಾಮಿಗಾಗಿಯೂ ಸಪ್ಲಿಮೆಂಟರೀ ರೀಡರದಂತೆಯೂ ಉಪಯೋಗಿಸಬಹುದು. ಈ ನೊದಲು ಮಂಜೂರಾಗಿದ್ದು ಸಪ್ಲಿಮೆಂಟರೀ ರೀಡರ ಇಲ್ಲವೆ ಇನಾಮಿನ ಪುಸ್ತಕ ಇಲ್ಲವೆ ವಿದ್ಯಾರ್ಥಿಗಳ ಲಾಯಬ್ರರಿ ಪುಸ್ತಕ ಎಂದು ವರ್ಗೀಕರಿಸಿದ ಪುಸ್ತಕಗಳು" "ವಿದ್ಯಾರ್ಥಿಗಳ ಲಾಯಬ್ರರಿಗೆ" ಎಂದು ಮಂಜೂರಾಗಿ ವರ್ಗೀಕರಿಸಲ್ಪಟ್ಟಿರುವವೆಂದು ಎಣಿಸತಕ್ಕದ್ದು.

ತಾ॥ ೩೦-೬-೧೯೩೪ ಈ ದಿವಸ ಕೂಡಿದ ಸ್ಕೂಲ ಬುಕ್ ಕಮಿಟಿಯಲ್ಲಿ ಮಂಜೂರಾದ ಪುಸ್ತಕಗಳು.

ಮಿ. ಬಿ. ಎಸ್. ಕುಶಾಲಪ್ಪ ಇವರು ಬರೆದು ಮಿ॥ ವಿ. ಎಸ್. ಚಕ್ರಪಾಣಿ ಶೆಟ್ಟಿ, ಮಡಿಕೇರಿ ಇವರು ಪ್ರಸಿದ್ಧಪಡಿಸಿದ್ದು. ಪ್ರಾ. ಶಾಲೆಗಳ ವಿದ್ಯಾರ್ಥಿಗಳ ಲಾಯಬ್ರರಿಗಾಗಿ ಮಂಜೂರಾಗಿದೆ.

ನಂ.	ಪುಸ್ತಕದ ಹೆಸರು	ಬೆಲೆ		
೧.	ಪನ್ನಂಗಾಲ ತಮ್ಮೆ	೦	೧	೦
೨.	ಓಂಕಾರೇಶ್ವರ	೦	೧	೦
೩.	ಕಲಿಯಾಟ ಅಜ್ಜಪ್ಪ	೦	೧	೦
೪.	ಹೊನ್ನಮ್ಮ	೦	೧	೦
೫.	ಚನ್ನಬಸಪ್ಪ	೦	೧	೬
೬.	ಕಾವೇರಿಯ ಕಥೆ	೦	೧	೬
೭.	ಬೋನೀರ ಮುತ್ತಣ್ಣ	೦	೧	೬
೮.	ಅಚ್ಚುನಾಯಕ	೦	೧	೬
೯.	ಮೊದಲನೆಯ ದರ್ಜೆಯ ಕಥೆಗಳು	೦	೨	೩
೧೦.	ಎರಡನೆಯ ದರ್ಜೆಯ ಕಥೆಗಳು	೦	೨	೩

ಮಂಗಳೂರ ಬಾಲ ಸಾಹಿತ್ಯ ಮಂಡಲದಿಂದ ಪ್ರಸಿದ್ಧವಾದವುಗಳು. ಪ್ರಾ. ಶಾಲೆಗಳ ವಿದ್ಯಾರ್ಥಿಗಳ ಲಾಯಬ್ರರಿಗಾಗಿ ಮಂಜೂರಾಗಿವೆ.

೧೧.	ಅರ್ಗಣೆ ಮುದ್ದೆ	೦	೦	೬

೧೨.	ಗಾಳಿಯ ಕೋಳಿ ಪುಕ್ಕದ ಕಪ್ಪು	೦	೧	೦
೧೩.	ಬಿಟ್ಟೀ ಬಸವಯ್ಯ	೦	೧	೮
೧೪.	ಅಂಗಳ ದುಗ್ಗು	೦	೧	೦
೧೫	ಜೋಡು ನಕ್ಷತ್ರ	೦	೦	೯
೧೬.	ಮೂರು ಕರಡಿಗಳು	೦	೧	೦
೧೭.	ಸಿಗಡಿ ಯಾಕೆ ಒಣಗಲಿಲ್ಲ	೦	೧	೦
೧೮.	ಗೋವಿಂದಾ ಗೋವಿಂದ	೦	೧	೦
೧೯.	ಬೆಕ್ಕಿನ ಬಿಡಾರ ಬೇರೆ	೦	೧	೦
೨೦.	ಮಾತಾಡೋ ರಾಮಪ್ಪ	೦	೧	೦
೨೧.	ಗೋಣೀ ತಟ್ಟಿನ ಪಟ್ಟೀ ಹುಲಿ	೦	೧	೦
೨೨.	ಏಕ ರೋಜಕಾ ಖಲೀಫ	೦	೧	೬
೨೩.	ತಟಪಟ ಹನಿಯಪ್ಪ	೦	೧	೬
೨೪.	ಅಜ್ಜಿ ಸಾಕಿದ ಮಗು	೦	೨	೬
೨೫.	ಅಗೋಳಿ ಮಂಜಣ್ಣ	೦	೨	೬
೨೬.	ಅರಬಸ್ತಾನ	೦	೨	೦
೨೭.	ಚೀನ	೦	೨	೦
೨೮.	ಢಂ ಢಂ ಢೋಲು	೦	೨	೦
೨೯.	ಸಿಂದಬಾದದ ನಾವಿಕ	೦	೨	೦
೩೦.	ಅಲ್ಲಾವುದ್ದೀನನ ವಿಚಿತ್ರ ದೀಪ	೦	೨	೦
೩೧.	ಹುಲಿರಾಯ	೦	೨	೦

ಮಿ॥ ಪಂಜೆ ಮಂಗೇಶರಾಯರು ಬರೆದದ್ದು. ಮಂಗಳೂರ ಬಾಲಸಾಹಿತ್ಯ ಮಂಡಳದಿಂದ ಪ್ರಸಿದ್ಧವಾದದ್ದು. ಪ್ರಾ. ಶಾಲೆಗಳ ವಿದ್ಯಾರ್ಥಿಗಳ ಲಾಯಬ್ರರಿಗಾಗಿ ಮಂಜೂರಾದದ್ದು.

೩೨.	ಕ್ಕೊ, ಕ್ಕೊ, ಕೋಳಿ	೦	೦	೯
೩೩.	ಮೆಣಸಿನ ಕಾಳಪ್ಪ	೦	೧	೦
೩೪.	ಗುಡುಗುಡು ಗುಮ್ಮಟ ದೇವರು	೦	೧	೦
೩೫.	ಇಲಿಗಳ ಥಕ್ಕಾ ಥೈ	೦	೧	೦
೩೬.	ಜೇನು ಸತ್ತು ಕಾಗೆ ಬದವಾಯಿತು	೦	೦	೯
೩೭.	ಒಡ್ಡರ ಓಟ	೦	೧	೦

ಮಂಗಳೂರು ಬಾ. ಸಾ. ಮಂಡಲದಿಂದ ಪ್ರಸಿದ್ಧವಾಗಿ ಪ್ರಾ. ಶಾಲೆಗಳ ವಿದ್ಯಾರ್ಥಿಗಳ ಲಾಯಬ್ರರಿಗಾಗಿ ಮಂಜೂರಾದದ್ದು.

೩೮. ಚಂಡಕೌಶಿಕ (ಎಮ್. ಎನ್. ಕಾಮತ ಕೃತ) ೦ ೪ ೦

೩೯. ಸಹಕಾರ ನಾಟಕ (ಬೈ. ಆನಂದರಾವ ಕೃತ) ೦ ೪ ೦

೪೦. ಶಿಕ್ಷಣ (ಉ. ಮಂಗೇಶರಾಯ ಕೃತ) ೧ ೦ ೦

ಸದರ ಹಾಗು ಟ್ರೇ. ಸಂಸ್ಥೆಗಳ ವಿದ್ಯಾರ್ಥಿಗಳ ಹಾಗು ಶಿಕ್ಷಕರ ಲಾಯಬ್ರರಿಗಾಗಿ

೪೧. ಭಾವನಾತ್ರಯಮ್ ಹನುಮಾನ್ ವೆಂಕಟರಾಯ ಕವಿಕೃತ ಹಾಗು ಪ್ರಸಿದ್ಧಿತ, ಬೆಲೆ ೦ ೬ ೦ ಪ್ರಾ. ಶಾಲೆಗಳ ಟೀಚರ್ಸ ಲಾಯಬ್ರರಿಗಾಗಿ

೪೨. ತುಣುಕು ಮಿಣುಕು. ಮು. ಶಂಕರನಾರಾಯಣರಾಯ ಕೃತ ಹಾಗು ಸುಪರಿಂಟೆಂಡೆಂಟ ಹರಿಹರ ಬುಕ್ ಡಿಪೋ, ಪುತ್ತೂರು ಪ್ರಸಿದ್ಧಿತ, ಬೆಲೆ ೦ ೩ ೦ ಪ್ರಾ. ಶಾಲೆಗಳ ವಿದ್ಯಾರ್ಥಿಗಳ ಲಾಯಬ್ರರಿಗಾಗಿ.

——೦——

ಪ್ರಕಟನೆ.

ಪುಣೆಯಲ್ಲಿ ೧೭–೩–೧೯೩೫ನೆಯ ದಿವಸ ನೆರೆದ ಉರ್ದು ಬುಕ್ ಕಮೀಟಿಯವರು ಮುಂಬಯಿ ಇಲಾಖೆಯ ಉರ್ದು ಶಾಲೆಗಳಲ್ಲಿ ಉಪಯೋಗಿಸುವದಕ್ಕಾಗಿ ಮಂಜೂರ ಮಾಡಿದ ಪುಸ್ತಕಗಳ ಯಾದಿಯು. ಲಾಯಬ್ರರಿಬುಕ್ಕು L. ಪ್ರಾಯಿಝುಬುಕ್ಕು P. ಟೆಕ್ಸ್ಟ್‌ಬುಕ್ಕು T.

ಸಂಖ್ಯೆ	ಪುಸ್ತಕಗಳ ಹೆಸರು	ಗ್ರಂಥಕರ್ತರ ಹೆಸರು	ಪ್ರಕಾಶಕರ ಹೆಸರು ಇಲ್ಲವೆ ಪ್ರೆಸ್ಸಿನ ಹೆಸರು	ಬೆಲೆ	ಯಾತಕ್ಕೋಸ್ಕರ ಮಂಜೂರ
೧	ಪಾಂದಿಸ್ತಾನ	ಮೌಲಾನಾ ಅಬುಮಹಮ್ಮದ ಹುಸೇನ ಸಾ॥ ಸೈಫಿಸುಭಾನಿ	ಆರ್ಯುಮ್ ಸ್ಟ್ರೀವರ್‌ಪ್ರೆಸ್ ಚಾರ್ಮಿನರ ಹೈದ್ರಾಬಾದ (ಡೆಕ್ಕನ್)	೦–೧೨–೦ ಪ್ರತಿಕ್ಕೆ	ಉರ್ದು ಪ್ರಾ. ಶಾ. ಗಳಿಗೂ ಮತ್ತು ಟ್ರೇ. ಸಂ. ಗಳಿಗೂ P ಮತ್ತು L
೨—ಶ	ಉರ್ದು ಖುಷ್ಕತಿ ಕಾಪಿ ನಂ। ೫	ಮೌಲ್ವಿ ಮಹಮ್ಮದ	ಮುಸ್ಲೀಮಯುನಿವರ್ಸಿಟಿ ಪ್ರೆಸ್ ಅಲೀಗಡ	ಬುಕ್ಕಿಗೆ ೦ –೧–೩	೨ನೆ ಇ.ಗೆ ನಂ ೧ ಮತ್ತು ೨ ನಂ। ಕಾ. ೩ನೆ ಇ. ಗೆ ೩ ಮತ್ತು ೪ ನಂ ॥ ಕಾ.
	೧–೪ ೧ನೆ ಆವೃತ್ತಿ ೧೯೩೩	ನಸಿರುದ್ದೀನ			
೬	ತಖ್ತೆತಾವೂಸ	ಮೌಲ್ವಿ ಮಹಮ್ಮದಅಬ್ದುಲ್ ಲತೀಫಖಾನ	ರಾಯ್ ಸಾ॥ ಮುನ್ಸಿ ಗುಲಾಬಸಿಂಗ ಅ್ಯಂಡಸನ್ಸ್ ಲಾಹೋರ	೧–೮–೦	ಉರ್ದು ಪ್ರಾ. ಹಾಗು ಮೂ. ಶಾ. ಗಳಿಗೆ ಟ್ರೇ. ಸಂ. ಗೆ P. ಮತ್ತು L.
೭	ಅನೇಖಿ ದುನಿಯಾ ಹಿಸ್ಸಾ ೪	ಮುನ್ಸಿ ಅಗ್ರವಾಲಾ B A.	ಮೆ॥ ಮ್ಯಾಕ್ಮಿಲನ್ ಅ್ಯಂಡ ಕಂ। ಬಾಂಬೆ		ಸಪರ

೮	ಹಾಲಾತೆ ಹರಮೈನ ಶರೀಫೈನ ನಕಾಶ ಸಹ ತಿನೆ ಆ. ೧೯೩೩	ಹಾಜಿ ಮಹಮ್ಮದ ಮೊಯಿನುದ್ದೀನ	ಇಂಟಿಗ್ರುಮಿಪ್ರೆಸ್ ಕಾನಪೂರ	೧—೦—೦	ಸದರ	
೯	ಇಬ್ ತಿದಾಯಿ ಸಾಯಿನ್ಸ ಹಿಸ್ಸಾ ೧ ಸಪ್ಟಂಬರ ೧೯೩೩	ಡಾ. ಡಿ. ಡಿ. ಸೆಂಡರಕರ	ಶಾಮಸುಲ್ ಮತಾಬಿ ಮಿಸನ್‌ಪ್ರೆಸ್ ನಿಜಾಮುಶಾಹಿ ರೋಡ ಹೈದ್ರಾಬಾದ	೧—೦—೦	ಸೆಪ್ಟಿಮೆಂಟರಿ ರೀಡರ	
೧೦	ಇಬ್ ತಿದಾಇಸಾಯನ್ಸ ಹಿಸ್ಸಾ ೨	ಡಾ. ಡಿ. ಡಿ. ಸೆಂಡರಕರ	ಸದರ	೧—೦—೦	ಸದರ	
೧೧	ಇಬ್ ತಿದಾಇಸಾಯನ್ಸ ಹಿಸ್ಸಾ ೩	ಸದರ	ಸದರ	೧—೪—೦	ಸದರ	
೧೨	ಆಫ್ತಾಬ್ ರೀಡರ ನಂ. ೧ ೧೯೩೩ ಆವೃತ್ತಿ ೧೯೩೩	...	ಭಾರತಹೌಸ ಲಾಹೋರ	೦—೫—೯	ಉರ್ದು ಪ್ರಾ. ಶಾ. P ಮತ್ತು L	
೧೩	ಆಫ್ತಾಬ್ ರೀಡರ ನಂ. ೨	...	ಸದರ	೦—೭—೦	ಸದರ	
೧೪	ಆಫ್ತಾಬ್ ರೀಡರ ನಂ. ೩	...	ಸದರ	೦—೯—೨	ಸದರ	
೧೫	ದಿ, ಇನ್‌ಫ್ಲೂಯೆನ್ಸ ದಿ ಪರ್ಸಿಯನ್ ಆನ್ ದಿ ಮರಾಠಿ ಲ್ಯಾಂಗ್ವೇಜ ೧೯೩೩	ಮೌಲ್ವಿ ಅಬ್ದುಲ್ ಹಾಜಿ ಬಿ, ಎ.	ಅಂಜುಮನ್ ಉರ್ದು ಪ್ರೆಸ್ ಹೈದ್ರಾಬಾದ ಡೆಕ್ಕನ್	೦.೧೨.೦	ಉರ್ದು ಪ್ರಾ. ಮತ್ತು ಮಾ. ಶಾ. ಗೆ ಟ್ರೇ. ಸಂ. ಗೆ P ಮತ್ತು L	

೧೬	ಆಸಾನ ಸರಫೋನ ಹವ ಹಿಸ್ಸಾ ೨ ೧೯೩೩	ಶೇಖ ಮುನಸಿ ಮುಸ್ತಾಖಿ ಅಹಮ್ಮದ ಸಾಹೇಬ	ಗ್ರಂಥಕರ್ತ	೦–೫–೦	ಉರ್ದು ಪ್ರಾ. ೫ನೇ ಇ. ಗೆ ಮಾಧ್ಯಮಿಕ ೧ನೇ ಇ. ಗೆ (ಅಂಗ್ಲೋ ವ್ಹ. ಶಾಲೆಗಳ) T	ಪ್ರ
೧೭	ಕಾಮುಸುಲ್ ಮುಶಾಹೀರ ಹಿಸ್ಸಾ ೧ ೧ನೆ ಆ. ೧೯೨೪	ನಿಝಾಮಿ ಬೇಡಾಯುನಿ	ನಿಝಾಮ ಪ್ರೆಸ್ ಬೆಡಾಯುನ್	೧೧ ರೂ. ಭಾಗ ೧–೨	ಉರ್ದು ಪ್ರಾ. ಹಾಗು ಮಾ. ಹಾಗು ಟ್ರೇ. ಸಂ. ಗೆ	
೧೮	ಕಾಮುಸುಲ್ ಮುಶಾಹೀರ ಹಿಸ್ಸಾ ೨ ೧೯೨೪	ಸದರ	ಸದರ	...	ಸದರ	
೧೯	ತಾರೀಖೆ ಆರಬ್ ೧೯೨೪	ಮೌಲ್ವಿ ಅಬುಲ್ ಗಫೂರ ಖಾ. ಸಾ. ಆ್ಯಂಡ ಮೌಲ್ವಿ ಮಹಮ್ಮದ ಹಲೀಮ ಸಾ।	ನಾಝೀರ ಪ್ರೆಸ್ ಲಖನೌ	೫–೦–೦	ಸದರ	
೨೦	ಕುಲ್ಲಿಯಾತೆ ಇಸ್ಮಾಯಿಲ್ ೧ನೆ ಆ. ೧೯೧೦	ಮೌಲ್ವಿ ಮಹಮ್ಮದ ಇಸ್ಮಾಯಿಲ್	ದಿ. ಓರಿಯಂಟಲ್ ಪಬ್ಲಿಸಿಂಗ ಕಂಪನಿ ಮಿರತ	೩–೦–೦	ಉರ್ದು ಪ್ರಾ. ಹಾಗು ಮಾ. ಹಾಗು ಟ್ರೇ. ಸಂ. P ಮತ್ತು T	ಪ್ರತಿಷ್ಠಿ
೨೧	ಹಯಾತೆ ಸಾದಿ ೨ನೆ ಆ.	ಮೌಲ್ವಿ ಆಫ್ತಾಬ್ ಹುಶೇನ ಅಲಿ	ಮುಫೀದ–ಎ–ಆಮ್ ಪ್ರೆಸ್ ಆಗ್ರಾ	೧–೩–೦	ಸದರ	
೨೨	ರಿಯಾಸತ್ ೧ನೆ ಆ ೧೯೩೨	ಡಾ. ಝಾಕೀರ ಹುಶೇನ	ಅಂಜುಮನ್ ಎ ತಾರಾಕ್ಕೀತೆ ಉರ್ದು, ಔರಂಗಾಬಾದ	೫–೦–೦	ಸದರ	
೨೩	ಬಾಗೋ ಬಹಾರ ೧೯೩೧	ಮೀರ ಅಮ್ಮನ್ ಡೆಹಲಿ	ಸದರ	೨–೦–೦	ಸದರ	

೨೪	ಯಾದಗಾರೆ ಗಾಲೀಬ	ಶಾಮಸುಲ್ ಅಲವ್ ಮೌಲ್ವಿ ಅಲ್ತಾಫ ಹು. ಅಲಿ	ಮಾತ್ಬ-ಎ-ಫೈಜ-ಎ ಆವ್ ಅಲೀಗಡ	೨-೦-೦	ಸದರ
೨೫	ತಾರೀಖೆ ಅಖ್ಲಾಕೆ ಯುರೋಪ ಹಿಸ್ಸಾ ೧	ಅಬ್ದುಲ್‌ಮಜಿದ ಬಿ. ಎ.	ಆ್ಯನ್ ನಾಝಿರ ಪ್ರೆಸ್ ಲಖನೌ	೩-೦-೦	ಸದರ
೨೬	ತಾರೀಖೆ ಅಖ್ಲಾಕೆ ಯುರೋಪ ಹಿಸ್ಸಾ ೨	ಸದರ	ಇನ್‌ಸ್ಟಿಟ್ಯೂಟ ಪ್ರೆಸ್ ಅಲೀಗಡ	೨-೮-೦	ಸದರ
೨೭	ಸಿಯರುಲ್ ಮುಸನ್ನಿ ಫೀನ್	ಮಹಮ್ಮದ ಯಹಯಾ ಬಿ. ಎ.	ಮ್ಯಾನೇಜರ ಡರೂಲ್ ಇಸ್ಲ್ಯಾಟ್ ಗಾಝೀಬಾದ ಮಹಬೂಬುಲ್ ಮಾತಾಬ್ಬೆ ದಿಲ್ಲಿ	೨-೦-೦	ಸದರ

ಪೂನಾ
೧-೬-೧೯೩೪ }

ಡಿ. ಎ. ಇ. ಉರ್ದು ಸ್ಕೂಲ ಸೆಂಟ್ರಲ್ ಡಿ.

Reg. No. B. 2567

೬. ಹನುಮಪ್ಪ ಬಸಪ್ಪ ಹೊಸಳ್ಳಿ. ೭. ಶಿದ್ದಪ್ಪ ನಿಂಬಣ್ಣ ಕಬಾಡ್ರ. ೮. ದಾವಲಸಾಬ ಜಲಾಲಸಾಬ ಕುಮಸೂರ. ೯. ಸಿದ್ದನಗೌಡಾ ನಾಗನಗೌಡಾ ಪಾಟೀಲ. ೧೦. ಮಲ್ಲಪ್ಪ ಫಕೀರಪ್ಪ ಕೊಪ್ಪದ.

ಶಾಲಾ ಮಳಗಿ, ಪೇಠಾ ಮುಂಡಗೋಡ ಜಿಲ್ಲಾ ಕಾರವಾರ ಇಲ್ಲಿಯ ಶಾಲೆಯ ಹುಡುಗರ ಸಲುವಾಗಿ:—

ಶ್ರೀ. ಎಚ್. ಟಿ. ಪಾಟೀಲ. ಮಳಗಿ, ಟಿ.ಎಲ್.ಬಿ. ಮೆಂಬರ ಯಲ್ಲಾಪೂರ ಇವರು ಹಿಂದುಸ್ಥಾನದ ನಕಾಶ ೧.

ಶ್ರೀ. ಚನ್ನಪ್ಪಾ ಕರಬಸಪ್ಪಾ ಪಾಟೀಲ ಶಿದ್ದಾಪೂರ ಇವರು ಮಕ್ಕಳ ಆಟದ ಅಕ್ಷರಗಳ ಪೆಟ್ಟಿಗೆ ೧.

ಶ್ರೀ. ಗಣಪತಿ ಅಣ್ಣಪ್ಪಾ ಕೊಳಗಿ ಇವರು ಮುಂಬೈ ಇಲಾಖೆಯ ನಕಾಶೆ ೧.

ಈ ಪ್ರಕಾರ ತಾರೀಖು ೭-೮-೩೪ನೇ ದಿವಸ ಧರ್ಮಾರ್ಥವಾಗಿ ಕೊಟ್ಟಿರುವರು. ಇದು ದಯಾಳು ಮಹನೀಯರಿಗೆ ಭೂಷಣವೇ ಸರಿ.

ಶಿಕ್ಷಕಬಂಧು

ಶಿಕ್ಷಕಬಂಧು ಎಂಬ ಮಾಸಪತ್ರಿಕೆಯು ಈ ವರುಷದ ಮೇ ತಿಂಗಳಿಂದ ಧಾರವಾಡದಲ್ಲಿ ಪ್ರಸಿದ್ಧವಾಗುತ್ತಿರುವದು. ಮೊದಲನೆಯ ಸಂಚಿಕೆಯಲ್ಲಿ "ನಮ್ಮ ಹೇಳಿಕೆ" ಎಂಬ ಲೇಖದಲ್ಲಿ ಈ ಹೊಸ ಪತ್ರಿಕೆಯ ಸಂಪಾದಕರು ಶಿಕ್ಷಕ ಬಂಧುವಿನ ಸಂಕಲ್ಪವನ್ನು ಕುರಿತು ಹೀಗೆ ಬರೆದಿದ್ದಾರೆ:—"ಶಿಕ್ಷಕ ಬಂಧುವು ಕೇವಲ ಶಿಕ್ಷಣ ಹಾಗು ಶಿಕ್ಷಕರ ಹಿತದ ಸಲುವಾಗಿಯೇ ಹೊರಬಿದ್ದಿರುವನು. ಅವನು ಯಾರ ನಿಂದಾಸ್ತೋತ್ರಗಳನ್ನು ಬೇಕೆಂದು ಎಂದೂ ಮಾಡಲಾರನು... ಶಿಕ್ಷಕ ಬಂಧುವು ಸ್ಕೂಲಬೋರ್ಡು-ಶಿಕ್ಷಕರಲ್ಲಿ ದ್ವೇಷಾಸೂಯೆಗಳನ್ನು ಹುಟ್ಟಿಸ ಬೇಕೆಂದು ಹುಟ್ಟಿಲ್ಲ. ಪ್ರೇಮಾದರಗಳನ್ನು ಸ್ಥಿರಗೊಳಿಸಬೇಕೆಂದು ಹುಟ್ಟಿರುವನು." "ಶಿಕ್ಷಕರ ಹಿತದ ಸಲುವಾಗಿಯೇ ಹುಟ್ಟಿರುವ ಶಿಕ್ಷಕ ಬಂಧುವು ಶಿಕ್ಷಕರಿಗೆ ತೊಂದರೆ ಕೊಡುವ ಕಾರ್ಯಕ್ಕೆ ಕೈಹಾಕುವದಿಲ್ಲ. ಶಿಕ್ಷಕರ ತಾಪತ್ರಯಗಳನ್ನು ಇದ್ದಕ್ಕಿದ್ದಂತೆ ವರ್ಣಿಸುವನು. ಸ್ಕೂಲಬೋರ್ಡುಗಳಿಂದಾದ ಸತ್ಕೃತ್ಯಗಳನ್ನು ಪ್ಲಾಘಿಸುವನು."

ಶಿಕ್ಷಕರ ಹಿತವನ್ನೂ ಅವರಲ್ಲೂ ಸ್ಕೂಲಬೋರ್ಡುಗಳಲ್ಲೂ ಪ್ರೇಮಾದರ ಗಳನ್ನೂ ಉಂಟುಮಾಡುವಲ್ಲಿ ಶಿಕ್ಷಕಬಂಧುವು ಸಂಪೂರ್ಣ ಯಶಸ್ವಿಯಾಗಲೆಂದು ನಾವು ಕೋರುತ್ತೇವೆ. ಪ್ರಸಂಗಾನುಸಾರವಾಗಿ ಶಿಕ್ಷಣದಲ್ಲಿ ಅಂದರೆ ದಿನಾಲು ಸಾಲೆಯಲ್ಲಿ ನಡೆಯುವ ಪಾಠಗಳಲ್ಲಿಯೂ ಸುಧಾರಣೆಯಾಗುವಂತೆ ವಿಷಯಕ್ರಮ ಮೊದಲಾದವುಗಳ ಬಗ್ಗೆಯೂ ಸೂಚನೆಗಳು ಶಿಕ್ಷಕಬಂಧುವಿನಲ್ಲಿ ಬರಲೆಂದು ನಾವು ಹಾರೈಸುತ್ತೇವೆ.

Reg. No. B. 2567

ಕನ್ನಡ

ಪ್ರಾಥಮಿಕ ಶಿಕ್ಷಣ

(ಇದರಲ್ಲಿ ಕನ್ನಡ ಶಾಲಾಪತ್ರಿಕೆಯೂ ಶಿಕ್ಷಕೆಯೂ ಸಮಾವೇಶವಾಗಿವೆ.)

Kannada Prathamik Shikshana

— OCTOBER 1934 —

ಸಂಪಾದಕ— ವೆಂಕಟೇಶ ನರಸಿಂಗರಾವ ಮುಗದಾಳ ಬಿ. ಎ.,

ಸಂಪುಟ ೭೧] ಅಕ್ಟೋಬರ ೧೯೩೪ [ವ. ೬ ಸಂ. ೨

ವಿಷಯಾನುಕ್ರಮಣಿಕೆ

ಅ. ನಂ.	ವಿಷಯ.				ಪುಟ.
೧.	ಹಳ್ಳಿಯ ಸುಧಾರಣೆಯಲ್ಲಿ ಶಿಕ್ಷಕನ ಕಾರ್ಯವು			...	೧
೨.	ವಿದ್ಯಾರ್ಥಿಗಳಿಗಾಗಿ ಬರೆದ ಕನ್ನಡ ಪುಸ್ತಕಗಳು			...	೭
೩.	ಬ್ರಿಟಿಷ ಮಲಯವು	...	...	...	೧೨
೪.	ಮಾನಸಶಾಸ್ತ್ರ	...	...	...	೧೩
೫	ಸೂರ್ಯ	...	...	...	೨೫
೬.	ಶಿಕ್ಷಣ ಶಾಸ್ತ್ರಜ್ಞರ ಕೆಲವು ಮತಗಳು		...	...	೨೭
೭.	ಪ್ರಕಟನೆಗಳು	...	...	...	೨೯

Printed by K. R. Bhise at the Karnatak Printing Works, Dharwar
& Published by V. N. Mugdal, B.A.,
Head Master, Training School, Dharwar, at his Office.

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:—ವೆಂಕಟೇಶ ನರಸಿಂಗರಾವ ಮುಗದಾಳ, ಬಿ. ಎ.

ಸಂಪುಟ ೭೧ ||| ಅಕ್ಟೋಬರ ೧೯೩೪ ||| ವರ್ಷ ೬ ಸಂ. ೭

ಹಳ್ಳಿಯ ಸುಧಾರಣೆಯಲ್ಲಿ ಶಿಕ್ಷಕನ ಕಾರ್ಯವು

ನಮ್ಮ ದೇಶದಲ್ಲಿ ಹಳ್ಳಿಗಳ ಸಂಖ್ಯೆ ಹೆಚ್ಚು; ಹಳ್ಳಿಗರಿಗೆ ಶಿಕ್ಷಣವು ದೊರೆಯ
ದ್ದರೆ ನಮ್ಮ ಹಳ್ಳಿಗಳು ಸುಧಾರಿಸುವದು ಅರಿದಾದದ್ದು. ಈ ಶಿಕ್ಷಣವು
ವರಿಗೆ ದೊರೆಯಬೇಕಾದರೆ ಹಳ್ಳಿಯ ಶಿಕ್ಷಕರು ಕೈಲಾದಷ್ಟು ಪ್ರಯತ್ನ ಮಾಡ
ಕ್ಕದ್ದು. ಹಳ್ಳಿಗಳಲ್ಲಿ ಅನೇಕ ಕಾರಣಗಳ ಮೂಲಕ ಶಿಕ್ಷಕರ ಪರ್ಚಸ್ಸು
ಡಿಮೆಯಾಗುತ್ತ ಹೋಗುತ್ತಿರುವದು. ಇದನ್ನು ಹೆಚ್ಚಿಸಿ ದೃಢಪಡಿಸಲಿಕ್ಕೆ
ರಕಾರದ ಎಲ್ಲ ಖಾತೆಗಳ ಸಣ್ಣ ದೊಡ್ಡ ಅಧಿಕಾರಸ್ಥರು ಪ್ರಯತ್ನ ಮಾಡ
ಕ್ಕದ್ದು. ಶಿಕ್ಷಕನು ಈ ಮಹತ್ಪದ ಕಾರ್ಯದಲ್ಲಿ ಅವರಿಗೆ ಮನಸೊಪ್ಪಿ
ರವಾಗತಕ್ಕದ್ದು. ತನಗಿರುವ ಅನೇಕ ತೊಂದರೆಗಳನ್ನು ಸಾವರಿಸಿಕೊಂಡು ತನ್ನ
ಾಲೆಯ ಹುಡುಗರ ಶಿಕ್ಷಣವನ್ನು ಸಮಾಧಾನಕರವಾಗಿ ಸಾಗಿಸುವದು ಹಳ್ಳಿಯ
ಕ್ಷಕನಿಗೆ ಸಾಕುಬೇಕಾಗುತ್ತದೆ. ಈ ಪರಿಸ್ಥಿತಿಯಲ್ಲಿ ಜನಸಾಮಾನ್ಯರ ಶಿಕ್ಷಣ
ನ್ನು ಪ್ರತ್ಯೇಕವಾಗಿ ಸಾಗಿಸುವ ಭಾರವನ್ನು ಶಿಕ್ಷಕನು ವಹಿಸುವದು ಸಾಧ್ಯವಿಲ್ಲ.
ದರೂ ಸಾಲೆಯ ಮುಖಾಂತರವಾಗಿ ಅಪ್ರತ್ಯಕ್ಷರೀತಿಯಿಂದ ಹಳ್ಳಿಯ ಶಿಕ್ಷಕನು
ಈ ಶಿಕ್ಷಣಕ್ಕೆ ಚಲನವನ್ನು ಕೊಡಬಹುದು.

ಇವೆಲ್ಲ ಮಾತುಗಳು ಈಗ ಸಾರ್ವತ್ರಿಕವಾಗಿ ಒಪ್ಪಿಕೊಂಡವಾಗಿವೆ. ಈ
ನ್ನಿಗೆ ಅಲ್ಲಲ್ಲಿ ಪ್ರಯತ್ನಗಳು ತಕ್ಕಮಟ್ಟಿಗೆ ನಡೆದಿರುವವು. ಆದರೂ ಇವು

ಸಾಕಷ್ಟು ಸಮಾಧಾನಕರವಾಗಿ ಸಾಗಿಲ್ಲವೆಂಬ ಕೂಗು ಮೇಲಿಂದಮೇಲೆ ಕೇಳಬರುತ್ತಿರುವದು. ಇದನ್ನು ಅಡಗಿಸುವದಕ್ಕೆ ಮನವರಿತು ಪ್ರಯತ್ನಪಡುವದು ಪ್ರತಿಯೊಬ್ಬ ಶಿಕ್ಷಕನ ಕರ್ತವ್ಯವೆಂದು ನಾವು ಬಗೆಯುತ್ತೇವೆ. ತನ್ನ ಸಾಲೆಯ ಕೆಲಸದ ಭಾಗವಾಗಿಯೇ ಈ ಕೆಲಸಕ್ಕೆ ನೆರವಾಗುವ ಬಗ್ಗೆ ನಮಗೆ ತೋರಿದ ಒಂದು ಸೂಚನೆಯನ್ನು ಶಿಕ್ಷಕರ ಮುಂದೆ ಇಡುವೆವು.

ಜನಸಾಮಾನ್ಯರ ಶಿಕ್ಷಣವೆಂದಕೂಡಲೆ ಹಳ್ಳಿಯಲ್ಲಿರುವ ಕಲಿಯುವ ವಯಸ್ಸಿನ ಸಣ್ಣ ದೊಡ್ಡ ಜನರಿಗೆಲ್ಲ ಓದು, ಬರೆಹ, ಗಣಿತ ಇವುಗಳನ್ನು ಕ್ರಮವಾಗಿ ಕಲಿಸುತ್ತ ಹೋಗುವದೆಂದು ಸಾಮಾನ್ಯವಾಗಿ ಎಲ್ಲರು ಬಗೆಯುತ್ತಾರೆ. ಆದರೆ ಇವು ಶಿಕ್ಷಣದ ಆಧಾರಸ್ತಂಭಗಳೆಂದು ನಾವು ಒಪ್ಪಿಕೊಂಡರೂ ಇವುಗಳಿಂದಲೇ ಆರಂಭಿಸಿ ಪಾಠಾನುಕ್ರಮದಿಂದ ಪ್ರತಿಯೊಬ್ಬ ವ್ಯಕ್ತಿಗೆ ಇವುಗಳ ಜ್ಞಾನವನ್ನು ಮಾಡಿಕೊಡತಕ್ಕದ್ದೆಂದು ಗ್ರಹಿಸುವ ಕಾರಣವಿಲ್ಲ. ಈ ಕ್ರಮವನ್ನು ಸಣ್ಣ ಹುಡುಗರ ಶಿಕ್ಷಣದಲ್ಲಿ ಸಹ ನಿಯಮಾನುಸಾರವಾಗಿ ಅನುಸರಿಸಬೇಕಾಗುವದಿಲ್ಲ. ತೀರ ಸಣ್ಣ ಮಕ್ಕಳ ಶಿಕ್ಷಣದಲ್ಲಿ ಈ ಪಾಠಾನುಕ್ರಮವನ್ನಿಟ್ಟುಕೊಂಡರೆ ಶಿಕ್ಷಣದ ಆರಂಭದ ಉದ್ದೇಶವು ಸಫಲವಾಗುವದಿಲ್ಲೆಂಬದನ್ನು ಶಿಕ್ಷಕರು ಅರಿತಿರುವರು. ಈ ಆರಂಭದ ಉದ್ದೇಶವೆಂದರೆ ಕಲಿಯುವವನಲ್ಲಿ ಕಲಿಯಬೇಕಾದದ್ದರ ಬಗ್ಗೆ ಆಶೆಯನ್ನುಂಟುಮಾಡುವದು. ಕಲಿಯುವ ಮನಸ್ಸೊಂದು ಸಿದ್ಧವಾದರೆ, ಕಲಿಸುವ ಕೆಲಸವು ಹಗುರಾದದ್ದಾಗುವದು. ಸಣ್ಣವರೇ ಆಗಲಿ ದೊಡ್ಡವರೇ ಆಗಲಿ ಕಲಿಯಬೇಕೆಂಬ ಮನಸ್ಸು ಅವರಿಗೆ ಆಗುವವರೆಗೆ ವಿದ್ಯಾರ್ಥಿಗಳೆನಿಸಿಗೊಳ್ಳಲಾರರು. ಹಸಿವೆಯಿಲ್ಲದವನಿಗೆ ಎಂಥ ರುಚಿಕರವಾದ ಅನ್ನವನ್ನು ಉಣಿಸಲೆಳಸಿದರೂ ಆತನು ಮನಸೊಪ್ಪಿ ಉಣ್ಣಲಾರನು. ಆದ್ದರಿಂದ ಶಿಕ್ಷಣದ ಆರಂಭದ ಮೆಟ್ಟು ಅಂದರೆ ವಿದ್ಯಾರ್ಥಿಯಲ್ಲಿ (ಈತನು ಕಿರಿಯನಿದ್ದರೂ ಸರಿ, ಹಿರಿಯನಾದರೂ ಸರಿ) ಕಲಿಯಬೇಕೆಂಬ ಇಚ್ಛೆಯನ್ನು ಜಾಗ್ರತೆಗೊಳಿಸುವದು; ಆ, ಆ, ಇಲ್ಲವೆ ರ, ಠ, ದಿಂದ ಮೊದಲುಮಾಡುವದಲ್ಲ.

ಹಳ್ಳಿಯ ಜನರಲ್ಲಿ ಜ್ಞಾನದ ಬಗ್ಗೆ ಜಿಜ್ಞಾಸೆಯನ್ನು ಹುಟ್ಟಿಸುವದು ಸಕೃತ್ ದರ್ಶನಕ್ಕೆ ಬಹಳ ಕಠಿಣವಾಗಿ ತೋರುವದು. ಆದರೆ ನಮ್ಮ ದೇಶದಲ್ಲಿ ವಿದ್ಯೆಯ ಬಗ್ಗೆ ಜನಸಾಮಾನ್ಯರಲ್ಲಿ ಅಭಿಮಾನವೂ ಪೂಜ್ಯಬುದ್ಧಿಯೂ ಬಹುಕಾಲದಿಂದ ನೆಲೆಸಿರುವದರಿಂದ ಈ ಕಾರ್ಯವು ಅಷ್ಟು ಬಿಗಿಯಾದದ್ದಲ್ಲವೆಂದು ನಮಗೆ ತೋರುತ್ತದೆ. ನಮ್ಮಲ್ಲಿ ಎಂಥ ನಿರಕ್ಷರರು ಕೂಡ ನಮ್ಮ ಹಳೆಯ ಮಾನ್ಯಗ್ರಂಥಗಳಾದ ರಾಮಾಯಣ ಭಾರತಾದಿ ಗ್ರಂಥಗಳಲ್ಲಿಯ ಕಥೆಗಳನ್ನು ಕೇಳಿರುವರು; ಕೇಳಲು

ಮನಸುಳ್ಳವರಾಗಿರುವರು. ಹೀಗೆ ಪ್ರತಿಯೊಬ್ಬರಲ್ಲಿ ಅಡಗಿರುವ ಜಿಜ್ಞಾಸೆಯ ಅಂಕುರವು ಮೊಳಿಕೆಯೊಡೆಯಲಿಕ್ಕೆ ಶಿಕ್ಷಕರು ನೆರವಾದರೆ ಮುಂದಿನ ಕಾರ್ಯವು ಸುಲಭವಾಗಿ ಸಾಗಬಹುದು. ಓದುಬರೆಹಗಳನ್ನು ಬಲ್ಲವನೇ ಶಿಕ್ಷಿತನೆಂಬ ಕಲ್ಪನೆಯನ್ನು ನಾವು ತುಸು ಕಾಲದವನಿಗೆ ಮರೆಯಬಹುದು. ಕಥೆ, ಕವಿತೆಗಳು ಮನುಷ್ಯನ ಸುಧಾರಣೆಯ ಆರಂಭದ ಕಾಲದಲ್ಲಿ ಶಿಕ್ಷಣದ ಮೊದಲನೆಯ ಪಾಠಗಳಾಗಿದ್ದವು; ಇಂದಿಗೂ ಬಾಲಕರ ಶಿಕ್ಷಣದಲ್ಲಿ ನಿಜವಾಗಿ ಅವೇ ಆರಂಭದ ಪಾಠಗಳಾಗಿರತಕ್ಕದ್ದು. ಈ ಮಾತನ್ನು ಶಿಕ್ಷಕರಿಗೆ ವಿವರಿಸಿ ತಿಳಿಸಿಕೊಡಬೇಕಾಗಿಲ್ಲ.

ಇಂಥ ಪಾಠಗಳಿಂದ ಹಳ್ಳಿಯ ಜನರಲ್ಲಿ ಕಲಿಯಬೇಕೆಂಬ ಮನಸ್ಸು ಉಂಟಾದರೆ ಮುಂದಣ ಶಿಕ್ಷಣವನ್ನು ಅವರಿಗೆ ಕೊಡಲಿಕ್ಕೆ ವಿಶೇಷ ತೊಂದರೆಯಾಗಲಿಕ್ಕಿಲ್ಲ. ತಮಗೆ ಸಂಬಂಧಿಸಿದ ವಿಷಯಗಳ ಬಗ್ಗೆ ತಮಗೆ ತಿಳಿಯುವಂತೆ ಯಾರಾದರೂ ಏನನ್ನಾದರೂ ಹೇಳುವರೆಂದರೆ ಅವರು ಬಂದು ಕೇಳುವರು. ಈ ಕೆಲಸವು ಏನೂ ಪ್ರಯತ್ನವಿಲ್ಲದೆ ಆಗುವದೆಂದು ಅಲ್ಲ; ಆದರೆ ಈ ಕೆಲಸಕ್ಕೆ ಸರಿಯಾದ ತಳಹದಿಯನ್ನು ಶಿಕ್ಷಕರು ಹಾಕಿಟ್ಟಂತಾಗುವದರಲ್ಲಿ ಸಂದೇಹವಿಲ್ಲ. ನಮ್ಮ ಹಳ್ಳಿಯ ಜನರಿಗೆ ಅಂದರೆ ಜನಸಮುದಾಯಕ್ಕೆ ಅವರ ಅನ್ನನೀರು, ಉಡಿಗೆತೊಡಿಗೆ, ಮನೆಮಾರು, ಕೆರೆ ಗುಂಡಿ ಇವುಗಳ ಬಗ್ಗೆ ಮೊದಲು ಜಾಗ್ರತೆಯುಂಟಾಗಬೇಕಾಗಿದೆ. ಆ ಬಳಿಕ ಅವರ ದನಕರ, ನೆಲಹೊಲ, ಪೈರುಗಳು, ಕಾಳುಕಡಿ ಇವುಗಳ ಬಗ್ಗೆ ಉಪಯುಕ್ತವಾದ ಜ್ಞಾನವು ಬೇಕಾಗಿದೆ. ಇಷ್ಟಾದ ಬಳಿಕ ಅವರ ಹಿತಾಹಿತ, ಸಹಕಾರ ಸಂಸ್ಥೆಗಳು, ಆಳಿಕೆಬಾಳಿಕೆ ಮೊದಲಾದವುಗಳ ಬಗ್ಗೆ ಅವರೇ ಜ್ಞಾನಮಾಡಿಕೊಳ್ಳಲು ಸಮರ್ಥರಾಗುವರು. ಹೀಗೆ ಪ್ರತಿಯೊಂದು ಹಳ್ಳಿಯಲ್ಲಿ ಜನಸಾಮಾನ್ಯರಿಗೆ ವಾಚನ, ಕಥನ, ಚರ್ಚೆ, ಉಪನ್ಯಾಸ, ಸಂಭಾಷಣೆ ಮೊದಲಾದವುಗಳ ಮುಖಾಂತರವಾಗಿ ಶಿಕ್ಷಣವು ದೊರೆಯುವ ವ್ಯವಸ್ಥೆಯು ಉಂಟಾದರೆ ಜನಸಾಮಾನ್ಯರ ಶಿಕ್ಷಣದ ಆರಂಭವು ಸರಿಯಾದ ಮಾರ್ಗದಲ್ಲಿ ಆಗುವದೆಂದು ನಮಗೆ ತೋರುತ್ತದೆ. ಈ ಶಿಕ್ಷಣ ಕ್ರಮವು ಜರುಗುತ್ತಿರುವಾಗ ಕೆಲವರಲ್ಲಾದರೂ ಓದುಬರೆಹಗಳನ್ನು ಕಲಿಯುವ ಕುತೂಹಲವು ನಿಶ್ಚಯವಾಗಿ ತಲೆದೋರದಿರದು. ಇವರ ಶಿಕ್ಷಣವನ್ನು ಮುಂದುವರಿಸುವ ಕಾರ್ಯವು ಶಿಕ್ಷಕನದಲ್ಲ; ಸಮಾಜದ್ದಾಗಿರುತ್ತದೆ.

ಶಾಲೆಯಲ್ಲಿ ನಿರ್ದಿಷ್ಟವಾದ ವಾಚನಕವಿತೆಗಳ ಪಾಠಗಳನ್ನು ಪರೀಕ್ಷಕರಿಗೆ ಸಮಾಧಾನವಾಗುವಂತೆ ತಿಳಿಸಿಕೊಟ್ಟರೆ ತಮ್ಮ ಕೆಲಸವು ಆಯಿತೆಂದು ಎಷ್ಟೋ ಶಿಕ್ಷಕರು ನಂಬುವರು; ಪರೀಕ್ಷಕರಾದರೂ ಇದರಿಂದಲೇ ತೃಪ್ತಿಪೊಂದುವರು

ಈ ಮೂಲಕ ವಾಚನಪಾಠಗಳ ಅಂತಿಮ ಉದ್ದೇಶವು ಇವರೀರ್ವರ ದೃಷ್ಟಿಪಥದಿಂದ ದೂರವಾಗಿದೆ. ಓದುವ ಅಭಿರುಚಿಯನ್ನುಂಟುಮಾಡುವದೇ ವಾಚನ ಪಾಠಗಳ ಮುಖ್ಯವಾದ ಉದ್ದೇಶವಿರುವದು. ಮೇಲ್ತರದ ಕವಿತೆಗಳನ್ನು ಹಾಡಿ ನಲಿದಾಡುವದೇ ಕವಿತಾಪಾಠದ ಮೇಲಾದ ಉದ್ದೇಶವಾಗಿರುವದು. ನಿಯಮಿತವಾದ ನಾಲ್ಕು ಪಾಠಗಳನ್ನು ಓದಲಿಕ್ಕೆ ಬಂದರೆ ವಾಚನಾಭಿರುಚಿಯು ಉಂಟಾದಂತಾಗಲಿಲ್ಲ. ಪಾಠಮಾಡಿಸಿದ ನಾಲ್ಕು ಕವಿತೆಯ ಪಂಕ್ತಿಗಳನ್ನು ಅನ್ನಲಿಕ್ಕೆ ಬಂದರೆ ಕವಿತೆಯನ್ನು ಓದಿ ಇಲ್ಲವೆ ಕೇಳಿ ನಲಿದಾಡಿದಂತಾಗಲಿಲ್ಲ. ಆದ್ದರಿಂದ ನಮ್ಮ ಶಾಲೆಗಳಲ್ಲಿ ಭಾಷಾಭ್ಯಾಸವು ಸಮಾಧಾನಕರವಾಗಿ ಸಾಗಿಲ್ಲವೆಂದೇ ನಾವು ಹೇಳಬೇಕಾಗುತ್ತದೆ. ಈ ವಿಷಯದ ಅಭ್ಯಾಸವು ತೃಪ್ತಿಕರವಾಗಿ ಸಾಗಬೇಕಾದರೆ ಹುಡುಗರಿಗೆ ಓದುವ ಚಟವು ಹತ್ತಬೇಕು; ಇದಕ್ಕಾಗಿ ಪ್ರತಿಯೊಂದು ಶಾಲೆಯಲ್ಲಿ ಪ್ರತಿಯೊಂದು ಇಯತ್ತ್ತೆಯ ವಿದ್ಯಾರ್ಥಿಗಳಿಗೆ ಓದಲರ್ಹವಾದ ಅಂದರೆ ಅವರ ವಯಸ್ಸು ಅಭಿರುಚಿಗಳಿಗೆ ತಕ್ಕವಾದ ಸಣ್ಣ ದೊಡ್ಡ ಕಥೆಯ ಪುಸ್ತಕಗಳೂ, ಕವಿತೆಯ ಸಂಗ್ರಹಗಳೂ, ಅವರ ಆಟನೋಟಗಳನ್ನು ವಿವರಿಸುವ ಗ್ರಂಥಗಳೂ ಜೋರಳವಾಗಿ ಇರತಕ್ಕದ್ದು. ಇವುಗಳನ್ನು ಓದಿಕೊಳ್ಳಲಿಕ್ಕೆ, ಇತರರಿಗೆ ಓದಿ ಹೇಳಲಿಕ್ಕೆ ಅವರಿಗೆ ಅನುವು ದೊರೆಯಬೇಕು.

ಈ ಭಾಷಾಭ್ಯಾಸಕ್ರಮವು ಮೇಲಿನ ಒಂದೆರಡು ತರಗತಿಗಳಲ್ಲಿ ನಡೆದರೆ ಸಾಲದು. ಸಾಲೆಗಳ ಪ್ರತಿಯೊಂದು ತರಗತಿಯಲ್ಲಿ ನಡೆಯತಕ್ಕದ್ದು. ಇದಕ್ಕೆ ಶಿಕ್ಷಕನು ಮಾರ್ಗದರ್ಶಿಯಾಗಿರಬೇಕು. ಕೆಳಗಿನ ಇಯತ್ತ್ತೆಗಳಲ್ಲಿ ಈ ಕ್ರಮವನ್ನು ಬಿಡದೆ ಅಭ್ಯಾಸಿಸುವದರಿಂದ ಮೇಲಿನ ಇಯತ್ತ್ತೆಗೆ ಬರುವಷ್ಟರಲ್ಲಿ ಹುಡುಗರಲ್ಲಿ ಭಾಷೆಯ ಬಗ್ಗೆ ಅಭಿಮಾನವೂ ತಮ್ಮ ಭಾಷಾಜ್ಞಾನದ ಬಗ್ಗೆ ಆತುರತೆಯೂ ತೋರಲಾರಂಭಿಸುವವು. ಮೇಲಿನ ಇಯತ್ತ್ತೆಯ ಹುಡುಗರಲ್ಲಿ ಕಥೆಕಾದಂಬರಿಗಳನ್ನಷ್ಟೇ ಅಲ್ಲ; ಸುಲಭವಾದ ಕವಿತಾರೂಪದಲ್ಲಿರುವ ಕಥಾಪ್ರಸಂಗಗಳನ್ನು ಓದುವ ಶಕ್ತ್ತಿಯು ಬಂದಿರುವದು; ತಮಗೂ ತಮ್ಮ ಪರಿಸ್ಥಿತಿಗೂ ತಕ್ಕ ವಿಷಯಗಳ ಬಗ್ಗೆ ಓದಿ ತೋರಿಸಿ ಅವುಗಳನ್ನು ತಿಳಿಸಿಜೇಳುವ ಶಕ್ತ್ತಿಯೂ ಅವುಗಳಬಗ್ಗೆ ಚರ್ಚಿಸುವ ಹಾಗು ಉಪನ್ಯಾಸಮಾಡುವ ಶಕ್ತ್ತಿಯೂ ತಲೆದೋರುತ್ತಿರುವದು. ಹುಡುಗರ ಈ ಉಪನ್ಯಾಸಗಳಲ್ಲಿಯೂ ಚರ್ಚೆಗಳಲ್ಲಿಯೂ ಶಿಕ್ಷಕನು ಭಾಗವಹಿಸಿ, ಅವರಿಗೆ ಹುರುಪುಗೊಟ್ಟು ಮಾರ್ಗದರ್ಶಕನಾಗಬೇಕು. ಈ ಪ್ರಸಂಗಗಳಲ್ಲಿ ತಾಯ್ತಂದೆಗಳನ್ನು ಕರೆಯಿಸಬೇಕು. ತಮ್ಮ ಮಕ್ಕಳ ಜ್ಞಾನವನ್ನೂ ಕೌಶಲವನ್ನೂ ನೋಡಿ ಅವರು ಅಭಿಮಾನಪಡುವದರಲ್ಲಿ ಸಂದೇಹವಿಲ್ಲ. ಮೇಲಾಗಿ ಇದರಿಂದ ಅಪ್ರತ್ಯಕ್ಷವಾಗಿ ಅವರಿಗೆ ಶಿಕ್ಷಣವು, ಯಥಾರ್ಥವಾದ ಶಿಕ್ಷಣವು ದೊರೆಯಲಾರಂಭಿಸುವದು.

ಈ ಬಗೆಯ ಭಾಷಾಭ್ಯಾಸವು ಭಾಷಾಶಿಕ್ಷಣದ ನಿತ್ಯದ ಪದ್ಧತಿಯಾಗಬೇಕು. ಮೇಲಿನ ಇಯತ್ತೆಗಳಲ್ಲಂತೂ ವಾರಕ್ಕೊಮ್ಮೆಯಾದರೂ ಎಲ್ಲ ಹುಡುಗರು ತಮ್ಮ ಪಾಸಗಿಯ ವಾಚನದಲ್ಲಿ ಓದಿ ರುಚಿಗಂಡ ಗದ್ಯಪದ್ಯಗಳನ್ನು ಇತರರಿಗೆ ಓದಿ ತೋರಿಸಬೇಕು. ವಿಶೇಷ ಪ್ರಸಂಗಗಳಲ್ಲಿ ತಾಯ್ತಂದೆಗಳನ್ನು ಈ ಸಭೆಗಳಿಗೆ ಕರೆಯಿಸಬೇಕು. ಇದರಲ್ಲಿ ಅಭಿರುಚಿಯುಂಟಾದವರಿಗಾಗಿ ವಾರಕ್ಕೊಮ್ಮೆ ಪ್ರತ್ಯೇಕವಾದ ಮಾಹಿತಿಯನ್ನು ಮಾಡಿಕೊಡುವ ವಿಷಯಗಳ ಬಗ್ಗೆ ಚರ್ಚೆ ಮಾಡುವ ರೂಢಿಯಿಡಬೇಕು. ಹೀಗೆ ಮಾಡುವದರಿಂದ ಸಾಮಾನ್ಯ ಜನಶಿಕ್ಷಣದ ತಳಹದಿಯನ್ನು ಚೆನ್ನಾಗಿ ಹಾಕಿದಂತಾಗುವದು. ಶಾಲೆಗೆ ಬರುವ ವಿದ್ಯಾರ್ಥಿಗಳಿಗೂ ಯೋಗ್ಯವಾದ ಭಾಷಾಶಿಕ್ಷಣವನ್ನು ಕೊಟ್ಟಂತಾಗುವದು. ಶಿಕ್ಷಕರು ಇದೊಂದು ಜೆಚ್ಚಿನ ಕೆಲಸವೆಂದು ಎಣಿಸದೆ ಭಾಷಾಭ್ಯಾಸದ ಭಾಗವೆಂದು ಬಗೆಯತಕ್ಕದ್ದು. ಜನ ಸಾಮಾನ್ಯರ ಶಿಕ್ಷಣಕ್ಕೆ ಇದರಿಂದ ತಾವು ನರವಾಗುತ್ತಿರುವರೆಂಬದನ್ನೂ ಮರೆಯಲಾಗದು.

ಇಷ್ಟಾದಬಳಿಕ ಕಲಿಯುವ ಮನಸುಳ್ಳ ಬಹುಜನರಿಗೆ ಓದುಬರೆಹ ಗಣಿತಗಳನ್ನು ಕಲಿಸುವ ಕೆಲಸವು ಸಮಾಜದ್ದೆಂದು ನಾವು ಹೇಳಿರುವೆವು. ರಾತ್ರಿ ಶಾಲೆಗಳಲ್ಲಿ ಶಿಕ್ಷಕರು ದೊಡ್ಡವರಿಗೆ ಓದುಬರೆಹ ಗಣಿತಗಳ ಶಿಕ್ಷಣವನ್ನು ಕೊಡತಕ್ಕದ್ದೆಂದು ಕೆಲವರು ಹೇಳುವದುಂಟು. ಶಿಕ್ಷಕರು ಈ ಕೆಲಸವನ್ನು ಮಾಡಲಾರರೆಂದು ನಮ್ಮ ಮತವಲ್ಲ. ಆದರೆ ದಿನಾಲು ಆರೇಳು ತಾಸುಗಳ ವರೆಗೆ ಒಳ್ಳೇ ಶ್ರಮದಿಂದ ಸಾಲೆಗಳಲ್ಲಿ ಕೆಲಸಮಾಡಿದಬಳಿಕ, ಮತ್ತೆ ಅದೇ ಕೆಲಸವನ್ನು ರಾತ್ರಿಯಲ್ಲಿಯೂ ಮಾಡುವದು ಸುಲಭವಲ್ಲ. ಮೇಲಾಗಿ, ಪರಿಣಾಮಕರವಾಗಿ ಸಾಲೆಗಳಲ್ಲಿ ಶಿಕ್ಷಣವನ್ನು ಸಾಗಿಸಬೇಕಾದ ಶಿಕ್ಷಕರಿಗೆ ವಾಚನ, ವಿಚಾರ, ಸಿದ್ಧತೆ ಮೊದಲಾದ ಬಗ್ಗೆ ವೇಳೆಯು ಬೇಕಾಗುತ್ತದೆ. ವಿಶ್ರಾಂತಿಯೆಂಬದು ಎಲ್ಲರಂತೆಯೇ ಶಿಕ್ಷಕರಿಗೂ ಅವಶ್ಯವಾದದ್ದು. ಆಟನೋಟ ಆರಾಮ ವಿರಾಮಗಳು ಇತರರಿಗೆ ಮಾತ್ರವೇನಿಲ್ಲ; ಶಿಕ್ಷಕರಿಗಾಗಿಯೂ ಇರುತ್ತವೆ. ಸಂಸಾರದ ತಾಪವೂ, ಕಡಿಮೆ ಸಂಬಳದ ಮೂಲಕ ಅದರ ತೊಡಕುಗಳೂ ಶಿಕ್ಷಕರಿಗೆ ಹೆಚ್ಚಾಗಿ ಇರುತ್ತವೆ. ಇವೆಲ್ಲವುಗಳನ್ನು ಮರೆತು ಕಲಿಸುವ ಕೆಲಸವೆಲ್ಲ ಶಿಕ್ಷಕರದೇ ಎಂದು ಒತ್ತಿ ಹೇಳುವದು ಸರಿಯಲ್ಲ. ಸಂತೆಯನ್ನು ಕಳೆಯಲಿಕ್ಕಾಗಿ ಕೆಲವರು ಶಿಕ್ಷಕರು ರಾತ್ರಿ ಸಾಲೆಗಳಲ್ಲಿ ಪಾಠಹೇಳಲಿಕ್ಕೂ ಒಪ್ಪಬಹುದು. ಆದರೆ ಹೀಗೆ ಅವರನ್ನು ದುಡಿಸುವದರಿಂದ ಒಟ್ಟಿನಮೇಲೆ ಸಮಾಜಕ್ಕೆ ಲಾಭಕರವೆಂದು ನಾವು ಒಪ್ಪಲಾರೆವು.

ಹೊಟ್ಟೆಬಟ್ಟೆಗಳಿಗೆ ಸಾಕಷ್ಟು ಸಿಕ್ಕದಿದ್ದರೂ ಹೇಳಿದ್ದನ್ನೆಲ್ಲ ಮಾಡಲು ಸಿದ್ಧನಾಗುವ ಬಡಶಿಕ್ಷಕನು ಎಷ್ಟು ಮಾಡಿದರೂ ಸಮಾಜಕ್ಕೆ ತಣಿವಿಲ್ಲವೆಂದು ತೋರು

ತ್ತದೆ. ಜನಸಾಮಾನ್ಯರಿಗೆ ಓದುಬರೆಹ ಗಣಿತಗಳ ಜ್ಞಾನವು ದೊರೆಯಬೇಕಾದರೆ ಸಾಲೆಕಲಿತ ಪ್ರತಿಯೊಬ್ಬ ವ್ಯಕ್ತಿಯು– ಆತನು ದೇಶಭಾಷೆಯ ಮೂರು ನಾಲ್ಕು ಇಯತ್ತೆಗಳನ್ನು ಕಲಿತಿರಲಿ ಇಲ್ಲವೆ ವಿಶ್ವವಿದ್ಯಾಲಯದ ಎಲ್ಲಕ್ಕೂ ಹೆಚ್ಚಿನ ತರಗತಿಯಲ್ಲಿ ತೇರ್ಗಡೆ ಹೊಂದಿರಲಿ; ಕಚೇರಿ ಅಂಗಡಿಗಳಲ್ಲಿ ಸಾಮಾನ್ಯನಾದ ಗುಮಾಸ್ತನಿರಲಿ ಅಧಿಕಾರಸಂಪನ್ನನಾದ ಸದ್ಗೃಹಸ್ಥನಿರಲಿ, ವ್ಯಾಪಾರೋದ್ಯೋಗಗಳಲ್ಲಿ ತೊಡಗಿದ ಸಾವುಕಾರ, ವಕೀಲ ಇಲ್ಲವೆ ಡಾಕ್ಟರನಿರಲಿ– ಅಂದರೆ ಶಿಕ್ಷಿತನೆನಿಸಿದ ಸಮಾಜದ ಪ್ರತಿಯೊಬ್ಬ ವ್ಯಕ್ತಿಯು ಅಕ್ಷರಜ್ಞನಲ್ಲದ ಒಬ್ಬ ವ್ಯಕ್ತಿಯನ್ನು ಸಾಕ್ಷರನನ್ನಾಗಿ ಮಾಡುವ ಸಂಕಲ್ಪವನ್ನು ಮಾಡಿ ಅದನ್ನು ನೆರವೇರಿಸಿದರೆ, ಜನಸಾಮಾನ್ಯರನ್ನು ಶಿಕ್ಷಿತರನ್ನಾಗಿ ಮಾಡುವ ಕಾರ್ಯವು ಒಳ್ಳೇ ಸುಲಭ ಸಾಧ್ಯವಾಗುವದು. ಈ ಕೆಲಸಕ್ಕೆ ನಮ್ಮ ವಿದ್ಯಾವಂತರನ್ನು ಸಮಾಜವು ಯಾಕೆ ಕರೆಯಬಾರದು? ಈ ಕ್ರಮವು ಜಪಾನದಲ್ಲಿ ರೂಢಿಯಲ್ಲಿರುವದೆಂದು ನಾವು ಕೇಳಿಬಲ್ಲೆವು. ನಮ್ಮ ದೇಶದಲ್ಲಿ ಪ್ರತಿಯೊಂದು ಕೆಲಸಕ್ಕೆ ಸರಕಾರದವರ ಮೋರೆಯನ್ನು ನೋಡುತ್ತ ಅವರಿಂದ ಹಣವನ್ನಪೇಕ್ಷಿಸುತ್ತ ಕಾರ್ಯವಿಮುಖರಾಗಿ ಕೂಡ್ರುವ ಪ್ರವೃತ್ತಿಯು ಹೆಚ್ಚಾಗಿರುವದು. ಈ ನಮ್ಮ ವೃತ್ತಿಯು ಇಲ್ಲದಾಗಬೇಕು. ಇದರಿಂದ ಸಮಾಜದ ಹೆಚ್ಚಳವು ಮುಂದುವರಿಯದು. ಅಜ್ಞಾನಾಂಧಕಾರದಲ್ಲಿ ತೊಳಲಿ ಬಳಲುತ್ತಿರುವ ನಮ್ಮ ಹಳ್ಳಿಯ ಬಾಂಧವರಲ್ಲಿ ಜ್ಞಾನದ ಬೆಳಕನ್ನು ಹರವಬೇಕಾದರೆ, ಅವರಲ್ಲಿ ಜ್ಞಾನದಬಗ್ಗೆ ಕುತೂಹಲವನ್ನುಂಟು ಮಾಡುವದು ಮೊದಲನೆಯ ಕೆಲಸವು. ಇದನ್ನು ಸಾಧಿಸಲಿಕ್ಕೆ ನಾವು ಸೂಚಿಸಿದ ಉಪಾಯವು ಪರಿಣಾಮಕರವೆಂಬದನ್ನು ಶಿಕ್ಷಕರು ಅನುಭವದಿಂದ ಮನಗಾಣುವರೆಂದು ನಾವು ನಂಬಿದ್ದೇವೆ.

ವಿದ್ಯಾರ್ಥಿಗಳಿಗಾಗಿ ಬರೆದ ಕನ್ನಡ ಪುಸ್ತಕಗಳು

ಇದು ಪುಸ್ತಕಗಳ ಯುಗವು. ಅಚ್ಚುಹಾಕುವ ಕಲೆಯು ಆರಂಭವಾದಂದಿನಿಂದ ಗುರುಮುಖದಿಂದಲೇ ಜ್ಞಾನವನ್ನು ಸಂಪಾದಿಸುವ ಪರಿಪಾಠವು ಕಡಿಮೆಯಾಗುತ್ತ ಬಂದಿತು. ಸದ್ಯಕ್ಕೆ ಪಾಶ್ಚಾತ್ಯದೇಶಗಳಲ್ಲಿ ಅಚ್ಚು ಹಾಕುವ ಕಲೆಯು ಸುಧಾರಣೆಯ ಶಿಖರವನ್ನೇರಿರುವದೆಂದು ನಿರ್ವಿವಾದವಾಗಿ ಹೇಳಬಹುದು. ಅಲ್ಲಿ ಪ್ರಸಿದ್ಧವಾಗುವ ಪುಸ್ತಕಗಳಲ್ಲಿ ಕಣ್ಣಲ್ಲಿ ಕಣ್ಣಿಟ್ಟು ನೋಡಿದರೂ ಒಂದಾದರೂ ಅಚ್ಚಿನ ದೋಷವು ದೊರೆಯುವದಿಲ್ಲ. ನಮ್ಮಲ್ಲಿ ಈ ಸ್ಥಿತಿಯು ಇನ್ನೂ ಬಂದಿಲ್ಲವೆಂದು ಧಾರಾಳವಾಗಿ ಹೇಳಬಹುದು. ಆದರೂ ಕನ್ನಡದಲ್ಲಿ ಕಳೆದ ೨೫ ವರುಷಗಳಲ್ಲಿ ಮುದ್ರಣದಲ್ಲಿ ಒಳ್ಳೆಯ ಸುಧಾರಣೆಯಾದದ್ದು ಎಲ್ಲರ ನಿದರ್ಶನಕ್ಕೆ ಬಂದ ಮಾತು. ಇಂದಿಗೆ ೬೦ ವರುಷಗಳ ಪೂರ್ವದಲ್ಲಿ ಬೇಸಲ್ ಮಿಶನ್ ಮುದ್ರಣಾಲಯವು ಮಂಗಳೂರಲ್ಲಿ ಸ್ಥಾಪಿತವಾಯಿತೆಂದು ನಾವು ಕೇಳುತ್ತೇವೆ. ಈ ಮುದ್ರಣಾಲಯವು ಕನ್ನಡ ನಾಡಿನಲ್ಲಿ ಎಷ್ಟೋ ವರ್ಷಗಳವರೆಗೆ ಮೇಲಾದದ್ದೆನಿಸಿಕೊಂಡಿತು. ಕಳೆದ ೨೫ ವರುಷಗಳಲ್ಲಿ ಇದರ ಅನುಕರಣವನ್ನು ಮಾಡುವ ಅನೇಕ ಮುದ್ರಣಾಲಯಗಳು ನಮ್ಮ ಕನ್ನಡನಾಡಿನ ಬೇರೆ ಬೇರೆ ಭಾಗಗಳಲ್ಲಿ ತಲೆದೋರಿರುವವು. ಆದರೂ ಇವುಗಳ ಸಂಖ್ಯೆಯು ಮಂಗಳೂರಲ್ಲಿಯೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಇಂದಿಗೂ ಹೆಚ್ಚಾಗಿರುವದು. ಬೆಂಗಳೂರು, ಮೈಸೂರು, ಧಾರವಾಡ ಪ್ರಾಂತಗಳಲ್ಲಿಯೂ ಅಲ್ಲಲ್ಲಿ ಒಂದೆರಡು ಮೇಲ್ತರದ ಕೆಲಸವನ್ನು ಮಾಡುತ್ತಿರುವ ಮುದ್ರಣಾಲಯಗಳಿರುವವು.

ಇತ್ತಲಾಗಿ ಹೊರಡುತ್ತಿರುವ ಪುಸ್ತಕಗಳ ಅಂದವಾದ ಅಚ್ಚುಕಟ್ಟಾದ ಮುದ್ರಣ, ಜೊಕ್ಕಾದ ಬಾಹ್ಯಸ್ವರೂಪ ಇವುಗಳನ್ನು ನೋಡಿ ವಾಚಕರಿಗೆ ಬಹಳ ಸಮಾಧಾನವೆನಿಸುವದು; ಪುಸ್ತಕಗಳನ್ನು ಓದುವ ಮನಸಾಗುವದು. ಆದರೆ ನಮ್ಮ ಮುಂಬಯಿ ಕರ್ನಾಟಕದಲ್ಲಿ ಹೊರಡುವ ಪುಸ್ತಕಗಳಲ್ಲಿ ಇಂಥವುಗಳ ಸಂಖ್ಯೆಯು ಇನ್ನೂ ಸಮಾಧಾನಕರವಾಗಿಲ್ಲ. ಈ ದೃಷ್ಟಿಯಿಂದ ನೋಡಲು ಮೇಲ್ತರದ ಮುದ್ರಣಾಲಯಗಳು ವಾಙ್ಮಯ ಸೇವೆಯಲ್ಲಿ ಮಹತ್ವದ ಒಂದು ಕಾರ್ಯವನ್ನು ನೆರವೇರಿಸುತ್ತಿರುವವೆಂದು ನಿಃಸಂಶಯವಾಗಿ ಹೇಳಬಹುದು.

ಇರಲಿ, ವಿದ್ಯಾರ್ಥಿಗಳಿಗಾಗಿ ಲೇಖಕರು ಪ್ರಸಿದ್ಧಪಡಿಸಿದ ಕನ್ನಡ ಪುಸ್ತಕಗಳ ಬಗ್ಗೆ ನಾವು ಒಂದೆರಡು ಮಾತುಗಳಕಡೆಗೆ ಶಿಕ್ಷಕರ ಲಕ್ಷ್ಯವನ್ನು ಎಳೆಯ

ಬೇಕೆನ್ನುತ್ತೇವೆ. ಚಿಕ್ಕಮಕ್ಕಳಲ್ಲಿ ಓದುವ ಚಟವು ನಲೆಗೊಳ್ಳಬೇಕಾದರೆ ಅವರಿಗೆ ಸೇರುವಂಥ ಪುಸ್ತಕಗಳನ್ನೇ ನಾವು ಅವರ ಕೈಯಲ್ಲಿ ಕೊಡಬೇಕಾಗುವದು ಈ ಪುಸ್ತಕಗಳ ಬಾಹ್ಯ ಸ್ವರೂಪವು ಸುಂದರವಾದದ್ದಿರಬೇಕು. ಒಳಗಿನ ಮುದ್ರಣವು ಅಚ್ಚುಕಟ್ಟಾದದ್ದೂ ಸ್ಪಷ್ಟವಾದದ್ದೂ ಇರಬೇಕು. ವಿಷಯವು ಸುಲಭವಾದದ್ದಿರಬೇಕು. ಆ ವಯಸ್ಸಿನ ಹುಡುಗರ ಗ್ರಹಣಶಕ್ತಿಗೆ ತಕ್ಕದ್ದಾಗಿರಬೇಕು. ಎಲ್ಲಕ್ಕೂ ಹೆಚ್ಚು ಮಹತ್ವದ್ದೆಂದರೆ ವಿಷಯವು ಚಿತ್ತಾಕರ್ಷಕವೂ ವಿವರಣವೂ ಸ್ಪಷ್ಟವೂ ಆಗಲಿಕ್ಕಾಗಿ ಚಿತ್ರಗಳೂ ಆಕೃತಿಗಳೂ ಪುಸ್ತಕಗಳಲ್ಲಿ ತುಂಬಿರಬೇಕು. ಬಣ್ಣದ ಒಂದೆರಡು ಚಿತ್ರಗಳಿದ್ದರಂತೂ ಮೇಲು.

ಸುಂದರವಾದ ಚಿತ್ರವು ಮನಸ್ಸನ್ನು ಮೋಹಗೊಳಿಸುವದು. ಇಂಗ್ಲಿಷದಲ್ಲಿ ಅಚ್ಚಾಗುವ ಸದ್ಯದ ದೈನಿಕ ವರ್ತಮಾನಪತ್ರಗಳಲ್ಲಿಯೂ ನಾಲ್ಕಾರು ಚಿತ್ರಗಳು ಇರುವದುಂಟು. ಮೇಲ್ತರದ ಇಂಗ್ಲಿಷ ಮಾಸಪತ್ರಿಕೆಗಳಲ್ಲಂತೂ ಚಿತ್ರಗಳು ಬೇಕಾದಷ್ಟಿರುತ್ತವೆ. ಕೆಲವು ಲೋಕಪ್ರಿಯವಾದ ಮಾಸಿಕ ಪತ್ರಗಳಲ್ಲಂತೂ ಚಿತ್ರಗಳ ಸುರಿಮಳೆಯೇ ಕಾಣುವದು. ಭಾವಚಿತ್ರಗಳನ್ನು ತೆಗೆಯುವ ಕಲೆಯೂ ಇವುಗಳಿಂದ ಪಡಿಯಚ್ಚುಗಳನ್ನು ಮಾಡುವ ಕಲೆಯೂ ಈ ಪಡಿಯಚ್ಚುಗಳಿಂದ ಮೂರು ನಾಲ್ಕು ಬಣ್ಣಗಳೊಡಗೂಡಿದ ಚಿತ್ರಗಳನ್ನು ಅಚ್ಚುಹಾಕುವ ಕಲೆಯೂ ಪಾಶ್ಚಾತ್ಯದೇಶಗಳಲ್ಲಿ ಒಳ್ಳೇ ಸುಧಾರಣೆಯನ್ನು ಹೊಂದಿವೆ. ಈ ಮೂಲಕ ಇಂಗ್ಲಿಷ ಮೊದಲಾದ ಯುರೋಪೀಯ ಭಾಷೆಗಳಲ್ಲಿ ಅಚ್ಚಾಗುವ ಪುಸ್ತಕಗಳನ್ನೂ ಮಾಸಪತ್ರಿಕೆಗಳನ್ನೂ ನೋಡುವದೆಂದರೆ ಕಣ್ಣಿಗೆ ಹಬ್ಬವೆನಿಸುತ್ತದೆ. ಈ ಕಲೆಗಳ ಉಪಯೋಗವನ್ನು ಆ ದೇಶಗಳ ಜನರು ವಿದ್ಯಾರ್ಥಿಗಳಿಗಾಗಿ ಅಚ್ಚುಹಾಕುವ ಪುಸ್ತಕಗಳ ವಿಷಯದಲ್ಲಿ ಪೂರ್ಣವಾಗಿ ಮಾಡುತ್ತಿರುವರು. ಚಿಕ್ಕಮಕ್ಕಳಲ್ಲಿ ಸುಂದರವಾದ, ಮನೋಹರವಾದ ಚಿತ್ರಗಳಬಗ್ಗೆ ಒಳ್ಳೆಯ ಹಸಿವೆಯಿರುವದೆಂದು ಆ ದೇಶಗಳ ಶಿಕ್ಷಣ ಶಾಸ್ತ್ರಜ್ಞರು ಅರಿತಿದ್ದಾರೆ.

ನಮ್ಮ ದೇಶದಲ್ಲಿ ಮಾತ್ರ ಈ ಅರಿವು ಇನ್ನೂ ಉದಯವಾಗಿಲ್ಲವೆಂದು ತೋರುತ್ತದೆ. ವಿದ್ಯಾರ್ಥಿಗಳಿಗಾಗಿ ಅಚ್ಚಾದ ಪುಸ್ತಕಗಳಲ್ಲಿ ನಮ್ಮಲ್ಲಿಯೂ ಪೆಸರಿಗೆ ಚಿತ್ರಗಳನ್ನು ಸೇರಿಸುವದುಂಟು. ಆದರೆ ಇವುಗಳಿಂದ ವಿಪರೀತ ಪರಿಣಾಮವಾಗುವದನ್ನು ನಾವು ನೋಡಿರುವೆವು. ಎಷ್ಟೋ ಹುಡುಗರ ಮನಸ್ಸು ಆ ಚಿತ್ರಗಳ ಕಡೆಗೆ ಹೋಗುವದೇ ಇಲ್ಲ; ಅವು ಅಷ್ಟು ನಿರಸವಾಗಿರುತ್ತವೆ. ಬಣ್ಣಗಳಿಂದ ಮನೋಹರವೂ ಸ್ವಚ್ಛತೆಯ ಮೂಲಕ ಸಮಾಧಾನಕರವೂ ಆದ ಚಿತ್ರಗಳುಳ್ಳ ಸಣ್ಣ ಮಕ್ಕಳಿಗಾಗಿ ಪ್ರಸಿದ್ಧಪಡಿಸಿದ ಪುಸ್ತಕಗಳು ನಮ್ಮಲ್ಲಿ ಅಪರೂಪವಾಗಿ

ದೃಷ್ಟಿಗೆ ಬೀಳುತ್ತವೆ. ಈ ಬಗ್ಗೆ ನಮ್ಮಲ್ಲಿ ಬೇಡಿಕೆಯು ಹಚ್ಚಾದಂತೆ ಪೂರೈಕೆಯು ಹೆಚ್ಚಾಗುವದೆಂದು ನಮ್ಮ ಭರವಸೆಯಿದೆ. ಶಿಕ್ಷಕರು ಹುಡುಗರಿಗಾಗಿ ಆರಿಸುವ ಪುಸ್ತಕಗಳಲ್ಲಿ ವಿಷಯವಿವೇಚನೆಗಿಂತ ಅಂದವೂ ಅಚ್ಚುಕಟ್ಟೂ ಆದ ಮುದ್ರಣ, ಮನೋಹರವಾದ ಚಿತ್ರಗಳ ಸಂಖ್ಯೆ, ಬಾಹ್ಯಸೌಂದರ್ಯ ಇವುಗಳ ಕಡೆಗೆ ಹೆಚ್ಚು ಗಮನಕೊಡತಕ್ಕದ್ದು. ಪುಸ್ತಕಗಳ ಆತ್ಮಕ್ಕೆಂತ ಶರೀರವೂ, ಶರೀರಕ್ಕಿಂತ ಉಡಿಗೆತೊಡಿಗೆಯೂ ಹೆಚ್ಚು ಮಹತ್ವವಾದವೆಂದು ನಾವು ನಂಬಿಲ್ಲ. ಆದರೆ ಇವುಗಳನ್ನು ನಾವು ಬಹುಕಾಲದವರೆಗೆ ದುರ್ಲಕ್ಷಿಸಿದ್ದರಿಂದ ಇವು ಸುಧಾರಣೆ ಹೊಂದದೆ ಅಸಡ್ಡೆಯಾಗಿ ಉಳಿದಿರುವವು. ಇವು ಸುಧಾರಿಸಲಿಕ್ಕೆ ನಾವು ಪ್ರಯತ್ನಮಾಡತಕ್ಕದ್ದು. ಅಂದರೆ ಉತ್ತಮವಾದ ವಿಷಯವಿವೇಚನೆಯುಳ್ಳ ಗ್ರಂಥಗಳೊಡನೆ ಬಾಹ್ಯಸೌಂದರ್ಯಗೂಡಿದ ಪುಸ್ತಕಗಳನ್ನು ಓದುವ ಸುದಿನಗಳು ನಮ್ಮ ಚಿಕ್ಕ ಮಕ್ಕಳಿಗೂ ವಿದ್ಯಾರ್ಥಿಗಳಿಗೂ ಲಭಿಸುವವು.

ಇದರಿಂದ ನಮ್ಮ ವಿದ್ಯಾರ್ಥಿಗಳಲ್ಲಿ ಓದುವ ಅಭಿಲಾಷೆಯು ಹೆಚ್ಚುವದು; ಇದು ಶಿಕ್ಷಣದ ದೃಷ್ಟಿಯಿಂದ ಸಾಮಾನ್ಯವಾದ ಲಾಭವಲ್ಲ. ಆದರೆ ಇದಕ್ಕೂ ಹೆಚ್ಚಿನ ಲಾಭಗಳು ಇದರಲ್ಲಿ ಅಡಕವಾಗಿವೆ. ನಮ್ಮ ವಿದ್ಯಾರ್ಥಿಗಳಲ್ಲಿ ಅಚ್ಚುಕಟ್ಟುತನ, ಅಂದ, ಸ್ವಚ್ಛತೆ ಇವು ಸಾಕಷ್ಟು ಇರುವದಿಲ್ಲೆಂಬದನ್ನು ಎಲ್ಲರೂ ಒಪ್ಪಿಕೊಳ್ಳುವರು. ಇವು ಅವರಲ್ಲಿ ನೆಲೆಗೊಳ್ಳಬೇಕಾದರೆ ಅವರು ಉಪಯೋಗಿಸುವ ಓಡವೆಗಳಲ್ಲಿ, ಅವರು ಕೂಡುವ ಸ್ಥಳದಲ್ಲಿ, ಅವರ ಸುತ್ತಲು ಇರುವ ಪರಿಸ್ಥಿತಿಯಲ್ಲಿ ಇವು ಯಾವಾಗಲೂ ಇರಬೇಕಾಗುವವು. ಈ ಗುಣಗಳ ಬಗ್ಗೆ ಪಾಠಗಳನ್ನು ತಿಳಿಸಿಕೊಡುವದಕ್ಕಿಂತ, ಇವುಗಳಬಗ್ಗೆ ಕಥೆಗಳನ್ನು ಜೋಳಿ ಅವುಗಳ ನೀತಿಯನ್ನು ವಾಕ್ಯರೂಪದಲ್ಲಿ ಜೋಳಿಸುವದಕ್ಕಿಂತ ಅವುಗಳನ್ನು ಪ್ರತ್ಯಕ್ಷವಾಗಿ ಅವರ ಪರಿಸ್ಥಿತಿಯಲ್ಲಿ ಉಂಟುಮಾಡುವದು ನೈತಿಕ ಶಿಕ್ಷಣದ ಮೇಲಾದ ಉಪಾಯವಾಗಿರುವದು. ಸದ್ಯಕ್ಕೆ ನಾವು ಸಾಲೆಗಳಲ್ಲಿ ಕಲಿಸುವ ಚಿತ್ರಕಲೆಯ (ಡ್ರಾಯಿಂಗ) ಮುಖ್ಯ ಉದ್ದೇಶವು ಇದೇ ಇರುವದು. ಅವರೆ ಪ್ರತಿಯೊಂದು ವಿಷಯದ ಅಂತಿಮಧ್ಯೇಯವೂ ವ್ಯವಹಾರದ ಉದ್ದೇಶವೂ ನಮ್ಮ ಶಿಕ್ಷಣ ಪ್ರಪಂಚದಲ್ಲಿ ಪರೀಕ್ಷೆಯೇ ಆಗಿರುವ ಮೂಲಕ ಈ ಜೆಜ್ಜಿನ ಹಾಗು ಸಾರಭೂತವಾದ ಧ್ಯೇಯಗಳು ನಮ್ಮೆಲ್ಲರ ದೃಷ್ಟಿಯಿಂದ ದೂರವಾಗಿ ದುಷ್ಪರಿಣಾಮಗಳನ್ನು ಉಂಟುಮಾಡುತ್ತಿರುತ್ತವೆ.

ಕಳೆದ ಬೇಸಿಗೆಯ ವಿರಾಮದಲ್ಲಿ ಬೆಂಗಳೂರಿನಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿಯವರು ಆಧುನಿಕ ವಿಚಾರೋಪನ್ಯಾಸ ಮಾಲೆಯೊಂದನ್ನೂ ಕನ್ನಡ ಗ್ರಂಥಪ್ರದರ್ಶನವೊಂದನ್ನೂ ಸರಪೇರಿಸಿದರು. ಈ

ಮಜೋತ್ಸವವನ್ನು ಮೈಸೂರು ಸಂಸ್ಥಾನದ ಮುಖ್ಯ ಸಚಿವರಾದ ಅಮೀನ್-ಉಲ್-ಮುಲ್ಕ್ ಸರ್ ಮಿರ್ಜಾ ಎಂ. ಇಸ್ಮೈಲ್ ಸಾಹೇಬರು ಆರಂಭಿಸಿ, ವಿಚಾರ ಪರಿಪ್ಲುತವಾದ ಒಂದು ಭಾಷಣವನ್ನು ಮಾಡಿದರು. ಅದರಲ್ಲಿ ನಾವು ಮೇಲೆ ವಿವರಿಸಿದ ವಿಷಯದ ಬಗ್ಗೆ ಅವರು ಆಡಿದ ಮಾತುಗಳನ್ನು ನಮ್ಮ ಶಿಕ್ಷಕವೃಂದದ ಅವಗಾಹನಗಾಗಿ ನಾವು ಇದರಡಿಯಲ್ಲಿ ಕೊಡುವೆವು. ಅವರು ಅಂದದ್ದು:—

ಪುಸ್ತಕಗಳ ಬಾಹ್ಯರೂಪವು ಅಂದವಾಗುತ್ತಿರುವ ವಿಚಾರವನ್ನು ನಾನು ಪ್ರಸ್ತಾಪಿಸಿದೆನಷ್ಟೆ. ಪ್ರಕಟಿಸುವ ಪುಸ್ತಕಗಳು ಅಂದವಾಗಿರಬೇಕೆಂಬ ಅಂಶವನ್ನು ಒತ್ತಿಜೇಳಿ ಸೂಚಿಸಲಿಚ್ಛಿಸುವೆನು. ಸೊಗಸಾದ ಚಿತ್ರಪಟಗಳಿಗೆ ಕೂಡ ಜಿನ್ನಾಗಿ ಕಟ್ಟುಕನ್ನಡಿಗಳನ್ನು ಹಾಕಿಲ್ಲದ ಪಕ್ಷಕ್ಕೆ ಒಟ್ಟಿನ ಅಂದವೇ ಕೆಡಿಮೆಯಾಗಲು ಕಾರಣವಾಗುತ್ತದೆ. ಪುಸ್ತಕಗಳ ವಿಚಾರವೂ ಹೀಗೆಯೇ. ಮುದ್ರಣವು ಪರಿಷ್ಕಾರವಾಗಿಲ್ಲದಿರುವದರಿಂದ ಅಥವಾ ಕೆಟ್ಟ ಕಾಗದದಮೇಲೆ ಅಚ್ಚುಹಾಕಿಸಿರುವದರಿಂದ ಅಥವಾ ಉತ್ತಮ ರೀತಿಯಲ್ಲಿ ಕಟ್ಟುಹಾಕಿಲ್ಲದಿರುವದರಿಂದ ಅಥವಾ ಕೆಲವು ಸಂದರ್ಭಗಳಲ್ಲಿ ಇವೆಲ್ಲ ಕಾರಣಗಳಿಂದ ಒಳ್ಳೆಯ ಪುಸ್ತಕವು ಕೂಡ ಚಿತ್ತಾಕರ್ಷಕವಾಗದೆ ಹೋಗಬಹುದು. ಭಾರತೀಯರಾದ ನಾವು ಈ ವಿಚಾರವನ್ನು ಗಮನಿಸಿ ಎಚ್ಚತ್ತುಗೊಳ್ಳಬೇಕು. ಪುಸ್ತಕದ ಜೀವದಂತಿರುವ ಅದರ ವಿಷಯವೊಂದು ಜಿನ್ನಾಗಿದ್ದರೆ ಸಾಕೆಂದು ವಾದಿಸಿ ಫಲವಿಲ್ಲ. ಪುಸ್ತಕದ ಜೀವದಂತಿರುವ ಒಳಗಿನ ವಿಷಯಗಳು ಉತ್ತಮವಾಗಿಯೇ ಇದ್ದರೂ ಪುಸ್ತಕದ ದೇಹದಂತಿರುವ ಹೊರಗಿನ ರೂಪವು ಅಸಹ್ಯಕರವಾಗಿದ್ದರೆ ಅಥವಾ ಅನುಚಿತವೆನಿಸುವಂತಿದ್ದರೆ ಆ ಪುಸ್ತಕವನ್ನು ತೆರೆದು ಓದುವದಕ್ಕೇ ಮನಸ್ಸಿಲ್ಲದೆ ಹೋಗಬಹುದು. ಒಂದು ಪುಸ್ತಕದ ವಿಷಯಕ್ಕೆ ತಕ್ಕ ಬಾಹ್ಯರೂಪವು ಅದಕ್ಕಿರಬೇಕು. ಒಂದು ಗ್ರಂಥದಲ್ಲಿ ಸ್ತುತಿಸಾದಿಸಿರುವ ವಿಷಯಗಳು ಕೇವಲ ಸಾಧಾರಣವಾಗಿದ್ದರೆ ಆ ಗ್ರಂಥದ ಬಾಹ್ಯರೂಪವೂ ಸಾಧಾರಣವಾಗಿಯೇ ಇರಬೇಕು. ಕಲಾಸಂಬಂಧವಾದ ಗ್ರಂಥದ ಬಾಹ್ಯರೂಪವೂ ಕಲಾಭಿರುಚಿಯನ್ನು ಸೂಚಿಸುವಂತೆಯೇ ಇರಬೇಕು. ಆಧ್ಯಾತ್ಮಿಕ ವಿಚಾರಗಳನ್ನೊಳಗೊಂಡಿರುವ ಪುಸ್ತಕಕ್ಕೇ ಆಗಲಿ, ಮಾನವ ಜೀವನದ ದೃಶ್ಯಗಳನ್ನು ಅಥವಾ ಪ್ರಾಕೃತಿಕ ಸನ್ನಿವೇಶಗಳನ್ನು ಚಿತ್ರಿಸಿ ತನ್ಮೂಲಕ ಸೃಷ್ಟಿ-ಸೌಂದರ್ಯವನ್ನು ಸೂಚಿಸುವ ಪುಸ್ತಕಕ್ಕೇ ಆಗಲಿ ತತ್ವಶಾಸ್ತ್ರ ಅಥವಾ ವಿಜ್ಞಾನ ಶಾಸ್ತ್ರದ ದೃಷ್ಟಿಯಿಂದ ನಾನಾ ಸಿದ್ಧಾಂತಗಳನ್ನೂ ಪ್ರತಿಪಾದಿಸುವ ಪುಸ್ತಕಕ್ಕೇ ಆಗಲಿ ಸೌಷ್ಟವವಿಲ್ಲದ ಅಥವಾ ಅಸಹ್ಯಕರವಾದ ಬಾಹ್ಯರೂಪವೆಂದಿಗೂ ಇರಕೂಡದು.

ನಾನು ಈ ವಿಚಾರವನ್ನು ಈ ರೀತಿ ಒತ್ತಿಹೇಳಿರುವದಕ್ಕೆ ಪುಸ್ತಕಗಳು ಅಂದ ಗಾಗಿರಬೇಕೆಂಬ ಕಾರಣವೊಂದೇ ಅಲ್ಲದೆ ಜನಜೀವನವು ಪರಿಷ್ಕಾರವಾಗುವ ಕಾರಣವೂ ಉಂಟು. ಒಂದು ವಿಚಾರದಲ್ಲಿ ಅಂದಚಂದಗಳಿಗೆ ಗಮನಕೊಡುವವರು ಇತರ ವಿಚಾರಗಳಲ್ಲಿಯ ಅಂದಚಂದಗಳಿಗೂ ಅದೇರೀತಿಯಲ್ಲಿ ಗಮನಕೊಡುವರು. ಬಾಹ್ಯಸೌಂದರ್ಯಕ್ಕೆ ಗಮನಕೊಡದೆ ಹೊರಗೆ ಹೋಗಿದ್ದರೇನೆಂದು ಅಲಕ್ಷ್ಯವಾಗಿರುವವರ ಮನೋವೃತ್ತಿಯು ಸೌಂದರ್ಯವನ್ನಾಗಲಿ ಅಚ್ಚುಕಟ್ಟನ್ನಾಗಲಿ ಅಷ್ಟೇನೂ ಬಯಸದೆ ಮಟ್ಟುಬಿದ್ದಿರುವದೆಂದು ಹೇಳಬಹುದು. ಈ ರೀತಿ ಮಟ್ಟುಬಿದ್ದಿರುವ ಮನಸ್ಸಿನವರು ಅನೇಕ ಮಾರ್ಗಗಳಲ್ಲಿ ತಮ್ಮ ಮನಸ್ಸಿನ ಪ್ರವೃತ್ತಿಯನ್ನು ತೋರ್ಪಡಿಸಿಕೊಳ್ಳುವರು. ಮನೆಯ ಸಾಮಾನುಗಳು ಮುಂತಾದವುಗಳನ್ನಿಡುವದರಲ್ಲಿ ಓರಣವಿಲ್ಲದೆ ಅಥವಾ ಸೌಂದರ್ಯ ಜ್ಞಾನವಿಲ್ಲದೆ ಅಸ್ತವ್ಯಸ್ತವಾಗಿಟ್ಟಿರುವದು, ದೇವತಾರಾಧನೆಯ ಸ್ಥಳಗಳ ಸುತ್ತುಮುತ್ತಲೂ ಕೊಳಕು ತುಂಬಿ ಅಶುಚಿಯಾಗಿದ್ದರೂ ಲಕ್ಷ್ಯಮಾಡದಿರುವದು ಮುಂತಾದವುಗಳನ್ನು ಇದಕ್ಕೆ ನಿದರ್ಶನವಾಗಿ ಹೇಳಬಹುದು. ಅಂದಚಂದಗಳಲ್ಲಿಯೂ ಅಚ್ಚುಕಟ್ಟಿನಲ್ಲಿಯೂ ಆಸಕ್ತಿಯು ನಿರಂತರವೂ ಇರುವದಾದರೆ, ಆ ಬಗೆಯ ಮನೋವೃತ್ತಿಯುಳ್ಳವರು ತಮ್ಮ ಸುತ್ತುಮುತ್ತಲೂ ಇರುವ ವಸ್ತುಗಳೆಲ್ಲ ಸೊಗಸಾಗಿಯೂ ಸುಂದರವಾಗಿಯೂ ಇರಬೇಕೆಂದೂ, ಒಳಗಿನ ಪ್ರಪಂಚಕ್ಕೂ ಹೊರಗಿನ ಪ್ರಪಂಚಕ್ಕೂ ಸಾಮರಸ್ಯವಿರಬೇಕೆಂದೂ ಬಯಸುತ್ತಾರೆ. ಅಷ್ಟೇ ಅಲ್ಲ, ಅವರು ತಮ್ಮ ಉಡುಪಿನಲ್ಲಿಯೂ ತಮ್ಮ ನಡೆನುಡಿಗಳಲ್ಲಿಯೂ ಅದೇ ಬಗೆಯ ಮನೋಧರ್ಮವನ್ನಿಟ್ಟುಕೊಂಡು ಅದಕ್ಕನುಗುಣವಾಗಿ ವರ್ತಿಸುತ್ತಾರೆ. ಅಲ್ಲದೆ ಅವರು ತಮ್ಮ ವೃತ್ತಿಯನ್ನೂ ಉದ್ಯೋಗವನ್ನೂ ತಮ್ಮ ಪ್ರಜಾಧರ್ಮಗಳನ್ನೂ ಕುಂದುಕೊರತೆಗಳಿಲ್ಲದಂತೆ ಅಚ್ಚುಕಟ್ಟಾಗಿ ನೆರವೇರಿಸುತ್ತಾರೆ. ಹೀಗೆ ಉತ್ತಮರೀತಿಯಲ್ಲಿ ಪ್ರಜಾಧರ್ಮಗಳು ಕರ್ತವ್ಯಬುದ್ಧಿಯಿಂದ ಸಮೀಚೀನವಾಗಿ ನೆರವೇರಬೇಕಾದುದು. ಜನಜೀವನವು ಸುವ್ಯವಸ್ಥಿತವಾಗುವ ಕಾರ್ಯವು ಹುರುಪಿನಿಂದ ನಡೆಯಬೇಕಾದ ಈಗಿನ ಸಂಧಿಸಮಯದಲ್ಲಿ ಅತಿ ಮುಖ್ಯವಾದ ಅವಶ್ಯವಿಚಾರವಾಗಿದೆ.

ಬ್ರಿಟಿಷ ಮಲಯವು

(ಒಂದು ಇಂಗ್ಲಿಷ ಪತ್ರಿಕೆಯ ಆಧಾರದಿಂದ)

ಮಲಯ ದ್ವೀಪಕಲ್ಪವು ಸಣ್ಣ ನಾಡು. ಇದು ಇಂಗ್ಲೆಂಡ ದೇಶದಷ್ಟು ಸಹ ದೊಡ್ಡದಿಲ್ಲ. ನಮ್ಮ ಇಲಾಖೆಯ ನಾಲ್ಕರಲ್ಲಿ ಒಂದು ಪಾಲಿಗಿಂತ ಸ್ವಲ್ಪ ದೊಡ್ಡದು. ಆದರೂ ಸಮೃದ್ಧಿ ಸಂಪತ್ತುಗಳಿಂದ ಕೂಡಿದೆ. ಇಡಿಯ ಭೂಮಂಡಲಕ್ಕೆ ಬೇಕಾಗುವ ಐದರಲ್ಲಿ ಮೂರುಭಾಗ ರಬ್ಬರವೂ ಮೂರರಲ್ಲಿ ಒಂದು ಪಾಲು ತವರವೂ ಈ ಸಣ್ಣ ದ್ವೀಪಕಲ್ಪದಲ್ಲಿ ಹೊರಡುತ್ತದೆ. ಏಶಿಯ ಖಂಡದ ನಕಾಶವನ್ನು ನೋಡಿದರೆ ಈ ನಾಡು ಆ ಖಂಡದ ಒಂದು ಸೀರಾದ ಬೆರಳಿನಂತೆ ಕಾಣುವದು. ಬ್ರಹ್ಮದೇಶವೂ ಸಿಯಾಮ ಪ್ರಾಂತವೂ ಈ ಬೆರಳಿನ ಹಿಂದಿರುವ ಹಿಂಗೈಯ ಪ್ರದೇಶಗಳು. ಪೂರ್ವಕ್ಕೆ ಬೋರ್ನಿಯೋ ದ್ವೀಪವೂ ಪಶ್ಚಿಮಕ್ಕೆ ಸುಮಾತ್ರಾ ದ್ವೀಪವೂ ಹಬ್ಬಿವೆ. ಇವೆರಡರ ನಡುವೆ ಡಚ್ಚರ ವಶದಲ್ಲಿರುವ ಜಾವಾ ನಡುಗಡ್ಡೆಯು ಅಡ್ಡವಾಗಿ ಮಲಗಿದಂತಿದೆ. ಈ ನಡುಗಡ್ಡೆಯನ್ನು ಏಶಿಯವನ್ನು ತೋರಿಸುವಂತೆ ಕಾಣುತ್ತದೆ. ೨೦೦೦ ಮೈಲುಗಳಾಚೆಗೆ ಆಸ್ಟ್ರೇಲಿಯದ ದ್ವೀಪ ಖಂಡವು ಇರುವದೆಂದೂ ಹೇಳುವಂತಿದೆ.

ಇದರ ತೀರ ದಕ್ಷಿಣದ ತುದಿಗೆ ಸಿಂಗಾಪುರದ ಸಣ್ಣ ನಡುಗಡ್ಡೆಯೂ ಸಿಂಗಾಪುರದ ಬಂದರವೂ ಇರುವವು. ಸಿಂಗಾಪುರವು ಭೂಮಂಡಲದ ವ್ಯಾಪಾರದ ಬಂದರಗಳಲ್ಲಿ ಹೆಸರಾದದ್ದಿರುವದು. ಬ್ರಿಟಿಷರು ತಮ್ಮ ಪೂರ್ವದ ಸಾಮ್ರಾಜ್ಯದ ರಕ್ಷಣೆಗಾಗಿ ಇಲ್ಲಿ ಹಡಗುಪಡೆಯ ತಾಣವನ್ನು ಏರ್ಪಡಿಸಿದ್ದಾರೆ. ಪೂರ್ವದ ನಾಡುಗಳ ಆಯಕಟ್ಟಿನ ಸ್ಥಳವೆಂದರೆ ಸಿಂಗಾಪುರವೇ ಸರಿ. ಚೀನ ಜಪಾನ ದೇಶಗಳಿಂದಲೂ ಆಸ್ಟ್ರೇಲಿಯದಿಂದಲೂ ಸುತ್ತಲಿನ ನಡುಗಡ್ಡೆಗಳ ಗುಂಪುಗಳಿಂದಲೂ ಸಿಂಹಲದ್ವೀಪದ ಮಾರ್ಗವಾಗಿ ಹಿಂದುಸ್ತಾನ, ಆಫ್ರಿಕ, ಅಮೇರಿಕ ಹಾಗು ಯುರೋಪ ಇವೆಲ್ಲ ಖಂಡಗಳಿಗೆ ಹೋಗುವ ಹಡಗಗಳು ಈ ಬಂದರದ ಮೇಲೆ ಹಾಯ್ದು ಹೋಗುವವು. ಆದ್ದರಿಂದ ಈ ಬಂದರದಲ್ಲಿ ಇವೆಲ್ಲ ದೇಶಗಳ ವ್ಯಾಪಾರದ ಹಡಗಗಳನ್ನು ಯಾವಾಗಲೂ ನೋಡಬಹುದು. ಊರ ಬೀದಿಗಳಲ್ಲಿ ಹತ್ತಿಪ್ಪತ್ತು ರಾಷ್ಟ್ರಗಳ ಜನರು ಯಾವಾಗಲೂ ದೃಷ್ಟಿಗೆ ಬೀಳುವರು. ಆದರೂ ಸುಮಾರು ನೂರು ವರ್ಷಗಳ ಹಿಂದೆ ಈ ಪಟ್ಟಣವು ಇರಲಿಲ್ಲ. ಸದ್ಯದ ಪಟ್ಟಣದ ಸ್ಥಳವು ಬಲವುಳ್ಳ ಬಂದರವಾಗಲಿಕ್ಕೆ ತಕ್ಕದ್ದೆಂದು ಮೊದಲು ಕಂಡುಹಿಡಿದವನು ಸರ ಸ್ಟಾಮಫರ್ಡ ರ್ಯಾಫಲ್ಸನೆಂಬ ಇಂಗ್ಲಿಷ ಗ್ರಹಸ್ಥನು. ಆಗ ಇದು ನರೆಯ

ಜೋಹರ ಪ್ರಾಂತದ ಅರಸನ ವಶದಲ್ಲಿತ್ತು. ಸರ ಸ್ಟಾಮಫರ್ಡನು ಈ ಅರಸ ನೊಡನೆ ಮಾತುಕತೆಗಳನ್ನು ನಡೆಸಿ ೧೮೧೯ರಲ್ಲಿ ಗ್ರೇಟಬ್ರಿಟನ್ನಕ್ಕಾಗಿ ಇದನ್ನು ಸಂಪಾದಿಸಿದನು. ಸದ್ಯಕ್ಕೆ ಇದು ಸ್ಟ್ರೇಟ್ಸ ಸೆಟಲ್‌ಮೆಂಟ್ಸ ಎಂಬ ಬ್ರಿಟಿಷ ಸಾಮ್ರಾಜ್ಯದ ಭಾಗದ ರಾಜಧಾನಿಯಾಗಿರುವದು. ಇದರಲ್ಲಿ ಸಿಂಗಾಪುರವಲ್ಲದೆ ಪೆನಾಂಗ, ವೆಲ್ಲಸ್ಲಿ, ಡಿಂಡಿಂಗ್ಸ ಹಾಗು ಮಲಕ್ಕಾ ಎಂಬ ನಾಲ್ಕು ಪ್ರಾಂತಗಳಿವೆ. ಇವೆಲ್ಲವೂ ಕೂಡಿ ಒಂದು ಬ್ರಿಟಿಷ್ ಕ್ರೌನಕಾಲನಿಯಾಗಿವೆ. ಕೊನೆಯ ನಾಲ್ಕು ಪ್ರಾಂತಗಳು ದ್ವೀಪಕಲ್ಪದ ಪಶ್ಚಿಮದ ದಂಡೆಗೆ ಹತ್ತಿ ದೂರದೂರದಲ್ಲಿವೆ. ಸಿಂಗಾಪುರದಿಂದ ಉಗಿಬಂಡಿಯಮಾರ್ಗವಾಗಿ ಉತ್ತರಕ್ಕೆ ಪ್ರವಾಸಮಾಡಿದರೆ ಮೊದಲು ಮಲಕ್ಕಾ ಪಟ್ಟಣವು ಬರುವದು. ಇದು ಮಲಯ ದ್ವೀಪಕಲ್ಪದೊಳಗಿನ ಪುರಾತನ ಪಟ್ಟಣಗಳಲ್ಲಿ ಒಂದಾಗಿರುವದು. ೧೫೧೧ ರಲ್ಲಿ ಪೋರ್ತುಗೀಜರು ಇದನ್ನು ವಶಮಾಡಿಕೊಂಡರು. ಆ ಜಯಶಾಲಿಗಳ ವಂಶಜರು ಇಂದಿಗೂ ಈ ಪಟ್ಟಣದಲ್ಲಿ ವಾಸಿಸುವರು. ಪೋರ್ತುಗೀಜರ ಒಂದೆರಡು ಓಣಿಗಳು ಈಗಲೂ ಅಲ್ಲಿ ಇವೆ. ಇವರು ಮೊದಲು ಕಟ್ಟಿಸಿದ ಕೋಟೆ ಕೊತ್ತಲಗಳ ಕುರುಹುಗಳೂ ಅಲ್ಲಿ ಕಾಣುತ್ತವೆ.

ಹಾಗೆಯೇ ಉಗಿಬಂಡಿಯಿಂದ ಉತ್ತರಕ್ಕೆ ಸಾಗಿದರೆ ಕೌಲಾಲಂಪೂರ ಎಂಬ ಊರು ಬರುವದು. ಇದು ಮಲಯದ ಸಂಯುಕ್ತ ಸಂಸ್ಥಾನಗಳ ರಾಜಧಾನಿಯು. ಇವು ಬ್ರಿಟಿಷ ಪ್ರಾಂತಗಳಲ್ಲ. ಸ್ವತಂತ್ರ ರಾಜ್ಯಗಳು. ಒಂದೊಂದು ಸಂಸ್ಥಾನಕ್ಕೆ ಒಬ್ಬ ಸುಲ್ತಾನನು ಅಧಿಪತಿಯಾಗಿರುವನು. ಇವರೆಲ್ಲ ಬ್ರಿಟಿಷರ ಸಂರಕ್ಷಣೆಯನ್ನು ಸಂಪಾದಿಸಿಕೊಂಡಿರುವರು ಎಲ್ಲ ಸುಲ್ತಾನರ ಸಂಯುಕ್ತ ಕೌನ್ಸಿಲ್ಲೊಂದು ಕೌಲಾಲಂಪೂರದಲ್ಲಿ ಬ್ರಿಟಿಷ ಹಾಯ್ ಕಮಿಶನರನ ಅಧ್ಯಕ್ಷತೆಯಲ್ಲಿ ನೆರೆದು, ರಾಜ್ಯದಾಡಳಿತದ ಪ್ರಶ್ನೆಗಳ ಬಗ್ಗೆ ನಿಷ್ಕರ್ಷೆಮಾಡುವದು. ಮಲಯ ದ್ವೀಪಕಲ್ಪದ ಮಿಕ್ಕ ಭಾಗದಲ್ಲೆಯೂ ಸುಲ್ತಾನರು ಆಳುವರು. ಇವರು ಗ್ರೇಟ ಬ್ರಿಟನ್ನಿನೊಡನೆ ಪ್ರತ್ಯೇಕವಾಗಿ ಒಡಂಬಡಿಕೆಗಳನ್ನು ಮಾಡಿಕೊಂಡಿರುವರು. ಮಲಯದ ಸಂಯುಕ್ತ ಸಂಸ್ಥಾನಗಳಂತೆ ಇವರು ಬ್ರಿಟಿಷರ ರಕ್ಷಣೆಯಲ್ಲಿಲ್ಲ.

ಸಿಂಗಾಪುರದ ದಕ್ಷಿಣಕ್ಕೆ ಸ್ವಲ್ಪ ಅಂತರದ ಮೇಲೆ ಭೂಮಧ್ಯರೇಷೆಯು ಹಾಯುವ ನಾಡು ಇರುವದಷ್ಟೇ ಈ ಮೂಲಕ ಇಲ್ಲಿ ಸೂರ್ಯಪ್ರಕಾಶವು ಚೆನ್ನಾಗಿ ಬೀಳುವದು. ದ್ವೀಪಕಲ್ಪದ ಬಹುಭಾಗವು ಬೆಟ್ಟಗಳಿಂದಲೂ ಅವುಗಳ ಮೇಲೆ ದಟ್ಟವಾಗಿ ಬೆಳೆದ ಹಸಿರಿಡಿದ ಅಡವಿಗಳಿಂದಲೂ ಚಂದಕಾಣುವದು. ಈ ಬೆಟ್ಟಗಳು ಕೆಲವೆಡೆಗಳಲ್ಲಿ ೭೦೦೦ ಫೂಟು ಎತ್ತರವಾಗಿವೆ; ಹಾಗು ದ್ವೀಪಕಲ್ಪದ

ಬೆಸ್ನುಮಣಿಯಂತೆ ನಡುವೆ ಹಬ್ಬಿವೆ. ಅಲ್ಲಲ್ಲಿ ಅವುಗಳಿಂದ ಎಡಬಲಕ್ಕೆ ಗುಡ್ಡದ ಸಾಲುಗಳು ಹೋಗಿರುವವು. ಅಡವಿಗಳಲ್ಲಿ ಮೃಗಜಾತಿಗೆ ಕೊರತೆಯಿಲ್ಲ. ಹಲವು ಬಗೆಯ ಪ್ರಾಣಿಗಳು ಕಣ್ಣಿಗೆ ಬೀಳುತ್ತವೆ. ಆನೆ ಹುಲಿಗಳು ಹಿಂದು ಸ್ತಾನದ ಈ ಪ್ರಾಣಿಗಳಿಗಿಂತ ಆಕಾರದಲ್ಲಿ ಸಣ್ಣವು. ಗಂಡಕಗಳೂ ಅಡವಿಗಳಲ್ಲಿ ತಿರುಗಾಡುತ್ತಿರುತ್ತವೆ. ಇವುಗಳ ಸಂಖ್ಯೆಯು ಈಗ ಬಹಳನಿಲ್ಲ. ಮಲಯದ ಮೂಲ ನಿವಾಸಿಗಳು ಹುಲಿಯುಗರುಗಳನ್ನೂ ಮೀಸೆಗಳನ್ನೂ ಭಯಭಕ್ತಿಯಿಂದ ರಕ್ಷೆಗಳೆಂದು ಧರಿಸುವದುಂಟು. ಇಲ್ಲಿ ಸಣ್ಣ ಕರಡಿಗಳೂ ಇರುತ್ತವೆ. ಕೋತಿ ಮಂಗಗಳ ಸಂಖ್ಯೆ ಹೆಚ್ಚು. ಇವುಗಳಲ್ಲಿ ಕೆಲವಕ್ಕೆ ಬಾಲವು ಉದ್ದವಾಗಿದೆ; ಕೆಲವಕ್ಕೆ ಬಾಲವೇ ಕಾಣುವದಿಲ್ಲ. ಒಂದು ಜಾತಿಯ ಗಿಡ್ಡ ಬಾಲದ ಮಂಗವನ್ನು ಮಲಯರು ಸಾಕುವದುಂಟು. ಇವು ತೆಂಗಿನ ಗಿಡಗಳನ್ನು ಹತ್ತಿ ಕಾಯಿಗಳನ್ನು ಬಹು ಚಪಲವಾಗಿ ಉದುರಿಸುತ್ತವೆ. ಈ ಕೆಲಸಕ್ಕೆ ಇವನ್ನು ಉಪಯೋಗಿಸಿಕೊಳ್ಳುವರು. ಮಲಯದ ಪೂರ್ವದ ದಂಡೆಯನಾಡು ಉಸುಕುಗೂಡಿದ ನೆಲದ ಪ್ರದೇಶವು. ಒಳನಾಡಿನಲ್ಲಿ ಮಾತ್ರ ಬೆಟ್ಟದ ಮೇಲೆ ಕಾಡುಗಳು ಹಬ್ಬಿವೆ. ಇವು ಪಶ್ಚಿಮದ ಅರಣ್ಯಗಳಷ್ಟು ನಿಬಿಡವಾಗಿಲ್ಲ.

ರಬ್ಬರವು ಮಲಯದ ಎಲ್ಲಕ್ಕು ಹೆಚ್ಚಾದ ಬೆಳೆಯು– ೩೦ ಲಕ್ಷ ಎಕರೆ ಭೂಮಿಯನ್ನು ವ್ಯಾಪಿಸಿದೆ; ಕೆಲವು ಗಿಡಗಳನ್ನು ದಕ್ಷಿಣ ಅಮೇರಿಕೆಯಿಂದ ತಂದು ಮೊದಲು ೧೮೭೭ರಲ್ಲಿ ಹಚ್ಚಿದರು. ೧೯೦೦ರಲ್ಲಿ ಇಡಿಯ ಭೂಮಂಡಲದ ರಬ್ಬರದ ಬೇಡಿಕೆಯು ೪ ಟನ್ ಮಾತ್ರವಿತ್ತು. ೧೯೩೦ ರಲ್ಲಿ ಇದು ೬೫ ಲಕ್ಷ ಟನ್ ಆಗಿದೆ. ಬತ್ತ, ತೆಂಗು ಇವು ಮಲಯದ ಇತರ ಮಹತ್ವದ ಬೆಳೆಗಳು. ಕೊಬ್ಬರಿಯು ಗಿಟಕುಗಳು ಇಲ್ಲಿಂದ ದೊಡ್ಡ ಪ್ರಮಾಣದಿಂದ ರಫ್ತಾಗುತ್ತವೆ. ಅನಾನಸ ಹಣ್ಣುಗಳಾದರೂ ಇಲ್ಲಿಂದ ಇಂಗ್ಲಂಡಕ್ಕೆ ವಿಪುಲವಾಗಿ ಹೋಗುತ್ತವೆ. ಇವಲ್ಲದೆ ಅಡಿಕೆ, ಮೆಣಸು, ಬೆತ್ತ ಮೊದಲಾದವೂ ತಕ್ಕಮಟ್ಟಿಗೆ ಈ ದೇಶದಲ್ಲಿ ಬೆಳೆಯಾಗುತ್ತವೆ.

ಮಲಯದಲ್ಲಿ ಪ್ರವಾಸಮಾಡುವಾಗ ಹಲವು ಕುಲದ ಜನರು ನಮ್ಮ ದೃಷ್ಟಿಗೆ ಬೀಳುವರು. ಎಲ್ಲ ವರ್ಣಗಳ ಜನರು–ಬಿಳಿಜನರು, ಕಪ್ಪು ಬಣ್ಣದವರು, ಹಳದಿ ಜನರು ಹಾಗು ಕಂದಿ ಬಣ್ಣದವರು– ಇಲ್ಲಿ ವಾಸವಾಗಿದ್ದಾರೆ. ಇಲ್ಲಿಯ ಭೂಮಿಯು ಫಲವತ್ತಾದದ್ದು; ಕಣಿಗಳು ತವರಮಯವಾದವು. ಆದ್ದರಿಂದಲೇ ಈ ಜನರೆಲ್ಲ ಹೊರಗಿನಿಂದ ಬಂದು ಇಲ್ಲಿ ನೆಲಸಿರುವರು. ಮಲಯರ ಸಂಖ್ಯೆಯು ಒಟ್ಟು ಜನಸಂಖ್ಯೆಯ ಅರ್ಧ ಅಂದರೆ ಸುಮಾರು

ಲಂಲಕ್ಷ ಇರುವದು. ಇಲ್ಲಿ ಚೀನರು ಹೆಚ್ಚಾಗಿದ್ದಾರೆ. ಇವರು ಕಣಿಗಳಲ್ಲಿ ದುಡಿಯುವರು; ವ್ಯಾಪಾರದಲ್ಲಿ ತೊಡಗಿರುವರು. ದಕ್ಷಿಣಹಿಂದುಸ್ತಾನದಿಂದ ಬಂದವರೂ ಇಲ್ಲಿ ಬೇಕಾದಷ್ಟು ಜನರು ಇರುವರು. ಇವರು ರಬ್ಬರು ಹಾಗು ತೆಂಗಿನ ತೋಟಗಳಲ್ಲಿ ಕೂಲಿಕೆಲಸ ಮಾಡುವರು. ರಬ್ಬರಿನ ಕಾರಖಾನೆಗಳು ಹೆಚ್ಚಾದಂತೆ ಯುರೋಪೀಯರ ಜನಸಂಖ್ಯೆಯು ಇಲ್ಲಿ ಬೆಳೆದಿರುವದು. ಜಪಾನರೂ, ಅರಬರೂ, ನಿಗ್ರೋಜನರೂ ಕೆಲವರು ವಾಸವಾಗಿದ್ದಾರೆ.

ಮಲಯದ ನಿವಾಸಿಗಳ ಉಡಿಗೆತೊಡಿಗೆಗಳಲ್ಲಿ ಅವರಿಗಿರುವ ಬಣ್ಣಗಳ ಮೇಲಿನ ಪ್ರೀತಿಯು ಚೆನ್ನಾಗಿ ಕಾಣುವದು. ಇವರು ಮೈಯಲ್ಲಿ ವಿವಿಧ ಬಣ್ಣದ ಒಂದು ನಿಲುವಂಗಿಯನ್ನು ತೊಟ್ಟು ತಲೆಗೆ ಒಂದು ಚೌಕವನ್ನು ಕಟ್ಟಿಕೊಳ್ಳುವರು. ಮಲಯರು ಸ್ವಭಾವದಿಂದ ಆನಂದವೃತ್ತಿಯುಳ್ಳವರು; ಯಾವುದನ್ನೂ ಮನಸಿಗೆ ಬಹಳ ಹಚ್ಚಿಕೊಳ್ಳುವದಿಲ್ಲ. ಆದರೂ ಬುದ್ಧಿವಂತರು, ಅಭಿಮಾನಿಗಳು, ಸ್ವಚ್ಛತೆಗೆ ಮೆಚ್ಚುವರು. ಬೇಟೆಯಾಡುವದರಲ್ಲಿಯೂ ಬಲೆಹಾಕುವದರಲ್ಲಿಯೂ ಒಳ್ಳೆಯ ಕುಶಲರು. ಡೋಣಿಗಳನ್ನು ಬಹು ಜಾಣತನದಿಂದ ನಡೆಸುವರು. ಯಾವಾಗಲೂ ಎದೆ ಮುಂದೆಮಾಡಿಕೊಂಡು ನಡೆಯುವರು. ತಾವು ಕಡಿಮೆಯವರೆಂಬ ಭಾವನೆಯು ಇವರಲ್ಲಿಲ್ಲ. ಸಶುಪ್ರಾಣಿಗಳ ಸ್ವಭಾವವನ್ನು ಇವರು ಚೆನ್ನಾಗಿ ಬಲ್ಲರು. ಅವರಲ್ಲಿ ಒಂದು ಕಥೆಯುಂಟು; ಅದರಿಂದ ಅವರ ಸ್ವಭಾವವೂ ಪ್ರಾಣಿಗಳ ಜ್ಞಾನವೂ ವ್ಯಕ್ತವಾಗುತ್ತವೆ. ಅದನ್ನು ಇಲ್ಲಿ ಕೊಟ್ಟಿರುತ್ತೇವೆ.

ಮಲಯದ ಹಳವುಗಳಲ್ಲಿ ಸಣ್ಣದೊಂದು ಜಾತಿಯ ಜಿಗರೆಯು ಇರುವದು ಇದಕ್ಕೆ "ಇಲಿ ಜಿಗರೆ" ಎನ್ನುವರು. ಆಕಾರಮಾನದಿಂದ ಇದು ಮೊಲದಷ್ಟು ಇರುವದು. ಮೂರ್ತಿ ಸಣ್ಣದಾದರೂ ಇದರ ಮೋಸಕ್ಕೆ ಕಡಿಮೆಯಿಲ್ಲ. ಒಂದು ದಿನ ಒಂದು "ಇಲಿ ಜಿಗರೆಯು" ಅಡವಿಯಲ್ಲಿ ಓಡಾಡುತ್ತಿರುವಾಗ ಒಂದು ಹಳ್ಳದ ದಡಕ್ಕೆ ಬಂದಿತು. ಆ ಹಳ್ಳವು ಅಗಲವಾಗಿಯೂ ಆಳವಾಗಿಯೂ ಹರಿಯುತ್ತಿತ್ತು. ಆದ್ದರಿಂದ ಅದನ್ನು ದಾಟುವದು ಅರಿದಾಯಿತು. ದಡದ ಬಳಿಯಲ್ಲಿಯೇ ಮೊಸಳೆಯರಸನು ಬಿಸಿಲುಕಾಸಿಕೊಳ್ಳುತ್ತ ಬಿದ್ದಿದ್ದನು ಅವನನ್ನು ನೋಡಿ ಈ ಠಕ್ಕ ಪ್ರಾಣಿಯು—"ಮಹಾರಾಜರೇ, ನೀವೆಂಥ ಅರಸರು? ನಿಮಗೆ ಪ್ರಜೆಗಳೇ ಇಲ್ಲವೆಂದು ತೋರುತ್ತದೆ" ಎಂದು ಕೆಣಕಿತು. ಮೊಸಳೆಗೆ ಈ ಮಾತು ಕೇಳಿ ಬಹಳ ಕೆಡಕೆನಿಸಿತು. ಅದು "ಯಾಕಪ್ಪಾ, ಹೀಗೆ ಹೀಯಾಳಿಸುವಿ? ಸಹಸ್ರಾವಧಿ ಮೊಸಳೆಗಳು ನನ್ನ ಅಪ್ಪಣೆಯನ್ನು ಕೋರುತ್ತ ಯಾವಾಗಲೂ

ಸಿದ್ಧರಿರುವರು" ಎಂದು ಹೇಳಿತು. "ಹ, ಹಾ, ಹಾ! ಇದು ನಿಜವೇ? ಅವರನ್ನು ಕರೆ, ನೋಡೋಣ. ನಿನ್ನ ಮಾತಿನ ಸತ್ಯತೆಯನ್ನು ಪರೀಕ್ಷಿಸಿ ಬಿಡೋಣ" ಎಂದು ಆ ಕಪಟ ಚಿಗರೆಯು ಅದನ್ನು ರೇಗಿಸಿತು ಕೂಡಲೆ ಮೊಸಳೆಯು ಒಂದು ಸಿಳ್ಳು ಹಾಕಲು, ಸಾವಿರಾರು ಮೊಸಳೆಗಳು ಆ ಹಳ್ಳದೊಳಗಿಂತ ಈಸುತ್ತ ಬಂದು, ಅರಸನ ಸುತ್ತಲು ಮುಜರೆ ಮಾಡುತ್ತ ನಿಂತವು. ಚಿಗರೆಯು ತುಸು ಗೊಂದಲದಲ್ಲಿ ಬಿದ್ದಂತೆ ನಟಿಸಿ, "ಮಹಾರಾಜರೇ, ಇಲ್ಲಿ ಬಂದ ನಿಮ್ಮ ಪ್ರಜೆಗಳು ಎಷ್ಟು ಜನರಿರುವರೆಂದು ನನಗೆ ತಿಳಿಯಲೊಲ್ಲದು; ನಾನು ಎಣಿಸಿ ನೋಡಬೇಕಾಗಿದೆ. ಇವರನ್ನು ಎರಡು ಸಾಲಾಗಿ ನಿಲ್ಲ ಹೇಳಿರಿ" ಅಂದಿತು. ಆಗ ಮೊಸಳೆಯರಸನು ಉಬ್ಬಿನಿಂದ ಎಲ್ಲ ಮೊಸಳೆಗಳನ್ನು ಒಂದರ ಹಿಂದೊಂದರಂತೆ ಒಂದರ ಬಾಲಕ್ಕೆ ಇನ್ನೊಂದರ ಮೋರೆ ಹಚ್ಚಿ ಹಳ್ಳದಲ್ಲಿ ಎರಡು ಸಾಲಾಗಿ ನಿಲ್ಲಲು ಆಜ್ಞೆ ಮಾಡಿದನು. ಆಗ ಆ ಚಪಲ ಚಿಗರೆಯು ಎಣಿಸುವ ನೆವ ಮಾಡಿ ಅವುಗಳ ಬೆನ್ನ ಮೇಲೆ ಅಟ್ಟಹಾಸದಿಂದ ನಡೆಯುತ್ತ ಎದುರಿಗಿನ ದಂಡೆಯನ್ನು ಸೇರಿ, ಕೂಗಿ ರಾಜನಿಗೆ ಸಲಾಮು ಹೇಳಿ, ಅಡವಿಯನ್ನು ಸೇರಿತು

ಮಾನಸಶಾಸ್ತ್ರ

ಕಲಿಸುವ ಪಾಠಗಳು ಬೇಸರಬಾರದಂತೆ ನಡೆಯಬೇಕಾದರೆ ಶಿಕ್ಷಕನು ಹುಡುಗರನು ಯಾವಾಗಲೂ ಆನಂದವೃತ್ತಿಯಲ್ಲಿಯೇ ಇಡುವ ಉದ್ದೇಶದಿಂದ ಅವರಿಗೆ ತಿಳಿಯದಂಥ ಕಠಿಣ ವಿಷಯಗಳನ್ನು ಕಲಿಸದೆ ಸುಲಭವಾದ ವಿಷಯಗಳನ್ನೇ ಕಲಿಸುತ್ತ ಕೂಡ ಬೇಕೆಂಬ ಉದ್ದೇಶವಲ್ಲ. ಹುಡುಗರ ಶಾರೀರಿಕ ಹಾಗು ಮಾನಸಿಕ ಶಕ್ತಿಗಳು ಕ್ರಮೇಣ ವಿಕಾಸಪಟ್ಟು ಬಲಪಟ್ಟಂತೆ ಸುಲಭ ಸಂಗತಿಗಳಿಂದ ಕ್ರಮೇಣ ಕಠಿಣ ಸಂಗತಿಗಳನ್ನು ಶಿಕ್ಷಕನು ಅವರಿಗೆ ಕಲಿಸಬೇಕೆಂಬದೇ ಆ ಕ್ರಮದ ರಹಸ್ಯವು.

ಶಿಕ್ಷಣಕ್ರಮದಲ್ಲಿ ತಿಳಿಯದಂಥ ಸಂಗತಿಗಳು ಎಡರುಗಳಂತೆ ಬಂದಾಗ ವಿದ್ಯಾರ್ಥಿಗಳು ಹಿಂಜರಿಯದೆ ಹೆಚ್ಚಿನ ಪ್ರಯತ್ನ ಮಾಡಿ ಅವುಗಳನ್ನು ದಾಟಲುದ್ಯುಕ್ತರಾಗುವಂತೆ ವ್ಯವಸ್ಥೆ ಇರಬೇಕು. ಆದರೂ ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರವನ್ನು ಎಂದೂ ಬಿಡ ಬಾರದು.

ನಮ್ಮ ಅನುಭವದಲ್ಲಿ ವೈಚಿತ್ರ್ಯವೂ ನಾವೀನ್ಯತೆಯೂ ಇರುವವರೆಗೆ ಯಾವದೊಂದು ವಸ್ತುವಿನಿಂದ ಇಲ್ಲವೆ ಕಾರಣದಿಂದ ನಮಗೆ ತಾತ್ಕಾಲಿಕ ಆನಂದವೆನಿಸುವದು. ಆದರೆ ಅದೇ ತರದ ಸ್ಥಿತಿಯು ಬಹುಕಾಲದ ವರೆಗೆ ಉಳಿದಿದ್ದರೆ ಆನಂದದ ಪ್ರಮಾಣವು ಕಡಿಮೆ ಯಾಗುತ್ತ ನಮ್ಮಲ್ಲಿ ಒಂದು ತರದ ಉದಾಸೀನ ಭಾವನೆಯು ಉಂಟಾಗುವದು. ಆ ಕಾಲಾವಧಿಯನ್ನು ವಿಸ್ತರಿದಾಗ್ಯೂ ಪರಿಸ್ಥಿತಿಯಲ್ಲಿ ಅದಲುಬದಲು ಆಗದಿದ್ದರೆ ನಮಗೆ ಒಂದು ತರದ ದುಃಖವೆನಿಸುವದು. ದುಃಖದ ಸ್ಥಿತಿಯಾವರೂ ಹೀಗೇ ಇರುವದು. ದುಃಖಕ್ಕೆ ಹೊಸ ಹೊಸ ಭರಿಯು ಬೀಳಹತ್ತಿತೆಂದರೆ ಅವಕ್ಕೆ ಉದ್ರೇಕವಾಗುವದು. ಆದರೆ ಯಾವದೊಂದು ದುಃಖವನ್ನುಂಟುಮಾಡುವ ಪರಿಸ್ಥಿತಿಯು ಬಹುಕಾಲದ ವರೆಗೆ ಹಾಗೇ ಉಳಿದದ್ದಾದರೆ ಅದರ ತೀವ್ರತೆಯು ಮಂದವಾಗಹತ್ತುವದು. ಶಿಕ್ಷಕನು ವಿದ್ಯಾರ್ಥಿಗಳಿಗೆ ಸಿಟ್ಟು ಮಾಡಿದ್ದರೆ ಅದು ಅವನ ಮನಸಿಗೆ ಹತ್ತಿ ದುಃಖವನ್ನುಂಟುಮಾಡುವದು. ಆದರೆ ಶಿಕ್ಷಕನು ಪದೆ ಪದೆ ವಿದ್ಯಾರ್ಥಿಯ ಮಾನಹಾನಿಯನ್ನು ಮಾಡತೊಡಗಿದರೆ ಅವನ ಮನಸಿನ ಕೋಮಲತೆಯು ಒರಟಾಗಿ ಅಪಮಾನಕಾರಕ ಶಬ್ದಗಳ ಪರಿಣಾಮವು ಅವನ ಮನಸಿನ ಮೇಲೆ ಆಗದಂತಾಗುವದು. ಈ ಕಾರಣದಿಂದ ಶಿಕ್ಷಕನು ಅಷ್ಟಕ್ಕೆ ಇಷ್ಟಕ್ಕೆ ವಿದ್ಯಾರ್ಥಿಗಳನ್ನು ದಂಡಿಸಬಾರದೆಂದು ಶಿಕ್ಷಣ ಶಾಸ್ತ್ರದಲ್ಲಿ ಹೇಳಿದೆ. ಶವವನ್ನು ನೋಡಿದ ಕೂಡಲೆ ಎಷ್ಟೋ ಜನರಿಗೆ ದುಃಖವೆನಿಸುವದು. ಆದರೆ ಹೆಣ ಹೊರುವ ಹೊಲೆಯನು ಸ್ಮಶಾನದಲ್ಲಿ ಕೂಡ ನಗುತ್ತ ಆನಂದವೃತ್ತಿಯಲ್ಲಿರುವನು.

ಮೇಲಿನ ವಿವೇಚನೆಯಿಂದ ಸುಖದಾಯಕ ಇಲ್ಲವೆ ದುಃಖದಾಯಕ ಪರಿಸ್ಥಿತಿಯಲ್ಲಿ ನಾವು ಬಹಳ ಕಾಲದ ವರೆಗೆ ಇದ್ದ ಮೇಲೆ ಆ ಪರಿಸ್ಥಿತಿಯ ಪರಿಣಾಮವು, ನಾವೀನ್ಯತೆಯು ಹೊರಟು ಹೋಗುವದರಿಂದ ಆಗದಂತೆ ಆಗುವದೆಂಬ ಸಂಗತಿಯು ವ್ಯಕ್ತವಾಗುವದು. ಎಷ್ಟೋ ಪ್ರಸಂಗಗಳಲ್ಲಿ ಮೊಟ್ಟಮೊದಲು ಅಸಹ್ಯವಾದ ಇಲ್ಲವೆ ದುಃಖದಾಯಕವಾದ ಸಂಗತಿಗಳು ವಿಪರೀತವಾದ ಪರಿಣಾಮಗಳನ್ನುಂಟುಮಾಡುವವು. ಹೀಗಾಗಬೇಕಾದರೆ ಯಾವದೊಂದು ಭಾವನೆಗೆ ಚಟದ ಸ್ವರೂಪವು ಬರಬೇಕಾಗುವದು. ಅಫೀಮು ತಿನ್ನುವವನಿಗೆ ಮೊದಲು ಅದು ಕಹಿಯಾಗಿ ಹತ್ತುವದು. ಆದರೆ ಆ ಕ್ರಮವನ್ನು ಅವನು ಹಾಗೇ ನಡಿಸಿದ್ದಾದರೆ ಚಟಬಿದ್ದು ಆ ಅಫೀಮು ತಿನ್ನುವದರಿಂದಲೇ ಅವನಿಗೆ ಆನಂದವೆನಿಸುವದು.

ಚಿಕ್ಕ ಬಾಲಕರಲ್ಲಿ ಯಾವ ಬಗೆಯ ಚಟಗಳೂ ಇಲ್ಲದಿರುವದರಿಂದ ಅವರ ಶಿಕ್ಷಣ ಕ್ರಮದಲ್ಲಿ ನಾವೀನ್ಯತೆ ಇದ್ದದ್ದಾದರೆ ಅವರು ಆನಂದದಿಂದ ಕಲಿಯುವರು. ಮುಂದೆ ಅವರು ದೊಡ್ಡವರಾದಮೇಲೆ ಕಲಿಯತಕ್ಕ ವಿಷಯಗಳಿಂದಲೇ ಅವರಿಗೆ ಆನಂದವೆನಿಸ ಹತ್ತುವ ಕಾರಣ ಕಲಿಸುವ ಪದ್ಧತಿಗಳಲ್ಲಿ ಅದಲುಬದಲು ಮಾಡುವ ಅವಶ್ಯಕತೆಯು ಉಳಿಯುವದಿಲ್ಲ. ಸುಖದುಃಖಗಳಲ್ಲಿ ಶಾರೀರಿಕ ಸುಖದುಃಖಗಳು ಹಾಗು ಮಾನಸಿಕ ಸುಖದುಃಖಗಳು ಎಂಬೆರಡು ಪ್ರಕಾರಗಳುಂಟು.

ವಿಕಾರಗಳ ವ್ಯಾಪ್ತಿಯೂ ಪರಿಣಾಮಗಳೂ

ಎಲ್ಲಬಗೆಯ ವಿಕಾರಗಳು ಮಿದುಳಿನ ಕೋಶಗಳಲ್ಲಿ ಒಂದುಬಗೆಯ ಸ್ಥಿತ್ಯಂತರವನ್ನುಂಟುಮಾಡಿ ಕೆಲವು ಅವಧಿಯವರೆಗೆ ಮನೋವ್ಯಾಪಾರಗಳನ್ನು ತನ್ನಕಡೆಗೆ ಇಟ್ಟುಕೊಳ್ಳಹತ್ತುವದು. ಸಿಟ್ಟು ಮೊದಲಾದ ಪ್ರಬಲವಾದ ಭಾವನೆಗಳು ಇನ್ನಿಷ್ಟು ಪ್ರಕೋಪವಾದಾಗ ಮನಸ್ಸನ್ನು ಸಮಗ್ರವಾಗಿ ವ್ಯಾಪಿಸಿ ಅದರ ವ್ಯಾಪಾರಗಳನ್ನು ಕಟ್ಟುಮಾಡುವವು. ಆಗ ಸಿಟ್ಟಿಗೆದ್ದವನು ಹುಚ್ಚನಂತೆ ಒದರಾಡಹತ್ತುವನು. ಹಾವಭಾವಗಳನ್ನು ಸೂಡುವನು. ಆವೇಶದಿಂದ ನಡುಗಹತ್ತುವನು. ಕೆಲವು ಸಾರೆ ವಿಚಾರಶೂನ್ಯನಾಗಿ ಅನಸ್ವಿತವಾದ ಕೃತ್ಯಗಳನ್ನು ಮಾಡುವನು. ಮಿತಿಮೀರಿದ ಆನಂದದಿಂದಾದರೂ ಇದೇತರದ ಸ್ಥಿತಿಯಾಗುವದು.

ಮನೋವಿಕಾರಗಳ ಮೂಲಕ ಶರೀರದಲ್ಲಿ ಸ್ಪುಟವಾಗಿ ಒಡೆದು ಕಾಣುವಂಥ ಒಂದೊಂದು ಬಗೆಯ ವಿಕೃತಿಗಳಾಗುವವು. ಯಾವನೊಬ್ಬನು ಆನಂದವೃತ್ತಿಯಲ್ಲಿರುವನೊ ದುಃಖಿಯಾಗಿರುವನೊ ಸಿಟ್ಟಿಗೆದ್ದಿರುವನೊ ಎಂಬದನ್ನು ಅವನ ಮುಖಮುದ್ರೆಯನ್ನು ನೋಡಿ ಹೇಳಲಿಕ್ಕೆ ಬರುವದು. ವಿಕಾರಗಳಿಗನುಗುಣವಾದ ಶಾರೀರಿಕ ವಿಕೃತಿಗಳನ್ನು ಪ್ರಯತ್ನಪೂರ್ವಕವಾಗಿ ಮುಚ್ಚಿಡುವ ಕಲೆಯನ್ನು ಚಿಕ್ಕ ಬಾಲಕರು ಕಲಿಯು

ದಿದ್ದರಿಂದ ಅವರ ಮುಖಲಕ್ಷಣಗಳನ್ನು ನೋಡಿ ಅವರ ಮನಸ್ಸಿನಲ್ಲಿ ಇಂಥ ಭಾವನೆಗಳೇ ಇರುವವೆಂದು ನಿಶ್ಚಿತವಾಗಿ ಹೇಳಲಿಕ್ಕೆ ಬರುವದು. ಪ್ರಬುದ್ಧರಾದವರಲ್ಲಿ 'ವಿಷಕುಂಭಂ ಪಯೋಮುಖಂ' ಎಂಬಂತೆ ಕೆಲವರ ಮನೋಗತವು ಮುಖಮುದ್ರೆಯಿಂದ ಎಂದೂ ಗೊತ್ತಾಗುವದಿಲ್ಲ.

ನಮ್ಮ ಇಂದ್ರಿಯಗಳ ಇಲ್ಲವೆ ಅವಯವಗಳ ಮುಖಾಂತರ ಸುಖದುಃಖವನ್ನುಂಟು ಮಾಡುವ ವಿಕಾರಗಳಿಗೆ ಸಂವೇದನವೆಂಬ ಹೆಸರು. ಕೇವಲ ಮನಸ್ಸಿಗೆ ಸಂಬಂಧಿಸಿದ ವಿಕಾರಗಳಿಗೆ ಭಾವನೆಗಳೆಂಬ ಹೆಸರು. ಸಂವೇದನಗಳು ನೀಚತರದ ವಿಕಾರಗಳಿದ್ದು ಅವುಗಳಿಂದ ಹಸಿವೆ, ನೀರಡಿಕೆ, ಅನ್ನಸಚನ, ರಕ್ತಾಭಿಸರಣ ಮುಂತಾದ ಶಾರೀರಿಕ ವಿಕಾರಗಳಲ್ಲಿ ಆದ ಸ್ಥಿತ್ಯಂತರಗಳು ನಮ್ಮ ಅನುಭವಕ್ಕೆ ಬರುವವು. ಈ ತರದ ವಿಕಾರಗಳ ಪ್ರಾದುರ್ಭಾವವು ಶೈಶವಾವಸ್ಥೆಯಲ್ಲಿ ವಿಶೇಷವಾಗಿ ಕಂಡುಬರುವದು. ಅಜೀರ್ಣ ವಿಕಾರವಾಗುವ ಮಗುವು ಶೀಘ್ರಕೋಪಿಯೂ ಹಟಮಾರಿಯೂ ಆಗುವದು. ಅದೇ ಸ್ಥಿತಿಯು ಅನೇಕ ವರ್ಷಗಳವರೆಗೆ ನಡೆದದ್ದಾದರೆ ಅದು ಸಿಡಕು ಮೋರೆಯುಳ್ಳದ್ದೂ ಜಗಳಗಂಟೆ ಸ್ವಭಾವವುಳ್ಳದ್ದೂ ಆಗುವದು. ಭಾವನೆಗಳು ಉಚ್ಚತರದ ವಿಕಾರಗಳು, ಅವುಗಳಿಗೆ ತಿಳಿಯಾದ ಸ್ವರೂಪವು ಬಂದು ಅವುಗಳ ಮೇಲೆ ಬುದ್ಧಿಯು ಅಮಲು ನಡಿಯಹತ್ತಿತೆಂದರೆ ಅವು ಸ್ವಾಭಿಮಾನ ಸ್ವದೇಶಪ್ರೀತಿ, ಕರ್ತವ್ಯದಕ್ಷತೆ ಮೊದಲಾದ ಗಡಜಾದ ಭಾವನೆಗಳಾಗಿ ಪರಿಣಮಿಸುವವು. ಆನುವಂಶಿಕತೆ, ಅಭ್ಯಾಸ, ಅನುಕರಣ ಮೊದಲಾದವುಗಳಿಂದ ಅವು ಪುಷ್ಟೀಕರಣ ಹೊಂದುವವು. ಆದ್ದರಿಂದ ತಂದೆಯುಂತೆಮಗ, ಗುರುವಿನಂತೆ ಶಿಷ್ಯ, ಎಂಬ ನಾಣ್ಣುಡಿಯುಂಟು. ಬೋಧೆಯು ಕ್ರಮಕ್ರಮದಿಂದ ನಾನಾತರದ ಕಲ್ಪನೆಗಳನ್ನುಂಟುಮಾಡಿ ಅವುಗಳ ಮುಖಾಂತರ ಸಾಮಾನ್ಯ ಜ್ಞಾನವೆಂಬ ಶಿಖರಕ್ಕೆ ಮುಟ್ಟುವಂತೆ ಸಾದಾ ಭಾವನೆಗಳು ನಮ್ಮ ಮನಸ್ಸಿನಲ್ಲಿ ಒಂದೊಂದು ಬಗೆಯ ಕಲ್ಪನೆಗಳನ್ನುಂಟುಮಾಡಿ ಕ್ರಮೇಣ ಗಡಜಾಗುತ್ತ ಉಚ್ಚಭಾವನೆಗಳ ಸ್ವರೂಪವನ್ನು ಹೊಂದುವವು. ಹೀಗಾಗುವಾಗ ಬುದ್ಧಿಯು ತಕ್ಕ ಸಹಾಯವನ್ನು ಮಾಡುತ್ತ ಹೋಗುವದು.

ಭಾವನೆಗಳ ಪ್ರಕಾರಗಳು

ಭಾವನೆಗಳು ಅನೇಕ ಪ್ರಕಾರದವುಗಳಿದ್ದರೂ ಅವುಗಳ ಸ್ವರೂಪವನ್ನು ಭಾಷೆಯ ದ್ವಾರದಿಂದ ತಿಳಿಸುವಷ್ಟು ಪರಿಪೂರ್ಣವಾದ ಯಾವ ಭಾಷೆಯೂ ಇಲ್ಲದಿದ್ದರೂ ಅವುಗಳಲ್ಲಿ ಸ್ಪುಟವಾಗಿ ಒಡೆದುಕಾಣುವ ಮೂರು ಭಾಗಗಳನ್ನು ಮಾಡಬೇಕು.

(೧) ಅಹಂಪರ ಭಾವನೆಗಳು (೨) ಸಾಮಾಜಿಕ ಭಾವನೆಗಳು (೩) ಉದಾತ್ತ ಭಾವನೆಗಳು

ಅಹಂಪರಭಾವನೆಗಳು ನಮ್ಮ ಆತ್ಮಸಂರಕ್ಷಣೆಗೂ ಶಾರೀರಿಕ ಬೆಳವಣಿಗೆಗೂ ಅತ್ಯವಶ್ಯಕವಾಗಿರುವದರಿಂದ ಶೈಶವಾವಸ್ಥೆಯಲ್ಲಿ ಅವು ಪ್ರಬಲವಾಗಿರುವವು. ಸಿಟ್ಟು ಭೀತಿ, ಸ್ವಾರ್ಥ, ಈರ್ಷಾ, ಚಟುವಟಿಕೆಯ ಒಲವು, ಅಧಿಕಾರಪ್ರೀತಿ, ಆತ್ಮಪ್ರತಿಷ್ಠೆ ಇವೇ ಮೊದಲಾದವು ಅಹಂಪರಭಾವನೆಗಳು.

ಸಮಾಜ ಪರಭಾವನೆಗಳು:— ಈ ಭಾವನೆಗಳ ಬೀಜಾರೋಪಣವು ತಾನು ಸಮಾಜದ ಹಿತವನ್ನು ಮಾಡುವದೇ ತನ್ನ ಆದ್ಯಕರ್ತವ್ಯವು ಎಂಬ ಸರಳವಾದ ಭಾವನೆಯಲ್ಲಿ ಆಗುವದು. ವನಚರ ವೃತ್ತಿಯನ್ನು ಬಿಟ್ಟು ಮನುಷ್ಯರು ಗುಂಪುಗುಂಪಾಗಿ ವಾಸಿಸತೊಡಗಿದಂದಿನಿಂದ ಅವರಲ್ಲಿ ಸಂಘಶಕ್ತಿಯು ತಲೆದೋರಿ ಸ್ನೇಹಭಾವನೆಯನ್ನುಂಟುಮಾಡುವದು. ಸಮಾಜಪರಭಾವನೆಗಳಿಂದ ಜನರಲ್ಲಿ ತಮ್ಮ ಸ್ವಾರ್ಥವು ಸಾಧಿಸಲಿ ಸಾಧಿಸದಿರಲಿ ತಾವು ತೇಲಲಿ ಮುಳುಗಲಿ ಬಹುಜನ ಸಮಾಜಕ್ಕೆ ಹಿತವಾಗುವ ಕಾರ್ಯಗಳನ್ನೇ ಮಾಡತಕ್ಕದ್ದೆಂಬ ಕಲ್ಪನೆಗಳುಂಟಾಗುವವು. ಬಂಧು ಪ್ರೀತಿ, ಸಹಾನುಭೂತಿ, ಆದರ ಮುಂತಾದವು ಸಾಮಾಜಿಕ ಭಾವನೆಗಳು. ಅತಿ ಗಡಚಾದ ಭಾವನೆಗಳು ಬುದ್ಧಿಯು ಪೂರ್ಣವಿಕಾಸ ಹೊಂದಿದ ಮೇಲೆ ಈ ಭಾವನೆಗಳ ಅಂಕುರವು ಒಡೆಯುಹತ್ತುವದು. ಅದರಲ್ಲಿ ಮೂರು ಪ್ರಕಾರಗಳು.

(೧) ಬೌದ್ಧಿಕ ಉಚ್ಚಭಾವನೆ

ಉದಾ:— ಸತ್ಯಪ್ರೀತಿ

(೨) ಸೌಂದರ್ಯ ವಿಷಯ ಉಚ್ಚಭಾವನೆ

ಉದಾ:— ಸೃಷ್ಟಿಸೌಂದರ್ಯದಬಗ್ಗೆ

(೩) ನೈತಿಕ ಉಚ್ಚ ಭಾವನೆ

ಉದಾ:— ಕರ್ತವ್ಯದಕ್ಷತೆ

ಅಹಂಪರಭಾವನೆಗಳು

ಈ ಭಾವನೆಗಳು ಆತ್ಮಸಂರಕ್ಷಣೆಗೂ ಶರೀರ ಸ್ವಾಸ್ಥ್ಯಕ್ಕೂ, ಅತ್ಯವಶ್ಯಕವಾಗಿರುವದರಿಂದ ಶೈಶವಾವಸ್ಥೆಯಲ್ಲಿ ಇವು ಕಾಣಿಸಿಕೊಳ್ಳಹತ್ತುವವು. ಭೀತಿ, ಕೋಪ ಮುಂತಾದವು ಶಿಕ್ಷಣ ದೃಷ್ಟಿಯಿಂದ ಮಹತ್ವವುಳ್ಳವುಗಳು.

ಭೀತಿ:— ಈ ಭಾವನೆಯು ಎಲ್ಲಕ್ಕೂ ಮೊದಲು ಹುಟ್ಟುವದು. ಇದರಲ್ಲಿ ಅನೇಕ ಪ್ರಕಾರಗಳುಂಟು. ಗೊತ್ತಿಲ್ಲದ ಇಲ್ಲವೆ ವಿಲಕ್ಷಣವಾದ ಪ್ರಾಣಿಗಳನ್ನು ಅಪರಿಚಿತ ವಸ್ತುಗಳನ್ನು ನೋಡಿ ಹುಡುಗರು ಸ್ವಾಭಾವಿಕವಾಗಿ ಅಂಜುವರು. ತಾಯಿತಂದೆಗಳು

ಮಕ್ಕಳನ್ನು ಅಂಜಿಸುವದಕ್ಕಾಗಿ ' ಬಾವಾ ' ಮೊದಲಾದ ಕಾಲ್ಪನಿಕ ವಸ್ತುಗಳ ಕಲ್ಪನೆ ಯನ್ನುಮಾಡಿಕೊಟ್ಟು ಅವರಲ್ಲಿ ಭೀತಿಯನ್ನು ಹೆಚ್ಚಿಸುವರು. ಇದರಿಂದ ಅವರ ಮಿದುಳಿಗೆ ಧಕ್ಕೆತಗಲಿ ಅಂಜುಬುರುಕತನವು ಅವರ ಮೈಯಲ್ಲಿ ಸೇರಿಕೊಳ್ಳುವದು. ಭೀತಿಯು ಪರಿಣಾಮವು ಶರೀರ ಮನಸ್ಸು ಹಾಗೂ ಇಚ್ಛಾಪ್ರವೃತ್ತಿಗಳ ಮೇಲೆ ಒಂದೊಂದು ಬಗೆಯ ದುಷ್ಪರಿಣಾಮಗಳನ್ನುಂಟುಮಾಡುವದು. ಮಗುವು ಯಾವದೊಂದು ವಿಲಕ್ಷಣ ವಾದ ಪ್ರಾಣಿಯನ್ನು ಕಂಡಕೂಡಲೆ ಅದರಿಂದ ತನಗೆ ಏನಾದರೂ ಅಪಾಯವಾಗುವ ದೆಂದು ಭಾವಿಸಿ ಮೋರೆಯಮೇಲೆ ಅಂಜಿದಕಳೆಯನ್ನು ತೋರಿಸಹತ್ತುವದು. ಭೀತಿಯ ಪ್ರಮಾಣವು ಬೆಳದದ್ದಾದರೆ ಅದರ ಮೋರೆಯ ಮೇಲಿನ ಕಳೆಯು ಕುಂದುವದು. ಕೈಕಾಲುಗಳು ನಡಗಹತ್ತುವವು. ಶರೀರವು ವಿಗಲಿತವಾಗುವದು. ಕೈಕಾಲುಗಳಲ್ಲಿಯ ಶಕ್ತಿಯು ಇಲ್ಲದಂತಾಗುವದು. ಭೀತಿಯ ಪ್ರಮಾಣವು ಇದಕ್ಕೂ ಮಿಗಿದ್ದಾದರೆ ಅವರ ಸರ್ವಾಂಗವು ನಡುಗುವದು. ಮುಖವು ಹೌಹಾರಿದಂತೆ ಶವದ ಕಳೆಯನ್ನು ಹೊಂದುವದು. ಬಾಯುಲರಿಕೆಯಿಂದ ಬಳಲಹತ್ತುವದು. ಎದೆಯು ಮಿತಿಮೀರಿ ಹಾರುವದು. ಮೈ ಬಿವತು ಆಳುವದು ಇಲ್ಲವೆ ಚೀರುವದು.

ಅಂಜಿಕೆಯಿಂದ ಮನೋವ್ಯಾಪಾರಗಳು ಕಟ್ಟಾಗುವವು. ಲಕ್ಷವು ಭೀತಿಯನ್ನುಂಟು ಮಾಡಿದ ವಸ್ತುವಿನಕಡೆಗೆ ಎಳೆಯಲ್ಪಡುವದರಿಂದ ಇತರ ವಸ್ತುಗಳು ದುರ್ಲಕ್ಷಿಸಲ್ಪಡು ವವು. ಸ್ಮರಣಶಕ್ತಿಯು ಪ್ರಚುರವಾಗುವದು. ಅದರಿಂದ ಭೀತಿಯನ್ನುಂಟುಮಾಡತಕ್ಕ ಸಾವಿರಾರು ಕಲ್ಪನೆಗಳು ಇಲ್ಲವೆ ಅಪಘಾತಗಳ ವಿಚಾರಗಳು ಒಂದರ ಮೇಲೊಂದು ಮನಸ್ಸಿನಲ್ಲಿ ಬರಹತ್ತಿ ಭೀತಿಯ ತೀವ್ರತೆಯನ್ನು ಮತ್ತಿಷ್ಟು ಜಿಳಿಸುವವು.

ಭೀತಿಯಿಂದ ನಮ್ಮ ಕರ್ತೃತ್ವಶಕ್ತಿಯು ಕುಂದುವದು. ಕೆಲವು ಪ್ರಸಂಗಗಳಲ್ಲಿ ತೀರ ನಷ್ಟವಾಗುವದು.

ಯಾವದೊಂದು ವಸ್ತುವಿನಿಂದ ನಮಗೆ ಅಪಾಯವಾದೀತೆಂಬ ಕಲ್ಪನೆಯು ಮನಸ್ಸಿನಲ್ಲಿ ಬಂದಕೂಡಲೆ ಭೀತಿಯುಂಟಾಗುವದು. ನಮ್ಮ ಪ್ರತ್ಯಕ್ಷ ಅನುಭವಗಳಲ್ಲಿ ಸುಃಖವನ್ನುಂಟುಮಾಡುವ ಸಂಗತಿಗಳೆಲ್ಲ ಭೀತಿಯನ್ನುಂಟುಮಾಡುವವು. ವಿಲಕ್ಷಣವಾದ ಪ್ರಾಣಿಗಳನ್ನು ಕಂಡು ಅಂಜುವದು. ಭೀತಿಯು ಆತ್ಮಸಂರಕ್ಷಣೆಯ ಮುಖ್ಯಸಾಧನವಿರು ವದರಿಂದ ಅದು ಆನುವಂಶಿಕತೆಯಿಂದ ಹುಡುಗರಲ್ಲಿ ಬಂದಿರುತ್ತದೆಂದು ಹೇಳಬಹುದು.

ಶಿಕ್ಷಣದ ಕಾರ್ಯದಲ್ಲಿ ಭೀತಿಯನ್ನು ಕೆಲವು ಪ್ರಸಂಗಗಳಲ್ಲಿ ಹುಡುಗರ ಮನಸ್ಸಿ ನಿಂದ ದೂಡಿಬಿಡಬೇಕು. ಕೆಲವು ಪ್ರಸಂಗದಲ್ಲಿ ಅದು ತುಸುಮಟ್ಟಿಗೆ ಉಳಿಯುವಂತೆ ಪ್ರಯತ್ನಮಾಡಬೇಕು. ಹುಡುಗರಲ್ಲಿ ನಿರಾಧಾರವಾದ ಭೀತಿಯುಂಟಾಗಿ ಅದರ ಯೋಗ

ದಿಂದ ಭೂತಪಿಶಾಚಿ ಮೊದಲಾದ ವಿಲಕ್ಷಣ ಕಲ್ಪನೆಗಳು ಬಾರದಂತೆ ಅವುಗಳ ನಿಜ ಸ್ವರೂಪವನ್ನು ಶಿಕ್ಷಕನು ಹುಡುಗರಿಗೆ ತಿಳಿಸಿ ಹೇಳಬೇಕು. ಕಂಡಕಂಡ ವಸ್ತುಗಳನ್ನು ಕಂಡು ಅವರು ಅಂಜಬಾರದೆಂದೂ ಗಂಡಾಂತರ ಬಂದಾಗ ಧೈರ್ಯಗುಂದದೆ ಅವುಗಳಿಗೆ ಎದುರಾಗಿ ನಿಲ್ಲುವ ಧೈರ್ಯವನ್ನು ಹುಡುಗರು ಪ್ರಯತ್ನಪೂರ್ವಕವಾಗಿಯೇ ತಂದು ಕೊಳ್ಳಬೇಕೆಂದೂ ಅವರಿಗೆ ತಿಳಿಹೇಳಿ ಅವರ ವಿಚಾರಶಕ್ತಿಯು ಬೆಳೆಯುವಂತೆಮಾಡಿ ಅವರು ಎಲ್ಲ ಸಂಗತಿಗಳ ಕಾರ್ಯಕಾರಣ ಭಾವವನ್ನು ಅರಿತುಕೊಂಡು ಕೇವಲ ಕಾಲ್ಪನಿಕ ಭೀತಿಯಿಂದ ಅವರ ಮನಸಿನ ಶಕ್ತಿಗಳು ಕುಂದದಂತೆ ಮಾಡಬೇಕು. ಹುಡುಗರಲ್ಲಿ ಭೀತಿಯು ತುಸುಮಟ್ಟಿಗೆ ಇರುವದು ಒಳ್ಳೇದು. ಯಾರಿಗೂ ಅಂಜದ ಹುಡುಗರು ಉದ್ದಟರಾಗುವರು ಅವರು ಯಾವಕೆಲಸವನ್ನು ಮಾಡುವಾಗ ಹಿಂದೆಮುಂದೆ ನೋಡುವದಿಲ್ಲ.

ತಾಯಿತಂದೆಗಳ ಹಾಗೂ ಗುರುಹಿರಿಯರ ಮನಸ್ಸು ನೋಯಿಸಬಾರದೆಂಬಬಗ್ಗೆ ಭೀತಿ, ಮನುಷ್ಯರಿಗೆ ಕಲ್ಯಾಣಮಾಡುವ ದೈವಿಕವಸ್ತುಗಳವಿಷಯವಾಗಿ ಆದರಪೂರ್ವಕವಾದ ಭೀತಿಯು ಹುಡುಗರಲ್ಲಿ ಉಂಟಾಗುವಂತೆ ಶಿಕ್ಷಕರು ವ್ಯವಸ್ಥೆಮಾಡಬೇಕು.

ಪುಕ್ಕತನವು (ಅಂಜುಬುರಕತನವು) ಅಂಜಿಕೆಯ ಪರಿಣಾಮವು. ಇದರಿಂದ ಮನಸಿನ ದೌರ್ಬಲ್ಯವುಂಟಾಗಿ ಶಾರೀರಸ್ವಾಸ್ಥ್ಯಕ್ಕೆ ಕುಂದುಬರುವದು. ಅದರಿಂದ ಹುಡುಗರು ತಮ್ಮ ಅಜ್ಞಾನವನ್ನು ಹಾಗೂ ತಾವು ಮಾಡಿದ ಕೆಟ್ಟಕೆಲಸವನ್ನೂ ಮುಚ್ಚಿ ಕೊಳ್ಳಲಿಕ್ಕೆ ಪ್ರಯತ್ನಿಸುವರು. ಹುಡುಗರು ನಿರ್ಭೀತರಾಗಿ ತಮ್ಮ ಅಜ್ಞಾನವನ್ನು ಹೊರಗೆಡವುವಂತೆ ಶಿಕ್ಷಣಕ್ರಮವಿರತಕ್ಕದ್ದು. ಅಜ್ಞಾನಕ್ಕಾಗಿ ಹುಡುಗರನ್ನು ದಂಡಿಸ ತೊಡಗಿದರೆ ಅದನ್ನು ಮತ್ತಿಷ್ಟು ಅವರು ಶಿಕ್ಷಕನಿಂದ ಮುಚ್ಚಿಡಲಿಕ್ಕೆ ಪ್ರಯತ್ನಿಸುವರು.

ಸಿಟ್ಟು:— ಭೀತಿಯಂತೆ ಈ ಭಾವನೆಯಾದರೂ ಹುಟ್ಟಿವಂದಿನಿಂದ ಶೈಶವಾವಸ್ಥೆಯಲ್ಲಿ ಕಂಡುಬರುವದು. ಭೀತಿಗೆ ಅನ್ಯರಿಂದುಂಟಾವ ಇಲ್ಲವೆ ಉಂಟಾಗಬಹುದೆಂಬ ಅಪಾಯದ ಕಲ್ಪನೆಯು ಮೂಲಾಧಾರವಿದ್ದಂತೆ ಸಿಟ್ಟಿಗಾದರೂ ಇರುವದು. ವ್ಯತ್ಯಾಸವೇನೆಂದರೆ ಭೀತಿಯಿಂದ ಮನಸಿಗೆ ವ್ಯಸನವಾಗುವದು. ಆದರೆ ಸಿಟ್ಟಿನಿಂದ ಆ ತರದ ವ್ಯಸನವಾಗದೆ ಸೇಡುತೀರಿಸಿಕೊಳ್ಳಬೇಕೆಂಬ ಹುರುಪು ಮೈಯಲ್ಲಿ ಸೇರಿ ಒಂದುತರದ ಶಕ್ತಿಯನ್ನುಂಟುಮಾಡುವದು. ಸೇಡುತೀರಿಸಿಕೊಳ್ಳುವ ಪ್ರಸಂಗ ಬಂದಕೂಡಲೆ ಮನಸಿಗೆ ಆನಂದವೆನಿಸಹತ್ತುವದು. ಕೋಪಾವೇಶದಿಂದ ಹುಡುಗರು ಕುಣಿದಾಡುವರು, ಒದರಾಡುವರು. ಮೈಯಲ್ಲಿ ಗಾಳಿತುಂಬಿದಂತೆ ತಮ್ಮ ಶಕ್ತಿವಿುರಿ ಕೆಲಸಮಾಡುವರು. ಆದರೆ ಸಿಟ್ಟಿನ ಆವೇಶ ಇಳಿದಕೂಡಲೆ ಅವರು ನಿರ್ವಿಣ್ಣರಾಗುವರು. ಎರಡನೆಯವರಿಂದ ಅಪಾಯವಾಗದಂತೆ ಮಾಡಿಕೊಳ್ಳುವ ಆತ್ಮಸಾಧನೆಯಲ್ಲಿ ಸಿಟ್ಟು ಒಂದಾಗಿದೆ.

ಹುಡುಗರು ಬೆಳೆಯುತ್ತ ಹೋದಹಾಗೆ ಅವರ ಕಾರ್ಯಕ್ರಮದಲ್ಲಿ ಯಾರಾದರೂ ಅಡ್ಡಿ ಮಾಡಿದರೆ ಇಲ್ಲವೆ ಕೈಹಾಕಿದರೆ ಅವರು ಸಿಟ್ಟಿಗೆದ್ದು ಆ ತರದ ಪ್ರತಿಬಂಧವನ್ನು ನಿವಾರಿಸಲಿಕ್ಕೆ ವಿಶ್ವಪ್ರಯತ್ನಮಾಡುವರು. ವಿಚಾರವಿಲ್ಲದೆ ಸಡ್ಡುಹೊಡೆದು ನಿಂತು ಪ್ರತಿಪಕ್ಷದವರನ್ನು ಹೊಡೆದೋಡಿಸಲೆಣಿಸುವರು. ಅದು ಸಾಧ್ಯವಾಗದಿದ್ದರೆ ನೆಲದಮೇಲೆ ಬಿದ್ದು ಹೊರಳಾಡುವರು. ಒದರಾಡುವರು. ಕಾಲುಹೊಸೆಯುವರು. ಕೈಹಿಡಿದುಕೊಳ್ಳುವರು. ಕೆಲವು ಸಾರೆ ತಮ್ಮ ತಲೆಯನ್ನು ನೆಲಕ್ಕೆ ಅಪ್ಪಳಿಸುವರು. ಅಟಿಕೆ ಸಾಮಾನುಗಳನ್ನು ಒಡೆದು ಹಲ್ಲುವರು. ಸಿಟ್ಟಿಗೆದ್ದ ಹುಡುಗರ ಮನಸಿನಲ್ಲಿ ಅನೇಕ ಕಲ್ಪನಾತರಂಗಗಳು ಒಂದೇಕಾಲಕ್ಕೆ ಉಬ್ಬವಿಸಿ ವಿಚಾರಶಕ್ತಿಯನ್ನು ಕುಗ್ಗುಬಡಿಯುವದು. ಸೇಡು ತೀರಿಸಿಕೊಳ್ಳಬೇಕೆಂಬ ಭಾವನೆಯನ್ನು ಪುಷ್ಟೀಕರಿಸಹತ್ತುವದು. ಸೇಡು ತೀರಿಸಿಕೊಳ್ಳುವ ಅವಸ್ಥದವು ದೊರೆತದ್ದಾದರೆ ಮನಸ್ಸಿಗೆ ಒಂದುತರದ ಆನಂದವೆನಿಸುವದು. ಆದರೆ ಸೇಡುತೀರಿಸಿಕೊಂಡಮೇಲೆ ಮನಸ್ಸು ಖಿನ್ನವಾಗುವದು.

ಸಿಟ್ಟಿನ ಪ್ರಕಾರಗಳು

(೧) **ಶೀಘ್ರಕೋಪ:**— ಈ ಸ್ವಭಾವದ ಹುಡುಗರು ಏನೂಕಾರಣವಿಲ್ಲದೆ ಅಷ್ಟಕ್ಕೆ ಇಷ್ಟಕ್ಕೆ ಸಿಟ್ಟಿಗೇಳುವರು. ಸಿಟ್ಟಿನ ಅವುಲು ತುಸು ವೇಳೆಯಲ್ಲಿಯೇ ಇಳಿಯುವದು.

(೨) **ಕ್ರೋಧ:** — ಈ ಭಾವನೆಯು ಉಬ್ಬವಿಸಲಿಕ್ಕೆ ಯಾವದೊಂದು ವಿಶೇಷ ಕಾರಣವಿರುವದು. ಈ ಭಾವನೆಗೆ ಆಧೀನನಾದವನು ಬುದ್ಧಿಪೂರ್ವಕವಾಗಿ ಸೇಡು ತೀರಿಸಿಕೊಳ್ಳಬೇಕೆಂದು ನಾನಾತರದ ಹಂಚಿಕೆಗಳನ್ನು ಯೋಚಿಸಹತ್ತುವನು. ಇದಕ್ಕೆ ಸೇಡುತೀರಿಸಿಕೊಳ್ಳುವ ಸಾಧನವು ದೊರಕದೆ ಇದರ ಅವುಲು ಬಹುಕಾಲದವರೆಗೆ ನಡೆದದ್ದಾದರೆ ಇದು ವೈರತ್ವದಂತೆ ಪರಿಣಮಿಸುವದು. ವ್ಯಕ್ತಿ–ವ್ಯಕ್ತಿಗಳಲ್ಲಿರುವ ಕೋಪದ ಕಾರಣಗಳು ಅಳಿದುಹೋಗದೆ ಕಾಲಾವಧಿಯವರೆಗೆ ಉಳಿದದ್ದಾದರೆ ದ್ರೋಹವೆಂಬ ಭಾವನೆಯನ್ನು ಉಂಟುಮಾಡುವದು. ಮತ್ಸರವೆಂಬದು ಕ್ರೋಧದ ಒಂದು ಪ್ರಕಾರವಿದ್ದು ನಾವು ದ್ವೇಷಿಸುವ ಜನರಿಗೆ ಯಾವದೊಂದು ಬಗೆಯ ಹಿತವಾದರೆ ನಮಗೆ ದುಃಖವನ್ನೂ ಅವರಿಗೆ ದುಃಖವಾದರೆ ನಮಗೆ ಸುಖವನ್ನೂ ಉಂಟುಮಾಡುವದು.

ಸಿಟ್ಟಿನವಿಷಯವಾಗಿ ಶಿಕ್ಷಕನ ಕರ್ತವ್ಯಗಳು

ವಿದ್ಯಾರ್ಥಿಗಳಲ್ಲಿರುವ ಭಾವನೆಯನ್ನು ಹಲವು ಪ್ರಸಂಗದಲ್ಲಿ ಕುಗ್ಗುಬಡಿಯಬೇಕು. ಹೀರೆ ಕೆಲವು ಪ್ರಸಂಗಗಳಲ್ಲಿ ಅದು ನಿರ್ಮೂಲವಾಗದಂತೆ ಎಚ್ಚರಪಡಬೇಕು. ಹುಡು

ಗನು ಸಿಟ್ಟಿಗೆದ್ದಾಗ ಅವನನ್ನು ದಂಡಿಸದೆ ಇಲ್ಲವೆ ಅವನ ಕೂಡ ವಾದಿಸದೆ ಸಿಟ್ಟು ಇಳಿಯುವವರೆಗೆ ಹಾಗೇ ಬಿಟ್ಟು ಒಳ್ಳೇಮಾತಿನಿಂದ ಆತನು ಸಿಟ್ಟಾಗಿರುವ ಕಾರಣಗಳನ್ನು ಕೇಳಿಕೊಂಡು ಅವುಗಳ ನಿಜಸ್ವರೂಪವನ್ನು ಹುಡುಗನಿಗೆ ತಿಳಿಸಿ ಹೇಳಬೇಕು, ಹಾಗು ಹುಡುಗನು ಸಿಟ್ಟಿಗೇಳುವಂತೆ ಮಾಡುವ ಕಾರಣಗಳನ್ನು ತೆಗೆದುಹಾಕಲಿಕ್ಕೆ ಯುಕ್ತಿಸಬೇಕು. ನಿಷ್ಕಾರಣವಾಗಿ ಸಿಟ್ಟಿಗೆದ್ದ ಹುಡುಗನನ್ನು ದಂಡಿಸಬೇಕು. ಬುದ್ಧಿಯ ಕ್ಷೇತ್ರವು ಬೆಳೆದಂತೆ ಸಿಟ್ಟು ತನ್ನಷ್ಟಕ್ಕೆ ತಾನೇ ಕಡಿಮೆಯಾಗುವದು. ಹಾಗು ನಾಲ್ಕು ಜನರೊಳಗೆ ಕೂಡಿ ನಡೆಯಹತ್ತಿದಮೇಲೆ ಸಿಟ್ಟಿನ ಕ್ಷೇತ್ರವು ಮರ್ಯಾದಿತವಾಗುವದು. ಕ್ರೋಧ, ದ್ರೋಹ, ಮತ್ಸರ ಮೊದಲಾದ ಭಾವನೆಗಳಲ್ಲಿ ಹೆರವರಿಗೆ ಕೆಡಕಾಗಬೇಕೆಂಬ ಇಚ್ಛೆಯು ಪ್ರಬಲವಾಗಿರುವದರಿಂದ ಅವು ನಾಮಶೇಷವಾಗುವಂತೆ ಶಾಲೆಯು ವ್ಯವಸ್ಥೆ ಇರಬೇಕು. ಸುವ್ಯವಸ್ಥಿತವಾದ ಆಟಗಳನ್ನು ಆಡಲಿಕ್ಕೆ ಹಚ್ಚುವದರಿಂದ ಈ ತರವ ಕೆಟ್ಟ ಭಾವನೆಗಳು ರೂಪಾಂತರಹೊಂದಿ ಹುಡುಗರು ಆಡುವಾಗ ಎಷ್ಟು ಹುರುಪಿನಿಂದ ಆಡಿದರೂ ಒಬ್ಬರ ಮೇಲೊಬ್ಬರು ಸ್ಪರ್ಧೆ ತೋರಿಸಿದರೂ ಒಬ್ಬರನ್ನೊಬ್ಬರು ದ್ವೇಷಿಸದೆ ಸೋತವರು ಗೆದ್ದವರನ್ನು ಅಭಿನಂದಿಸಹತ್ತುವರು. ಗೆದ್ದವರು ಸೋತವರನ್ನು ಆದರಿಸತೊಡಗುವರು.

ಸಿಟ್ಟು ಕೆಲವು ಪ್ರಸಂಗಗಳಲ್ಲಿ ಒಳ್ಳೇ ಭಾವನೆಗಳಲ್ಲಿ ಎಣಿಸಲ್ಪಡುವದು. ಅನ್ಯರ ಕೆಟ್ಟನಡತೆ ಹಾಗು ವ್ಯಸನಗಳನ್ನು ಕಂಡು ಹುಡುಗರು ಅವಶ್ಯವಾಗಿ ಸಿಟ್ಟಿಗೆದ್ದು ಅಂಥವರ ವಿಷಯವಾಗಿ ತಮ್ಮ ಮನಸ್ಸಿನಲ್ಲಿ ಉಂಟಾದ ತಿರಸ್ಕಾರವನ್ನು ತೋರಿಸತಕ್ಕದ್ದು.

ಸೂರ್ಯ

ಲೇಖಕ:— ಅಂಬಿಕಾದತ್ತ ಉಪಾಧ್ಯಾಯ ಎಂ. ಎ, ಇವರ ಲೇಖದ ಅನುವಾದ
ವಿ. ಆರ್. ವ್ಹಿ. ಬಿಟಗೇರಿ, ಶಾಳಾಮಾಸ್ತರ, ಅಮರಗೋಳ

ಸೂರ್ಯನು ಪೃಥ್ವಿಯಿಂದ ೯ ಕೋಟಿ ೩೦ ಲಕ್ಷ ಮೈಲುಗಳ ಅಚೆಯಲ್ಲಿರುವನು. ಅವನ ಗೋಲದ ವ್ಯಾಸವು ಅಜಮಾಸು ೮೬ ಸಾವಿರ ಮೈಲುಗಳು. ಭೂಮಿಯ ವ್ಯಾಸವು ೭೯೧೮ ಮೈಲುಗಳು ಮಾತ್ರ. ಆದ್ದರಿಂದ ಸೂರ್ಯನು ಪೃಥ್ವಿಗಿಂತ ೧೩ ಲಕ್ಷ ಪಟ್ಟು ದೊಡ್ಡವನಾಗಿದ್ದಾನೆ. ಸೂರ್ಯನಲ್ಲಿ ಪೃಥ್ವಿಗಿಂತ ೨೭ ಪಟ್ಟು ಹೆಚ್ಚು ಆಕರ್ಷಣ ಶಕ್ತಿಯುಂಟು. ಮತ್ತು ಅವನ ಮೇಲಿನ ಉಷ್ಣತಾಮಾನವು ೭೦೦೦ ಸೆಂಟಿಗ್ರೇಡ ಇರುವದು.

ಭೌತಿಕ ವಿಜ್ಞಾನ ಶಾಸ್ತ್ರಜ್ಞರು ಈ ವಿಶ್ವದಲ್ಲಿ ೯೨ ಪ್ರಕಾರದ ಭೌತಿಕ ತತ್ವಗಳಿರುವವೆಂದು ಸಿದ್ಧಮಾಡಿರುವರು. ಅದರಲ್ಲಿಯ ೬೧ ಭೌತಿಕ ತತ್ವಗಳು ಸೂರ್ಯನಲ್ಲಿ ಗ್ಯಾಸ ಅಥವಾ ಉಗಿಯರೂಪದಿಂದ ಇರುವವೆಂದು ಶೋಧಮಾಡಿರುವರು. ಚಂದ್ರನಲ್ಲಿ ಕಲೆಗಳಿರುವಂತೆ, ಸೂರ್ಯನಲ್ಲಿಯೂ ಕಲೆಗಳಿರುವವೆಂದೂ, ಅವು ಸೂರ್ಯಾಸ್ತ ಸಮಯದಲ್ಲಿ ಸ್ಪಷ್ಟವಾಗಿ ಕಾಣಿಸುತ್ತವೆಂದೂ, ಅದರಲ್ಲಿಯ ಒಂದೊಂದು ಕಲೆಗಳಂತೂ, ೧ ಲ. ೫೦ ಸಾ. ಮೈಲು ಉದ್ದವಾಗಿಯೂ, ೭೫ ಸಾ. ಮೈಲು ಅಗಲವಾಗಿಯೂ ಇರುತ್ತವೆಂದೂ ಶೋಧಿಸಿದ್ದಾರೆ.

ಇನ್ನು ಸೂರ್ಯನ ಪ್ರಕಾಶ ಹಾಗೂ ಉಷ್ಣತೆಗಳ ಬಗ್ಗೆ ವಿಚಾರಿಸಿದರೆ, ಅವಂತೂ ಬಹಳ ಆಶ್ಚರ್ಯವನ್ನುಂಟು ಮಾಡುವಂಥವಿರುವವು. ೩೨೩ ಕೋಟಿ ಪರಾರ್ಧ ಮೇಣ ಬತ್ತಿಗಳನ್ನು ಒಮ್ಮೆಲಿ ಹಚ್ಚಿದರೆ, ಬೀಳುವಷ್ಟು ಪ್ರಕಾಶವು, ಸೂರ್ಯನಲ್ಲಿದೆಯೆಂತಲೂ, ಅಲ್ಲಿಂದ ಅದು ಸುತ್ತಲೂ ಪಸರಿಸುತ್ತದೆಂತಲೂ ಗೊತ್ತು ಹಚ್ಚಿದ್ದಾರೆ. ಹಾಗೂ ಸೂರ್ಯನಿಂದ ಪ್ರತಿಯೊಂದು ನಿಮಿಟಿಗೆ ೨ ಲಕ್ಷ ಕೋಟಿ ಕುದುರೆಗಳ ಶಕ್ತಿಗೆ ಸರಿಯಾದ ಉಷ್ಣತೆಯು ಹೊರಬೀಳುವದು. ಪೃಥ್ವಿಯು ಸೂರ್ಯನಿಂದ ಇಷ್ಟು ದೂರವಿರುವದರಿಂದ, ಅವನಿಂದ ಹೊರಡುವ ಉಷ್ಣತೆಯ ಸ್ವಲ್ಪ ಭಾಗವು ಮಾತ್ರ ನಮಗೆ ಬಂದು ಮುಟ್ಟುವದು. ಅಷ್ಟರಿಂದಲೇ ಈ ಪೃಥ್ವಿಯ ಮೇಲೆ ಋತುಮಾನದಲ್ಲಿ ಎಷ್ಟು ಸ್ಥಿತ್ಯಂತರಗಳಾಗಹತ್ತಿರುವವೆಂಬದು ನಮಗೆ ಗೊತ್ತಿರುವದು. ಮತ್ತು ಸೂರ್ಯನ ಇಷ್ಟೇ ಉಷ್ಣತೆಯಿಂದಲೇ, ಇಲ್ಲಿಯ ನೀರಿನ ಉಗಿಯಾಗಿ ಆ ಉಗಿಯಿಂದ ಮೋಡ, ಹಿಮ, ಮೊದಲಾದವುಗಳುಂಟಾಗಿ, ಮಳೆಯ ರೂಪದಿಂದ ನಮಗೆ ಗೋಚರವಾಗುವವು. ಮತ್ತು ಇದರಿಂದಲೇ ವಾತಾವರಣದಲ್ಲಿ ಕೂಡ ಉಷ್ಣತೆಯುಂಟಾಗುವದು. ಮತ್ತು

ದೊಡ್ಡ ದೊಡ್ಡ ಬಿರುಗಾಳಿಗಳಾದರೂ ಬೀಸುವವು. ಇದಲ್ಲದೆ ಕಲ್ಲಿದ್ದಲಿ, ಎಣ್ಣೆ, ಬೆಳ್ಳಿ, ಬಂಗಾರ ಮೊದಲಾದ ಭಿನ್ನ ಭಿನ್ನ ಪ್ರಕಾರದ ಖನಿಜ ಪದಾರ್ಥಗಳಾದರೂ, ಸೂರ್ಯನಿಂದ ಪೃಥ್ವಿಗೆ ಬಂದು ಮುಟ್ಟುವ ಉಷ್ಣತೆಯಿಂದಲೇ ಉತ್ಪನ್ನವಾಗುತ್ತವೆ. ಮತ್ತು ಈ ಸೂರ್ಯಕಿರಣಗಳಿಂದಲೇ ಉದ್ಭಿಜ್ಜಗಳು ಚಿತ್ರವಿಚಿತ್ರವಾದ ಬಣ್ಣದ ಎಲೆಗಳನ್ನೂ ಪುಷ್ಪ ಹಾಗೂ ಫಲಗಳನ್ನೂ ಧರಿಸಿ, ಸೃಷ್ಟಿಗೆ ಬಹಳ ಶೋಭೆಯನ್ನುಂಟು ಮಾಡಿರುತ್ತವೆ. ಮತ್ತು ಈ ಕಿರಣಗಳು ಹವೆಯಲ್ಲಿರುವ ವಿಷಯುಕ್ತವಾದ ಕಾರ್ಬಾನಿಕ್ ಆ್ಯಸಿಡ್ ಗ್ಯಾಸದಲ್ಲಿಯ ಕಾರ್ಬನ್ ಹಾಗೂ ಆಕ್ಸಿಜನ್ನಗಳ ಮೂಲತತ್ವಗಳನ್ನು ಬೇರೆ ಬೇರೆ ಮಾಡುವವು. ಇವರಲ್ಲಿಯ ಕಾರ್ಬನ್ನನ್ನು ಉದ್ಭಿಜ್ಜಗಳು ಕುಡಿದೂ, ಆಕ್ಸಿಜನ್ನನ್ನು ಪ್ರಾಣಿಗಳು ಉಸುರಾಡಿಸಿಯೂ ತಮ್ಮ ಪ್ರಾಣಧಾರಣೆಯನ್ನುಮಾಡಿಕೊಳ್ಳುವವು.

ಈ ಎಲ್ಲ ವಿಶ್ವಕ್ಕು ಉಷ್ಣತೆ ಹಾಗೂ ಪ್ರಕಾಶಗಳನ್ನು ಪೂರಯಿಸುವದರಿಂದ ಸೂರ್ಯನ ಶರೀರವು ಪ್ರತಿಯೊಂದು ಸೇಕಂಡಿಗೆ ೧೧ ಕೋಟಿ, ೩೪ ಲಕ್ಷ ಮಣ ಕಡಿಮೆಯಾಗುವದು. ಇದೇ ಲೆಖ್ಖದಿಂದ ಅವನು ಒಂದು ವರ್ಷದಲ್ಲಿ ೩,೫೬,೪೦,೦೦೦ ಕೋಟಿ ಮಣ ಕಡಿಮೆಯಾಗುವನು. ಇದೇ ಕ್ರಮದಿಂದ ಅವನ ಶಕ್ತಿಯು ಕಡಿಮೆಯಾಗುತ್ತ ಹೋದರೆ, ಕೆಲವು ವರ್ಷಗಳಲ್ಲಿ ಸೂರ್ಯನು ತಣ್ಣಗಾಗಿ ಹೋಗಬಹುದೆಂದು ಎಷ್ಟೋ ಜನರು ತರ್ಕಮಾಡಿದರು. ಮತ್ತು ಇದೇ ಕ್ರಮವು ಸಾಗುತ್ತ ಸೂರ್ಯನು ತಣ್ಣಗಾಗಿ ಹೋಗಿ, ಅವನಿಂದ ಪ್ರಕಾಶ ಹಾಗೂ ಉಷ್ಣತೆಗಳು ಬಾರದೆ, ಪೃಥ್ವಿಯ ಮೇಲಿನ ಎಲ್ಲ ಸಚೇತನ ಹಾಗೂ ಅಚೇತನ ಪದಾರ್ಥಗಳು ನಷ್ಟವಾಗುವವೆಂದೂ ಕೆಲವರು ಚಿಂತಿಸ ತೊಡಗಿದರು. ಆದರೆ ಈ ನಮ್ಮ ಸೂರ್ಯದೇವನು ಈಗ ೭೫೦೦ ಕೋಟಿ ವರ್ಷಗಳಿಂದ ಇದೇ ಪ್ರಕಾರವಾಗಿ, ಉಷ್ಣತೆ ಹಾಗೂ ಪ್ರಕಾಶಗಳನ್ನು ಕೊಡುತ್ತಿರುವನು. ಮೇಲಿನಂತೆ ಅವನು ಕ್ಷೀಣವಾಗುತ್ತ ಹೋದರೂ ಅವನ ತೂಕವು ೫೪ ಖರ್ವ ಪರಾರ್ಧ (೫೪ರ ಮುಂದೆ ೨೭ ಪೂಜೆಗಳು) ಮಣವಾಗಿರುವದು. ಮತ್ತು ಇದೇ ಕ್ರಮದಿಂದ ಸೂರ್ಯನ ಪ್ರಕಾಶ ಹಾಗೂ ಉಷ್ಣತೆಯ ಶಕ್ತಿಗಳು ಕುಂದುತ್ತಲೇ ನಡೆದರೆ, ೧೬ ಲಕ್ಷ ಕೋಟಿ (೧೬ರ ಮುಂದೆ ೧೨ ಪೂಜೆಗಳು) ವರ್ಷಗಳ ಮೇಲೆ ಸೂರ್ಯನು ಇಲ್ಲದಂತಾಗಬಹುದು.

ಶಿಕ್ಷಣ ಶಾಸ್ತ್ರಜ್ಞರ ಕೆಲವು ಮತಗಳು

(೧) ಮಾರ್ಟಿನ್ ಲೂಥರ ಎಂಬವರು ಯುರೋಪಿನ ಆದ್ಯ ಧರ್ಮಸುಧಾರಕರೆಂದು ಹೆಸರಾಗಿಹೋದರು. ಅವರು ೧೪೮೩ ನೆ ಇಸವಿಯಲ್ಲಿ ಹುಟ್ಟಿದರು. ಸನ್ ೧೫೪೬ರಲ್ಲಿ ತೀರಿದರು. ಇವರೇ ಬಾಯ್‌ಬಲ್ ಪುಸ್ತಕವನ್ನು ಜರ್ಮನ್ ಭಾಷೆಯಲ್ಲಿ ಪರಿವರ್ತಿಸಿದರು.

(೨) ಮಾಂಟೇನ ಎಂಬವರು ಶಿಕ್ಷಣ ಶಾಸ್ತ್ರಜ್ಞರು. ಇವರು ಒಬ್ಬ ಫ್ರೆಂಚ ಸರದಾರನ ಮಕ್ಕಳು. ಇವರು ೧೫೩೩ರಲ್ಲಿ ಜನ್ಮಿಸಿದರು. ೧೫೯೨ರಲ್ಲಿ ತೀರಿದರು.

ಇವರೀರ್ವರ ಮತಗಳು ಒಳ್ಳೆಯ ಮನೋರಂಜಕವೂ ಬೋಧಪ್ರದವೂ ಆಗಿರುವವು.

ಮಾರ್ಟಿನ್ ಲೂಥರರ ಕೆಲವು ತತ್ವಗಳು

೧. ಮಕ್ಕಳಿಗೆ ಶಿಕ್ಷಣ ಕೊಡುವದು ತಾಯಿತಂದೆಗಳ ಮುಖ್ಯ ಕರ್ತವ್ಯ ಕರ್ಮವು.

೨. ರೈತರ ಮಕ್ಕಳಿಗೆ ಶಿಕ್ಷಣ ಸೌಲಭ್ಯವನ್ನುಂಟುಮಾಡುವದೂ ಶಾಲೆಗೆ ಮಕ್ಕಳು ಬಾರದಿದ್ದರೆ ಅವರ ಪಾಲಕರಿಗೆ ಬಲಾತ್ಕಾರಮಾಡುವದೂ ಸರಕಾರದ ಕೆಲಸಗಳಾಗಿವೆ.

೩. ಶಿಕ್ಷಣಕ್ರಮವು ಧರ್ಮದ ತಳಹದಿಯಮೇಲೆ ನಿಲ್ಲುವಂತೆ ಮಾಡಬೇಕು.

೪. ಕೇವಲ ಶಾಲೆಯಲ್ಲಿ ನೇಮಿಸಿದ ವಿಷಯಗಳನ್ನು ಕಲಿತರೆ ಶಿಕ್ಷಣವು ಪೂರ್ಣವಾಯಿತೆಂಬುಂತಿಲ್ಲ. ಆಯುಷ್ಯಕ್ರಮವು ಸುಖಾನುಭವಾಗಲಿಕ್ಕೆ ಶಿಕ್ಷಣದ ಉಪಯೋಗವಾಗಬೇಕು.

೫. ಪ್ರತ್ಯೇಕ ಧರ್ಮೋಪದೇಶಕನಿಗೆ ಶಿಕ್ಷಣಕಲೆಯ ಜ್ಞಾನವಿರಬೇಕು. ಗಾಯನ ಕಲೆಯ ಜ್ಞಾನವೂ ಸ್ವಲ್ಪವಿರಬೇಕು.

೬. ಶಿಕ್ಷಣವು ಸೃಷ್ಟಿಕ್ರಮಕ್ಕೆ ಅನುಸರಿಸಿ ಇರಬೇಕು.

೭. ವಸ್ತುಗಳ ಹೆಸರಿನ ಕೂಡಲೆ ಅವುಗಳ ಗುಣಧರ್ಮಗಳ ಜ್ಞಾನವೂ ಇರಬೇಕು.

೯. ಶಿಕ್ಷಕನ ಉದ್ಯೋಗವು ಅಂತ್ಯಂತ ಪವಿತ್ರವಾಗಿರುವದು. ಹೀಗಿರುವದರಿಂದಲೇ ಪ್ರತಿಯೊಬ್ಬನು ಶಿಕ್ಷಕನಿಗೆ ಮರ್ಯಾದೆ ಕೊಡಬೇಕು.

೧೦. ಶಿಕ್ಷಣ ಕ್ರಮದಲ್ಲಿ ಧರ್ಮ, ಭಾಷೆ, ಇತಿಹಾಸ, ಗಣಿತ, ಗಾಯನ, ಶರೀರ ಪೋಷಣ ಇತ್ಯಾದಿ ವಿಷಯಗಳ ಸಮಾವೇಶವಾಗಬೇಕು.

೧೧. ಪ್ರತ್ಯೇಕ ಶಾಲೆಗಳಿಗೆ ಪುಸ್ತಕಾಲಯವನ್ನು ಜೋಡಿಸಿರಬೇಕು.

ಮಾಂಟೆಸ್ಸರಿಯ ಮತಗಳು

೧. ಜ್ಞಾನೇಂದ್ರಿಯಗಳ ಯೋಗ್ಯ ಉಪಯೋಗವನ್ನು ಮಾಡಿಕೊಂಡು ಶಿಕ್ಷಣ ಕೊಡುವದು ಶಿಕ್ಷಣ ಪದ್ಧತಿಯನ್ನು ಸುಲಭಗೊಳಿಸುವ ಮುಖ್ಯ ಉಪಾಯವಾಗಿರುವದು.

೨. ಶಾಸ್ತ್ರಾಭ್ಯಾಸವು ಮನುಷ್ಯ ಮಾತ್ರರಿಗೆಲ್ಲ ಅಗತ್ಯವಾಗಿದೆ.

೩. ಮೊದಲು ಮಾತೃಭಾಷೆಯ ಮೂಲಕ ಬಳಿಕ ಸಮೀಪದ ಭಾಷೆಗಳ ಮೂಲಕ ಜ್ಞಾನವನ್ನು ಸಂಭಾಷಣ ದ್ವಾರದಿಂದ ಸಂಪಾದಿಸಬೇಕು.

೪. ವಿದ್ಯಾರ್ಥಿಗಳಿಗೆ ಶಾರೀರಿಕ ಶಿಕ್ಷೆಯು ಉಪಯೋಗವಿಲ್ಲ.

೫. ಶಾಲಾಗೃಹವು ಸುಶೋಭಿತವಾಗಿಯೂ ಸುಂದರವಾಗಿಯೂ ಇದ್ದರೆ ವಿದ್ಯಾರ್ಥಿಗಳ ಮನಸ್ಸು ಶಿಕ್ಷಣದ ಕಡೆಗೆ ಒಲಿಯುವದು.

೬. ಶಿಕ್ಷಣವೆಂದರೆ ಪ್ರತ್ಯೇಕ ಮಾನಸಿಕ ಶಿಕ್ಷಣವೂ ಅಲ್ಲ. ಇಲ್ಲವೆ ಶಾರೀರಿಕ ಶಿಕ್ಷಣವೂ ಅಲ್ಲ; ಆದರೆ ಮನಸ್ಸು ಸಹ ಕೂಡಿದ ಮನುಷ್ಯನ ಶಿಕ್ಷಣವೇ ಆಗಿರುವದು.

ಪತ್ರಗಳ ಸಾರಾಂಶ

ಎರೆಬೂದೀಹಾಳ ತಾಲೂಕ ಶಿರಹಟ್ಟಿ:— ಈ ಊರ ಪ್ರಸಿದ್ಧ ಸಾವುಕಾರರೂ ಮುಲಕೀ ಪಾಟೀಲರೂ ಆದ ಪರಪ್ಪಗೌಡ ಕಾರಡಗಿ ಇವರು ತಮ್ಮ ಸ್ವಂತದ ಹಾರ್ಮೋನಿಯಂ ಕೈಪೆಟ್ಟಿಗೆಯನ್ನು ಶಾಲೆಗೆ ಉಚಿತವಾಗಿ ಕೊಟ್ಟರು. ಈ ಬಗ್ಗೆ ತಿಳಿಸಲು ಸಂತೋಷವಾಗುತ್ತದೆ.

ತಾ॥ ೨೦-೯-೩೪ **ಪ. ಮು. ಕರಡಿ, ಅ. ಮೂ. ಎರೆಬೂದಿಹಾಳ**

ಪ್ರಕಟನೆ

ಮಂಜೂರಾದ ಪುಸ್ತಕಗಳು

ಟ್ರೇ. ಸಂ=ಟ್ರೇನಿಂಗ ಸಂಸ್ಥೆಗಳು; ಶಾ=ಶಾಲೆ; ಪ್ರಾ=ಪ್ರಾಥಮಿಕ; ಮಾ=ಮಾಧ್ಯಮಿಕ; L. ಲಾಯಬ್ರರಿ; T. ಟೆಕ್ಸ್ಟ ಬುಕ್ಸು. ವಿ=ವಿದ್ಯಾರ್ಥಿಗಳ; ಶಿ=ಶಿಕ್ಷಕರ.

ಸಂ.	ಪುಸ್ತಕಗಳ ಹೆಸರು.	ಗ್ರಂಥಕರ್ತರ ಹೆಸರು.	ಪ್ರಕಾಶಕರ ಹೆಸರು.	ಬೆಲೆ.	ಯಾತಕ್ಕೋಸ್ಕರ ಮಂಜೂರು.	ಡಾ. ಸಾಹೇಬರ ೨೩-೪-೩೪ ರ ಹಾಗು ಎ. ಇ. ದ. ಭಾ. ಇವರ ೨೫-೬-೩೪ರ ಮಂಜೂರಿ ನಂಬರು.
೧	ಪದ್ಯಸಂಗ್ರಹ ಭಾ.೧ ೧೯೨೬	...	ಮಂಗಳೂರ ಬಾಲ ಸಾ. ಮಂಡಲ	೦-೮-೦	T. ಮಾ. ಶಾ.	ಡಾ. ಸಾ. ನಂ. S. 86 C 521 C
೨	ಕಾವ್ಯರತ್ನಾಕರಭಾ-೧ ೧೯೩೧	ಉಗ್ರಾಣ ನಾಗೇಶ್ವರಯ್ಯ	ಸದರ	೦-೬-೦	ಸದರ	ಸದರ 516 C
೩	ಕಾಣಿಕೆ ೧೯೨೭	ಕ. ಶಂಕರಭಟ್ಟ	ಸದರ	೦-೩-೦	ಸದರ	ಸದರ 529 C
೪	ಭೀಷ್ಮನ ಕಥೆ ೧೯೩೨	ಎಮ್. ಎನ್. ಕಾಮತ	ಸದರ	೦-೬-೦	ಸದರ	ಸದರ 515 C
೫	ಪದ್ಯಕಥಾವಳಿ ಭಾ. ೧ ೧೯೩೩	ಸದರ	ಸದರ	೦-೬-೦	ಸದರ	ಸದರ 517 C
೬	ಸದರ ಭಾ.೨. ೧೯೩೦	ಸದರ	ಸದರ	೦-೮-೦	ಸದರ	ಸದರ 517 C

೭	ಹಸಿವು ೧೯೩೧	ಶಿವರಾಮ ಕಾರಂತ	ಮಂಗಳೂರ ಬಾ. ಸಾ. ಮಂಡಳ	೦–೮–೦	ಮಾ. ಶಾ. ವಿ. L	ಸದರ 518 C
೮	ಹರಿಗೋಲ ೧೯೩೩	ಶಂಕರ ನಾರಾಯಣ ರಾವ	ಹರಿಹರಪ್ರೆಸ್ ಬುಕ್ ಡಿಪೋ ಪುತ್ತೂರ	೦–೮–೦	ಸದರ	ಸದರ 513 C
೯	ಅಜಿತಕುಮಾರ ೧೯೩೧	ಕೆ. ಬಿ. ರಾಮಕೃಷ್ಣ	ಬಾಲಸಾಹಿತ್ಯ ಮಂ. ಮಂಗಳೂರ	೦–೫–೦	ಮೈ. ಎ. ಇ.ಸಾ. ರಿಂದ ಪ್ರಾ. ಶಾ. ವಿ. L ಮೈ. ಡಾ. ಸಾ. ಮಾ. ಶಾ ವಿ. L	ಎ. ಇ. ಸಾ ॥ ನಂ. 3972 ಡಾ. ಸಾ ॥ ನಂ. S. 86 C. 533 C.
೧೦	ಹಣ್ಣುಕಾಯಿ ೧೯೩೩	ಕ. ಶಂಕರಭಟ್ಟ	ಸದರ	೦-೧೨-೦	ಸದರ	ಇ. ಸಾ. ನಂ. 3976 ಡಾ. ಸಾ. ನಂ. 523 C.
೧೧	ಹಾವು ೧೯೩೨	ಶಿವರಾಮ ಕಾರಂತ	ಸದರ	೮–೮–೦	ಸದರ	ಇ. ಸಾ. ನಂ 3978 ಡಾ. ಸಾ. ನಂ 537
೧೨	ಚರಿತ್ರೆ ಮತ್ತು ಕಥೆಗಳು ೧೯೩೦	ಶ್ರೀನಿವಾಸ ಕಿಣಿ ಮತ್ತು ಉ. ಮುಂಗೇಶರಾವ	ಸದರ	೦–೫–೦	ಸದರ	ಇ. ಸಾ. ನಂ. 3980 ಡಾ. ಸಾ. ನಂ. 536 C
೧೩	ಶಶಿಕಾಂತನ ಉಯಿಲು ೧೯೩೩	ಉ. ಮುಂಗೇಶರಾವ	ಸದರ	೦–೪–೦	ಸದರ	ಇ. ಸಾ. ನಂ. 3982 ಡಾ. ಸಾ. ನಂ. 528 C.
೧೪	ರಮಾಮಾಧವ ೧೯೩೦	ಬಿ. ರಾಮರಾವ	ಸದರ	೦–೬–೦	ಸದರ	ಇ. ಸಾ. ನಂ. 3984 ಡಾ. ಸಾ ನಂ. 535 C

ಸಂ.	ಪುಸ್ತಕಗಳ ಹೆಸರು.	ಗ್ರಂಥಕರ್ತರ ಹೆಸರು.	ಪ್ರಕಾಶಕರ ಹೆಸರು.	ಬೆಲೆ.	ಯಾತಕ್ಕೋಸ್ಕರ ಮುಂಜೂರು.	ಡಾ॥ ಸಾಹೇಬರ ೨೩-೯-೩೪ ರ ಹಾಗು ಎ. ಇ. ದ ಭಾಗ ಇವರ ೨೫-೯-೩೪ ರ ಮುಂ. ನಂಬರು.
೧೫	೧೨ ತಿನೆ ತಿನೆ ದರ್ಜೆಯ ಕಥೆಗಳು ಭಾಗ ೨ ೧೯೨೫	...	ಮಂಗಳೂರ ಬಾ. ಸಾ. ಮಂಡಳಿ	೦-೫-೦	ಪ್ರಾ. ಶಾ. ವಿ L. ಮೂ. ಶಾ ವಿ. L.	ಇ. ಸಾ. ನಂ. 3974 ಡಾ. ಸಾ. ನಂ. 532 C.
೧೬	ಹಿಡಿಂಬೆ ೧೯೩೧	ಕೆ. ಶಂಕರಭಟ್ಟ	ಸದರ	೦-೮-೦	ಸದರ ಪ್ರಾ. ಶಾ. ವಿ. L. ಮತ್ತು ಟ್ರೇ. ಸಂ. ವಿ. L. ಸದರ ಮೂ. ಶಾ. ಗಳ ವಿ. L.	ಇ. ಸಾ. ನಂ. 3988 ಡಾ. ಸಾ. ನಂ. 520 C.
೧೭	ಕಲಿಯುಗದ ಭೀಷ್ಮ ೧೯೨೬	ಕೆ. ಬಿ. ರಾಮಕೃಷ್ಣ	ಸದರ	೦-೮-೦	ಎ. ಇ. ರಿಂದ ಪ್ರಾ. ಶಾ. ಗಳ ಟ್ರೇ. ಸಂ. ಗಳ ವಿ. L. ಡಾ. ಸಾ. ಮೂ. ಶಾ. ಗಳ ವಿ. L.	ಎ. ನಂ. 3986. S-86. C-519-C
೧೮	ಶೂದ್ರಕ-೧೯೩೨	ಬ್ರಹ್ಮಶ್ರೀ ವಿದ್ವಾನ್ ಸುಂದರಶಾಸ್ತ್ರಿ	ಸದರ	೧-೦-೦	ಸದರ. ಪ್ರಾ. ಶಾ. ಗಳ ವಿ. L ಪ್ರಾ. ಶಾ. ಗಳ ಶಿ. L. ಮೂ. ವಿ. L.	N. 4002 N. 526. C
೧೯	ಪ್ರಬಂಧಮುಕ್ತಾವಳಿ ೧೯೩೯	ಪಂಡಿತ ಕೆ. ಹನುಮಂತರಾವ	ಆರ್. ಪಾಲ್‌ರಾಜು ಬೆಂಗಳೂರ	೦-೧೨-೦	ಸದರ	N. 4016 N. 538. C
೨೦	ಸಮಾಜದ್ರೋಹಿ ೧೯೩೨	ಉ. ಮಂಗೇಶರಾವ	ಬಾಲಸಾಹಿತ್ಯ ಮುಂ. ಮಂಗಳೂರ	೦-೬-೦	ಎ. ಇ. ರಿಂದ ಪ್ರಾ. ಶಾ. ಟ್ರೇ. ಸಂ. ವಿ. L ಡಾ. ಸಾ. ಮೂ. ಶಾ. ಗಳ ವಿ. L.	ಎ. N. 3996 ಡಾ. N. 534 C

ಪ್ರಿ ಪೇಜ್

೨೧	ಸುಗುಣಗಂಭೀರ ೧೯೩೩	ಸಂಸ	ಬಾ. ಸಾ. ಮಂ. ಮಂಗಳೂರ	೧–೦–೦ ಪ್ರಾ. ಶಾ. ಟ್ರೇ. ಸಂ. ವಿ. L. ಮೂ. ಶಾ. ವಿ. L.	N. 4018 N- 512-C
೨೨	ಕೃಷ್ಣಕುಮಾರಿ ೧೯೩೧	ಬಿ. ರಾಮರಾವ	ಸದರ	೧–೪–೦ ಇ.ಸಾ.ರಿಂದ ಪ್ರಾ.ಶಾ.ಶಿ..L ಡಾ.ಸಾ.ರಿಂದ ಮೂ.ಶಾ.ವಿ.L	4000 C. 525
೨೩	ಸುಭದ್ರಾವಿಜಯು ನಾಟಕಮ್ ೧೯೩೮	ಬಿ ರಾಮರಾವ	ಸದರ	೧–೦–೦ ಮೆ.ಇ.ಸಾ. ರಿಂದ ಪ್ರಾ. ಶಾ ಶಿ.Lಮೆ.ಡಾ.ಸಾ.ರಿಂದ ಮೂ. ಶಾ. ವಿ. L	N 3990. N. 524-C-
೨೪	ನಾಟಕಕಲೆ ೧೯೩೪	ಆತ್ಮಾರಾಮಶಾಸ್ತ್ರಿ ಒಡ್ಲಮನೆ	ಸದರ	೦.೧೦.೦ ಸದರ	N 3992. N. 522. C.
೨೫	ಬಾರಕೂರಿನ ಗತವೈಭವ	ಎಮ್. ಬಾಬು	ಸದರ	೦–೪–೦ ಮೆ। ಇ. ಸಾ. ರಿಂದ ಪ್ರಾ. ಶಾ. ಹಾಗು ಟ್ರೇ. ಸಂ. ಶಿ. L. ಡಾ.ಸಾ.ರಿಂದ ಮೂ.ಶಾ.ಶಿ L	ಸದರ N. 3998. ಸದರ 530. C.

Reg. No. B. 2567

Reg. No. B. 2567

ಕನ್ನಡ

ಪ್ರಾಥಮಿಕ ಶಿಕ್ಷಣ

(ಇದರಲ್ಲಿ ಕನ್ನಡ ಶಾಲಾಪತ್ರಿಕೆಯೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

Kannada Prathamik Shikshana

— NOVEMBER 1934 —

ಸಂಪಾದಕ— ವೆಂಕಟೇಶ ನರಸಿಂಗರಾವ ಮಗದಾಳ, ಬಿ. ಎ.

ಸಂಪುಟ ೭೧] ನವಂಬರ ೧೯೩೪ [ವ. ೬ ಸಂ. ೮

ವಿಷಯಾನುಕ್ರಮಣಿಕೆ

ಅ. ನಂ.	ವಿಷಯ.	ಪುಟ.
೧.	ಶಿಕ್ಷಣವೆಂದರೇನು ?	೧
೨.	ಕಾನಡಾ ದೇಶ	೫
೩.	ಕನ್ನಡಸಾಹಿತ್ಯ ಕ್ಷೇತ್ರದಲ್ಲಿಯ ಹರಿದಾಸರ ಕಾರ್ಯ	೧೦
೪.	ಪರ್ಶಿಯನ ಮಹಾಕವಿ ಫಿರ್ದೌಸಿ	೨೩
೫.	ಚಂದ್ರ	೨೬
೬.	ಪ್ರಕಟನೆಗಳು	೩೦

Printed by K. R. Bhise at the Karnatak Printing Works, Dharwar
& Published by V. N. Magdal, B.A.,
Head Master, Training School, Dharwar, at his Office.

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:—ವೆಂಕಟೇಶ ನರಸಿಂಗರಾವ ಮುಗದಾಳ, ಬಿ. ಎ.

ಸಂಪುಟ ೭೧ | ನವಂಬರ ೧೯೩೪ | ವರ್ಷ ೬ ಸಂ. ೮

ಶಿಕ್ಷಣವೆಂದರೇನು?

ಪುಣೆಯ ಗಂಡುಮಕ್ಕಳ ಟ್ರೇನಿಂಗ ಕಾಲೇಜದಲ್ಲಿ ಜರುಗಿದ ಬೇಸಿಗೆಯ ಶಿಕ್ಷಣಯೋಜನೆಯನ್ನು ಆರಂಭಿಸುವಾಗ ಆ ಭಾಗದ ಎಜ್ಯುಕೇಶನಲ್ ಇನ್ಸಪೆಕ್ಟರರಾದ ಮೆ॥ ಕ್ಯಾಮಿರಾನ್ ಸಾಹೇಬರು ಮಾಡಿದ ಭಾಷಣದಲ್ಲಿ ಬಹು ಸಾರ್ಮಿಕವಾಗಿಯೂ ಸುಲಭವಾಗಿ ತಿಳಿಯುವಂತೆಯೂ ಈ ಮಹತ್ವದ ಪ್ರಶ್ನದ ಉತ್ತರವು ಇರುವದು. ಅದನ್ನು ಇಲ್ಲಿ ನಮ್ಮ ವಾಚಕರಿಗಾಗಿ ಮರಾತಿ ಪ್ರಾಥಮಿಕ ಶಿಕ್ಷಣ ವೆಂಬ ಮಾಸಪತ್ರಿಕೆಯಿಂದ ಅನುವಾದಿಸಿರುವೆವು.

ಶಿಕ್ಷಣ ಕೊಡುವದೆಂದರೆ ಹುಡುಗರ ತಲೆಯಲ್ಲಿ ಜ್ಞಾನವನ್ನು ತುಂಬುವದಲ್ಲ; ಇಲ್ಲವೆ ಬಲವಂತವಾಗಿ ಇಂತಿಷ್ಟು ಜ್ಞಾನವನ್ನು ಅವರ ಮನಸಿನಲ್ಲಿ ಹಾಕುವದಲ್ಲ. ಅವರ ಮನದಲ್ಲಿರುವ ಕಲ್ಪನೆಗಳಿಗೆ ಚಲನೆ ಕೊಡುವದು; ಅವರ ಮನಸ್ಸು ಹೊಸ ಜ್ಞಾನವನ್ನು ತಾನಾಗಿ ಪಡೆದುಕೊಳ್ಳಲಿಕ್ಕೆ ನೆರವಾಗುವದು. ನಿಜವಾಗಿ ವಿಚಾರಿಸಿ ನೋಡಿದರೆ ಶಿಕ್ಷಣಕನಿಗೆ ಶಿಕ್ಷಕ ಎಂದರೆ ಕಲಿಸುವವ ಈ ಹೆಸರು ಸರಿಯಾದದ್ದಾಗುವದಿಲ್ಲ. ಯಾಕೆಂದರೆ ಮನುಷ್ಯನು ಮೂಕ ಪಶುಗಳಿಗೆ ಆಟ ಕಸರತ್ತು ಮೊದಲಾದವುಗಳನ್ನು ಕಲಿಸುವಂತೆ ಶಿಕ್ಷಕನೂ ಹುಡುಗರಿಗೆ ಏನಾದರೂ ಹೇಳಿಕೊಡುವದಲ್ಲ. ಆದರೆ ಹುಡುಗರಲ್ಲಿ ಸ್ವಾಭಾವಿಕವಾಗಿರುವ ಮಾನಸಿಕ ಶಕ್ತಿಗಳಿಗೆ ಕೆಲಸ ಮಾಡಹಚ್ಚಿ ಅವು ವಿಕಾಸಹೊಂದುವಂತೆ ನೋಡಿಕೊಳ್ಳುವದಿರುತ್ತದೆ. ಹುಡುಗರಲ್ಲಿ ಸಹಜವಾಗಿ ನಿರೀಕ್ಷಣ ಮಾಡುವ ಶಕ್ತಿ, ಕಲ್ಪನೆಗಳನ್ನು ಮಾಡುವ ಶಕ್ತಿ, ಸುಂದರ

ವಾವ ವಸ್ತುಗಳನ್ನು ಪ್ರೀತಿಸುವ ಒಲವು, ವಿಚಾರ ಮಾಡುವ ಶಕ್ತಿ ಇವೆಲ್ಲ ಇರುತ್ತವೆ. ಆದರೆ ದುರ್ದೈವದ ಮಾತೆಂದರೆ ಶಿಕ್ಷಕರು ಹುಡುಗರಲ್ಲಿರುವ ಈ ಸ್ವಾಭಾವಿಕ ಶಕ್ತಿಗಳನ್ನು ಉಪಯೋಗದಿಂದ ಬೆಳಿಸಿಕೊಳ್ಳಲಿಕ್ಕೆ ಪ್ರಸಂಗಗಳನ್ನು ತಂದು ಕೊಡುವದಿಲ್ಲ.

ನಾಲ್ಕನೆಯ ಇಯತ್ತೆಯಲ್ಲಿ ಪಾಸಾಗಿ ಸಾಲೆ ಬಿಟ್ಟು ಜೀವನವನ್ನು ಆರಂಭಿಸುವ ಹುಡುಗನಿಗೆ ನಾಲ್ಕು ಶಬ್ದಗಳನ್ನು ಬರೆಯಲಿಕ್ಕೂ ತಕ್ಕ ಮಟ್ಟಿಗೆ ಓದಲಿಕ್ಕೂ ವ್ಯವಹಾರದಲ್ಲಿ ತನಗೆ ಉಪಯೋಗ ಬೀಳುವ ಲೆಕ್ಕಪತ್ರಗಳಿನ್ನಿಟ್ಟುಕೊಳ್ಳಲಿಕ್ಕೂ ಬಂದರೆ ತೀರಲಿಲ್ಲ. ಆತನಿಗೆ ಯಾವದೊಂದು ಸಂಗತಿಯನ್ನು ಚೆನ್ನಾಗಿ ನಿರೀಕ್ಷಿಸಲಿಕ್ಕೂ ಆ ಬಗ್ಗೆ ಸರಿಯಾಗಿ ವಿಚಾರ ಮಾಡಲಿಕ್ಕೂ ಯಾಕೆ ಬರಬಾರದು? ತನ್ನ ಕಲ್ಪನಾಶಕ್ತಿಯನ್ನು ಉಪಯೋಗಿಸಿ ಇದು ಸರಿ ಇದು ತಪ್ಪು, ಇದು ನಿಜ ಇದು ಸುಳ್ಳು, ಇದು ಚೆಂದವಾದದ್ದು ಇದು ರೂಪಗೇಡಿಯಾದದ್ದು ಎಂದು ನಿಶ್ಚಯಿಸಲು ಯಾಕೆ ಬರಬಾರದು? ಆದರೆ ಹೀಗೆ ಮಾಡಲಿಕ್ಕೆ ಮಾತ್ರ ಆತನಿಗೆ ಬರುವದಿಲ್ಲೆಂಬದು ನಿಜವಾದದ್ದು. ಇದಕ್ಕೆ ಹಲವು ಕಾರಣಗಳುಂಟು. ಇವುಗಳಲ್ಲಿ ಎಲ್ಲಕ್ಕೂ ಮುಖ್ಯವಾದ ಕಾರಣವು ಆವುದೆಂದರೆ ನಾವು ಅವನಿಂದ ಪಾಠಗಳನ್ನು ಮಾಡಿಸಿರುವೆವು; ಅವನಿಗೆ ಕಲಿಸಿರುವದಿಲ್ಲ. ವಿದ್ಯೆಯೆಂಬ ಅಮೃತವನ್ನು ಅವನ ಬಾಯಲ್ಲಿ ಸುರಿದಿರುವೆವು; ಆದರೆ ಅದನ್ನು ನುಂಗಿಬಿಡುತ್ತಿರುವಾಗ ಆತನ ಬುದ್ಧಿಶಕ್ತಿ, ಕಲ್ಪನಾಶಕ್ತಿ ಅಥವಾ ಜ್ಞಾನೇಂದ್ರಿಯಗಳ ಮೇಲೆ ಸ್ವಲ್ಪವೂ ಪರಿಣಾಮವಾಗಿರುವದಿಲ್ಲ. ಹುಡುಗರಲ್ಲಿ ಸ್ವಾಭಾವಿಕವಾಗಿ ಕುತೂಹಲವು ಪ್ರಬಲವಾಗಿರುವದು; ನಿರೀಕ್ಷಣ ಮಾಡುವ ಬಗ್ಗೆ ಅವರು ತತ್ಪರರಿರುವರು; ಸಮಂಜಸವಾದ ವಿಚಾರಗಳು ಅವರಲ್ಲಿ ಬರುತ್ತಿರುತ್ತವೆ. ಆದರೆ ಈ ಕುತೂಹಲ ಬುದ್ಧಿಯನ್ನು ನಾವು ಒಮ್ಮೆ ಒತ್ತಿ ಹಿಡಿದು ಬಿಟ್ಟರೆ, ಹಾಗು ಅವರ ನಿರೀಕ್ಷಣ ಶಕ್ತಿಯನ್ನು ನಿರ್ಬಂಧಿಸಿಬಿಟ್ಟರೆ ಇಲ್ಲವೆ ನಮ್ಮ ಅಧಿಕಾರ ಬಲದಿಂದ ಯೋಗ್ಯಾಯೋಗ್ಯತೆಯನ್ನು ಅವರು ನಿಶ್ಚಯಿಸುವದನ್ನು ಕಟ್ಟು ಮಾಡಿಬಿಟ್ಟರೆ ಅವರು ನಮಗೆ ಪ್ರಶ್ನಗಳನ್ನು ಕೇಳದಾಗುವರು, ಯಾವದೊಂದು ಸಂಗತಿಯ ಬಗ್ಗೆ ತಾವಾಗಿ ವಿಚಾರ ಮಾಡಲಾರರು. ಹಾಗೆಯೇ ನಿರೀಕ್ಷಣ ಮಾಡುವ ಗೊಡವೆಗೂ ಹೋಗಲಾರರು.

ಆದರೆ ಈ ಇಲಾಖೆಯ ಪ್ರತಿಯೊಂದು ಶಾಲೆಯಲ್ಲಿ, ಇಪ್ಪೇ ಏಕೆ? ಈ ಶಾಲೆಗಳ ಪ್ರತಿಯೊಂದು ವರ್ಗದಲ್ಲಿ ಈ ವಸ್ತುಸ್ಥಿತಿಯನ್ನು ಹೆಚ್ಚುಕಡಿಮೆ ಪ್ರಮಾಣದಿಂದ ನಾವು ನೋಡಬಹುದು. ಇದಕ್ಕೆ ಕಾರಣವೇನಿರಬಹುದೆಂದು ವಿಚಾರಿಸಲು ಮೊದಲು ಶಿಕ್ಷಕರಲ್ಲಿಯೇ ಕುತೂಹಲ, ವಿಚಾರ ಹಾಗು ನಿರೀಕ್ಷಣೆ ಇವು ಕಂಡು

ಬರುವದಿಲ್ಲ. ಅಂದಮೇಲೆ ಇವನ್ನು ಹುಡುಗರಲ್ಲಿ ಅವರು ಉತ್ತೇಜನಗೊಳಿಸುವದು ಯಾವ ಮಾತು? ನಮ್ಮ ಶಿಕ್ಷಕರು ದೇಶಭಾಷೆಯ ಮುಲ್ಕೀಪರೀಕ್ಷೆಯನ್ನು ಇಲ್ಲವೆ ಇಂಗ್ಲಿಷ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯನ್ನು ಪಾಸಾದರೆಂದು ತಿಳಿಯುವ; ಅದೇಕೆ, ಶಿಕ್ಷಣದ ಹೋರಿಯನ್ನು ಆರಿಸಿಕೊಂಡು ಟ್ರೇನಿಂಗ ಸಂಸ್ಥೆಗೆ ಹೋಗಿ ಒಂದನೆಯ, ಎರಡನೆಯ ಹಾಗು ಮೂರನೆಯ ವರುಷದ ಸರಟಿಫಿಕೇಟನ್ನು ಪಡೆದರೆಂದು ಎಣಿಸುವ. ಅಂದಿಗೆ ಅವರು ಕೃತಾರ್ಥರಾದೆವೆಂದು ತಿಳಿದುಕೊಳ್ಳುತ್ತಾರೆ. ಅಲ್ಲಿಗೆ ಅವರ ಶಿಕ್ಷಣವು ಪೂರ್ಣವಾಯಿತೆಂದು ಅವರ ನಂಬುಗೆ. ಅಲ್ಲಿಯ ವರೆಗೆ ಬುದ್ಧಿಯ ವಿಕಾಸಕ್ಕೆ ಎಡೆಕೊಟ್ಟು ಅದನ್ನು ಮುಂದಿನ ಕಾರ್ಯದಲ್ಲಿ ನಿಯೋಜಿಸಲಿಕ್ಕೆ ತಕ್ಕದ್ದನ್ನಾಗಿ ಮಾಡಿಕೊಂಡೆವೆಂಬ ಭಾವನೆಯು ಅವರಿಗೆ ಇರುವದಿಲ್ಲ. ತಮ್ಮ ಸ್ವಂತ ಕೆಲಸಗಳಲ್ಲಾಗಲಿ, ಜಗತ್ತಿನಲ್ಲಿ ನಡೆದ ಸಂಗತಿಗಳ ಬಗ್ಗೆಯಾಗಲಿ, ಇಷ್ಟೇ ಏಕೆ, ತಮ್ಮ ಸುತ್ತಲು ಏನು ನಡೆದಿರುವದೆಂಬಬಗ್ಗೆಯಾಗಲಿ ಬುದ್ಧಿಪೂರ್ವಕವಾಗಿ ವಿಚಾರ ಮಾಡುತ್ತಿರಬೇಕೆಂಬದನ್ನು ಮರೆತುಬಿಡುತ್ತಾರೆ. ಹೀಗಾದ ಬಳಿಕ ತಮ್ಮ ಹುಡುಗರಿಂದ ನಿರೀಕ್ಷಣ ವಿಚಾರಗಳನ್ನು ಮಾಡಿಸುತ್ತಿರಬೇಕೆಂಬ ಅರಿವು ಅವರಿಗೆ ಹ್ಯಾಗೆ ಬರಬೇಕು? ತಾವು ನೋಡಿದ ಒಂದು ನಿಯಮಿತವಾದ ಪದ್ಧತಿಯಿಂದ ಕಲಿಸುತ್ತ ಹೋದರೆ ತಮ್ಮ ಕರ್ತವ್ಯವು ಆಯಿತೆಂದು ಅವರು ತಿಳಿಯುತ್ತಾರೆ. ನೀವೆಲ್ಲ ಇಲ್ಲಿ ಕಲಿತದ್ದು ಹೊಸ ಪದ್ಧತಿಗಳನ್ನು ನೋಡಲಿಕ್ಕಿಲ್ಲ; ಇಲ್ಲವೆ ಹಳೆ ಪದ್ಧತಿಗಳನ್ನು ಹೊಸದಾಗಿ ಮಾಡಿಕೊಳ್ಳಲಿಕ್ಕಿಲ್ಲ. ಹೊಸ ದೃಷ್ಟಿಯಿಂದ ವಿಚಾರ ಮಾಡಲಿಕ್ಕೆ ಬಂದಿರುವಿರೆಂಬದನ್ನು ಮರೆಯಬೇಡಿರಿ. ಶಿಕ್ಷಣಶಾಸ್ತ್ರದ ಮೂಲತತ್ವಗಳನ್ನು ಕುರಿತು ವಿಚಾರ ಮಾಡಿರಿ. ಇವುಗಳ ಸಹಾಯದಿಂದ ನಿಮ್ಮ ಹೆಗ್ಗುರಿಯು ಯಾವದು? ಇದನ್ನು ನಿರವೇರಿಸಲಿಕ್ಕಾಗಿ ನೀವೂ ನಿಮ್ಮ ವಿದ್ಯಾರ್ಥಿಗಳೂ ನಿಮ್ಮ ಮಿದುಳು, ಬುದ್ಧಿಶಕ್ತಿ, ಕಲ್ಪನಾಶಕ್ತಿ ಇವುಗಳನ್ನು ಎಷ್ಟು ಕಡಿಮೆ ಪ್ರಮಾಣದಿಂದ ಉಪಯೋಗಿಸುತ್ತಿರುವಿರಿ. ಇವೇ ಮೊದಲಾದ ಪ್ರಶ್ನೆಗಳನ್ನು ಕುರಿತು ವಿಚಾರ ಮಾಡಿರಿ. ನಿಮಗೆ ಮೇಲ್ತರದ ಪುಸ್ತಕಗಳು ದೊರೆಯುವದಿಲ್ಲ; ನಿಮಗೆ ದೊರೆಯುವ ಉಪಕರಣಗಳೂ ಮೇಲಾದವಿರುವದಿಲ್ಲ. ಈ ಕೊರತೆಯ ಪರಿಣಾಮವು ನಿಮ್ಮ ಕೆಲಸದ ಮೇಲೆ ಆಗುತ್ತಿರುವದೆಂಬದು ನನಗೆ ಗೊತ್ತಿದೆ. ಆದರೆ ನಾನು ಈ ಮೊದಲು ಹೇಳಿದಂತೆ ಜ್ಞಾನವನ್ನು ಹುಡುಗರ ತಲೆಯಲ್ಲಿ ತುಂಬುವದು ನಿಮ್ಮ ಧ್ಯೇಯವಿರಬಾರದು; ಮಾನಸಿಕ ಪ್ರಗತಿಯನ್ನುಂಟು ಮಾಡುವದೇ ನಿಮ್ಮ ಹೆಗ್ಗುರಿಯಾಗಿರತಕ್ಕದ್ದು. ವಸ್ತುಸ್ಥಿತಿಯ ಜ್ಞಾನವೆಂಬದು ಈ ಹೆಗ್ಗುರಿಯನ್ನು ಸಾಧಿಸಿಕೊಳ್ಳಲಿಕ್ಕೆ ಸಾಧನವು. ನಿಮ್ಮ ಹುಡುಗರು ನಿಲ್ಲದೆ ಪಾಠಗಳನ್ನು ಓದುವರು; ಆದರೆ ತಾವು ಏನು ಓದುತ್ತಿರುವೆವೆಂಬದು ಅವರ ಲಕ್ಷ್ಯದಲ್ಲಿ ಬರುವದಿಲ್ಲ; ಅದನ್ನು ಕುರಿತು

ನಾಲ್ಕು ಮಾತುಗಳನ್ನು ಹೇಳಲಿಕ್ಕಂತೂ ಅವರಿಗೆ ಆಗುವದಿಲ್ಲ. ಅವರು ನಾಲ್ಕು ಪಂಕ್ತಿ ಬರೆಯುವರು. ಆದರೆ ತಾವು ಬರೆದದ್ದು ಸರಿಯಿರುವದೋ ತಪ್ಪಿರುವದೋ ಎಂಬದು ಅವರಿಗೆ ಗೊತ್ತಾಗುವದಿಲ್ಲ. ಸಾಲೆಯಲ್ಲಿ ಆರೋಗ್ಯಶಾಸ್ತ್ರವು ಒಂದು ವಿಷಯವು: ಈ ಬಗ್ಗೆ ಹುಡುಗರು ಪಾಠಗಳನ್ನು ಕಲಿಯುವರು. ಆದರೆ ಆರೋಗ್ಯ ಶಾಸ್ತ್ರದ ತೀರ ಸಾಮಾನ್ಯವಾದ ಸಂಗತಿಗಳು ವರ್ಗದಲ್ಲಿ ದುರ್ಲಕ್ಷಿತವಾದದ್ದು ಸಾರ್ವತ್ರಿಕವಾಗಿ ಕಂಡುಬರುವದು. ಹುಡುಗರು ಸೃಷ್ಟಿ ನಿರೀಕ್ಷಣದ ಬಗ್ಗೆ ಕಲಿತಿರುವರು. ಆದರೆ ಸಾಮಾನ್ಯವಾದ ಎರಡು ಗಿಡಗಳು ಇಲ್ಲವೆ ಎರಡು ಪಕ್ಷಿಗಳಲ್ಲಿ ಯಾವ ಹೆಚ್ಚುಕಡಿಮೆಗಳಿರುವವೆಂಬದು ಅವರ ಲಕ್ಷ್ಯದಲ್ಲಿ ಬರುವದಿಲ್ಲ. ಈ ಸಂಗತಿಗಳನ್ನು ನೋಡಿದರೆ ಶಿಕ್ಷಕರು ತಮ್ಮ ವಿಚಾರಶಕ್ತಿಗೆ ಪೂರ್ಣವಾಗಿ ಬಿಡುವು ಕೊಟ್ಟಿರುವರೆಂದು ತೋರುತ್ತದೆ; ಶಿಕ್ಷಕರಂತೆಯೇ ವಿದ್ಯಾರ್ಥಿಗಳಾದರೂ ವಿಚಾರಶಕ್ತಿಯನ್ನು ಉಪಯೋಗಿಸುವದನ್ನು ಮರೆತು ಕಂಠಪಾಠ ಮಾಡುವದರಲ್ಲಿ ಮಗ್ನವಾದಂತೆ ತೋರುತ್ತದೆ. ಇಂಥ ಜನರನ್ನು ನಾವು ನೋಡಿರುವೆವು. ಇದು ದುರ್ದೈವದ ಮಾತು. ಸಾಲೆಯ ಕೆಲಸವು ಇಷ್ಟೇ ಎಂದು ತಿಳಿಯುವದಾದರೆ, ಈ ಶಿಕ್ಷಣವು ನಿಸ್ಪ್ರಯೋಜಕವಾದದ್ದೆಂದು ಹೇಳಬೇಕಾಗುತ್ತದೆ. ಈ ಬಗೆಯ ಸಾಕ್ಷರತೆಯು ಬಂದರೂ ಅಷ್ಟೇ, ಬಾರದಿದ್ದರೂ ಅಷ್ಟೇ. ಪುಸ್ತಕದ ಹಾಗು ತಾವು ಅಭ್ಯಾಸಿಸಿದ ಗಣಿತದ ಭಾಗದ ಉಪಯೋಗವನ್ನು ವಿಚಾರಪೂರ್ವಕವಾಗಿ ನೂಡಿಕೊಳ್ಳಲಿಕ್ಕೆ ಹುಡುಗರಿಗೆ ಬಾರದಿದ್ದರೆ ತುಸು ದಿವಸಗಳು ಆಗುವಷ್ಟರಲ್ಲಿ ಅವರು ಮೊದಲಿನಂತೆಯೇ ಹೆಡ್ಡರಾಗುವರು. ಇಂಥ ಪರಿಸ್ಥಿತಿಯು ನಮ್ಮ ಶಾಲೆಗಳಲ್ಲಿ ಇರುವದಕ್ಕೆ ಪಾಲಕರೂ ತಾಯ್ತಂದೆಗಳೂ ಶಿಕ್ಷಕರನ್ನು ಸಹಾನುಭೂತಿಯಿಂದ ನೋಡುವದು ಹ್ಯಾಗೆ? ಈ ಹುಡುಗರ ನಾಲ್ಕಾರು ವರುಷದ ಆಯುಷ್ಯವು ನಿರರ್ಥಕವಾಗಿ ಹೋದಂತಾಯಿತು. ಅವರ ತಾಯ್ತಂದೆಗಳು ಅವರ ವಿದ್ಯಾರ್ಜನೆಗಾಗಿ ಮಾಡಿದ ಖರ್ಚೆಲ್ಲ ಹೊಳೆಯಲ್ಲಿ ಹುಳಿ ತೊಳೆದಂತಾಗುವದು. ಹುಡುಗರ ಬುದ್ಧಿ, ವಿಚಾರಶಕ್ತಿ ಇವುಗಳ ವಿಕಾಸವನ್ನು ಮಾಡುವದಾದರೆ ಶಿಕ್ಷಕರು ತಮ್ಮ ಮನಸ್ಸು ಜಾಗೃತವಿರುವಂತೆ ನೋಡಿಕೊಳ್ಳಬೇಕು. ವಿದ್ಯೆಯ ಅಭಿರುಚಿಯಿಲ್ಲದವನು ವಿದ್ಯಾರ್ಥಿಗಳನ್ನು ಹ್ಯಾಗೆ ಸಿದ್ಧಪಡಿಸಬಲ್ಲನು? ನೀವು ನಿಮ್ಮ ಅಭ್ಯಾಸತೀಲತೆಯನ್ನು ವೃದ್ಧಿಗೊಳಿಸತಕ್ಕದ್ದು; ಕೇವಲ ಪುಸ್ತಕಗಳನ್ನೋದುವದರಿಂದ ಅದು ಸಾಧ್ಯವಾಗಲಾರದು. ಆದರೆ ಬುದ್ಧಿ, ವಿಚಾರಶಕ್ತಿ, ನಿರೀಕ್ಷಣಶಕ್ತಿ ಇವುಗಳನ್ನು ನೀವು ಉಪಯೋಗ ಮಾಡುತ್ತಿರಬೇಕು. ಅಂದವಾದ ಕಲ್ಪನೆ ವಿಚಾರಗಳಿಗೆ ಎಡೆಕೊಡುತ್ತಿರಬೇಕು. ಪುಸ್ತಕ ಪ್ರಪಂಚವನ್ನು ಮರೆಯಬೇಕು. ಸುತ್ತಲಿರುವ ಪಾಸ್ತವಿಕ ಪ್ರಪಂಚವನ್ನೇ ಪುಸ್ತಕವೆಂದೆಣಿಸಬೇಕು. ಜಗತ್ತನ್ನು ಒಂದು ಪ್ರಯೋಗಶಾಲೆ

ಯಂತೆ ಉಪಯೋಗಿಸಿ ಅದರಲ್ಲಿ ನಡೆಯುತ್ತಿರುವ ಸಂಗತಿಗಳ ಬಗ್ಗೆ ವಿಚಾರ ಮಾಡಿ ಸಿದ್ಧಾಂತಗಳನ್ನು ತೆಗೆಯಬೇಕು. ಭೂಗೋಲ, ಪ್ರಕೃತಿವಿಮರ್ಶೆ ಈ ವಿಷಯಗಳನ್ನು ಅಭ್ಯಾಸಿಸುವಾಗ ನಿರೀಕ್ಷಣ ಶಕ್ತಿಯ ಉಪಯೋಗ ಮಾಡಬೇಕು; ಇತಿಹಾಸ, ಆರೋಗ್ಯಶಾಸ್ತ್ರ ಈ ವಿಷಯಗಳನ್ನು ಕಲಿಸುವಾಗ ಬುದ್ಧಿಯ ಉಪಯೋಗವನ್ನು ಮಾಡಬೇಕು. ಪುಸ್ತಕಗಳ ಯೋಗ್ಯ ಉಪಯೋಗವನ್ನು ಹ್ಯಾಗೆ ಮಾಡಿಕೊಳ್ಳಬೇಕೆಂಬದನ್ನು ವಿದ್ಯಾರ್ಥಿಗಳಿಗೆ ಕಲಿಸಬೇಕು. ಅವುಗಳನ್ನು ಗಿಳಿಪಾಠ ಮಾಡುವದರಿಂದ ಪ್ರಯೋಜನವಿಲ್ಲೆಂದೂ ಅವುಗಳಲ್ಲಿ ಬರೆದ ಸಂಗತಿಗಳ ಸತ್ಯತೆಯನ್ನು ಬುದ್ಧಿನಿರೀಕ್ಷಣಗಳಿಂದ ಹ್ಯಾಗೆ ಅರಿಯಬೇಕೆಂಬದನ್ನೂ ಅವರಿಗೆ ತೋರಿಸಿಕೊಡಬೇಕು. ಹೀಗೆ ಮಾಡಿದರೆ ವಾಚನದಿಂದ ಎಂಥ ಲಾಭಗಳಾಗುತ್ತವೆಂಬದನ್ನು ಅವರು ಮನವರಿಯುವರು. ಕೊನೆಗೆ ನಿಮಗೆ ಹೇಳುವದೇನೆಂದರೆ, ನೀವು ನಿರೀಕ್ಷಿಸುವ ಪದ್ಧತಿಗಳ ಉಪಯೋಗವನ್ನು ಕೇವಲ ಯಾಂತ್ರಿಕವಾಗಿ ಮಾಡಬೇಡಿರಿ. ಅವುಗಳನ್ನು ಪೂರ್ಣವಾಗಿ ತಿಳಿದುಕೊಳ್ಳಿರಿ. ಅವು ವ್ಯವಹಾರಸಿದ್ಧವಾದ ಪದ್ಧತಿಗಳಿರುವವು. ಇವುಗಳಲ್ಲಿ ಗೂಢವಾದ ತತ್ವಗಳು ಅಡಗಿಕೊಂಡಿಲ್ಲ. ವ್ಯವಹಾರದಲ್ಲಿ ಕಂಡುಬರುವ ಸಂಗತಿಗಳಿಗೆ ಸಂಬಂಧಿಸಿಯೇ ಇವುಗಳನ್ನು ಗೊತ್ತುಪಡಿಸಿರುವರು. ಆದ್ದರಿಂದ ಪರಿಸ್ಥಿತಿಯಲ್ಲಿ ಹೆಚ್ಚುಕಡಿಮೆಯಾದಂತೆ ಅವುಗಳಲ್ಲಿಯೂ ಬದಲಾವಣೆಗಳನ್ನು ಮಾಡಿ ನಾವು ಉಪಯೋಗಿಸಬೇಕಾಗುವದು. ಈ ಶಿಕ್ಷಣಯೋಜನೆಯಿಂದ ನಿಮ್ಮ ಮನಸಿನ ಸಂಕೋಚವು ಇಲ್ಲದಾಗಲಿ; ಅದು ವಿಕಾಸಹೊಂದಲಿ.

ಕಾನಡಾ ದೇಶವು

(ಒಂದು ಇಂಗ್ಲಿಷ ಪತ್ರಿಕೆಯ ಆಧಾರದಿಂದ ಬರೆದದ್ದು.)

ಕಾನಡಾ ದೇಶವು ಬ್ರಿಟಿಷ ಸಾಮ್ರಾಜ್ಯದ ಡೋಮೀನಿಯನ್ ಎಂದು ಹೆಸರುಳ್ಳ ಸ್ವತಂತ್ರ ದೇಶಗಳಲ್ಲಿ ಮೊದಲನೆಯದು ಇರುವದು. ಇಂಗ್ಲಂಡದಲ್ಲಿರುವ ಲಿವ್ಹರಪೂಲ ಇಲ್ಲವೆ ಸೌಥಾಂಪ್ಟನ್ ಬಂದರದಿಂದ ಹಡಗದಲ್ಲಿ ಕುಳಿತು ಹೊರಟರೆ ಒಂದು ವಾರವಾದ ಬಳಿಕ ಕಾನಡಾದೇಶದ ಅತ್ಲಾಂತಿಕದ ದಂಡೆಯನ್ನು ಮುಟ್ಟಬಹುದು. ಈ ದಂಡೆಯ ಮೇಲಿರುವ ಇಂಗ್ಲಂಡಕ್ಕೆ ತೀರ ಸಮೀಪವಾದ ಬಂದರಗಳೆಂದರೆ ನೋವಾಸ್ಕೋಶಿಯದಲ್ಲಿರುವ ಹಾಲಿಫಾಕ್ಸ ಬಂದರವು ಒಂದು, ನ್ಯೂಬ್ರುನ್ಸ್ವಿಕ್ ಪ್ರಾಂತದಲ್ಲಿರುವ ಸೆಂಟಜಾನ್ ಬಂದರವು ಎರಡನೆಯದು. ಆದರೆ

ಕಾನಡಾದ ಅತ್ಲಾಂತಿಕ ಮಹಾಸಾಗರದ ದಂಡೆಯ ಮೇಲಿರುವ ಬಂದರಗಳಲ್ಲಿ ಸೆಂಟ್ ಲಾರೆನ್ಸ್ ಎಂಬ ಹೊಳೆಯು ಥಡದಲ್ಲಿರುವ ಮಾಂಟ್ರೀಲ ಬಂದರಕ್ಕೆ ಕ್ವಿಬೆಕ್ ಬಂದರದ ಮೇಲೆ ಹಾಯ್ದು ಸಮುದ್ರದ ಬಹು ದೊಡ್ಡ ಹಡಗಗಳು ಹೋಗುವ ದುಂಟು. ಚಳಿಗಾಲದಲ್ಲಿ ಮಾತ್ರ ಹಿಮವು ವಿಶೇಷವಾಗಿ ಈ ಭಾಗದಲ್ಲಿ ಬಿದ್ದಿರು ವದು. ಆದ್ದರಿಂದ ಆಗ ಈ ಹಡಗಗಳಿಗೆ ಮಾಂಟ್ರೀಲ ಬಂದರವು ನಿಲುಕುವದಿಲ್ಲ. ಕಾನಡಾದೇಶದ ದಂಡೆಯ ಮೇಲೆ ಕಾಲಿಟ್ಟ ಕೂಡಲೆ ನಾವು ಸಂಯುಕ್ತ ಸಂಸ್ಥಾನ ಗಳಿಗಿಂತ ವಿಸ್ತಾರವಾದ ಪ್ರದೇಶಕ್ಕೆ ಮುಟ್ಟಿರುವೆವೆಂಬದು ನಮ್ಮ ಲಕ್ಷ್ಯದಲ್ಲಿ ಬರ ತಕ್ಕದ್ದು. ಈ ದೇಶದ ಅತ್ಲಾಂತಿಕದ ದಂಡೆಯಿಂದ ಪಶ್ಚಿಮದ ಪಾಸಿಫಿಕ ಮಹಾ ಸಾಗರದ ದಂಡೆಯವರೆಗೆ ರೇಲ್ವೆಯಿಂದ ಪ್ರವಾಸ ಮಾಡಲಿಕ್ಕೆ ನಮಗೆ ಐದು ಹಗಲುಗಳೂ ಐದು ರಾತ್ರಿಗಳೂ ಬೇಕಾಗುವವು. ಅಂದರೆ ಈ ನಾಡು ಇಷ್ಟು ವಿಸ್ತಾರವಾಗಿ ಹಬ್ಬಿರುವದು. ಹಿಂದುಸ್ತಾನದಂಥ ವಿಸ್ತಾರವಾದ ದೇಶದಲ್ಲಿರುವ ಜನರಿಗೆ ಇದು ಅಷ್ಟು ಆಶ್ಚರ್ಯವೆನಿಸಲಿಕ್ಕಿಲ್ಲ. ನಮ್ಮಲ್ಲಿಯೂ ಕನ್ಯಾಕುಮಾರಿ ಯಿಂದ ಪೇಶಾವರಕ್ಕಾಗಲಿ ಪೇಶಾವರದಿಂದ ಚಿತಗಾಂಗಕ್ಕಾಗಲಿ ರೇಲ್ವೆಯಿಂದ ಪ್ರವಾಸಮಾಡಲಿಕ್ಕೆ ನಾಲ್ಕೈದು ದಿನಗಳು ಬೇಕಾಗುವವು. ಆದರೆ ಇಂಗ್ಲಂಡದ ಜನರಿಗೆ ಐದು ದಿವಸಗಳ ಪ್ರವಾಸವಷ್ಟು ವಿಸ್ತಾರವಾದ ದೇಶವೆಂದರೆ ಸೋಜಿಗ ವೆನಿಸದಿರದು. ಇಂಗ್ಲಂಡವು ಸಣ್ಣ ನಡುಗಡ್ಡೆಯಿರುವ ಮೂಲಕ ಬೇಕಾದಲ್ಲಿಂದ ಬೇಕಾದಷ್ಟು ದೂರದಲ್ಲಿರುವ ಪಟ್ಟಣಕ್ಕೆ ಹನ್ನೆರಡು ತಾಸುಗಳಲ್ಲಿ ರೇಲ್ವೆಯಿಂದ ಮುಟ್ಟಬಹುದು. ಆದರೂ ಕಾನಡಾದೇಶದಲ್ಲಿ ಒಂದು ದಂಡೆಯಿಂದ ಮತ್ತೊಂದಕ್ಕೆ ಹೋಗುವಾಗ ಬಗೆಬಗೆಯ ಪ್ರದೇಶಗಳು ದೃಷ್ಟಿಗೆ ಬೀಳುವದರಿಂದ ಪ್ರವಾಸದಲ್ಲಿ ಬೇಸರವುಂಟಾಗದು.

ಯಾವದೊಂದು ಹೊಸ ದೇಶದ ಚಿತ್ರವು ನಮ್ಮ ಕಣ್ಣೆದುರಿಗೆ ಕಟ್ಟಿದಂತಾಗ ಬೇಕಾದರೆ ಆ ದೇಶದಲ್ಲಿ ಪ್ರವಾಸಮಾಡುವಷ್ಟು ಮೇಲಾದ ಸಾಧನವು ಬೇರೊಂದಿಲ್ಲ. ಆದರೆ ಇದು ಯಾವಾಗಲೂ ಸಾಧ್ಯವಿರುವದಿಲ್ಲ. ದೊಡ್ಡ ಸ್ಕೇಲಿನ ಮೇಲೆ ತೆಗೆದ ಒಂದು ನಕಾಶದ ನೆರವಿನಿಂದ ನಾವು ಆ ದೇಶದ ಬಗ್ಗೆ ವಿಶೇಷ ಸಂಗತಿಗಳನ್ನು ಅಭ್ಯಾಸಿಸಬಹುದು. ಇಂಥ ಒಂದು ನಕಾಶವನ್ನು ನೋಡಲು, ಕಾನಡಾದೇಶದ ಪೂರ್ವದ ಭಾಗದಲ್ಲಿ ವಿಶಾಲವಾದ ನೋವಾಸ್ಕೋಶಿಯ ಹಾಗು ನ್ಯೂಬ್ರನ್ಸವಿಕ್ ಎಂಬ ಎರಡು ಪ್ರಾಂತಗಳೂ, ಪ್ರಿನ್ಸ ಎಡ್ವರ್ಡ ಎಂಬ ನಡುಗಡ್ಡೆಯ ನಾಡೂ ಕಾಣುವವು. ಇವು ಮೂರೂ ಸಮುದ್ರಕ್ಕೆ ಹತ್ತಿದ ಪ್ರಾಂತಗಳು. ಕಾನಡಾದ ಈ ಪ್ರಾಂತಗಳಲ್ಲಿಯೇ ವಸಾಹತುಗಾರರು ಮೊದಲು ನೆಲೆಗೊಂಡರು. ಒಳದೇಶ

ದಲ್ಲಿ ಇಂಡಿಯನರೆಂಬ ಕುಲದ ಜನರು ಇದ್ದರು; ಆ ನಾಡಿನಲ್ಲಿ ಅಡವಿಯು ಕೋಣ ಗಳು ಇಡಿದಿದ್ದವು. ಇವರನ್ನೂ ಈ ಪಶುಗಳನ್ನೂ ಹಿಂದಕ್ಕಟ್ಟಿ ನಾಡನ್ನು ಕೈವಶ ಮಾಡಿಕೊಂಡು, ಅಲ್ಲಿ ನೆಲೆಗೊಳ್ಳಲಿಕ್ಕೆ ಎಷ್ಟೋ ವರ್ಷಗಳು ಬೇಕಾದವು.

ಈ ಪ್ರಾಂತಗಳನ್ನು ದಾಟಿ ಒಳದೇಶವನ್ನು ಪ್ರವೇಶಿಸಲು ಕ್ವೀಬೆಕ್ ಹಾಗು ಅಂತಾರಿಯೋ ಪ್ರಾಂತಗಳನ್ನು ನಾವು ಸೇರುವೆವು. ಇವು ಪಶ್ಚಿಮದಲ್ಲಿರುವ ಪ್ರೇರೀ ಗಳು ಎಂಬ ಹುಲ್ಲು ಭೂಮಿಯ ನಾಡುಗಳ ವರೆಗೆ ಹಬ್ಬಿರುವವು. ದಕ್ಷಿಣದಲ್ಲಿ ಕಾನಡಾದ ಹೆಸರಾದ ಸರೋವರದ ಪ್ರದೇಶದ ವರೆಗೆ ಹೋಗಿವೆ. ಉತ್ತರದಲ್ಲಿ ಹಡಸನ್ನದ ಉಪಸಾಗರದ ವರೆಗೆ ಹಬ್ಬಿವೆ. ಕ್ವೀಬೆಕವೂ ತೋರಂತೋವೂ ಇವು ಗಳ ಮುಖ್ಯ ಪಟ್ಟಣಗಳು. ಮಾಂಟ್ರೀಲವು ಕಾನಡಾರಾಜ್ಯದೊಳಗಿನ ಎಲ್ಲಕ್ಕೂ ದೊಡ್ಡ ಬಂದರವು. ಈ ವರೆಗಿನ ಪ್ರವಾಸದಲ್ಲಿ ನಮಗೆ ಕೃಷಿಪ್ರಧಾನವಾದ ನಾಡು ಗಳೂ ಅಲ್ಲಲ್ಲಿ ಗಿರಣಿಗಳಿರುವ ಊರುಗಳೂ ದೃಷ್ಟಿಗೆ ಬಿದ್ದವು. ಅರಣ್ಯಗಳಿಂದ ತುಂಬಿದ ನಾಡೂ ಬೇಕಾದಷ್ಟು ಇತ್ತು. ಆದರೆ ಅಂತಾರಿಯೋ ಪ್ರಾಂತವನ್ನು ಬಿಟ್ಟು ಪಶ್ಚಿಮಕ್ಕೆ ಸಾಗಲು ಪ್ರೇರೀಗಳೆಂಬ ಹುಲ್ಲು ಭೂಮಿಗಳ ನಾಡು ಹತ್ತು ವದು. ಗಿಡಮರಗಳಿಲ್ಲದೆ ಎತ್ತರವಾದ ಹುಲ್ಲಿನಿಂದ ತುಂಬಿದ ಈ ಪ್ರದೇಶಗಳು ಮಾನಿಟೋಬಾ, ಸಸಾಟ್ಚಿವಾನ ಹಾಗು ಆಲ್ಬರ್ಟಾ ಎಂಬ ಮೂರು ದೊಡ್ಡ ದೊಡ್ಡ ಪ್ರಾಂತಗಳಲ್ಲಿ ವಿಸ್ತಾರವಾಗಿ ಹಬ್ಬಿರುವವು. ಇವುಗಳಿಂದ ಪರದೇಶಗಳಿಗೆ ಹೋಗು ವಷ್ಟು ಗೋದಿಯು ಭೂಮಂಡಲದಲ್ಲಿ ಬೇರೆ ಯಾವ ದೇಶಗಳಿಂದಲೂ ಹೋಗುವ ದಿಲ್ಲ. ಕಾನಡಾದೇಶವು ಗೋದಿಯ ಬಗ್ಗೆ ಹೆಸರಾವದ್ದು ಈ ಪ್ರೇರೀ ನಾಡುಗಳಲ್ಲಿ ಹಬ್ಬಿದ ಈ ಮೂರು ಪ್ರಾಂತಗಳಿಂದಲೇ. ಇವುಗಳಲ್ಲಿ ವಿನಿಪೆಗ್, ರೆಜಿನಾ, ಸಸ್ಕಟೂನ, ಕಾಲಗಾರಿ ಹಾಗು ಎಡ್‌ಮೆಂಟನ್ ಎಂಬವು ಹೆಸರಾದ ಪಟ್ಟಣಗಳು. ವಿನಿಪೆಗ್‌ವು ಪೂರ್ವಕಡೆಗಿರುವದು. ಕೊನೆಯ ಎರಡು ಪಟ್ಟಣಗಳು ರಾಕೀ ಪರ್ವತಗಳ ಅಂಚಿಗೆ ಇರುತ್ತವೆ.

ರಾಕೀ ಪರ್ವತಾವಳಿಯು ಈ ದೇಶದ ಪಶ್ಚಿಮಭಾಗದಲ್ಲಿ ಅಡ್ಡವಾಗಿ ಹಬ್ಬಿ ಮುಂದೆ ಹೋಗಲು ಮಾರ್ಗವನ್ನು ಕಟ್ಟಿರುವದು. ಇಲ್ಲಿಂದ ಅಟ್ಲಾಂಟಿಕ ಮಹಾ ಸಾಗರವು ಬಹು ದೂರದಲ್ಲಿರುವದು. ಇದನ್ನು ದಾಟಿ ಬ್ರಿಟಿಷ ಕೋಲಂಬಿಯದ ಪ್ರಾಂತವನ್ನು ಸೇರಲು ಪಶ್ಚಿಮದಲ್ಲಿ ವಾಂಕುವರ ಬಂದರವು ಕಾಣಹತ್ತುವದು. ಈ ಬಂದರದಿಂದ ನ್ಯೂಝಿಲಂಡ, ಆಸ್ಟ್ರೇಲಿಯ ಹಾಗು ಪೂರ್ವದ ರಾಜ್ಯಗಳಿಗೆ ದೊಡ್ಡ ಹಡಗಗಳು ಹೋಗುವವು. ಆದರೂ ಈ ಬಂದರವು ಬ್ರಿಟಿಷ ಕೋಲಂಬಿ ಯದ ರಾಜಧಾನಿಯಲ್ಲ. ಈ ಮಹತ್ವವು ವಿಕ್ಟೋರಿಯ ಎಂಬ ಪಟ್ಟಣಕ್ಕೆ ಉಂಟಾ

ಗಿರುವದು. ಇಂಗ್ಲಂಡವಲ್ಲಿರುವ ಜನರಿಗೆ ವಾಂಕುವರ ಪಟ್ಟಣವೆಂದರೆ ಪಶ್ಚಿಮಕ್ಕೆ ಬಹುದೂರವಲ್ಲಿರುವ ಊರು; ಹಾಂಗಕಾಂಗವೆಂದರೆ ಪೂರ್ವಕ್ಕೆ ಅತಿಶಯ ದೂರದಲ್ಲಿರುವ ಬಂದರವು. ಆದರೆ ವಾಂಕುವರ ಬಂದರದಿಂದ ಪಶ್ಚಿಮಕ್ಕೆ ಸಾಗಿದರೆ ಸ್ವಲ್ಪ ದಿನಗಳಲ್ಲಿ ಹಾಂಗಕಾಂಗ ಬಂದರವನ್ನು ಸೇರಬಹುದು. ಇದರಿಂದ ಪೃಥ್ವಿಯು ಗೋಲಾಕಾರವೆಂಬ ಮಾತು ಮನವರಿಕೆಯಾಗದಿರದು.

ನಾವು ಒಳ್ಳೆಯ ಲಗುಬಗೆಯಿಂದ ಕಾನಡಾದೇಶದ ಒಂದು ದಂಡೆಯಿಂದ ಮತ್ತೊಂದು ದಂಡೆಯ ವರೆಗೆ ನೂರಾರು ಪ್ರವಾಸವನ್ನು ಮಾಡಿದೆವು. ಆದರೆ ಮಹತ್ವದ ಅನೇಕ ಸಂಗತಿಗಳನ್ನು ನಾವು ನೋಡುವದೇ ಆಗಲಿಲ್ಲ. ಕಾನಡಾ ದೇಶವನ್ನು ನೋಡ ಹೋದ ಎಲ್ಲ ಪ್ರವಾಸಿಕರ ಮನಸಿನಲ್ಲಿ ಅದರ ವಿಸ್ತಾರವೂ ವೈಚಿತ್ರ್ಯವೂ ಚೆನ್ನಾಗಿ ಬಿಂಬಿಸುವವು. ನಮ್ಮ ಪ್ರವಾಸವಲ್ಲಿಯೂ ಇವೆರಡು ಲಕ್ಷಣಗಳು ನಮ್ಮ ಲಕ್ಷ್ಯದಲ್ಲಿ ಪೂರ್ಣವಾಗಿ ಬಂದಿರುವವು. ಆದರೂ ಕಾನಡಾದೇಶದ ಮುಖ್ಯ ಉದ್ಯೋಗವು ಕೃಷಿಯು—ಗೋದಿ ಬೆಳೆಯುವದು-ಎಂದು ನಾವು ಬಗೆಯಲಾಗದು. ಈ ರಾಜ್ಯದಲ್ಲಿ ಹಲವು ಜನರು ಅರಣ್ಯಗಳಲ್ಲಿ ದುಡಿದು ಹೊಟ್ಟೆತುಂಬಿಕೊಳ್ಳುವರು; ಇಲ್ಲಿ ಹಣ್ಣಿನ ತೋಟಗಳನ್ನು ಮಾಡುವದರಲ್ಲಿಯೂ ಹಲವರು ತೊಡಗಿರುವರು. ಎಷ್ಟೋ ಜನರು ಮೀನುಗಳನ್ನು ಹಿಡಿಯುವ ಉದ್ಯೋಗವನ್ನು ಮಾಡುವರು. ಈ ಮೇರೆಗೆ ಕಾನಡಾದೇಶದ ಕೃಷಿಯಲ್ಲಿಯೂ ಹಲವು ಪ್ರಕಾರಗಳಿರುವವು. ಆದರೂ ಇದು ಕೃಷಿಯಲ್ಲಿ ಮಾತ್ರ ತೊಡಗಿರುವ ದೇಶವೆಂದರೆ ಸರಿಯಾಗದು. ಅಲ್ಲಿಯ ಕಣಿಗಳೂ, ಹಲವು ಬಗೆಯ ಯಂತ್ರಗಾರಿಕೆಗಳೂ ಹಲವು ಜನರಿಗೆ ಉದ್ಯೋಗವನ್ನು ಪೂರೈಸುವವು. ಕಾನಡಾದೇಶದ ಸಂಪತ್ತು ಕೃಷಿಯಿಂದಾದಷ್ಟೇ ಇವುಗಳಿಂದಲೂ ಆಗುತ್ತಿರುವದು; ಹಾಗು ಹೆಚ್ಚುತ್ತಿರುವದು.

ಕಾನಡಾದಲ್ಲಿ ಕ್ವಿಬೆಕ್ ಪ್ರಾಂತದಲ್ಲಿ ಮೊದಲು ಫ್ರೆಂಚರು ನೆಲೆಗೊಂಡಿದ್ದರು. ೧೭೬೩ರಲ್ಲಿ ಇವರಿಗೂ ಇಂಗ್ಲಿಷರಿಗೂ ಯುದ್ಧವು ಆಯಿತು. ಕ್ವಿಬೆಕ್ ಎಂಬಲ್ಲಿ ಇಂಗ್ಲಂಡದ ಸೇನಾನಾಯಕರಲ್ಲಿ ಹೆಸರಾದ ವೂಲ್ಫನೆಂಬ ಸೇನಾಪತಿಯು ಫ್ರೆಂಚರನ್ನು ಸೋಲಿಸಿದನು. ಅಂದಿನಿಂದ ಕ್ವಿಬೆಕವು ಬ್ರಿಟಿಷ ಪ್ರಾಂತವಾಯಿತು. ೧೭೬೭ರಲ್ಲಿ ಕಾನಡಾವು ಬ್ರಿಟಿಷ ಸಾಮ್ರಾಜ್ಯದ ಭಾಗವಾಯಿತು. ಇದೇ ಬ್ರಿಟಿಷ ಸಾಮ್ರಾಜ್ಯದ ಮೊದಲನೆಯ ದೊಡ್ಡ ಡೋಮಿನಿಯನವೆಂಬ ರಾಜ್ಯವು. ೧೭೬೩ ರಿಂದ ೧೮೬೭ರ ವರೆಗೆ ಒಂದು ನೂರುವರ್ಷಗಳಲ್ಲಿ ವಸಾಹತುಗಾರರು ಒಳದೇಶದ ನಾಡುಗಳಿಗೆ ಹೋಗಿ ಆಯಾಪ್ರದೇಶಗಳನ್ನು ಅಭ್ಯಾಸಿಸಿದ್ದರು. ಆದರೂ ಮಧ್ಯದ ಹುಲ್ಲು ಭೂಮಿಗಳಲ್ಲಿಯೂ ಪಶ್ಚಿಮದ ಪರ್ವತಗಳ ಅಂಚಿನ ನಾಡುಗಳಲ್ಲಿಯೂ

ಯಾರೂ ನೆಲೆಗೊಂಡಿರಲಿಲ್ಲ. ದಂಡೆಯಮೇಲಿನ ಪಟ್ಟಣಗಳಿಲ್ಲ ರೇಲ್‌ಮಾರ್ಗದಿಂದ ಜೋಡಿಸಲ್ಪಟ್ಟಿರಲಿಲ್ಲ. ಅತ್ಲಾಂತಿಕ ಮಹಾಸಾಗರದಿಂದ ಪಾಸಿಫಿಕ ಮಹಾಸಾಗರದ ದಂಡೆಗೆ ಭೂಮಾರ್ಗವಾಗಿ ಬಂದು ತೀವ್ರವಾಗಿ ಮುಟ್ಟುವ ಸಾಧನಗಳಿರಲಿಲ್ಲ. ಇವೆರಡು ಮಹಾಸಾಗರಗಳನ್ನು ರೇಲ್ವೆಯ ಮಾರ್ಗದಿಂದ ಕೂಡಿಸಬೇಕೆಂಬ ಕಲ್ಪನೆಯು ಸಾಹಸಿಕರಿಂದ ವಸಾಹತುಗಾರರಲ್ಲಿ ಮೂಡಿತ್ತು. ಎಷ್ಟೋ ಜನ ಬುದ್ಧಿವಂತರು ಇದು ಹುಚ್ಚುಕಲ್ಪನೆಯೆಂದು ತಲೆಯಲ್ಲಾಡಿಸಿದ್ದರು. ಆದರೂ ಆ ದೇಶದ ಧೀರರು ಈ ಸಂಕಲ್ಪನನ್ನು ಬಿಡಲಿಲ್ಲ. ೧೮೮೬ ರಲ್ಲಿ ಈ ರೇಲುಮಾರ್ಗವು ಪೂರ್ಣವಾಯಿತು.

ಇಂದಿಗೆ ಸುಮಾರು ಅರ್ಧಶತಮಾನದ ಹಿಂದೆ ಕಾನಡಾದ ರಾಜ್ಯವು ಡೋಮಿನಿಯನ್ ಆಫ ಕಾನಡಾ ಎಂಬ ಹೆಸರಿನಿಂದ ಸ್ಥಾಪಿತವಾಯಿತು. ಇದು ಹುಟ್ಟಿದಾಗ ಇದರಲ್ಲಿ ಸದ್ಯದ ಎಲ್ಲ ಪ್ರಾಂತಗಳು ಸೇರಿರಲಿಲ್ಲ. ಆಂತಾರಿಯೋ, ಕ್ವಿಬೇಕ, ನೋವ್ಹಾಸ್ಕಾಷಿಯ ಹಾಗು ಬ್ರುನ್ಸವಿಕ್ ಈ ನಾಲ್ಕು ಪ್ರಾಂತಗಳು ಮಾತ್ರ ಇದ್ದವು. ೧೮೭೦ರಲ್ಲಿ ಮಾನಿಟೋಬಾ ಪ್ರಾಂತವು ಸ್ಥಾಪಿತವಾಯಿತು. ಮುಂದೆ ಕೆಲವು ವರ್ಷಗಳಲ್ಲಿ ವಾಂಕುವರ ಹಾಗು ಪ್ರಿನ್ಸ ಎದ್ವರ್ಡ ನಡುಗಡ್ಡೆಗಳು ಇದರಲ್ಲಿ ಸೇರಿದವು. ಆಲ್ಬರ್ಟಾ ಹಾಗು ಸಸ್ಕಚಿವಾನ್ ಪ್ರಾಂತಗಳು ೧೯೦೫ ರಲ್ಲಿ ಪ್ರತ್ಯೇಕ ಪ್ರಾಂತಗಳಾಗಿ ಮಾಡಲ್ಪಟ್ಟವು.

ಸದ್ಯಕ್ಕೆ ಕಾನಡಾದೇಶವು ಬ್ರಿಟಿಷ ಸಾಮ್ರಾಜ್ಯದ ಒಂದು ಮಹತ್ವದ ಭಾಗವಾಗಿರುವದು. ಕಳೆದ ಮೂವತ್ತು ವರ್ಷಗಳಲ್ಲಿ ಈ ನಾಡು ಅಕಲ್ಪಿತ ಪ್ರಮಾಣದಿಂದ ಮುಂದುವರಿದಿರುವದು; ಆದರೂ ಅದರ ಏಳಿಗೆಯು ಇನ್ನೂ ಆರಂಭದ ಸ್ಥಿತಿಯಲ್ಲಿಯೇ ಇರುವದೆಂದು ಧಾರಾಳವಾಗಿ ಹೇಳಬಹುದು.

ಸದ್ಯಕ್ಕೆ ಕಾನಡಾದಲ್ಲಿ ಒಂದು ಕೋಟಿ ಜನವಸತಿಯಿದೆ. ಈ ದೇಶವು ಗ್ರೇಟಬ್ರಿಟನದ ನಾಲ್ವತ್ತು ಪಟ್ಟು ವಿಸ್ತಾರವುಳ್ಳದ್ದಾಗಿದೆ. ಇಲ್ಲಿ ಕೃಷಿಯು ಭತವಿಂಡ ಸಾಗುತ್ತಿದೆ. ಗೋದಿ, ಗೋದಿಯಹಿಟ್ಟು, ಚೀಜ, ದನಕರುಗಳು, ಜವೆಗೋದಿ, ಸೇಬುಹಣ್ಣು ಇವು ಪರದೇಶಗಳಿಗೆ ಹೋಗುತ್ತವೆ. ತಾಮ್ರ, ಬಂಗಾರ, ನಿಕೆಲ್, ಬೆಳ್ಳಿ ಮೊದಲಾದ ಧಾತುಗಳು ಈ ದೇಶದಲ್ಲಿ ಹುಟ್ಟುತ್ತವೆ. ಇಲ್ಲಿಯ ಚಳಿನಾಡಿನ ಅರಣ್ಯಗಳಿಂದ ಇಮಾರತಿನ ಕಟ್ಟಿಗೆ, ಕಾಗದ ಮಾಡಲಿಕ್ಕೆ ಬೇಕಾಗುವ ಕಟ್ಟಿಗೆಯ ಹಿಟ್ಟು ಬೇಕಾದಷ್ಟು ಹೊರಡುವವು. ಈ ದೇಶದ ಸರೋವರಗಳಲ್ಲಿಯೂ ನದಿಗಳಲ್ಲಿಯೂ ಸುತ್ತಲಿನ ಸಮುದ್ರಗಳಲ್ಲಿಯೂ ಕಾಡ್, ಸಾಲ್ಮನ ಎಂಬ ಮೀನು

ಗಳು ಮಿತಿಯಿಲ್ಲದೆ ದೊರೆಯುತ್ತವೆ. ತಂಪು ಪ್ರದೇಶಗಳಲ್ಲಿ ಉಣ್ಣೆಯ ಪ್ರಾಣಿಗಳನ್ನು ಬೇಟೆಯಾಡಿ ತುಪ್ಪಳಗಳುಳ್ಳ ಚರ್ಮಗಳನ್ನು ಯುರೋಪಖಂಡಕ್ಕೆ ಬೇಕಾದಷ್ಟು ಕಳಿಸುತ್ತಾರೆ. ಯಂತ್ರಗಾರಿಕೆಗಳಲ್ಲಿಯೂ ಕಾನಡಾಪ್ರಾಂತವು ಹಿಂದೆ ಬಿದ್ದಿಲ್ಲ. ಕಾಗದ, ಮೋಟಾರಗಾಡಿಗಳು, ಮೋಟಾರದ ರಬ್ಬರಿನ ಹಳಿಗಳು, ಕೃಷಿಗೆ ಉಪಯುಕ್ತವಾದ ಯಂತ್ರಗಳು ಇವೇ ಮೊದಲಾದ ಸರಕುಗಳು ಇಲ್ಲಿ ಸಿದ್ಧವಾಗುತ್ತವೆ.

ಕನ್ನಡ ಸಾಹಿತ್ಯಕ್ಷೇತ್ರದಲ್ಲಿಯ ಹರಿದಾಸರ ಕಾರ್ಯ

ಲೇಖಕರು:— ರಾಮರಾವ ಬಾಲೆಹೊಸೂರ, ಶಿರಹಟ್ಟಿ ಸಂ. ಸಾಂಗಲಿ

ಕನ್ನಡ ಭಾಷೆಯು ಅತಿ ಪ್ರಾಚೀನವಾದುದೆಂಬದಕ್ಕೆ ಪೌರಾಣಿಕ ಗ್ರಂಥವಾದ ಮಹಾಭಾರತದಲ್ಲಿ ಕೂಡ ಆಧಾರವಿದೆ ಎಂಬ ಸಂಗತಿಯನ್ನು ವೈ. ವಾ. ಶ್ರೀ. ರಾ. ಹ. ದೇಶಪಾಂಡೆ ಅವರು ತಮ್ಮ ಶಿವಾಜಿ ಮಹಾರಾಜನ ಚರಿತ್ರೆಯ ಮುನ್ನುಡಿಯಲ್ಲಿ ಹೇಳಿರುವರು. ಇನ್ನು ಕ್ರಿ. ಶ. ೨ನೆಯ ಶತಮಾನದಲ್ಲಿ ರಚಿತವಾದ ಗ್ರೀಕ ಜನರ ನಾಟಕ ಒಂದರಲ್ಲಿ ಕನ್ನಡ ಶಬ್ದಗಳು, ವಿದೂಷಕನ ಬಾಯಿಯಲ್ಲಿದ್ದರೆ, ಅದೇನು ಆಶ್ಚರ್ಯಕರವಾದ ಮಾತಲ್ಲ; ಇರಲಿ, ಈ ವಿಷಯವನ್ನೇ ಕರ್ನಾಟಕ ಕವಿಚರಿತೆಯಲ್ಲಿ ಪ್ರಾಕ್ತನವಿಮರ್ಶ ವಿಚಕ್ಷಣರಾದ ಆರ್. ನರಸಿಂಹಾಚಾರ್ಯರು ಪ್ರಸಿದ್ಧಿಸಿರುವರೆಂಬದು ಎಲ್ಲರಿಗೂ ಗೊತ್ತಿರಬಹುದು. ಸಾಧಾರಣವಾಗಿ ಕನ್ನಡ ವಾಙ್ಮಯದ ಬೆಳವಣಿಗೆಯು ೧೩ನೆಯ ಶತಮಾನದಿಂದೀಚಿಗೆ ಹೆಚ್ಚಾಗುತ್ತ ಬಂದಿದೆ ಎಂದು ಇತಿಹಾಸದಿಂದ ತಿಳಿದುಬಂದಿದೆ. ಕನ್ನಡ ವಾಙ್ಮಯದ ಅಭಿವೃದ್ಧಿಗಾಗಿ ಯತ್ನಿಸಲು ಜೈನರು ಮೊದಲು ಮಾಡಿದರು. ಅವರಲ್ಲನೇಕರು ಉತ್ತಮೋತ್ತಮವಾದ ಕಾವ್ಯಗಳನ್ನೂ ನಾಟಕಗಳನ್ನೂ ಹಾಗೂ ಇನ್ನೂ ಬೇರೆ ವಿಷಯಗಳನ್ನು ಚರ್ಚಿಸುವ ಗ್ರಂಥಗಳನ್ನು ಬರೆದರು. ಕವಿರಾಜಮಾರ್ಗವೆಂಬ ಛಂದಶ್ಶಾಸ್ತ್ರದ ವಿಚಾರವನ್ನೊಳಗೊಂಡ ಗ್ರಂಥವನ್ನು ನೃಪತುಂಗನು ಬರೆದನು. ಹಾಗೆಯೇ ಕನ್ನಡ ಭಾಷೆಗೆ ಕಾವ್ಯಾವಲೋಕನವೆಂಬ ವ್ಯಾಕರಣ ಗ್ರಂಥವನ್ನಾದರೂ ಜೈನಕವಿಯಾದ ನಾಗವರ್ಮನೇ ಬರೆದನು.

ಈ ತೆರನಾಗಿ ಜೈನರು ಮಾಡಿದ ಕನ್ನಡನುಡಿಯ ಸೇವೆಯನ್ನೇ ಮುಂದೆ ವೀರಶೈವ ಕವಿಗಳು ಕೈಕೊಂಡರು. ಅವರು ವೀರಶೈವ ಧರ್ಮದ ತತ್ವಗಳನ್ನು

ವಿವರಿಸುವ ಅನೇಕ ವಚನಗ್ರಂಥಗಳನ್ನೂ ಗದ್ಯಗ್ರಂಥಗಳನ್ನೂ ಅಚ್ಚ ಕನ್ನಡದಲ್ಲಿ ಬರೆದರು. ಪ್ರಪಂಚದ ಯಾವತ್ತೂ ವಿಷಯದ ಬಗ್ಯೆ ಜ್ಞಾನವಾಡಿಕೊಡುವ ತ್ರಿಪದಿಗಳಿಂದ ಕೂಡಿದ ದೊಡ್ಡ ಗ್ರಂಥ ಒಂದನ್ನು ಒದಗಿಸಿಕೊಟ್ಟ ಕೀರ್ತಿಯು ವೀರಶೈವ ಕವಿಗಳಲ್ಲಿ ಮುಕುಟಸುಣಿಯಂತೊಪ್ಪುವ ಸರ್ವಜ್ಞನಿಗೆ ಮಾತ್ರ ಸಲ್ಲುವದು. ಅವನ ಶೈಲಿಯು ಸರಳವಾಗಿದ್ದು ಗಾಂಭೀರ್ಯದಿಂದ ಕೂಡಿದ್ದಾಗಿದೆ. ಅದೇ ಪ್ರಕಾರವಾಗಿ ಕೇವಲ ಧರ್ಮತತ್ವಗಳನ್ನು ಪ್ರತಿಪಾದಿಸುವ ವಚನಗ್ರಂಥಗಳನ್ನು ಅಚ್ಚಗನ್ನಡದ ಮನೆಮಾತುಗಳಲ್ಲಿ ಬರೆದಿದ್ದರ ಶ್ರೇಯವು ಬಸವಣ್ಣನವರದಾಗಿದೆ. ಷಡಕ್ಷರಿ ಮುಂತಾಗಿ ಬೇರೆ ಕವಿಗಳು ಎಷ್ಟೋ ಉತ್ತಮವಾದ ಕಾವ್ಯಗಳನ್ನು ಬರೆದಿರುವರು. ಈ ವೀರಶೈವ ಕವಿಗಳ ಕಾಲವು ೧೫ನೆಯ ಶತಮಾನದ್ದು.

ಆ ಮುಂದೆ ಕನ್ನಡ ನುಡಿಯ ಸೇವೆಯನ್ನು ಬಹಳ ಒಳ್ಳೇ ರೀತಿಯಿಂದ ಮಾಡಿದವರೆಂದರೆ ಬ್ರಾಹ್ಮಣರಾದ ವೈಷ್ಣವ ಕವಿಗಳು. ಇವರಿಗೆ ಕವಿಗಳೆನ್ನುವದಕ್ಕಿಂತ ದಾಸರೆನ್ನುವ ಪರಿಪಾಠವೇ ಹೆಚ್ಚಾಗಿದೆ. ಇವರು ವೇದಾರ್ಥವನ್ನು ಪ್ರತಿಪಾದಿಸುವ ಹಾಗು ಶ್ರುತಿ ಸ್ಮೃತ್ಯಾದಿಗಳ ಸಾರವನ್ನು ಹೇಳುವ ಅನೇಕ ಪದ್ಯಗಳನ್ನು ತಿಳಿಗನ್ನಡದಲ್ಲಿ ರಚಿಸಿ, ಕನ್ನಡ ಸಾಹಿತ್ಯಕ್ಕೆ ಬಹಳವಾಗಿ ಸಹಾಯಮಾಡಿರುವರು. ವೇದಾಂತದಂತಹ ಆಧ್ಯಾತ್ಮಿಕ ವಿಚಾರವನ್ನು ಸಂಸ್ಕೃತದಿಂದ ಕನ್ನಡಕ್ಕೆ ಪರಿವರ್ತಿಸುವ ದೊಡ್ಡ ಸಾಹಸವನ್ನು ಯಾವ ಕನ್ನಡ-ಕವಿಗಳೂ ಆ ವರೆಗೆ ಕೈಕೊಂಡಿರಲಿಲ್ಲ; ಅದಕ್ಕಾಗಿ ಇಂತಹ ಮಹತ್ತರವಾದ ಕಾರ್ಯವನ್ನು ಮಾಡಿ, ತನ್ಮೂಲಕ ಕನ್ನಡ ಸಾಹಿತ್ಯಾಭಿವೃದ್ಧಿಗೊಳಿಸಿದ ದಾಸಾರ್ಯರಿಗೆ ಕನ್ನಡಿಗರಾದ ನಾವು ಎಷ್ಟು ಉಪಕೃತರಾಗಿರುವೆವೆಂಬದನ್ನು ಶಬ್ದಗಳಿಂದ ಹೇಳಲು ಸಾಧ್ಯವಿಲ್ಲ;

ಇರಲಿ, ಇನ್ನು ಹರಿದಾಸರು ಯಾರು ? ಅವರು ಮಾಡಿದ ಮಹತ್ಕಾರ್ಯವು ಆವುದು ? ಎಂಬೀ ವಿಷಯದ ಬಗ್ಯೆ ವಿಚಾರಮಾಡುವಾ ?

ಜಗನ್ನಿಯಂತನ ಈ ಅನಂತ ಸೃಷ್ಟಿಯಲ್ಲಿ ಮಾನವ ಜನ್ಮವು ದೊರೆಯುವದು ಅತ್ಯಂತ ದುರ್ಲಭ. ಒಂದು ವೇಳೆ ಸುದೈವದಿಂದ ದೊರೆತಲ್ಲಿ ತನ್ನನ್ನು ಪುಟ್ಟಿಸಿ, ಸಾಕಿ ಸಲಹುವಂಥ ಜಗದೊಡೆಯನ ಸೇವೆಗೈದು ಆತನ ಕೃಪಾಪ್ರಸಾದವನ್ನು ಸಂಪಾದಿಸುವದು, ಪ್ರತಿಯೊಬ್ಬ ಮಾನವನ ಕರ್ತವ್ಯವಾಗಿದೆ. ಪ್ರಪಂಚದಲ್ಲಿ ಮಾನವನು ಜನ್ಮವೆನ್ನೆತ್ತಿ ಬಂದಬಳಿಕ ಆತನು ಸ್ವಸುಖಕ್ಕಾಗಿ ಹೆಣಗುವದು ಸಹಜ; ಆದ್ದರಿಂದ ಅಂತಹ ಸುಖದ ಪ್ರಾಪ್ತಿಗಾಗಿ ಬೇಕಾಗುವ ವಿದ್ಯಾರ್ಜನೆಯು ಕಾರ್ಯಕ್ಕೆ ಅವನು ಮೊದಲು ಮಾಡುವನು; ಬಳಿಕ ನೌಕರಿ-ಚಾಕರಿಗಳಲ್ಲಿಯೋ, ಉದ್ಯೋಗ ವ್ಯವಹಾರಗಳಲ್ಲಿಯೋ, ತೊಡಗಿ, ಧನಾರ್ಜನೆಯ ಸಾಧನವನ್ನು ಕಲ್ಪಿಸಿಕೊಳ್ಳುವನು,

ಮುಂದೆ ಅದೇ ಧನದಿಂದ ಪ್ರಪಂಚದಲ್ಲಿಯ ಅನೇಕ ಪ್ರಕಾರದ ಸುಖಸೌಖ್ಯಾದಿಗಳನ್ನು ಹೊಂದಿ, ಆನಂದದಿಂದ ಕಾಲಕಳೆಯುವನು; ಆದರೆ ಈ ತೆರನಾಗಿ ಆಯುಷ್ಯವನ್ನು ಕಳೆದು ಒಂದುದಿನ ಬಿದ್ದುಹೋದರೆ, ಮಾನವಜನ್ಮದ ಇತಿಕರ್ತವ್ಯವಾಯಿತೆಂದು ತಿಳಿಯುವದು ಎಷ್ಟುಮಾತ್ರವೂ ಸರಿಯಾದುದಲ್ಲ; ಪ್ರಪಂಚದಲ್ಲಿ ಜನಿಸಿ ಬಂದಬಳಿಕ ಜೀವನೋಪಾಯಕ್ಕಾಗಿ, ಬೇಕಾಗುವ ಸಾಧನಗಳನ್ನು ದೊರಕಿಸಿಕೊಳ್ಳುವದಕ್ಕೆ ಯತ್ನಿಸುವದು ಸರಿಯೇ; ಆದರೆ ಅಂತಹ ಜೀವನೋಪಾಯವು ದೊರೆತ ಬಳಿಕಲಾದರೂ ಕೈಲಾದಮಟ್ಟಿಗೆ ಆಧ್ಯಾತ್ಮಿಕ ವಿಚಾರವನ್ನು ಮಾಡಿಯೇ ತೀರುವದಾದರೂ ಮಾನವನದೊಂದು ಕರ್ತವ್ಯವೇ ಆಗಿದೆ. ಅದರಲ್ಲಿಯೇ ಮಾನವ ಜನ್ಮದ ಸಾಫಲ್ಯವಿದೆ. ಜಗತ್ತಿನಲ್ಲಿ ಜನ್ಮವೆತ್ತಿದ ಪ್ರತಿಯೊಬ್ಬ ಮಾನವನು ತಿಳುವಳಿಕೆಯನ್ನು ಪಡೆದಬಳಿಕ ತಾನು (ಜೀವಾತ್ಮ) ಯಾರು ? ಹಾಗೂ ತನ್ನನ್ನು ಪುಟ್ಟಿಸಿ ಸಾಕಿ ಸಲಹುವ, ಮತ್ತು ಇಡೀ ಜಗತ್ತಿನ ಭಾರವನ್ನು ವಹಿಸಿದ ದೇವರು (ಪರಮಾತ್ಮನು) ಆರು ? ಎಂಬೀ ವಿಷಯವಾಗಿ ವಿಚಾರಮಾಡಲೇಬೇಕು. ಅದರಲ್ಲಿಯೇ ಅವನ ಕಲ್ಯಾಣವಿದೆ. ಈ ಜೀವಪರಗಳ ವಿಚಾರವೇ ಆಧ್ಯಾತ್ಮಿಕ ವಿಚಾರವು. ಜೀವನು ತನ್ನಲ್ಲಿರುವ ಬುದ್ಧಿಶಕ್ತಿಯಿಂದ ಪರಮಾತ್ಮನ ಸಾನ್ನಿಧ್ಯವನ್ನು ಪಡೆಯಲು ಯತ್ನಿಸುವದು, ಅವನ ಸಹಜ ಗುಣವಾಗಿದೆ. ಯಾಕಂದರೆ ಪರಮಾತ್ಮನ ಬಳಿಯಲ್ಲಿ ಅನುಪಮೇಯವಾದ ಆನಂದವು ನಿತ್ಯದಲ್ಲಿಯೂ ದೊರೆಯುವದು ನಿಶ್ಚಯ. ಈ ಆಧ್ಯಾತ್ಮಿಕ ವಿಚಾರವನ್ನು ತಿಳಿದುಕೊಳ್ಳುವ ಮಾರ್ಗಗಳು ಮುಖ್ಯವಾಗಿ ಎರಡು ಅವೆ. ಮೊದಲನೆಯದು ಜ್ಞಾನ, ಎರಡನೆಯದು ಭಕ್ತಿ. ಪರಮಾತ್ಮನ ವಿಷಯಕವಾದ ಜ್ಞಾನ ಸಂಪಾದನೆಗೆ ಆತನ ಗುಣಗಳನ್ನು ವರ್ಣಿಸುವ, ವೇದಾದಿ ಗ್ರಂಥಗಳನ್ನೂ ಮತ್ತು ಆತನ ಕೃಪೆಯಿಂದ ಮುಕ್ತಿಯನ್ನು ಪಡೆದ ಉದಾಹರಣೆಗಳನ್ನು ವಿವರಿಸುವ ಪುರಾಣಗಳನ್ನೂ ಓದುವದವಶ್ಯವು. ಆದರೆ ಈ ಎಲ್ಲ ಗ್ರಂಥಗಳು ಸಂಸ್ಕೃತ ಭಾಷೆಯಲ್ಲಿರುವವರಿಂದ ಅವೆಲ್ಲವುಗಳನ್ನು ಓದುವದು ಜನಸಾಮಾನ್ಯರನೇಕರಿಗೆ ಸಾಧ್ಯವಿಲ್ಲ; ಅವನ್ನೋದುವದಕ್ಕೆ ಬೇಕಾಗುವಷ್ಟು ಪಾಂಡಿತ್ಯವೂ ಸಾಕಷ್ಟು ಆಯುವೂ ಕೂಡ ನಮಗೆ ದೊರೆತಿಲ್ಲ; ಅಂದಬಳಿಕ ಸಾಮಾನ್ಯರಾದ ನಾವು ಆಧ್ಯಾತ್ಮಿಕ ವಿಚಾರವನ್ನು ತಿಳಿಯುವ ಬಗೆಯೆಂತು ? ಈ ಅಸಾಧ್ಯವಾದ ಸಂಕಟದಿಂದ ಮಾನವ ಕೋಟಿಯನ್ನು ಉದ್ಧಾರಮಾಡುವದಕ್ಕೆ ನಮ್ಮ ಲೇಖನದ ನಾಯಕರಾದ ದಾಸಾರ್ಯರು ಜನ್ಮವೆತ್ತಿದರು.

ಅವರು ಜನಗಳಿಗೆ ಪರಮಾತ್ಮನ ಸಾಧನೆಗಾಗಿ ಭಕ್ತಿಮಾರ್ಗವನ್ನವಲಂಬಿಸಲು ಉಪದೇಶಿಸಿದರು. ಕಲಿಯುಗದಲ್ಲಿ ಹೊಟ್ಟೆಯಪಾಡಿಗಾಗಿ ಹಗಲಿರುಳು ದುಡಿದು

ಮಡಿದು, ಅನೇಕ ಪ್ರಕಾರದ ಪಾಪಕೃತಿಗಳನ್ನಾಚರಿಸಿ, ಜನನ ಮರಣ ಚಕ್ರದಲ್ಲಿ ಸುತ್ತಿ ಮತ್ತೆ ತಿಲುಕಿ ಬಳಲುವ ಜನಗಳಿಗೆ ಇದೊಂದೇ ಮಾರ್ಗವು ಸುಲಭಸಾಧ್ಯ ವಾದುದೆಂಬ ಸಂಗತಿಯನ್ನು ಕಂಡುಹಿಡಿದರು. ಅದಕ್ಕಾಗಿಯೇ ದಾಸರು ದೇವರ ನಾಮಸ್ಮರಣೆಯನ್ನೊಳಗೊಂಡ ಅನೇಕ ಕೀರ್ತನೆ, ಸುಳಾದಿ ಮುಂತಾದವುಗಳನ್ನು ತಳಿಗನ್ನಡದಲ್ಲಿ ರಚಿಸಿ, ನಮ್ಮಮೇಲೆ ಅತ್ಯಂತ ಉಪಕಾರಮಾಡಿರುವರು. ಈ ಪ್ರಕಾರವಾಗಿ, ಪರಮಾತ್ಮನ ವಿಷಯಕ್ಕೆ ವಿಚಾರಮಾಡಲು, ಸಾಧನವಾದ ಕೇವಲ ಜ್ಞಾನಮಾರ್ಗಾವಲಂಬಿಗಳಿಗೆ ವ್ಯಾಸಕೂಟದ ಜನಗಳೆಂತಲೂ ಮತ್ತು ಕೇವಲ ಭಕ್ತಿ ಮಾರ್ಗಾವಲಂಬಿಗಳಿಗೆ ದಾಸಕೂಟದ ಜನಗಳೆಂತಲೂ ಕರೆಯುವ ಪರಿಪಾಠವು ಪ್ರಚಾರದಲ್ಲಿ ಬಂತು. ಐತಿಹಾಸಿಕ ದೃಷ್ಟಿಯಿಂದ ವಿಚಾರಮಾಡಿದರೆ, ಈ ದಾಸ ಕೂಟದ ಕಲ್ಪನೆಯು ಅಥವಾ ಭಕ್ತಿಪಂಥದ ತತ್ವವು ದ್ವೈತಮತ ಸ್ಥಾಪಕರಾದ ಮಧ್ವಾಚಾರ್ಯರ ತರುವಾಯ ಪೀಠಕ್ಕೆ ಬಂದವರಲ್ಲಿ ಎರಡನೆಯವರಾದ ನರಹರಿ ತೀರ್ಥರ ಕೌಶಲದಿಂದ ರೂಢವಾಯಿತು. ತತ್ಪೂರ್ವದಲ್ಲಿ ಮಾತ್ರ ಜ್ಞಾನವೇ ಪರ ನಿಚಾರಕ್ಕೆ ಸಾಧನವಾಗಿತ್ತೆಂದು ಹೇಳಬಹುದು.

ಅಂದಬಳಿಕ ನರಹರಿ ತೀರ್ಥರೇ ದಾಸಕೂಟದ ಉತ್ಪಾದಕರೆನ್ನಲು ಅಡ್ಡಿಯಿಲ್ಲ; ಇನ್ನು ದ್ವೈತ ಮತದಲ್ಲಿ ಹರಿಯೇ ಪರದೈವವೆಂದು ತಿಳಿಯಲ್ಪಟ್ಟಿರುವದರಿಂದ ಭಕ್ತಿ ಮಾರ್ಗವಾಗಿ ಶ್ರೀಹರಿಯನ್ನಾರಾಧಿಸಲು, ಬೊಂಕಕಟ್ಟಿದ ಜನಗಳಿಗೆ "ಹರಿಯದಾಸ" ಅಥವಾ "ಹರಿದಾಸ" ಎಂಬ ಹೆಸರು ಬಂದಿದೆ.

ಈ ದಾಸರು ಮುಕುತಿ ಮಾರ್ಗದ ಅನೇಕ ಸಾಧನಗಳಲ್ಲಿ ಅತಿ ಸರಲವಾದ ಹಾಗು ಸುಗಮವಾದ ಮಾರ್ಗವೆಂದರೆ ಭಗವನ್ನಾಮಸ್ಮರಣೆ ಎಂಬುದನ್ನೇ ಸಾರಿ ಹೇಳಿರುವರು. ಈ ಭಕ್ತಿಯೋಗ ಸಾಧನೆಗೆ ಬಾಹ್ಯ ಉಪಕರಣಗಳ ಅವಶ್ಯಕತೆ ಯಿಲ್ಲ; ಅಥವಾ ಮಾನವನಿಗೆ ಜೀವಿತದಲ್ಲುಂಟಾಗುವ ಬೇರೆ ಬೇರೆ ತರಹದ ಪರಿಸ್ಥಿತಿಗಳು ಈ ಸಾಧನಕ್ಕೆ ತಡೆಹಾಕವು. ದಾಸಾರ್ಯರು ಉಪದೇಶಿಸಿದ ಈ ಸಾಧನೆಗೆ ಆವ ದೇಶಕಾಲಗಳು ಮಡಿಮೈಲಿಗೆಗಳ ಶುಷ್ಕವಾದ ವಿಚಾರಗಳೂ ಸೋಂಕವು. ಮಾನವನು ತಾನು ನಿತ್ಯಶಃ ಮನೋವಾಕ್ಕಾಯಗಳಿಂದ ಮಾಡುವ ಯಾವತ್ತು ಕಾರ್ಯಗಳು ಶ್ರೀಹರಿಯ ಪ್ರೇರಣೆಯಿಂದಲೇ ನಡೆವು ಹೋಗಿವೆ ಎಂದು ಅವೆಲ್ಲ ವನ್ನು ನಿರ್ಮಲ ಮನಸ್ಸಿನಿಂದ ಪರಮಾತ್ಮನ ಚರಣದಲ್ಲಿ ಅರ್ಪಿಸಿ, ನಾಮಸ್ಮರಣೆ ರೂಪವಾದ ಒಂದೇ ಒಂದು ಮಂತ್ರವನ್ನು ಪಠಿಸುವತೆ ಸಾಕು; ಅಂತಹರಿಗೆ ಕ್ಷಿಪ್ರ ದಲ್ಲಿಯೇ ಭಗವತ್ ಸಾನ್ನಿಧ್ಯವು ಬೊರೆಯುವದು, ಎಂಬುದಾಗಿ ಹೇಳುವುದೇ ನಮ್ಮ ದಾಸಜನಗಳು ಉಪದೇಶಿಸಿದ ಭಕ್ತಿಮಾರ್ಗದ ತಿರುಳು. ಇದೇ ಅಭಿಪ್ರಾಯವನ್ನು

ಭಗವಾನ್ ಶ್ರೀಕೃಷ್ಣನು ಭಾಗವತದ ೧೧ನೇ ಸ್ಕಂದದಲ್ಲಿ ಸ್ಪಷ್ಟವಾಗಿ ಹೇಳಿರುವ ದನ್ನು ನೋಡಿರಿ; "ಕರ್ಮ, ತಪ, ಜ್ಞಾನ, ವೈರಾಗ್ಯ, ಯೋಗ, ದಾನ, ಧರ್ಮ ಇನ್ನೂ ಬೇರೆ ಸಾಧನಗಳಿಂದ ದೊರೆಯುವ ಫಲವು ಭಕ್ತಿಯೋಗದಿಂದ ಮಾತ್ರ ಅತಿ ಸುಲಭವಾಗಿ ದೊರೆಯುವದು."

ಈ ತೆರನಾಗಿ ಜಗತ್ತಿನ ಕಲ್ಯಾಣಕ್ಕಾಗಿಯೂ ಮಾನವ ಪ್ರಾಣಿಗಳ ಉದ್ಧಾರ ಕ್ಕಾಗಿಯೂ, ಸ್ವತಃ ತ್ಯಾಗಿಗಳಾಗಿ ಪರಮಾತ್ಮನ ವಿಷಯಕವಾದ ಜ್ಞಾನವನ್ನು ಪ್ರಸಾರಮಾಡುವ ಕಾರ್ಯವನ್ನು ಒಳ್ಳೇ ಮನಃಪೂರ್ವಕವಾಗಿ ದಾಸಾರ್ಯರು ಮಾಡಿರುವರು. ಈ ದಾಸಜನಗಳು ಬೋಧಿಸಿದ ಭಕ್ತಿಪಂಥದ ತತ್ವಕ್ಕೆ ಮಹತ್ವ ವನ್ನು ಕೊಟ್ಟವರು ಶ್ರೀ ನರಹರಿತೀರ್ಥರೆಂದು ಈ ಮೊದಲೇ ಹೇಳಿಯಾಯಿತು.

ಶ್ರೀಪಾದರಾಯರು

ಆ ಬಳಿಕ ನರಹರಿತೀರ್ಥರು ಪ್ರಾರಂಭಿಸಿದ ಕಾರ್ಯವನ್ನೇ ಅವರ ಶಿಷ್ಯರಾದ ಶ್ರೀಪಾದರಾಯರು ಕೊಂಡರು. ಇವರು ಕನ್ನಡದಲ್ಲಿ ಅನೇಕ ಪದ್ಯಗಳನ್ನು ರಚಿಸಿ ಹಾಡಿರುವರು. ಇವರ ಪದ್ಯಗಳಲ್ಲಿನ ಭಾಷಾಸರಣಿಯು ಬಹಳೇ ಸರಸವಾಗಿದೆ. ಶೈಲಿಯು ಸುನೋಹರವಾಗಿದೆ. ಆದ್ದರಿಂದ ಪದ್ಯಗಳು ಹಾಡುಗರಿಗೆ ಒಳ್ಳೇ ಇಂಪಾ ಗಿವೆ. ಸಾಹಿತ್ಯದ ದೃಷ್ಟಿಯಿಂದ ವಿಚಾರಮಾಡುವದಾದರೆ ಇವರ ಪದ್ಯಗಳಲ್ಲಿ ನಾವು ಉತ್ತಮವಾದ ಕಾವ್ಯವನ್ನು ಕಾಣಬಹುದು.

ವ್ಯಾಸರಾಯರು

ವ್ಯಾಸರಾಯರು ವ್ಯಾಸರಾಯ ಮಠದ ಸ್ಥಾಪಕರು. ಮಹಾಜ್ಞಾನಿಗಳು. ಇವರು ಭಕ್ತಿಪಂಥದ ತತ್ವಕ್ಕೆ ಬಹಳವಾಗಿ ಚಾಲನೆಕೊಟ್ಟರು. ವಿಜಯನಗರದ ಸಾಮ್ರಾಜ್ಯದಲ್ಲಿ ಆಳಿದ ನರಸ, ವೀರನರಸಿಂಹ, ಕೃಷ್ಣರಾಯ ಈ ಮೂವರು ಅರ ಸರು ವ್ಯಾಸರಾಯರನ್ನು ತಮ್ಮ ಗುರುಗಳಂತೆ ಮನ್ನಿಸುತ್ತಿದ್ದರು. ಭಕ್ತಿಯೋಗದ ತತ್ವವನ್ನೇ ಮುಂದಿರಿಸಿಕೊಂಡು ವೈಷ್ಣವ ಮತವನ್ನು ಉತ್ತರದಲ್ಲಿ ಪ್ರಸಾರಮಾಡಿದ ಚೈತನ್ಯರು ಇವರಿಂದಲೇ ಸನ್ಯಾಸವನ್ನು ಸ್ವೀಕರಿಸಿದರು. ವ್ಯಾಸರಾಯರು ಭಗವ ನ್ನಾಮದ ಮಹತಿಯನ್ನು ಹೇಳುವ ಅನೇಕ ಕೀರ್ತನೆಗಳನ್ನು ಕನ್ನಡದಲ್ಲಿ ರಚಿಸಿರು ವರು. ಅವುಗಳ ಭಾಷೆಯು ಅತಿ ಸರಲವಾಗಿದೆ. ಕೀರ್ತನೆಗಳು ಛಂದ ಶ್ಶಾಸ್ತ್ರದ ನಿಯಮಗಳಿಂದ ಬದ್ಧವಾಗಿವೆ. ಆದ್ದರಿಂದ ಅವು ಕವಿತ್ವದ ದೃಷ್ಟಿಯಿಂದ ಮೇಲಾದವೆನ್ನಲಿಕ್ಕೆ ಅಡ್ಡಿಯಿಲ್ಲ;

ಪುರಂದರದಾಸರು

ವ್ಯಾಸರಾಯರ ತರುವಾಯ ಅವರ ಕಾರ್ಯವನ್ನು ಮುಂದುವರಿಸಿ, ಒಳ್ಳೇ ಪ್ರಸಿದ್ಧಿಯನ್ನು ಪಡೆದವರು ಮೂವರಾಗಿದ್ದುವರು. ಪುರಂದರದಾಸರು, ಕನಕದಾಸರು, ವಾದಿರಾಜರು. ಇವರಲ್ಲಿ ಮೊದಲನೆಯವರಾದ ಪುರಂದರದಾಸರು ಅಗ್ರಗಣ್ಯರೆಂದು ಹೇಳಲು ಆವ ಸಂದೇಹವಿಲ್ಲ; ಇವರು ಹದಿನಾರನೆಯ ಶತಮಾನದಲ್ಲಿ ಆಗಿಹೋದರು. ಭಕ್ತಿಮಾರ್ಗವನ್ನುಪದೇಶಿಸುವ, ಲಕ್ಷಾವಧಿ ಕೀರ್ತನೆಗಳನ್ನು ಸುಲಭವಾದ ಕನ್ನಡ ನುಡಿಯಲ್ಲಿ ರಚಿಸಿ ಸಾಮಾನ್ಯ ಜನಜೀವನದಲ್ಲಿ ಬೆರೆತು ಭಗವತ್‌ಕೃಪಾ ಸಂಪಾದನೆಯ ದಾರಿಯನ್ನು ತೋರಿಸಿಕೊಟ್ಟರು. ಇವರು ರಚಿಸಿದ ಕೀರ್ತನೆಗಳಲ್ಲಿ ಉತ್ತಮವಾದ ಕಾವ್ಯವನ್ನೂ ನೀತಿಯನ್ನೂ ಕಾಣಬಹುದಾಗಿದೆ. ಇವರ ಮಧುರವಾದ ಪದ್ಯಶೈಲಿಯನ್ನೂ ಪ್ರಾಸಪದ್ಧತಿಯನ್ನೂ ಸುಲಲಿತವಾದ ಶಬ್ದಯೋಜನೆಯನ್ನೂ ಉಳಿದವರ ಗ್ರಂಥಗಳಲ್ಲಿ ಕಾಣುವದು ವಿರಳ. ತಮಗೆ ಬೇಕಾದ ವಿಷಯವನ್ನು ಜನರ ಮನಸ್ಸಿನಲ್ಲಿ ನಡುವಂತೆ ಬಣ್ಣಿಸುವ ಇವರ ಶೈಲಿಯಾದರೂ ಆ ಕಾಲದ ಉಳಿದ ಕನ್ನಡ ಕವಿಗಳನ್ನು ಹಿಮ್ಮೆಟ್ಟಿಸುವಂತಹದಿದೆ. ಆದ್ದರಿಂದ ದಾಸಾರ್ಯರು ರಚಿಸಿದ ಕೆಲವು ಪದ್ಯಾಂಶಗಳನ್ನು ಕೊಡುವದು ಉಚಿತವಾಗಿ ಕಂಡ ದ್ದರಿಂದ ಇಲ್ಲಿ ಕೊಟ್ಟಿರುವೆವು.

ಶ್ರೀಕೃಷ್ಣನನ್ನು ವರ್ಣಿಸುವ "ಕೃಷ್ಣಮೂರ್ತಿ ಕಣ್ಣಮುಂದೆ" "ಓದಿಬಾರೈ ವೈಕುಂಠ ಪತಿನಿನ್ನ" "ಬಂದು ನಿಂದಿಹನೋಡಿ" "ರಾಮಮಂತ್ರವ ಜಪಿಸೋ" ಎಂಬೀ ಪದ್ಯಗಳಲ್ಲಿ ಉತ್ತಮವಾದ ಕಾವ್ಯವೂ, ಶ್ರೇಷ್ಠವಾದ ಪದಲಾಲಿತ್ಯವೂ, ಅರ್ಥ ಗಾಂಭೀರ್ಯವೂ ಉಂಟು.

"ವಿಷಯದ ವಿಚಾರಬಿಡು" "ಅಹುದಾದರಹುದೆನ್ನಿ ಅಲವಾದರಲನೆನ್ನಿ" "ಬಲ್ಲವನೆ ನೀನೆಂದು ಬಡವರ ಬಾಯನು ಹೊಯ್ಯಬೇಡೆಚ್ಚರಿಕೆ" ಎಂಬ ಅವರ ಪದ್ಯಗಳಿಂದ ಉಚ್ಚತರವಾದ ನೀತಿಗಳನ್ನು ಕಲಿಯುವಂತಿದೆ.

"ಈಸಬೇಕೊ ಇದ್ದು ಜೈಸಬೇಕು" ಈ ಅವರ ಪದ್ಯದಲ್ಲಿ "ತಾಮರಸ ಜಲದಂತೆ ಪ್ರೇಮವಿಟ್ಟು ಜಲದೊಳು" ಎಂಬ ಪ್ರಪಂಚದಲ್ಲಿ ಇರಬೇಕಾದ ಬಗೆಯನ್ನು ಹೇಳುವ ಅವರ ಉಕ್ತಿಯು ವೇದಾಂತ ತತ್ವಗಳ ತಿರುಳನ್ನು ಮಥಿಸಿ ತೆಗೆದ ಸಾರವೇ ಆಗಿದೆಯೆಂದರೆ ತಪ್ಪಾಗಲಿಕ್ಕಿಲ್ಲ;

"ಹರಿಹರ ನಿಮ್ಮನ್ನೊಲಿಸಲುಬಹುದು" "ರೊಕ್ಕಾವೆರಡಕ್ಕೆ ದುಃಖ" ಎಂಬ ಅವರ ಪದ್ಯಗಳಿಂದ ಪುರಂದರದಾಸರು ಎಷ್ಟುಮಟ್ಟಿಗೆ ಜನಜೀವನದಲ್ಲಿ ಬೆರೆತು

ಹೋಗಿದ್ದರೆಂಬದೂ ವ್ಯವಹಾರ ಚತುರರಾಗಿದ್ದರೆಂಬುದೂ ಸ್ಪಷ್ಟವಾಗಿ ಕಂಡು ಬರುತ್ತದೆ.

ದಾಸರು ವೇದಾಂತ ಮೂರ್ಗಿಗಳಾಗಿದ್ದರೂ, ಲೌಕಿಕವನ್ನು ತಿಳಿಯಲು ಸಾಧ್ಯ ವಿದೆಯೆಂಬ ಮಾತನ್ನು ತಮ್ಮ ಚರಿತ್ರೆಯಿಂದ ಜಗತ್ತಿಗೆ ತೋರಿಸಿ ಕೊಟ್ಟಿರುವರು.

" ವಿಷವನುಣಿಸಿದವರಿಗೆ ಷಡುರಸವ ನುಣಿಸಲುಬೇಕು " ಎಂಬ ಅವರ ಉಕ್ತಿ ಯಿಂದ ದಾಸರು ಎಂತಹ ತಪಸ್ವಿಗಳೂ, ಶಾಂತ ಜೀವಿಗಳೂ ಆಗಿದ್ದರೆಂಬುವದು ತಿಳಿಯುವಂತಿದೆ.

" ಅಪಮಾನವಾದರೆ ಒಳಿತು " ಎಂಬ ಅವರ ಪದ್ಯದಿಂದ ಮಹಾತ್ಮಾ ಗಾಂಧಿ ಜಿಯವರ ತತ್ವದ ತಿರುಳನ್ನೇ ಆ ಕಾಲದಲ್ಲಿ ದಾಸರು ಪ್ರಚುರಗೊಳಿಸಿರುವರು. ಪ್ರಪಂಚದಲ್ಲಿ ಮಾನವನಿಗೆ ಅಪಮಾನದಿಂದ ತತ್ಕಾಲಕ್ಕೆ ಸೌಖ್ಯವಾಗದಿದ್ದರೂ, ಬರುವಕಾಲದಲ್ಲಿ ಅದಕ್ಕೆ ಯೋಗ್ಯಪ್ರತಿಫಲವು ದೊರೆತಿರುವ ಅನೇಕ ಉದಾಹರಣೆ ಗಳನ್ನು ಪುರಾಣಕಾಲದಲ್ಲಿಯೂ, ಇತಿಹಾಸಕಾಲದಲ್ಲಿಯೂ ಕಾಣಬಹುದು. ಪುರಾಣ ಕಾಲದಲ್ಲಿ ಉತ್ತಾನಪಾದರಾಜನ ಪುತ್ರನಾದ ಧ್ರುವರಾಯನಿಗಾಗಲಿ, ಅಥವಾ ಇತಿ ಹಾಸಕಾಲದಲ್ಲಿ (೧೫ನೆಯ ಶತಮಾನದಲ್ಲಿ) ಮುಸಲ್ಮಾನರಿಂದ ಕೆಚ್ಚೆದೆಯ ಕನ್ನಡಿ ಗರಿಗಾಗಲಿ ಅಪಮಾನವಾದುದಕ್ಕಾಗಿಯೇ ಮುಂದೆ ಉತ್ತಮವಾದ ಫಲವು ದೊರೆ ಯಿತು. ಧ್ರುವರಾಯನಿಗೆ ಪರಮಪದವು ಪ್ರಾಪ್ತಿಯಾಯಿತು. ಕನ್ನಡಿಗರಿಗೆ ಧರ್ಮಸಾಮ್ರಾಜ್ಯವನ್ನು ಸ್ಥಾಪಿಸಲು ಅವಕಾಶ ಉಂಟಾಯಿತು.

" ಲೊಳಲೊಟ್ಟೆ ಯಲ್ಲಾ ಲೊಳವಟ್ಟೆ " ಎಂಬ ಅವರ ಪದ್ಯವು ಪ್ರಪಂಚದ ನಿಸ್ಸಾರತೆಯನ್ನು ಒಳ್ಳೇ ಚನ್ನಾಗಿ ವ್ಯಕ್ತಪಡಿಸುತ್ತದೆ.

" ಹೊಲೆಯ ಹೊರಗಿಹನೆ ಊರೊಳಗಿಲ್ಲವೇ " ಎಂಬೀ ಅವರ ಪದ್ಯವಂತೂ ಸಮ್ಯಕ್ಕೆ ನಮ್ಮ ರಾಷ್ಟ್ರದಲ್ಲಿ ಎಲ್ಲ ಕಡೆಯಲ್ಲಿಯೂ ಕೇಳಬರುವ ಅಸ್ಪೃಶ್ಯತಾ ತತ್ವದ ರಹಸ್ಯವನ್ನೇ ಬೋಧಿಸುತ್ತದೆ. ಪ್ರಪಂಚದಲ್ಲಿ ಸಮಾಜದ ವರ್ಗೀಕರಣವನ್ನು ಕೇವಲ ರೂಢವಾಗಿರುವ ಧರ್ಮದ ಮೂಢ ಕಲ್ಪನೆಗಳಂತೆ ಮಾಡದೆ ಆಯಾಜನರ ಆಚರ ಣೆಯಿಂದಲೇ ಮಾಡುವಮಚಿತವೆಂಬ ತಾತ್ವಿಕ ವಿಚಾರವನ್ನು ದಾಸವರ್ಯರು ಆಗಲೇ ಮಾಡಿರುವರು.

" ನಾನೇಕೆ ಪರದೇಶಿ ನಾನೇಕೆ ಬಡವನು " ಎಂಬವರಲ್ಲಿ ಪರಮಾತ್ಮನನ್ನು ಮೆಚ್ಚಿಸುವ ದಾಸರ ಅದ್ಭುತವಾದ ಭಕ್ತಿಯೋಗವು ಹೊರಚಿಮ್ಮಿದೆ.

ಈ ರೀತಿಯಾಗಿ ಅವರ ಪದ್ಯಗಳನ್ನು ಎಷ್ಟು ಬಗೆಯಾಗಿ ವರ್ಣಿಸಿದರೂ ತೀರುವಂತಿಲ್ಲ; ದಾಸವರ್ಯರು ತಮ್ಮ ಕೀರ್ತನೆಗಳಿಂದ ಜನರಿಗೆ ನೀತಿ, ತತ್ವ, ಭಕ್ತಿ ಮುಂತಾಗಿ ವಿಷಯಗಳ ಜ್ಞಾನವನ್ನೀಯುತ್ತಲೆ ಕನ್ನಡ ಸಾಹಿತ್ಯದ ಬೆಳಗಿಗೆ ಕಾರಣೀಭೂತರಾದರು.

ಪುರಂದರದಾಸರು ಗಾಯನಕಲೆಯಲ್ಲಿ ನಿಷ್ಣಾತರಾಗಿದ್ದರೆಂಬದಕ್ಕೆ ಕರ್ನಾಟಕ ಸಂಗೀತದ ಬೇರೆ ಬೇರೆ ರಾಗಗಳಲ್ಲಿ ಇರುವ ಇವರ ಕೀರ್ತನೆಗಳೇ ಸಾಕ್ಷಿಯಾಗಿವೆ, ಎಂದು ಹೇಳಬಹುದು. ಅವರು ತಮ್ಮ ಕಾಲದಲ್ಲಿ ಹೀನಾವಸ್ಥೆಯನ್ನು ಹೊಂದಿದ ಕರ್ನಾಟಕಗಾಯನಕಲೆಯ ಮಹತಿಯನ್ನು ತೋರಿಸುವ "ಪಿಳ್ಳಾರಿಗೀತೆ" ಎಂಬ ಗ್ರಂಥವನ್ನು ಬರೆದು, ಕರ್ನಾಟಕ ಸಂಗೀತಶಾಸ್ತ್ರಕ್ಕೆ ತಳಹದಿಯನ್ನು ಹಾಕಿರುವರು. ಇದೇ ಅಭಿಪ್ರಾಯವನ್ನು ಸಾಹಿತ್ಯಪರಿಷತ್ ಪತ್ರಿಕೆಯಲ್ಲಿ ಕವಿಚರಿತ್ರೆಕಾರರಾದ ಆರ್. ನರಸಿಂಹಾಚಾರ್ಯರು ಹಿಂದೊಮ್ಮೆ ವ್ಯಕ್ತಪಡಿಸಿದ್ದಾರೆ.

ಇವರು ರಚಿಸಿದ ಸುದಾಮಚರಿತ್ರೆ, ಗಜೇಂದ್ರಮೋಕ್ಷ, ಉದಯರಾಗದ ಪದ್ಯಗಳನ್ನು ಹೆಣ್ಣುಮಕ್ಕಳು ಮನೆಗೆಲಸಗಳನ್ನು ಮಾಡುತ್ತಲೇ ಹಾಡುವದನ್ನು ಎಲ್ಲರೂ ಕೇಳಿರಬಹುದು. ಇದೊಂದೇ ಸಂಗತಿಯಿಂದ ಆ ಪದ್ಯಗಳಿಗೆ ಜನಮಾನ್ಯತೆ ಎಷ್ಟಿದೆ ಎಂಬದನ್ನು ಊಹಿಸಬಹುದಾಗಿದೆ.

ಕನಕದಾಸರು

ಪುರಂದರದಾಸರ ಕಾಲದಲ್ಲಿ ಭಕ್ತಿಮಾರ್ಗದರ್ಶಕರೂ ಪರಮಭಾಗವತ ಶಿರೋಮಣಿಗಳೂ ಆದ, ಮಹಾಪುರುಷರೊಬ್ಬರು ಆಗಿಹೋದರು. ಅವರು ಕನಕದಾಸರು. ಪುರಂದರದಾಸರಂತೆ ಇವರಾದರೂ ಭಕ್ತಿಮಾರ್ಗದ ಸಾಧನೆಗೆ ಅವಶ್ಯವಾದ ವಿಷಯಗಳಿಂದ ಕೂಡಿದ ಅನೇಕ ಕೀರ್ತನೆಗಳನ್ನು ಸುಲಲಿತವಾದ ಕನ್ನಡ ನುಡಿಯಲ್ಲಿ ರಚಿಸಿರುವರು. ಇವರು ಉಳಿದ ದಾಸಜನಗಳಹಾಗೆ ಧಾರ್ಮಿಕ ಅಥವಾ ಸಾಮಾಜಿಕ ಪರಂಪರೆಯನ್ನು ಅನುಸರಿಸುವರಾಗಿರಲಿಲ್ಲ; ಆದರೆ ಧರ್ಮದ ಮೂಢಕಲ್ಪನೆಗಳ ಕಟ್ಟನ್ನು ಹರಿದೊಗೆಯುವ ಸಾಹಸಿಗಳೂ, ಸ್ವತಂತ್ರ ವಿಚಾರಿಗಳೂ ನಿಷ್ಪಕ್ಷಪಾತಿಗಳೂ ಆಗಿದ್ದರು. ನಿಜವಾದ ಧರ್ಮವಾವುದು, ಪರಮೇಶ್ವರನ ವಿಷಯಕವಾದ ಭಕ್ತಿಯು ಎಂತಹದಿರಬೇಕು ಎಂಬೀ ವಿಷಯಗಳನ್ನು ತಮ್ಮ ಪದ್ಯಗಳಲ್ಲಿ ಚನ್ನಾಗಿ ವರ್ಣಿಸಿರುವರು. ಡಾಂಭಿಕರಾದವರಿಗೆ ಆವ ಜಾತಿಪಂಥಗಳಲ್ಲಿಯೂ, ಮುಕ್ತಿಯು ದೊರೆಯದು; ಆಚರಣಶೀಲನಿಗೆ ಮುಕ್ತಿಮಾರ್ಗದಲ್ಲಿ ಆವ ಜಾತಿ ಪಂಥಗಳೂ ಅಡ್ಡಬಾರವು; ಎಂಬ ಸಂಗತಿಯನ್ನು ಅವರು ಆಗಾಗ್ಗೆ ಒತ್ತಿಹೇಳಿರುವರು.

" ಈತನು ಹಾರೈಸುವವಗೆ ಮುಕ್ತಿಯುಂಟೆ " ಎಂಬದಾಗಿ ಹೇಳಿರುವ ಕನಕ ದಾಸರು ಎಷ್ಟು ಒಳ್ಳೆಯ ರೀತಿಯಿಂದ ಅಹಂಭಾವವನ್ನು ಅಳಿದಿದ್ದರೆಂಬುದು, ವ್ಯಕ್ತ ವಾಗುವದು.

" ಸತ್ಯನೊಬ್ಬ ಪುತ್ರ ಶಾಂತನೊಬ್ಬ ಪುತ್ರ ದುರವೃತ್ತಿ ನಿಗ್ರಹ ಸಮಚಿತ್ತರು ಉತ್ತುಮರೀ ನಾಲ್ಕು ಮಕ್ಕಳಿದ್ದವೇಲೆ ಹೆತ್ತರೆ ಫಲವೇನು ಹೆರದಿದ್ದರೇನು ॥ ೧ ॥ ಈ ಪದ್ಯದಿಂದ ಅವರೆಂತಹ ಉಚ್ಚತರಗತಿಯ ತತ್ವಜ್ಞಾನಿಗಳಾಗಿದ್ದರೆಂಬದನ್ನು ಊಹಿಸಬಹುದಾಗಿದೆ.

" ನಡುಗಿದೆ ಯಾಕೆ ತಾಯಿ " ಎಂಬ ಅವರ ಪದ್ಯದಿಂದ ಒಂದು ಮಹತ್ತರ ವಾದ ಸಂಗತಿಯು ತಿಳಿದುಬರುವದು. ಈ ಪದ್ಯವನ್ನು ಹೇಳುವದಕ್ಕೆ ಭೂಕಂಪನೇ ಕಾರಣವಾಗಿರಬೇಕೆಂದು ಬೇರೆ ಹೇಳಬೇಕಾಗಿಲ್ಲ; ಯಾಕಂದರೆ ಪಲ್ಲವಿಯಲ್ಲಿಯೇ ಆ ವಿಚಾರವು ತೋರಿಸಲ್ಪಟ್ಟಿದೆ. ಸದ್ಯದ ಯುಗದಲ್ಲಿ ಭೂಕಂಪದಂತಹ ಅನಿಷ್ಟ ಸಂಗ ತಿಯ ವಿಚಾರವನ್ನು ಪಂಡಿತರು ಭೌತಿಕಶಾಸ್ತ್ರಕ್ಕನುಸರಿಸಿ, ಮಾಡುತ್ತಿರುವಂತೆ ಕನಕದಾಸರು ಅದೇ ವಿಚಾರವನ್ನು ವೇದಾಂತತತ್ವಗಳಿಗನುಸರಿಸಿ, ಬೇರೆ ಮಾಡಿರ ಲಿಕ್ಕಿಲ್ಲವಷ್ಟೇ ?

ಕನಕದಾಸರು ಮೋಹನ ತರಂಗಿಣಿ, ಹರಿಭಕ್ತಿಸಾರ, ಎಂಬ ಎರಡು ಕಾವ್ಯ ಗ್ರಂಥಗಳನ್ನು ರಚಿಸಿ, ಕನ್ನಡ ಸಾಹಿತ್ಯದ ಸೇವೆಗೈದಿರುವರು. ಅವುಗಳಲ್ಲಿ ಕಾಣುವ ದಾಸರ ಕವಿತಾ ಶೈಲಿಯು ಒಳ್ಳೇ ಕಸುವಿನದಾಗಿದೆ. ಭಾಷೆಯು ಪ್ರೌಢ ವಾಗಿದೆ. ಮೇಲಿನ ಗ್ರಂಥಗಳನ್ನುಳಿದು, ವೇದಾಂತದ ತಿರುಳನ್ನು ಹೊರಪಡಿಸುವ ಅನೇಕ ಕೀರ್ತನಗಳನ್ನೂ, ತತ್ವಪದಗಳನ್ನೂ ರಚಿಸಿರುವರು. ಅವುಗಳಲ್ಲಿ ವಿದ್ವಾಂಸರಿಗೆ ಸಹ ಸುಲಭವಾಗಿ ಅರ್ಥವಾಗದೆ ಇರುವ ಕೆಲವು ಪದ್ಯಗಳು ಉಂಟು; ಅವುಗಳಿಗೆ "ಕನಕನ ಮುಂಡಿಗೆ"ಯೆಂದು ಕರೆಯುವ ಪರಿಪಾಠವುಂಟು. ಅದು ಕಾರಣವೇ " ಕನಕನ ಮುಂಡಿಗೆ " ಎಂಬ ಗಾದೆಯೇ ಕನ್ನಡದಲ್ಲಿ ಉಂಟಾಗಿದೆ. ಉಡುಪಿಯ ಶ್ರೀಕೃಷ್ಣನ ಗುಡಿಯಲ್ಲಿರುವ ಕನಕನ ಕಿಂಡಿಯು, ಅವರು ಅಸಾಧಾರಣ ವಾದ ಕೃಷ್ಣಭಕ್ತರಾಗಿದ್ದುದಕ್ಕೆ ಬಲವಾದ ಸಾಕ್ಷಿಯಾಗಿದೆ.

ವಾದಿರಾಜರು

ವಾದಿರಾಜರು ವ್ಯಾಸರಾಯರ ಶಿಷ್ಯರಲ್ಲಿ ಪ್ರಸಿದ್ಧಿಗೆ ಬಂದವರಲ್ಲಿ ಒಬ್ಬರು. ಇವರು ಉಡುಪಿಯಲ್ಲಿ ಶ್ರೀ ಮಧ್ವಾಚಾರ್ಯರಿಂದ ಸ್ಥಾಪಿತವಾದ ಎಂಟು ಮಠಗಳಲ್ಲಿ ಒಂದಾದ ಸೋದೆ ಮಠದ ಸ್ವಾಮಿಗಳಾಗಿದ್ದರು. ಇವರ ಕಾಲವು ಹದಿನಾರನೆಯ

ತಮಾನದ್ದು; ಇವರು ಮಹಾಮಹಿಮರಾದ್ದರಿಂದ ಸೋದೆಯ ಪ್ರಾಂತಕ್ಕೆ ಆ ಕಾಲಕ್ಕೆ ಒಡೆಯರಾಗಿದ್ದ ವೀರಶೈವ ಮತಾನುಯಾಯಿಗಳಾದ ಅರಸಪ್ಪ ನಾಯಕರ ಎಳೆಯಿದ್ದ ಒಬ್ಬ ಘನಪಂಡಿತನನ್ನು ವಾದದಲ್ಲಿ ಗೆದ್ದರು. ಆದ್ದರಿಂದ ಅರಸಪ್ಪ ನಾಯಕರು ಮೆಚ್ಚಿ ಸೋದೆಯನ್ನು ವಾದಿರಾಜರಿಗೆ ಕೊಟ್ಟರು.

ಇವರು ಸಂಸ್ಕೃತ ಭಾಷೆಯಲ್ಲಿ ಅನೇಕ ಗ್ರಂಥಗಳನ್ನು ರಚಿಸಿರುವರು. ಹಾಗೆಯೇ ವೈಷ್ಣವಮತಕ್ಕೆ ಸಂಬಂಧಿಸಿದ ಅನೇಕ ತತ್ವಪ್ರಮೇಯಗಳನ್ನು ಕನ್ನಡ ಭಾಷೆಗಳಲ್ಲಿ ಕೀರ್ತನೆಗಳಮೂಲಕ ರಚಿಸಿ, ಸಂಸ್ಕೃತವನ್ನು ಅರಿಯದ ಆಸ್ತಿಕ ಜನಗಳಿಗೆ ತತ್ವಜ್ಞಾನವನ್ನು ದೊರಕಿಸಲು ಮಾರ್ಗಮಾಡಿಕೊಟ್ಟಿರುವರು. ಶ್ರೀಮನ್ ಮಧ್ವಾಚಾರ್ಯರಿಂದ ಸಂಸ್ಕೃತದಲ್ಲಿ ರಚಿತವಾದ " ಮಹಾಭಾರತ ತಾತ್ಪರ್ಯ ನಿರ್ಣಯ"ವೆಂಬ ಗದ್ಯ ಗ್ರಂಥವನ್ನು ಕನ್ನಡಕ್ಕೆ ಪರಿವರ್ತಿಸಿದರು. ಅದರಲ್ಲಿನ ಭಾಷೆಯು, ಹೊಸಗನ್ನಡದ ಪದ್ಧತಿಯನ್ನು ಮಾತ್ರ ಹೋಲುವದಿಲ್ಲ;

ಇವರ ಇನ್ನೊಂದು ಗದ್ಯಗ್ರಂಥವೆಂದರೆ ಭೂಗೋಳ ಶಾಸ್ತ್ರವು. ಭೂಗೋಳದ ವಿಚಾರವನ್ನು ಪುರಾಣ ಉಪನಿಷತ್ತುಗಳ ಆಧಾರದಿಂದ ಬರೆಯಲಾಗಿದೆ.

ವಾದಿರಾಜರ ಮೂರನೇ ಗ್ರಂಥವು " ವೈಕುಂಠದ ವರ್ಣನೆ " ಇದು ಸಾಂಗತ್ಯ ದಲ್ಲಿ ಬರೆಯಲ್ಪಟ್ಟಿರುವ ಒಂದು ಹಾಡು. ಇದರಲ್ಲಿ ನಾಲ್ಕು ಸಂಧಿಗಳಿವೆ. ಮೊದಲನೇ ಯದರಲ್ಲಿ "ವೈಕುಂಠದ ವರ್ಣನೆ"ಯಿದೆ. ಎರಡನೇದರಲ್ಲಿ " ಲಯದ " ವಿಚಾರ ವನ್ನು ಹೇಳಲಾಗಿದೆ. ಮೂರನೇದರಲ್ಲಿ ಸೃಷ್ಟಿಯ ವಿಚಾರವು ಕಂಡುಬರುವದು. ಈ ಯಾವತ್ತು ವಿಷಯಗಳು ಬೇರೆಬೇರೆ ರಾಗಗಳಲ್ಲಿ ಪದ್ಯರೂಪವಾಗಿ ಹೇಳಲ್ಪಟ್ಟಿವೆ. ಪದ್ಯಗಳು ಹೃದಯಂಗಮವಾಗಿಯೂ, ಲಲಿತಪದಗಳಿಂದ ಕೂಡಿದವಾಗಿದ್ದು ಕನ್ನಡ ಭಾಷೆಯು ಸುಲಭವಾಗಿದೆ.

ಇವರ ನಾಲ್ಕನೇ ಕೃತಿಯು "ಲಕ್ಷ್ಮೀಸು ಶೋಭಾನೆ ಹಾಡು" ವಿವಾಹ ಕಾಲ ದಲ್ಲಿ ಹೇಳುವ ಹಾಡುಗಳೇ ಇದರಲ್ಲಿವೆ. ಅವುಗಳಲ್ಲಿ ಉತ್ತಮವಾದ ಕಾವ್ಯವಿದೆ.

ವಾದಿರಾಜರು ರಚಿಸಿದ ಕೀರ್ತನೆಗಳಲ್ಲಿಯ " ಹಣವೇ ನಿನ್ನಯ ಗುಣ ಎನಿತು ಬಣ್ಣಿಪೆನು " ಎಂಬ ಪದ್ಯದಿಂದ ಅವರೊಳ್ಳೇ ವ್ಯವಹಾರ ಚತುರರಾಗಿದ್ದರೆಂಬ ಸಂಗತಿಯು ವ್ಯಕ್ತವಾಗುತ್ತದೆ. ಈ ತೆರನಾಗಿ ಐಹಿಕಪ್ರಪಂಚದಲ್ಲಿ ಸಾಹಿತ್ಯದ ಕಾರ್ಯವನ್ನೂ ಪಾರಮಾರ್ಥಿಕಪ್ರಪಂಚದಲ್ಲಿ ಆತ್ಮೋದ್ಧಾರ, ಹಾಗು ಸ್ವಜನೋ ದ್ಧಾರಕಾರ್ಯವನ್ನೂ ಮಾಡಿ, ವಾದಿರಾಜರು ದಿಗಂತ ಕೀರ್ತಿಯನ್ನು ಪಡೆದರು.

ಜಗನ್ನಾಥದಾಸರು

ಜಗನ್ನಾಥ ದಾಸರು ೧೭ನೇ ಶತಮಾನಕ್ಕೆ ಸೇರಿದವರು. ವ್ಯಾಸರಾಯರ ಶಿಷ್ಯರಲ್ಲಿ ಒಬ್ಬರು. ವಾದಿರಾಜರ ಪರಮಪ್ರೀತಿಯನ್ನು ಪಡೆದವರು. ಇವರು ಪರಮಾತ್ಮನನ್ನು ವರ್ಣಿಸುವ ಸಹಸ್ರಾರು ಕೀರ್ತನಗಳನ್ನೂ, ಧರ್ಮದ ರಹಸ್ಯವನ್ನೂ ಹೇಳುವ ಪದ್ಯಗಳನ್ನೂ ದ್ವೈತಮತದ ತತ್ವಪ್ರಮೇಯಗಳಿಂದ ಕೂಡಿದ ಸುಳಾದಿಗಳನ್ನೂ ಕನ್ನಡದಲ್ಲಿ ರಚಿಸಿರುವರು. ಇವರ ಶೈಲಿಯು ಕಠಿಣವಾದುದು. ಆದರೆ ತುಂಬಾ ಕಾವ್ಯಮಯವಾಗಿದೆ.

" ರಕ್ಷಿಸೋ ಶ್ರೀಶಾ ಶ್ರೀನಿವಾಸಾ " ಎಂಬ ಇವರ ಪದ್ಯದಿಂದ ಮರ್ತ್ಯಲೋಕದ ಮಾನವನು ಜನನಮರಣಗಳ ಚಕ್ರದಲ್ಲಿ ಶಿಲುಕಿ, ಹೇಗೆ ಬೆಂದು ಬಳಲುವನು. ಎಂಬ ಸಂಗತಿಯ ಯಥಾಚಿತ್ರದ ಕಲ್ಪನೆಯಾಗದಿರದು.

" ಶ್ರೀನಿಕೇತನ ಪಾಲಯಮಾಂ " ಎಂಬ ಇವರ ಪದ್ಯದಲ್ಲಿ ಸರಸವಾದ ಕಾವ್ಯವನ್ನು ಕಾಣಬಹುದು.

ಇಂತು ದಾಸಾರ್ಯರು, ಕನ್ನಡ ನುಡಿಯ ಸೇವೆಯನ್ನು ಮಾಡಿ, ಐಹಿಕ, ಪಾರತ್ರಿಕ, ಸೌಖ್ಯವನ್ನು ಕಂಡುಕೊಂಡು ಕೀರ್ತಿಶೇಷರಾದರು.

ಪ್ರಸನ್ನವೆಂಕಟರು

ಪ್ರಸನ್ನ ವೆಂಕಟರು ೧೭ನೇ ಶತಮಾನಕ್ಕೆ ಸೇರಿದ ಹರಿದಾಸರಲ್ಲಿ ಹೆಚ್ಚಾಗಿ ಪ್ರಚೀತಿಯನ್ನು ಪಡೆದವರು. ಕನ್ನಡ ವಾಙ್ಮಯದ ಸೇವೆಗೈದವರು. ಪರಮಾತ್ಮನಲ್ಲಿಯ ಇವರ ಭಕ್ತಿಯು ಅಸದೃಶವಾದದ್ದು. ಇವರು ಭಾಗವತದೊಳಗಿನ ೧೦ನೇ ಸಂಧಿಯನ್ನು ಕನ್ನಡಿಸಿರುವರು. ಆ ಗ್ರಂಥವು ಪದ್ಯರೂಪವಾಗಿದೆ. ಅವರ ಪದ್ಯ ರಚನಾಶಕ್ತಿಯು ಕೊಂಡಾಡುವಂತಹದು. ಸಂಸ್ಕೃತದಲ್ಲಿನ ಮೂಲ ಗ್ರಂಥಕ್ಕೆ ಕನ್ನಡನುಡಿಯ ಒಪ್ಪವನ್ನೇ ಹಾಕಿದ ಹಾಗಿದೆ. ಆದ್ದರಿಂದ ಗ್ರಂಥವು ಒಳ್ಳೆ ರಮ್ಯವಾಗಿದೆ.

ಮೇಲಿನ ಗ್ರಂಥವನ್ನಲ್ಲದೆ, ಪ್ರಸನ್ನ ವೆಂಕಟರು ಸಂಸ್ಕೃತದಲ್ಲಿನ ಗೋಪಗೀತೆ, ಭ್ರಮರಗೀತೆ ಮುಂತಾದವುಗಳನ್ನು ಕನ್ನಡಿಸಿರುವರು. ಮೂಲ ಗ್ರಂಥದೊಳಗಿನ ರಸವನ್ನು ಭಂಗಗೊಳಿಸದೆ, ಭಾಷಾಂತರ ಮಾಡುವ ಇವರ ಪದ್ಧತಿಯು ಅನುಕರಣೀಯವಾಗಿದೆ. ಅವರ ಕನ್ನಡ ಭಾಷೆಯಲ್ಲಿರುವ ಪ್ರೌಢಿಯೂ, ವಿಷಯ ವಿವೇಚನಾ ಪದ್ಧತಿಯೂ ಪಂಡಿತರನ್ನು ಕೂಡಾ ಅಚ್ಚರಿಗೊಳಿಸುವಂತಿದೆ.

ಇವರಿಗೆ ಸಂಗೀತ ಶಾಸ್ತ್ರದಲ್ಲಿ ಒಳ್ಳೇ ಗತಿ ಇತ್ತೆನ್ನುವದಕ್ಕೆ ಅವರ ಪದ್ಯರೂಪವಾದ ಗ್ರಂಥಗಳೇ ಸಾಕ್ಷಿಗಳಾಗಿವೆ. ಅಯಾ ರಸಗಳಿಗೆ ಅನುರೂಪವಾದ ರಾಗಗಳನ್ನೂ ಶಬ್ದಯೋಜನೆಯನ್ನೂ ಮಾಡುವದರಲ್ಲಿ ಅವರು ಒಳ್ಳೇ ನಿಷ್ಣಾತರಾಗಿದ್ದರು. ಪದ್ಯಗಳೊಳಗಿನ ಪದಲಾಲಿತ್ಯವಂತೂ ಕರ್ಣಮನೋಹರವಾಗಿದೆ.

ಅವರ ಪದ್ಯಗಳಲ್ಲಿ ಕಂಡುಬರುವ 'ಪಾಳತಿ ಇಡು, ಹುಯ್ಯಲಿಡು, ನ್ಯಾವರಿಸು, ಮುಂತಾಗಿ ಅಚ್ಚಗನ್ನಡ ಶಬ್ದಗಳು, ಯೋಗ್ಯರೀತಿಯಿಂದ ಯೋಗ್ಯಸ್ಥಳಗಳಲ್ಲಿ ಉಪಯೋಗಿಸಲ್ಪಟ್ಟಿವೆ.

" ಕುಂಬಳವು ಕೈಗತ್ತೆ ಕರಾಂಬುಜಕ್ಕೆ ನಿನಗಿತ್ತೆ ತರಣಿಯೊಳು ಹೊಂಬುಳವು ಗರುವಿಸಿದ ತೆರದೆ" ಮೇಲಿನ ಪದ್ಯಾಂಶಗಳಲ್ಲಿ ಕಾಣಬಹುದಾದ ಮಾತುಗಳು ಕನ್ನಡದಲ್ಲಿ ಗಾದೆಗಳಾಗಿ ಪರಿಣಮಿಸಿರುವವು.

" ಕರಗಿ ತಾಪದಿ ಗೋವಿಂದ" "ಸಿಡಿಲೆರಗಿಸಿಕೊಂಡೆನು ಗೋವಿಂದಾ" ಈ ಪದ್ಯದಲ್ಲಿ ಕಾಣುವ ಅವರ ಭಾಷಾಶಕ್ತಿಯು ಅತಿ ತೀಕ್ಷ್ಣವಾಗಿದೆ. ಒಟ್ಟಾರೆ ಪ್ರಸನ್ನ ವೆಂಕಟರು ಕನ್ನಡ ವಾಙ್ಮಯದ ಅಭಿವೃದ್ಧಿಯ ಕಾರ್ಯಕ್ಕೆ ಬಹಳವಾಗಿ ನೆರವಾಗಿರುವರೆಂಬ ಸಂಗತಿಯನ್ನು ಕನ್ನಡಿಗರಾದ ನಾವು ಮರೆಯುವಂತಿಲ್ಲ.

ಪ್ರಾಣೇಶ ವಿಠ್ಠಲರು

ಇವರು ಜಗನ್ನಾಥರಾಯರ ಪರಮಶಿಷ್ಯರಲ್ಲಿ ಒಬ್ಬರು. ದಾಸಕೂಟದ ಕಾರ್ಯವನ್ನು ಒಳ್ಳೇ ಭಕ್ತಿಯಿಂದ ಸಾಗಿಸಿದವರು. ಶ್ರೀಹರಿಯ ಗುಣಾನುವಾದವನ್ನು ಉಸುರುವ ಅನೇಕ ಕೀರ್ತನೆಗಳನ್ನೂ, ಸುಳಾದಿಗಳನ್ನೂ ಕನ್ನಡದಲ್ಲಿ ರಚಿಸಿ, ಸಾಹಿತ್ಯಸೇವೆಗೈದರು. ಇವರ ಕೀರ್ತನೆಗಳಲ್ಲಿರುವ ಭಾಷೆಯು ಕಾವ್ಯಮಯವಾಗಿದ್ದು, ಅತಿ ಮನೋಹರವಾಗಿದೆ.

ಸಂಸ್ಕೃತ ಭಾಷೆಯಲ್ಲಿರುವ ವಾಯುಸ್ತುತಿಯನ್ನು ಪ್ರಾಣೇಶ ವಿಠ್ಠಲರು ತಿಳಿಗನ್ನಡದ ಭಾಮಿನಿ ಷಟ್ಪದಿಗಳಲ್ಲಿ ಬರೆದರು.

ಇವರು ರಚಿಸಿದ " ಸ್ವಪ್ನವೃಂದಾವನಾಖ್ಯಾನ" ಎಂಬ ಗ್ರಂಥದಲ್ಲಿ ಇರುವ ಕಥಾನಕವು, ಒಳ್ಳೇ ಚಮತ್ಕಾರವಾಗಿದೆ. ಅದರಲ್ಲಿನ ಭಾಷೆಯು, ಒಳ್ಳೇ ರಸವತ್ತಾಗಿದ್ದು, ಶೈಲಿಯು ವರ್ಣಿಸತಕ್ಕುಂಥಾದ್ದಿದೆ. ಇಂತು ಲೋಕೋದ್ಧಾರದ ಕಾರ್ಯವನ್ನು ಗೈದು ದಾಸರು ತಮ್ಮ ಇಹಲೋಕದ ಯಾತ್ರೆಯನ್ನು ಮುಗಿಸಿದರು.

ಒಟ್ಟಾರೆ ಮೇಲೆ ವಿವರಿಸಿದ ದಾಸಜನಗಳು ವಿಶೇಷವಾಗಿ, ಪ್ರಚೀತಿಯನ್ನು ನಕ್ಕವರು. ಇವರನ್ನುಳಿದು ಇನ್ನೂ ಅನೇಕರಾದ ಇವರ ಶಿಷ್ಯರು, ವಿಜಯ ವಿಠ್ಠಲ, ಭೀಮೇಶವಿಠ್ಠಲ, ಶ್ರೀಪವಿಠ್ಠಲ, ಪ್ರಸನ್ನವಿಠ್ಠಲ, ಸುಖನಿಧಿ ವಿಠ್ಠಲ ಮುಂತಾಗಿ ತಮ್ಮ ಅಂಕಿತಗಳಿಂದ ಭಗವದ್ವಿಷಯಕ ಜ್ಞಾನಸಂಪಾದನೆ ಮಾಡಿ ಕೊಡುವ ಅನೇಕ ಕೀರ್ತನೆಗಳನ್ನೂ, ಸುಳಾದಿಗಳನ್ನೂ ರಚಿಸಿರುವರು.

ಧರ್ಮಗ್ಲಾನಿಯ ಕಾಲವಾದ ಗಿಜನೇ ಶತಮಾನದಿಂದ ಸಾಧಾರಣವಾಗಿ ಎರಡು ನೂರು ವರ್ಷಗಳವರೆಗೆ ಮಾನವರಿಗೆ ಅತಿ ಸುಲಭವಾದ ಭಕ್ತಿಮಾರ್ಗದ ತತ್ವವನ್ನು ತೋರಿಸಿಕೊಟ್ಟು, ಧರ್ಮಭೂಮಿಯಾದ ನಮ್ಮ ಕನ್ನಡನಾಡನ್ನು ಸಂರಕ್ಷಿಸಿದ ಮಹನೀಯರ ಜನ್ಮವು ಕರ್ನಾಟಕದಲ್ಲಿ ಆದ ಸಂಗತಿಯು ಕನ್ನಡಿಗರಾದ ನಮಗೆ ಅಭಿಮಾನಾಸ್ಪದವಾಗಿದೆ. ಹೀಗೆ ಧರ್ಮಕಾರ್ಯವನ್ನು ಗೈಯುತ್ತಲೇ ಕನ್ನಡ ಸಾಹಿತ್ಯರೂಪವಾದ ತರುವನ್ನು ತಾವು ರಚಿಸಿದ ಗ್ರಂಥಗಳ, ಗೊಬ್ಬರದಿಂದಲೂ ಭಗವನ್ನಾಮಸಂಕೀರ್ತನೆಯಿಂದ ಅಡಕವಾದ, ಪದ್ಯರೂಪವಾದ ನೀರಿನ ಪ್ರವಾಹ ದಿಂದಲೂ ಬೆಳೆಯಿಸಿದ ಈ ಮಹಾತ್ಮರ ಹೆಸರುಗಳನ್ನು ನಾವು ನಮ್ಮ ನಾಡಿನ ಇತಿ ಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಟ್ಟರೂ ಕೂಡಾ, ದಾಸಾರ್ಯರ ಋಣದಿಂದ ಮುಕ್ತವಾಗುವದು ಸಾಧ್ಯವಿಲ್ಲ; ಎಂಬದಾಗಿಯೇ ನನ್ನ ಸಾತ್ವಿಕ ಭಾವನೆ.

ದಾಸಾರ್ಯರು, ರಚಿಸಿದ ಈ ಕೃತಿಗಳು ಲೋಕದ ಸಕಲ ಜನಗಳಿಗೂ, ಪ್ರಿಯವಾಗುವಂತಿವೆ ಎಂಬದರಲ್ಲಿ ಸಂದೇಹವಿಲ್ಲ; ಆಧ್ಯಾತ್ಮಿಕ, ಹಾಗೂ ತತ್ವದ ವಿಚಾರಗಳನ್ನು ಅಷ್ಟು ಸುಲಭವಾಗಿ ಕನ್ನಡನುಡಿಯಲ್ಲಿ ಹೇಳುವದು ಯಾರಿಂದಲೂ ಸಾಧ್ಯವಿಲ್ಲ; ಕೀರ್ತನೆಗಳನ್ನು ರಚಿಸುವದರಲ್ಲಿ ತ್ಯಾಗಿಗಳಾದ ದಾಸಾರ್ಯರ ಧ್ಯೇಯವು, ಕಾವ್ಯರಚನೆಯಲ್ಲಿ ಪಾಂಡಿತ್ಯವನ್ನು ಪ್ರಕಟಗೊಳಿಸುವದಾಗಿರದಿದ್ದರೂ, ಅವುಗಳಲ್ಲಿ ಕಾವ್ಯವು ಮಾತ್ರ ತುಂಬಿ ತುಳುಕುವದು.

ಸಾಮಾನ್ಯವಾಗಿ ದಾಸರ ಕೃತಿಗಳು, ದ್ವಿಪದಿ, ತ್ರಿಪದಿ, ಚೌಪದಿ, ಷಟ್ಪದಿ, ಸಾಂಗತ್ಯ, ಕೀರ್ತನೆ, ಸುಳಾದಿ, ಉಗಾಭೋಗ, ಮುಂತಾಗಿ ರೂಪಗಳಲ್ಲಿ ಬರೆಯ ಲಾಗಿವೆ. ಒಟ್ಟಾರೆ ದಾಸರ ಕೃತಿಗಳು ಒಳ್ಳೇ ಸಾಹಿತ್ಯವೆನ್ನಿಸಿಕೊಳ್ಳಲು, ಯೋಗ್ಯ ವಾಗಿವೆ ಎಂಬದಾಗಿ ಅನೇಕಜನತಜ್ಞರು ಅಭಿಪ್ರಾಯಪಡುವರು.

ದಾಸರ ಸಾಹಿತ್ಯದೊಳಗೆ ಕಂಡುಬರುವ ಇನ್ನೊಂದು ಮಹತ್ವದ ಸಂಗತಿ ಯೆಂದರೆ ಅವರ ಪದಗಳಲ್ಲಿ ವೇದಾಂತಿಗಳಿಗೆ ತತ್ವಬೋಧೆ, ಮುಮುಕ್ಷುಗಳಿಗೆ ಮುಕ್ತಿಯ ಮಾರ್ಗ, ಸಂಸಾರಿಗಳಿಗೆ ಧರ್ಮದ ಗುಟ್ಟು, ವಿಲಾಸಿಗಳಿಗೆ ಶೃಂಗಾರ,

ಗಾಯಕರಿಗೆ ಸಂಗೀತ, ಮುಂತಾಗಿ ಸಕಲರಿಗೆ, ಸಕಲ ವಿಷಯಗಳೂ ದೊರೆಯುತ್ತವೆ. ಅದುಕಾರಣ ದಾಸಾರ್ಯರ ಸಾಹಿತ್ಯಕ್ಕೆ ಭೂಲೋಕದ ಕಾಮಧೇನುವೆನ್ನಲು ಆವ ಸಂದೇಹವೂ ಇಲ್ಲ;

ಇರಲಿ. ಏನೋ ನನ್ನ ಅಲ್ಪಮತಿಗೆ ಹೊಳೆದಮಟ್ಟಿಗೆ ದಾಸಾರ್ಯರು ಕರ್ನಾಟಕ ಸಾಹಿತ್ಯಕ್ಷೇತ್ರದಲ್ಲಿ ಮಾಡಿದ ಕಾರ್ಯದಬಗ್ಗೆ ನಿರೂಪಣೆಯನ್ನು ಸಾಹಿತ್ಯ ಪರಿಷತ್ತಿನಂತಹ ವಿದ್ವಜ್ಜನರ ಸಭೆಯಲ್ಲಿ ಇಟ್ಟಿರುವೆನು. ತಾವುಗಳು ಹಂಸಕ್ಷೀರನ್ಯಾಯವಾಗಿ ಈ ನನ್ನ ಅಲ್ಪಕೃತಿಯನ್ನು ವಿಮರ್ಶಿಸಬೇಕಾಗಿ ವಿನಂತಿ.

ಆಗಲಿ. ಕೊನೆಯಲ್ಲಿ ಲೋಕೋದ್ಧಾರಕರೂ, ಸಮಾಜೋದ್ಧಾರಕರೂ, ಭಾಗವತಶಿರೋಮಣಿಗಳೂ ಆದ ದಾಸಾರ್ಯರಂತಹ ಪುತ್ರರತ್ನಗಳನ್ನು ಹೆತ್ತ ಆ ಕರ್ನಾಟಕ ಮಾತೆಗೆ ಧನ್ಯವಾದಗಳನ್ನುಅರ್ಪಿಸುವಾ; ಮತ್ತು ಪುಣ್ಯಭೂಮಿಯಾದ ಕರ್ನಾಟಕ ಮಾತೆಯ ಸದ್ಯದ ಹೀನಾವಸ್ಥೆಯನ್ನು ಬೇಗನೆ ಹೋಗಲಾಡಿಸಲು ದಯಾಘನನಾದ ಪರಮಾತ್ಮನನ್ನು ಬೇಡಿಕೊಳ್ಳೋಣ.

———o———

ಪರ್ಶಿಯನ್ ಮಹಾಕವಿ ಫಿರ್ದೌಸಿ.

ಲೇಖಕ:—ಶ್ರೀ. ಲಕ್ಷ್ಮಣ ವಿಶ್ವನಾಥ ಘಾಟಿಕ. ಕೋಟುಮಚಗಿ

ಭಾರತದಲ್ಲಿ ಕಾಳಿದಾಸ, ಜರ್ಮನಿಯಲ್ಲಿ ಗಟೆ, ಇಂಗ್ಲಂಡದಲ್ಲಿ ಶೇಕ್ಸಪಿಯರರಿಂಬ ಮಹಾಕವಿಗಳಾಗಿ ಹೋದಂತೆ ಇರಾಣದಲ್ಲಿ ಫಿರ್ದೌಸಿ ಎಂಬ ಮಹಾಕವಿಯು ಹೆಸರುವಾಸಿಯಾಗಿರುವನು. ಕಳೆದ ತಾರೀಖು ೨ ರಿಂದ ೧೨ನೆಯ ಅಕ್ಟೋಬರದವರೆಗಿನ ೧೦ ದಿವಸಗಳು ಇರಾಣದಲ್ಲಿ ಬಹು ವಿಜೃಂಭಣೆಯಿಂದ ಕಳೆಯಲ್ಪಟ್ಟವು. "ಶಹಾನಾಮಾ" (ರಾಜಗ್ರಂಥ) ಎಂಬ ಪ್ರಸಿದ್ಧವಾದ ಇರಾಣದ ಪ್ರಾಚೀನ ರಾಜವಂಶದ ಕಾವ್ಯಮಯ ಇತಿಹಾಸವನ್ನು ಸತತ ೩೫ ವರ್ಷಗಳ ಪ್ರಚಂಡ ಪರಿಶ್ರಮದಿಂದ ನಿರ್ಮಾಣ ಮಾಡುವ ಪ್ರಾಸಾದಿಕ ಮಹಾಕಾವ್ಯಕಾರನಾದ ಫಿರ್ದೌಸಿಯು ಜನ್ಮಿಸಿ, ಹಿಜರಿ ಕಾಲಗಣನೆಯಂತೆ ಈ ಅವಧಿಗೆ ಒಂದು ಸಾವಿರ ವರ್ಷಗಳಾಗಿ ಹೋಗಿರುವ ಮೂಲಕ ಅವನ ಸ್ಮಾರಕದ ದೆಸೆಯಿಂದ ಇರಾಣೀ ಜನರು ಅಲ್ಲಲ್ಲಿ ಸಹಸ್ರಸಾಂವತ್ಸರಿಕ ಜಯಂತಿಯನ್ನು ಅತ್ಯಂತ ಭಕ್ತಿಯಿಂದ ಜರುಗಿಸುವದು ಸಹಜವೇ ಇದೆ. ಮಹಾಕವಿ ಫಿರ್ದೌಸಿ ಖೋರಾಸಾನ ಪ್ರಾಂತದಲ್ಲಿಯ ತೂಸ ಎಂಬ

ಪಟ್ಟಣದಲ್ಲಿ ಜನ್ಮಿಸಿರುವನು. ಇರಾಣದ ಸದ್ಯದ ಶಹರಾದ ರೇಝೂಶಹಾ ಪಹಲವಿ ಇವನು ಈ ಸಹಸ್ರ ಸಾಂವತ್ಸರಿಕ ಮಹೋತ್ಸವದಲ್ಲಿ ಮುಂದಾಳುಗಳಾಗಿದ್ದು, ಬೇರೆ ಬೇರೆ ರಾಷ್ಟ್ರಗಳಲ್ಲಿಯ ಪ್ರಮುಖ ಕವಿಗಳನ್ನೂ, ಪಂಡಿತರನ್ನೂ ರಾಜಧಾನಿಗೆ ಪ್ರಕೃತ ಮಹೋತ್ಸವದ ದೆಸೆಯಿಂದ ಸನ್ಮಾನಪೂರ್ವಕ ಕರೆಯಿಸಿಕೊಂಡಿರುವರು.

ಫಿರ್ದೌಸಿಯಿಂದ ನಿರ್ಮಿತವಾದ "ಶಹಾನಾಮಾ" ಗ್ರಂಥವು ನಮ್ಮಲ್ಲಿಯ ಮಹಾಭಾರತದಂತೆ ಅತ್ಯಂತ ಲೋಕಪ್ರಿಯವಿದ್ದು, ಪರ್ಶಿಯನ್ ಭಾಷೆಯಲ್ಲಿಯ ರಾಷ್ಟ್ರೀಯ ಗ್ರಂಥವೆಂದು ಒಳ್ಳೆಯ ಹೆಸರಾಗಿದೆ. ಇರಾಣದಲ್ಲಿಯ ರಾಜವಂಶದ ವರು ನೂರಾರು ವರ್ಷಗಳ ವರೆಗೆ ಅತ್ಯಂತ ಪರಿಶ್ರಮಬಟ್ಟು, ತಮ್ಮ ಪೂರ್ವಜರ ಇತಿಹಾಸವನ್ನು ಟಿಪ್ಪಣಿ ಮಾಡಿ ಇಟ್ಟಿದ್ದರು. ಮಧ್ಯಂತರದಲ್ಲಿಯ ರಾಜಕೀಯ ಆಂದೋಲನದಿಂದಲೂ, ಅರಬ ಸತ್ತಾಧೀಶರ ಉಪಟಳದಿಂದಲೂ ಆ ಟಿಪ್ಪಣಿಯು ಸುರಕ್ಷಿತವಾಗಿ ಉಳಿದು, ಸನ್ ೯೯೪ರಿಂದ ೧೦೩೦ರ ವರೆಗೆ ಆಳಿದ ಗಝ್ನಿ ಮಹಮ್ಮೂದನ ಕಾಲದಲ್ಲಿ ಅದರ ಉದ್ಧಾರವಾಯಿತು. ಮಹಮ್ಮೂದನ ಸತ್ತೆಯು ಇರಾಣದಲ್ಲಿ ಪ್ರಸ್ಥಾಪಿತವಾದ ಮೇಲೆ ಅವನು ತನ್ನ ಬುದ್ಧಿಮತ್ತೆಯಂತೆ ಬೇರೆ ಕೆಲ ಐತಿಹಾಸಿಕ ಸಾಮುಗ್ರಿಯನ್ನು ಆ ಟಿಪ್ಪಣಿಯಲ್ಲಿ ಸೇರಿಸಿ, ಅದೆಲ್ಲದರ ಉಪಯೋಗ ಮಾಡುವ ಮಹತ್ವದ ಕೆಲಸವನ್ನು ಫಿರ್ದೌಸಿಗೆ ಒಪ್ಪಿಸಿದನು. ಫಿರ್ದೌಸಿಯು ಹಳೆಯ ಪರ್ಶಿಯನ್, ಅರಬೀ ಭಾಷೆಗಳಲ್ಲಿ ಅತ್ಯಂತ ನಿಷ್ಣಾತನಿದ್ದು, ಆ ಕಾಲದ ಹೊಸ ಪರ್ಶಿಯನ್ ಭಾಷೆಯಲ್ಲಿ ಸುರಸ ಕಾವ್ಯಲೇಖಕನೆಂದು ಹೆಸರಾಗಿದ್ದನು. ಫಿರ್ದೌಸಿಯು ಮೃತಬಟ್ಟು, ಇಂದಿಗೆ ಸಾವಿರ ವರ್ಷಗಳಾಗಿ ಹೋಗಿದ್ದರೂ ಆ ಮಹಾಕವಿಯ ಕಾವ್ಯಪ್ರತಿಭೆಯ ಮಾಧುರ್ಯವು ಒಂದು ತಿಲಾಂಶದಷ್ಟು ಸಹ ಕಡಿಮೆಯಾಗದೆ ಅವರ ಆದರವು ಒಂದೇಸವನೆ ಬೆಳೆಯುತ್ತಲೇ ಇದೆ.

'ಶಹಾನಾಮಾ' ಕಾವ್ಯವು ಬರೆಯಲ್ಪಟ್ಟ ಮೇಲೆ ಎಂಟುನೂರು ಒಂಬಯ್ನೂರು ವರ್ಷಗಳ ವರೆಗೆ ಅದು ಮೂಲ ಪರ್ಶಿಯನ್ ಭಾಷೆಯಲ್ಲಿ ಕೇವಲ ಹಸ್ತಲಿಖಿತ ಸ್ವರೂಪದಲ್ಲಿಯೇ ಇತ್ತು. ಮುಂದೆ ಸನ್ ೧೮೫೫ರ ನಂತರ ಫ್ರೆಂಚ ಸರಕಾರದ ವಚ್ಚನದಿಂದ ಅದಕ್ಕೆ ಫ್ರೆಂಚ ಭಾಷೆಯಲ್ಲಿ ಟೀಕೆ ಬರೆಯಲ್ಪಟ್ಟಿತು. ಅಂದಿನಿಂದ ಇಂದಿಗೆ ಸುಮಾರು ೧೦೦ ವರ್ಷಗಳ ವರೆಗೆ ಆ ಗ್ರಂಥವು ಬೇರೆ ಬೇರೆ ಭಾಷೆಗಳಲ್ಲಿ ಪರಿವರ್ತಿತವಾಗಿ, ಅದರ ಗುಣಗೌರವವು ಒಂದೇಸವನೆ ಬೆಳೆಯುತ್ತಲೇ ಇದೆ. ಫಿರ್ದೌಸಿಯು ಒಂಬತ್ತು ಸಾವಿರ ಕವಿತೆಗಳ ಬೇರೆ ಒಂದು ಗ್ರಂಥವು ಕೆಲ ಸ್ಫುಟ ಕವಿತೆಗಳೂ ಉಪಲಬ್ಧವಿದ್ದರೂ ವಿಷಯ, ಕಲೆ, ನಿಸ್ತಾರ, ಪರಿಶ್ರಮ ಇವೆಲ್ಲವುಗಳ ಶ್ರೇಷ್ಠತ್ವದಿಂದ 'ಶಹಾನಾಮಾ' ಕಾವ್ಯವೇ ಅವನ ಅತ್ಯಂತ ಚಿರಸ್ಮರಣೀಯವಾದ

ವಿಶೇಷ ಗ್ರಂಥವಾಗಿದೆ. ಇದರಲ್ಲಿ ಅರವತ್ತು ಸಾವಿರ ಪದ್ಯಗಳಿವೆ. ಶಹಾನಾಮಾದ ಸ್ಮರಣವು ಜಗತ್ತಿನಲ್ಲಿ ಉಳಿಯುವ ವರೆಗೆ ಫಿರ್ದೌಸಿಯಂತೆಯೇ ಅವನ ಆಶ್ರಯದಾತನಾದ ಗಝ್ನಿಯ ಮಹಮ್ಮೂದನ ಹೆಸರೂ ಜನರ ಸ್ಮರಣದಿಂದ ಅಳಿಯಲು ಶಕ್ಯವಿಲ್ಲ. ಆದರೆ ಕೊನೆಗೆ ಮಾತ್ರ ಗ್ರಂಥಪೂರ್ತಿಯ ನಂತರ ಲೋಭಿಯಾದ ಭಾಂಡಾರಾಧಿಕಾರಿಯು ಕಿವಿ ಮಾತಿಗೆ ಜೋತು, ಮೊದಲು ಗೊತ್ತಾದ ಮೇರೆಗೆ ಅರವತ್ತು ಸಾವಿರ ಚಿನ್ನದ ಮುದ್ರೆಗಳನ್ನು ಕೊಡುವದರ ಬದಲು ಅರವತ್ತು ಸಾವಿರ ಬೆಳ್ಳಿಯ ಮುದ್ರೆಗಳನ್ನು ಕೊಟ್ಟು, ಮಹಮ್ಮೂದನು ಫಿರ್ದೌಸಿಯ ಸಂಪೂರ್ಣ ಆಶಾಭಂಗವನ್ನು ಮಾಡಿಬಿಟ್ಟನು. ಆ ಕಾಲದಲ್ಲಿ ಫಿರ್ದೌಸಿಯು ಮಹಮ್ಮೂದನ ಕ್ಷುಲ್ಲಕತ್ವದಿಂದ ತಿರುಗಿದ ಅವನ ಬುದ್ಧಿಯ ವಿಷಯಕ್ಕೆ ತೀವ್ರ ಟೀಕೆ ಮಾಡುವದ ಕ್ಕಾಗಿ ಬರೆದ ಕವಿತೆಗಳಿಂದಂತೂ 'ಶಹಾನಾಮಾ' ಹಾಗು ಗಝ್ನಿ ಮಹಮ್ಮೂದ ಇವರ ಸಂಬಂಧಗಳು ಶಾಶ್ವತವಾಗಿ ಅವಿಸ್ಮಾರ್ಯವಾಗಿವೆ. ಸದ್ಯಕ್ಕೆ ಈ ಕವಿತೆಯು 'ಶಹಾನಾಮಾ'ನ ಎಲ್ಲ ಆವೃತ್ತಿಗಳಲ್ಲಿಯೂ ಪ್ರಾಮುಖ್ಯವಾಗಿ ಮುದ್ರಿಸಲ್ಪಟ್ಟಿರುತ್ತದೆ.

ಸುಲತಾನನ ವಚನಭಂಗದಿಂದ ರೊಚ್ಚಿಗೆದ್ದ ವೃದ್ಧ ಫಿರ್ದೌಸಿಯು ತನ್ನೆಡೆಗೆ ಬಂದ ಅರವತ್ತು ಸಾವಿರ ರಜತಮುದ್ರೆಗಳನ್ನು ಒಂದು ಕ್ಷಣದಲ್ಲಿ ಬೀದಿಯೊಳಗೆ ಬಿಸುಟಿ, "ತನಗೆ ಅದರ ಜಿಲೆಯಿಲ್ಲ; ಇಂಥ ಕ್ಷುಲ್ಲ ಪಾರಿತೋಷಕದ ದೆಸೆಯಿಂದ ತಾನು ತನ್ನ ಪ್ರತಿಭೆಯನ್ನು ವೆಚ್ಚಮಾಡಿಲ್ಲ." ಎಂದು ಒಳ್ಳೇ ಯೋಗ್ಯವೂ, ಆವೇಶಯುಕ್ತವೂ ಆದ ಉತ್ತರವನ್ನು ಕಳುಹಿಸಿ, ಒಡನೆಯೇ ಆ ಕೃತಘ್ನ ಸುಲತಾನನ ತ್ಯಾಗ ಮಾಡುವದನ್ನು ನಿಶ್ಚಯಿಸಿ, ಉಟ್ಟ ವಸ್ತ್ರದೊಡನೆಯೇ ಆ ಕವಿಯು ದೇಶತ್ಯಾಗ ಮಾಡಿದನು. ಸುಮಾರು ಇಪ್ಪತ್ತು ದಿವಸಗಳಲ್ಲಿ ತಾನು ಆ ದುಷ್ಟ ರಾಜನ ಕಕ್ಷೆಯಿಂದ ಹೊರಗೆ ಹೋಗಬಹುದೆಂದು ಗೊತ್ತುಮಾಡಿಕೊಂಡು, ಆ ಅವಧಿಯ ನಂತರ ಸುಲತಾನನ ಕೈಯಲ್ಲಿ ಕೆಳಗಿನ ಆಶಯದ ಕವಿತೆ ಬೀಳುವಂತೆ ವ್ಯವಸ್ಥೆ ಮಾಡಿದನು.

"ಮಹಮ್ಮೂದನೇ! ಇಂದು ನೀನು ಭೋಗಿಸುತ್ತಿರುವ ವೈಭವವು ನಿನ್ನ ತಂದೆಯ ದೈವದಲ್ಲಿದ್ದದ್ದಾಗಿದ್ದರೆ ನನ್ನ ಈ ವೃದ್ಧಾವಸ್ಥೆಯಲ್ಲಿ ನನಗೆ ಸುವರ್ಣ ಮುಕುಟವು ದೊರೆಯಬಹುದಾಗಿತ್ತು. ಮಹಮ್ಮೂದ! ನಿನ್ನ ತಾಯಿಯಾದರೂ ಸತ್ಕುಲದಲ್ಲಿ ಜನ್ಮಿಸಿದವಳಾಗಿದ್ದರೆ ನನಗೆ ಮೊಳಕಾಲ ಮುಳುಗುವಷ್ಟು ಬೆಳ್ಳಿಯ ರಾಶಿಯಲ್ಲಿ ನಿಶ್ಚಯವಾಗಿ ನಿಂತುಕೊಳ್ಳಲಿಕ್ಕೆ ಸಿಗಬಹುದಾಗಿತ್ತು."

ಮೇಲಿನ ಕವಿತೆಯಿಂದ ಸಂತಪ್ತನಾದ ಮಹಮ್ಮೂದನ ಕೈಯೊಳಗಿಂದ ಫಿರ್ದೌಸಿಯು ಪಾರಾದದ್ದೇನೋ ನಿಜ. ಆದರೆ ಆ ಮಹಾಕವಿಯು ದೈವದಲ್ಲಿ

ಸುಖವೇ ಬರೆದಿದ್ದಿಲ್ಲ. ಮಹಮ್ಮೂದನಿಗೆ ಪಶ್ಚಾತ್ತಾಪವಾಗಿ ಅವನಿಗೆ ಸದ್ಬುದ್ಧಿಯು ಬಹಳ ತಡವಾಗಿ ಪ್ರಾಪ್ತವಾದಮೂಲಕ ಅದರ ಲಾಭವು ಫಿದೌಸಿಗೆ ಸಿಗಲಿಲ್ಲ. ಇಷ್ಟೇ ಅಲ್ಲ, ಅವನ ಪ್ರೇತಕ್ಕೆ ಸಹ ತಕ್ಕ ಯೋಗ್ಯತೆಯಂತೆ ಸುಖದ ವಿಶ್ರಾಂತಿ ಸ್ಥಾನವು ಸುಲಭವಾಗಿ ದೊರೆಯಲಿಲ್ಲ. ಆದರೆ ಈಗ ಸಾವಿರ ವರ್ಷದ ನಂತರ ಅವನ ದೇಶಬಾಂಧವರು ಅತ್ಯಂತ ಭಕ್ತಿಯಿಂದ ಆ ಕವಿಯ ಗುಣಗೌರವ ಮಾಡಹತ್ತಿರುವದು ವಿಶೇಷ ಸಮಾಧಾನದ ಸಂಗತಿಯಾಗಿದೆ. ಫಿದೌಸಿಯ ಹೆಸರಿನ ಸುತ್ತಲು ಅನೇಕ ದಂತಕಥೆಗಳ ಸುಳಿದಾಟವಿದೆ. ಆದರೆ ಅವೆಲ್ಲವುಗಳಲ್ಲಿಯೂ ಅವನ ಪ್ರತಿಭಾಶಾಲಿಯಾದ ಕಾವ್ಯಶಕ್ತಿ, ವಿದ್ವತ್ತೆ, ಮಹಾಖಂಡಕಾವ್ಯನಿರ್ಮಾಣ ಮಾಡುವ ಅಸಾಮಾನ್ಯ ಸಾಮರ್ಥ್ಯ ಈ ಗುಣಗಳು ತಪ್ಪದೆ ದೃಗ್ಗೋಚರವಾಗುತ್ತಿದ್ದು, ಜಗತ್ತಿನಲ್ಲಿಯ ಮಹಾಕವಿಗಳೊಳಗಿನ ಅವನ ಸ್ಥಾನವು ಶಾಶ್ವತವಾಗಿ ಉಳಿಯಬಹುದೆಂಬದರಲ್ಲಿ ಯಾವ ಸಂದೇಹವೂ ಇಲ್ಲ. *

ಚಂದ್ರ

ಲೇಖಕರು:—ಅಂಬಿಕಾದತ್ತ ಉಪಾಧ್ಯಾಯ ಎಮ್. ಎ., ಇವರ ಲೇಖದ ಅನುವಾದ
ಎಂ. ಆರ್. ವ್ಹಿ. ಬೆಟಗೇರಿ ಶಾ. ಮಾ. ಅಮರಗೋಳ.

ಚಂದ್ರನು ನಮ್ಮಿಂದ ೨,೧೭,೫೦೦ ಮೈಲು ದೂರದಲ್ಲಿರುವನು. ಇಷ್ಟು ದೂರದಲ್ಲಿದ್ದುಕೊಂಡು, ಅವನು ನಮಗೆ ಪ್ರಕಾಶಮಾನನಾಗಿ ಕಂಡರೂ, ಆ ಪ್ರಕಾಶವು ಅವನ ಸ್ವಂತದ್ದಲ್ಲ; ಅವನು ಪರಪ್ರಕಾಶಕನು. ತಾನು ಸೂರ್ಯನಿಂದ ಪ್ರಕಾಶವನ್ನು ತೆಗೆದುಕೊಂಡು ನಮಗೆ ಪ್ರಕಾಶವನ್ನು ಕೊಡುತ್ತಿರುವನು. ಶಾಸ್ತ್ರಜ್ಞರು ದುರ್ಬೀನಿಯ ಸಹಾಯದಿಂದ ಚಂದ್ರಲೋಕದ ಬಗ್ಗೆ ಯಾವತ್ತು ಸಂಗತಿಗಳನ್ನು ಅವಗತ ಮಾಡಿಕೊಂಡಿರುವರು.

ಇವನ ವ್ಯಾಸವು ಸುಮಾರು ೨೧೬೦ ಮೈಲುಗಳು. ಮತ್ತು ಅವನ ತೂಕವು ೨೧೬೦೦ ಪರಾರ್ಧ ಮಣಗಳು. ಇವನು ತನ್ನ ಕಕ್ಷೆಗುಂಟ ಪೃಥ್ವಿಯ ಸುತ್ತಲೂ ತಿರುಗುವಾಗ, ಅವನ ಒಂದು ಕಡೆಯ ಭಾಗವು ಮಾತ್ರ ನಮಗೆ ಯಾವಾಗಲೂ

---

* ಒಂದು ಮಹಾರಾಷ್ಟ್ರ ಭಾಷೆಯ ಲೇಖನದ ಆಧಾರದಿಂದ ಬರೆದದ್ದು.

ಕಾಣುತ್ತಿರುವದು. ಆದರೆ ಅವನ ಎರಡನೆಯ ಮಗ್ಗುಲಿಗಿರುವ ಭಾಗದಬಗ್ಗೆ, ಯಾವ ನಿಶ್ಚಿತ ಸಂಗತಿಗಳೂ ತಿಳಿದುಬಂದಿಲ್ಲ. ನಮಗೆ ಕಾಣುವ ಭಾಗದಲ್ಲಿ ಏರಿಳಿತ ಗಳು ಬಹಳವಾಗಿವೆ. ಮತ್ತು ಪರ್ವತ ಶ್ರೇಣಿಗಳುಂಟು. ಅವುಗಳಲ್ಲಿಯ ಒಂದೊಂದು ಪರ್ವತವು ೫೦೦ ಮೈಲುಗಳವರೆಗೆ ಉದ್ದವಾಗಿರುವದು. ಮತ್ತು ಜ್ವಾಲಾಮುಖಿ ಪರ್ವತಗಳೂ ಅಸಂಖ್ಯವಾಗಿರುವವಲ್ಲದೆ, ಅವು ಬಹಳ ಉನ್ನತವಾಗಿಯೂ ಇರುವವು. ಅವುಗಳಲ್ಲಿಯ ಕೆಲವುಗಳ ಎತ್ತರವು ೨೪೦೦೦ ಫೂ. ಇರುವದು. ಚಂದ್ರನಮೇಲೆ ಕಾಣುವ ಕಪ್ಪು ಕಲೆಗಳು, ಅಲ್ಲಿರುವ ಬೈಲುಪ್ರದೇಶಗಳು. ಆದರೆ ಅವು ಭೂಲೋಕ ದಲ್ಲಿಯ ಹಚ್ಚನ್ನ ಹುಲ್ಲು ಬೆಳೆಯುವ ಬೈಲುಗಳಿಗೆ ಸಮಾನವಾಗಿಲ್ಲ. ಅಲ್ಲಿ ಯಾವ ಹುಲ್ಲಿನ ಹೆಸರು ಕೂಡ ಇಲ್ಲ. ಅಲ್ಲಿಯ ಎಲ್ಲಕ್ಕೂ ದೊಡ್ಡ ಬೈಲು ೭೦೦ ಮೈಲು ಉದ್ದವಾಗಿರುವದು.

ಚಂದ್ರಲೋಕದಲ್ಲಿ ಸಮುದ್ರ, ನದಿ ಮೊದಲಾದವುಗಳು ಇರುವದಂತೂ ಒತ್ತಟ್ಟಿಗಿರಲಿ. ಒಂದು ಹನಿ ನೀರು ಕೂಡ ಕಾಣುವದು ದುರ್ಲಭವು. ಮೋಡ ಗಳಂತೂ ಇಲ್ಲವೇ ಇಲ್ಲ. ಅಂದಮೇಲೆ ಅಲ್ಲಿ ನೀರಾದರೂ ಎಲ್ಲಿಂದ ಬರಬೇಕು ? ಆದ್ದರಿಂದ ಅಲ್ಲಿ ಮನುಷ್ಯಪ್ರಾಣಿಗಳಾಗಲಿ, ಪಶು-ಪಕ್ಷಿಗಳಾಗಲಿ, ಕ್ರಿಮಿ-ಕೀಟಕ ಗಳಾಗಲಿ ಯಾವವೂ ಇಲ್ಲ. ಎಲ್ಲ ಕಡೆಗೂ ಬರಿದೇ ಇರುವದು.

ನಮ್ಮಲ್ಲಿ ಹನ್ನೆರಡು ತಾಸು ಹಗಲು, ಹಾಗು ಹನ್ನೆರಡು ತಾಸು ರಾತ್ರಿ ಇರು ವಂತೆ, ಇಲ್ಲಿಯ ದಿನಮಾನವಿಲ್ಲ. ಮತ್ತು ನಮ್ಮಲ್ಲಿ ಹಗಲು-ರಾತ್ರಿಗಳಾಗುವಾಗ ಒಂದೊಂದು ತಾಸು ಸಂಧಿಪ್ರಕಾಶವಿರುವಂತೆ, ಇಲ್ಲಿ ಹಗಲು ಮುಗಿದು ರಾತ್ರಿ ಯಾಗುವಾಗಲೂ, ರಾತ್ರಿಯು ಹೋಗಿ ಹಗಲು ಆಗುವಾಗಲೂ ಸಂಧಿಪ್ರಕಾಶ ವಿರುವದಿಲ್ಲ. ಇಲ್ಲಿಯ ಹಗಲು-ರಾತ್ರಿಗಳು ಪ್ರತಿಯೊಂದು ೩೫೪ ತಾಸುಗಳ ವಿರುವವು. ಎಲೆಕ್ಟ್ರಿಕ್ (ವಿದ್ಯುತ್) ದೀಪದ ಒಂದು ಬಿರಡಿಯನ್ನು ಒತ್ತಿದಕೂಡಲೆ, ಹೇಗೆ ಕತ್ತಲೆಯು ಇಲ್ಲದಂತಾಗಿ ಒಮ್ಮೆಲೆ ಪ್ರಕಾಶವು ಬೀಳುವದೋ, ಹಾಗೆಯೇ ಚಂದ್ರಲೋಕದಲ್ಲಿ ಒಮ್ಮೆಲೆ ಕತ್ತಲೆಯು ಇಲ್ಲದಂತಾಗಿ ಪ್ರಕಾಶವೂ (ಹಗಲೂ) ಪ್ರಕಾಶವು ಇಲ್ಲದಂತಾಗಿ ಕತ್ತಲೆಯೂ (ರಾತ್ರಿಯೂ) ಉಂಟಾಗುವವು. ಅಂದರೆ ಅಲ್ಲಿಯ ಹಗಲು-ರಾತ್ರಿಗಳ ನಡುವೆ ೧ ನಿಮಿಷದ ಅಂತರವು ಕೂಡ ಇರುವದಿಲ್ಲ. ಮತ್ತು ಇಲ್ಲಿಯ ಉಷ್ಣತೆ ಹಾಗೂ ಚಳಿಗಳ ಕ್ರಮವಾದರೂ ಇದೇ ಪ್ರಕಾರವಾಗಿರು ವದು.

ಮಂಗಳ

ಇದಾದರೂ ಉಳಿದ ಗ್ರಹಗಳಂತೆ, ಸೂರ್ಯನ ಸುತ್ತಲೂ ತಿರುಗುತ್ತಿರುವದು,

ಇದು ಒಮ್ಮೊಮ್ಮೆ ಪೃಥ್ವಿಯ ಸಮೀಪಕ್ಕೆ ಅಂದರೆ ೩೪ ಕೋ. ೬೦ ಲಕ್ಷ ಮೈಲು ಗಳ ಮೇಲೆಯೂ, ಒಮ್ಮೊಮ್ಮೆ ಪೃಥ್ವಿಯಿಂದ ದೂರವಾಗಿ ೨೪೬ ಕೋಟಿ ಮೈಲು ಗಳ ಮೇಲೆಯೂ ಇರುವದು. ಇದರ ವ್ಯಾಸವು ೪೨೧೫ ಮೈಲು ಇರುವದು. ಮತ್ತು ಇದರ ತೂಕವು ೧೯೫೭೫ ಪರಾರ್ಧ ಮಣವಿರುವದು. ಇದು ೬೮೬ ದಿವಸ ಗಳಲ್ಲಿ ಸೂರ್ಯನ ಸುತ್ತಲೂ ಒಂದು ಪ್ರದಕ್ಷಿಣೆಯನ್ನು ಮಾಡುವದು.

ಈ ಲೋಕದಲ್ಲಿ ವಾಯುವು ಬಹಳ ವಿರಲವಾಗಿರುವದು. ಮತ್ತು ನಮ್ಮಲ್ಲಿ ಯಂತೆ ಇಲ್ಲಿಯೂ ಋತುಮಾನಗಳಾಗುವವು. ಆದರೆ ಇಲ್ಲಿ ಒಂದು ಋತುವು ಹೋಗಿ, ಎರಡನೆಯ ಋತುವು ಪ್ರಾರಂಭವಾದರೂ ಕೂಡ, ಮೊದಲಿನ ಋತುವಿನ ಅಸ್ತಿತ್ವವು ಎಷ್ಟೋ ದಿವಸಗಳವರೆಗೆ ಗೋಚರವಾಗುತ್ತಲೇ ಇರುವದು.

ಪ್ರಾಣಿಗಳ ನಿರ್ವಾಹಕ್ಕೆ ಅವಶ್ಯವಾಗಿ ಬೇಕಾಗುವ ಪದಾರ್ಥಗಳು ಇಲ್ಲಿ ಇರು ತ್ತಿದ್ದರೂ, ಪ್ರಾಣಿಗಳ ಅಸ್ತಿತ್ವವು ಮಾತ್ರ ಇಲ್ಲಿ ಕಂಡು ಬರುವದಿಲ್ಲವೆಂದೂ, ಒಂದು ಪ್ರಾಣಿಯು ಕೂಡ ದೃಷ್ಟಿಗೋಚರವಾಗುವದು ಅಸಂಭವವಾಗಿರುವದೆಂದೂ, ಶೋಧ ಕರು ಶೋಧಮಾಡಿಟ್ಟಿದ್ದಾರೆ.

ಬುಧ

ಇದೂ ಒಂದು ಗ್ರಹವು. ಸೂರ್ಯನ ಸುತ್ತಲೂ ತಿರುಗುವಂಥದು. ಇದು ಒಮ್ಮೊಮ್ಮೆ ಪೃಥ್ವಿಗೆ ಸಮೀಪವಾಗಿ ಅಂದರೆ, ೫ ಕೋಟಿ ಮೈಲುಗಳ ಮೇಲೆಯೂ, ದೂರವೆಂದರೆ ೧೩ ಕೋಟಿ ೬೦ ಲಕ್ಷ ಮೈಲುಗಳ ಮೇಲೆಯೂ ಇರುವದು. ಇವನ ವ್ಯಾಸವು ೩೧೦೦ ಮೈಲು ಹಾಗೂ ಇವನ ಭಾರವು ೭೧೦೦ ಪರಾರ್ಧ ಮಣಗಳು.

ಇವನು ಸೂರ್ಯನ ಸುತ್ತಲೂ ತಿರುಗುವಾಗ ಇವನ ಒಂದು ಮಗ್ಗಲು ಯಾವಾಗಲೂ ಸೂರ್ಯನಿಗೆ ಇದಿರಾಗಿ ಬೆಳಕೂ ಮತ್ತೊಂದು ಮಗ್ಗಲು ಕತ್ತಲೂ ಇರುವದು. ಇವನು ಉಳಿದ ಎಲ್ಲ ಗ್ರಹಗಳಿಗಿಂತ ಸೂರ್ಯನಿಗೆ ತೀರ ಸಮೀಪವಾಗಿ ಅಂದರೆ ೩೬ ಕೋಟಿ ೬೦ ಲಕ್ಷ ಮೈಲುಗಳ ಮೇಲಿರುವನು. ಪೃಥ್ವಿಯು ಸೂರ್ಯನಿಂದ ೯ ಕೋಟಿ ೩೦ ಲಕ್ಷ ಮೈಲು ಇರುವದೆಂದು ಈ ಮೊದಲೇ ಹೇಳಿದೆ. ಆದ್ದರಿಂದ ಪೃಥ್ವಿಯ ೭ ಪಟ್ಟು ಪ್ರಕಾಶ ಹಾಗೂ ಉಷ್ಣತೆ ಗಳು ಸೂರ್ಯನಿಂದ ಇವನಿಗೆ ದೊರಕುವವು. ಆದಕಾರಣ ಇವನ ಮೇಲಿನ ಉಷ್ಣ ತೆಯು ೩೪೦೦ ಸೇಂಟಿಗ್ರೇಡಗಳವರೆಗೆ ಇರುವದು.

ಇಲ್ಲಿ ಹವೆಯಿರದ್ದರಿಂದ ನೀರೂ ಇಲ್ಲ. ಆದ್ದರಿಂದ ಯಾವತರವ ಪ್ರಾಣಿ ಗಳೂ ಇಲ್ಲಿ ಬದುಕಿರಲಾರವು. ಆದರೆ ಇಲ್ಲಿ ಕಲ್ಲಿನ ಥರಗಳು ದೃಷ್ಟಿಗೋಚರವಾಗು

ತ್ತವೆ. ಆದರೆ ಯಾವದೇತರವ ಏಲಿ-ಹೂ-ಕಾಯಿಗಳು ದೃಷ್ಟಿಗೆ ಬೀಳುವದಿಲ್ಲ. ಇನ್ನು ಇವನ ಎರಡನೆಯ ಭಾಗವು ಕತ್ತಲೆಯಲ್ಲಿರುವದರಿಂದ, ಬಹಳ ಶೀತವಾಗಿರುವದು. ಆದ್ದರಿಂದ ಅಲ್ಲಿ ಜೀವವುಳ್ಳ ಪ್ರಾಣಿಗಳು ಇರುವದು ಅಶಕ್ಯವು.

ಗುರು

ಗುರುವು ಒಂದು ಗ್ರಹವು. ಸೂರ್ಯನ ಸುತ್ತಲೂ ತಿರುಗುವದು. ಅದು ತನ್ನ ಕಕ್ಷೆಗುಂಟೆ ತಿರುಗುತ್ತ ಭೂಮಿಯ ಸಮೀಪಕ್ಕೆ ಬಂದಾಗ ೩೬೭ ಕೋಟಿ ಮೈಲುಗಳ ಮೇಲೆಯೂ ದೂರಹೋದಾಗ ೬೦೦ ಕೋಟಿ ಮೈಲುಗಳ ಮೇಲೆಯೂ ಇರುವದು. ಎಲ್ಲ ಗ್ರಹಗಳಲ್ಲಿ ಇದು ದೊಡ್ಡದು. ಆದ್ದರಿಂದಲೇ ಭಾರತೀಯ ಜ್ಯೋತಿರ್ವಿದರು ಇದಕ್ಕೆ 'ಗುರು' ಎಂಬ ಅನ್ವರ್ಥಕವಾದ ಹೆಸರನ್ನು ಕೊಟ್ಟಿರುವರು. ಮತ್ತು ಪುರಾಣಿಕರಾದರೂ ಇವನನ್ನು ಎಲ್ಲ ದೇವತೆಗಳ ಒಡೆಯನನ್ನಾಗಿ ಮಾಡಿರುವರು. ಇವನ ವ್ಯಾಸವು ೮೬೬೪೦ ಮೈಲುಗಳು. ಇವನು ಪೃಥ್ವಿಯ ೧೪೦೦ ಪಟ್ಟು ದೊಡ್ಡವನು. ಅವನು ಬಹಳ ದೂರವಾಗಿರುವದರಿಂದ ನಮಗೆ ಸಣ್ಣವನಾಗಿ ಕಾಣುವನು. ಇವನ ತೂಕವು ೨೪೪ ಕೋಟಿ ಪರಾರ್ಧ (೨೪೪ ಪರಾರ್ಧ ಮುಂದೆ ೨೪ ಪೂಜೆಗಳು) ಮಣವು ಇರುತ್ತದೆ. ಇವನು ೧೨ ವರ್ಷಗಳಲ್ಲಿ ಸೂರ್ಯನ ಸುತ್ತಲೂ ಒಂದು ಪ್ರದಕ್ಷಿಣೆಯನ್ನು ಮಾಡುವನು.

ಈ ಗ್ರಹದಮೇಲೆ ಅತಿ ಸೂಕ್ಷ್ಮವಾದ ವಾತಾವರಣವುಂಟೆಂತಲೂ, ಒಮ್ಮೊಮ್ಮೆ ಮೋಡಗಳು ಕಾಣುತ್ತವೆಂತಲೂ, ಶೋಧಿಸಿದ್ದಾರೆ. ಪೂರ್ವಕಾಲದಲ್ಲಿಯ ಜ್ಯೋತಿಃಶಾಸ್ತ್ರಜ್ಞರು ಈ ಗ್ರಹದಲ್ಲಿರುವ ಉಷ್ಣತೆಯು ಪೃಥ್ವಿಯದೆಂತಲೂ, ಅಲ್ಲಿಯ ಮೋಡಗಳು ಉಗಿಯ ರೂಪದಲ್ಲಿಯೇ ಇರುತ್ತವೆಂತಲೂ ತಿಳಿದುಕೊಂಡಿದ್ದರು. ಆದರೆ ಅಧುನಿಕ ಜ್ಯೋತಿಃಶಾಸ್ತ್ರಜ್ಞರು ಈ ಗ್ರಹದಲ್ಲಿರುವ ಉಷ್ಣತೆಯು ಅದಕ್ಕೆ ಸೂರ್ಯನಿಂದ ದೊರೆಯುತ್ತದೆಂತಲೂ, ಅಲ್ಲಿಯ ಮೋಡಗಳು ಕೇವಲ ಉಗಿಯರೂಪದಲ್ಲಿಯೇ ಇಲ್ಲವೆಂತಲೂ ತರ್ಕಮಾಡಿದ್ದಾರೆ.

ಪ್ರಕಟನೆ

ಮಂಜೂರಾದ ಪುಸ್ತಕಗಳು.

ಪ್ರೀ. ಸಂ=ಪ್ರೀನಿಂಗ ಸಂಸ್ಥೆಗಳು; ಶಾ=ಶಾಲೆ; ಪ್ರಾ=ಪ್ರಾಥಮಿಕ; ಮಾ=ಮಧ್ಯಮಿಕ; L.=ಲಾಯಬ್ರರಿ; T. ಟೆಕ್ಸ್ಟ ಬುಕ್ಸು. ವಿ.=ವಿದ್ಯಾರ್ಥಿಗಳ; ಶಿ=ಶಿಕ್ಷಕರ.

ಸಂ.	ಪುಸ್ತಕದ ಹೆಸರು	ಗ್ರಂಥಕರ್ತರ ಹೆಸರು	ಪ್ರಕಾಶಕರ ಹೆಸರು.	ಬೆಲೆ.	ಯಾತಕ್ಕೋಸ್ಕರ ಮಂಜೂರ	ಡಾ. ಸಾಹೇಬರ ಹಾಗೂ ಎ ಇ. ದ. ಭಾ. ಇವರ ಮಂಜೂರ ನಂ. ಹಾಗೂ ತಾರೀಖು
೧	ಯಜ್ಞಕುಂಡ ೧೯೨೨	ಕ. ಶಂಕರಭಟ್ಟ	ಬಾಲ ಸಾಹಿತ್ಯಮುಂಡಲ ಮಂಗಳೂರು	೧–೪–೦	ಪ್ರೀ. ಸಂ. ವಿ. L. ಪ್ರಾ.ಶಾ. ಶಿ. L. ಹಾಗು ಮಾ. ಶಾ.ವಿ.L.	S. 86 (c) 527–C/ 23 8·34 4161/ 4–10–34
೨	ಶ್ರೀಕೃಷ್ಣ ಸಂಧಾನ ೧೯೩೧	ಕೆ. ಬಿ. ರಾಮಕೃಷ್ಣ	ಸದರ	೦–೪–೦	ಪ್ರಾ.ಶಾ.ವಿ.L.ಹಾಗು ಮಾ.ಶಾ.ವಿ.L. ಸದರ	S.86(C)531-C/23-8-34 4163/4–10–34
೩	ಒಂದನೆ ಎರಡನೆ ದರ್ಜೀ ಕಥೆಗಳು ಭಾ.೧ ೧೯೩೫	...	ಸದರ	೦–೪–೦		S. 86 (c) 532 C/ 23–8–34 4165/. 4–10–34
೪	ವಿಗಡ ವಿಕ್ರಮರಾಯ ೧೯೩೩	ಸಂಸ	ಬಿ. ಕೃಷ್ಣ ಅಯ್ಯಂಗಾರ ಬೆಂಗಳೂರು	೦.೧೨.೦	ಪ್ರೀ. ಸಂ. ವಿ. L. ಹಾಗು ಮಾ. ಶಾ. ವಿ. L.	S. 86 (c) 511 C/ 3–8–34 4167/. 4–10–34
೫	ಬಾಲಪದ್ಯಾವಳಿ	ಮ. ಶಂಕರ ನಾರಾಯಣರಾವ	ಹರಿ ಹರ ಪ್ರೆಸ ಪುತ್ತೂರು	೦–೨–೦	ಪ್ರಾ. ಶಾ. ವಿ. L.	S. 86 (c) 514·C/ 12–10–34
೬	ಕೋಟಿ ಚೆನ್ನಯು ೧೯೩೦	ಪಿ. ಮಂಗೇಶರಾವ	ಬಾಲನಾಹಿತ್ಯ ಮುಂಡಲ ಮಂಗಳೂರ	೦–೬–೦	ಪ್ರಾ ಶಾ ಟ್ರೀ.ಸಂ.ವಿ.L ಮತ್ತು ಮಾ. ಶಾ. ವಿ. L	S. 86 (c) 554-C– 22–10–34 4732 5–11–34

೭	ಸೀತಾರಾಮ ೧೯೩೨	ಎಮ್.ಎನ್. ಕಾಮತ	ಸದರ	೦–೬–೦	ಸದರ	S. 86 (c) 553 C 22-10-34 4728 5-11-34
೮	ಯಾದವಕೃಷ್ಣ ೧೯೩೧	ಸದರ	ಸದರ	೦–೬–೦	ಸದರ	S. 86 (c) 552 C 22-10-34 4728 5-11-34
೯	ಚಂದ್ರಗುಪ್ತ ೧೯೩೨	ಆರ.ಪ್ಹಿ. ಹಿರೇಕೇರೂರ	ಆರ್. ಪ್ಹಿ. ಹಿರೇಕೇರೂರ ಲೈನಬಝಾರ ಧಾರವಾಡ	೧–೪–೦	ಸದರ	S. 86 c 551 C 22-10-34 4754 5-11-34
೧೦	ಪಶ್ಚಾತ್ತಾಪ ೧೯೩೪	ಎಮ್. ತಿಮ್ಮಪ್ಪಯ್ಯ	ಎಂ. ತಿಮ್ಮಪ್ಪಯ್ಯ ವಿದ್ವಾನ್ ಕೊಡಿಯಾಲ್‌ಬೈಲ ಮಂಗಳೂರ	೦.೧೪. ೦	ಸದರ	S. 86 c 548 C 23-10-34 4740 5-11-34
೧೧	ಬಾಲಾದಿತ್ಯ ೧೯೩೪	ಪಿ. ರಾಮಕೃಷ್ಣರಾವ	ಪಿ. ರಾಮಕೃಷ್ಣರಾವ ಜೋರ್ಡ ಹೈಸ್ಕೂಲ ಕಾಸರಗೋಡ	೦.೧೪. ೦	ಸದರ	S. 86 c 547 C 23-10-34 4736 5-11-34
೧೨	ಮಹಾತ್ಮಾಗಾಂಧಿಯವರ ನೀತಿಧರ್ಮ ೧೯೩೩	ಪ್ಹಿ. ಬಿ. ಜೋಸಿ	ಪ್ಹಿ. ಬಿ. ಜೋಶಿ ಗುಲಗಂಜಿಕೊಪ್ಪ ಧಾರವಾಡ	೦–೪–೦	ಸದರ	S. 86 c 543 C 23-10-34 4742 5-11-34
೧೩	ಅದ್ಭುತ ಪ್ರೇಮ ತಿನೆತಿ. ೧೯೩೪	ಜಿ.ಎಚ್. ಹೊನ್ನಾಪುರ ಮಠ	ಮ್ಯಾನೇಜರ ಚಂದ್ರೋದಯ ಪ್ರೆಸ್ ಧಾರವಾಡ	೦.೧೨. ೦	ಸದರ	S. 86 c 539 C 23-10-34 4734 5-11-34
೧೪	ಹಿಂದುಸ್ತಾನದ ಪ್ರಾಚೀನ ಇತಿಹಾಸ ೧೯೩೩	ಎಸ್. ಪ್ಹಿ. ಪೊಡಕ	ಆರ್. ಆರ್. ಕಮಲಾಪೂರ ಗದಗ	೦–೬–೦	ಪ್ರಾ. ಶಾ. ಮೂ. ಶಾ. T	S. 86 c 540 C 23-10-34

ಸಂ	ಪುಸ್ತಕದ ಹೆಸರು	ಗ್ರಂಥಕರ್ತರ ಹೆಸರು	ಪ್ರಕಾಶಕರ ಹೆಸರು	ಬೆಲೆ	ಯಾತಕ್ಕೋಸ್ಕರ ಮಂಜೂರು	ಡಾ. ಸಾ. ರ ಹಾಗು ಎ.ಇ. ದ. ಭಾ. ಇವರ ಮಂಜೂರು ನಂ. ಹಾಗು ತಾರೀಖು
೧೫	ಸರ್ವಜ್ಞನ ಸಂದೇಶ ೧೯೩೪	ಎಮ್. ಎಸ್. ದೇಶಪಾಂಡೆ	ಮನೋಹರ ದೇಶಪಾಂಡೆ ಅಥಣಿ	೦-೧೦-೦	ಮಾ. ಶಾ. T	S. 86 c 543 C 25-11-34
೧೬	ಕಾವ್ಯ ಸಾಮ್ರಾಜ್ಯ ೧೯೩೪	...	ಸೆಕ್ರೆಟರಿ ಕಿರಿಯರ ಪ್ರಪಂಚ ಉಡುಪಿ	೦-೧೨-೦	ಸದರ	S. 86 c 544 C 25-10-34
೧೭	ಶಿಶುಪಾಲವಧ ಸತ್ಪ ೧೯೩೩	ಬಿ. ಎಮ್. ಕೊಡಿಕೊಪ್ಪ ಮಠ	ಬಿ. ಎಮ್. ಕೊಡಿಕೊಪ್ಪ ಮಠ ಶ್ರೀ ಶಿದ್ಧೇಶ್ವರ ಹೈಸ್ಕೂಲ ವಿಜಾಪುರ	೦-೧೨-೦	ಸದರ	S. 86 c 542 C 25-10-34
೧೮	ಹೊಸಗನ್ನಡ ಗದ್ಯ ರತ್ನ ೧೯೩೪	ಆರ್. ವ್ಹಿ. ಹಿರೇಕೇರೂರ, ಬಿ.ಎ.	ಆರ್. ವ್ಹಿ. ಹಿರೇಕೇರೂರ ಬಿ.ಎ. ಲೈನ ಬಝಾರ ಧಾರವಾಡ	೦-೧೨-೦	ಟ್ರೇ. ಸಂ. ವಿ. L ಹಾಗೂ ಮಾ. ಶಾ. ವಿ. L	S. 86 c 550 C 22-10-34 4752 5-11-34
೧೯	ಇಂಗ್ಲಂಡದ ಇತಿಹಾಸವು ೧೫೫೪ ಆ. ಭಾಗ ೧	ಸದರ	ಸದರ	೦ ೧೨-೦	ಮಾ. ಶಾ. ವಿ. L	S. 86 c 549 C 23-10-34
೨೦	ಸದರ ಭಾಗ ೨	ಸದರ	ಸದರ	೧-೦-೦	ಸದರ	S. 86 c 549 C 23-10-34
೨೧	ಗಾರ್ಡನಿಂಗ ಆ್ಯಂಡ ನೇಚರ ಸ್ಟಡಿ ಟ್ರೇ. ಸ್ಕೂಲ್ಸ	ಸದರ	ಬಾ.ಮಿಷನ್ ಬುಕ್ ಡಿಪೋ ಮಂಗಳೂರ	೦-೧೨-೦	ಪ್ರಾ. ಶಾ. ಹಾಗು ಮಾ. ಶಾ. ಶಿ. L. ಟ್ರೇ. ಸ. T.	S. 86 c 541 C 23-10-34 4794 5-11-34

ಪ್ರೌಢಶಿಕ್ಷಣ ಇಲಾಖೆ

ಪತ್ರಗಳ ಸಾರಾಂಶ

ಹೆ. ಮಾಸ್ತರ ಕ. ಗಂ. ಹು. ಶಾಳಾ ಹೆಗಡೆ ಜಿ. ಕಾರವಾರ ಇವರು ಬರೆದು ಕಳಿಸಿದ್ದು.

೧. ಈ ವರ್ಷ ಈ ಜಿಲ್ಲೆಯ ವ್ಹ. ಫಾ. ಪ. ಗೆ ಕೂತ ಅಖಿಲ ಜನ ಉಮೇದವಾರರಲ್ಲಿ ೬೦ ಜನ ಉಮೇದವಾರರು ಪಾಸಾಗಿದ್ದು ಅವರಲ್ಲಿ ೧೦ ಜನ ನಮ್ಮ ಶಾ. ಯಿಂದ ಕೂತ ಉಮೇದವಾರರಲ್ಲಿ ೯ ಉಮೇದವಾರರು ಪಾಸಾದವರು ಇದ್ದಾರೆ. ಹಾಗು ಅವರು ಒಂದೇ ವರ್ಷ ಕಲಿತು ಮೊದಲನೆ ಸಾರೆಗೇ ಪಾಸಾಗಿದ್ದಾರೆ.

ಈ ಶಾಲೆಗೆ ಹರಿಜನ ಕ್ಲಾಸಿನ ತೀರ ಬಡತನದ ಮುಕ್ರೀ ಜಾತಿಯ ೩೦ ಹುಡುಗರು ಬರುತ್ತಿದ್ದು ಅವರ ಪಾಟ ಪುಸ್ತಕ ಉಡುತೊಡಿಗೆಗಳ ಸ್ವಚ್ಛತೆ ಮೊದ ಲಾದವುಗಳ ದೆಸೆಯಿಂದ ಕೆಳಗೆ ವಿವರಿಸಿದ ಮಹನೀಯರು ದ್ರವ್ಯ ಸಹಾಯ ಮಾಡಿದ್ದಾರೆ. ವಿವರ—

೪೫ ವಾರ ಅರಿವೆ ಬೆಲೆ

೩–೭–೦ ಮೆ. ವ್ಹಿ. ಎಸ್. ಕೊಯಿಮತ್ತೂರ ಡಿ. ಡಿ. ಕಲೆಕ್ಟರ ಸಿಸಿ ಡಿವ್ಹಿಜನ್

೫–೦–೦ ಮೆ. ಎಮ್. ಡಿ. ಕರ್ಕ ಚೇರಮನ್ ಡಿ. ಸ್ಕೂ. ಬೋ. ಕಾನಡಾ

೨–೦–೦ ,, ವ್ಹಿ. ಎಸ್. ಹಬ್ಬು ಡಿ. ಅ. ಓವ್ಹರಸೀಯರ ಕಾನಡಾ

೨–೦–೦ ,, ಜಿ. ಕೆ. ಹೆಗಡೆ ಟಿ. ಎಲ್. ಬಿ. ಮೆಂಬರ ಮತ್ತು ಡಿ. ಅ. ಅರ್ಗನಾಯಿಝರ ಸಿ. ಎಸ್. ಹೆಗಡೆ

೧–೦–೦ ಎಮ್. ಆರ್. ಹೆಗಡೆ ಕಟ್ಟಿ ಟಿ. ಎಲ್. ಬಿ. ಮೆಂಬರ

೧–೦–೦ ಶ್ರೀ. ಎಸ್. ಎ. ಪಂಡಿತ ಮೇಲಿನಕೇರಿ

೨–೨–೦ ಚಿಲ್ಲರ ಬಂದ ವರ್ಗಣಿ

೨–೦–೦ ಮೆ. ಆರ್. ಎಮ್. ಹೆಗಡೆ ಕಟ್ಟಿ ಸುಪರಿಂಡೆಂಟ ಅ. ಫಾರ್ಮ, ಕುಮಟಾ

೨–೦–೦ ಶ್ರೀ. ಎಮ್. ಆರ್. ಚಟ್ಟಿ. ಕಪ್ಪೆ, ಹೆಗಡೆ

೧–೦–೦ ಎಸ್. ಬಿ. ಶಾನಭಾಗ ಪೋಲೀಸ ಪಾಟೀಲ ಹೆಗಡೆ

Reg. No. B. 2567

೨. **ಶಾಳಾ ತವಗ ತಾಲೂಕ ಗೋಕಾಕ ಜಿಲ್ಲಾ ಬೆಳಗಾಂವ**—ಈ ಶಾಲೆಗೆ ಈ ಊರ ಶ್ರೀ. ಶಿವಲಿಂಗಯ್ಯಾ ಸ್ವಾಮಿಗಳವರು ಆಗಮಿಸಿ ೫೦ ರೂ. ಬೆಲೆ ಬಾಳುವ ಒಂದು ಜಾಂಗಟೆಯನ್ನು ಕೊಟ್ಟಿರುವರೆಂದು ಆ ಊರ ಸ್ಕೂಲಪಂಚರು ತಿಳಿಸುತ್ತಾರೆ. ಇದು ಸ್ತುತ್ಯವು.

ಜಾಹೀರಾತು

ಮುಲ್ಕೀಪರೀಕ್ಷೆಯು ಏನ್ಶಿಯಂಟ ಕಲುವಾಗಿ ಹೊಸ ಮಾದರಿಯ ಅಂಕಗಣಿತ ಸಂಗ್ರಹ ಬೆಲೆ ೧೨ ತಕೆ.

ಮುನ್ನುಡಿ ಲೇಖನರು:— ಶ್ರೀ. ಹಣಮಂತರಾವ ಗೋವಿಂದರಾವ ದೇಶಪಾಂಡೆ ಬಿ. ಎ., ಸೀನಿಯರ ಡಿ. ಎ. ಇ. ಬೆಳಗಾಂವ.

ಹ್ಯ. ಫಾ. ಪರೀಕ್ಷೆಯಲ್ಲಿ ಇತ್ತಲಾಗಿ ಹೊಸ ಮಾದರಿಯ ಲೆಕ್ಕಗಳು ಬೀಳುತ್ತಿದ್ದದರಿಂದ ವಿದ್ಯಾರ್ಥಿಗಳು ಗೊಂದಲದಲ್ಲಿ ತೊಡಗಿ ಹಾನಿಯನ್ನು ಹೊಂದುತ್ತಿರುವರು. ಆದಕಾರಣ ಅವರ ಗೊಂದಲವು ಪರಿಹಾರವಾಗುವದಕ್ಕಾಗಿ ಅಂಥ ಮಾದರಿಯ ಗಣಿತಗಳನ್ನು ಸಂಗ್ರಹಿಸಿ ಬಿಡಿಸಿ ತೋರಿಸಿದೆ. ಇದು ತೀರ ಹೊಸ ಮಾದರಿಯದಿದ್ದು ಶಿಕ್ಷಕರ ಸಹಾಯವಿಲ್ಲದೆ ವಿದ್ಯಾರ್ಥಿಗಳಿಗೆ ಉಪಯೋಗ ಬೀಳುವಂತೆ ಅದೆ. ಮತ್ತು ಶಿಕ್ಷಕರಿಗೂ ಮಾರ್ಗದರ್ಶಕವಾಗುವದರಲ್ಲಿ ಸಂದೇಹವಿಲ್ಲ.

ಮಿ॥ ಬಿ. ಬಿ. ಮುಧೋಳಕರ ಇವರ ಅಭಿಪ್ರಾಯವು:—

ಈ ಗ್ರಂಥದ ಉಪಯೋಗವನ್ನು ಚೆನ್ನಾಗಿ ಮಾಡಿದರೆ ಗಣಿತ ಪರೀಕ್ಷೆಯಲ್ಲಿ ನಾಪಾಸ ಆಗುವವರ ಸಂಖ್ಯೆಯು ಬಹುಮಟ್ಟಿಗೆ ಕಡಿಮೆಯಾಗುವುದೆಂದು ಬಲವಾದ ನಂಬಿಕೆಯದೆ.

ವ್ಯಾಪಾರಸ್ಥರಿಗೆ ಮತ್ತು ಏಜಂಟರಿಗೆ ಭರಪೂರ ಕಮೀಶನ್ ಸಿಕ್ಕೀತು.

ಸಿಗುವ ಸ್ಥಳ:—**ಶ್ರೀ. ಚಿನಂಬ। ಶ್ರೀಪಾದ ಕುಲಕರ್ಣಿ.**

ಮು. ಪೋ. ಹಿರೇಬಾಗೆವಾಡಿ,

ತಾಲೂಕ ಬೆಳಗಾಂವ.

Reg. No. B. 2567

ಕನ್ನಡ

ಪ್ರಾಥಮಿಕ ಶಿಕ್ಷಣ

(ಇದರಲ್ಲಿ ಕನ್ನಡ ಶಾಲಾಪತ್ರಿಕೆಯೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

Kannada Prathamik Shikshana

— DECEMBER 1934 —

ಸಂಪಾದಕ—ವೆಂಕಟೇಶ ನರಸಿಂಗರಾವ ಮಗದಾಳ, ಬಿ. ಎ.

ಸಂಪುಟ ೭೧] ಡಿಶಂಬರ ೧೯೩೪ [ವ. ೬ ಸಂ. ೯

ವಿಷಯಾನುಕ್ರಮಣಿಕೆ

ಕ್ರ. ನಂ.	ವಿಷಯ.	ಪುಟ.
೧.	ಶಿಕ್ಷಣಸಮ್ಮೇಲನಗಳ ಮಹತ್ವವು	೧
೨.	ಶಿಕ್ಷಣ ಸಮ್ಮೇಲನವು	೬
೩.	ನಮ್ಮ ಬರೆಹದಲ್ಲಿಯ ಕೆಲವು ತೊಂದರೆಗಳೂ ತಿದ್ದು ಪಾಟುಗಳೂ	೧೩
೪.	ಶುಕ್ರ	೨೦
೫.	ಭೂತಾನ ಸಂಸ್ಥಾನ	೨೪
೬.	ಪ್ರಕಟಿಸೆ	೨೬

Printed by K. R. Bhise at the Karnatak Printing Works, Dharwar
& Published by V. N. Magdal, B.A.,
Head Master, Training School, Dharwar, at his Office.

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:—ವೆಂಕಟೇಶ ನರಸಿಂಗರಾವ ಮುಗದಾಳ, ಬಿ. ಎ.

ಸಂಪುಟ ೭೧ | ಡಿಸೆಂಬರ ೧೯೩೪ | ವರ್ಷ ೬ ಸಂ. ೯

ಶಿಕ್ಷಣ ಸಮ್ಮೇಲನಗಳ ಮಹತ್ವವು

(ಕಳೆದ ತಿಂಗಳ ೧೬ನೆಯ ತಾರೀಖಿನ ದಿವಸ ಧಾರವಾಡ ಟ್ರೇನಿಂಗ ಸ್ಕೂಲಿನಲ್ಲಿ ಕೂಡಿದ ಧಾರವಾಡ ಜಿಲ್ಹೆಯ ಶಿಕ್ಷಕರ ಸಮ್ಮೇಲನವನ್ನು ಆರಂಭಿಸುವಾಗ ಮೆ॥ ಸಯ್ಯದ ನೂರುಲ್ಲಾ ಬಿ. ಎ., ಎಮ್. ಆಡಿ. ಬಾರ. ಅಟ್ ಲಾ. ಎಜ್ಯುಕೇಶನಲ್ ಇನ್ಸಪೆಕ್ಟರ್ ದ. ಭಾ. ಇವರು ಮಾಡಿದ ಭಾಷಣವು.)

ಬಂಧು ಭಗಿನಿಯರೇ,

ಧಾರವಾಡ ಜಿಲ್ಲೆಯ ಪ್ರಾಥಮಿಕ ಶಿಕ್ಷಕರ ಈ ಸಮ್ಮೇಲನವನ್ನು ಆರಂಭಿಸುವ ಬಹುಮಾನವನ್ನು ನನಗೆ ಕೊಟ್ಟದ್ದಕ್ಕಾಗಿ ಇದರ ವ್ಯವಸ್ಥಾಪಕರ ಆಭಾರವನ್ನು ನಾನು ಮನ್ನಿಸುತ್ತೇನೆ. ಈ ಜಿಲ್ಲೆಯ ಬಹುಜನ ಶಿಕ್ಷಕರನ್ನು ಒಂದೇ ಕಡೆಯಲ್ಲಿ ಕಂಡು, ಇಂಥ ಸಮ್ಮೇಲನಗಳ ವಿಷಯವಾಗಿ ಕೆಲವು ಸಂಗತಿಗಳನ್ನು ಅವರಿಗೆ ತಿಳಿಸಲು ನನಗೆ ತುಂಬಾ ಸಂತೋಷವಾಗುತ್ತದೆ.

ಶಿಕ್ಷಕರು ವರ್ಷಕ್ಕೊಮ್ಮೆಯಾದರೂ ಒಂದುಕಡೆಯಲ್ಲಿ ಸೇರಿ, ತಮ್ಮ ನಿತ್ಯದ ಉದ್ಯೋಗಕ್ಕೆ ಸಂಬಂಧಿಸುವ ಮಾತುಗಳನ್ನು ಕುರಿತು, ವಿಶೇಷವಾಗಿ, ಶಾಲೆಯ ಕೆಲಸವನ್ನು ತೃಪ್ತಿಕರವಾಗಿ ಕೈಗೂಡಿಸುವದಕ್ಕಾಗಿ ಇಂಥ ಸಮ್ಮೇಲನಗಳಲ್ಲಿ ವಿಚಾರ ವಿನಿಮಯಮಾಡಿಕೊಳ್ಳುವದು, ಈ ಕಾಲದಲ್ಲಿ ಆವಶ್ಯಕವಾದದ್ದೆಂದು ನಾನೇನು ಹೇಳಬೇಕೆಂದಿಲ್ಲ; ಹಾಗು ಪ್ರಾಥಮಿಕ ಶಿಕ್ಷಕರಿಗೆ ಇದು ಅತ್ಯಂತ ಆವಶ್ಯಕವಾದದ್ದೆಂದು ನನಗೆ ತೋರುತ್ತದೆ.

ಪ್ರಾಥಮಿಕ ಶಿಕ್ಷಕರಲ್ಲಿ ಟ್ರೇಂಡ ಮತ್ತು ಅನ್‌ಟ್ರೇಂಡ ಎಂಬ ಎರಡು ವರ್ಗಗಳಿವೆ. ಈ ಜಿಲ್ಲೆಯಲ್ಲಿ ಟ್ರೇನಿಂಗ ಪಡೆದ ಶಿಕ್ಷಕರ ಸಂಖ್ಯೆಯು ಸಾಕಷ್ಟು ಇರುವದು ನಿಜವು. ಆದರೆ, ಸರಟೀಫಿಕೇಟು ಪಡೆದ ಮಾತ್ರಕ್ಕೆ ಟ್ರೇಂಡ ಅಧ್ಯಾಪಕನಾದನು ಎಂದು ಎಣಿಸದೆ, ತಜ್ಞನಂತೆ ಕೆಲಸಮಾಡುತ್ತಿರುವವನೇ ಟ್ರೇನಿಂಗ ಪಡೆದ ಶಿಕ್ಷಕನೆಂದು ಎಣಿಸುವದು ಉತ್ತಮ. ವಸ್ತುಸ್ಥಿತಿಯು ಏನಂದರೆ, ಟ್ರೇನಿಂಗ ಕಾಲೇಜಿನಲ್ಲಿ ಕಲಿತ ವಿಷಯಗಳನ್ನೂ, ಶಿಕ್ಷಣಪದ್ಧತಿಗಳನ್ನೂ ಟ್ರೇನಿಂಗಪಡೆದ ಶಿಕ್ಷಕರಲ್ಲಿ ಬಹುಜನರು ಕೆಲವು ವರುಷಗಳಲ್ಲಿಯೇ ಮರೆತುಬಿಡುತ್ತಾರೆ. ಆದ್ದರಿಂದ ಟ್ರೇನಿಂಗ ಪಡೆದವರ ಸಂಖ್ಯೆಯು ಎಷ್ಟು ಹೆಚ್ಚಾಗಿದ್ದರೂ ಅವರ ಮಹತ್ವವು ಬಹಳ ಕಡಿಮೆಯಾಗಿದೆ.

ಕಲಿತದ್ದನ್ನು ಮರೆಯದೆ, ಆಸ್ಥೆಯಿಂದ ಕೆಲಸ ಮಾಡಬೇಕೆನ್ನುವವರೂ ಕೆಲವರಿರುವರು; ಆದರೆ ಇವರಿಗೆ ಹಳ್ಳಿಯ ಶಾಲೆಗಳಲ್ಲಿ, ತಮ್ಮ ವಿಷಯಜ್ಞಾನವನ್ನೂ ತಾವು ರೂಢಿಮಾಡಿಕೊಳ್ಳಬೇಕಾಗತಕ್ಕ ಪದ್ಧತಿಗಳನ್ನೂ ಉಪಯೋಗಿಸಲಿಕ್ಕೆ ಅವಶ್ಯವಾದ ಅನುಕೂಲತೆಗಳಾಗಲಿ ಉತ್ತೇಜನವಾಗಲಿ ಸಾಮಾನ್ಯವಾಗಿ ಸಾಕಷ್ಟು ದೊರೆಯುವದಿಲ್ಲ.

ಬಹುತರವಾಗಿ ಅವರ ಮೇಲಧಿಕಾರಿಗಳಾದ ಮುಖ್ಯ ಉಪಾಧ್ಯಾಯರಿಂದ ಇವರಿಗೆ ಸಾಕಷ್ಟು ಉತ್ತೇಜನವು ದೊರೆಯುವದಿಲ್ಲ. ಈ ಮುಖ್ಯ ಉಪಾಧ್ಯಾಯರು ಟ್ರೇನಿಂಗ ಪಡೆದವರಾಗಿದ್ದರೂ ತಮ್ಮ ಕಾಲದಲ್ಲಿ ರೂಢವಿದ್ದ ಪದ್ಧತಿಗಳನ್ನೇ ಅನುಸರಿಸುವರು. ಶಿಕ್ಷಕವರ್ಗವು ಸ್ವಾಭಾವಿಕವಾಗಿ ಹಳೆಯದನ್ನೇ ಪುರಸ್ಕರಿಸುವದು; ಹೊಸ ವಿಚಾರಗಳೂ ಹೊಸ ಪದ್ಧತಿಗಳೂ ಕೆಲಸದಲ್ಲಿ ತೊಡಕುಗಳನ್ನು ಉಂಟುಮಾಡುವವೆಂದು ಅವರಿಗೆ ತ್ತೋರುವದು. ಈ ಮೂಲಕ, ಶಾಲೆಯಲ್ಲಿ ನಡೆದಿರುವ ಕ್ರಮಗಳಲ್ಲಿ ಹೆಚ್ಚುಕಡಿಮೆಗಳನ್ನು ಮಾಡಬೇಕೆಂದರೆ, ಹೊಸತಾಗಿ ಟ್ರೇನಿಂಗ ಪಡೆದ ಶಿಕ್ಷಕರಿಗೆ ಉತ್ತೇಜನವು ದೊರೆಯುವದಿಲ್ಲ.

ಹಳ್ಳಿಯಲ್ಲಿ, ಶಿಕ್ಷಕರಿಗೆ ಕಲಿಸಲಿಕ್ಕೆ ಅವಶ್ಯವಿರುವ ಸಾಧನಗಳೂ ಉಪಕರಣಗಳೂ ಸಾಕಷ್ಟು ಸಿಕ್ಕುವದಿಲ್ಲ. ಇತ್ತಲಾಗಿ, ಟ್ರೇನಿಂಗ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಇಂಥ ಉಪಕರಣಗಳನ್ನು ಮಾಡಲಿಕ್ಕೆ ಕಲಿಸುವರು. ಆದರೆ, ಇಂಥ ಉಪಕರಣಗಳ ಸಂಖ್ಯೆಯು ಕಾಲಾವಧಿಯ ಮೂಲಕ ನಿಯಮಿತವಾಗಿದೆ. ಈ ಉಪಕರಣಗಳಲ್ಲಿ ಕೆಲವನ್ನು ಹಳ್ಳಿಗಳಲ್ಲಿ ಮಾಡಲಿಕ್ಕೆ ಬೇಕಾದ ಅನುಕೂಲತೆಗಳು ಕೈದಿರಬಹುದು; ಆದರೆ ಬಹುತರವಾಗಿ, ಮಾಡಬಹುದಾದ ಉಪಕರಣಗಳನ್ನು

ಸಹ ಮಾಡಿಕೊಳ್ಳಲಿಕ್ಕೆ ತಕ್ಕ ಉತ್ತೇಜನವು ದೊರೆಯುವದಿಲ್ಲ. ಕೆಳಗಿನ ಇಯತ್ತೆಗಳಲ್ಲಿ ಈ ಉಪಕರಣಗಳು ಹೆಚ್ಚಾಗಿ ಇರುವಂತೆ, ಹಾಗು ಇವುಗಳ ಯೋಗ್ಯ ಉಪಯೋಗವು ಹೆಚ್ಚಾಗಿ ಆದಂತೆ, ಶಿಕ್ಷಣವು ಚೆನ್ನಾಗಿ ಸಾಗುವದು, ಎಂಬದು ಅನುಭವಸಿದ್ಧವಾದದ್ದು.

ಟ್ರೇನಿಂಗ ಪಡೆದ ಶಿಕ್ಷಕರು ಇವೆಲ್ಲ ತೊಂದರಿಗಳಿಗೆ ಗುರಿಯಾಗುವರು. ಇನ್ನು ಅನ್‌ಟ್ರೇಂಡ ಶಿಕ್ಷಕರ ವಿಷಯವಾಗಿ ವಿಚಾರ ಮಾಡುವ. ಇವರ ಕೊರತೆಗಳು ಬೀರಿ ತರದವು ಇರುವವು.

ಇವರ ವಿಷಯಜ್ಞಾನವು ಅಷ್ಟಕ್ಕಷ್ಟೇ ಇರುವದು. ಶಿಕ್ಷಕನು ಯಾವಾಗಲೂ ವಿದ್ಯಾರ್ಥಿಯಾಗಿರಬೇಕು; ನಿತ್ಯದ ಶಾಲೆಯ ಕೆಲಸದಲ್ಲಿ ಉಪಯೋಗವಾಗುವ ವಿಷಯಗಳ ಜ್ಞಾನವನ್ನು ಅಭ್ಯಾಸದಿಂದಲೂ ಅವಲೋಕನದಿಂದಲೂ ಹೆಚ್ಚಿಸಿಕೊಳ್ಳುತ್ತಿರಬೇಕು; ಈ ಮಾತುಗಳನ್ನು ನಾನು ವಿವರಿಸಿ ಹೇಳಬೇಕಾಗಿಲ್ಲ. ಯಾವನೇ ಆಗಲಿ, ತನಗೆ ಗೊತ್ತಿರುವ ಜ್ಞಾನದ ಸ್ವಲ್ಪ ಭಾಗವನ್ನು ಮಾತ್ರ ಇತರರಿಗೆ ತಿಳಿಸಬಲ್ಲನು. ಆದರೆ ಜ್ಞಾನದ ಕೊರತೆಯ ಮೂಲಕ, ಅನ್‌ಟ್ರೇಂಡ ಶಿಕ್ಷಕರು ತಮಗೆ ಗೊತ್ತಿರುವ ಸ್ವಲ್ಪ ಜ್ಞಾನವನ್ನು ಸಹ ತಮ್ಮ ವಿದ್ಯಾರ್ಥಿಗಳಿಗೆ ತಿಳಿಸಲಾರರು.

ಅನ್‌ಟ್ರೇಂಡ ಶಿಕ್ಷಕರಿಗೆ ಪದ್ಧತಿಗಳ ಜ್ಞಾನವು ಇರುವದಿಲ್ಲ. ಇಂಥ ಶಿಕ್ಷಕರು ತಮ್ಮ ಶಾಲೆಯಲ್ಲಿರುವ ಟ್ರೇನಿಂಗ ಪಡೆದವರೂ ಅನುಭವಿಕರೂ ಆದ ಇತರ ಶಿಕ್ಷಕರು ಉಪಯೋಗಿಸುವ ಪದ್ಧತಿಗಳನ್ನು ಲಕ್ಷ್ಯಗೊಟ್ಟು ನೋಡಿ, ಅವರಂತೆ ಕಲಿಸಲಿಕ್ಕೆ ಪ್ರಯತ್ನ ಮಾಡತಕ್ಕದ್ದು. ಆದರೆ, ಈ ಮೊದಲು ವಿವರಿಸಿದ ಕಾರಣಗಳ ಮೂಲಕ, ಅನುಕರಿಸಲಿಕ್ಕೆ ತಕ್ಕವರಾದ ಶಿಕ್ಷಕರು ಹಳ್ಳಿಯ ಶಾಲೆಗಳಲ್ಲಿ ಅಪರೂಪವಾಗಿ ದೊರೆಯುವರು. ಆದ್ದರಿಂದ ಅನ್‌ಟ್ರೇಂಡ್ ಶಿಕ್ಷಕರು ತಮಗೆ ತೋರಿದಂತೆ ಕಲಿಸುವರು. ಈ ಮೂಲಕ ಆರಂಭದ ಇಯತ್ತೆಗಳಲ್ಲಿಯೇ ಹುಡುಗರ ಶಿಕ್ಷಣವು ಕುಂದುಳ್ಳದ್ದಾಗುವದು. ಮುಂದೆ ಈ ಕೊರತೆಗಳನ್ನು ತಿದ್ದಿಕೊಳ್ಳಲಿಕ್ಕೆ ಟ್ರೇಂಡ ಶಿಕ್ಷಕರಿಗೂ ಬಹಳ ಪ್ರಯಾಸವಾಗುವದು. ಇದರಿಂದ ನಮ್ಮ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಬಹಳ ಹಾನಿಯಾಗುತ್ತಿದೆ.

ಇನ್ನು ಟ್ರೇನಿಂಗ ಪಡೆಯದೆ ಉಳಿದಿರುವ ಎಲ್ಲ ಶಿಕ್ಷಕರಿಗೆ ಟ್ರೇನಿಂಗ ಕೊಡುವದು ಸಾಧ್ಯವಿಲ್ಲ. ಈ ಕಾರಣದಿಂದ ಇವರಲ್ಲಿ ತಮ್ಮ ಕೆಲಸದಲ್ಲಿ ಸಾಕಷ್ಟು ಉತ್ಸಾಹವು ಇರುವದಿಲ್ಲ. ಇದು ಎಷ್ಟು ದುಃಖಕರವಾದ ಸಂಗತಿ ಎಂದು ನಿಮಗೂ ಗೊತ್ತಿರಬಹುದು.

ಟ್ರೇನಿಂಗ ಪಡೆದ ಶಿಕ್ಷಕರಾಗಲಿ, ಟ್ರೇನಿಂಗ ಪಡೆಯದವರಾಗಲಿ ಪುಸ್ತಕಗಳನ್ನು ಓದಿಯಾದರೂ ತಮ್ಮ ನಿತ್ಯದ ಶಾಲೆಯ ಕೆಲಸವು ಹೆಚ್ಚು ಪರಿಣಾಮಕರವಾಗುವಂತೆ ಮಾಡಿಕೊಳ್ಳಬಹುದೆಂದರೆ, ನಮ್ಮ ಭಾಷೆಯಲ್ಲಿ ಸಾಕಷ್ಟು ಪುಸ್ತಕಗಳು ಪ್ರಸಿದ್ಧವಾಗಿಲ್ಲ. ಶಿಕ್ಷಣಪದ್ಧತಿಗಳಿಗೆ ಸಂಬಂಧಿಸಿದ ಪುಸ್ತಕಗಳಂತೂ ಕನ್ನಡದಲ್ಲಿ ತೀರ ಕಡಿಮೆಯಿರುವವು. ಇವು ಸಹ ನಮ್ಮ ಶಿಕ್ಷಕರಿಗೆ ಸುಲಭವಾಗಿ ದೊರೆಯುವದಿಲ್ಲ. ನಮ್ಮಲ್ಲಿ ಶಿಕ್ಷಕರಿಗಾಗಿಯೇ ಏರ್ಪಡಿಸಿದ ವಾಚನಾಲಯಗಳೂ ಇಲ್ಲ.

ಈ ವರೆಗೆ ನಮ್ಮ ಪ್ರಾಥಮಿಕ ಶಿಕ್ಷಕರು ಅನುಭವಿಸುತ್ತಿರುವ ತೊಂದರೆಗಳನ್ನು ನಾನು ಸಂಕ್ಷೇಪವಲ್ಲಿ ಹೇಳಿರುವೆನು. ಇನ್ನು ಸದ್ಯದಲ್ಲಿ ಶಿಕ್ಷಣ ಪ್ರಗತಿಯು ಹೇಗೆ ನಡೆದಿರುವದೆಂಬದನ್ನು ನೋಡೋಣ:—

ಶಿಕ್ಷಣವಲ್ಲಿ ಸದ್ಯದ ಅವಧಿಯನ್ನು "ಮಾನಸಶಾಸ್ತ್ರದ ಅಭ್ಯಾಸದ ಕಾಲವು" ಎಂದು ವರ್ಣಿಸಬಹುದು. ಈಗ ವಿದ್ವಾಂಸರು ಮಾನಸಶಾಸ್ತ್ರದ ಅಭ್ಯಾಸದಲ್ಲಿ ವಿಶೇಷ ಮನಸ್ಸು ಹಾಕಿ, ಹೊಸ ಹೊಸ ಸಂಗತಿಗಳನ್ನು ಕಂಡು ಹಿಡಿಯುತ್ತಿರುವರು. ಕೂಸು ಹುಟ್ಟಿದಂದಿನಿಂದ ಶೈಶವ, ಬಾಲ್ಯ ಯೌವನ ಮೊದಲಾದ ಅದರ ಬೇರೆ ಬೇರೆ ಅವಸ್ಥೆಗಳಲ್ಲಿ ಅದರ ಮನಸ್ಸಿನ ಕಾರ್ಯಗಳ ಶೋಧವು ನಡೆದಿರುವದು. ಅನುದಿನವೂ ಹೊಸ ಹೊಸ ತತ್ವಗಳು ಪ್ರಯೋಗಗಳಿಂದ ಸಿದ್ಧವಾಗುತ್ತಿರುವವು. ಇವುಗಳ ಮೂಲಕ, ಶಿಕ್ಷಣಪದ್ಧತಿಗಳಲ್ಲಿ ಬದಲಾವಣೆಗಳು ಉಂಟಾಗುತ್ತಿರುವವು. ವಾಚನ, ಕವಿತೆ, ನಿಬಂಧಲೇಖನ, ಗಣಿತ ಮೊದಲಾದ ವಿಷಯಗಳಲ್ಲಿ, ವಿಶೇಷವಾಗಿ ಆರಂಭದ ಇಯತ್ತೆಗಳಲ್ಲಿ ಅನುಸರಿಸಲ್ಪಡುವ ಪದ್ಧತಿಗಳಲ್ಲಿ ಹೆಚ್ಚುಕಡಿಮೆಗಳು ಆಗುತ್ತಿರುವವು. ಕೆಲವು ವರ್ಷಗಳ ಪೂರ್ವದಲ್ಲಿ ಉತ್ತಮವೆಂದು ಎಣಿಸಿದ ಪದ್ಧತಿಗಳು ಈಗ ತ್ಯಾಜ್ಯವೆಂದು ನಿಶ್ಚಿತವಾಗಿವೆ. ಅವುಗಳಿಗಿಂತ ಹೆಚ್ಚು ಪರಿಣಾಮಕರವಾದ ಪದ್ಧತಿಗಳು ರೂಢಿಯಲ್ಲಿ ಬರುತ್ತಿರುವವು. ಇವುಗಳ ಕೂಡ ಮುಂದುವರಿಯುವದು ನಮ್ಮ ಟ್ರೇನಿಂಗ ಸಂಸ್ಥೆಗಳಿಗೂ ಕಠಿಣವಾಗಿರುವದು. ಆದ್ದರಿಂದ ಈಚೀಚೆಗೆ ಟ್ರೇನಿಂಗ ಪಡೆದವರು ಕೂಡ ಹೊಸ ಪದ್ಧತಿಗಳ ಪರಿಚಯಮಾಡಿಕೊಳ್ಳುವದು ತಕ್ಕದ್ದಾಗಿದೆ.

ಈ ಹೊಸ ಪ್ರಯೋಗಗಳನ್ನು ವರ್ಣಿಸುವ ಹಾಗು ಹೊಸ ಸಿದ್ಧಾಂತಗಳನ್ನು ಚರ್ಚಿಸುವ ಗ್ರಂಥಗಳು ಪ್ರಾಥಮಿಕ ಶಿಕ್ಷಕರ ದುರ್ದೈವದಿಂದ ಇಂಗ್ಲೀಷ ಭಾಷೆಯಲ್ಲಾಗಲಿ ಯುರೋಪಖಂಡದ ಇತರ ಭಾಷೆಗಳಲ್ಲಾಗಲಿ ಮಾತ್ರ ದೊರೆಯುತ್ತವೆ. ಇವುಗಳ ಲಾಭವು ಪ್ರತ್ಯಕ್ಷವಾಗಿ ನಮ್ಮ ಪ್ರಾಥಮಿಕ ಶಿಕ್ಷಕರಿಗೆ ಆಗುವಂತಿಲ್ಲ.

ನಮ್ಮ ಟ್ರೇನಿಂಗಪಡೆದ ಹಾಗು ಅನ್‌ಟ್ರೇಂಡ ಶಿಕ್ಷಕರ ಒಲವು ಶಿಕ್ಷಣವನ್ನು ಹಿಂದಕ್ಕೆ ಸೆಳೆಯುತ್ತಿರುವದು. ಆದರೆ ಶಿಕ್ಷಣಶಾಸ್ತ್ರವೂ ಶಿಕ್ಷಣಕಲೆಯೂ ಬಲವಾಗಿ ಮುಂದಕ್ಕೆ ಹೋಗುತ್ತಿರುವವು. ಈ ಸ್ಥಿತಿಯು ನಮ್ಮ ಕರ್ನಾಟಕದ ಮಕ್ಕಳ ಹಿತದ ದೃಷ್ಟಿಯಿಂದಲೂ ನಮ್ಮ ಕನ್ನಡ ನಾಡಿನ ಅಭ್ಯುದಯದ ದೃಷ್ಟಿಯಿಂದಲೂ ಸಮಾಧಾನಕರವಾದುದಲ್ಲ. ಈ ಶೋಚನೀಯವಾದ ಸ್ಥಿತಿಯು ಇಲ್ಲದಂತಾಗಲಿಕ್ಕೆ ಕೈಲಾದಮಟ್ಟಿಗೆ ಪ್ರಯತ್ನಪಡುವದು ಶಿಕ್ಷಕರಾದ ನಮ್ಮೆಲ್ಲರ ಕರ್ತವ್ಯವು; ಇಷ್ಟೇ ಅಲ್ಲ, ಶಿಕ್ಷಣದ ಭಾರವನ್ನು ವಹಿಸಿದ ಪ್ರತಿಯೊಬ್ಬ ಅಧಿಕಾರಸ್ಥನ ಕರ್ತವ್ಯವು. ಇನ್ನೆರಡು ದಿವಸ ಇಲ್ಲಿ ನಡೆಯುವ ಸಮ್ಮೇಲನದಿಂದ ಈ ಕಾರ್ಯವು ತಕ್ಕಮಟ್ಟಿಗೆ ಕೈಗೂಡುವದೆಂದು ನಾನು ನಂಬಿದ್ದೇನೆ. ಅನುಭವಿಕರಾದ ಶಿಕ್ಷಕರು ಇಲ್ಲಿ ಕೆಲವು ಪಾಠಗಳನ್ನು ಕಲಿಸಿ ತೋರಿಸುವರು. ಕೆಲವರು ಶಾಲೆಯ ನಿತ್ಯದ ಕೆಲಸಗಳಿಗೆ ಸಂಬಂಧಿಸುವ ವಿಷಯಗಳನ್ನು ಕುರಿತು ತಮ್ಮ ಅನುಭವಗಳನ್ನು ಹೇಳುವರು. ಇವುಗಳ ಚರ್ಚೆಯು ನಡೆಯುವದು. ಇವುಗಳಿಂದ ನಿಮ್ಮೆಲ್ಲರಲ್ಲಿ ಹೊಸ ಬೆಳಕು ಮೂಡುವದೆಂದೂ ನಿಮ್ಮ ಕೆಲಸದಲ್ಲಿ ಹೊಸ ಹುರುಪು ತಲೆದೋರುವದೆಂದೂ ನಾನು ನಂಬಿದ್ದೇನೆ.

ಇಂಥ ಸಮ್ಮೇಲನಗಳನ್ನು ನಮ್ಮ ಕನ್ನಡ ಜಿಲ್ಲೆಗಳ ಸ್ಕೂಲ್‌ಬೋರ್ಡುಗಳ ಅಧಿಕಾರಿಗಳು ಕಾಲಕಾಲಕ್ಕೆ ಏರ್ಪಡಿಸುವದು ಉಚಿತವು ಎಂದು ನನಗೆ ತೋರುತ್ತದೆ. ಕೆಲವು ತಿಂಗಳುಗಳ ಹಿಂದೆ ಬೇಸಿಗೆಯ ಸೂಟಿಯಲ್ಲಿ ನಿಮ್ಮ ಆ್ಯಡ್ಮಿನಿಸ್ಟ್ರೇಟಿವ್ಹ ಅಫೀಸರರು ಅನ್‌ಟ್ರೇಂಡ ಶಿಕ್ಷಕರಿಗಾಗಿ ಹದಿನೈದು ದಿವಸಗಳವರೆಗೆ ಒಂದು ಶಿಕ್ಷಣಯೋಜನೆಯನ್ನು ಏರ್ಪಡಿಸಿ ಶಿಕ್ಷಣ ವಿಷಯಗಳು, ಪದ್ಧತಿಗಳು ಇವುಗಳನ್ನು ಕುರಿತು ಅವರಿಗೆ ತಿಳಿಸಿ ಹೇಳಿದರೆಂಬದು ನನಗೆ ಗೊತ್ತಿದೆ. ಅಂಥ ಸೂಟಿಯ ಶಿಕ್ಷಣ ಯೋಜನೆಗಳಿಂದಲೂ ಒಳ್ಳೆಯ ಪರಿಣಾಮಗಳಾಗುವವೆಂದು ನನ್ನ ಅಭಿಪ್ರಾಯವು.

ಕೊನೆಗೆ, ನೀವೆಲ್ಲರು ಹಣ ವೆಚ್ಚಮಾಡಿ, ಸೂಟಿಯಲ್ಲಿ ಇಲ್ಲಿಗೆ ಬಂದು, ನಿಮ್ಮ ನಿತ್ಯದ ಕೆಲಸದ ವಿಷಯವಾಗಿ ಹೊಸ ಜ್ಞಾನವನ್ನು ಸಂಪಾದಿಸುವದರಲ್ಲಿ ತೋರಿಸಿದ ಆಸ್ಥೆಯನ್ನು ಕುರಿತು ನಿಮ್ಮನ್ನು ಅಭಿನಂದಿಸಿ, ಈ ಸಮ್ಮೇಲನದ ಕಾರ್ಯವು ಆರಂಭವಾಗಿ ಪೂರ್ಣ ಯಶಸ್ವಿಯಾಗಲೆಂದು ಬಯಸುತ್ತೇನೆ.

ಶಿಕ್ಷಣ ಸಮ್ಮೇಲನವು

ಕಳೆದ ತಿಂಗಳ ತಾ॥ ೧೬ ಹಾಗು ೧೭ ಇವೆರಡು ದಿವಸ ಧಾರವಾಡ ಟ್ರೇನಿಂಗ ಸ್ಕೂಲಿನ ಜನರಲ್ ಹಾಲಿನಲ್ಲಿ ಧಾರವಾಡ ಜಿಲ್ಲೆಯ ಶಿಕ್ಷಕಸಂಘದವರು ಆ ಜಿಲ್ಲೆಯ ಶಿಕ್ಷಕರ ಶಿಕ್ಷಣ ಸಮ್ಮೇಲನವೊಂದನ್ನು ಏರ್ಪಡಿಸಿ ಒಳ್ಳೇ ಉತ್ಸುಕತೆಯಿಂದ ಸಾಂಗ ಗೊಳಿಸಿದರು. ಇದಕ್ಕೆ ಈ ಜಿಲ್ಲೆಯ ಸುಮಾರು ಮುನ್ನೂರು ಜನ ಶಿಕ್ಷಕ ಶಿಕ್ಷಕಿಯರು ಆಗಮಿಸಿದ್ದರು. ಸಂಘದ ಅಧ್ಯಕ್ಷರಾದ ಮಿ. ತಂಬಾಕದ ಬಿ. ಎ, ಎಲ್ ಎಲ್. ಬಿ. ಇವರು ಮೊದಲೇ ವಿಜ್ಞಾಪಿಸಿಕೊಂಡಂತೆ ದಕ್ಷಿಣ ಭಾಗದ ಎಜ್ಯುಕೇಶನಲ್ ಇನ್ಸ್ ಪೆಕ್ಟರರಾದ ಮೆ. ಸಯ್ಯದ ನೂರುಲ್ಲಾ ಎಮ್. ಈಡಿ. ಬಾರ್ ಆಟ್ ಲಾ. ಸಾಹೇಬರು ಸಮ್ಮೇಲನದ ಕಾರ್ಯವನ್ನು ಆರಂಭಿಸಿದರು. ಸಭೆಯ ಕಾರ್ಯವು ಶುಕ್ರವಾರ ಮುಂಜಾನೆ ೮॥ ಗಂಟೆಗೆ ಸರಿಯಾಗಿ ಆರಂಭವಾಯಿತು. ಧಾರವಾಡ ಪ್ರಾಕ್ಟಿಸಿಂಗ ಸ್ಕೂಲಿನ ವಿದ್ಯಾರ್ಥಿಗಳು ಮೊದಲು ಉಚಿತವಾದ ಒಂದು ಪದ್ಯವನ್ನು ಸುಸ್ವರದಿಂದ ಹಾಡಿ ಮೆ॥ ರವರನ್ನು ಸ್ವಾಗತಮಾಡಿದರು. ಆ ಬಳಿಕ ಮೆ॥ ನೂರುಲ್ಲಾ ಸಾಹೇಬರು ಕನ್ನಡದಲ್ಲಿ ಭಾಷಣಮಾಡಿ ಶಿಕ್ಷಕರ ಸಮ್ಮೇಲನಗಳ ಮಹತ್ವವನ್ನು ನೆರೆದ ಶಿಕ್ಷಕರಿಗೆ ಸ್ಪಷ್ಟವಾಗಿ ತಿಳಿಸಿ ಹೇಳಿದರು. ಸದ್ಯದಲ್ಲಿ ಟ್ರೇನಿಂಗ ಹೊಂದಿದ ಶಿಕ್ಷಕರು ಒಳಗಾಗುತ್ತಿರುವ ಅನನುಕೂಲತೆಗಳನ್ನೂ ಟ್ರೇನಿಂಗ ಪಡೆಯದಿರುವ ಶಿಕ್ಷಕರಲ್ಲಿ ಕಾಣುವ ನ್ಯೂನತೆಗಳನ್ನೂ ಇವರು ಸಂಕ್ಷೇಪದಲ್ಲಿ ಹೇಳಿ ಶಿಕ್ಷಣಶಾಸ್ತ್ರವೂ ಶಿಕ್ಷಣ ಕಲೆಯೂ ಒತ್ತರದಿಂದ ಮುಂದುವರಿಯುತ್ತಿರುವದನ್ನು ವಿವರಿಸಿ, ಇಂಥ ಸಮ್ಮೇಲನಗಳಲ್ಲಿ ಶಿಕ್ಷಕರು ಒಟ್ಟಾಗಿ ಕಲೆತು ತಮ್ಮ ನಿತ್ಯದ ಉದ್ಯೋಗಕ್ಕೆ ಸಂಬಂಧಿಸುವ ಮಹತ್ವದ ಪ್ರಶ್ನಗಳ ಬಗ್ಗೆ ಚರ್ಚೆಮಾಡಿ ಕಲಿಸುವಾಗ ಅನುಸರಿಸುವ ಪದ್ಧತಿಗಳೇ ಮೊದಲಾದ ಸಂಗತಿಗಳನ್ನು ನಿಷ್ಕರ್ಷಿಸಿಗೊಳ್ಳುವದು ಯಥಾಯೋಗ್ಯವೆಂದು ಸಿದ್ಧಮಾಡಿದರು. ಮೆ॥ ರವರ ಭಾಷಣವು ಸಣ್ಣದಿದ್ದರೂ ವಿಚಾರಪೂರ್ಣವಾದದ್ದೂ ಅರ್ಥಗರ್ಭಿತವಾದದ್ದೂ ಶಿಕ್ಷಕರೆಲ್ಲ ಶಾಂತಚಿತ್ತದಿಂದ ಮನನಮಾಡಲು ತಕ್ಕದ್ದೂ ಆಗಿರುವದರಿಂದ ಅದನ್ನು ಈ ಸಂಚಿಕೆಯಲ್ಲಿ ಪ್ರತ್ಯೇಕವಾಗಿ ಪ್ರಸಿದ್ಧಪಡಿಸಿರುವೆವು. ಮೆ॥ ನೂರುಲ್ಲಾ ಸಾಹೇಬರು ಕಾರ್ಯಭರದ ಮೂಲಕ ಹೆಚ್ಚು ಹೊತ್ತು ಸಮ್ಮೇಲನದಲ್ಲಿ ಇರುವದಾಗಲಿಲ್ಲವೆಂದು ವಿಷಾದಿಸಬೇಕಾಗಿದೆ. ಇವರು ಮಂಗಳೂರಿನವರು. ಹೈಸ್ಕೂಲು ವಿದ್ಯಾಭ್ಯಾಸವನ್ನು ಮುಗಿಸುವವರೆಗೆ ಕನ್ನಡ ಭಾಷೆಯನ್ನು ಚೆನ್ನಾಗಿ ಪರಿಶೀಲಿಸಿರುವರು. ಕನ್ನಡ ನುಡಿಯ ಬಗ್ಗೆಯೂ ಕನ್ನಡ ನಾಡಿನ ಬಗ್ಗೆಯೂ ಒಳ್ಳೆಯ ಅಭಿಮಾನಪಡುವರು. ಇಂಗ್ಲಂಡ ಮೊದಲಾದ ಸುಧಾರಿಸಿದ ದೇಶಗಳಿಗೆ ಪ್ರಯಾಣಬೆಳಿಸಿ, ಅಲ್ಲಿಯ ಪ್ರಾಥಮಿಕ ಮಾಧ್ಯಮಿಕ ಶಿಕ್ಷಣಾಲಯಗಳಲ್ಲಿ ಈಚೆಗೆ ನಡೆಯುತ್ತಿರುವ ಅಭ್ಯಾಸಕ್ರಮವನ್ನು ಚೆನ್ನಾಗಿ ನಿರೀಕ್ಷಿಸಿ ಶಿಕ್ಷಣಶಾಸ್ತ್ರ ಕಲೆಗಳ

ಗಾಗಿ ಹೆಸರಾದ ಲೀಡ್ಸ ಪಟ್ಟಣದ ವಿಶ್ವವಿದ್ಯಾಲಯದಲ್ಲಿ ಕೆಲಕಾಲ ನಿಂತು ಶಿಕ್ಷಣ ವಿಷಯದಲ್ಲಿ ಆ ಮುಂದುವರಿದ ದೇಶದಲ್ಲಿ ಎಲ್ಲಕ್ಕೂ ಹೆಚ್ಚಿನದೆನಿಸಿದ ಎಮ್. ಈಡಿ ಅಂದರೆ ಮಾಸ್ಟರ ಆಫ್ ಎಜ್ಯುಕೇಶನ್ ಎಂಬ ಪದವಿಯನ್ನು ಪಡೆದು ಬಂದಿರುವರು. ಹೀಗೆ ಹಲವು ಕಾರಣಗಳಿಂದ ಕರ್ನಾಟಕ ಶಿಕ್ಷಕವೃಂದಕ್ಕೆ ಮಾನ್ಯರಾದ ಮಹನೀಯರು ಧಾರವಾಡದ ಶಿಕ್ಷಕ ಸಂಘದವರು ಸ್ವತಂತ್ರವಾಗಿ ಏರ್ಪಡಿಸಿದ ಶಿಕ್ಷಕರ ಸಮ್ಮೇಲನವನ್ನು ಆರಂಭಿಸುವ ಕಾರ್ಯವನ್ನು ಕೈಗೂಡಿಸಿದ್ದಕ್ಕಾಗಿ ಮಿ. ತಂಬಾಕದ ಇವರು ಮೆ!! ರವರ ಉಪಕಾರವನ್ನು ಸ್ಮರಿಸಿ ಪೂಮಾಲೆಯನ್ನರ್ಪಿಸಿ ಸಂಘದ ಕೃತಜ್ಞತೆಯನ್ನು ತೋರಿಸಿದರು.

ಆ ಬಳಿಕ ಮಿ!! ತಂಬಾಕದ ಇವರು ಸಮ್ಮೇಲನದ ಅಧ್ಯಕ್ಷ ಸ್ಥಾನವನ್ನು ಸ್ವೀಕರಿಸಲಿಕ್ಕೆ ಮಿ!! ಮಗದಾಳ ಬಿ. ಎ, ಹೆಡ್‌ಮಾಸ್ತರ, ಟ್ರೇನಿಂಗಸ್ಕೂಲ ಧಾರವಾಡ ಇವರನ್ನು ವಿಜ್ಞಾಪಿಸಿಕೊಳ್ಳಲು ಇವರು ಅದಕ್ಕೆ ಒಪ್ಪಿದರು. ಪ್ರಾಸ್ತಾವಿಕ ಭಾಷಣದಲ್ಲಿ ಮಿ!! ಮಗದಾಳ ಇವರು ಅಲ್ಲಿ ನೆರೆದ ಶಿಕ್ಷಕವೃಂದವನ್ನುದ್ದೇಶಿಸಿ ಹೇಳಿದ್ದೇನೆಂದರೆ: --

ಈ ಸಮ್ಮೇಲನದ ಅಧ್ಯಕ್ಷಸ್ಥಾನವನ್ನು ನೀವೆಲ್ಲರು ಒಮ್ಮನಸಿನಿಂದ ನನಗೆ ಒಪ್ಪಿಸಿ ನನ್ನ ಮೇಲೆ ಭಾರ ಹಾಕಿರುವಿರಿ. ಆದರೆ ನನಗಿಂತ ಬುದ್ಧಿಯಿಂದಲೂ ವಯಸ್ಸಿನಿಂದಲೂ ಶಿಕ್ಷಣದ ಅನುಭವದಿಂದಲೂ ವಿದ್ಯಾವ್ಯಾಸಂಗದಿಂದಲೂ ಮೇಲಾದವರು ಇಲ್ಲಿ ನೆರೆದವರಲ್ಲಿಯೇ ಹಲವರು ಇರುವಾಗ, ನನ್ನನ್ನೇ ಈ ಕಾರ್ಯಕ್ಕೆ ಆರಿಸಿದ್ದರ ಕಾರಣವು ನನಗೆ ಸ್ಪಷ್ಟವಾಗಲೊಲ್ಲದು. ಈ ಸಮ್ಮೇಲನದಲ್ಲಿ ಮುಖ್ಯವಾಗಿ ಕಲಿಸುವ ಪದ್ಧತಿಗಳು, ಶಾಲೆಯ ಸಾಮಾನ್ಯ ವಿಷಯಗಳು ಇವುಗಳ ಚರ್ಚೆಯು ನಡೆಯಬೇಕಾಗಿರುವದು. ನಾನು ಸದ್ಯದಲ್ಲಿ ಶಿಕ್ಷಕ ಶಿಕ್ಷಣಾಲಯದ ಮುಖ್ಯಾಧ್ಯಾಪಕನಾಗಿದ್ದೇನೆ. ಇದಕ್ಕಾಗಿ ನನ್ನನ್ನು ನೀವು ಅಧ್ಯಕ್ಷಸ್ಥಾನಕ್ಕೆ ಆರಿಸಿರುವಿರೆಂದೂ ಈ ಬಹುಮಾನವು ವೈಯಕ್ತಿಕವಾಗಿ ನನಗೆ ಸಲ್ಲದೆ ಶಿಕ್ಷಕ ಶಿಕ್ಷಣಾಲಯಕ್ಕೆ ಸಲ್ಲುವದೆಂದೂ ನಾನು ನಂಬಿದ್ದೇನೆ. ಇಲ್ಲಿ ನೆರೆದ ಯಾವತ್ತು ಜನರ ಸಹಾನುಭೂತಿ ಸಹಕಾರಗಳಿಂದಲೇ ಸಮ್ಮೇಲನದ ಕಾರ್ಯವು ಯಶಸ್ವಿಯಾಗುವದೆಂಬದನ್ನು ಲಕ್ಷ್ಯದಲ್ಲಿಟ್ಟು ಎಲ್ಲರೂ ನನ್ನ ಕೆಲಸವು ಸುಸೂತ್ರವಾಗಿ ಸಾಗಲು ನೆರವಾಗುವಿರೆಂದು ನಾನು ಬೇಡಿಕೊಳ್ಳುತ್ತೇನೆ.

ಈ ಬಗೆಯ ಸಮ್ಮೇಲನಗಳು ಇತ್ತಲಾಗಿ ಹೆಚ್ಚಾಗಿ ಆಗುತ್ತಿರುವವು. ಇದು ಸಮಾಧಾನದ ಸಂಗತಿಯು. ಈಚೆಗೆ ಹಿಂದುಸ್ತಾನದ ಪ್ರತಿಯೊಂದು ಪ್ರಾಂತದಲ್ಲಿ ಪ್ರಾಥಮಿಕ ಶಿಕ್ಷಕರೂ ಮಾಧ್ಯಮಿಕ ಶಿಕ್ಷಕರೂ ಸಂಘಗಳನ್ನು ಏರ್ಪಡಿಸಿಕೊಂಡು

ತಮ್ಮ ಹಿತಾಹಿತದ ಪ್ರಶ್ನಗಳ ಬಗ್ಗೆ ವಿಚಾರವಿನಿಮಯ ಮಾಡಿಕೊಳ್ಳಲಿಕ್ಕೂ ತಮ್ಮ ನಿತ್ಯದ ಉದ್ಯೋಗದಲ್ಲಿ ಮುಂದುವರಿಯಲಿಕ್ಕೂ ಪ್ರಯತ್ನಪಡುತ್ತಲಿರುವರು. ಇದರಿಂದ ಸ್ವಲ್ಪ ಕಾಲದಲ್ಲಿಯೇ ಬೇಕಾದಷ್ಟು ಒಳಿತಾಗಿರುವದು. ಇಂಥ ಸಮ್ಮೇಲನಗಳಾಗುವದರಿಂದ ಶಿಕ್ಷಣದಲ್ಲಿ ಮನಸು ಹಾಕುವ ಶಿಕ್ಷಕರಿಗೆ ತಮ್ಮ ವ್ಯವಸಾಯ ಬಂಧುಗಳ ಮುಂದೆ ತಮ್ಮ ಅನುಭವಗಳನ್ನೂ ವಿಚಾರಗಳನ್ನೂ ಇಡಲು ಅನುವಾಗಿರುವದು. ಇದರಿಂದ ಮೇಲಾದ ಶಿಕ್ಷಣಪದ್ಧತಿಗಳು ಎಲ್ಲರ ನಿದರ್ಶನಕ್ಕೆ ಬರುತ್ತಿರುವವಲ್ಲದೆ, ಅನುಭವಿಕರಾದ ಶಿಕ್ಷಕರ ಪದ್ಧತಿಗಳಲ್ಲಿರುವ ಗುಣಗಳನ್ನು ಅನುಕರಣ ಮಾಡಲಿಕ್ಕೆ ಸಾಮಾನ್ಯ ಶಿಕ್ಷಕರಿಗೆ ಅನುಕೂಲವಾಗಿರುತ್ತದೆ. ಶಿಕ್ಷಕರ ಈ ಸಮ್ಮೇಲನಗಳಿಗೆ ಶಿಕ್ಷಣಾಭಿಮಾನಿಗಳೂ ಸಣ್ಣ ದೊಡ್ಡ ಸಾಮಾನ್ಯ ಜನರೂ ಬರುವ ಮೂಲಕ ಶಿಕ್ಷಕರು ತಮ್ಮ ಉದ್ಯೋಗದ ಕಾರ್ಯಕಲಾಪಗಳನ್ನು ಸುಧಾರಿಸುವ ಬಗ್ಗೆ ಮಾಡುತ್ತಿರುವ ಪ್ರಯತ್ನಗಳು ಅವರ ಕಣ್ಣಿದುರಿಗೆ ಬಂದು, ಶಿಕ್ಷಕರ ಬಗ್ಗೆ ಜನಮನದಲ್ಲಿ ಗೌರನವು ಹೆಚ್ಚಾಗುತ್ತಲಿದೆ. ಶಿಕ್ಷಕರಲ್ಲಿಯೂ ಆತ್ಮಗೌರನವು ನೆಲೆಗೊಳ್ಳಹತ್ತಿದೆ. ಪ್ರಾಥಮಿಕ ಶಿಕ್ಷಣದ ವ್ಯವಸ್ಥೆಯು ಸಾರ್ವಜನಿಕ ಸಂಸ್ಥೆಗಳ ಆಡಳತೆಗೆ ಈಚೆಗೆ ಒಳಪಟ್ಟಿರುವದಷ್ಟೇ. ಈ ಸಂಸ್ಥೆಗಳ ಚಾಲಕರು ಹಿಂದಿನ ಶಿಕ್ಷಣಾಧಿಕಾರಿಗಳಂತೆ ಶಿಕ್ಷಣ ವ್ಯವಸಾಯದಲ್ಲೇ ತಮ್ಮ ಆಯುಷ್ಯವನ್ನು ಪೂರ್ಣವಾಗಿ ವೆಚ್ಚ ಮಾಡುವಂತಿಲ್ಲ. ಇವರಿಗೆ ಶಿಕ್ಷಣದ ಬಗ್ಗೆ ಅಭಿಮಾನವು ಇರುವದು ಸ್ವಾಭಾವಿಕವಿದ್ದರೂ ಶಿಕ್ಷಕರ ಬಗ್ಗೆ ಗೌರವವಿರುವದು ಅಷ್ಟು ಸಹಜವಲ್ಲ. ಇವರು ಸಮ್ಮೇಲನಗಳಿಗೆ ಬರುವ ಮೂಲಕ, ಶಿಕ್ಷಕರ ಕೆಲಸವನ್ನು ಕಣ್ಣುಟ್ಟು ನೋಡುವರು. ಅದನ್ನು ನೆರವೇರಿಸುವದರಲ್ಲಿರುವ ತೊಡಕು ತೊಂದರೆಗಳೂ ಈ ಬಗ್ಗೆ ಶಿಕ್ಷಕರು ತೋರಿಸುವ ಚಾತುರ್ಯವೂ ಇವರನ್ನು ಶಿಕ್ಷಕರ ಪಕ್ಷಪಾತಿಗಳನ್ನಾಗಿ ಮಾಡುವದು. ಆದ್ದರಿಂದ ಇಂಥ ಸಮ್ಮೇಲನಗಳು ಕಾಲಕಾಲಕ್ಕೆ ನಡೆಯುವದು ಇಷ್ಟವಾದದ್ದು. ಪ್ರಪಂಚದಲ್ಲಿ ಈಗ ಎಲ್ಲ ಸಂಗತಿಗಳೂ ತೀಕ್ಷ್ಣಗತಿಯಿಂದ ಸಾಗುತ್ತಿರುವವು. ಕಳೆದ ಹತ್ತೆಂಟು ವರುಷಗಳಲ್ಲಿಯೇ ಅಕಲ್ಪಿತ ಶೋಧಗಳಾಗಿರುವವಲ್ಲದೆ ಸುಧಾರಣೆಯು ಒತ್ತರದಿಂದ ಸಾಗಿರುವದು. ಒಮ್ಮಿಂದೊಮ್ಮೆ ಜಗತ್ತಿನ ಪ್ರಗತಿಯ ವೇಗವು ಅಕಲ್ಪಿತ ಭರದಿಂದ ಸಾಗಿದೆ. ಹಿಂದುಸ್ತಾನವು ಇತರ ರಾಷ್ಟ್ರಗಳಲ್ಲಿ "ಎತ್ತಿನ ಬಂಡಿ"ಯ ದೇಶವೆಂದು ಹೆಸರಾಗಿತ್ತು. ಇಲ್ಲಿ ಎಲ್ಲ ಸಂಗತಿಗಳೂ ಎತ್ತಿನ ಚಕ್ಕಡಿಯಂತೆ ಮಂದಗತಿಯಿಂದ ಸಾಗುತ್ತವೆಂದು ವಿದೇಶೀಯರ ಕಲ್ಪನೆಯಾಗಿತ್ತು. ಈ ಕಲ್ಪನೆಯು ತಪ್ಪಾಪಡ್ದೆಂದು ನಮ್ಮ ಜನರು ಸಿದ್ಧಮಾಡುತ್ತಿರುವರು. ಮೋಟಾರ ಬಂಡಿಗಳು ಇಲ್ಲಿ ಆರಂಭವಾಗಿ ಇನ್ನೂ ಹತ್ತೆಂಟು ವರುಷಗಳಾಗಿಲ್ಲ. ಇಷ್ಟರಲ್ಲಿಯೇ ಅವು ಹಳ್ಳಪಳ್ಳಿಗಳಲ್ಲಿಯೂ ಹರಡಿಕೊಂಡಿವೆ. ಚಲ

ಚಿತ್ರಗಳು ಇಲ್ಲಿ ಬರಲಾರಂಭಿಸಿ ನಾಲ್ಕಾರು ವರುಷಗಳು ಮಾತ್ರ ಸಂದಿವೆ. ಇಷ್ಟರಲ್ಲಿಯೇ ಮಾತಾಡುವ ಚಿತ್ರಪಟಗಳನ್ನು ಮಾಡುವ ಕಂಪನಿಗಳು ಇಲ್ಲಿಯೂ ಆರಂಭವಾಗಿ ದೇಶೀಯ ಚಲಚ್ಚಿತ್ರಪಟಗಳ ಸುರಿಮಳೆಯು ನಡೆದಿರುವದು. ಜಗತ್ತಿನ ಸುಧಾರಿಸಿದ ದೇಶಗಳಲ್ಲಿ ಆಗುತ್ತಿರುವ ಹೊಸ ಶೋಧಗಳೂ ಸುಧಾರಣೆಗಳೂ ಕೂಡಲೆ ನಮ್ಮ ದೇಶದಲ್ಲಿ ತಲೆದೋರುತ್ತಿರುವವು. ಇತರ ಸುಧಾರಿಸಿದ ರಾಷ್ಟ್ರಗಳಂತೆ ನಮ್ಮ ದೇಶವಾದರೂ "ಆಕಾಶಯಾನ"ಗಳ ದೇಶವಾಗಿದೆ. ಇತರ ಬಾಬುಗಳಲ್ಲಿ ಸುಧಾರಣೆಯು ನಡೆದಂತೆ ಶಿಕ್ಷಣಪ್ರಪಂಚದಲ್ಲಿಯೂ ಮುಂದುವರಿದ ದೇಶಗಳಲ್ಲಿ ಪ್ರಗತಿಯು ಪ್ರಬಲವಾದ ವೇಗದಿಂದ ಸಾಗುತ್ತಿರುವದು. ನಾವು ಮಾತ್ರ ಈ ಕಾಲದಲ್ಲಿ ಹಿಂದೆ ಉಳಿಯುವಂತಿಲ್ಲ. ಆದ್ದರಿಂದ ಶಿಕ್ಷಕರು ಕೂಡ ತಮ್ಮ ಉದ್ಯೋಗಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಹೊಸ ಜ್ಞಾನವನ್ನು ಸಂಪಾದಿಸುವದಲ್ಲದೆ ಅದರಲ್ಲಾಗುತ್ತಿರುವ ಹೊಸ ಕ್ರಾಂತಿಗಳನ್ನು ಅಭ್ಯಾಸಿಸಿ, ಅನುಭವ ತೆಗೆದುಕೊಂಡು ನೋಡಿ, ಶಿಕ್ಷಣಶಾಸ್ತ್ರದಲ್ಲಿಯೂ ಶಿಕ್ಷಣಕಲೆಯಲ್ಲಿಯೂ ಇತರ ದೇಶಗಳೊಡನೆ ಸರಿಯಾಗಲು ಪ್ರಯತ್ನಿಸತಕ್ಕದ್ದು.

ಕಾಲಾನುರೋಧದಿಂದ ಸದ್ಯದ ಶಿಕ್ಷಕರ ಮೇಲೆ ಭಾರವು ಹೆಚ್ಚಾಗಿ ಬಿದ್ದಿರುವದು. ಇದನ್ನರಿಯದೆ ಹಿಂದಿನ ಶಿಕ್ಷಕರ ಯೋಗ್ಯತೆಯನ್ನೂ ಕೆಲಸವನ್ನೂ ಕೊಂಡಾಡಿ, ಈಗಿನ ಶಿಕ್ಷಕರನ್ನು ನಿಂದಿಸುವವರು, ಸಮಾಜದಲ್ಲಿ ತುಂಬಿರುವರೆಂಬವನ್ನು ಶಿಕ್ಷಕರು ಅರಿಯದೆ ಇಲ್ಲ. ಮೂವತ್ತು ವರುಷದ ಹಿಂದಿನ ಶಿಕ್ಷಕರ ಪರಿಸ್ಥಿತಿಯು ಅನೇಕ ಮಾತುಗಳಲ್ಲಿ ಸ್ಪೃಹಣೀಯವಾಗಿದ್ದಿತ್ತು. ಹಳ್ಳಿಗಳಲ್ಲಿ ತಮ್ಮ ಮಕ್ಕಳು ಶಿಕ್ಷಣಪಡೆಯಬೇಕೆಂಬ ಹಂಬಲಿಸುವವರ ಹುಡುಗರು ಮಾತ್ರ ಶಾಲೆಗಳಿಗೆ ಬರುತ್ತಿದ್ದರು. ತಾಯ್ತಂದೆಗಳಾದರೂ ಮನೆಯಲ್ಲಿ ಅವರ ಶಿಕ್ಷಣಕ್ಕೆ ನೆರವಾಗುತ್ತಿದ್ದರು. ಅಂದರೆ ಹುಡುಗರು ಓದಿ ಬರೆದು ಪರೀಕ್ಷೆಗಳಲ್ಲಿ ಪಾಸಾದೆನ್ನಿಸಿಕೊಳ್ಳಲು ಹುರುಪುಕೊಡುತ್ತಿದ್ದರು. ಸದ್ಯಕ್ಕೆ ಮನೆಯಲ್ಲಿರುವ ಹುಡುಗರೆಲ್ಲರು ಶಾಲೆಯಲ್ಲಿ ಹೆಸರು ಹಚ್ಚಿಸುತ್ತಾರೆ. ಕಲಿಯಬೇಕೆಂದು ಶಾಲೆಗೆ ಕಳಿಸುವದಕ್ಕಿಂತ ಊರಲ್ಲಿ ಶಾಲೆಯಿರುವದು ಗೌರವವು, ಹುಡುಗರು ಶಾಲೆಗೆ ಹೋಗುವದು ಮನೆಯವರಿಗೆ ಹಗುರಾದದ್ದು ಎಂಬ ಸ್ವಾರ್ಥ ದೃಷ್ಟಿಯಿಂದ, ಅನುಕೂಲವಿರುವ ದಿವಸ ಮಾತ್ರ ಶಾಲೆಗೆ ಹುಡುಗರನ್ನು ಕಳಸುವ ತಾಯ್ತಂದೆಗಳೇ ಈಗ ಹೆಚ್ಚಾಗಿರುವರು. ಹಿಂದೆ ವಿದ್ಯಾಪಕ್ಷಪಾತಿಗಳಾದ ತಾಯ್ತಂದೆಗಳು ಶಿಕ್ಷಕರನ್ನು ಗೌರವದಿಂದ ನೋಡುತ್ತಿದ್ದರು; ಈಗ ಈ ಸ್ಥಿತಿಯು ಉಳಿದಿಲ್ಲ. ಹಿಂದೆ, ಒಬ್ಬ ಅಧಿಕಾರಿಯು ಒಲವುಗಳನ್ನೂ ಬೇಡಿಕೆಗಳನ್ನೂ ಅಭ್ಯಾಸಿಸಿ ಆತನನ್ನು ತೃಪ್ತಿಪಡಿಸುವದು ಸುಲಭವಿತ್ತು.

ಈಗ ಅಧಿಕಾರಿಗಳ ಸಂಖ್ಯೆಯು ಬೆಳೆಯುತ್ತ ನಡೆದಿದೆ. ಒಬ್ಬೊಬ್ಬನ ಬೇಡಿಕೆಗಳು ಬೇರೆ ಬೇರೆ ಬಗೆಯವಿರುತ್ತವೆ. ಇವೆಲ್ಲವನ್ನೂ ಅನುಸರಿಸುವದು (ಪೂರೈಸುವ ಮಾತು ಒತ್ತಟ್ಟಿಗಿರಲಿ) ಅಸಾಧ್ಯವೆನಿಸಹತ್ತಿದೆ. ಮೇಲಾಗಿ, ಹಿಂದೆ ಶಿಕ್ಷಕರು ಮೂರು ನಾಲ್ಕು ವಿಷಯಗಳನ್ನು ಪುಸ್ತಕಗಳಲ್ಲಿದ್ದಂತೆ ತಿಳಿಸಿಯೂಗಲಿ ಪಾಠಮಾಡಿಸಿಯಾಗಲಿ ಪರೀಕ್ಷೆಗಳಲ್ಲಿ ಹುಡುಗರನ್ನು ಉತ್ತೀರ್ಣಗೊಳಿಸಿದರೆ ಕೃತಾರ್ಥರಾಗುತ್ತಿದ್ದರು. ಈಗ ವಿಷಯಗಳ ಸಂಖ್ಯೆಯು ಹೆಚ್ಚಾಗಿದೆ; ಪರೀಕ್ಷೆಗಳ ದಿಶೆಯು ಬದಲಾಗಿದೆ. ಪದ್ಧತಿಗಳ ಹೋರಾಟವು ಬಲವಾಗಹತ್ತಿದೆ. ಶಿಕ್ಷಣವೆಂದರೆ ಕೇವಲ ಪುಸ್ತಕಜ್ಞಾನವಲ್ಲೆಂಬ ಭಾವನೆಯು ದೃಢವಾಗಲಾರಂಭಿಸಿದೆ. ಇವೆಲ್ಲ ಕಾರಣಗಳ ಮೂಲಕ ಸದ್ಯದ ಶಿಕ್ಷಕನ ಮೇಲೆ ಹೆಚ್ಚಿನ ಭಾರವು ಬೀಳತೊಡಗಿದೆ. ಜನರು ವಿಶ್ವಾಸದಿಂದಲೂ ಗೌರವದಿಂದಲೂ ಶಿಕ್ಷಕನನ್ನು ನೋಡಿದ ಹೊರತು ಈ ಭಾರವನ್ನು ತಡೆಯುವದು ಆಗದ ಮಾತು. ಬಹುಜನರ ಸಹಾನುಭೂತಿಯು ಶಿಕ್ಷಕನಿಗೆ ಆವಶ್ಯಕವಾಗಿದೆ. ಇದನ್ನು ಪಡೆಯಲು ಶಿಕ್ಷಕನು ಮೀರಿದ ಪ್ರಯತ್ನಗಳನ್ನು ಮಾಡಬೇಕಾಗಿದೆ. ಈ ಪ್ರಯತ್ನಗಳಲ್ಲಿ ಸಮ್ಮೇಲನಗಳನ್ನು ಏರ್ಪಡಿಸಿ ತನ್ನ ವ್ಯವಸಾಯಬಂಧುಗಳೊಡನೆ ವಿಚಾರವಿನಿಮಯ ಮಾಡಿಕೊಳ್ಳುವದೂ ಶಿಕ್ಷಣಾಭಿಮಾನಿಗಳ ಮುಂದೆ ತಮ್ಮ ತೊಡಕು ತೊಂದರೆಗಳನ್ನು ಇಡುವದೂ ಒಂದಾಗಿರುವದು.

ಹಿಂದಿನ ಕಾಲದ ಶಿಕ್ಷಕರ ಸುಲಭವಾದ ಪರಿಸ್ಥಿತಿಯ ಮೂಲಕವೇ ಅವರ ಕೆಲಸದಲ್ಲಿ ಅವರಿಗೆ ಯಶಸ್ಸು ದೊರೆಯುತ್ತಿತ್ತೆಂದು ನಾವು ಹೇಳುವದಿಲ್ಲ. ಅವರು ಜನರ ಮನಸ್ಸನ್ನು ಎಳಕೊಳ್ಳಲಿಕ್ಕೆ ಅವರಲ್ಲಿದ್ದ ಒಂದು ಗುಣವು ಇತರ ಗುಣಗಳಿಗಿಂತ ಹೆಚ್ಚು ಕಾರಣವಾಯಿತು. ಈ ಗುಣವೆಂದರೆ ತಾವು ತಮ್ಮ ಹುಡುಗರ ಅಭ್ಯುದಯಕ್ಕಾಗಿಯೇ ತಮ್ಮ ಕಾಲವೆಲ್ಲವನ್ನು ವೆಚ್ಚಮಾಡುವದು. ಶಾಲೆಯಲ್ಲಿಯೂ ಮನೆಯಲ್ಲಿಯೂ ಬಿಡುವಿನ ವೇಳೆಯಲ್ಲಿಯೂ ಸೂಟಿಯ ದಿನಗಳಲ್ಲಿಯೂ ಅವರು ತಮ್ಮ ಶಿಷ್ಯವೃಂದವನ್ನು ಕೂಡಿಸಿಕೊಂಡು ಅವರಿಂದ ಅಭ್ಯಾಸ ಮಾಡಿಸುವದರಲ್ಲಿಯೇ ತೊಡಗಿರುತ್ತಿದ್ದರು. ತಮ್ಮ ಮಕ್ಕಳ ಹಿತವೇ ಶಿಕ್ಷಕರ ನಿತ್ಯದ ಧ್ಯೇಯವಾಗಿದೆಯೆಂದು ತಾಯ್ತಂದೆಗಳಿಗೆ ಮನವರಿಕೆಯಾಗುತ್ತಿತ್ತು. ತಮ್ಮ ಮಕ್ಕಳಿಗಾಗಿ ಶಿಕ್ಷಕರು ಕಷ್ಟಪಡುವದನ್ನು ಜನರು ಕಣ್ತುಂಬ ನೋಡುತ್ತಿದ್ದರು. ಇದಲ್ಲದೆ, ಹಳ್ಳಿಯ ಜನರ ಕಾರ್ಯಕಲಾಪಗಳಲ್ಲಿ ಅವರು ಮನಸೊಪ್ಪಿ ನೆರವಾಗುತ್ತಿದ್ದರು. ಶಿಕ್ಷಕನು ತಮ್ಮ ಸ್ನೇಹಿತನೂ ಹಿತೈಷಿಯೂ ಎಂದು ಹಳ್ಳಿಯವರಿಗೆ ಕ್ಷಣಶಃ ಅನಿಸುತ್ತಿತ್ತು. ಇದ್ದರಿಂದಲೇ ಹಳ್ಳಿಗಳಲ್ಲಿ ಶಿಕ್ಷಕರಿಗೆ ಗೌರವವೂ ಸಹಾಯವೂ ಅನಪೇಕ್ಷಿತವಾಗಿಯೇ ಬೇಕಾದಷ್ಟು ದೊರೆಯುತ್ತಿದ್ದವು. ಹಿಂದಿನ ಕಾಲದ ಶಿಕ್ಷಕರ ಈ ಗುಣವನ್ನು ಸದ್ಯದ ಶಿಕ್ಷಕರು ಮರೆಯಲಾಗದು. ಈಗಲೂ ಯಾವ ಹಳ್ಳಿಗಳಲ್ಲಿ ಶಿಕ್ಷಕರು

ತಮ್ಮ ಉದ್ಯೋಗದಲ್ಲಿಯೇ ಯಾವಾಗಲೂ ಕಾಲಕ್ಷೇಪ ಮಾಡುತ್ತ, ಹಳ್ಳಿಯವರ ಸ್ನೇಹಿತರಂತೆ ಇರುವರೋ ಆ ಹಳ್ಳಿಗಳಲ್ಲಿ ಅವರಿಗೆ ಸಹಾನುಭೂತಿಯೂ ಸಹಕಾರವೂ ಸಾಕಷ್ಟು ದೊರೆಯುವವು. ಹುಡುಗರು ನಿಯಮಿತತನದಿಂದ ಶಾಲೆಗೆ ಬರುವರು. ಶಾಲೆಯ ಸಂಖ್ಯೆಯನ್ನು ಕಾಯಲಿಕ್ಕೆ ತಾಯ್ತಂದೆಗಳನ್ನು ಬೇಡಿಕೊಳ್ಳಬೇಕಾಗುವದಿಲ್ಲ.

ನಮ್ಮ ದೇಶದ ಶಾಲೆಗಳಿಂದ ಜನರಿಗೆ ಪೂರ್ಣ ಲಾಭವಾಗಬೇಕಾದರೆ ಪ್ರತಿಯೊಂದು ಶಾಲೆಯು ಹಳ್ಳಿಯ ಬಹುಮುಖವಾದ ಸುಧಾರಣೆಯ ಕೇಂದ್ರವಾಗಿರಬೇಕೆಂದು ಬಲ್ಲವರು ಸಾರಿ ಹೇಳುತ್ತಿರುವರು. ಈ ಪ್ರಯೋಗವನ್ನು ಪಂಜಾಬ ಪ್ರಾಂತದ ಹಳ್ಳಿಗಳಲ್ಲಿ ಮಾಡಿ ನೋಡಿರುವರು. ಮೇಲಾದ ಪರಿಣಾಮಗಳು ಆಗಿರುವದೆಂದು ಕಂಡುಬಂದಿರುವದು. ಇತ್ತಲಾಗಿ ಹಳ್ಳಿಯ ಸುಧಾರಣೆಯ ವಿಷಯದಲ್ಲಿ ಸರಕಾರದವರು ಹೊಸ ಯೋಜನೆಗಳನ್ನು ಏರ್ಪಡಿಸುತ್ತಿರುವರು. ಹಳ್ಳಿಯ ಜನರ ಹಿತಸಂಬಂಧದ ಹಲವು ಪ್ರಶ್ನಗಳನ್ನು ಅವರಿಗೆ ತಿಳಿಸಿ ಹೇಳಿ, ಕಾರ್ಯರೂಪವಾಗಿ ಅವುಗಳನ್ನು ಮಾಡಿ ತೋರಿಸಿ, ಅವರಿಗೆ ನೆರವಾಗಲಿಕ್ಕೆ ಹೊಸ ಮಾರ್ಗಗಳನ್ನು ಯೋಜಿಸುತ್ತಿದ್ದಾರೆ. ಇದರಲ್ಲಿ ಹಳ್ಳಿಯ ಶಿಕ್ಷಕನಿಗೆ ಇಲ್ಲದಾಗುತ್ತಿರುವ ತನ್ನ ಗೌರವವನ್ನು ಸಂಪಾದಿಸಿಕೊಳ್ಳಲು ಬೇಕಾದಷ್ಟು ತೆರವಿರುವದು. ಈ ಪ್ರಸಂಗವನ್ನು ಶಿಕ್ಷಕರು ವ್ಯರ್ಥ ಹೋಗಗೊಡಬಾರದು. ಶಿಕ್ಷಣದಲ್ಲಿ ಹೊಸ ಹುರುಪು ತಲೆದೋರಬೇಕು; ಈ ಮೂಲಕ ಹೊಸ ಪರಿಸ್ಥಿತಿಗೆ ಹೊಂದಿಕೊಳ್ಳಲು ಅವಶ್ಯವಾದ ಜ್ಞಾನವು ಶಿಕ್ಷಕರಲ್ಲಿ ಉಂಟಾಗಬೇಕು. ಇವೆಲ್ಲ ಸಾಧ್ಯವಾಗಲು ಶಿಕ್ಷಕರು ತಮ್ಮ ತಮ್ಮಲ್ಲಿ ವಿಚಾರವಿನಿಮಯ ಮಾಡಿಕೊಳ್ಳಲು ಮೇಲಿಂದ ಮೇಲೆ ಒಂದು ಕಡೆಗೆ ಕೂಡಿ ಕೆಲಸ ಮಾಡಬೇಕು.

ಹೀಗೆ ಶಿಕ್ಷಕರನ್ನು ಉತ್ತೇಜನಗೊಳಿಸುವ ವಿಚಾರಗಳನ್ನು ಅಧ್ಯಕ್ಷರು ಅವರ ಮುಂದಿಟ್ಟ ಬಳಿಕ ಸಮ್ಮೇಲನದ ಕಾರ್ಯಕ್ರಮವು ಮುಂದೆ ಸಾಗಿತು.

ಆ ಬಳಿಕ ಸಮ್ಮೇಲನದಲ್ಲಿ ಕೆಳಗಿನ ಕಾರ್ಯಕ್ರಮವು ಸಾಗಿತು.

೧. ಮಿ॥ ಜಿ. ಗೋ. ಕುಲಕರ್ಣಿ ಅ॥ ಮಾ॥ ಪ್ರಾ. ಸ್ಕೂ. ಧಾರವಾಡ. ಳನೆಯ ಇಯತ್ತೆಗೆ ಹೊಸ ಪದ್ಧತಿಯಿಂದ ಕವಿತೆಯ ಪಾಠ.

೨. ಮಿ॥ ಕಾಳಪ್ಪನವರ ಕ. ಸು. ಡಿ. ಸ್ಕೂ. ಬೋರ್ಡ, ಧಾರವಾಡ ಷನೆಯ ಇಯತ್ತೆಗೆ ಭೂಗೋಲ ವಿಷಯ —ನಕಾಶ ವಾಚನ.

೩. ಮಿ॥ ಹ. ರಾ. ರಾಯದುರ್ಗ.

ಬಾಲಕರ ವರ್ಗಕ್ಕೆ ಚಿತ್ರವಾಚನ-ಚಿತ್ರದ ಸಹಾಯದಿಂದ ವಾಚನ.

೪. ಬಾಲಕರ ವರ್ಗದ ತೊಂದರೆಗಳು ಈ ಬಗ್ಗೆ ಚರ್ಚೆ—ಬಾಲಕರನ್ನು ನರ್ಸರಿಕ್ಕೆ ಒಮ್ಮೆ ಮಾತ್ರ ಆ ವರ್ಗಕ್ಕೆ ಸೇರಿಸಿಕೊಳ್ಳುವದು ಒಳಿತು.

೫. ಮಿ॥ ಡೋಣಿಸಾಲ—ಇತಿಹಾಸಪಾಠ–೪ನೆಯ ಇಯತ್ತೆ.

೬. ಶಾಲೆಯ ಉಪಕರಣಗಳು; ನಿಬಂಧ ಶಿಕ್ಷಣ ಈ ಬಗ್ಗೆ ಚರ್ಚೆ.

೭. ಕರ್ನಾಟಕದ ಇತಿಹಾಸದ ಬಗ್ಗೆ ಮಿ॥ ರಾಜಪುರೋಹಿತ ಇವರು ನ್ಯಾಚಿಕ ಲ್ಯಾಂಟರ್ನದ ಚಿತ್ರಗಳ ಸಹಾಯದಿಂದ ವ್ಯಾಖ್ಯಾನ ಕೊಟ್ಟರು.

೮. ಕವಿತಾ ವಾಚನ. ಉತ್ತರ ಕರ್ನಾಟಕದ ಪ್ರಸಿದ್ಧ ಕವಿಗಳಾದ ಮಿ॥ ಸಾಲಿ ರಾಮಚಂದ್ರರಾಯರು ತಾವು ರಚಿಸಿದ ರಸಭರಿತವಾದ ಕವಿತೆಗಳನ್ನೂ ಹೊಸದಾಗಿ ಬರೆದ ರಾಮಾಯಣದೊಳಗಿನ ಕೆಲವು ಭಾಗಗಳನ್ನೂ ಓದಿ ತೋರಿಸಿದರು. ಮೂವರು ನಾಲ್ವರು ಶಿಕ್ಷಕರು ಕನ್ನಡ ಕ್ರಮಿಕ ಪುಸ್ತಕಗಳೊಳಗಿನ ಕವಿತೆಗಳನ್ನು ಧಾಟಿಗೆ ಸರಿಯಾಗಿ ಅಂದು ತೋರಿಸಿದರು.

೯. ಮಿ॥ ಕಟ್ಟಿ—ಭೂಗೋಲ ಪಾಠ-೩ನೆಯ ಇಯತ್ತೆ.

೧೦. ಭೂಮಿತಿ ವಿಷಯವನ್ನು ಕಲಿಸುವ ಬಗ್ಗೆ ಚರ್ಚೆಯಾಯಿತು.

೧೧. ಮಿ॥ ಹಾವಳಿ— ಕವಿತಾಪಾಠ ೨ನೆಯ ಇಯತ್ತೆಗೆ ಹೊಸ ಪದ್ಧತಿಗೆ ಅನುಸರಿಸಿ ಕ್ರ. ಪುಸ್ತಕ ೨ನೆಯದರಲ್ಲಿಯ ೨ನೆಯ ಪಾಠವನ್ನು ಕಲಿಸಿ ತೋರಿಸಿದರು.

೧೨. ಮಿ. ಭಂಡಿವಾಡ—ವಾಚನಪಾಠ :— ೫ನೆಯ ಇಯತ್ತೆಗೆ ವಾಚನ ಪಾಠವನ್ನು ಹೊಸ ಪದ್ಧತಿಗನುಸರಿಸಿ ಕಲಿಸಿ ತೋರಿಸಿದರು.

೧೩. **ಏಕಮಾನ ಪದ್ಧತಿ**:— ಇದನ್ನು ಯಾವ ಇಯತ್ತೆಗೆ ಯಾವ ಕ್ರಮದಿಂದ ಕಲಿಸಬೇಕೆಂಬ ಬಗ್ಗೆ ಚರ್ಚೆಯಾಯಿತು.

೧೪. ಮಿ. ಕೆರೇಸೂರ-ಗಣಿತಪಾಠ:— ಏಕಮಾನಪದ್ಧತಿಯ ಸಹಾಯವಿಲ್ಲದೆ ತ್ರೈರಾಶಿಕವನ್ನು ಪುನಾಣ ಪದ್ಧತಿಯ ದ್ವಾರದಿಂದ ಆರಂಭಿಸಬಹುದೆಂದು ಕಲಿಸಿ ತೋರಿಸಿದರು.

೧೫. **ಸ್ಕೌಟಿಂಗ:**—ನಮ್ಮ ಭಾಗದ ಸ್ಕೌಟಿಂಗ ಅ। ಕಮಿಶನರಾದ ಮೆ॥ ರಾಮಸ್ವಾಮಿಯವರು ಸ್ಕೌಟಿಂಗ ಪದ್ಧತಿಯ ಶಾಲೆಯ ವಿಷಯಗಳಲ್ಲಿ ಅಡಕವಾಗಿದೆಯೆಂದೂ ಇದರಿಂದ ಹುಡುಗರಲ್ಲಿ ನೀತಿಯು ನೆಲೆಗೊಳ್ಳುವದೆಂತಲೂ ಪ್ರಾ. ಶಾ. ಗಳಲ್ಲಿ ಎಲ್ಲ ಕಡೆಯಲ್ಲಿಯೂ ಈ ವಿಷಯವನ್ನು ಅವಶ್ಯವಾಗಿ ಕಲಿಸಬೇಕೆಂತಲೂ ಪರಿಣಾಮಕರವಾಗುವಂತೆ ವ್ಯಾಖ್ಯಾನ ಕೊಟ್ಟರು.

ನಮ್ಮ ಬರೆಹದಲ್ಲಿಯ ಕೆಲವು ತೊಂದರೆಗಳೂ ತಿದ್ದುಪಾಟುಗಳೂ

ಶ್ರೀ ಪಂಡಿತ ಪೂಜಾರ, ಅಸಿ. ಮಾ. ಟ್ರೈ. ಕಾ. ಧಾರವಾಡ.

ಈ ಲೇಖವು ನಮ್ಮ ಬರೆಹದಲ್ಲಿ ಅಕ್ಷರಯೋಜನೆಯ ಕೆಲವು ತೊಂದರೆಗಳನ್ನು, ವಿಶೇಷವಾಗಿ ಇಂಗ್ಲಿಷ ಭಾಷೆಯಿಂದ ತೆಗೆದುಕೊಂಡ ಕೆಲವು ಶಬ್ದಗಳ ಅಕ್ಷರ ಯೋಜನೆಯ ತೊಂದರೆಗಳನ್ನು ಕುರಿತಿದೆ

(೧) ವಿಜಾತೀಯ ಸಂಯುಕ್ತಾಕ್ಷರಗಳನ್ನು ಬರೆಯುವಾಗ ನಾವು ಕೊನೆಯ ಗುಣಿತಾಕ್ಷರದ ಸ್ವರಚಿಹ್ನವನ್ನು ಮೊದಲಿನ ವ್ಯಂಜನಕ್ಕೆ ಕೂಡಿಸುವೆವು.

ಉದಾ: ಆದಿತ್ಯ, ಉದ್ಭವ, ಅಷ್ಟು, ತಪ್ತ ಮುಂ.

ಮೇಲಿನ ಶಬ್ದಗಳಲ್ಲಿರುವ ತ್ಯ, ದ್ಭ, ಷ್ಟು, ಪ್ತ ಮುಂತಾದುವು ವಿಜಾತೀಯ ಸಂಯುಕ್ತಾಕ್ಷರಗಳು. ಉಚ್ಚರಣೆಯಲ್ಲಿ ಅವುಗಳ ರೂಪವು ತ್ ಯ, ದ್ ಭ, ಷ್ ಟು, ಪ್ ತ ಈ ಮೇರೆಗೆ ಇರುವುದು. ಉಚ್ಚರಣೆಯನ್ನನುಸರಿಸಿದರೆ ಮೇಲಿನ ಶಬ್ದಗಳಲ್ಲಿ ಯ್, ಭ್, ಟ್, ತ್ ಈ ವರ್ಣಗಳ ಮುಂದೆ ಸ್ವರಚಿಹ್ನಗಳು ಸೇರುವುದು ಉಚಿತವು; ಆದರೆ ನಮ್ಮ ಬರೆಹದಲ್ಲಿ ಆ ಸಂಯುಕ್ತಾಕ್ಷರಗಳ ಮೊದಲಿನ ವ್ಯಂಜನ ಗಳಾದ ತ್, ದ್, ಷ್, ಪ್ ಇವುಗಳ ಮುಂದೆ ಸೇರುವುವು.

(೨) ರೇಫ ಸಂಯುಕ್ತಾಕ್ಷರವನ್ನು ಎರಡು ಬಗೆಯಿಂದ ಬರೆಯುವರಷ್ಟೇ.

ಉದಾ: ಅರ್ಕ, ಅರ್ಕ್ಯ, ಸರ್ಪ, ಸರ್ಪ್ಯ ಮುಂ.

ಅರ್ಕ್ಯ, ಸರ್ಪ್ಯ ಈ ತರದ ಬರೆಹದಲ್ಲಿ ಮೇಲಿನ ತೊಂದರೆಯು ಇದೆ. ರ್ಕ, ರ್ಪ ಈ ತರದ ಬರೆಹದಲ್ಲಿ ಇನ್ನೂ ಸ್ವಲ್ಪ ತೊಂದರೆ ಹೆಚ್ಚಿದೆ. ಇಲ್ಲಿ ರೇಫದ ಉಚ್ಚರಣೆ ಮೊದಲು; ಬಳಿಕ ಕ್, ಪ್, ಗಳ ಉಚ್ಚರಣೆ. ಉಚ್ಚರಣೆಯಲ್ಲಿ ಮೊದಲು ಬರುವ ರೇಫವನ್ನು ಕೊನೆಯಲ್ಲಿ ಬರೆಯುವೆವು. ಬರೆಹವನ್ನು ಕಲಿಯುವ ಚಿಕ್ಕಮಕ್ಕಳಿಗೆ ನಮ್ಮ ಈ ಸಂಕೇತವನ್ನು ತಿಳಿಸಲೇ ಬೇಕಾಗುವುದು.

(೩) ಒಂದು ವ್ಯಂಜನಕ್ಕೆ ಎರಡು ಸ್ವರ ಚಿಹ್ನಗಳನ್ನು ಸೇರಿಸಿದರೂ ಉಚ್ಚರಣೆ ಒಂದೇ ಸ್ವರದ್ದು. ಉದಾ:—

ಕೃ, ಕು, ಕೈ, ಮೌ– ೃ, –ು, –ೈ, ಔ ಇವು ಕ್ರಮವಾಗಿ ಋ, ಉ, ಐ, ಔಗಳ ಚಿಹ್ನಗಳಾಗಿವೆ.

(೪) ಘ್, ಘ್, ವಿೂ ಈ ವರ್ಣಗಳ ಬರೆಹವು ಎರಡು ಬಗೆಯಾಗಿದೆ: ಘ್ನ, ಷ, ವಿೂ, ವಿೀ

(೫) ಮುದ್ರಣಾಲಯದವರು ಇನ್ನೂ ಕೆಲವು ತೊಂದರೆಗಳನ್ನು ಹೆಚ್ಚಿಸಿರುವರು.

ಉದಾ: ಕೈಬರೆಹದಲ್ಲಿ	**ಮುದ್ರಣದಲ್ಲಿ**
ಯೌ, ಮೌ	**ಯೌ, ವೌ**
ಳ	**ಳ**

ನಾವು ಈಗ ಬಳೆಯುವ ರೀತಿಯಲ್ಲಿ **ಎ ಏ ವ ಮು ಳ ಯು, ಪ,**

ಈ ದ್ವೈವಿಧ್ಯವನ್ನು ತೋರಿಸಿದಲ್ಲಿ ಇದು ಯೋಗ್ಯ, ಇದು ಅಯೋಗ್ಯ ಎಂಬುದನ್ನು ನಿರ್ಣಯಿಸುವುದು ಪ್ರಾಚೀನಾಕ್ಷರ ಪರಂಪರಾನುಸರಣ, ಸೌಂದರ್ಯಕಲ್ಪನೆ ರೂಢಿ ಮೊದಲಾದ ಹಲವು ವಿಷಯಗಳನ್ನವಲಂಬಿಸಿರುವುದರಿಂದ ಆ ವಿಚಾರವನ್ನು ಮಾಡದೆ ಇಲ್ಲಿ ನಾವು ಒಂದೇ ಅಕ್ಷರಕ್ಕೆ ಅನೇಕರೂಪತೆ ಇರುವುದು ಯುಕ್ತವಲ್ಲ ವೆಂದು ಮಾತ್ರ ಹೇಳುವೆವು.

(೬) ಕೈ ಬರೆಹದಲ್ಲಿ ಬರುವ **ನ, ಮು, ವ, ಚ, ಸ, ಬ, ಳ, ಯಿ,** ಮೊದಲಾದ ಅಕ್ಷರಗಳ ಸಂಕ್ಷಿಪ್ತ ರೂಪಗಳು ನಮ್ಮ ಬರೆಹವನ್ನು ಇನ್ನೂ ಗಡಚಾಗಿ ಮಾಡುವುವು.

ಅಕ್ಷರಗಳ ಅನೇಕರೂಪತೆಯಿಂದ ಒದಗುವ ತೊಂದರೆ ಅಷ್ಟೇನೂ ದೊಡ್ಡದಲ್ಲ. ಆದರೂ ತೊಂದರೆಯಿಲ್ಲದಿರುವುದಕ್ಕಿಂತ ಸ್ವಲ್ಪವಿರುವುದೂ ಒಳ್ಳೆಯದಲ್ಲ ವೆಂಬುದು ನಿಜ.

ಮೇಲೆ ತೋರಿಸಿದುವು ನಮ್ಮ ಲಿಪಿಯ ಕುಂದುಗಳೆಂದು ಪರಲಿಪಿಯವರು ಹೇಳುವರು. ನಮಗೇನೂ ಇವು ಕುಂದುಗಳಂತೆ ತೋರುವುದಿಲ್ಲ. ಬಹುಕಾಲದಿಂದ ಈ ತರದ ಬರೆಹವು ರೂಢವಾಗಿರುವುದರಿಂದ ಅವು ಅಪರಿಹಾರ್ಯವಾಗಿಯೂ ಇವೆ.

(೭) **ಇಂಗ್ಲಿಷ ಶಬ್ದಗಳ ಲೇಖನ ಉಚ್ಚಾರಣ**: -- ಸುಮಾರು ೪೦ ವರ್ಷಗಳ ಪೂರ್ವದಲ್ಲಿ ಇಂಗ್ಲಿಷ ಶಬ್ದಗಳೊಳಗಿನ ಟ, ಡ ಕಾರಗಳನ್ನು ತ, ದ ಕಾರಗಳನ್ನಾಗಿ ಮಾಡಿಕೊಂಡು ಉಚ್ಚರಿಸುವ ಮತ್ತು ಬರೆಯುವ ವಾಡಿಕೆಯಿದ್ದಿತು. ಉದಾ: ವಿಕ್ಟೋರಿಯಾ–ವಿಕ್ತೋರಿಯಾ, ಡಾಕ್ಟರ್–ದಾಕ್ತರ್, ಗ್ರೇಟ್ ಬ್ರಿಟನ್–ಗ್ರೇತ್‌ಬ್ರಿತನ್ ಮುಂ

ಈಚೆಗೆ ಇಂಗ್ಲಿಷ ಭಾಷೆಯ ಪ್ರಸಾರವು ಹೆಚ್ಚುತ್ತ ನಡೆದಂತೆ, ಸಾಮಾನ್ಯ ಜನರಿಗೆ ಕೂಡ ಆ ಭಾಷೆಯ ಶಬ್ದಗಳ ಪರಿಚಯವಾಗುತ್ತ ನಡೆದಂತೆ ಇಂಗ್ಲಿಷ ಶಬ್ದಗಳನ್ನು ಅವು ಇದ್ದಂತೆಯೇ (ಟ ಡ ಕಾರಗಳನ್ನು ಟ ಡ ಕಾರಗಳನ್ನಾಗಿಯೇ) ಉಚ್ಚರಿಸುವ ಒಲವು ನಮ್ಮಲ್ಲಿ ಉಂಟಾಯಿತು. ಈಗ ನಾವು ಡಾಕ್ಟರ್, ವಿಕ್ಟೋರಿಯಾ ಎಂದು ಉಚ್ಚರಿಸುವುದನ್ನೂ ಬರೆಯುವುದನ್ನೂ ಬಿಟ್ಟಿರುವೆವು. ತದ್ಭವ ನಿಯಮಗಳನ್ನನುಸರಿಸಿ ಮಾರ್ಪಾಡು ಮಾಡಿಕೊಳ್ಳುವುದು ನಮ್ಮ ಬಾಯಿಗೆ ಒಗ್ಗುವುದಾದರೂ ಇಂಗ್ಲಿಷ ಶಬ್ದಗಳನ್ನು ಅವು ಇದ್ದಂತೆ ಉಚ್ಚರಿಸುವುದೂ ನಮಗೆ ಈಗ ಒಗ್ಗಿದೆ. ಆದರೂ ನಮ್ಮ ಕ್ರಮಿಕ ಪುಸ್ತಕಗಳಲ್ಲಿ ಈ ತರದ ಕೆಲವು ಶಬ್ದಗಳು ಮೊದಲಿನಂತೆಯೇ ಉಳಿದಿವೆ. ಉದಾ: ನೈತ್ರಿಕ್ ಆಸಿಡ್–(ನೈಟ್ರಿಕ್ ಆಸಿಡ್) ಒನೆಯ ಕ್ರ. ಪು. ಏಳಿಗೆಯ ಪುಟ. ಹೈದ್ರೊಕ್ಲೋರಿಕ್ ಆಸಿಡ್ (ಹೈಡ್ರೊಕ್ಲೋರಿಕ್ ಆ.) ಮುಂ. ನಮ್ಮ ಮಕ್ಕಳು ಈಗ ನೈಟ್ರಿಕ್ ಆಸಿಡ್, ಹೈಡ್ರೊಕ್ಲೋರಿಕ್ ಆಸಿಡ್ ಎಂದೇ ಉಚ್ಚರಿಸಬೇಕಾಗಿರುವುದರಿಂದ ಉಚ್ಚರಣಾನುಸಾರವಾಗಿ ಬರೆಯುವುದೇ ಯುಕ್ತವಾಗಿದೆ. ನೈತ್ರಿಕ್ ಆಸಿಡ್, ಡಾಕ್ತರ್ ಎಂದು ಹೇಳಿದರೆ ನಮಗೆ ಸರಿದೋರುವುದಿಲ್ಲ.

(ಆ) ಮರಾಠಿಯ ಮುಸುಕು–(ಅ) ಮರಾಠಿಯಲ್ಲಿ ಕೆಲವೆಡೆ ಶಬ್ದಾಂತ್ಯ ಅಕಾರದ ಉಚ್ಚರಣೆಯಿಲ್ಲ. ಉದಾ–ಬರೆಹದಲ್ಲಿ **बंदूक** ಬಂದೂಕ, **पासून** (ಪಾಸೂನ), **हरकत** (ಹರಕತ), **दिसून** (ದಿಸೂನ) ಮುಂ. ಉಚ್ಚರಣೆಯಲ್ಲಿ ಬಂದೂಕ್, ಪಾಸೂನ್, ಹರಕತ್, ದಿಸೂನ್. ಇಂತಹ ಅಕಾರಾಂತ ಶಬ್ದಗಳ ಉಪಾಂತ್ಯ ಸ್ವರವು ಹ್ರಸ್ವವಿದ್ದರೂ ಅದನ್ನು ದೀರ್ಘವಾಗಿ (ಎಳೆದು) ಉಚ್ಚರಿಸಿ ಅಂತ್ಯ ಅಕಾರವನ್ನು ಉಚ್ಚರಣೆಯಲ್ಲಿ ಲೋಪಿಸುವರು. ಮರಾಟಿಗರ ಏರುಗಾಲದಲ್ಲಿ ಈ ದೋಷವು ಉತ್ತರಕರ್ನಾಟಕಕ್ಕೆ ತಟ್ಟಿತು. ಈಗಲೂ ಉತ್ತರಕರ್ನಾಟಕದ ನಾವು ಬೆಂಗಳೂರ, ಪಿರವಿಡ, ಹೆಡಆಫೀಸ, ಮೊದಲಾಗಿ ಬರೆದಾಗಲೂ ಬೆಂಗಳೂರ್, ಪಿರವಿಡ್, ಹೆಡ್‌ಆಫೀಸ್ ಎಂದೇ ಉಚ್ಚರಿಸುವೆವು. ಮರಾಟಿಗರು ಉಪಾಂತ್ಯ ಅಕಾರವನ್ನು ಎಳೆದು ಉಚ್ಚರಿಸಿ ಅಂತ್ಯ ಅಕಾರವನ್ನು ಉಚ್ಚರಿಸದಿರುವುದಕ್ಕೆ ಉದಾ: ಶಂಕರ, ಪಣ ಮುಂ. ಇವನ್ನು ಶಂಕS್, ಪS್ (S = ಎಳೆದು ಉಚ್ಚರಿಸುವ ಚಿಹ್ನ.) ಎಂದು ಉಚ್ಚರಿಸುವರು ಕನ್ನಡಿಗರು ಶಂಕರ ಎಂಬಲ್ಲಿ ರೇಫದ ಕೊನೆಯ ಅಕಾರವನ್ನು ಪೂರ್ಣವಾಗಿ ಉಚ್ಚರಿಸುವರು; ಉಪಾಂತ್ಯ ಅಕಾರವನ್ನು ಏಳೆಯುವುದೂ ಇಲ್ಲ.

ಮರಾಟಿಯ ಮುಸುಕಿನಿಂದ ಉತ್ತರಕರ್ನಾಟಕದವರ ಉಚ್ಚರಣೆ ಬರೆಹಗಳಲ್ಲಿ ಈ ದೋಷವು ಸೇರಿಕೊಂಡುದರ ಗ್ರಂಥಸ್ಥ ಉದಾಹರಣಗಳು: –

೬ನೆಯ ಕ್ರಮಿಕ * ಪುಸ್ತಕ; ೧೯೩೪ರ ಆವೃತ್ತಿ.

ಬರೆಹ.	ಪುಟ.	ಉಚ್ಚರಣೆ.
ಲಾರ್ಡ ಕ್ಯಾನಿಂಗ	೧೫೯	ಲಾರ್ಡ್ ಕ್ಯಾನಿಂಗ್ (ಕೆನಿಂಗ್)
ಗ್ರೇಟಬ್ರಿಟನ್	೧೭೬	ಗ್ರೇಟ್‌ಬ್ರಿಟನ್
ಬ್ಲಾಕ ಹೋಲ	೧೩೯	ಬ್ಲ್ಯಾಕ್ ಹೋಲ್ (ಬ್ಲ್ಯಾಕ್-ಹೋಲ್)
ಸುಪ್ರೀಮಕೋರ್ಟ	೧೮೨	ಸುಪ್ರೀಮ್ ಕೋರ್ಟ್
ಕಾರ್ಬಾನಿಕ ಆಸಿಡ್	೨೪೮	ಕಾರ್ಬಾನಿಕ್ ಆಸಿಡ್ (ಅಸಿಡ್)
ಸೇನ, ಲ್ವಾರ, ಗಾರೋನ	೧೮೩	ಸೇನ್, ಲ್ವಾರ್, ಗಾರೋನ್
ಫ್ರಾಂಕ	೧೮೫	ಫ್ರಾಂಕ್
ಡಾಕ್ಟರ ಜಾನಸನ್		ಡಾಕ್ಟರ್ ಜಾನ್‌ಸನ್
ವೆಸ್ಟ ಮಿನಿಸ್ಟರ್ ಅಬೇ		ವೆಸ್ಟ್ ಮಿನಿಸ್ಟರ್ ಅಬ್ಬೇ
ಸ್ಪ್ರಿಂಗ ಬ್ಯಾಲನ್ಸ	೨೧೩	ಸ್ಪ್ರಿಂಗ್ ಬ್ಯಾಲನ್ಸ್ (ಬೆಲನ್ಸ್)

ಬರೆಹ.	೫ನೆಯ ಪುಸ್ತಕ.	ಉಚ್ಚರಣೆ.
ಅಬೂತಾಲಿಬ	೧೨೦	ಅಬೂತಾಲಿಬ್
ಅಲ್ಲಾಉದ್ದೀನ ಘೋರಿ	೧೨೫	ಅಲ್ಲಾಉದ್ದೀನ್ ಘೋರಿ
ಶಹಾಬುದ್ದೀನ	೧೨೫	ಶಹಾಬುದ್ದೀನ್
ಲೆಫ್ಟಿನೆಂಟ	೧೭೪	ಲೆಫ್ಟಿನೆಂಟ್
ಹೈದರಾಬಾದ, ಮೈಸೂರ	,,	ಹೈದರಾಬಾದ್, ಮೈಸೂರ್

ಪರಭಾಷೆಯಿಂದ ಬಂದ ಶಬ್ದಗಳಲ್ಲಿ ಈ ದೋಷವು ಬಹಳ ಮಟ್ಟಿಗೆ ರೂಢವಾಗಿದೆ. ಕ್ರಮಿಕ ಪುಸ್ತಕಗಳಲ್ಲಿ ಈ ದೋಷವು ಬಹಳವಾಗಿ ಉಳಿದಿದೆ. ಜಿತತ್ವ-ದೌರ್ಬಲ್ಯಸೂಚಕವಾದ ಈ ದೋಷವು ನಮ್ಮ ಬರೆಹವನ್ನು ಇನ್ನೂ ಯಾವಾಗ ತೊಲಗುವುದೋ !

(ಬ) ಮರಾಟಿಯಲ್ಲಿ ಪರಭಾಷೆಯ ವ್ಯಂಜನಾಂತಗಳನ್ನು ಅಕಾರಾಂತವಾಗಿ ಬರೆಯುವುದು ವಾಡಿಕೆ; ಅವರ ಉಚ್ಚರಣೆಯೇನೋ ಅಲ್ಲಿ ವ್ಯಂಜನಾಂತವಾಗಿಯೇ ಇರುವುದು.

---

* ಕ್ರಮಿಕ ಪುಸ್ತಕಗಳ ಈ ತರದ ಬರೆಹದ ವಿಷಯದಲ್ಲಿ ಯೋಗ್ಯ ವ್ಯವಸ್ಥೆಯಾಗಬೇಕೆಂದು ಅವುಗಳ ಉದಾಹರಣೆಗಳೇ ಕೊಟ್ಟವೆ.

ಉದಾ:— ಕೌಲೇಜ್–**कौलेज**; ಸ್ಟೇಶನ್–**स्टेशन** ಮಹ್ಮದ್–**महमद** ಮುಂ.

ಮರಾಟಿಗೆ ಇದು ಅನುಕೂಲವಾಗಿರಬಹುದು. ಆದರೆ ಕನ್ನಡಕ್ಕಿದು ದೋಷ. ನಾವು ಬಹಳ ಮಟ್ಟಿಗೆ (ಕೆಲವು ಮನುಷ್ಯವಾಚಕಗಳನ್ನು ಬಿಟ್ಟು) ಪರಭಾಷೆಯ ವ್ಯಂಜನಾಂತಗಳನ್ನು ಉಕಾರಾಂತಗಳನ್ನಾಗಿ ಉಚ್ಚರಿಸುವೆವು; ಬರೆಯುವೆವು. ಉದಾ:— ಕೌಲೇಜ್—ಕೌಲೇಜು, ಸ್ಕೂಲ್—ಸ್ಕೂಲು, ಬ್ಲಾಕ್—ಬ್ಲಾಕು; ಕೋರ್ಟ್—ಕೋರ್ಟು; ಪಾರ್ಕ್—ಪಾರ್ಕು. (ಮನುಷ್ಯವಾಚಕ–ನೆಪೋಲಿಯನ್–ನೆಪೋಲಿಯನ; ಅಕ್ಬರ್-ಅಕ್ಬರ.)

ಈ ಉಕಾರಾಂತತೆಯು ಭಾಷೆಯ ಏಕರೂಪತೆಗೂ ಅನುಕೂಲವಾದುದು. ಕೌಲೇಜಿನಿಂದ, ಸ್ಕೂಲಿಗೆ, ಪಾರ್ಕಿನಲ್ಲಿ ಮುಂತಾದ ರೂಪಗಳು ಎಲ್ಲ ಭಾಗಗಳಲ್ಲಿಯೂ ಬಳಕೆಯಲ್ಲಿ ಬರುತ್ತಿವೆ. ಆದರೆ ಮರಾಠಿಯ ಅನುಸರಣದಿಂದ ಉತ್ತರ ಕರ್ನಾಟಕದ ನಾವು ಹಲವು ಪರಭಾಷೆಯ ವ್ಯಂಜನಾಂತಗಳನ್ನು ಅಕಾರಾಂತಗಳನ್ನಾಗಿ ಮಾಡುವೆವು. ಉದಾ:– ಕಾಲೇಜ, ಸ್ಟೇಶನ, ನಮಾಜ, ಮಾರ್ಕೇಟ ಮುಂ. ಮರಾಟಿಗರಂತೆ ಕೊನೆಯ ಅಕಾರವನ್ನು ಉಚ್ಚರಿಸದಿರುವ ರೂಢಿ ನಮಗೆ ಆಗಿರುವುದೇ ಇದಕ್ಕೆ ಕಾರಣವು. ಆದುದರಿಂದಲೇ ನಮ್ಮ ಭಾಗದಲ್ಲಿ ಕಾಲೇಜದಲ್ಲಿ ಮಾರ್ಕೇಟಿಂದ ಮುಂ. ರೂಪಗಳು ಬಳಕೆಯಲ್ಲಿ ಬಂದಿವೆ.

(೯) ಮೂಲಭಾಷೆಯ ಉಚ್ಚರಣೆಯನ್ನು ಅನುಸರಿಸಬೇಕೆಂಬುದನ್ನು ನಾವು ಒಪ್ಪಿದರೆ ಕೆಳಗಿನ ಶಬ್ದಗಳ ಬರೆಹವನ್ನು ನಾವು ಸರಿಪಡಿಸಿಕೊಳ್ಳಬೇಕು.

ಬ್ಯಾಂಕ್, ಪ್ಯಾಲೇಸ್, ಕ್ಯಾಪ್ಟನ್, ಬ್ಯಾಟರಿ, ಮ್ಯಾಂಗೆನೀಜ್ ಮುಂತಾದ ಶಬ್ದಗಳ ಉಚ್ಚರಣೆಯು ಇಂಗ್ಲಿಷ ಭಾಷೆಯಲ್ಲಿ, ಇಲ್ಲಿ ಬರೆದಂತೆ ಇಲ್ಲ. ಬ್+ಯಾಂಕ್, ಪ್+ಯಾಲೇಸ್ ಎಂಬಂತೆ, ಯಾ ಎಂಬುದರ ಉಚ್ಚರಣೆ ಆ ಭಾಷೆಯಲ್ಲಿ ಇಲ್ಲ. ಬ್ಯಾ, ಪ್ಯಾ ಈ ರೀತಿಯಲ್ಲಿ ಅವು ಸ್ಪಷ್ಟಸಂಯುಕ್ತಾಕ್ಷರಗಳಲ್ಲ; ಈಷತ್–ಸಂಯುಕ್ತಗಳಂತೆ ಅವುಗಳ ಉಚ್ಚರಣೆಯಾಗುವುದು; ಮತ್ತು ಮೇಲೆ ಬರೆದಂತೆ ಅಲ್ಲಿ ಆಕಾರದ (ದೀರ್ಘದ) ಉಚ್ಚರಣೆಯೂ ಇಲ್ಲ. ಅಲ್ಲಿ ದ್ವಿಮಾತ್ರಕವಾದ ದೀರ್ಘವಿರದೆ ಈಷದ್ದೀರ್ಘವಾದ, ಮತ್ತು ಈಷತ್ ಯಸಂಯುಕ್ತವಾದ ಅಕಾರದ ಉಚ್ಚರಣೆ ಇರುವುದು. ಹೀಗಿರುವಾಗ ಬ್ಯಾಂಕ್, ಪ್ಯಾಲೇಸ್ ಮೊದಲಾಗಿ ಬರೆಯುವುದು ಉಚಿತವಾಗಲಾರದು. ಬರೆಹವು ಹೀಗಿದ್ದರೂ ಉಚ್ಚರಣೆಯನ್ನು ಸರಿಯಾಗಿ

ಮುದ್ರಣದಲ್ಲಿ ಇಕಾರದ ಚಿಹ್ನವನ್ನು ಟಕಾರಕ್ಕೆ ಎಡಗಡೆಗೆ ಸೇರಿಸುವರು. ಬರೆಹದಲ್ಲಿ ಬಲಗಡೆಗೆ.

ಮಾಡಿದರಾಯಿತು ಎಂದು ಹೇಳುವುದೂ ಸರಿಯಲ್ಲ; ಬಾಯಿ ಕಣ್ಣನ್ನು ಅನುಸರಿಸ ಬೇಡವೇ? ಕಣ್ಣು ನೋಡುವುದು ಒಂದನ್ನು; ಬಾಯಿ ಉಚ್ಚರಿಸುವುದು ಬೇರೊಂದನ್ನು; ಇದು ಅನುಚಿತ. ಇಂತಹ ಶಬ್ದಗಳನ್ನು ಷೆಕ್ ಮೊದಲಾಗಿ ಬರೆಯುವುದು ನೆರೆನಾಡಿನಲ್ಲಿ (ಮಹಾರಾಷ್ಟ್ರದಲ್ಲಿ) ವಾಡಿಕೆಯಾಗಿದೆ. ಇಂಥ ಉಚ್ಚರಣೆಯ ಚಿಹ್ನವು ನಮ್ಮ ದೇಶೀಯ ಲಿಪಿಗಳಲ್ಲಿಲ್ಲವಾದುದರಿಂದ ನಾವೂ ಇದೇ ಚಿಹ್ನವನ್ನು ಉಪಯೋಗಿಸಬೇಕು. ಎಂದರೆ ಬೆಂಕ್ ಪೆಲೇಸ್ ಈ ರೀತಿ ಬರೆಯಬೇಕು. ಇದನ್ನೊಪ್ಪಿದರೆ ನಮ್ಮ ಕ್ರಮಿಕ ಪುಸ್ತಕಗಳಲ್ಲಿ ಕೆಳಗೆ ತೋರಿಸಿದಂತಹ ಶಬ್ದಗಳನ್ನು ಅವುಗಳ ಮುಂದೆ ತೋರಿಸಿದ ರೀತಿಯಲ್ಲಿ ಬರೆಯಬೇಕು.

ಈಗ ಇದ್ದುದು	(ಕ್ರಮಿಕ ಓದಿನ ಪುಸ್ತಕ)	ಮುಂದೆ ಬರೆಯತಕ್ಕುದು
ಗ್ಯಾಲಿಲಿಯೋ	೨೧೧ ಪುಟ.	ಗೆಲಿಲಿಯೋ
ಪೋಟ್ಯಾಶ್	೨೪೬	ಪೋಟೆಶ್
ಬ್ಯಾಟರಿ	೨೪೬	ಬೆಟರಿ
ಕ್ಯಾಬಿನೇಟ್	೧೪೨	ಕೆಬಿನೇಟ್
ಬ್ಯಾಲನ್ಸ್	೨೧೩	ಬೆಲನ್ಸ್
ಲಾ. ಕ್ಯಾನಿಂಗ್	೧೫೯	ಲಾ. ಕೆನಿಂಗ್

(೧೦) ಕಾಲೇಜ್, ಡಾಕ್ಟರ್ ಆಫೀಸ್ ಮುಂತಾದ ಶಬ್ದಗಳಲ್ಲಿ ಆಕಾರದ ಉಚ್ಚರಣೆಯು ಓಕಾರವನ್ನು ಹೋಲುವುದು. ಮಂಗಳೂರಿನವರು ಇಂತಹ ಕೆಲವು ಶಬ್ದಗಳಲ್ಲಿ ಓ ಕಾರವನ್ನೇ ಉಚ್ಚರಿಸುವರು, ಬರೆಯುವರು. ಉದಾ—ಕೋಲೇಜ್—(ಕಾಲೇಜ್). ಆದರೆ ಆ ಶಬ್ದಗಳಲ್ಲಿ ಉಚ್ಚರಣೆ ಪೂರ್ಣವಾಗಿ ಓಕಾರದಂತೆ ಇಲ್ಲ. ಆದುದರಿಂದ ಅಲ್ಲಿ ಆಕಾರದ ಮೇಲ್ಗಡೆ ◡ ಈ ಚಿಹ್ನವನ್ನು ಉಪಯೋಗಿಸುವುದು ವಾಡಿಕೆಯಾಗಿದೆ.* ಅದರೆ ನಮ್ಮ ಕ್ರಮಿಕ ಪುಸ್ತಕಗಳಲ್ಲಿ ಈ ತರದ ಉಚ್ಚರಣೆಯಿರುವಲ್ಲಿ ಎಲ್ಲೆಡೆಗಳಲ್ಲಿ ಆಕಾರದ ಮೇಲ್ಗಡೆ ಈ ಚಿಹ್ನವನ್ನು ಉಪಯೋಗಿಸಿಲ್ಲ.

---

* ಆಕಾರದ ಮೇಲ್ಗಡೆಯ ಈ ಚಿಹ್ನದ ಸ್ಥಳದಲ್ಲಿ ಕೆಲವರು ◡ ಈ ಚಿಹ್ನವನ್ನು ಕೆಲವು ದಿವಸಗಳ ಪೂರ್ವದಲ್ಲಿ ಉಪಯೋಗಿಸುತ್ತಿದ್ದರು. ಮರಾಟಿಯಲ್ಲಿ ಅನುಸ್ವಾರವು ಅಕ್ಷರದ ಮೇಲ್ಗಡೆ ಬರುವುದು. ಅದರ ಚಿಹ್ನವಾದ ಸೊನ್ನೆಯನ್ನು ಅವರು ಈ ಚಿಹ್ನದ ನಡುವೆ ಉಪಯೋಗಿಸುವರು; ಉದಾ: ಷೆಕ್ ಬೆಂಂಬೇ. ಅಂಧಾನುಕರಣದ ಫಲವಾಗಿ ನಮ್ಮಲ್ಲಿ ಇನ್ನೂ ◡ ಈ ಚಿಹ್ನವು ಕಾಣಿಸುತ್ತಿದೆ!

ಉದಾ: ಕೃಪಿಕಳನೆಯ ಪುಸ್ತಕ

ಇದ್ದುದು	ಪುಟ	ಇರಬೇಕಾದುದು
ಜಾರ್ಜರವರು	೧	ಜಾರ್ಜರವರು
ಆಲ್ಬರ್ಟರವರು	೫೬	ಆಲ್ಬರ್ಟರವರು
ಲಾರ್ಡ	೪೪	ಲಾರ್ಡ್
ಸರ್ ಥಾಮಸ್	೪೭	ಸರ್ ಥಾಮಸ್
ಆರ್ಥರವೆಲ್ಲಸ್ಲಿ	೧೨೭	ಆರ್ಥರ್‌ವೆಲ್ಲಸ್ಲಿ

ಅಕಾರದ ಮತ್ತು ಆಕಾರದ ಮೇಲಿನ ಈ ಚಿಹ್ನವನ್ನು ಹಲವು ವರ್ಷಗಳ ಪೂರ್ವದಲ್ಲಿಯೇ ಬಳಕೆಯಲ್ಲಿ–ಸಾಮಾನ್ಯಜನರ ಬಳಕೆಯಲ್ಲಿ ಕೂಡ–ತಂದ ನಮ್ಮ ನೆರೆನಾಡಿನ ಭ್ರಾತೃವರ್ಗದ ಮರಾಟಿಗರನ್ನು ನಾವು ಅಭಿನಂದಿಸುವೆವು. **ಕೆಂಕ, ಕೆಂಚೆ, ಕೆಂಟರಿ, ಜೆಂತೆ** ಈ ರೀತಿ ಬರೆಯುವದು ಅವರಲ್ಲಿ ರೂಢವಾಗಿ ಹೋಗಿದೆ. ನಾಟಕ ಸಿನೇಮಗಳ ಪ್ರಕಟನೆಗಳಂತಹ ಸಾಮಾನ್ಯ ಸ್ಥಳಗಳಲ್ಲಿಯೂ ಮರಾಟಿಗರಲ್ಲಿ ಈ ಉಚ್ಚರಣೆಗಳ ಸರಿಯಾದ ಬರೆಹವು ನೆಲೆಗೊಂಡಿರುವುದನ್ನು ನೋಡಿ ನಾವು ಇನ್ನೂ ಎಚ್ಚರಪಡಬೇಡವೇ ?

ಇನ್ನು ಕೆಲವು ದೋಷಗಳು ಗ್ರಾಮ್ಯರವು. ಅವು–(೧) ಒಂದೇ ವ್ಯಂಜನಕ್ಕೆ ಎರಡು ಸ್ವರ ಚಿಹ್ನಗಳನ್ನು ಕೂಡಿಸುವುದು. ಉದಾ: ಕ್ಲೋರೈಡ್, ನೈಟ್ರೆಕ್, ಸ್ಟೈಫನ್, ರಿಯ್ಯೂತಿ, ಸೈಕಲ್ ಮುಂ. ರೈ=ರ್+ಆ+ಐ; ನೈ=ನ್+ಆ+ಐ. ಒಂದು ವ್ಯಂಜನಕ್ಕೆ ಒಂದಕ್ಕಿಂತ ಹೆಚ್ಚಿಗೆ ಸ್ವರಗಳನ್ನು ಸೇರಿಸಿ ಉಚ್ಚರಿಸುವುದು ಮನುಷ್ಯನ ಮುಖ ಯಂತ್ರಕ್ಕೆ ಅಸಾಧ್ಯವಾದುದು. ಆದುದರಿಂದ ಆ ಉಚ್ಚರಣೆ ಅಸಂಭವಿ. ಕೈಷ್ಣ, ಕರ್ತೃ ಈ ರೀತಿಯಾದ ಬರೆಹದೊಳಗಿನ ಒಂದು ವ್ಯಂಜನಕ್ಕೆ ಎರಡು ಸ್ವರ ಚಿಹ್ನಗಳನ್ನು ಸೇರಿಸಿದ ಕೈ, ತ್ರು ಎಂಬಿವುಗಳ ಉಚ್ಚರಣೆ ಅಸಂಭನವಾಗಿರುವಂತೆ ರೈ, ನೈ ಮುಂತಾದುವುಗಳ ಉಚ್ಚರಣೆಯೂ ಅಸಂಭವವಾಗಿದೆ. ಮಂಗಳೂರ ಕಡೆಗೆ ಈತರದ ಬರೆಹವು ಕಾಣಬರುತ್ತಿದೆ. ಸ್ಟೈಫನ್ ಎಂಬುದನ್ನು ಸಾಯ್ಫನ್, ಸೈಫನ್ ಎಂದು ಬರೆಯಬಹುದು. (೨) ಕೆಲವರು ಒತ್ತನ್ನು ಕೆಳಗೆ ಕೊಡಲಾರದೆ ಕಣ್ಣು ಸುಣ್ಣ ಮೊದಲಾದುವನ್ನು ಕಂಣು, ಸುಂಣ ಮೊದಲಾಗಿ ಬರೆಯುವರು. (೩) And (ಅಂಡ್) ಎಂಬುದನ್ನು ಅಂಡ್ ಎಂದು ಕೆಲವರು, ಆಂಡ್ ಎಂದು ಕೆಲವರು, ಆ್ಯಂಡ್ ಎಂದು ಕೆಲವರು ಬರೆಯುವರು. ಆ್ಯ ಎಂಬುದು ಇ್ಹಾ, ಉ್ಹಾ ಮೊದಲಾದವುಗಳಂತೆ ಉಚ್ಚರಣೆಗೆ ಬಾರದು. (೪) ಈಚೆಗೆ ನಮ್ಮ ಕಡೆ

ಯಲ್ಲಿ ಹೊಸದಾಗಿ ಬಂದ ಅಡ್ಮಿನಿಸ್ಟ್ರೇಟಿವ್ ಆಫಿಸರ್ (Administrativ officer) ಎಂಬ ಶಬ್ದವನ್ನು ಕೆಲವರು ಆಡ್ಮಿನಿಸ್ಟ್ರೇಟಿವ್ ಆಫಿಸರ್ ಎಂದು, ಬೇರೆ ಕೆಲವರು ಅಡ್ಮಿನಿಸ್ಟ್ರೇಟಿವ್ ಆ. ಎಂದು, ಇನ್ನು ಕೆಲವರು ಎಡ್ಮಿನಿಸ್ಟ್ರೇಟಿವ್ ಆ. ಎಂದು ಉಳಿದ ಕೆಲವರು ಆ್ಯಡ್ಮಿನಿಸ್ಟ್ರೇಟಿವ್ ಆ. (!) ಇಲ್ಲವೆ ಆಡ್ಮಿ. ಆ. ಎಂದು ಬರೆಯುವರು. ಆ ಶಬ್ದದ ...ದೈವ; ಆ ವ್ಯಕ್ತಿಯ ಪುಣ್ಯ !

ಮೇಲೆ ಕಾಣಿಸಿದುವನ್ನು ದೋಷಗಳೆಂದು ಒಪ್ಪಿದರೆ ಈ ದೋಷಗಳು(೭–೧೦) ನಮ್ಮ ಕ್ರಮಿಕ ಪುಸ್ತಕಗಳಿಂದಾದರೂ ಕ್ಷಣವಿಲಂಬವನ್ನು ಕೂಡ ಮಾಡದೆ ತೊಲಗಿ ಹೋಗುವುದು ನಮಗೆ ಬೇಕಾದುದು.

ಶುಕ್ರ

ಲೇಖಕ: —ಅಂಬಿಕಾದತ್ತ ಉಪಾಧ್ಯಾಯ ಎಂ. ಎ., ಇವರ ಲೇಖದ ಅನುವಾದ
ವಿ. ಆರ್. ಪ್ಪಿ. ಬೆಟಗೇರಿ ಅಮರಗೋಳ.

ಇದಾದರೂ ಉಳಿದ ಗ್ರಹಗಳಂತೆ ಸೂರ್ಯನ ಸುತ್ತಲೂ ತಿರುಗುತ್ತ ಒಮ್ಮೊಮ್ಮೆ ಪೃಥ್ವಿಗೆ ಸವಿೂಪವಾಗಿ ಅಂದರೆ ೨೬ ಕೋಟಿ ಮೈಲುಗಳ ಮೇಲೆಯೂ, ಒಮ್ಮೊಮ್ಮೆ ದೂರವಾಗಿ ೧೬೦ ಕೋಟಿ ಮೈಲುಗಳ ಮೇಲೆಯೂ ಇರುವನು. ಸೂರ್ಯ ಹಾಗೂ ಚಂದ್ರರ ಹೊರತು ಇವನಷ್ಟು ಪ್ರಕಾಶಮಾನನಾಗಿ ಹೊಳೆಯುವ ಬೇರೆ ಯಾವ ಗ್ರಹವೂ ಇಲ್ಲವೆಂದು ಹೇಳಬಹುದು. ಇವನು ಅತ್ಯಂತ ಪ್ರಕಾಶಮಾನನಾಗಿರುವಾಗ, ಹಗಲು ಹೊತ್ತಿನಲ್ಲಿ ಒಮ್ಮೊಮ್ಮೆ ಬರಿಗಣ್ಣಿಗೆ ಕೂಡ ಕಾಣುವನು.

ಇವನ ವ್ಯಾಸವು ೭೭೦೦ ಮೈಲುಗಳು. ಇವನು ಪೃಥ್ವಿಯಷ್ಟು ದೊಡ್ಡವನಾಗಿರುವನು. ಮತ್ತು ಇವನ ತೂಕವು ೧೩೫೦ ಸಾವಿರ ಪರಾರ್ಧ (೧೩೫ ರ ಮುಂದೆ ೨೨ ಪೂಜೆಗಳು) ಮಣಿಗಳು ಇವನು ೨೨೧ ದಿವಸಗಳಲ್ಲಿ ಸೂರ್ಯನ ಸುತ್ತಲೂ ಒಂದು ಪ್ರದಕ್ಷಿಣೆ ಮಾಡುವನು.

ಇಲ್ಲಿ ಗಾಳಿಯೂ, ಮೋಡಗಳೂ ವಿಶೇಷವಾಗಿರುವವು. ಮತ್ತು ಇಲ್ಲಿಯ ನೀರಿನ ಪ್ರಮಾಣವಾದರೂ ಬಹಳವಾಗಿರುವದು. ಇದು ಬಹಳ ಪ್ರಕಾರದಿಂದ ಭೂಮಿಗೆ ಸರಿಸಮಾನವಾಗಿರುತ್ತದೆಂತಲೂ, ಪ್ರಾಣಿ–ವನಸ್ಪತಿಗಳು ಬದುಕಲಿಕ್ಕೆ

ಬೇಕಾಗುವ ಎಷ್ಟೋ ಭೌತಿಕ ತತ್ವಗಳ ಅನುಕೂಲತೆಯು ಇಲ್ಲಿ ಉಂಟೆಂತಲೂ, ಎಷ್ಟೋ ಜ್ಯೋತಿಃಶಾಸ್ತ್ರಜ್ಞರ ಅಭಿಪ್ರಾಯವಿರುತ್ತದೆ. ಇದರ ಮೇಲಿಂದ ಇಲ್ಲಿ ಪ್ರಾಣಿ-ವನಸ್ಪತಿಗಳು ಇರಬಹುದೆಂದು ಊಹಿಸಲಿಕ್ಕೆ ಅಡ್ಡಿ ಇಲ್ಲ.

ಶನಿ

ಇವನಾದರೂ ಸೂರ್ಯನ ಸುತ್ತಲೂ ತಿರುಗುತ್ತ ಒಮ್ಮೊಮ್ಮೆ ಪೃಥ್ವಿಗೆ ಸಮೀಪವಾಗಿ ಅಂದರೆ, ೭೪೫ ಕೋಟಿ ಮೈಲುಗಳ ಮೇಲೆಯೂ, ದೂರವಿದ್ದಾಗ ೧೦೨೦ ಕೋಟಿ ಮೈಲುಗಳ ಮೇಲೆಯೂ ಬರುವನು. ಇವನು ಗುರುವಿಗಿಂತ ಸ್ವಲ್ಪ ಸಣ್ಣವನು. ಇವನ ವ್ಯಾಸವು ೭೫೧೦೦ ಮೈಲುಗಳು. ಆಕಾರದಲ್ಲಿ ಇವನು ಪೃಥ್ವಿಯ ೭೮೦ ಪಟ್ಟು ದೊಡ್ಡವನಾಗಿರುವನು. ಇವನ ತೂಕವು ೯೭೯೦ ಸಾವಿರ ಪರಾರ್ಧ (೯೭೯ ರ ಮುಂದೆ ೨೨ ಪೂಜಿಗಳು) ಮಣಗಳು.

ಸೂರ್ಯನ ಸುತ್ತಲೂ ತಿರುಗಲಿಕ್ಕೆ ಇವನಿಗೆ ೨೯ ವರ್ಷಗಳು ಬೇಕಾಗುವವು. ಆದ್ದರಿಂದಲೇ ಭಾರತೀಯ ಜ್ಯೋತಿರ್ವಿದರು ಇವನಿಗೆ 'ಶನೈಶ್ಚರ' ನೆಂಬ ಹೆಸರನ್ನು ಕೊಟ್ಟಿರುವರು. ಇವನ ಆಕರ್ಷಣಶಕ್ತಿಯು ತೀರ ಕಡಿಮೆಯಾಗಿರುವದು.

ಇವನು ಆಕಾರ ಹಾಗೂ ಗತಿ ಮೊದಲಾದವುಗಳಲ್ಲಿ ಗುರು ಗ್ರಹವನ್ನು ಹೋಲುವನು. ಇವನ ಸುತ್ತಲೂ ಪ್ರಕಾಶಮಾನವಾದ ಒಂದು ವಲಯವು ಇರುತ್ತದೆ. ಇವನು ಇನ್ನೂ ವಾಯುರೂಪ ಸ್ಥಿತಿಯಲ್ಲಿರುವನು. ಅಲ್ಲದೆ ಇವನಲ್ಲಿ ಸಾಕಷ್ಟು ಉಷ್ಣತೆಯು ಇದ್ದ ಮೂಲಕ ಇವನು ಸೂರ್ಯನಿಂದ ಉಷ್ಣತೆಯನ್ನು ತೆಗೆದುಕೊಳ್ಳುವದು ಕೂಡ ಅವಶ್ಯವಿಲ್ಲೆಂದು, ಎಷ್ಟೋ ಜ್ಯೋತಿರ್ವಿದರ ಅಭಿಪ್ರಾಯವದೆ. ಆದರೆ ಇದಕ್ಕೆ ಸಾಕಷ್ಟು ಪ್ರಮಾಣಗಳಿಲ್ಲ.

ಈ ವರೆಗೆ ಹೇಳಿದ ಗ್ರಹಗಳ ಆಕಾರ-ರೂಪ-ಗತಿ ಮೊದಲಾದವುಗಳ ಮೇಲಿಂದ ವಾಚಕರಿಗೆ ದೂರದರ್ಶಕ ಯಂತ್ರಗಳ ಮಹತ್ವವು ತಿಳಿಯಬಂದಂತಾಗಿದೆ. ಆದರೆ ಇವುಗಳ ಉಪಯೋಗವು ಇಷ್ಟರಿಂದಲೇ ಸಾಕಷ್ಟು ಆಯಿತೆಂದು ಹೇಳಿದರೆ ತೀರದು. ಗ್ರಹಗಳಿಗಿಂತ ಕೋಟಿಗಟ್ಟಲೆ ಪಟ್ಟು ದೂರವಿರುವ ನಕ್ಷತ್ರಗಳ ಮಾಹಿತಿಯನ್ನಾದರೂ, ಈ ಯಂತ್ರಗಳ ಸಹಾಯದಿಂದಲೇ ಮಾಡಿಕೊಂಡಿರುವರು.

ನಾವು ಈ ದಿನ ಯಾವ ನಕ್ಷತ್ರವುಂಟು ಎಂದು ನಮ್ಮಲ್ಲಿಯ ಜ್ಯೋತಿಷಿಗಳನ್ನು ಕೇಳಲು, ಅವರು ಪಂಚಾಂಗ ನೋಡಿ, ಇಲ್ಲವೆ ಕೈಬೆರಳುಗಳಿಂದ ಅಶ್ವಿನಿ, ಭರಣಿ ಇತ್ಯಾದಿಯಾಗಿ ಎಣಿಸಿಕೊಂಡು, ಆ ದಿವಸದ ನಕ್ಷತ್ರವನ್ನು ಹೇಳುವರು. ಇದಕ್ಕೂ

ಜಾಣರಾದವರು ಆಕಾಶದಲ್ಲಿ ನಕ್ಷತ್ರಗಳಿದ್ದ ಸ್ಥಳಗಳನ್ನು ನೋಡಿ, ಆ ದಿನದ ನಕ್ಷತ್ರವನ್ನು ಹೇಳುವರು. ಮತ್ತು ಕೆಲವರು ಅವುಗಳನ್ನು ನಮಗೆ ಕೂಡ ತೋರಿಸಬಹುದು. ಆದರೆ ಅವುಗಳ ಬಗ್ಗೆ ಸಾಕಷ್ಟು ಜ್ಞಾನವು ದುರ್ಬೀನಗಳ ಸಹಾಯವಿಲ್ಲದೆ, ಬರಿಗಣ್ಣಿನಿಂದ ಆಗಲಾರದು. ಈ ಚಿಕ್ಕ ಚಿಕ್ಕ ತಾರೆಗಳು ವಿಶ್ವದ ಯಾವ ಮೂಲೆಯಲ್ಲಿ ಮಿಂಚುತ್ತವೆಂಬದನ್ನು ಹೇಳಲಸಾಧ್ಯವು. ನಮ್ಮ ಪೃಥ್ವಿಗೆ ತೀರ ಸಮೀಪದ ನಕ್ಷತ್ರವು ೨೪ ಲಕ್ಷ ಕೋಟಿ (೨೪ ರ ಮುಂದೆ ೧೩ ಪೂಜೆಗಳು) ಮೈಲುಗಳ ಮೇಲುಂಟು. ಅಂದರೆ ಸೂರ್ಯನು ನಮ್ಮಿಂದ ಎಷ್ಟು ದೂರ ಇರುವನೋ ಅದರ ೨೬೦ ಸಾವಿರ ಪಟ್ಟು ದೂರವಾಗಿರುವದು. ಪ್ರಕಾಶದ ವೇಗವು ೧ ಸೇಕಂಡಿಗೆ ೧,೮೬,೨೮೪ ಮೈಲುಗಳು. ಈ ವೇಗದಿಂದ ಒಬ್ಬ ಮನುಷ್ಯನು ಹೋಗುತ್ತಾನೆಂದು ಕಲ್ಪಿಸಿದರೆ, ನಮಗೆ ಎಲ್ಲಕ್ಕೂ ಸಮೀಪವಾಗಿರುವ ನಕ್ಷತ್ರಕ್ಕೆ ಅವನು ಹೋಗಿ ಮುಟ್ಟಬೇಕಾದರೆ, ೩೦೦೦ ವರ್ಷಗಳು ಬೇಕಾಗುವವು.

ಆರ್ದ್ರಾ

ಈ ನಕ್ಷತ್ರದ ಬಣ್ಣವು ಕೆಂಪು. ಇದು ಸೂರ್ಯನಿಗಿಂತ ೧೨೦೦ ಪಟ್ಟು ಹೆಚ್ಚು ಪ್ರಕಾಶಮಾನವಾದದ್ದು. ಇದರ ವ್ಯಾಸವು ೨೬ ಕೋಟಿ ಮೈಲುಗಳು. ಆಕಾರದಲ್ಲಿ ಇದು ಸೂರ್ಯನಿಗಿಂತ ೨೭ ಕೋಟಿ ಪಟ್ಟು, ಪೃಥ್ವಿಗಿಂತ ೩೫೪ ಲಕ್ಷ ಕೋಟಿ ಪಟ್ಟು (೩೫೪ರ ಮುಂದೆ ೧೩ ಪೂಜೆಗಳು) ದೊಡ್ಡದೂ ಇರುವದು. ಮತ್ತು ಇದು ಪೃಥ್ವಿಯಿಂದ ೧೨೮ ಲಕ್ಷ ಕೋಟಿ (೧೨೮ರ ಮುಂದೆ ೧೩ ಪೂಜೆಗಳು) ಮೈಲು ದೂರದಲ್ಲಿರುವದರಿಂದ ಅಷ್ಟು ಸಣ್ಣದಾಗಿ ಕಾಣುತ್ತದೆ. ಇದರ ತೂಕವು ೧೧೫೫೫೩೦೦೦೦೦೦೦೦೦ ಪರಾರ್ಧ (೧೧೫೫೩೦ ರ ಮುಂದೆ ೧೩ ಪೂಜೆಗಳು) ಮಣಗಳು

ತ್ರಿಶಂಕು

ಇವನು ಇಂದ್ರಲೋಕದಿಂದ ಕೆಳಗೆ ದಬ್ಬಲ್ಪಟ್ಟವನು. ವಿಶ್ವಾಮಿತ್ರನು ಅವನನ್ನು ಮೇಲೆ ದೂಡಲು, ಅವನನ್ನು ದೇವಲೋಕದವರು ಮೇಲೆ ಬರಗೊಡಲೊಲ್ಲರು. ವಿಶ್ವಾಮಿತ್ರನು ಕೆಳಗೆ ಬೀಳಗೊಡಲೊಲ್ಲನು. ಹೀಗಾಗಿ ಅವನು ನಡು ವೆಯೇ ಜೋತಾಡುತ್ತ ನಿಂತಿರುವನು. ಆ ಅನಾಥ ಪ್ರಾಣಿಯು ೧೧೬೮೦೦೦೦೦ ಕೋಟಿ (೧೧೬೮ರ ಮುಂದೆ ೧೩ ಪೂಜಿಗಳು) ಮೈಲುಗಳ ಮೇಲೆ ಅಂತರೀಕ್ಷದಲ್ಲಿ ತೂಗಾಡುತ್ತ ನಿಂತುಕೊಂಡಿರುವನು.

ಜ್ಯೇಷ್ಠಾ

ಇಷ್ಟು ದಿನಗಳ ವರೆಗೆ ಶೋಧವಾದ ಎಲ್ಲ ನಕ್ಷತ್ರಗಳಲ್ಲಿ ಇದು ದೊಡ್ಡದು. ಇದರ ವ್ಯಾಸವು ೪೧,೫೬,೮೦,೦೦೦ ಮೈಲುಗಳು ಇದರ ಬಣ್ಣವು ಕೆಂಪು. ಹಾಗೂ

ಇದು ಸೂರ್ಯನಿಗಿಂತ ೪೦೦ ಪಟ್ಟು ಹೆಚ್ಚು ಪ್ರಕಾಶವುಳ್ಳದ್ದು. ಆಕಾರದಲ್ಲಿ ಇದು ಸೂರ್ಯನಿಗಿಂತ ೧೧೦೫೬ ಕೋಟಿ ಪಟ್ಟು, ಪೃಥ್ವಿಗಿಂತ ೧೪೩೬೬೦೦೦೦ ಕೋಟಿ ಪಟ್ಟು ದೊಡ್ಡದಾಗಿರುವದು. ಇದರ ತೂಕವು (೧೧೧೫೧ ರ ಮುಂದೆ ೨೭ ಪೂಜೆಗಳು) ಮಣಗಳು.

ಈ ನಕ್ಷತ್ರಗಳ ಮೇಲೆ ಆಕಾಶಗಂಗೆಯು ಇರುವದು. ಅದರಲ್ಲಿ ಅಸಂಖ್ಯ ನಕ್ಷತ್ರಗಳು ಇರುವವು. ಇಂದಿನ ವರೆಗೆ ಇಂಥ ೪೦೦೦ ನಕ್ಷತ್ರಗಳ ಶೋಧವು ಆಗಿರುವದು. ಇವುಗಳಲ್ಲಿಯ ಪ್ರತಿಯೊಂದು ನಕ್ಷತ್ರವು ಈ ವಿಶ್ವದಷ್ಟು ದೊಡ್ಡದೂ, ವಿಸ್ತಾರವಾದದ್ದೂ ಇರುವದು. ಮತ್ತು ಇವುಗಳಲ್ಲಿಯ ಯಾವದೊಂದು ನಕ್ಷತ್ರದ ತೂಕವು ೧೧೪೪೧೪೪೫೭ (ಇದರ ಮುಂದೆ ೩೦ ಪೂಜೆಗಳು) ಮಣವಿರುವದು. ದೂರದರ್ಶಕ ಯಂತ್ರದ ಸಹಾಯದಿಂದ ಈ ನಕ್ಷತ್ರವು ಪೃಥ್ವಿಯಿಂದ ೨ ಪರಾರ್ಧ ೪ ಮಧ್ಯ (೨೪ ರ ಮುಂದೆ ೧೬ ಪೂಜೆಗಳು) ಮೈಲು ದೂರದಲ್ಲಿರುವದೆಂದು ಶೋಧ ಮಾಡಿರುವರು.

ಇವತ್ತಿನ ವರೆಗೆ ಶೋಧವಾದ ನಕ್ಷತ್ರಗಳಲ್ಲಿ ಎಲ್ಲಕ್ಕೂ ದೂರಿನ ನಕ್ಷತ್ರವು ನಮ್ಮಿಂದ ೮೨೫೫ ಪರಾರ್ಧ (೮೨೫೫ ರ ಮುಂದೆ ೧೪ ಪೂಜೆಗಳು) ಮೈಲು ದೂರವಿರುವದು. ಮತ್ತು ಅವುಗಳಲ್ಲಿಯ ಕೆಲಕೆಲವು ನಕ್ಷತ್ರಗಳು ಸೂರ್ಯನ ೬೦೦ ಕೋಟಿ ಪಟ್ಟು ಪ್ರಕಾಶವನ್ನು ಕೊಡತಕ್ಕವುಗಳಾಗಿರುವವು.

ವಿಶ್ವದ ಈ ವಿಚಿತ್ರತೆಯನ್ನು ನೋಡಿ, ವಿಶ್ವಕರ್ತನಾದ ಪರಮೇಶ್ವರನ ಅಸ್ತಿತ್ವದ ಬಗ್ಗೆ ಯಾರೂ ಅಲ್ಲಗಳೆಯಲಾರರು. ಹಾಗೂ ಅವನ ಶಕ್ತಿಯು ಇಷ್ಟೇ ಇರುತ್ತದೆಂಬದೂ ತಿಳಿಯಲಾರರು. ಆದ್ದರಿಂದ ಅವನಿಗೆ ವಿದ್ವಾಂಸರು ಸರ್ವ ಶಕ್ತಿಮಂತನೆಂಬ ಹೆಸರನ್ನು ಕೊಟ್ಟಿರುವರು. ಅಂಥ ಪರಮೇಶ್ವರನ ಮಹಿಮೆ, ಮನಸ್ಸು, ವಾಣಿ ಮೊದಲಾದವುಗಳಿಗೆ ಅಗೋಚರವಾಗಿರುವದು. ಆದ್ದರಿಂದಲೇ ಪರಮೇಶ್ವರನನ್ನು ಕುರಿತು, ಒಬ್ಬ ವಿದ್ವಾಂಸನು ಹೀಗೆ ಹೇಳಿದ್ದಾನೆ.

अतीतः पंथानं तव च महिमा वाङ्मनसयो-
रतद्व्यावृत्त्या यं चकितमभिधत्ते श्रुतिरपि

ಭೂತಾನ ಸಂಸ್ಥಾನ

[ಒಂದು ಮಹಾರಾಷ್ಟ್ರ ಪತ್ರಿಕೆಯಿಂದ ಎತ್ತಿ ಬರೆದದ್ದು.]

ಬರಹಗಾರ:—ಶ್ರೀ. ಲಕ್ಷ್ಮಣ, ವಿಶ್ವನಾಥ, ಘಾಟಕ, ಕೋಟುವಾಚಿಗಿ.

ಭೂತಾನದ ರಾಜ್ಯವು ಬ್ರಹ್ಮಪುತ್ರಾ ನದಿಯ ದಂಡೆಯ ಮೇಲೆ ಇದೆ. ಅಲ್ಲಿಯ ಜನರು 'ಭೂತಾನಿ' ಅಥವಾ 'ಭೋರಿಯಾ' ಎಂಬ ಹೆಸರಿನಿಂದ ಸಂಬೋಧಿಸಲ್ಪಡುವರು. ಈ ದೇಶದಲ್ಲಿ ಒಟ್ಟು ಒಂಬತ್ತು ಭಾಗಗಳಿವೆ. ರಾಜಧಾನಿಯ ಸ್ಥಾನವು 'ಪುತಾಖಾ' ಎಂಬದಿದೆ. ಭೂತಾನ ದೇಶಕ್ಕೆ ಈರ್ವರು ರಾಜರಿರುತ್ತಾರೆ. ಅವರಲ್ಲಿ ಒಬ್ಬನಿಗೆ 'ದೇವರಾಜ'ನೆಂದೂ ಮತ್ತೊಬ್ಬನಿಗೆ ಧರ್ಮರಾಜ'ನೆಂದೂ ಕರೆಯುವರು. ದೇವರಾಜ, ಧರ್ಮರಾಜ ಇವೆರಡೂ ನಿಜವಾಗಿಯೂ ಪದವಿಗಳಿವೆ. ದೇವರಾಜನೇ ಭೂತಾನದ ಮಹಾರಾಜಾಧಿರಾಜನಾಗಿರುವನು. ಧರ್ಮರಾಜನ ಮೇಲೆ ಸಹ ಅವನ ಅಧಿಕಾರ ನಡೆಯುವದು. ದೇಶ ಹಾಗು ಸಂಪತ್ತು ಇವುಗಳ ಮೇಲೆ ಧರ್ಮರಾಜನ ಅಧಿಕಾರವೇ ನಡೆಯುತ್ತಿದ್ದು, ಅವನು ಜನರಿಂದ ಆರಿಸಲ್ಪಟ್ಟವನಾಗಿರಬೇಕೆಂದು ಅಲ್ಲಿ ನಿಯಮವಿದೆ.

ಭೂತಾನ ದೇಶವು ಹೆಚ್ಚಾಗಿ ಗುಡ್ಡಗಾಡಿದೆ. ಅದರ ನಾಲ್ಕೂ ಬದಿಗಳು ಪರ್ವತಶ್ರೇಣಿಗಳಿಂದ ಪರಿವೇಷ್ಟಿತವಾಗಿದ್ದು, ಮಧ್ಯದಲ್ಲಿಯ ಬೈಲು ಪ್ರದೇಶದ ಮೇಲೆ ಆ ನಾಡು ನೆಲಸಿದೆ. ಇಲ್ಲಿಯ ರಾಜಕರ್ತರು ಸಂಪೂರ್ಣ ಶಾಸನಾಧಿಕಾರಿಗಳಿರುವರು. ರಾಜ್ಯದಲ್ಲಿಯ ಸೈನ್ಯ, ಬೊಕ್ಕಸ, ಕಟ್ಟಳೆ, ಶಾಂತತಾ–ರಕ್ಷಣ ಮೊದಲಾದ ಎಲ್ಲ ವಿಷಯಗಳು ಧರ್ಮರಾಜನ ಕೈಯಲ್ಲಿರುತ್ತವೆ. ದೇವರಾಜನೇ ನಿಜವಾಗಿ ಭೂತಾನದ ಸಮ್ರಾಟನಿದ್ದರೂ ಅವನ ಕೈಯಲ್ಲಿ ಮಾತ್ರ ಪ್ರತ್ಯಕ್ಷ ಅಧಿಕಾರವಿರುವದಿಲ್ಲ. ದೇಶದಲ್ಲಿಯ ಸಕಲ ಧರ್ಮ ಮತಗಳ ಪ್ರಮುಖ ಮಹಂತನೇ ಅಲ್ಲಿಯ ಮುಖ್ಯ ಧರ್ಮಾಚಾರ್ಯನಾಗಿರುವನು. ಭೂತಾನ ದೇಶವು ಮುಖ್ಯತಃ ಕಾಲ, ಶಿಸುವು, ಓಕ ಇತ್ಯಾದಿ ಗಗನಚುಂಬಿತ ವೃಕ್ಷಗಳಿಂದಲೂ, ವನಸ್ಪತಿಗಳಿಂದಲೂ ತುಂಬಿಕೊಂಡಿದ್ದು, ಅವುಗಳ ದಡಸಾದ ಅರಣ್ಯಗಳಲ್ಲಿ ಸಿಂಹ, ಹುಲಿ, ಚಿರ್ಚು, ಕರಡಿ ಮೊದಲಾದ ಅಸಂಖ್ಯ ಹಿಂಸ್ರಪ್ರಾಣಿ–ಜಾತಿಗಳಿವೆ. ಭೂತಾನವು ಸುಜಲವೂ ಸುಫಲವೂ ಆದ ನಾಡಾಗಿದೆ. ಅಲ್ಲಿಯ ಕೃಷಿಕರು ಅತ್ಯಂತ ಶ್ರಮಸಹಿಷ್ಣುಗಳಿದ್ದು, ಜೋಳ, ಮೆಕ್ಕೆಯಜೋಳ, ಸೆಜ್ಜೆ, ಗೋದಿ ಮೊದಲಾದ ಕಾಳುಗಳ ಉತ್ತಮ ಪೈರನ್ನು ಅವರು ತಕ್ಕೊಳ್ಳುವರು. ಇಲ್ಲಿಯ ಜನರು ಹಿಂದುಗಳಿದ್ದರೂ ಅವರ ಮೇಲೆ ಬುದ್ಧ ಧರ್ಮದ ಛಾಯೆಯು ಹೆಚ್ಚಾಗಿ ಅಂಟಿಕೊಂಡಿದೆ. ತಮ್ಮ ಗುರುಗಳಿಗೆ

ಅವರು 'ಲಾಮಾ' ಎಂದು ಕರೆಯುತ್ತಿದ್ದು, ಅವರ ಮೇಲೆ ದೇವರಂತೆ ಆ ಜನರ ವಿಶ್ವಾಸವಿರುತ್ತದೆ. ದೇಶದಲ್ಲಿಯ ವಿದ್ವಾಂಸರಿಗೆಲ್ಲ ಈ 'ಲಾಮಾ' ಪದವಿಯು ದೊರೆಯುತ್ತಿದ್ದು, ಧರ್ಮ ಪ್ರಚಾರದ ವಿನಹ ಬೇರೆ ಯಾವ ಕಾರ್ಯಗಳ ಕಡೆಗೂ ಅವರ ಲಕ್ಷ್ಯವಿರುವದಿಲ್ಲ.

ಭೂತಾನ ದೇಶದ ಪ್ರವೇಶ ಮಾರ್ಗಗಳ ಮೇಲೆಲ್ಲ ತದ್ದೇಶಿಯರಿಂದ ಅತ್ಯಂತ ಭದ್ರವಾದ ಕಾವಲು ಇಡಲ್ಪಟ್ಟಿದೆ. ಅಲ್ಲಿಯ ಪ್ರತಿಯೊಂದು ಪ್ರವೇಶ ದ್ವಾರದ ಮೇಲೆ ಒಂದು ಕೋಟೆಯಿದ್ದು, ಅದರಲ್ಲಿ ಸಸೈನ್ಯನಾಗಿ ಯಾವಾಗಲೂ ಓರ್ವ ದಂಡಿನ ಅಧಿಕಾರಿಯು ಕಾದುಕೊಂಡಿರುವನು. ಅಪ್ಪಣೆ ಪಡೆದದ ವಿನಹ ಯಾವ ಪರಸ್ಥನಿಗೂ ಈ ದೇಶದಲ್ಲಿ ಬರಗೊಡುವದಿಲ್ಲ. ಅತ್ಯಂತ ಸೂಕ್ಷ್ಮ ರೀತಿಯಿಂದ ಇಲ್ಲಿ ಪರಸ್ಥರ ವಿಚಾರಣೆ ಮಾಡಲ್ಪಡುವದು. ಆಂಗ್ಲರಿಗೂ, ಇತರ ಪಾಶ್ಚಿಮಾತ್ಯ ಜನರಿಗಂತೂ ಈ ದೇಶದಲ್ಲಿ ಪ್ರವೇಶದ ಅಪ್ಪಣೆ ದೊರೆಯುವದು ಅತ್ಯಂತ ದುರ್ಗಮವಾಗಿದೆ. ಈ ಸಂಸ್ಥಾನದಲ್ಲಿ ರಾಜಪುತಾನಾದ ಭೋರಿಯಾ ಎಂಬದೊಂದೇ ಶುದ್ಧವಾದ ಹಿಂದೂ ಜಾತಿಯಿದೆ. ತಿಬೇಟೀ ಇಲ್ಲವೆ ಬೌದ್ಧ ಜಾತಿಯೊಡನೆ ಯಾವ ರೀತಿಯಿಂದಲೂ ಈ ವರೆಗೆ ಅವರ ಸಂಕರವಾಗಿಲ್ಲ. ಈ ಜನರಿಗೆ ಖಡ್ಗ, ಭಾಲೆ, ಚೂರಿ, ಬಂದೂಕು ಮೊದಲಾದ ಶಸ್ತ್ರಗಳನ್ನು ಧರಿಸಿ, ತಮ್ಮ ಶರೀರವನ್ನು ಹೆಚ್ಚಾಗಿ ಶೃಂಗರಿಸಿಕೊಳ್ಳುವ ಸೊಗಸುಅದೆ, ಕಬ್ಬಿಣದ ಸರಪಳಿಯಿಂದ ತಯಾರಿಸಲ್ಪಟ್ಟ ಕವಚಗಳನ್ನೂ ಅವರು ಧರಿಸುವರು. ವಿದೇಶೀ ಸಂಸ್ಕೃತಿ-ಶಿಕ್ಷಣಗಳಿಂದ ದೇಶದ ಘಾತವಾಗುವದೆಂದು ಕಲ್ಪನೆಯಿದ್ದ ಮೂಲಕ ಅವರು ಅವುಗಳ ಅನುಕರಣ ಮಾಡುವದು ಅತ್ಯಂತ ಘೋರವಾದ ಪಾಪಕೃತ್ಯವೆಂದು ತಿಳಿಯುತ್ತಾರೆ. ಅದಕ್ಕಾಗಿಯೇ ಅವರು ವಿದೇಶೀ ಜನರನ್ನು ಸ್ವದೇಶದಲ್ಲಿ ಹೆಜ್ಜೆ ಸಹ ಇಡಗೊಡುವದಿಲ್ಲ. ಭೋರಿಯಾ ಜನರಿಗೆ ಸ್ವತಹದ ಸಂಸ್ಕೃತಿ-ಕಟ್ಟಳೆ-ವೇಷ-ಧರ್ಮ-ಭಾಷೆಗಳಿವೆ. ಯಾವ ಕಾರಣದ ದೆಸೆಯಿಂದಲೂ ಈ ದೇಶವು ಪರಸ್ಥರ ಮೇಲೆ ಅವಲಂಬಿಸಿರುವದಿಲ್ಲ.

ಭೂತಾನದ ಕ್ಷೇತ್ರಫಲವು ಸುಮಾರು ಹತ್ತು ಸಾವಿರ ಚೌರಸಮೈಲಿದ್ದು, ಜನಸಂಖ್ಯೆಯು ಒಟ್ಟು ಐದ್ದು ಲಕ್ಷಕ್ಕೆ ಸಮೀಪಿಸಿದೆ. ದೇಶವು ಅತ್ಯಂತ ಸಮೃದ್ಧವೂ, ಆತ್ಮತೃಪ್ತವೂ ಇರುವ ಮೂಲಕ ಅದಕ್ಕೆ ಎರಡನೆಯವರ ಮೋರೆಯ ಕಡೆಗೆ ನೋಡುವ ಕಾರಣವಿಲ್ಲ. ಭೋರಿಯಾ ಜನರು ಕೈಗಾರಿಕೆಯಲ್ಲಿ ಒಳ್ಳೇ ಕುಶಲರಿರುವರು. ಅವರ ಮನೆ, ಬಾಗಿಲು, ಕಿಡಿಕೆ ಇವುಗಳಲ್ಲಿ ಸಹ ಅವರು ಮಾಡಿದ ಕೈಗಾರಿಕೆಯ ಅಪೂರ್ವತೆಯು ಕಂಡುಬರುವದು. ಅವರ ದೇಶದಲ್ಲಿ ಬೆಳ್ಳಿ, ಬಂಗಾರ, ಹಿತ್ತಾಳೆ ಮೊದಲಾದ ಧಾತುಗಳಲ್ಲಿಯ ಹಾಗು ಕಟ್ಟಿಗೆಯಲ್ಲಿಯ ನಕ್ಷೆಯ ಕೆಲಸವು ಒಳ್ಳೇ ನೋಡತಕ್ಕಂಥದ್ದಿರುವದು.

೪-೪೯೦೭

ಪ್ರಕಟನೆ

ಹೆಣ್ಣುಮಕ್ಕಳ ವ್ಹರ್ನ್ಯಾಕ್ಯುಲರ ಪರೀಕ್ಷೆ ದಕ್ಷಿಣಭಾಗ

೧೯೩೬ನೆಯ ಇಸವಿಯಲ್ಲಾಗುವ ಹೆಣ್ಣುಮಕ್ಕಳ ವ್ಹ. ಫಾ. ಪರೀಕ್ಷೆಗೆ ಕೆಳಗೆ ಕಾಣಿಸಿದ ಪಾಠಗಳು ಗೊತ್ತು ಮಾಡಲ್ಪಟ್ಟಿವೆ.

ಕನ್ನಡ

ವಾಚನ ಪಾಠಗಳು: —ಕ್ರಮಿಕ ೬ನೆಯ ಪುಸ್ತಕ (೧೯೩೪ರ ಎಡಿಶನ್)

ಪಾಠಗಳು:—೧, ೨, ೭, ೯, ೧೦, ೧೧, ೧೨, ೧೩, ೧೭, ೧೮, ೨೧, ೨೩, ೨೪, ೨೭, ೨೮, ೨೯, ೩೦, ೩೧, ೩೭, ೩೮, ೪೧, ೪೨ (ಇಪ್ಪತ್ತೈರಡು ಪಾಠಗಳು).

ಕವಿತಾ ಪಾಠಗಳು:—೨೦, ೩೨, ೪೧, ೪೫, ೪೮, ೫೨ (ಆರು ಪಾಠಗಳು)

ಇತಿಹಾಸ ಪಾಠಗಳು:—೫೪, ೫೫, ೫೬, ೫೭, ೫೮ (ಐದು ಪಾಠಗಳು)

ಭೂಗೋಲ ಪಾಠಗಳು:—೬೪, ೬೫, ೬೬, ೬೭, ೬೮ (ಐದು ಪಾಠಗಳು)

ಮರಾಠಿ

ಮೊದಲನೆಯ ಸದರು. ದೇಶಭಾಷೆ (ಮರಾಠಿ)

ವಾಚನ ಪಾಠಗಳು:—ಕ್ರಮಿಕ ೬ನೆಯಪುಸ್ತಕ (೧ನೆಯ ಆವೃತ್ತಿ ೧೯೩೪)

ಪಾಠಗಳು:—೧, ೨, ೬, ೭, ೮, ೧೨, ೧೩, ೧೪, ೧೭, ೧೮, ೨೧, ೨೩, ೨೪, ೨೭, ೨೮, ೨೯, ೩೦, ೩೧, ೩೪, ೩೬, ೩೮, ೪೧, ೪೨, ೪೩, ೪೪, ೪೫, ೪೮, ೫೦, ೫೨, ೫೪, ೫೫, ೫೬, ೬೦, ೬೧, ೬೨, ೬೩, ೬೪, ೬೭, ೭೦ (ಒಟ್ಟು ೪೦ ಪಾಠಗಳು)

ಕವಿತಾ ಪಾಠಗಳು:— ಕ್ರಮಿಕ ೬ನೆಯ ಪುಸ್ತಕ (೧ನೆಯ ಆವೃತ್ತಿ ೧೯೩೪)

ಪಾಠಗಳು:—೧೫, ೨೦, ೨೬, ೩೨, ೪೪, ೫೧ (ಒಟ್ಟು ೬ ಪಾಠಗಳು)

ಉರ್ದು

ಮೊದಲನೆಯ ಸದರು – ದೇಶಭಾಷೆ (ಉರ್ದು)

ವಾಚನ ಪಾಠಗಳು:—ಕ್ರಮಿಕ ಉರ್ದು ೬ನೆಯ ಪುಸ್ತಕ (೬ನೆಯ ಆವೃತ್ತಿ ೧೯೩೪)

ಪಾಠಗಳು:—೧, ೩, ೪, ೬, ೭, ೮, ೯, ೧೧, ೧೨, ೧೪, ೧೫, ೧೭, ೧೯, ೨೧, ೨೩, ೨೪, ೨೬, ೨೮, ೨೯, ೩೧, ೩೨, ೩೩, ೩೪, ೩೪, ೩೮, ೩೯, ೪೦, ೪೧, ೪೨, ೪೩, ೪೪, ೪೫ (ಒಟ್ಟು ೩೨ ಪಾಠಗಳು).

ಕವಿತಾ ಪಾಠಗಳು:—ಕ್ರಮಿಕ ಉರ್ದು ೬ನೆಯ ಪುಸ್ತಕ (೬ನೆಯ ಆವೃತ್ತಿ, ೧೯೩೪)

ಪಾಠಗಳು:—೫, ೧೦, ೧೫, ೨೦, ೨೫, ೩೦ (ಒಟ್ಟು ೬ ಪಾಠಗಳು) ಇಲ್ಲವೆ

ಝುನಾನಾ ಉರ್ದು ಕೋರ್ಸ, ಹಿಸ್ಸಾ–ಎ–ಸಾಶೂಮ್ ಮಿಸರ್ಸ ಫೆರೋ ಜುದ್ದೀನ್ ಎಂಡ್‌ಸನ್ಸ ಲಾಹೋರ ಇವರಿಂದ ಪ್ರಸಿದ್ಧಿಸಲ್ಪಟ್ಟದ್ದು. (೧೯೩೨ ರ ೧ನೆಯ ಆವೃತ್ತಿ)

ವಾಚನ ಪಾಠಗಳು:—ಎಲ್ಲ ವಾಚನ ಪಾಠಗಳು.

ಕವಿತಾ ಪಾಠಗಳು:—ಎಲ್ಲ ಕವಿತಾ ಪಾಠಗಳು.

ದ. ಭಾ. ದ ಎ. ಇ. ರವರ ಆಫೀಸು,
ಧಾರವಾಡ. ತಾ॥ ೧೭–೧೧–೧೯೩೪

Syed Nurullah
ಎಜ್ಯುಕೇಶನಲ್ ಇನ್ಸಪೆಕ್ಟರ ದ. ಭಾ.

——o——

ಪ್ರಕಟನೆ

ಗಂಡುಮಕ್ಕಳ ವ್ಹರ್ನ್ಯಾಕ್ಯುಲರ್ ಫಾಯನಲ್ ಪರೀಕ್ಷೆ

ದಕ್ಷಿಣಭಾಗ

ಸನ್ ೧೯೩೬ನೆಯ ಇಸವಿಯ ಗಂಡುಮಕ್ಕಳ ವ್ಹ. ಫಾ. ಪರೀಕ್ಷೆಗೆ ಕೆಳಗೆ ಬರೆದ ಪಾಠಗಳು ನಿಯಮಿಸಲ್ಪಟ್ಟಿವೆ:—

ಕನ್ನಡ

ಮೊದಲನೆಯ ಸಲದು:—

ವಾಚನ:— ಕ್ರಮಿಕ ೭ನೆಯ ಪುಸ್ತಕ (೧೯೩೪ರ ಆವೃತ್ತಿ)

ಪಾಠಗಳು:— ಎಲ್ಲ ವಾಚನ ಪಾಠಗಳು.

ಕವಿತೆ: — ಕ್ರಮಿಕ ೭ನೆಯ ಪುಸ್ತಕ (೧೯೩೪ರ ಆವೃತ್ತಿ.)

ಪಾಠಗಳು:— ೩, ೭, ೧೧, ೧೫, ೧೯, ೨೨, ೨೬, ೩೦.

ಮರಾಠಿ

ಮೊದಲನೆಯ ಸದರು:—

ವಾಚನ: — ಕ್ರಮಿಕ ೭ನೆಯ ಪುಸ್ತಕ (೧ನೆಯ ಎಡಿಶನ್ ೧೯೩೪)—

ಪಾಠಗಳು:— ಮೊದಲನೆಯ ಭಾಗದೊಳಗಿನ ಎಲ್ಲ ವಾಚನ ಪಾಠಗಳು.

ಕವಿತೆ:— ಕ್ರಮಿಕ ೭ನೆಯ ಪುಸ್ತಕ (೧ನೆಯ ಅವೃತ್ತಿ, ೧೯೩೪)

ಪಾಠಗಳು:— ೭, ೧೧, ೧೫, ೨೮, ೪೦, ೪೩, ೪೯, ೫೧.

ಉರ್ದು–ದೇಶಭಾಷೆ

ಮೊದಲನೆಯ ಸದರು, ಉರ್ದು:—

ವಾಚನ:— ಕ್ರಮಿಕ ಉರ್ದು ೭ನೆಯ ಪುಸ್ತಕ (೫ನೆಯ ಆವೃತ್ತಿ ೧೯೩೪)

ಪಾಠಗಳು:— ಮೊದಲನೆಯ ಭಾಗದೊಳಗಿನ ಎಲ್ಲ ವಾಚನ ಪಾಠಗಳು.

ಕವಿತೆ:— ಕ್ರಮಿಕ ಉರ್ದು ೭ನೆಯ ಪುಸ್ತಕ. (೫ನೆಯ ಆವೃತ್ತಿ, ೧೯೩೪)

ಪಾಠಗಳು:— ೯, ೧೦, ೧೬, ೨೩, ೨೯, ೩೨, ೩೫.

ಕನ್ನಡ (ಐಚ್ಛಿಕ)

ಆರನೆಯ ಸದರು:—

ವಾಚನ:— ಕ್ರಮಿಕ ೫ನೆಯ ಪುಸ್ತಕ (೧೯೩೪ರ ಆವೃತ್ತಿ,)

ಪಾಠಗಳು:- ೨, ೩, ೮, ೧೧, ೧೪, ೧೮, ೨೩, ೨೫, ೨೭, ೩೨, ೩೫,
೪೦, ೪೧, ೪೨, ೪೪, ೪೭, ೫೧, ೫೮, ೬೦, ೬೨,
(ಒಟ್ಟಿಗೆ ೨೦ ಪಾಠಗಳು.)

ಮರಾಠಿ (ಐಚ್ಛಿಕ)

೬ನೆಯ ಸದರು:—

ವಾಚನ:— ಕ್ರಮಿಕ ೫ನೆಯ ಪುಸ್ತಕ (೧೯೩೪ರ ಆವೃತ್ತಿ.)

ಪಾಠಗಳು:— ೧, ೨, ೩, ೪, ೯, ೧೩, ೧೪, ೧೫, ೧೭, ೨೦, ೨೨, ೨೫
೨೬, ೨೭, ೩೨, ೩೭, ೪೦, ೪೪, ೪೬, ೪೮ (ಒಟ್ಟು
೨೦ ಪಾಠಗಳು.)

ದೇಶಭಾಷೆ-ಉರ್ದು

ಕನ್ನಡ

ಮೊದಲನೆಯ ಸದರು: —

ವಾಚನ:— ಕ್ರಮಿಕ ಒನೆಯ ಪುಸ್ತಕ (೧೯೩೪ರ ಆವೃತ್ತಿ.)

ಪಾಠಗಳು: - ೪, ೫, ೮, ೯, ೧೦, ೧೨, ೧೬, ೧೭, ೧೮, ೨೧, ೨೨, ೨೯, ೩೨, ೩೩, ೩೫, ೩೬, ೩೯, ೪೧, ೪೩, ೪೫, ೪೬, ೪೮, ೪೯, ೫೦, ೫೪, ೫೬, ೬೨, ೬೪, ೬೫, ೬೭, ೬೮, ೬೯, ೭೧, ೭೩, ೭೫, ೭೬, ೭೭, ೭೮, ೭೯, ೮೦, ೮೨, ೮೩, ೮೪, ೮೫, ೮೬, ೮೭, ೮೮, ೮೯, ೯೦, ೯೨, ೯೩, ೯೪, ೯೫, ೯೬, ೯೭, ೯೮, ೯೯, ೧೦೦, ೧೦೧, ೧೦೨, ೧೦೩, ೧೦೪, ೧೦೫, ೧೦೬, ೧೦೭, ೧೦೮, ೧೦೯, ೧೧೦, ೧೧೧, ೧೧೨, ೧೧೩, ೧೧೪, ೧೧೫, ೧೧೬, ೧೧೭, ೧೧೮, ೧೧೯, ೧೨೦, ೧೨೧, ೧೨೨, ೧೨೩, ೧೨೪, ೧೨೫, ೧೨೬, ೧೨೭, ೧೨೮, ೧೨೯, ೧೩೦, ೧೩೧,

ವಿಜಾಪೂರ ದುಷ್ಕಾಳ ನಿವಾರಕ ಸಂಸ್ಥೆಯ

ವಸ್ತುಸಂಗ್ರಹಾಲಯ

ವಿಜಾಪೂರ ಬಾಜಾರದಿಂದ ಸ್ಟೇಶನ ಕಡೆಗೆ ಹೋಗುವ ದೊಡ್ಡ ಹಾದಿಯ ಮೇಲೆ ವಿಲ್ಸನ್ ದುಷ್ಕಾಳ ನಿವಾರಕ ಸಂಸ್ಥೆಯ ಭವ್ಯ ವ ಸುಂದರವಾದ ಕಟ್ಟಡ ವಿರುವದು. ಅಲ್ಲಿ ಉಪಯುಕ್ತ ಮಾಹಿತಿಯನ್ನು ಕೊಡುವ ವಸ್ತುಸಂಗ್ರಹಾಲಯ ವಿರುವದು. ಅದರಲ್ಲಿ ಇರತಕ್ಕ ಸಾಮಾನುಗಳ ವಿವರ:—

೧. ಮುಂಬಯಿ ಇಲಾಖೆಯಲ್ಲಿ ಸಿಗುವ ಕಲ್ಲು, ಮಣ್ಣಿನ ನಮೂನೆಗಳು.

೨. ನಾನಾತರದ ಮಾದರಿಯ ವಡ್ಡುಗಳು ಮತ್ತು ಸಾಂಡು ಮೋರೆಗಳ ಮಾದರಿಯ ನಮೂನೆಗಳು.

೩. ಸಮಪಾತಳಿ ಇದ್ದ, ಇಲ್ಲದೆ ಇಪ್ಪ, ಜಮೀನುಗಳ ತುಲನಾ ತೋರಿ ಸುವ ಮಾದರಿಯ ನಮೂನೆಗಳು.

೪. ಆಯಾ ಪ್ರದೇಶದಲ್ಲಿ ಆಯಾ ಕಾಲಕ್ಕೆ ಆಗುವ ಮಳೆಯ ಪ್ರಮಾಣ ಮತ್ತು ಬೆಳೆಗಳ ಪ್ರಮಾಣ ಇವುಗಳ ಪಟಗಳು.

೫. ನಾನಾತರದ ಗೊಬ್ಬರದ ನಮೂನೆಗಳು.

೬. ನಾನಾತರದ ಒಕ್ಕಲತನದ ಸಾಮಾನುಗಳ ನಮೂನೆಗಳು.

೭. ಎಲ್ಲ ತರದ ಹುಲ್ಲಿನ ಬೀಜಗಳು.

೮. ಮುಖ್ಯ ಬೆಳೆಗಳ ಬೀಜಗಳ ನಮೂನೆ. ಸುಧಾರಿಸಿದ ಪದ್ಧತಿಯಿಂದ ತಯಾರ ಆದ ತರತರದ ರೋಗಗಳಿಗೆ ಆಸ್ಪದ ಕೊಡದ ಗೋದಿ, ಹತ್ತಿ, ಜೋಳ, ಸಜ್ಜಿ, ಸೇಂಗಾ ಮುಂತಾದ ಬೀಜದ ನಮೂನೆಗಳು.

೯. ಎಲ್ಲ ತರದ ಹಣ್ಣಿನ ಮಾದರಿಯ ನಮೂನೆಗಳು.

೧೦. ಬೆಳೆ ನಾಶ ಮಾಡುವ ಹುಳಗಳ ಎಲ್ಲ ತರದ ನಮೂನೆಗಳು ಮತ್ತು ಬೆಳೆಯ ರೋಗಾದಿಗಳ ನಮೂನೆಗಳು.

೧೧. ಈ ಜಿಲ್ಲೆಯಲ್ಲಿ ಹುಟ್ಟತಕ್ಕ ನೂಲು, ಉಣ್ಣೆ, ಕಲ್ಲು, ಕಟ್ಟಿಗೆಯ ಸಾಮಾನುಗಳು. ಇದಲ್ಲದೆ ಬೇರೆ ಕೈಗಾರಿಕೆಯ ಸಾಮಾನುಗಳು.

೧೨. ದನಗಳ ಜೋಪಾನ ವ ಅವುಗಳ ಬೇನೆಯ ಚಿಕಿತ್ಸೆಯ ಪಟಗಳು.

೧೩. ಪದ್ಧತಶೀರ ಕಟ್ಟಿಸಿದ ಮನೆಯ ಮಾದರಿಯ ನಮೂನೆ.

೧೪. ಮೈಲೀ ಬೇನೆ, ಮಾರಿಕಾ, ಪ್ಲೇಗ, ಮಹಾರೋಗ ಇತ್ಯಾದಿ ರೋಗಗಳ ಪ್ರತಿಬಂಧಕ ವ ಪೂರ್ವೋಪಾಯದ ಚಿಕಿತ್ಸೆಯ ಬಗ್ಗೆ ಮಾಡಿಟ್ಟ ಪಟಗಳು.

ಇದಲ್ಲದೆ ಇನ್ನೂ ಅನೇಕ ತರದ ಮಾದರಿಯ ಪದಾರ್ಥಗಳೂ, ಪಟಗಳೂ ನೋಡಲಿಕ್ಕೆ ಸಿಗುವವು. ಇಲ್ಲಿಯ ಕಾರ್ಯದರ್ಶಿಗಳು ನೋಡಲಿಕ್ಕೆ ಬಂದವರನ್ನು ಕರಕೊಂಡು ಹೋಗಿ ಪ್ರತಿಯೊಂದು ಪದಾರ್ಥದ ಪೂರ್ಣ ಜ್ಞಾನವನ್ನು ಮಾಡಿ ಕೊಡುವರು. ಮತ್ತು ಗ್ರಾಮ ಸುಧಾರಣೆಯ ಬಗ್ಗೆ ಯಾವತ್ತೂ ಮಾಹಿತಿ ಕೊಡುವರು.

ವಿಜಾಪೂರ ಜಿಲ್ಹೆಯ ರೈತರು ವ ಸಭ್ಯಗೃಹಸ್ಥರು ಈ ವಸ್ತುಸಂಗ್ರಹಾಲಯಕ್ಕೆ ಒಮ್ಮೆಯಾದರೂ ಭೆಟ್ಟಿ ಕೊಟ್ಟು ಅದರಲ್ಲಿದ್ದ ಯಾವತ್ತೂ ವಸ್ತುಗಳ, ವ ಪಟಗಳ ಜ್ಞಾನವನ್ನು ಪಡೆಯಬೇಕು. ಒಕ್ಕಲುತನವನ್ನು ಸುಧಾರಿಸುವದಕ್ಕೆ ಮತ್ತು ಗ್ರಾಮವನ್ನು ಎಲ್ಲ ತರದಿಂದ ಸುಧಾರಿಸಲಿಕ್ಕೆ ಬೇಕಾಗುವ ಯಾವತ್ತೂ ಉಪಯುಕ್ತ ಮಾಹಿತಿಯು ಇಲ್ಲಿ ಸುಲಭ ರೀತಿಯಿಂದ ಸಿಗುತ್ತದೆ. ಇಂಥ ಸುಸಂಧಿಯನ್ನು ಯಾರೂ ಕಳಿದುಕೊಳ್ಳಬಾರದು. ಇಲ್ಲಿಯ ಕಾರ್ಯದರ್ಶಿಗಳು ರೈತರಿಗೆ ಬೇಕಾಗುವ ಎಲ್ಲ ತರದ ಜ್ಞಾನವನ್ನು ಮಾಡಿಕೊಡಲಿಕ್ಕೆ ಯಾವಾಗಲೂ ತತ್ಪರರಿರುತ್ತಾರೆ. ರೈತರಿಗೆ ಸಹಾಯ ಮಾಡಬೇಕೆಂಬ ಸದುದ್ದೇಶದಿಂದ ಸ್ಥಾಪಿಸಿದ ಈ ಸಂಸ್ಥೆಗೆ ಯಾವತ್ತರೂ ಭೆಟ್ಟಿ ಕೊಟ್ಟು ಜ್ಞಾನ ಸಂಪಾದನೆ ಮಾಡಿಕೊಳ್ಳಬೇಕೆಂದು ನಮ್ಮ ಕೋರಿಕೆ.

R. R. Patil.
Secretary.
20-10-1934

M. D. Bhat,
Collector and President,
W. A. F. I. Bijapur

ನೋಟೀಸು

ಓಪನ್ ಹಾಗು ಸ್ಪೆಷಲ್ ಮಿಡಲ್‌ಸ್ಕೂಲ ಸ್ಕಾಲರಷಿಪ್ ಪರೀಕ್ಷೆ

ದಕ್ಷಿಣಭಾಗ ೧೯೩೫

ಸೋಮವಾರ ಹಾಗು ಮಂಗಳವಾರ ತಾ॥ ೧೧ ಹಾಗು ೧೨ ಫೆಬ್ರವರಿ

ಈ ಪರೀಕ್ಷೆಯು ಧಾರವಾಡ, ಬೆಳಗಾವ, ಬಿಜಾಪುರ, ಕಾರವಾರ ಈ ನಾಲ್ಕು ಸೆಂಟರುಗಳಲ್ಲಿ ನಡೆಯುವದು. ಆಯಾ ಸೆಂಟರುಗಳಲ್ಲಿರುವ ಸರಕಾರದ ಹಾಯ ಸ್ಕೂಲುಗಳ ಹೆಡ್‌ಮಾಸ್ತರರು ಅಲ್ಲಿಯ ಪರೀಕ್ಷೆಯ ಕಮಿಟೀಯ ಪ್ರೆಸಿಡೆಂಟರು. ಉಮೇದವಾರರು ೧೯೩೫ನೆಯ ಇಸವಿಯ ಜನವರಿ ತಿಂಗಳ ೩ನೆಯ ತಾರೀಖಿಗೆ ಅಥವಾ ಅದಕ್ಕೂ ಮೊದಲು ಪ್ರೆಸಿಡೆಂಟರಿಗೆ ಮುಟ್ಟುವಂತೆ ಧಾಪಿಸಿದ ನಮೂನೆಗಳ ಮೇಲೇ (ಇವುಗಳನ್ನು ಆಯಾ ಜಿಲ್ಲೆಯ ಪ್ರೆಸಿಡೆಂಟರಿಂದ ತರಿಸಿಕೊಂಡು) ಅರ್ಜಿಯನ್ನೂ **ಆದರೊಡನೆ** ಒಂದು ರೂಪಾಯಿ ಪರೀಕ್ಷಾ ಫೀಹಣವನ್ನೂ ಕಳಿಸತಕ್ಕದ್ದು. ಮೇಲೆ ಹೇಳಿದ ತಾರೀಖು ಮೀರಿ ಬಂದ ಅರ್ಜಿಗಳನ್ನೂ ಫೀ ಹಣವನ್ನೂ ಹಿಡಿಯ ಲಿಕ್ಕಿಲ್ಲ. ದೇಶೀಯ ಸಂಸ್ಥಾನಗಳ ಉಮೇದವಾರರು ಪರೀಕ್ಷೆಗೆ ಕೂಡಲಾಗದು.

ಮೆ॥ ಡಾಯರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಶನ್ ಸಾ॥ ರವರ ೨೧ ೧೧ ೩೪ರ S. 68/66-D ನೇ ನಂಬರಿನ ಅಭಿಪ್ರಾಯವನ್ನು ಎಲ್ಲರ ತಿಳುವಳಿಕೆಗಾಗಿ ಕೆಳಗೆ ಪ್ರಸಿದ್ಧಿಸಿರುವೆವು :—

ಹುಡುಗರು ಗೊಂದಲದಲ್ಲಿ ಬೀಳದಿರಲಿಕ್ಕೂ ಸುಲಭವಾಗಿ ತಿಳಿದುಕೊಳ್ಳಲು ಅನುಕೂಲವಾಗಬೇಕೆಂದೂ ಎಲ್ಲ ಉರ್ದು ಅಂಕೆಗಳನ್ನೂ (ಅವು ಪೂರ್ಣಾಂಕಗಳಿರಲಿ ಅಪೂರ್ಣಾಂಕಗಳಿರಲಿ) ಗಣಿತಕ್ಕೆ ಸಂಬಂಧಿಸಿದ ಎಲ್ಲ ಸರಣಿಗಳನ್ನೂ ಉದಾಹರಣಾರ್ಥವಾಗಿ (ಅ–ಬ)÷(ಕ–ಡ) ಯಾವಾಗಲೂ ಎಡಗಡೆಯಿಂದ ಬಲಗಡೆಗೇ ಬರೆದು ಓದಬೇಕು.

ಪ್ರಕಟನೆ

ಮೆ॥ ಎ. ಇ. ದ. ಭಾಗ ಇವರ ನಂ ೪೭ ಪಿ. ೯೯೫೯/೨೨-೧೧–೩೪

ಮಿ॥ ಸಿ. ಡಿ. ಉತ್ತಂಗಿ, ಬಾಸೆಲ್ ಮಿಶನ್, ಹುಬ್ಬಳ್ಳಿ ಇವರು ಪ್ರಸಿದ್ಧಪಡಿಸಿರುವ "ಮಕ್ಕಳ ಶಿಕ್ಷಣ ಪಟವು" ಎಂಬ ಪಟವನ್ನು ದಕ್ಷಿಣಭಾಗದ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರು ಉಪಯೋಗಮಾಡಲಿಕ್ಕೆ ಏನೂ ಆಕ್ಷೇಪವಿಲ್ಲ.

Reg. No. B. 2567

ಪತ್ರಗಳ ಸಾರಾಂಶ

ಶಾಳಾ-ಅಸನೋಟಿ ಜಿಲ್ಹಾ ಕಾರವಾರ:— ಇಲ್ಲಿಯ ಪೋಲೀಸ ಪಾಟೀಲರಾದ ಲಂ. ಸಾ. ಬಾಳಕೃಷ್ಣರಾವ ಸಾಳುಂಖೆ ಇವರು ತಮ್ಮ ಚಿ। ನ ಸ್ಮರಣಾರ್ಥವಾಗಿ ಈ ಊರ ಸಾಲೆಯ ಬಡ ಹುಡುಗರ ಅರಿವೆ, ಪಾಟಿ, ಪುಸ್ತಕ ಮೊದಲಾದವುಗಳ ಉಪಯೋಗಕ್ಕಾಗಿ ಒಂದು ಹೊಲವನ್ನು ತೆಗೆದಿಟ್ಟಿದ್ದಾರೆಂದೂ ಶಾಲೆಯು ಬಕ್ಷೀಸ ಸಮಾರಂಭದಕಾಲಕ್ಕೆ ಶಾಲೆಯ ಬಡಹುಡುಗರಿಗೆ ಊಟಹಾಕಿದರೆಂದೂ ಅಲ್ಲಿಯ ಶಾಲಾಮಾಸ್ತರರು ತಿಳಿಸುತ್ತಾರೆ. ಇದು ಸ್ತುತ್ಯವು.

ಜಾಹೀರಾತು

ಮುಲ್ಕೀಪರೀಕ್ಷೆಯ ವಿದ್ಯಾರ್ಥಿಗಳ ಸಲುವಾಗಿ ಹೊಸ ಮಾದರಿಯ ಅಂಕಗಣಿತ ಸಂಗ್ರಹ. ಬೆಲೆ ೧೨ ಆಣೆ.

ಮುನ್ನುಡಿ ಲೇಖಕರು:— ಶ್ರೀ. ಹಣಮಂತರಾವ ಗೋವಿಂದರಾವ ದೇಶಪಾಂಡೆ ಬಿ. ಎ., ಸೀನಿಯರ ಡಿ. ಎ. ಇ. ಬೆಳಗಾಂವ.

ವ್ಹ. ಫಾ. ಪರೀಕ್ಷೆಯಲ್ಲಿ ಇತ್ತಲಾಗಿ ಹೊಸ ಮಾದರಿಯ ಲೆಕ್ಕಗಳು ಬೀಳುತ್ತಿದ್ದರಿಂದ ವಿದ್ಯಾರ್ಥಿಗಳು ಗೊಂದಲದಲ್ಲಿ ತೊಡಗಿ ಹಾನಿಯನ್ನು ಹೊಂದುತ್ತಿರುವರು. ಆದಕಾರಣ ಅವರ ಗೊಂದಲವು ದೂರಾಗುವದಕ್ಕಾಗಿ ಅಂಥ ಮಾದರಿಯ ಗಣಿತಗಳನ್ನು ಸಂಗ್ರಹಿಸಿ ಬಿಡಿಸಿ ತೋರಿಸಿವೆ. ಇದು ತೀರ ಹೊಸ ಮಾದರಿಯ ವಿದ್ದು ಶಿಕ್ಷಕರ ಸಹಾಯವಿಲ್ಲದೆ ವಿದ್ಯಾರ್ಥಿಗಳಿಗೆ ಉಪಯೋಗ ಬೀಳುವಂತೆ ಅದೆ. ಮತ್ತು ಶಿಕ್ಷಕರಿಗೂ ಮಾರ್ಗದರ್ಶಕವಾಗುವದರಲ್ಲಿ ಸಂದೇಹವಿಲ್ಲ.

ಮಿ॥ ಬಿ. ಬಿ. ಮುಮುದಾಪೂರ ಇವರ ಅಭಿಪ್ರಾಯವು:—

ಈ ಗ್ರಂಥದ ಉಪಯೋಗವನ್ನು ಚೆನ್ನಾಗಿ ಮಾಡಿದರೆ ಗಣಿತ ಪರೀಕ್ಷೆಯಲ್ಲಿ ನಾಪಾಸ ಆಗುವವರ ಸಂಖ್ಯೆಯು ಬಹುಮಟ್ಟಿಗೆ ಕಡಿಮೆಯಾಗಬಹುದೆಂದು ಬಲವಾದ ನಂಬಿಕೆಯುದೆ.

ವ್ಯಾಪಾರಸ್ಥರಿಗೆ ಮತ್ತು ಏಜಂಟರಿಗೆ ಭರಪೂರ ಕಮೀಶನ್ ಸಿಕ್ಕೀತು.

ಸಿಗುವ ಸ್ಥಳ:—**ಶ್ರೀ. ಚಿದಂಬರ ಶ್ರೀಪಾದ ಕುಲಕರ್ಣಿ.**

ಮು. ಪೋ. ಹಿರೇಬಾಗೆವಾಡಿ,

ತಾಲೂಕ ಬೆಳಗಾಂವ.